1960

ಸ್ಥಾಪನೆ : ೧೯೬೫

ಸಂಸ್ಥಾಪಕರು

ಜೀವನ ಶಿಕ್ಷಣ ಪತ್ರಿಕೆಯು
ಶತಮಾನೋತ್ತರ ಬೆಳ್ಳಿ ಹಬ್ಬದ
ಪುಸ್ತಕ ಪ್ರದರ್ಶನ ೧೯೮೯

ಶತಮಾನೋತ್ತರ ಬೆಳ್ಳಿ ಹಬ್ಬ
(ಏಪ್ರಿಲ್ ೧೯೮೯ ರಿಂದ)
ವರ್ಷ 1960

ಬಿ. ಚನ್ನಬಸಪ್ಪನವರು
(ಗುರುಕಿಕ್ಷ- ಗುಲಬರ್ಗಾ)
ನೆಯ ಸಂಪುಟ

ಜೀವನ ಶಿಕ್ಷಣ



ಶಿಕ್ಷಣ ಸಂತಸ

ಸರಕಾರಿ ಉಪಾಧ್ಯಾಯರ ತರಬೇತಿ ವಿದ್ಯಾಲಯ

ಡೆಪ್ಯೂಟಿ ಚನ್ನಬಸಪ್ಪ ವೃತ್ತ, ರೊದ್ದರಸ್ತೆ, ಧಾರವಾಡ – ೫

ಶಿವಮೊಗ್ಗ ಶಿಕ್ಷಣ

ಪ್ರಧಾನ ಸಂಪಾದಕರು : ಶ್ರೀ ಜಿ. ಎಂ. ಜೋಶಿ



ಜೀವನ ಶಿಕ್ಷಣ

— ಸಂಪಾದಕ ಮಂಡಳಿ —

ಸಂಚಾಲಕರು : ಶ್ರೀ ಎಮ್. ಜಿ. ಹಂದ್ರಾಳ, ಬಿ.ಎ. (ಆನರ್ಸ), ಎನ್.ಈಡಿ., ಡಿ.ಬಿ.ಈಡಿ.,
ಎಜ್ಯುಕೇಶನಲ್ ಇನಸ್ಪೆಕ್ಟರ, ಧಾರವಾಡ.

ಪ್ರಧಾನ ಸಂಪಾದಕರು : ಶ್ರೀ ಜಿ. ಎಮ್. ಜೋಶಿ,
ಪ್ರಿನ್ಸಿಪಾಲ, ಗಂಡು ಮಕ್ಕಳ ಸರಕಾರಿ ಟ್ರೇನಿಂಗ ಕಾಲೇಜ, ಧಾರವಾಡ.

—: ಸದಸ್ಯರು :—

ಶ್ರೀಮತಿ ಪಿ. ಎ. ಭಾಸ್ಕರ, ಲೇಡಿ ಸುಪರಿಂಟೆಂಡೆಂಟ, ಹೆಣ್ಣು ಮಕ್ಕಳ ಸರಕಾರಿ ಟ್ರೇನಿಂಗ ಕಾಲೇಜ, ಧಾರವಾಡ,

ಶ್ರೀ ಬಿ. ಎಂ. ಶಿಂತ್ರಿ, ಬಿ.ಎ.,ಬಿ.ಟಿ., ನಿವೃತ್ತ ಅಸಿಸ್ಟಂಟ ಎಜ್ಯುಕೇಶನಲ್ ಇನಸ್ಪೆಕ್ಟರ ದಕ್ಷಿಣ ಭಾಗ,
(ಮುಂಬಯಿ ಕರ್ನಾಟಕ) ಹಾಗು ಗೌ. ಕಾರ್ಯದರ್ಶಿ ಮತ್ತು ಲಾಯಬ್ರೇರಿಯನ್.
ಸಾಹಿತ್ಯ ಸಮಿತಿ ಲಿಂಗಾಯತ ವಿದ್ಯಾಭಿವೃದ್ಧಿ ಸಂಸ್ಥೆ, ಧಾರವಾಡ

ಶ್ರೀ ಎಸ್. ಆರ್. ತಟ್ಟಿ, ರಿಟಾಯರ್ಡ ಪ್ರಿನ್ಸಿಪಾಲ, ಪ್ರಾಥಮಿಕ ಶಿಕ್ಷಕರ ಟ್ರೇನಿಂಗ ಕಾಲೇಜ, ನವಲಗುಂದ.

ಸಂಪುಟ ೯೬ ಡಿಸೆಂಬರ ೧೯೬೦ ಸಂಚಿಕೆ ೬

— ಪರಿವಿಡಿ —

೧	ಸಂಪಾದಕೀಯ	....	.... ೧
೨	ಸಮಾಜ ಶಿಕ್ಷಣದ ಅರ್ಥ-ವ್ಯಾಪ್ತಿ	....	ಶ್ರೀ ಮ. ಗು. ಹಂದ್ರಾಳರವರ ಭಾಷಣದ ಸಾರ ಶ್ರೀ ಹ. ಗ. ಜೋಶಿ ೨
೩	ಕಲ್ಪನೆಗಳ ಸಾಹಚರ್ಯ	....	ಶ್ರೀ ತಟ್ಟಿ ಶಾಮರಾಯರು ೫
೪	ಜೀವನ ಶಿಕ್ಷಣ ಶಾಲೆಯಲ್ಲಿ ಶಿಸ್ತು	....	ಶ್ರೀ ಎಸ್. ಎಸ್. ನಾಡಕರ್ಣಿ ೬
೫	ಗೃಹವಿಜ್ಞಾನದೊಂದಿಗೆ ಬೇರೆ ವಿ.ಗಳ ಸಮುವಾಯ	....	ಶ್ರೀಮತಿ ಅನುಸೂಯಾ ಜೋಶಿ ೧೦
೬	ಮಕ್ಕಳ ಶಿಕ್ಷಣ	....	ಕುಮಾರಿ ವೇಣು ಅ. ಶೀಲಭದ್ರ ೧೨
೭	ಜಾನ್ ಫಿಝ್ಗೆರಾಲ್ಡ ಕೆನೆಡಿ	....	ಶ್ರೀ 'ಬಮಶಿಂ' ೧೩
೮	ಸಮಾಜ ಶಿಕ್ಷಣ ಮತ್ತು ಪ್ರಜಾಪ್ರಭುತ್ವ	....	ಶ್ರೀ ಸದಾನಂದ ೧೬
೯	ದಿವಂಗತ ಏರ ಮಾರ್ಷಲ್ ಸುವ್ರತ ಮುಖರ್ಜಿ	....	ಶ್ರೀ 'ಬಮಶಿಂ' ೨೦
೧೦	ಪ್ರಶ್ನಾರ್ಥಕ ಚಿಹ್ನ (?)	....	ಶ್ರೀ ಎಲ್. ಎಸ್. ಪಾಟೀಲ ೨೧
೧೧	ಸಮಾಜ ಶಿಕ್ಷಣದ ಪ್ರಸಾರದ ಪ್ರಗತಿ ———	....	ಶ್ರೀ ಈಶ್ವರಚಂದ್ರ ಚಿಂತಾಮಣಿ ೨೩
೧೨	ಭಾರತದಲ್ಲಿ ಸಮಾಜ ಶಿಕ್ಷಣದ ಅವಶ್ಯಕತೆ	....	ಶ್ರೀ ಎಸ್. ಆರ್. ಮಕರಿ ೨೪
೧೩	ಪಂಚಾಂಗ ಪ್ರಕರಣ	....	ಶ್ರೀ ಬೇವೂರ ಹನುಮಂತ ಜೋಯ್ಸರು ೨೬

ಸಂಪಾದಕೀಯ

ಮಕ್ಕಳ ಸಮಸ್ಯೆ ಪರಿಹಾರ:

ಮಕ್ಕಳ ದಿನದ ನಿಮಿತ್ತ ಬಾನುಲಿ ಮೂಲಕವಿತ್ತ ಸಂದೇಶದಲ್ಲಿ ರಾಷ್ಟ್ರಪತಿಗಳು, ದೇಶದಾದ್ಯಂತವೂ ದಿನವನ್ನು ಆಚರಿಸುವದರಿಂದ ಈ ವಿಚಾರಕ್ಕೆ ಮಾನ್ಯತೆ ಸಿಕ್ಕಬಹುದೆಂದೂ ಮತ್ತು ನವ್ಹಂಬರ ೧೪ ನೇ ದಿನವು ಭಾರತೀಯ ಮಕ್ಕಳ ಉನ್ನತಿಗೆ ರಾಷ್ಟ್ರೀಯ ಆಂದೋಲನದ ದಿನದ ಪ್ರತೀಕವಾಗುವದೆಂದೂ ತಾವು ಆಶಿಸುವದಾಗಿ ನುಡಿದರು. ಮಕ್ಕಳಿಗೆ ಉತ್ತಮ ಶಿಕ್ಷಣ ಸೌಲಭ್ಯಗಳನ್ನು ಹಾಗೂ ಒಳ್ಳೆಯ ಕ್ರೀಡಾಂಗಣಗಳನ್ನು ಕಲ್ಪಿಸಲು ಪ್ರಯತ್ನಿಸುತ್ತಿರುವದನ್ನು ಅವರು ಶ್ಲಾಘಿಸಿದರು. ಮುಂದಿನ ಜನಾಂಗದ ಹಿತ ದೃಷ್ಟಿಯಿಂದ ರಾಷ್ಟ್ರ ಪುನರ್ನಿರ್ಮಾಣ ಹಾಗೂ ಅಭಿವೃದ್ಧಿ ಕಾರ್ಯಗಳನ್ನು ಕೈಕೊಳ್ಳದೇ ಹೋದರೆ ಅದಕ್ಕೆ ಯಾವ ಪ್ರಾಮುಖ್ಯತೆಯು ಸಿಗದು ಎಂದು ರಾಜೇಂದ್ರ ಪ್ರಸಾದರು ನುಡಿದರು. ಉಚಿತವಾಗಿ ಶಾಲಾಸಮವಸ್ತ್ರಗಳು ಹಾಗೂ ಮಧ್ಯಾಹ್ನದ ಊಟವನ್ನು ಕೊಡುವ ಕ್ರಮವನ್ನು ಜಾರಿಗೆ ತಂದಿರುವ ಮದ್ರಾಸ ರಾಜ್ಯದ ಆದರ್ಶವನ್ನು ರಾಷ್ಟ್ರಪತಿಗಳು ಶ್ಲಾಘಿಸಿದರು. ಮಕ್ಕಳಿಗೆ ಉಚಿತ ಶಿಕ್ಷಣದಂತೆ ಊಟವನ್ನೂ ಕೊಡಬೇಕೆಂದು ತಮ್ಮ ಅಭಿಪ್ರಾಯವಿರುವದಾಗಿ ಅವರು ನುಡಿದರು. ಇಂಥ ಸುಸಂಧಿಯು ಬೇಗನೆ ಬರಲೆಂದು ಹಾರೈಸುವೆವು.

ರಾಜ್ಯದ ಎರಡೂ ವಿಶ್ವವಿದ್ಯಾಲಯದಲ್ಲಿ ಏಕರೂಪ ಶಿಕ್ಷಣಕ್ರಮತರಲು ನಿರ್ಣಯ:

ಕರ್ನಾಟಕ ಹಾಗೂ ಮೈಸೂರು ವಿಶ್ವವಿದ್ಯಾಲಯಗಳಲ್ಲಿ ವಿವಿಧ ಫ್ಯಾಕಲ್ಟಿಗಳಲ್ಲಿ ಸಾಧ್ಯವಾದ ಮಟ್ಟಿಗೆ ಏಕರೂಪ ಅಭ್ಯಾಸಕ್ರಮ ವಿರಬೇಕೆಂದು ಧಾರವಾಡದಲ್ಲಿ ದಿ. ೩ ಮತ್ತು ೪ ರಂದು ಸೇರಿದ ಎರಡೂ ವಿಶ್ವವಿದ್ಯಾಲಯಗಳ ಉಪಕುಲಪತಿಗಳು ಹಾಗೂ ವಿವಿಧ ಫ್ಯಾಕಲ್ಟಿಗಳ ಡೀನರ ಸಭೆಯಲ್ಲಿ ನಿರ್ಣಯವಾಯಿತು.

ಅನೇಕ ದಿನಗಳಿಂದಲೂ ಕರ್ನಾಟಕ ರಾಜ್ಯದಲ್ಲಿ ಏಕರೂಪ ಅಭ್ಯಾಸಕ್ರಮ ಇರಬೇಕೆಂದು ಅಭಿಪ್ರಾಯ ಪಡಲಾಗುತ್ತಿತ್ತು. ಸಭೆಯು ಈ ಎರಡೂ ವಿಶ್ವವಿದ್ಯಾಲಯಗಳು ಎದುರಿಸುತ್ತಿರುವ ಸಮಸ್ಯೆಗಳನ್ನು ವಿವರವಾಗಿ ಪರಿಶೀಲಿಸಿ ಮೇಲಿನ ನಿರ್ಣಯವನ್ನು ಕೈಕೊಂಡಿತು. ರಾಜ್ಯ ಸರಕಾರದ ಶಿಕ್ಷಣ ಶಾಖೆಯು ರಾಜ್ಯದ ಎಲ್ಲ ಸ್ಕೂಲಗಳಲ್ಲಿಯ ಮೊದಲಿನ ಹತ್ತು ವರ್ಷಗಳಿಗಾಗಿ ಒಂದೇ ಅಭ್ಯಾಸ ಕ್ರಮವನ್ನು ರೂಪಿಸಿದೆ. ಈ ಹತ್ತು ವರುಷಗಳ ಅಭ್ಯಾಸದ ನಂತರ ಎಸ್. ಎಸ್. ಸಿ. ಪರೀಕ್ಷೆಯನ್ನು ತೆಗೆದುಕೊಳ್ಳಲಾಗುವದು. ಈ ಬಗೆಯ ಮೊದಲನೆಯ ಎಸ್. ಎಸ್. ಸಿ. ಪರೀಕ್ಷೆಯು ೧೯೬೩ರ ಮಾರ್ಚದಲ್ಲಿ ಜರುಗುವದು. ಇದೇ ರೀತಿ ಕರ್ನಾಟಕ ಹಾಗೂ ಮೈಸೂರು ವಿಶ್ವವಿದ್ಯಾಲಯಗಳೆರಡೂ ಏಕರೂಪಅಭ್ಯಾಸಕ್ರಮವನ್ನು ರೂಪಿಸುವದಕ್ಕೆ ಪರಸ್ಪರ ಸಹಕರಿಸಲು ನಿರ್ಣಯಿಸಿವೆ. ಈ ಯೋಜನೆಯು ಆದಷ್ಟು ತೀವ್ರ ಕಾರ್ಯಗತವಾಗಲೆಂದು ಹಾರೈಸದೆ ಇರಲಾರೆವು.

ಸಂಕುಚಿತ ಮನೋಭಾವನೆ ತೊರೆಯಿರಿ:

ದೇಶದ ಪ್ರಗತಿಗೆ ಆತಂಕವಾಗಿರುವ ಸಂಕುಚಿತ ಮನೋವೃತ್ತಿಯನ್ನು ತೊರೆಯಬೇಕೆಂದು ಪ್ರಧಾನಮಂತ್ರಿ ನೆಹರುರವರು, ಅಲೀಗಡ ವಿಶ್ವವಿದ್ಯಾಲಯದಲ್ಲಿ ಮೌಲಾನಾ ಆಜಾದ ವಾಚನಾಲಯವನ್ನು ಉದ್ಘಾಟಿಸುತ್ತ ದಿ. ೬-೧೨-೬೦ ರಂದು ನುಡಿದರು. ಅದು ಧಾರ್ಮಿಕ ಸಂಕುಚಿತ ಮನೋವೃತ್ತಿಯೇ ಇರಲಿ, ಪ್ರಾಂತೀಯ ಸಂಕುಚಿತ ಮನೋವೃತ್ತಿಯೇ ಇರಲಿ ಅದಕ್ಕೆ ಇಂದಿನ ತೀವ್ರ ಬದಲಾವಣೆ ಹೊಂದುತ್ತಿರುವ ಪ್ರಪಂಚದಲ್ಲಿ ಸ್ಥಾನವಿಲ್ಲ. ಈ ಮನೋವೃತ್ತಿಯು ಜನತೆಯ ನಡುವೆ ಗೋಡೆಯನ್ನು ನಿರ್ಮಿಸುತ್ತದೆ. ಜನತೆಯಲ್ಲಿ ಈ ರೀತಿ ಸಂಪರ್ಕವಿಲ್ಲದೇ ಹೋದರೆ ದೇಶದ ಪ್ರಗತಿಗೆ ಆತಂಕವಾಗುತ್ತದೆ. ಯುವಕರು,ಭಾರತದ ಇತಿಹಾಸದಿಂದ ಪಾಠ ಕಲಿಯಬೇಕು ಎಂದು ದೇಶದ ಯುವ ಜನಾಂಗಕ್ಕೆ ಕರೆ ಇತ್ತರು. ಎಲ್ಲ ರೀತಿಯ ಸಂಕುಚಿತ ಮನೋವೃತ್ತಿಯನ್ನು ತೀವ್ರ ಬಿಟ್ಟಷ್ಟು ನಮಗೆ ಒಳಿತವೇ.

ನಮ್ಮ ರಾಷ್ಟ್ರಪತಿಗಳು ಚಿರಾಯುವಾಗಲಿ:

ರಾಷ್ಟ್ರಪತಿ ಡಾ. ರಾಜೇಂದ್ರ ಪ್ರಸಾದರು ೩-೧೨-೧೯೬೦ ರಂದು ೬೬ನೇ ವರುಷವನ್ನು ದಾಟಿ ೬೭ ರಲ್ಲಿ ಕಾಲಿಟ್ಟರು. ನಮ್ಮ ವಾಚಕರ ಪರವಾಗಿ 'ಜೀವನ ಶಿಕ್ಷಣ' ಪತ್ರಿಕೆಯು ರಾಷ್ಟ್ರಪತಿಗಳು ಚಿರಾಯುವಾಗಿರಲೆಂದು ಹಾರೈಸುತ್ತದೆ. ದೇಶದ ಸ್ವಾತಂತ್ರ್ಯಕ್ಕಾಗಿ ಧೀರತನದಿಂದ ಹೋರಾಡಿದ ಅಮೋಘ ವ್ಯಕ್ತಿ

ಡಾ. ರಾಜೇಂದ್ರ ಪ್ರಸಾದರು. ಡಾ. ರಾಜೇಂದ್ರ ಪ್ರಸಾದರನ್ನು ಪಡೆದ ನಮ್ಮ ದೇಶವು ಸುದೈವಿಯೇ ಸರಿ.

ದೇಶದ ಎಲ್ಲ ಭಾಷೆಗಳೂ ಬೆಳೆಯಬೇಕು

ಭಾರತದ ಎಲ್ಲ ಭಾಷೆಗಳೂ-ಅಧಿಕೃತವೇ ಇರಲಿ, ಅನಧಿಕೃತವೇ ಇರಲಿ-ಅಭಿವೃದ್ಧಿ ಹೊಂದಬೇಕು. ಎಲ್ಲ ಧರ್ಮಗಳೂ ಭಾರತದವುಗಳೇ ಆಗಿವೆ. ಇವೆಲ್ಲವುಗಳಿಗೂ ಗೌರವ ದೊರೆಯಬೇಕೆಂದು ಪ್ರಧಾನ ಮಂತ್ರಿ ನೆಹರೂ ರವರು ರಾಜಪೂರಾ ಎಂಬಲ್ಲಿ ದಿ. ೪-೧೨-೧೯೬೦ರಂದು ಸಾರಿದರು. ಇಂದಿನ ಅಣುಯುಗದಲ್ಲಿ ಕ್ಷುಲ್ಲಕ ಸಂಗತಿಗಳಬಗ್ಗೆ ಕಲಹವಾಡುವದು ಜಾಣತನದ್ದಲ್ಲವೆಂದು ನುಡಿದರು. ದಕ್ಷಿಣ ಭಾರತೀಯರ ಮೇಲೆ ಹಿಂದೀಯನ್ನು ಒತ್ತಾಯದಿಂದ ಹೇರುವದು ತನುಗೆ ಬೇಕಿಲ್ಲವೆಂದೂ ಪ್ರಧಾನಿಗಳು ವ್ಯಕ್ತಮಾಡಿದರು. ಜನತೆಯನ್ನು ಉದ್ರೇಕಗೊಳಿಸಲು ಹಾಗೂ ಅವರಲ್ಲಿ ವಿಷಮತೆಯನ್ನು ಹೆಚ್ಚಿಸಲು ಭಾಷಾ ಪ್ರಶ್ನೆಯನ್ನು ಉಪಯೋಗಿಸುವದನ್ನು ಬಿಟ್ಟರೆ, ಈಗ ಉದ್ಭವಿಸಿರುವ ಅನೇಕ ಸಮಸ್ಯೆಗಳು ತಾನೇ ಬಗೆಹರಿಯುವದರಲ್ಲಿ ಯಾವ ಸಂದೇಹವೂ ಇಲ್ಲ.

ಶ್ರೀ ಬೆಟಗೇರಿ ಕೃಷ್ಣಶರ್ಮರವರ ಷಷ್ಟ್ಯಬ್ದಿ ಪೂರ್ತಿ ಸಮಾರಂಭ:

ದಿ. ೧೧-೧೨-೧೯೬೦ ರಂದು ಕರ್ನಾಟಕ ವಿಶ್ವವಿದ್ಯಾಲಯದ ಉಪಕುಲಪತಿ ರ್ಯಾಂಗ್ಲರ ಡಿ. ಸಿ. ಪಾವಟೆ ಯವರ ಘನ ಅಧ್ಯಕ್ಷತೆಯಲ್ಲಿ ಶ್ರೀ ಬೆಟಗೇರಿ ಕೃಷ್ಣಶರ್ಮರ ಷಷ್ಟಿಪೂರ್ತಿ ಸಮಾರಂಭವನ್ನು ಆಚರಿಸುತ್ತ ಕೃಷ್ಣಶರ್ಮರಿಗೆ ೩೦೧೧ ರೂ. ಗಳ ಹವ್ಮಿಣಿಯನ್ನು ಅರ್ಪಿಸಲಾಯಿತು. ಕವಿಗಳೂ, ಸರಸ್ವತೀಭಕ್ತರೂ ಆದ ಬೇಟಗೇರಿ ಕೃಷ್ಣಶರ್ಮರು ಕನ್ನಡ ನುಡಿಯ ಮೂಲಕ ನಮ್ಮ ಜನರಲ್ಲಿ ರಾಷ್ಟ್ರೀಯತೆಯನ್ನು ಹಾಗೂ ಕನ್ನಡದ ಅಭಿಮಾನವನ್ನು ಜಾಗೃತಗೊಳಿಸಿ ಅಪಾರ ಸೇವೆ ಸಲ್ಲಿಸಿದ್ದಾರೆ. ಮಿಂಚಿನ ಬಳ್ಳಿಯವರು ಪ್ರಕಟಿಸಿದ 'ಆನಂದಕಂದ' ಎಂಬ ಸನ್ಮಾನ ಗ್ರಂಥವನ್ನು ಅವರಿಗೆ ಅರ್ಪಿಸಲಾಯಿತು. ಶ್ರೀ ಬೆಟಗೇರಿ ಕೃಷ್ಣಶರ್ಮರು ದೀರ್ಘಾಯುಷಿಗಳಾಗಲೆಂದೂ ಹಾಗೂ ಅವರಿಂದ ಇನ್ನೂ ಹೆಚ್ಚಿನ ಸಾಹಿತ್ಯ ಸೇವೆಯಾಗಲೆಂದೂ ನಾವು ಪರಮಾತ್ಮನನ್ನು ಪ್ರಾರ್ಥಿಸುವೆವು.

ಅಖಿಲ ಭಾರತ ಸಮಾಜ ಶಿಕ್ಷಣ ಸಪ್ತಾಹ

ದೇಶದ ತುಂಬ ದಿ. ೧—೧೨—೧೯೬೦ ರಿಂದ ಒಂದು ಸಪ್ತಾಹದ ವರೆಗೆ ಸಮಾಜ ಶಿಕ್ಷಣ ಸಪ್ತಾಹವನ್ನು ಆಚರಿಸಲಾಯಿತು. ಧಾರವಾಡ ಗಂಡು ಮಕ್ಕಳ ಸರಕಾರೀ ಟ್ರೇನಿಂಗ ಕಾಲೇಜಿನಲ್ಲಿಯೂ ಕೂಡ ಒಂದು ವಾರದ ವರೆಗೆ ಸ್ಥಳಿಕ ಟ್ರೇನಿಂಗ ಕಾಲೇಜುಗಳ ಸಹಾಯ ಸಹಕಾರದಿಂದ ಸಪ್ತಾಹವನ್ನು ಆಚರಿಸಲಾಯಿತು. ಸಪ್ತಾಹದ ಉದ್ಘಾಟನೆಯನ್ನು ಜಿಲ್ಲಾ ಶಿಕ್ಷಣಾಧಿಕಾರಿಗಳಾದ ಶ್ರೀ ಎಂ. ಜೆ. ಹಂದ್ರಾಳರವರು ಉದ್ಘಾಟಿಸಿ ಸಮಾಜ ಶಿಕ್ಷಣದ ವಿಶಾಲ ಅರ್ಥವನ್ನು ಎಲ್ಲರಿಗೂ ಮನದಟ್ಟಾಗುವಂತೆ ಹೇಳಿದರು. ಸಪ್ತಾಹದ ಮುಕ್ತಾಯ ಸಮಾರಂಭದ ಮುಖ್ಯ ಅತಿಥಿಗಳಾದ ಶ್ರೀ ಎಸ್. ಎಸ್. ಹುಕ್ಕೇರಿ ಪ್ರಿನ್ಸಿಪಾಲ, ಜಿ. ಬಿ. ಟಿ. ಸಿ. ಇವರು ತಮ್ಮ ಭಾಷಣದಲ್ಲಿ, ಎಲ್ಲವನ್ನೂ ಸಾಧಿಸ ಹೊರಟು ಏನನ್ನೂ ಸಾಧಿಸದೆ ಇರುವದಕ್ಕಿಂತ ಸಾಧಿಸಲು ಸಾಧ್ಯವಾವುದೆಂಬುದನ್ನು ತಿಳಿದುಕೊಂಡು ಹೊರಡಬೇಕು. ಸಮಾಜ ಸೇವೆಯು ಅಲ್ಪವಾದರೂ ಚಿಂತೆಯಿಲ್ಲ, ಆದರೆ ಅದು ವಿವೇಕಯುತವಾದ ಸತ್ಯದ ಸೇವೆಯಾಗಲಿ ಎಂದು ನೆರೆದ ಶಿಕ್ಷಕ ವಿದ್ಯಾರ್ಥಿ-ವಿದ್ಯಾರ್ಥಿನಿಯರನ್ನು ಕೇಳಿಕೊಂಡರು. ಸಪ್ತಾಹದ ಅವಧಿಯಲ್ಲಿ ಕಾಲೇಜದಲ್ಲಿ ವಿಚಾರ ಸಂಕಿರಣ ಒಡ್ಡರ ಕೇರಿಯಲ್ಲಿ ಸಭೆ ಮುಂತಾದ ಕಾರ್ಯಕ್ರಮಗಳು ನಡೆದವು. ನಮ್ಮ ಪ್ರಜಾ ಪ್ರಭುತ್ವವು ಒಳ್ಳೇ ಯಶಸ್ವಿರೀತಿಯಿಂದ ಮುಂದೆ ಸಾಗಬೇಕಾದರೆ, ಇಂಥ ಸಮಾಜ ಶಿಕ್ಷಣ ಸಪ್ತಾಹಗಳ ಮುಖಾಂತರ ಜನರನ್ನು ಜಾಗೃತಗೊಳಿಸುವದು ಅವಶ್ಯವಾಗಿದೆ.

ಸಮಾಜ ಶಿಕ್ಷಣದ ಅರ್ಥ-ವ್ಯಾಪ್ತಿ

[ದಿನಾಂಕ ೧-೧೨-೬೦ರಂದು ಧಾರವಾಡ ಗಂಡು ಮಕ್ಕಳ ಸರಕಾರಿ ಟ್ರೇನಿಂಗ ಕಾಲೇಜದಲ್ಲಿ ಸ್ಥಳೀಯ ಎಲ್ಲ ತರಬೇತಿ ಸಂಸ್ಥೆಗಳ ಪರವಾಗಿ ಅಖಿಲ ಭಾರತ ಸಮಾಜ ಶಿಕ್ಷಣ ಸಪ್ತಾಹದ ಉದ್ಘಾಟನಾ ಸಮಾರಂಭವು ನೆರವೇರಿತು. ಧಾರವಾಡ ಜಿಲ್ಲೆಯ ಶಿಕ್ಷಣಾಧಿಕಾರಿಗಳೂ, ಧಾರವಾಡ ವಿಭಾಗದ ಇನ್‌ಚಾರ್ಜ ಡೆಪ್ಯೂಟಿ ಡೈರೆಕ್ಟರರೂ ಆದ ಶ್ರೀಮಾನ್ ಮ. ಗು. ಹಂದ್ರಾಳರವರು ಮುಖ್ಯ ಅತಿಥಿಗಳಾಗಿ ಆಗಮಿಸಿದ್ದರು. ಆ ಸಂದರ್ಭದಲ್ಲಿ ಅವರು ಮಾಡಿದ ಉದ್ಘಾಟನಾ ಭಾಷಣದ ಸಾರವನ್ನು ಸಂಗ್ರಹಿಸಿಕೊಡಲಾಗಿದೆ.] ಸಂಗ್ರಹಕಾರರು : ಶ್ರೀ ಹ. ಗ. ಜೋಶಿ

ಭಾರತವು ಸ್ವತಂತ್ರವಾದ ಮೇಲೆ ತನ್ನದೆ ಆದ ರಾಜ್ಯ ಘಟನೆಯೊಂದನ್ನು ಸಿದ್ಧಗೊಳಿಸಿ ಸ್ವೀಕರಿಸಿತು. ಭಾರತದ ರಾಜ್ಯ ಪದ್ಧತಿಯು ಪ್ರಜಾಪ್ರಭುತ್ವವೆಂದು ನಿರ್ಣಯಿಸಿ ಅಂಗೀಕರಿಸಿತು. ಪ್ರಜಾಪ್ರಭುತ್ವವು ಜನತೆಯದು; ಜನತೆಯಿಂದ ನಿರ್ಮಿತವಾದುದು; ಜನತೆಯ ಸಲುವಾಗಿ ಇದ್ದುದು; ಇಲ್ಲಿಯ ಪ್ರಭುತ್ವವು ಅನ್ಯರಿಂದ ಬಲುಮೆಯಿಂದ ಹೇರಲ್ಪಟ್ಟುದಲ್ಲ; ಜನತೆ ತಾನಾಗಿಯೇ ಸ್ವಯಂಪ್ರೇರಣೆಯಿಂದ, ಆತ್ಮ ಸಂತೋಷದಿಂದ ಹೇರಿ ಕೊಂಡುದುದು. ಇಂಥ ಪ್ರಜಾಪ್ರಭುತ್ವವುಳ್ಳ ದೇಶದಲ್ಲಿಯ ಜನತೆ ತಿಳಿವಳಿಕೆಯುಳ್ಳದ್ದು ಆಗಿರುವದು ಅವಶ್ಯವೂ ಅಪೇಕ್ಷಣೀಯವೂ ಆಗಿದೆ. ಸಂಸ್ಕೃತಿ ನಾಗರಿಕತೆಗಳು ಆ ಜನತೆಯ ಬೀಜಮಂತ್ರಗಳಾಗಬೇಕು. ಅರಸಿಕರಾದ ಕವಿಗಳಿಗೆ ಕಾವ್ಯನಿವೇದನೆಯನ್ನು ಮಾಡಬಾರದೆಂದು ಕವಿಯೊಬ್ಬನು ಹೇಳಿದಂತೆ ಅನಾಗರಿಕ, ಅನಕ್ಷರಸ್ಥ ಜನತೆಯ ಕೈಯಲ್ಲಿ ಪ್ರಜಾಪ್ರಭುತ್ವದ ರಾಜದಂಡವನ್ನು ನೀಡಬಾರದು. ನೀಡಿದಲ್ಲಿ ಅಂಧನ ಕೈಯಲ್ಲಿ ದೀವಿಗೆಯನ್ನು ಕೊಟ್ಟಂತಾಗುವದು. ಅಂತೆಯೇ ಸ್ವತಂತ್ರ ಭಾರತದಲ್ಲಿ ನಾಗರಿಕತೆಯ ತಿಳಿವನ್ನು ಹರಡುವ ಅಂದೋಲನವು ಭರದಿಂದ ಸಾಗಿದೆ. ಏಕಂದರೆ ಭಾರತದ ಪ್ರಜಾಕೋಟಿಯು ಪ್ರಜಾಪ್ರಭುತ್ವದ ರಾಜ್ಯ ಪದ್ಧತಿಯನ್ನು ಸ್ವೀಕರಿಸಲು ಇನ್ನೂ ಶೈಶವಾವಸ್ಥೆಯಲ್ಲಿದೆ. ಬಹುಜನ ಸಮಾಜಕ್ಕೆ ಇನ್ನೂ ತಿಳಿವು ಮೂಡಿಲ್ಲ. ಅಕ್ಷರ ಅಭ್ಯಾಸವೂ ಆಗಿರುವದಿಲ್ಲ.

ತಿಳಿವನ್ನು ಹರಡಲು, ನಾಗರಿಕತೆಯ ಉತ್ತಮ ಬೀಜಗಳನ್ನು ಬಿತ್ತಿ ಬೆಳೆಯಲು ಅಕ್ಷರಾಭ್ಯಾಸವೊಂದು ಸಾಧನವಾಗಿದೆ. ಹೀಗೆ ಹೇಳಿದ ಮಾತ್ರಕ್ಕೆ ಅಕ್ಷರಾಭ್ಯಾಸವೇ ಪರಮೋಚ್ಚ ಗುರಿಯೆಂದು ಯಾರೂ ಭಾವಿಸಬಾರದು. ಅದೊಂದು ಸಾಧನ ಮಾತ್ರ. ಈ ವಿಚಾರದಿಂದ ೧೯೩೭ ರಲ್ಲಿಯೇ ಸರಕಾರವು ಅನಕ್ಷರಸ್ಥ ಹಳ್ಳಿಗರನ್ನು ಅಕ್ಷರಸ್ಥರನ್ನಾಗಿ ಮಾಡುವ ಅಂದೋಲನವನ್ನು ಪ್ರಾರಂಭಿಸಿತು; ಅದುವೆ ಪ್ರೌಢ ಶಿಕ್ಷಣ. ಸ್ವರಾಜ್ಯ ಪ್ರಾಪ್ತಿಯ ನಂತರ ಅದರ ಅರ್ಥವು ವಿಸ್ತಾರಗೊಂಡಿತು. ಅಕ್ಷರಸ್ಥರಿಗೂ ಕೆಲವೊಂದು ಸಂಗತಿಗಳನ್ನು ತಿಳಿಸಿ ಕೊಡುವದು ಅಗತ್ಯವೆಂದೆನಿಸಿತು. ಮತದಾನ ಪದ್ಧತಿ, ಉದ್ದೇಶ, ಆರೋಗ್ಯ ರಕ್ಷಣೆ, ಸಾಮೂಹಿಕ ಆರೋಗ್ಯ, ಸಹಕಾರ, ಗ್ರಾಮೀಣ ಉದ್ಯೋಗಗಳ ಪುನರುಜ್ಜೀವನ, ಸುಧಾರಿಸಿದ ಪದ್ಧತಿಯ ಒಕ್ಕಲುತನ ಅದಕ್ಕೆ ಬೇಕಾಗುವ ಸಾಧನ ಸಂಪತ್ತಿಗಳನ್ನು ದೊರಕಿಸುವ ವಿಧಾನ, ಗ್ರಾಮದ ಆಡಳಿತೆ, ಪಂಚಾಯತನ, ಶಿಕ್ಷಣದ ಮಹತ್ವ ಮೊದಲಾದ ವಿಷಯಗಳ ಸರಿಯಾದ ತಿಳಿವಳಿಕೆ ಅಕ್ಷರಸ್ಥರಲ್ಲಿಯೂ ಸರಿಯಾಗಿ ಇರದಿರುವುದು ಗಮನಕ್ಕೆ ಬಂದಿತು. ವಿಕೇಂದ್ರೀಕೃತ ಸತ್ತೆಯ ಗುರಿಯನ್ನು ಇಟ್ಟುಕೊಂಡ ಜನತೆಯ ಸರ್ವಾಂಗೀಣ ಉನ್ನತಿಯನ್ನು ಬಯಸಿದ ಸರಕಾರಕ್ಕೆ ಜನತೆಗೆ ಇವೆಲ್ಲವುಗಳ ತಿಳಿವಳಿಕೆಯನ್ನು ಮಾಡಿಕೊಡುವದು ಅಗತ್ಯವೆನಿಸಿತು.

ಇಂದು ನಾವು ಯಾವ ಕ್ಷೇತ್ರವನ್ನೇ ನಿರೀಕ್ಷಿಸಲಿ; ಅಲ್ಲಿ ನಮಗೆ ವಿಸ್ತರಣಾ ತತ್ವವು ದೃಗ್ಗೋಚರವಾಗುತ್ತಿದೆ. (philosophy of Extension) ದೇಶದಲ್ಲಿ ಅಲ್ಲಲ್ಲಿ ವಿಸ್ತರಣಾ:ತರಬೇತಿ ಕೇಂದ್ರಗಳನ್ನು ಕಾಣುತ್ತೇವೆ. ಅಲ್ಲಿ ಹಳ್ಳಿಯ ಜನರಿಗೆ ಯಾವ ರೀತಿಯ ತಿಳುವಳಿಕೆಯನ್ನುಂಟು ಮಾಡಿ ಕೊಡಬೇಕೆಂದು ಶಿಕ್ಷಣವನ್ನೀಯಲಾಗುತ್ತಿದೆ. ಅಲ್ಲಿ ತರಬೇತಿ ಪಡೆಯುವವರನ್ನು ಗ್ರಾಮ ಸೇವಕರು, ಸೇವಕಿಯರು ಎಂದು ಕರೆಯಲಾಗುವದು. ತರಬೇತಿ ಪಡೆದಂಥವರು ಗ್ರಾಮಗಳಿಗೆ ಮರಳಿ ಅಲ್ಲಿಯ ಜನತೆಗೆ ಗ್ರಾಮ ನೈರ್ಮಲ್ಯದ ಅವಶ್ಯಕತೆ ಅದನ್ನು ಹೇಗೆ ಕಾಯ್ದುಕೊಳ್ಳಬೇಕು. ಶಿಕ್ಷಣದ ಅವಶ್ಯಕತೆಯೇನು? ಅದನ್ನು ದೊರಕಿಸುವಲ್ಲಿ ಸರಕಾರವು ನೀಡುವ ಸಹಾಯ ಸವಲತ್ತುಗಳೇನು? ಸುಧಾರಿಸಿದ ಒಕ್ಕಲುತನ, ಸಹಕಾರತತ್ವ, ಗ್ರಾಮೋದ್ಯೋಗಗಳನ್ನು ಪುನರುಜ್ಜೀವಿಸಿಕೊಳ್ಳುವದರ ಅಗತ್ಯ, ವಿಧಾನ ಮೊದಲಾದವುಗಳನ್ನು ಕುರಿತು ಹಳ್ಳಿಗರಿಗೆ ಪರಿಚಯ ಮಾಡಿಕೊಡುತ್ತಾರೆ. ಇಂಥ ಒಂದು ಸಮಗ್ರಜ್ಞಾನ ಪ್ರಸಾರದ ಕಾರ್ಯವನ್ನೇ ಸಮಾಜ ಶಿಕ್ಷಣದ ಕಾರ್ಯವೆಂದು ಬಗೆಯ ಬಹುದು. ಶಿಕ್ಷಣ ನೀಡುವಿಕೆಯಲ್ಲಿ ಸಮಗ್ರತೆಯ ದೃಷ್ಟಿಯಿರಬೇಕು. ಜ್ಞಾನವು ಜೀವನದಲ್ಲಿ ಸಮಗ್ರವಾಗಿ ಬರುತ್ತಿದೆಯೇ ಹೊರತು ಬಿಡಿಬಿಡಿಯಾಗಿ ಅಲ್ಲ. ಒಂದು ವೇಳೆ ಬಿಡಿ ಬಿಡಿಯಾಗಿ ಅಲ್ಲಲ್ಲಿ ಜ್ಞಾನಾಂಶಗಳು ಕಂಡು ಬಂದರೆ ಅವುಗಳನ್ನು ಕ್ರೋಡೀಕರಿಸಿ ಇಡಿಯಾಗಿ ಮಾಡಬೇಕಾದುದು ಆ ಕಾರ್ಯ ಕೈಕೊಂಡವರ ಹೊಣೆಯಾಗಿದೆ. ಒಟ್ಟಿನಲ್ಲಿ ಸಮಾಜ ಶಿಕ್ಷಣವ ಅರ್ಥವ್ಯಾಪ್ತಿ ವಿಸ್ತಾರಗೊಂಡಿವೆ.

ಪ್ರಾಥಮಿಕ ಶಿಕ್ಷಕರಾದರೂ ಇಂದು ಈ ಗುರಿಯನ್ನೇ ಕಣ್ಮುಂದಿಟ್ಟುಕೊಂಡು ಸಮಾಜ ಶಿಕ್ಷಣದ ಕಾರ್ಯವನ್ನು ಕೈಕೊಳ್ಳಬೇಕು. ಕೇವಲ ಅಕ್ಷರಾಭ್ಯಾಸ

ವನ್ನು ಹಳ್ಳಿಗರಿಗೆ ಮಾಡಿಸುವದಷ್ಟೇ ಸಮಾಜ ಶಿಕ್ಷಣವಲ್ಲ. ಆನುಷಂಗಿಕವಾಗಿ ಅಕ್ಷರಾಭ್ಯಾಸವೂ ಆಗಲಿ. ಅದು ಜ್ಞಾನ ದೊರಕಿಸುವಲ್ಲಿ ಪ್ರಥಮ ಸೋಪಾನವೆನಿಸಿದೆ; ಮಹತ್ವದ ಸಾಧನವಾಗಿದೆ. ಹಲಕೆಲವು ಮುಂದುವರಿದ ರಾಷ್ಟ್ರಗಳಲ್ಲಿ ಈ ಅಕ್ಷರಾಭ್ಯಾಸವನ್ನು ಮಾಡಿಸುವ ಕ್ರಮ ಬಲುಮೆಯದಾಗಿದೆ. ಯಾವನಾದರೂ ಅನಕ್ಷರಸ್ಥ ಹಳ್ಳಿಗನು ಓದು ಬರಿಹ ಕಲಿಯದಿದ್ದರೆ ದಂಡವನ್ನು ತೆತ್ತ ಬೇಕೆಂಬ ಕರಾರುಹಾಕಬೇಕೆಂದು ಹಲವರು ಹೇಳಬಹುದು. ಇನ್ನೂ ಕೆಲವರು ಅದಕ್ಕೂ ಮುಂದು ಹೋಗಿ ಕಲಿಯದಿದ್ದವರು ಶಿಕ್ಷೆಗೆ ಗುರಿಯಾಗುವರು ಎಂಬ ಕಾಯ್ದೆಯನ್ನೇ ರಚಿಸಬೇಕೆಂದೂ ಹೇಳುವರು. ಅದು ಭಾರತದಂಥ ವಿಶಾಲ ರಾಷ್ಟ್ರದಲ್ಲಿ ಗಾಂಧೀ ದೇಶದಲ್ಲಿ ಸರಿ ಎನಿಸದು. ನಮ್ಮದು ಶಾಂತಿ ಸಾವಧಾನ ಶಾಂತಿಗಳಿಂದ, ಮನವೊಲಿಸುವ ಕ್ರಮದಿಂದ ಕೈಕೊಳ್ಳಬೇಕಾದ ದೃಷ್ಟಿಯು ಆತ್ಮ ಸಂತುಷ್ಟಿಯಿಂದ ದೊರಕಿಸಿದ್ದು ಬಹು ಕಾಲ ಹೃದಯಾಂತರಾಳದಲ್ಲಿ ನಿಲ್ಲಬಲ್ಲುದು. ಬಲುಮೆಯಿಂದ ಬಂದುದು ಆ ರಾಜದಂಡ ಮರೆಯಾದೊಡನೆಯೇ ಕುಸಿದು ಬೀಳುವಂಥದು.

ಬಹಳವಾದರೆ ವಕೀಲರಿಗೆ ಸನದು ಕೊಡುವಲ್ಲಿ, ಡಾಕ್ಟರರಿಗೆ ಅನುಮತಿಯೀಯುವಲ್ಲಿ ಸರಕಾರಿ ಸೇವೆಯಲ್ಲಿ ಸೇರುವವರಿಗೆ ಇಂತಿಷ್ಟು ಜನರನ್ನು ಸಾಕ್ಷರರನ್ನಾಗಿ ಮಾಡಿರಿ ಎಂದು ಕರಾರು ಹಾಕಬಹುದು. ಆದರೆ ಪ್ರತಿಯೊಬ್ಬ ವ್ಯಕ್ತಿಯೂ ತಾನು ರಾಷ್ಟ್ರಕ್ಕಾಗಿ ಮಾಡಬೇಕಾದ ಕರ್ತವ್ಯವೇನು, ಎಂಬ ಅರಿವನ್ನು ಇಟ್ಟುಕೊಂಡುದಾದರೆ ಅಂಥ ಕಡ್ಡಾಯದ ಕ್ರಮವೂ ಅಗತ್ಯವೆನಿಸುವದಿಲ್ಲ. ಪ್ರತಿಯೊಬ್ಬನೂ ರಾಷ್ಟ್ರ ಪ್ರೇಮದಿಂದ ಪ್ರೇರಿತನಾಗಿ ತನ್ನಷ್ಟಕ್ಕೆ ತಾನೇ "ಒಬ್ಬನು ಒಬ್ಬನಿಗೆ ಕಲಿಸುವದು" (Each one teach one) ಎಂಬ ನಿಯಮ ಮಾಡಿಕೊಂಡು ಬಿಟ್ಟರೆ ಇಪ್ಪತ್ತು ವರುಷಗಳಲ್ಲಿ ದೇಶದ ನಿರಕ್ಷರಿ ಜನರೆಲ್ಲ ಸಾಕ್ಷರರಾಗಬಹುದು. ಪ್ರತಿಯೊಬ್ಬರೂ ತಮ್ಮ ತಮ್ಮ ಮನೆಯಲ್ಲಿ ಓದು ಬರೆಹ ಬಂದವರು ಓದು ಬರೆಹ ಬರದಿದ್ದವರಿಗೆ ಕಲಿಸಿದರೆ ಎಷ್ಟೋ ಉಪಕಾರವಾದೀತು. ಹೆಂಡತಿ ಅನಕ್ಷರಸ್ಥಳಿದ್ದರೆ ಗಂಡ ಕಲಿಸಲಿ, ಗಂಡ ಅನಕ್ಷರಸ್ಥನಾಗಿದ್ದರೆ ಹೆಂಡತಿ, ಕಲಿಸಲಿ! ಹೀಗಾದರೂ ರಾಷ್ಟ್ರದ ಕಲ್ಯಾಣವಾಗುವದು. ಆದರೆ ಒಂದು ಮಾತು ಮಾತ್ರ ಸದಾ ಜಾಗ್ರತವಾಗಿರಲಿ ಅಕ್ಷರಾಭ್ಯಾಸ ಮಾಡಿಸುವದೊಂದೇ ಸಮಾಜ ಶಿಕ್ಷಣದ ಗುರಿಯಲ್ಲ! ಕೊಡುವ ಜ್ಞಾನವು ಸಮಗ್ರವಾಗಿರಲಿ! ಅದು ಜೀವನದಿಂದ ಬರಲಿ, ಜೀವನಕ್ಕೆ ಮುಟ್ಟಲಿ! ಬಾಳುವೆಯು ಹಸನಾಗಿರಲು ಮೀಸಲಾಗಿರಲಿ.

ಇನ್ನು ಈ ಸಮಾಜ ಶಿಕ್ಷಣವನ್ನು ಕೊಡುವಲ್ಲಿ ಕೆಳಗಿನ ಕೆಲವು ಸಂಗತಿಗಳು ಕಾರ್ಯಕರ್ತರಿಗೆ ಸಹಾಯಕವಾಗಬಹುದು. ಕಾರ್ಯಕರ್ತರು ಅವುಗಳ ಏರ್ಪಾಡು ಮಾಡಿಕೊಂಡು ತಮ್ಮ ಕಾರ್ಯವನ್ನು ಮುಂದುರಿಸಬಹುದು.

ಅ) ಬೇರೆ ಬೇರೆ ತಜ್ಞರಿಂದ ಹಳ್ಳಿಗರ ಜೀವನಕ್ಕೆ ಉಪಯುಕ್ತವಾಗುವ ವಿಷಯಗಳ ಕುರಿತು ಭಾಷಣಗಳನ್ನೇರ್ಪಡಿಸುವದು.

ಉದಾಹರಣೆಗಾಗಿ :— ಸುಧಾರಿಸಿದ ಒಕ್ಕಲುತನ ಸಾಧನಗಳು, ಬೀಜಗಳು, ಗೊಬ್ಬರಗಳು, ಹೆಚ್ಚು ಆಹಾರ ಧಾನ್ಯಬೆಳೆಯುವ ವಿಧಾನಗಳು, ಬೆಳೆಗಳಿಗೆ ತಗಲುವ ರೋಗಗಳು; ಅವುಗಳ ನಿವಾರಣೋಪಾಯಗಳು, ದನಗಳ ಪೀಳಿಗೆ, ಅಭಿವೃದ್ಧಿ, ಜೋಪಾನ, ಅವುಗಳ ಆಹಾರ ಪಾನೀಯ, ರೋಗಗಳು, ನಿವಾರಣೋಪಾಯ ಇತ್ಯಾದಿ ವಿಷಯಗಳು.

ಬ) ಪಂಚವಾರ್ಷಿಕ ಯೋಜನೆಗಳು
ಕ) ಸಾಕ್ಷರರಿಗಾಗಿ ಸಾಹಿತ್ಯ
ಡ) ಪುಸ್ತಕ ಪ್ರದರ್ಶನ
ಇ) ಚರ್ಚಾಕೂಟಗಳು
ಗ) ಮನರಂಜನೆಗಳು(ಏಕಾಂಕನಾಟಕ, ಪ್ರಹಸನ, ಚಲಚಿತ್ರ ಪ್ರದರ್ಶನ ಇತ್ಯಾದಿ)

ಹೀಗೆ ಅನೇಕ ಚಟುವಟಿಕೆಗಳನ್ನು ಹಮ್ಮಿ ಹಳ್ಳಿಗರಿಗೆ ಬೇರೆ ಬೇರೆ ವಿಷಯಗಳಲ್ಲಿ ಜ್ಞಾನವನ್ನು ಉಂಟು ಮಾಡಿಕೊಡಬಹುದಾಗಿದೆ. ಉಂಟು ಮಾಡಿ ಕೊಡುವ ಜ್ಞಾನವು ಹಳ್ಳಿಗರು ತಮ್ಮ ಸಮಸ್ಯೆಗಳನ್ನು ತಾವೇ ಬಿಡಿಸಿಕೊಳ್ಳಲು ನೆರವಾಗುವಂತಿರಬೇಕು. ಗಣರಾಜ್ಯದಲ್ಲಿ ಯೋಗ್ಯರಾದ ಘಟಕರೆನಿಸಿ ಬಾಳುವಂತೆ ಸಮರ್ಥರನ್ನಾಗಿ ಮಾಡುವಂತಿರಬೇಕು.

[ಒಲನೆಯ ಪುಟ ನೋಡಿರಿ]

ಕಲ್ಪನೆಗಳ ಸಾಹಚರ್ಯ

ಲೇಖಕರು :— ಶ್ರೀ ಕಟ್ಟಿ ಶಾಮರಾಯರು, ಎಂ.ಎ.

ನಮ್ಮ ಕೃತಿಗಳು ನಮಗೆ ಮೈಯುಂಡ ಅಭ್ಯಾಸದ ಅನುಗುಣವಾಗಿ ನಡೆಯುವವಲ್ಲದೆ ನಮ್ಮನಮ್ಮ ವಿಚಾರಗಳೂ ಭಾವನೆಗಳೂ ಸಹ ರೂಢಿಯ ತಂತ್ರಕ್ಕೊಳಪಟ್ಟಿರುತ್ತವೆ. ಆದ್ದರಿಂದ ಕಲ್ಪನೆಗಳ ಸಾಹಚರ್ಯ ಎಂಬ ಮನಃಶಾಸ್ತ್ರದ ವಿಷಯವನ್ನು ಆಲೋಚಿಸೋಣ.

ಪ್ರಜ್ಞೆಯೆನ್ನುವದು ಇಂದ್ರಿಯಗೋಚರ ವಸ್ತುಗಳು. ಭಾವನೆಗಳು ಮತ್ತು ಪ್ರೇರಕ ಪ್ರವೃತ್ತಿಗಳ ಸಂತತ ಪ್ರವಾಹವಾಗಿರುವದೆಂಬದನ್ನು ನೆನಪಿನಲ್ಲಿಡಿರಿ. ಈ ಪ್ರಜ್ಞೆಯ ಕ್ಷಣಗಳ ಪರಂಪರೆಯಲ್ಲಿರುವ ಒಂದೊಂದು ತರಂಗದಲ್ಲಿ ಅಥವಾ ಅವಕಾಶದಲ್ಲಿ ಅತಿ ತೀವ್ರವಾದ ಅವಧಾನದ ವಿಷಯವಾದ ಒಂದು ಕೇಂದ್ರಗತ ವಸ್ತುವಿರುವದು. ಅದರ ಸುತ್ತಲೂ ಅಸ್ಪಷ್ಟವಾಗಿ ಗ್ರಹಿಸಿದ ಕೆಲವು ಸಂಗತಿಗಳ ಆವರಣವೊಂದಿರುವದು. ಅಲ್ಲದೆ ಇವೆಲ್ಲಕ್ಕೂ ಹೊಂದಿಕೊಂಡಿರುವ ಮನೋವಿಕಾರಗಳ (ಭಾವನೆಗಳ) ಪಾಗು ಕಾರ್ಯಪ್ರಚೋದನೆಗಳ ಒಂದು ಆವರಣವೂ ಇರುವದು. ಹೀಗೆ ಮನಸ್ಸನ್ನು ಪ್ರವಾಹದ ದೃಷ್ಟಾಂತದಿಂದ ವರ್ಣಿಸುವಾಗ ನಾವು ಪ್ರಕೃತಿಗೆ ಅಥವಾ ನಿಸರ್ಗಕ್ಕೆ ಆದಷ್ಟು ಸಮೀಪವಾಗಿ ಹತ್ತಿಕೊಂಡಿರುವೆವೆಂದು ತಿಳಿದುಕೊಳ್ಳಬೇಕು. ಹೀಗೆ ಅನುಸ್ಯೂತವಾಗಿ ಒಂದರಮುಂದೊಂದು ಇರುವ ತರಂಗಗಳಲ್ಲಿ ಯಾವ ಸಂಗತಿಯೂ ನಿಶ್ಚಿತ ಸ್ವರೂಪವುಳ್ಳದ್ದಲ್ಲವೆಂದು ಅನಿಸಬಹುದು. ಆದರೆ ಪರೀಕ್ಷೆಮಾಡಿ ನೋಡಿದರೆ ಪ್ರತಿಯೊಂದು ತರಂಗದ ಸ್ವರೂಪಕ್ಕೆ ಹಿಂದೆ ಬಂದು ಹೋದ ತರಂಗಗಳ ರಚನೆಯು ಸಾಕಷ್ಟು ಮಟ್ಟಿಗೆ ಕಾರಣವಿದ್ದುದು ತಿಳಿದು ಬರುವದು. ಈ ಒಂದು ತರಂಗದ ಸಂಬಂಧವು ಹಿಂದಿನ ತರಂಗಗಳೊಡನೆ ಇದ್ದುದನ್ನು ಸಾಹಚರ್ಯದ ಎರಡು ಮೂಲಭೂತ ನಿಯಮಗಳು ತಿಳಿಸಿ ಹೇಳುತ್ತವೆ; ಮೊದಲನೆಯದನ್ನು ಸಾಮೀಪ್ಯನಿಯಮವೆಂದೂ ಎರಡನೆಯದನ್ನು ಸಾದೃಶ್ಯ ನಿಯಮವೆಂದೂ ಕರೆಯಬಹುದು.

ಸಾಮೀಪ್ಯನಿಯಮವು ಹೇಳುವುದೇನೆಂದರೆ: ಮುಂದೆ ಬರುವ ತರಂಗದ ವಿಷಯ ಭೂತವಾದ ವಸ್ತುಗಳು ಎಂತಹ ವಿರುವವೆಂದರೆ ಹಿಂದೆ ನಾವು ಅನುಭವಿಸಿದ ಒಂದು ಪರಿಸ್ಥಿತಿಯಲ್ಲಿ ಅವು ಈ ಹಿಂದೆ ಉಳಿದು ಹೋದ ತರಂಗದ ವಸ್ತುಗಳಿಗೆ ಹತ್ತಿರ ಹತ್ತಿರದಲ್ಲಿದ್ದವು; ಗತಿಸಿಹೋದ ವಸ್ತು ವಿಷಯಗಳು ಮುಂದಿನ ವಸ್ತುವಿಷಯಗಳಿಗೆ ನೆರೆಹೊರೆಯಾಗಿದ್ದವು. ನಿಮ್ಮ ನಿತ್ಯದ ಪ್ರಾರ್ಥನೆಯ ಮಂತ್ರವನ್ನು ಅನ್ನುವಾಗ ಇಲ್ಲವೆ ವರ್ಣಮಾಲೆಯ ಅಕ್ಷರಗಳನ್ನು ಉಚ್ಚರಿಸುವಾಗ, ಒಂದು ವಸ್ತುವನ್ನು ನೋಡಿದಾಗ ಅದರ ಹೆಸರು ನೆನಪಾದಾಗ ಅಥವಾ ಹೆಸರನ್ನು ಕೇಳಿದಾಗ ಆ ವಸ್ತುವು ನೆನಪಾದಾಗ ಒಂದರಿಂದೊಂದು ಸೂಚಿತವಾಗುವದು ಈ ಸಾಮೀಪ್ಯ ನಿಯಮದಿಂದಲೇ.

ಈ ಸಾಮೀಪ್ಯ ವಿಶಿಷ್ಟ ತತ್ವದಿಂದ ಮುಂದಿನ ಮಾತು ಹಿಂದಿನಿಂದ ಹೇಗೆ ಬಂದಿತೆಂದು ಹಿಂದಿನ ಅನುಭವದ ಸಾಕ್ಷ್ಯವಿಲ್ಲದಾಗ ಮುಂದಿನ ಸಂಗತಿಗಳು ಹಿಂದಿನ ಸಂಗತಿಗಳಿಗೆ **ಸದೃಶ**ವಾಗಿರುವವೆಂದು ಸಿದ್ಧ ಮಾಡಬಹುದು; ಈ ಎರಡೂ ಸಂಗತಿಗಳು ಹಿಂದಿನ ಅನುಭವದಲ್ಲಿ ಕೂಡಿ ಬಂದಿಲ್ಲ. ಈ ಸಾದೃಶ್ಯ ವಿಶಿಷ್ಟ ಸಾಹಚರ್ಯವು ನಮ್ಮ ಕಲ್ಪನಾ ಸಾಮರ್ಥ್ಯದಲ್ಲಿ ಮೇಲಿಂದ ಮೇಲೆ ಕಾಣಿಸಿಕೊಳ್ಳುವದು.

ಕಲ್ಪನೆಯ ಕನಸನ್ನು ಕಾಣುತ್ತಿರುವಾಗ ತಡೆದು ನಿಂತು ನಾವು "ಈ ವಿಷಯವು ಈಗೇಕೆ ನಮ್ಮ ಆಲೋಚನೆಯಲ್ಲಿ ಬಂದಿದೆ" ಎಂದು ಕೇಳಿಕೊಂಡರೆ ಅದರ ಉಪಸ್ಥಿತಿಗೆ ಕಾರಣವಾದ ಹಿಂದಿನ ಇನ್ನೊಂದು ವಿಷಯವು ಸಾಮೀಪ್ಯ ಅಥವಾ ಸಾದೃಶ್ಯವಿಧಿಗಳಿಂದ ಗೊತ್ತಾಗುವದು. ಸಂಸ್ಮರಣೆಯಿಂದ ದೃಢವಾದ ನಿತ್ಯದ ಎಲ್ಲ ಸಂಗತಿಗಳು ಮುಖ್ಯತಃ ಈ ಸಾಮೀಪ್ಯ ನಿಯಮದ ಒಳ್ಳೆಯ ಉದಾಹರಣೆಗಳಾಗಿವೆ. ಒಂದು ಕವನದ ಶಬ್ದಗಳು, ಬೀಜಗಣಿತದ ಸೂತ್ರಗಳು, ಇತಿಹಾಸದ ಇಸವಿ ಮುಂತಾದ ಸಂಗತಿಗಳು" ಸ್ಥೂಲ ವಸ್ತುಗಳ ಗುಣಧರ್ಮಗಳು— ಇವೆಲ್ಲವೂ ಪುನಃ ಪುನರಾವೃತ್ತಿಯಿಂದ ಒಂದು ವಿಶಿಷ್ಟ ಕ್ರಮದಲ್ಲಿ ಕಲೆತುಕೊಂಡಿರುತ್ತವೆ; ಇವುಗಳಲ್ಲಿ ಒಂದು ಮತ್ತೊಂದನ್ನು ಥಟ್ಟನೆ ನೆನವು ಮಾಡಿಕೊಡು

ವದು. ರಸಿಕತೆಯಿಲ್ಲದ ಎಷ್ಟೋ ಸಾಮಾನ್ಯ ಮನುಷ್ಯರ ತಲೆಯಲ್ಲಿ ಇವು ಕೇವಲ ಬಾಯಿಪಾಠ ಮಾಡಿದ ಪುನರಾವರ್ತನೆಯಿಂದ ಆ ವಿಶಿಷ್ಟ ಕ್ರಮದಲ್ಲಿ ಎಡೆತಡೆಯಿಲ್ಲದೆ ಬರುವವು. ಪರಿಹಾಸಪೂರ್ಣ ಪ್ರತಿಭಾನ್ವಿತ ಜನರ ಮನಸ್ಸಿನಲ್ಲಿ ಮಾತ್ರ ಕೇವಲ ಸ್ಮೃತಿ ಯಂತ್ರದ ಅನುಪೂರ್ವಿಯಲ್ಲಿ ಸಹಜವಾಗಿ ಸುಲಭವಾಗಿ ವಿಭಿನ್ನತೆಯು ಸಾಮೀಪ್ಯ ನಿಯಮಕ್ಕೆ ವಿರೋಧವು ಕಂಡು ಬರುವದು. ಮತ್ತು ಮಾನಸಿಕ ವಸ್ತು ನಿಷಯಗಳ ಒಂದು ಕ್ಷೇತ್ರವು ಕೂಡಲೆ ಮತ್ತೊಂದು ವಿಷಯಗಳ ಕ್ಷೇತ್ರವನ್ನು ಮುಂದೆ ತರುವದು–ಆದರೆ ಈ ಎರಡನೇ ವಿಷಯಕ್ಕೆ ಮೊದಲನೆಯ ವಿಷಯವು, ಹಿಂದಿನ ಮಾನವೀಯ ವಿಚಾರದ ಇತಿಹಾಸದಲ್ಲಿಯೇ ಕದಾಚಿತ್ ಎಂದೂ ಸಂಬಂಧಪಟ್ಟದ್ದು ಸಿಕ್ಕಲಾರದಂತಿರಬಹುದು. ಒಂದರ ಮುಂದೊಂದು ಆಲೋಚನೆಯಲ್ಲಿ ಬಂದ ಈ ವಿಚಾರಗಳಿಗೆ ಯಾವದೋ ಒಂದು ಸಾದೃಶ್ಯವಿರುವದಷ್ಟೇ. ಈ ಸಾದೃಶ್ಯವು ಎಷ್ಟು ಸೂಕ್ಷ್ಮವಿರುವದೆಂದರೆ ಅದು ನಮ್ಮ ಮನಸ್ಸಿಗೆ ಹೊಳೆದರೂ ಅದರ ಹಿನ್ನೆಲೆಯು ತಿಳಿಯುವದು ಕಷ್ಟ. ಉದಾಹರಣೆಗಾಗಿ ಕೆಂಪು ಬಣ್ಣಕ್ಕೂ ಗಂಡು ಎಂಬದಕ್ಕೂ, ತಿಳಿನೀಲ ಬಣ್ಣಕ್ಕೂ ಹೆಣ್ಣು ಎಂಬದಕ್ಕೂ ಒಂದು ಸಾಹಚರ್ಯವನ್ನು ಸ್ಥಾಪಿಸಿದ್ದು, ಮೂರು ಮನುಷ್ಯರ ಸ್ವಭಾವಶೀಲಗಳಲ್ಲಿ ಒಂದಕ್ಕೆ ಬೆಕ್ಕಿನ ಸಾದೃಶ್ಯವನ್ನು, ಒಂದಕ್ಕೆ ನಾಯಿಯ ಸಾದೃಶ್ಯವನ್ನು, ಒಂದಕ್ಕೆ ಕದಾಚಿತ್ ಆಕಳ ಸಾದೃಶ್ಯವನ್ನು ಹೇಳುವ ಉದಾಹರಣೆಗಳಿವೆ.

ಈ ಸಾಹಚರ್ಯ ಸ್ಥಾಪನೆಯು ಹೇಗಾಗುವದು ಎಂಬ ವಿಷಯವನ್ನು ಮನೋವಿಜ್ಞಾನಿಗಳು ಆಲೋಚಿಸಿದ್ದಾರೆ. ಸಾಮೀಪ್ಯ ಸಾಹಚರ್ಯವೂ ಸಾದೃಶ್ಯ ಸಾಹಚರ್ಯವೂ ಒಂದಕ್ಕೊಂದು ವಿರುದ್ಧವಾದ ತತ್ವಗಳಿರದೆ ಒಂದು ಇನ್ನೊಂದನ್ನು ಒಳಗೊಳ್ಳುವದು ಎಂದು ಈ ಮನೋವಿಜ್ಞಾನಿಗಳಲ್ಲಿ ಹಲವರು ಸಾಧಿಸಲು ಪ್ರಯತ್ನಿಸಿದ್ದಾರೆ. ಆದರೆ ಮುಖ್ಯವಾಗಿ ಸಾಹಚರ್ಯದ ಕ್ರಮವು ನಮ್ಮ ಮಿದುಳಿನ ರಚನೆಯನ್ನೇ ಅವಲಂಬಿಸಿದೆ ಎಂದು ಹೇಳಬಹುದು, ಹಾಗಿದ್ದ ಮೇಲೆ ಮರಣಾನಂತರ ಭೌತಿಕ ದೇಹವು ಬಿದ್ದು ಹೋದ ಮೇಲೆ ಪ್ರಜ್ಞೆಯ ಅಲೆಗಳು ಬೇರೊಂದು ಸಿದ್ಧಾಂತಕ್ಕನುಸರಿಸಿ ನಡೆಯಬಹುದು. ನಮ್ಮೆಲ್ಲರ ಮಿದುಳುಗಳು ಸಾಹಚರ್ಯದ ಯಂತ್ರಗಳದ್ದಂತೆ. ವಿದ್ಯಾರ್ಥಿಗಳ ಮನಸ್ಸಿನಲ್ಲಿ ಒಂದು ಮಾತನ್ನು ಇನ್ನೊಂದರೊಡನೆ ಸಾಹಚರ್ಯದಿಂದ ಸಂಘಟಿಸುವಂತೆ ಏರ್ಪಾಟಾಗಬೇಕು. ಸಂವೇದನೆಯ ಸಂಸ್ಕಾರಗಳನ್ನು ಅದರ ಪರಿಣಾಮಕ್ಕೆ ಜೋಡಣೆ, ಪರಿಣಾಮಗಳನ್ನು ಪ್ರತಿಕ್ರಿಯೆಗಳಿಗೆ ಜೋಡಣೆ, ಪ್ರತಿಕ್ರಿಯೆಗಳನ್ನು ಪುನಃ ಅವುಗಳ ಪ್ರತಿಫಲಕ್ಕೆ ಹೀಗೆ ಅಸಂಖ್ಯ ಜೋಡಣೆಯಾಗುತ್ತ ಹೋಗಬೇಕು. ಈ ಸಾಹಚರ್ಯದ ಸಂಘಟನೆಯು ವಿಶಾಲವಾಗಿ ಬೆಳೆದಷ್ಟು ವ್ಯಕ್ತಿಯು ಪ್ರಾಪಂಚಿಕ ಜೀವನಕ್ಕೆ ಸಂಪೂರ್ಣವಾಗಿ ಹೊಂದಿಕೊಳ್ಳುವನು.

ಈ ಪ್ರಜ್ಞೆಯ ಪ್ರಕಾರವು ಈಗ ನನ್ನ ಮನಸ್ಸಿನ ಮುಂದೆ ಬರುವದಕ್ಕೆ ಕಾರಣವೇನು? ಎಂಬುದನ್ನು ತಿಳಿದುಕೊಳ್ಳಬೇಕು. ಅದು ಕಲ್ಪನೆಯ ವಸ್ತುಗಳ ಒಂದು ಕ್ಷೇತ್ರವಾಗಿರಬಹುದು; ಅಥವಾ ನೆನಪಿನ ವಸ್ತುಗಳ ಕ್ಷೇತ್ರವಿರಬಹುದು; ಇಲ್ಲವೆ ನೋಡಿದ ವಸ್ತುಗಳ ಕ್ಷೇತ್ರವಾಗಿರಬಹುದು; ಅಥವಾ ಅದರಲ್ಲಿ ನಿರ್ಧಾರ ಮಾಡಿದ ಒಂದು ಕೆಲಸವೂ ಒಳಗಿರಬಹುದು.

ಸಾಹಚರ್ಯದ ನಿಯಮಗಳಿಂದ ಮನಸ್ಸಿನ ಗತಿಗೆ ಚಾಲನೆ ದೊರೆಯುವದು; ಅಭಿರುಚಿ ಅಥವಾ ಆಸ್ಥೆ–ಆಸಕ್ತಿಯು ಆ ಗತಿಯನ್ನು ಅಲ್ಲೊಂದಿಷ್ಟು ಇಲ್ಲೊಂದಿಷ್ಟು ದಿಕ್ಕು–ಬದಲಾಯಿಸುವದು; ಅವಧಾನವು ಮುಗದಾಣದಂತೆ ಆ ಗತಿಯು ಸಿಕ್ಕಾಬಟ್ಟೆಯಾಗಿ ಹೋಗದಂತೆ ಅದನ್ನು ಹಿಡಿತದಲ್ಲಿಡುವದು.

ಜೀವನ ಶಿಕ್ಷಣ ಶಾಲೆಯಲ್ಲಿ ಶಿಸ್ತು

ಬರೆದವರು:— **ಶ್ರೀ ಎಸ್. ಎಸ್. ನಾಡಕರ್ಣಿ,** ಬಿ. ಎಸ್‌ಸಿ. (ಆನರ್ಸ), ಡಿ.ಇಡಿ. ರಾ. ಭಾ. ವಿಶಾರದ

ಮಗುವಿನ ಸರ್ವತೋಮುಖ ವಿಕಾಸ ಮಾಡುವ ಶಿಕ್ಷಣವು ಮಾನವ ಜೀವನದ ಮುಖ್ಯ ಅಂಗವಾದ ಶಿಸ್ತನ್ನು ಕಾಯ್ದುಕೊಂಡು ಹೋಗಲು ಪ್ರಯತ್ನಿಸುತ್ತದೆ. ಶಾಲೆಯಲ್ಲಿ ಶಿಸ್ತು ಮಕ್ಕಳ ಚಟುವಟಿಕೆಗಳಲ್ಲಿ ಒಂದು ಕ್ರಮ, ನಿಯಮ ಬದ್ಧತೆ, ಮಕ್ಕಳಲ್ಲಿ ಆಜ್ಞಾಪಾಲನ ಮುಂತಾದವುಗಳನ್ನು ಅಳವಡಿಸಿಕೊಂಡು ಹೋಗುವ

ಒಂದು ಮುಖ್ಯ ಸಾಧನವೆನ್ನಿಸಿ ಕೊಳುತ್ತದೆ. ಶಿಕ್ಷಣದ ಮುಖ್ಯ ಗುರಿ ಶಿಸ್ತಿನ ನಿರ್ಮಾಣ ಎನ್ನುವ ಕಾಲವೊಂದಿತ್ತು. ಆ ಶಿಸ್ತಿನ ನಿರ್ಮಾಣಕ್ಕಾಗಿ ಶಿಕ್ಷಕರು ಅನೇಕ ಪ್ರಯತ್ನಗಳನ್ನು ಮಾಡುತ್ತಿದ್ದರು. ನಾನಾ ಪ್ರಕಾರದ ಶಿಕ್ಷೆಗಳು, ದಂಡ, ಹೆಚ್ಚಿನ ಮನೆಗೆಲಸ ಮುಂತಾದವು ಶಿಸ್ತನ್ನು ನಿರ್ಮಾಣ ಮಾಡುವವೆಂಬ ವಿಚಾರ ಪ್ರಚಲಿತವಿತ್ತು. ಮಕ್ಕಳು ಶಾಂತ ರೀತಿಯಿಂದ ಶಾಲೆಯಲ್ಲಿ ಕುಳಿತುಕೊಳ್ಳಬೇಕು. ಶಿಕ್ಷಕನ ಆಜ್ಞೆಯನ್ನು ಶಿರಸಾವಹಿಸಿ ಮನ್ನಿಸಬೇಕು. ಶಾಲೆಯಲ್ಲಿ ಗದ್ದಲವಿರ ಬಾರದು. ಇವೇ ಮುಂತಾದವು ಶಿಸ್ತಿನ ಲಕ್ಷಣಗಳೆನ್ನಿಸಿ ಕೊಂಡಿದ್ದವು. ಮಕ್ಕಳು ಹಾಕುವ ಗದ್ದಲವು ಅವರ ಶಿಕ್ಷಣದಲ್ಲಿ ಅಡ್ಡಿಯಾಗುವದೆಂದು ತಿಳಿದು ಕೆಲವು ಶಾಲೆಗಳಲ್ಲಿ ಒಂದು ವರ್ಗಕ್ಕೆ ಪಾಠವನ್ನು ಹೇಳಿಕೊಡುತ್ತಿರುವಾಗ ಇಬ್ಬರು ಶಿಕ್ಷರು ಇರಬೇಕಾದ ನಿಯಮವಿರುತ್ತಿತ್ತು. ಒಬ್ಬ ಶಿಕ್ಷಕನು ಕೇವಲ ಕಲಿಸುವ ಕೆಲಸವನ್ನು ಇನ್ನೊಬ್ಬನು ಶಿಸ್ತನ್ನು ಕಾಯುವ ಕೆಲಸವನ್ನು ಬೆತ್ತದ ಸಹಾಯದಿಂದ ಮಾಡಬೇಕಾಗುತ್ತಿತ್ತು. ಸರ್ಕಸ್ಸಿನಲ್ಲಿ ರಿಂಗಮಾಸ್ಟರಗಳಿರುವದಿಲ್ಲವೆ? ಹಾಗೆ ನಿಜವಾಗಿ ವಿಚಾರ ಮಾಡಿದರೆ ಶಿಸ್ತು ಶಾಲೆಯಲ್ಲಿ ಇರಬೇಕಾದುದು ಅವಶ್ಯವಷ್ಟೇ ಅಲ್ಲ; ಅನಿವಾರ್ಯವೂ ಆಗುದು. ಯಾಕಂದರೆ ಶಾಲೆಯೆಂದರೆ ಸಮಾಜದ ಪ್ರತಿಬಿಂಬವೆಂದು ಎಲ್ಲಿ ತಜ್ಞರು ಅನ್ನುತ್ತಾರೆ. ಸಮಾಜದಲ್ಲಿ ಶಿಸ್ತು ಇದ್ದರೆ ಮಾತ್ರ ಅದರ ಪ್ರಗತಿ ಸಾಧ್ಯ. ಆದರೆ ಹಳೆಯ ಕಾಲದಲ್ಲಿ ಶಾಲೆಯೊಳಗಿನ ಶಿಸ್ತಿನ ಬಗ್ಗೆ ಇದ್ದ ವಿಚಾರಗಳಿಗೂ ಹೊಸ ಶಿಕ್ಷಣದಲ್ಲಿಯ ಶಿಸ್ತಿನ ವಿಚಾರಗಳಿಗೂ ಬಹಳೇ ಅಂತರವಿದೆ. ಹಿಂದಿನದು ಕೇವಲ ಬಾಹ್ಯ ಶಿಸ್ತು. ಹೆದರಿಕೆಗೊಳಗಾದ ಹುಡುಗರಿಂದ ಬಯಸುವ ಒಂದು ಪ್ರಕಾರದ ವರ್ತನೆ. ಆದರೆ ಅದು ನೈಮಿತ್ತಿಕ ಮಾತ್ರವೆಂದು ಬಹುಜನರು ಆಗ ತಿಳಿದು ಕೊಂಡಿದ್ದಿಲ್ಲ. ಶಿಕ್ಷಕರ ಹೆದರಿಕೆಗೆ ಶಿಸ್ತನ್ನು ತೋರಿಸುವ ಹುಡುಗರಿದ್ದ ಶಾಲೆಯಲ್ಲಿ ದುಷ್ಟಸಮಾಜದ ಅಡಿಗಲ್ಲು ಇರುವದು ಎಂದು ಒಬ್ಬ ಶಿಕ್ಷಣ ತಜ್ಞನು ಹೇಳಿದ ಮಾತು ಆಗ ಅಷ್ಟು ಮಾನವರಿಕೆಯಾಗಿದ್ದಿಲ್ಲ. ಮಕ್ಕಳಿಗೆ ನಾವು ನಿಜವಾಗಿ ಶಿಸ್ತನ್ನು ಕಲಿಸಬೇಕಾದರೆ ನಾವು ಶಿಸ್ತಿನ ಅರ್ಥ ಹಾಗೂ ಅದರ ಸ್ವರೂಪವನ್ನು ಚೆನ್ನಾಗಿ ತಿಳಿದು ಕೊಂಡಿರಬೇಕು. ಶಿಸ್ತು ಹೊರಗಿನಿಂದ ಬಂದಿದ್ದುದಾದರೆ ಅದು ನಿಜವಾದ ಶಿಸ್ತು ಅಲ್ಲ. ಶಿಸ್ತು ಹೃದಯದಿಂದ ಬರುತ್ತಿರಬೇಕು. ಮನಸ್ಸಿನ ಮೂಲದಲ್ಲಿ ಶಿಸ್ತಿನ ಉಗಮ ಸ್ಥಾನವಿದೆ. ಮಗುವು ಶಿಸ್ತನ್ನು ಬಯಸಬೇಕು. ಶಿಸ್ತನ್ನು ಪ್ರೀತಿಸಬೇಕು. ಶಿಸ್ತಿನಿಂದ ಇರಲು ಇಚ್ಛಿಸಬೇಕು. ತನ್ನ ಪ್ರತಿಯೊಂದು ಕಾರ್ಯದಲ್ಲಿ ಶಿಸ್ತನ್ನು ತೋರಿಸಬೇಕು. ಅದುವೇ ನಿಜವಾದ ಆಂತರಿಕ ಶಿಸ್ತು. ಅದಕ್ಕೆ ನಾವು ಕ್ರಿಯಾತ್ಮಕ ಶಿಸ್ತು ಅನ್ನಬೇಕು. ಜೀವನದಲ್ಲಿ ಮುಖ್ಯವಾಗಿ ಕ್ರಿಯಾತ್ಮಕ ಶಿಸ್ತಿನ ಆವಶ್ಯಕತೆ ಇರುತ್ತದೆ. ಈ ದೃಷ್ಟಿಯಲ್ಲಿ ಜೀವನ ಶಿಕ್ಷಣ ಶಾಲೆಯಲ್ಲಿ ಮಗುವಿನಲ್ಲಿ ಶಿಸ್ತು ಹೇಗೆ ನಿರ್ಮಾಣವಾಗುತ್ತದೆ. ಮತ್ತು ಅದನ್ನು ಮಾಡುವ ಬಗೆ ಯಾವದು ಎಂಬುದನ್ನು ವಿಚಾರಿಸೋಣ. ನಿರ್ಮಾಣ ಜೀವನ ಶಿಕ್ಷಣವು ಮಗುವಿನ ಜೀವನದ ಯಶಸ್ಸಿಗಾಗಿ ಹೆಣಗಾಡುತ್ತದೆ. ಶಿಸ್ತು ಯಶಸ್ಸಿ ಜೀವನದ ಪ್ರೇರಕ ಶಕ್ತಿಯಾಗಿರುತ್ತದೆ.

ಸಾಮಾನ್ಯವಾಗಿ ಶಾಲೆಯಲ್ಲಿ ನಾವು ಹೋದರೆ ಅದರಲ್ಲಿಯೂ ಸಣ್ಣ ಮಕ್ಕಳ ವರ್ಗಗಳಿಗೆ ಹೋದರೆ ಅಲ್ಲಿಯ ಮಕ್ಕಳನ್ನು ನೋಡಿ ನನುಗೆ ಒಮ್ಮೊಮ್ಮೆ ಬೇಸರ ಬರುತ್ತದೆ. ಅವರ ಕಿರುಚಾಟ, ಬಡೆದಾಟ, ಗದ್ದಲಗಳು ಶಿಕ್ಷಕನ ಎಷ್ಟೋ ಶಕ್ತಿಯನ್ನು ಹಾಳುಮಾಡುತ್ತವೆ. ಅಂತೆಯೇ ಸಣ್ಣವರಿಗೆ ಕಲಿಸುವದು ಕಷ್ಟದಾಯಕ ಎಂಬ ಮಾತನ್ನು ನಾವು ಕೇಳುತ್ತೇವೆ. ಮಕ್ಕಳು ಗದ್ದಲ ಹಾಕುವದಕ್ಕೆ ಕೆಲವು ಕಾರಣಗಳಿರುತ್ತವೆ. ಆ ಮೂಲ ಕಾರಣಗಳನ್ನು ನಾವು ತಿಳಿದುಕೊಂಡು ಅವನ್ನು ನಿವಾರಿಸುವ ಕ್ರಮ ಕೈಕೊಳ್ಳಬೇಕು. ಜೀವನ ಶಿಕ್ಷಣವು ಕೃತಿ ಮೂಲ ಶಿಕ್ಷಣವಾಗಿರುವದರಿಂದ ಶಾಲೆಯಲ್ಲಿ ಮಕ್ಕಳು ಅನೇಕ ಪ್ರಕಾರದ ಚಟುವಟಿಕೆಗಳನ್ನು ಕೈಕೊಳ್ಳಬೇಕಾಗುತ್ತದೆ. ಕೆಲಸವೆಂದರೆ ಮಕ್ಕಳಿಗೆ ಆಟವಿದ್ದಂತೆ. ಅವರು ಆಟ ಮತ್ತು ಕೆಲಸಗಳಲ್ಲಿ ಹೆಚ್ಚಿನ ಅಂತರವನ್ನು ಕಾಣಲಾರರು. ಅವರು ನಿಜವಾಗಿಯೂ ಕೃತಿಪ್ರೇಮಿಗಳು. ಅಲ್ಲದೆ ಶಾಲೆಯಲ್ಲಿ ಮಕ್ಕಳ ಜೀವನಕ್ಕೆ ಅವಶ್ಯವಿದ್ದ ಕೆಲಸಗಳನ್ನು ಮಾಡಿಸಲಾಗುವದಲ್ಲದೆ ಅದಕ್ಕೆ ಅವಶ್ಯವಿದ್ದ ಯೋಗ್ಯ ಪ್ರೇರಣೆಯನ್ನು ಮಕ್ಕಳಿಗೆ ಮಾಡಿಕೊಡಲಾಗುತ್ತದೆ. ಆದರೂ ಅವರು ಏಕೆ ಗದ್ದಲ ಹಾಕುತ್ತಾರೆ? ಇದಕ್ಕೆ ಬಹಳ ಕಾರಣಗಳಿವೆ. ಮೊದಲನೆಯದಾಗಿ ತಾನು ಮಾಡುವ ಕೆಲಸದ ಉದ್ದೇಶವು ಮಕ್ಕಳಿಗೆ ತಿಳಿಯಲಿಲ್ಲವಾದರೆ ಅವರು ಕೆಲಸ ನಡೆದಾಗ ಗದ್ದಲ ಹಾಕುವರು. ಅಂದ ಮೇಲೆ ಉತ್ತಮ ಪ್ರೇರಣೆ ಮಾಡದೆ ಕೆಲಸವನ್ನು ಮಾಡಲು ಹಚ್ಚಿ, ಮಕ್ಕಳಿಂದ ಕಡಿಮೆ ಗದ್ದಲವನ್ನು ನಾವು ಅಪೇಕ್ಷಿಸಿ

ದರೆ ಅದು ನಮ್ಮ ತಪ್ಪೇ ಹೊರತು ಅವರ ತಪ್ಪಲ್ಲ. ಎರಡನೆಯದಾಗಿ ಉತ್ತಮ ಪ್ರೇರಣೆಯಾಗಿದ್ದರೂ ಅನೇಕ ಶಾಲೆಗಳಲ್ಲಿ ಆಯಾ ಕೃತಿಗೆ ಬೇಕಾಗುವ ಉಪಕರಣಗಳು ಸಾಕಷ್ಟು ಇರುವದಿಲ್ಲ. ಕಡಿಮೆ ಉಪಕರಣಗಳಿದ್ದ ಕೂಡಲೆ ಮಕ್ಕಳು ತಮ್ಮ ತಮ್ಮಲ್ಲಿ ಜಗಳಾಡಲು ಪ್ರಾರಂಭಿಸುವರು. ಯಾಕೆಂದರೆ ತಮ್ಮ ಮನಸ್ಸಿಗೆ ತೃಪ್ತಿಯಾಗುವಂತೆ ಕೆಲಸ ಮಾಡಬೇಕೆಂಬ ಇಚ್ಛೆಗೆ ಉಪಕರಣಗಳ ಕೊರತೆಯು ಅಡ್ಡ ಬರುತ್ತದೆ. ಆದುದರಿಂದ ಶಾಲೆಯಲ್ಲಿ ಯಾವುದೇ ಕೃತಿಯನ್ನು ಮಕ್ಕಳಿಂದ ಮಾಡಿಸಬೇಕಾದರೆ ಸಾಕಷ್ಟು ಉಪಕರಣಗಳು ಇದ್ದಹೊರತು ನಾವು ಕೃತಿಯನ್ನು ಮಾಡಿಸಬಾರದು. ಮೂರನೆಯದಾಗಿ ಮಕ್ಕಳು ಮಾಡಿದ ಕೃತಿಗಳಿಂದ ಅವರ ಆತ್ಮ ಪ್ರತಿಷ್ಠಾ ಪ್ರವೃತ್ತಿಗೆ ಪೂರ್ಣ ತೃಪ್ತಿ ಸಿಗಬೇಕು. ಆದರೆ ಸಾಮಾನ್ಯವಾಗಿ ಕೆಲ ಶಾಲೆಗಳಲ್ಲಿ ಮಕ್ಕಳ ಕಡೆಯಿಂದ ತಯಾರಿಸಿದ ವಸ್ತುಗಳನ್ನು ಕೃತಿ ಮುಗಿದ ಕೂಡಲೇ ಒಂದು ಮೂಲೆಯಲ್ಲಿಯೋ ಕಸದ ಬುಟ್ಟಿಯಲ್ಲಿಯೋ ಹಾಕಿ ಬಿಡುವದನ್ನೇ ನಾವು ಕಣ್ಣಾರೆ ಕಾಣುತ್ತೇವೆ. ಉದಾಹರಣೆಗಾಗಿ ಗಣೇಶ ಚತುರ್ಥಿಯ ಹೊತ್ತಿನಲ್ಲಿ ಒಂದು ವರ್ಗದಲ್ಲಿ ಎಲ್ಲ ಮಕ್ಕಳ ಕಡೆಯಿಂದ ಒಂದೊಂದು ಗಣಪತಿಯನ್ನು ಮಾಡಿಸಲಾಯಿತು. ಮರು ದಿನ ಹೋಗಿ ನೋಡಿದಾಗ ಎಲ್ಲ ಗಣಪತಿಗಳನ್ನು ಒಂದು ಬುಟ್ಟಿಯಲ್ಲಿ ಒಟ್ಟು ಮಾಡಲಾಗಿದ್ದಿತು. ಕೆಲವು ಗಣಪತಿಗಳು ತಮ್ಮ ಸೊಂಡೆಗಳನ್ನು ಕಳೆದುಕೊಂಡಿದ್ದರೆ ಕೆಲವು ತಮ್ಮ ರುಂಡಗಳನ್ನೆ ಕಳೆದುಕೊಂಡು ಅಸಹಾಯ ಸ್ಥಿತಿಯಲ್ಲಿ ಬಿದ್ದಿದ್ದವು. ಅವುಗಳನ್ನು ನೋಡಿದ ಮಕ್ಕಳ ಸ್ಥಿತಿಯು ಏನಾಗಲಿಕ್ಕಿಲ್ಲ? ನಾವು ನಿನ್ನೆ ಮಾಡಿದ ಗಣಪತಿಗಳು ವ್ಯರ್ಥವಾದವಲ್ಲವೆ? ನಾವು ನಿನ್ನೆ ಸುಮ್ಮನೆ ಶ್ರಮಪಟ್ಟೆವಲ್ಲ? ಎಂದು ತಿಳಿದ ಬಾಲಕರು ತಮ್ಮ ಮುಂದಿನ ಎಲ್ಲ ಕೃತಿಗಳಲ್ಲಿಯೂ ಅನಾಶಕ್ತಿಯನ್ನು ತೋರಿಸಲು ಪ್ರಾರಂಭಿಸುವರು. ಅಲ್ಲದೆ ಮನಸ್ಸುಗೊಟ್ಟು ಕೆಲಸಮಾಡಿದರೂ ಸಹ ಯಾವ ಫಲವೂ ಸಿಗಲಾರದೆಂದು ಖಚಿತ ಪಡಿಸಿಕೊಂಡು ಕೃತಿಯಕಾಲಕ್ಕೆ ಗದ್ದಲವನ್ನುಂಟು ಮಾಡುವರು. ಅಂತೆಯೇ ಮಕ್ಕಳ ಕೃತಿಗಳನ್ನು ಮನ್ನಿಸ ಬೇಕಾದುದು ಅಗತ್ಯ. ಅವರು ತಯಾರಿಸಿದ ವಸ್ತುಗಳನ್ನು ಕೆಲವು ದಿವಸಗಳ ವರೆಗಾದರೂ ಪ್ರದರ್ಶನಕ್ಕಿಡುವದು ಯೋಗ್ಯ ಅಲ್ಲದೆ ಉತ್ತಮ ಕೆಲಸಗಾರನನ್ನು ಹುಡುಕಿ ಇತರರಿಗೂ ಅಂಥ ಕೆಲಸ ಮಾಡುವ ಹುರುಪನ್ನು ಕೊಟ್ಟು ಮುಂಬರುವ ಕೃತಿಗಳಲ್ಲಿ ಒಂದು ಪ್ರಕಾರದ ಸ್ಪರ್ಧೆಯನ್ನು ಏರ್ಪಡಿಸಬೇಕು. ನಾಲ್ಕನೆಯದಾಗಿ ಮಕ್ಕಳು ಕೆಲಸ ನಡೆಯಿಸಿರುವಾಗ ಎಷ್ಟೋ ವರ್ಗಗಳಲ್ಲಿಯ ಶಿಕ್ಷಕರು ತಮ್ಮದೇ ಆದ ಬೇರೊಂದು ಕೆಲಸದಲ್ಲಿ ಮಗ್ನರಾಗಿರುತ್ತಾರೆ. ಮಕ್ಕಳು ಏನು ಮಾಡಲಿಕ್ಕೆ ಹತ್ತಿವೆ? ಎಂದು ಯಾರಾದರೂ ಶಿಕ್ಷಕನನ್ನು ಕೇಳಿದರೆ ಶಿಕ್ಷಕನು ನೆನಪು ಮಾಡಿಕೊಂಡು ಹೇಳಬೇಕಾಗುತ್ತದೆ. ಈ ಪ್ರಕಾರದ ಶಿಕ್ಷಕರ ಅನಾಸಕ್ತಿಯು ಕೂಡ ಮಕ್ಕಳಲ್ಲಿ ಗದ್ದಲ ಮಾಡುವ ಪ್ರವೃತ್ತಿಗೆ ಪುಟಗೊಡುತ್ತದೆ. ಆದುದರಿಂದ ಮಕ್ಕಳ ಕೆಲಸಗಳಲ್ಲಿ ಪ್ರತಿಯೊಬ್ಬ ಶಿಕ್ಷಕನು ಭಾಗಿಯಾಗಿ ಸರಿಯಾದ ಮೇಲ್ವಿಚಾರಣೆಯನ್ನು ಮಾಡುತ್ತಿರಬೇಕು. ಐದನೆಯದಾಗಿ "ಚಟುವಟಿಕೆಗಾಗಿ ಚಟುವಟಿಕೆ" ಇದು ಮಕ್ಕಳಲ್ಲಿ ಗದ್ದಲವನ್ನು ನಿರ್ಮಾಣ ಮಾಡುವ ಕಾರಣವಾಗುತ್ತದೆ. ಒಂದು ವರ್ಗದಲ್ಲಿ ಮಕ್ಕಳ ಕಡೆಯಿಂದ ರಟ್ಟಿನ ಖಡ್ಗಗಳನ್ನು ಮಾಡಿಸಲಾಯಿತು. ನಂತರ ಅದಕ್ಕೆ ಕಿತ್ತೂರ ಚನ್ನಮ್ಮನ ಚರಿತ್ರೆಯನ್ನು ಸಮನ್ವಯ ಮಾಡುವ ಪ್ರಯತ್ನ ಮಾಡಲಾಯಿತು. ಪಾಠವೂ ಪ್ರಾರಂಭವಾದ ಕೂಡಲೇ ಮಕ್ಕಳಲ್ಲಿ ಗದ್ದಲವು ಪ್ರಾರಂಭವಾಯಿತು. ಖಡ್ಗವನ್ನು ಏಕೆ ಮಾಡಿಸಲಾಯಿತು? ಎಂಬುದೇ ಅವರ ಗದ್ದಲದ ಮುಖ್ಯ ವಿಷಯವಾಗಿತ್ತು. ಈ ರೀತಿ ಅಸಂಬದ್ಧ ಸಮವಾಯದ ಮೂಲಕವೂ ಸಹ ಮಕ್ಕಳಲ್ಲಿ ಗದ್ದಲವು ಪ್ರಾರಂಭವಾಗುತ್ತದೆ. ಆದುದರಿಂದ ಶಿಕ್ಷಕರು ಸುಸ್ಪಷ್ಟ ಸಮನ್ವಯದ ಕಡೆಗೆ ಹೆಚ್ಚು ಲಕ್ಷ ಕೊಡಬೇಕಾದುದು ಅತ್ಯವಶ್ಯ. ಆರನೆಯದಾಗಿ ಶಿಕ್ಷಕನ ವ್ಯಕ್ತಿತ್ವ, ಕೆಲವು ಶಿಕ್ಷಕರು ಪಾಠ ಹೇಳಿಕೊಡುವಾಗ ಗದ್ದಲ ಹಾಕುತ್ತಿರುವ ಹುಡುಗರು, ಮತ್ತೆ ಬೇರೆ ಶಿಕ್ಷಕರು ಪಾಠಕೊಡುವಾಗ ಶಾಂತ ರೀತಿಯಿಂದ ವರ್ತಿಸುತ್ತಾರೆ. ಎನ್ನುವದು ಅನುಭವದ ಸಂಗತಿ; ಇದಕ್ಕೆ ಕಾರಣವೆಂದರೆ ಶಿಕ್ಷಕನ ವ್ಯಕ್ತಿತ್ವದ ಪರಿಣಾಮ. ಉತ್ತಮ ವ್ಯಕ್ತಿತ್ವದಿಂದ ಮಕ್ಕಳೆಲ್ಲರನ್ನು ಶಿಕ್ಷಕನು ತನ್ನವರನ್ನಾಗಿ ಮಾಡಿಕೊಳ್ಳ ಬಲ್ಲನು. ಶಾಂತತೆಯನ್ನು ಉಂಟು ಮಾಡಲಿಕ್ಕೆ ಶಿಕ್ಷೆ, ಬೆದರಿಕೆಗಳ ಅವಶ್ಯಕತೆ ಇಲ್ಲ. ಗದ್ದಲ ಮಾಡುವ ಹುಡುಗರನ್ನು ಶಿಕ್ಷಕನು ದಿಟ್ಟಿಸಿ ನೋಡಿದರೆ ಸಾಕು, ಅವರು ಸುಮ್ಮನಾಗಿರಬೇಕು. ಈ ರೀತಿ ಸಮಯೋಚಿತ ದರ್ಪವನ್ನು ಶಿಕ್ಷಕನು ತೋರಿಸುತ್ತಿರಬೇಕು. ಕೇವಲ ಮಕ್ಕಳಿಗೆ ಪೂರ್ಣ ಸ್ವಾತಂತ್ರ್ಯವಿದೆಯೆಂದು ಕುಳಿತರೆ ನಡೆಯಲಿಕ್ಕಿಲ್ಲ. (Complete freedom is a myth) ಪೂರ್ಣ ಸ್ವಾತಂತ್ರ್ಯವು ಅವ್ಯವಹಾರಿಕ

ವಲ್ಲದೆ ಅಸಾಧ್ಯವೂ ಅಹುದು. ಅಂತೆಯೇ ಶಿಕ್ಷಕರು ಕ್ವಚಿತ್ತಾಗಿ ಸ್ವಲ್ಪು ಅಧಿಕಾರವನ್ನು ಉಪಯೋಗಿಸಿ ಕೊಳ್ಳಬೇಕಾಗುತ್ತದೆ. ಅತೀ ಗದ್ದಲ ಹಾಕುವ ಹುಡುಗರನ್ನು ಸೌಮ್ಯ ಶಿಕ್ಷೆಗೆ ಗುರಿಪಡಿಸಬೇಕು. ಅವರಿಗೆ ಎಚ್ಚರಿಕೆ ಕೊಡುವದು. ಅವರನ್ನು ಮುಖ್ಯ ಗುರುಗಳ ಬಳಿಗೆ ಕರೆದು ಕೊಂಡು ಹೋಗಿ ಬುದ್ಧಿ ಹೇಳುವದು. ಇವೇ ಮುಂತಾದ ಕ್ರಮಗಳಿಂದ ಶಾಲೆಯಲ್ಲಿ ಗದ್ದಲವನ್ನು ಕಡಿಮೆ ಮಾಡುವ ಪ್ರಯತ್ನ ಮಾಡಬೇಕು.

ಶಾಲೆಯೆಂದರೆ ಸಮಾಜದ ಸ್ವರೂಪ. ಸಮಾಜದಲ್ಲಿ ಕೆಲವು ವಿಶಿಷ್ಟ ಕಾಯಿದೆ-ಕಾನೂನುಗಳು ಇರುತ್ತವೆ. ವ್ಯಕ್ತಿಗೆ ಪೂರ್ಣ ಸ್ವಾತಂತ್ರ್ಯವು ಇದ್ದರೂ ಮತ್ತೊಬ್ಬ ವ್ಯಕ್ತಿಗೆ ಇದ್ದ ಸ್ವಾತಂತ್ರ್ಯವು ಮೊದಲನೆಯ ವ್ಯಕ್ತಿಯ ಸ್ವಾತಂತ್ರ್ಯಕ್ಕೆ ಸ್ವಲ್ಪ ಮಟ್ಟಿಗೆ ಸೀಮಾ ಬಂಧನವಾಗಿರುತ್ತದೆ. ಒಬ್ಬ ವ್ಯಕ್ತಿಯು ತನ್ನ ಮನಸ್ಸಿಗೆ ಬಂದಂತೆ ವರ್ತಿಸಲು ಬಯಸಿದರೆ ಮತ್ತೊಬ್ಬ ವ್ಯಕ್ತಿಯು ಅದಕ್ಕೆ ಕೆಲಮಟ್ಟಿಗೆ ಅಡ್ಡಬರುತ್ತಾನೆ. ಅಂತೆಯೇ ಸಮಾಜದಲ್ಲಿ ವಿಶಿಷ್ಟ ನಿಯಮಗಳು ಅತ್ಯಾವಶ್ಯಕವಾಗಿ ಇರಬೇಕಾಗುತ್ತದೆ. ಅದೇ ಪ್ರಕಾರ ಶಾಲೆಯಲ್ಲಿಯೂ ವಿಶಿಷ್ಟ ನಿಯಮಗಳಿದ್ದು ಅವುಗಳನ್ನು ಮಕ್ಕಳಿಗೆ ತಿಳಿಸಿಕೊಟ್ಟು ಅವುಗಳನ್ನು ಪಾಲಿಸಲು ಮಕ್ಕಳಿಗೆ ಪ್ರಚೋದಿಸುವದು ಶಿಕ್ಷಕರ ಕರ್ತವ್ಯ. ಬೇರೆಯವರ ಸೊತ್ತನ್ನು ಹಾಳು ಮಾಡುವದು, ಗೋಡೆಯ ಮೇಲೆ ಗೀಚುವದು, ಶಾಲೆಯಲ್ಲಿಯ ಉಪಕರಣಗಳಿಗೆ ಧಕ್ಕೆ ತರುವದು, ಈ ಪ್ರಕಾರದ ದುಷ್ಕೃತ್ಯಗಳನ್ನು ಶಿಕ್ಷಕರು ಪ್ರತಿಬಂಧಿಸಬೇಕು. ಜೀವನ ಶಿಕ್ಷಣ ಶಾಲೆಯಲ್ಲಿ ಇಂಥ ನಿಯಮಗಳನ್ನು ಮನನ ಮಾಡಿಕೊಡಲಿಕ್ಕೆ ಸಾಕಷ್ಟು ಅವಕಾಶವಿದೆ. ಉದಾಹರಣೆಗಾಗಿ ಒಬ್ಬ ಹುಡುಗನು ಪರರ ಪಾಟಿಗಳನ್ನು ಒಡೆಯುವದು, ಪುಸ್ತಕಗಳನ್ನು ಹರಿಯುವದು ಮುಂತಾದವುಗಳನ್ನು ಮಾಡುತ್ತಾನೆ. ಅವನಿಗೆ ಶಿಕ್ಷೆಹೆದರಿಕೆಗಳಿಂದ ಈ ಚಟವನ್ನು ಬಿಡಿಸುವದು ಯೋಗ್ಯವಲ್ಲ. ಇದಕ್ಕಾಗಿ ಅವನಿಗೆ ತನ್ನ ಸಾಮಾನುಗಳನ್ನು ಪರರು ಕೆಡಿಸಿದರೆ ಎಷ್ಟು ನೋವಾಗುವದು ಎಂಬುದನ್ನು ತೋರಿಸಿಕೊಡಬೇಕು. ಒಂದು ಶಾಲೆಯಲ್ಲಿ ಇಂಥ ಒಬ್ಬ ಹುಡುಗನಿಗೆ ಪಾಠವನ್ನು ಕಲಿಸುವ ಯೋಜನೆಯನ್ನು ಮಾಡಲಾಯಿತು. ಅವನ ಪಾಲಿಗೆ ಬಂದ ಮಡಿಯಲ್ಲಿ ಉತ್ತಮ ಗಿಡಗಳು ಬೆಳೆದಿದ್ದವು. ಶಿಕ್ಷಕರು ಮತ್ತೊಬ್ಬ ಹುಡುಗನಿಗೆ ಅವನ ಮಡಿಯಲ್ಲಿಯ ಗಿಡಗಳನ್ನು ಕೀಳುವ ನಟನೆ ಮಾಡೆಂದು ಹೇಳಿದರು. ಆ ಪ್ರಕಾರ ಹುಡುಗನು ಅವನ ಮಡಿಯಲ್ಲಿ ಹೋದ ತಕ್ಷಣ ಮೊದಲಿನ ಹುಡುಗನು ಶಿಕ್ಷಕನ ಕಡೆಗೆ ಹೋಗಿ ದೂರು ಕೊಟ್ಟನು. "ನನ್ನ ಮಡಿಯಲ್ಲಿಯ ಗಿಡಗಳನ್ನು ಕಿತ್ತರೆ ನನ್ನ ಮನಸ್ಸಿಗೆ ನೋವಾಗುತ್ತದೆ" ಎಂದನು. ಆಗ ಶಿಕ್ಷಕನು "ನೀನು ಏಕೆ ಪರರ ವಸ್ತುಗಳನ್ನು ಹಾಳು ಮಾಡುತ್ತೀ?" ಎಂದರು; ಆ ಹುಡುಗನು "ನನ್ನ ತಪ್ಪಾಯಿತು" ಎಂದನು. ಹಾಗೂ ತನ್ನ ಮೊದಲಿನ ಚಟವನ್ನು ಕೊನೆಯವರೆಗೂ ಬಿಟ್ಟು ಕೊಟ್ಟನು. ಈ ರೀತಿ ಅನೇಕ ಉಪಾಯಗಳಿಂದ ಮಕ್ಕಳಲ್ಲಿಯ ವಿಧ್ವಂಸಕ ಕೃತಿಗಳನ್ನು ಹಿಂಗಿಸುವ ಕ್ರಮಗಳನ್ನು ಕೈಕೊಳ್ಳಬಹುದು. ಅದೇ ರೀತಿ ವೇಳೆಗೆ ಮಹತ್ವವನ್ನು ಮಕ್ಕಳಿಗೆ ತಿಳಿಸಲು ಬರುತ್ತದೆ. ಸರಿಯಾದ ವೇಳೆಗೆ ಶಾಲೆಗೆ ಬರುವದು, ಸರಿಯಾದ ವೇಳೆಗೆ ಪ್ರಾರ್ಥನೆ ಮಾಡುವದು, ನಿಯಮಿತ ವೇಳೆಗೆ ಚಟುವಟಿಕೆ ಪ್ರಾರಂಭಿಸುವದು ಮುಂತಾದವುಗಳಿಂದ ಮಕ್ಕಳಿಗೆ ವೇಳೆಯ ಸರಿಯಾದ ಉಪಯೋಗವು ತಿಳಿಯುವದು.

ಸಾಮಾನ್ಯವಾಗಿ ಜೀವನ ಶಿಕ್ಷಣ ಶಾಲೆಗಳಲ್ಲಿ ಮಕ್ಕಳ ಗದ್ದಲವು ಹೆಚ್ಚಾಗಿರುವದು. ಹಾಗೂ ಶಾಂತತೆ ಇರುವದಿಲ್ಲ ಎಂದು ಕೆಲವರು ಟೀಕಿಸುತ್ತಾರೆ. ಅಲ್ಲಿ ಶಿಸ್ತಿನ ಭಂಗವಾಗುತ್ತದೆ ಎಂದು ಅವರ ಆರೋಪ. ಮಕ್ಕಳು ಗದ್ದಲವನ್ನು ಏಕೆ ಹಾಕುತ್ತಾರೆ? ಪ್ರೌಢರು ಗದ್ದಲ ಏಕೆ ಮಾಡುವದಿಲ್ಲ? ಮಕ್ಕಳಲ್ಲಿ ಇದ್ದ ಹೆಚ್ಚಿನ ಉತ್ಸಾಹವೇ ಇದಕ್ಕೆಕಾರಣವೆಂದು ಶಿಕ್ಷಣ ತಜ್ಞರ ಅಭಿಪ್ರಾಯ. ಆಂದಮೇಲೆ ಮಕ್ಕಳ ಹೆಚ್ಚಿನ ಹುಮ್ಮಸ್ಸಿಗೆ ಯೋಗ್ಯ ಮಾರ್ಗವನ್ನು ನಾವು ಕಲ್ಪಿಸಿಕೊಡಬೇಕಾಗುತ್ತದೆ. ಜೀವನಶಿಕ್ಷಣ ಶಾಲೆಗಳಲ್ಲಿ ಅನೇಕ ಪ್ರಕಾರದ ಚಟುವಟಿಕೆಗಳನ್ನು ಮಾಡಿಸುವ ಯೋಜನೆ ಇಟ್ಟುಕೊಳ್ಳಲಾಗಿದೆ. ಈ ಚಟುವಟಿಕೆಗಳನ್ನು ಯೋಗ್ಯ ರೀತಿಯಲ್ಲಿ ನಾವು ಮಾಡಿಸಿದುದಾದರೆ ಮಕ್ಕಳಲ್ಲಿ ಶಿಸ್ತು ತಾನೇ ನೆಲೆಗೊಳ್ಳುತ್ತದೆ. ಮತ್ತೊಂದು ಮುಖ್ಯ ಸಂಗತಿಯೆಂದರೆ ಜೀವನ ಶಿಕ್ಷಣ ಶಾಲೆಗಳಲ್ಲಿ ಕೇವಲ ಶಾಲೆಯಲ್ಲಿ ಅಷ್ಟೇ ಮಗುವಿನ ಜೀವನದ ಕಡೆಗೆ ಲಕ್ಷಕೊಡದೆ ಶಾಲೆಯ ಹೊರಗಿನ ಅವನ ವರ್ತನೆಯ ಮೇಲೂ ಶಿಕ್ಷಕರು ದೃಷ್ಟಿಯನ್ನಿಟ್ಟಿರುತ್ತಾರೆ. ಸಾಂಘಿಕ ಜೀವನದ ಕ್ರಮದಿಂದ ಅವನ ಇಡೀ ಜೀವನದ ಪರೀಕ್ಷೆ ಮಾಡುವ ಯೋಜನೆ ಇಟ್ಟು

ಕೊಳ್ಳಲಾಗಿದೆ. ಶಾಲೆಯಲ್ಲಿ ಗುರುಗಳ ಹೆದರಿಕೆಯಿಂದಲೋ ಒಬ್ಬ ಹುಡುಗನು ಒಳ್ಳೆ ಶಿಸ್ತನ್ನು ತೋರಿಸಬಹುದು. ಆದರೆ ಶಾಲೆ ಬಿಟ್ಟ ಮೇಲೂ ಅದೇ ಪ್ರಕಾರದ ಶಿಸ್ತನ್ನು ತೋರಿಸುತ್ತಾನೆ ಎಂದು ಹೇಳುವದು ಕಠಿಣ. ಆದುದರಿಂದ ಶಿಕ್ಷಕರು ಮಗುವಿನ ಹೊರಗಿನ ಜೀವನದ ಮೇಲೂ ಸಹಿತ ದೃಷ್ಟಿಯನ್ನಿಟ್ಟಿರುತ್ತಾರೆ. ಅದಕ್ಕೋಸ್ಕರ ಪಾಲಕರ ಮತ್ತು ಶಿಕ್ಷಕರ ಸಂಪರ್ಕವು ಹೆಚ್ಚು ಬಂದಿರುತ್ತದೆ. ಮನೆಯಲ್ಲಿ ಅಥವಾ ಮಾರ್ಗದಲ್ಲಿ ಮಗುವು ಅಕಸ್ಮಾತ್ತಾಗಿ ಯಾವದೊಂದು ದುಷ್ಕೃತ್ಯವನ್ನು ಮಾಡಿದ್ದು ತಿಳಿದು ಬಂದಿತೆಂದರೆ, ಶಿಕ್ಷಕರು ಅದನ್ನು ವಿಚಾರಿಸಿ ,ಮಗುವಿಗೆ ಬುದ್ಧಿ ಹೇಳಿ ಅವನನ್ನು ಸನ್ಮಾರ್ಗಕ್ಕೆ ಹಚ್ಚುವ ಪ್ರಯತ್ನ ಮಾಡಬೇಕು. ಸಾಂಘಿಕ ಜೀವನದ ಮಾಪನ ಮಾಡುವ ಶಿಕ್ಷಕನಿಗೆ ಈ ಕ್ರಮ ಅವಶ್ಯವಾಗಿ ಬೇಕಾಗುತ್ತದೆ. ಈ ರೀತಿ ಜೀವನ ಶಿಕ್ಷಣ ಶಾಲೆಯಲ್ಲಿ ಸಾಂಘಿಕ ಜೀವನ, ಚಟುವಟಿಕೆಗಳು, ಮಕ್ಕಳ ಮಂತ್ರಿಮಂಡಳ ಮುಂತಾದ ಎಷ್ಟೋ ಕ್ರಮಗಳು ಮಕ್ಕಳ ಶಿಸ್ತಿನ ಬೆಳವಣಿಗೆಗೆ ಸಹಾಯಕಾರಿಯಾಗುತ್ತವೆ. ಆದರೆ ಶಿಕ್ಷಕರು ಅಂಥ ಕ್ರಮಗಳಲ್ಲಿ ನಂಬಿಕೆ ಇಟ್ಟು ಶಿಸ್ತಿನ ಸರಿಯಾದ ಅರ್ಥವನ್ನು ತಿಳಿದುಕೊಂಡು ಆ ಕ್ರಮಗಳನ್ನು ಅನುಸರಿಸಿದರೆ ಮಕ್ಕಳು ಶಿಸ್ತಿನ ಮೂರ್ತಿಗಳಾಗುವದರಲ್ಲಿ ಸಂದೇಹವಿಲ್ಲ. ಅಲ್ಲದೆ ಮೇಲಿನ ಆರೋಪವೂ ಹುಸಿಯಾಗುತ್ತದೆ.

ಗೃಹವಿಜ್ಞಾನದೊಂದಿಗೆ ಬೇರೆ ವಿಷಯಗಳ ಸಮವಾಯ

ಲೇಖಕಿ : ಶ್ರೀಮತಿ **ಅನುಸೂಯಾ ಜೋಶಿ,** ಹೋಮ ಸಾಯನ್ಸಸೆಕ್ಷನ್ ಮಹಾರಾಣಿ ವಿಮೆನ್ಸ ಟ್ರೇ.ಕಾ. ಮೈಸೂರು.

ಹೆಣ್ಣು ಮಕ್ಕಳಿಗಾಗಿ ಜೀವನ ಶಿಕ್ಷಣ ಸಫಲವಾಗ ಬೇಕಾದರೆ ಗೃಹವಿಜ್ಞಾನದ ಮುಖಾಂತರ ಉಳಿದ ವಿಷಯಗಳನ್ನು ಸಮವಾಯಗೊಳಿಸಬೇಕು. ಗೃಹ ವಿಜ್ಞಾನವನ್ನು ಚಟುವಟಿಕೆಗಳೊಂದಿಗೆ ಕಲಿಸಿ ಉಳಿದ ವಿಷಯಗಳನ್ನು ಅದಕ್ಕೆ ಸಮವಾಯಗೊಳಿಸಬೇಕು. ಗೃಹವಿಜ್ಞಾನದೊಂದಿಗೆ ಉಳಿದ ವಿಷಯಗಳನ್ನು ಹೊಂದಿಸುವದು ಸ್ವಾಭಾವಿಕವಾದ ಹಾಗು ಉಪಯುಕ್ತವಾದ ಯೋಜನೆಯಾಗಿದೆ. ಇದರಿಂದ ಬಾಲಿಕೆಯರು ತಮ್ಮ ಎಲ್ಲ ವಿಷಯಗಳ ಜ್ಞಾನವನ್ನು ಗೃಹಜೀವನದಲ್ಲಿ ಉಪಯೋಗಿಸಿಕೊಳ್ಳಬಲ್ಲರು. ಗೃಹಜೀವನದಲ್ಲಿ ಉಳಿದ ವಿಷಯಗಳ ಉಪಯೋಗ ಅವರಿಗೆ ಗೊತ್ತಾಗದಿದ್ದರೆ ಆವರು ತಾವು ಕಲಿತದ್ದೇ ಬೇರೆ. ಜೀವನದಲ್ಲಿಯ ಸಮಸ್ಯೆಗಳೇ ಬೇರೆ ಎಂಬ ಭಾವನೆ ತಂದುಕೊಳ್ಳುವರು.

ಗೃಹವಿಜ್ಞಾನವನ್ನು ಕಲಿಸುವ ಉದ್ದೇಶ ಮನೆಗೂ, ಸಮಾಜಕ್ಕೂ ಹೊಂದಿಕೆಯಾಗುವಂತಿರಬೇಕು. ಶಿಕ್ಷಿಕೆಯರು ಪಾಲಕರ ಸಹಕಾರ ಪಡೆದು ಮಕ್ಕಳ ಮನೆಯ ಅನುಭವಗಳ ಪರಿಚಯ ಮಾಡಿಕೊಳ್ಳಬೇಕು. ಏಕೆಂದರೆ ಶಾಲೆಯಲ್ಲಿ ಕಲಿತದ್ದು ಮನೆಯ ವಾತಾವರಣಕ್ಕೆ ಇರುವಿಕೆಯ ಮಟ್ಟಕ್ಕೆ ಯೋಗ್ಯವಾದದ್ದಿರಬೇಕು. ಅವರ ಮನೆಯ ಅನುಭವಗಳ ಮತ್ತು ವರ್ಗದ ಪಾಠ ಹೊಂದಿಕೆಯಾಗಬೇಕಲ್ಲದೆ ಅದು ನಾಗರಿಕಶಾಸ್ತ್ರ, ಗಣಿತ, ಕಲೆ, ಭಾಷೆ ಇವುಗಳಿಗೂ ಹೊಂದಿಕೆಯಾಗಬೇಕು. ಇವುಗಳನ್ನು ಶಿಕ್ಷಿಕೆಯರು ಅನುಭವದಿಂದ ಹೊಂದಿಸಿಕೊಳ್ಳಬೇಕು. ಕೆಲವು ಉದಾಹರಣೆಗಳನ್ನು ಮಾರ್ಗದರ್ಶನಕ್ಕಾಗಿ ಕೊಡಬಹುದು.

ಗಣಿತ : ಪೇಟೆಯಿಂದ ಸಾಮಾನು ತರುವದು, ಜಮಾಖರ್ಚು ಇಡುವದು, ಪೋಸ್ಟಿನ ಮಾಹಿತಿ ಮಾಡಿಕೊಡುವದು, ಬ್ಯಾಂಕಿನ ವ್ಯವಹಾರಗಳ ಪರಿಚಯ, ಮನೆಯ ನಕ್ಷೆ ತೆಗೆಯುವದು, ಜಂಪರ, ಪರಕರ ಇವುಗಳನ್ನು ಅಳತೆ ಪ್ರಕಾರ ಕತ್ತರಿಸಲು ಕಲಿಸುವದು, ಈ ಚಟುವಟಿಕೆಗಳ ಮುಖಾಂತರ ಅಂಕಗಣಿತ, ಭೂಮಿತಿ, ಜಮಾಖರ್ಚು ಇವುಗಳನ್ನು ಸಮವಾಯಗೊಳಿಸಬೇಕು. ಉದಾ :— ಅಂಬ್ರೆಲಾ ಕಟ್ ಪರಕರ (ಲಂಗ) ವನ್ನು ಕತ್ತರಿಸಲು ಕಲಿಸಿ, ವರ್ತುಳದ ಕ್ಷೇತ್ರಫಲ, ತ್ರಿಕೋನದ ಕ್ಷೇತ್ರಫಲ ಕಲಿಸಬಹುದು. ವಿವಿಧ ಒಲೆಗಳನ್ನು ತಯಾರಿಸಲು ಕಲಿಸಿ, ಘನಫಲ ಕಲಿಸಬಹುದು. ಯಾವದೇ ತಿಂಡಿ ಪದಾರ್ಥಗಳನ್ನು ತಯಾರಿಸಲು ಕಲಿಸಿ ಅದರ ವೆಚ್ಚದ ಕ್ರಯದ ಪಟ್ಟಿ ತಯಾರಿಸಲು ಹೇಳಬಹುದು.

ರಂಗೋಲಿ ತೆಗಿಸುವ ಚಟುವಟಿಕೆ ಇಟ್ಟುಕೊಂಡು ಕೋನದ ಕಲ್ಪನೆ, ಪ್ರಕಾರಗಳನ್ನು ಕಲಿಸಬಹುದು. ವರ್ತುಳ ಅಥವಾ ಅದರ ಭಾಗಗಳು ಬರುವ ಡಿಸ್ಯಾಯಿನು ತೆಗಿಸಿ ಪರೀಘೆ, ವ್ಯಾಸ, ತ್ರಿಜ್ಯ ಇವುಗಳ ಕಲ್ಪನೆ ಮಾಡಿ ಕೊಡಬಹುದು.

ಭಾಷೆಗಳು : ಗೃಹಜೀವನಕ್ಕೆ ಸಂಬಂಧಪಟ್ಟ ಗಾದೆಯ ಮಾತುಗಳು, ವಚನಗಳು, (Slogans), ಪ್ರಾರ್ಥನಾ ಪದ್ಯಗಳು, ಬೀಸುವಕಲ್ಲಿನ ಪದ್ಯಗಳು, (Folk dance) ಜೋಗುಳ ಪದಗಳು ಇವುಗಳ ಅರ್ಥ ಹೇಳಬೇಕು. ಮಾಸಿಕಗಳಲ್ಲಿ ಮತ್ತು ವಾರಪತ್ರಿಕೆಗಳಲ್ಲಿ ಗೃಹವಿಜ್ಞಾನಕ್ಕೆ ಸಂಬಂಧಪಟ್ಟ ಬರಹಗಳನ್ನು ಆರಿಸಿ ಓದಿಸುವದು. ಇಂಥ ಬರಹಗಳನ್ನು ಸಂಗ್ರಹಿಸುವದು. ಬಾಲವಾಡಿಗಳಲ್ಲಿ ಚಿಕ್ಕಮಕ್ಕಳಿಗೆ ಹೇಳುವಂಥ ಪದ್ಯಗಳನ್ನು ಹೇಳಿಸುವದು. ಕೈಬರಹದ ಪತ್ರಿಕೆಗಳನ್ನು ಬರೆಸುವದು. ಗೃಹವಿಜ್ಞಾನಕ್ಕೆ ಸಂಬಂಧಪಟ್ಟ ವಿಷಯಗಳ ವಾಕ್‌ಸ್ಪರ್ಧೆ, ನಿಬಂಧ ಸ್ಪರ್ಧೆಗಳನ್ನು ಏರ್ಪಡಿಸುವದು. ಇವುಗಳ ಮುಖಾಂತರ ಭಾಷೆಯನ್ನು ಅಂದಾಜಿನ ಪ್ರಕಾರ ಸಮವಾಯಗೊಳಿಸಬೇಕು. ಉದಾ :— ಚರ್ಚಾಕೂಟಕ್ಕೆ "ಪೂರ್ವಕಾಲದ ಹೆಣ್ಣು ಮಕ್ಕಳು ಸುಖಿಗಳಾಗಿದ್ದರೊ ? ಅಥವಾ ನಾವು ಸುಖಿಗಳೋ" ಎಂಬ ವಿಷಯವನ್ನು ಇಡಬಹುದು. ಚಿಕ್ಕ ಉಳಿತಾಯದ ಒಂದು ಸಂಭಾಷಣೆ, ಅಥವಾ ನಾಟಕ ಮಾಡಿಸಬಹುದು. ಮೇಲೆ ಹೇಳಿದ ಪದಗಳನ್ನು ಹೇಳುವ ಸಂಗೀತ ಕೂಟಗಳನ್ನು ಮಾಡಿಕೊಳ್ಳಬೇಕು.

ಭೂಗೋಲ : ಬೇರೆ ಬೇರೆ ತಿಂಡಿಗಳನ್ನು ತಯಾರಿಸುವ ಚಟುವಟಿಕೆಯನ್ನಿಟ್ಟುಕೊಂಡು ಭೂಗೋಲ ಕಲಿಸಬೇಕು. ಉದಾ:— ಉಪ್ಪಿಟ್ಟು ತಯಾರಿಸುವ ಚಟುವಟಿಕೆಯ ಜೊತೆಗೆ ಭಾರತದಲ್ಲಿ ಗೋದಿ ಬೆಳೆಯುವ ಪ್ರದೇಶಗಳನ್ನು ತಿಳಿಸಿಕೊಡಬಹುದು. ಬೇರೆ ಬೇರೆ ಬಟ್ಟೆಗಳನ್ನು ಒಗೆಯುವ ವಿಧಾನದೊಂದಿಗೆ ಹತ್ತಿ ಬೆಳೆಯುವ ಪ್ರದೇಶ, ನೂಲಿನ ಗಿರಣಿಗಳು ಇರುವ ಪಟ್ಟಣಗಳು ಇವುಗಳನ್ನು ಹೇಳಬಹುದು. ಬೇರೆ ರಾಜ್ಯದ ಭೂಗೋಲ ಪರಿಚಯ ಮಾಡಿಕೊಟ್ಟು ಆ ರಾಜ್ಯದ ಹೆಣ್ಣು ಮಕ್ಕಳೊಡನೆ ನಮ್ಮನ್ನು ಹೋಲಿಸಿ ಅವರ ಪರಿಚಯ ಮಾಡಿಕೊಡಬೇಕು. ಉದಾ:— ಗುಜರಾಥ ರಾಜ್ಯದ ಅಭ್ಯಾಸ ಮಾಡಿಸಿದ ಮೇಲೆ ಗುಜರಾಥದ ಗೃಹಿಣಿಯು ಕಷ್ಟಸಹಿಷ್ಣುವೂ, ಸತತೋದ್ಯೋಗಿಯೂ ಆಗಿರುವಳೆಂಬುದನ್ನು ಹೇಳುವದವಶ್ಯ. ಅದರಂತೆ ಪರದೇಶದ ಅಭ್ಯಾಸ ಮಾಡಿಸಿ ಅಲ್ಲಿಯ ಗೃಹಿಣಿಯ ಪರಿಚಯ ಮಾಡಿಕೊಡುವದಗತ್ಯ. ಸ್ವಿಝರಲಂಡ ದೇಶದ ಪರಿಚಯ ಮಾಡಿಕೊಟ್ಟು ಅಲ್ಲಿಯ ಗೃಹಿಣಿಯು ನಾವು ಕಸೂತಿ ಹಾಕುವಂತೆ ಕೈಗಡಿಯಾರ ತಯಾರಿಸುವಳೆಂಬುದನ್ನು ಹೇಳುವದವಶ್ಯ.

ಇತಿಹಾಸ : ದೇಶಾಭಿಮಾನವನ್ನು ಹೆಚ್ಚಿಸುವ ಭಾರತದ ಇತಿಹಾಸದಲ್ಲಿಯ ವೀರೆಯರ ಕಥೆಗಳು, ಪುರಾಣದಲ್ಲಿಯ ಆದರ್ಶ ಮಹಿಳೆಯರ ಚರಿತ್ರೆಗಳು, ಪತಿಯ ಮಾತಿನಂತೆ ದೇಶಸೇವೆ ಸಲ್ಲಿಸಿದ ರಾಷ್ಟ್ರಮಾತೆ ಕಸ್ತೂರಬಾಳಂಥ ಮಹಿಳೆಯರ ಚರಿತ್ರೆಗಳನ್ನು ಹೇಳಬೇಕು. ಮಕ್ಕಳಿಗೆ ಭಾರತದ ಪ್ರಾಚೀನ ಸಂಸ್ಕೃತಿಯಲ್ಲಿ ಅಭಿಮಾನ ಹುಟ್ಟಿಸಬೇಕು.

ಆರೋಗ್ಯ ವಿಜ್ಞಾನ : ಮನೆಯ ಸ್ವಚ್ಛತೆ, ಪಾತ್ರೆಗಳನ್ನು ತಿಕ್ಕುವದು, ವೈಯಕ್ತಿಕ ಸ್ವಚ್ಛತೆ, ಶೌಚಕೂಪ, ಮೂತ್ರಾಲಯಗಳ ಮಾಹಿತಿ ಇವುಗಳ ಮುಖಾಂತರ ಆರೋಗ್ಯವಿಜ್ಞಾನ ಕಲಿಸಬೇಕು.

ಡ್ರಾಯಿಂಗ : ರಂಗೋಲಿ ತೆಗೆಯುವದು, ಮೇಜಿನ ಬಟ್ಟೆಗೆ, ಮಕ್ಕಳ ಬಟ್ಟೆಗೆ ಅಂದವಾದ ಡಿಸ್ಯಾಯಿನ ಹಾಕುವದು, ಬಟ್ಟೆಗಳಲ್ಲಿ ಬಣ್ಣಗಳ ಹೊಂದಿಕೆ, ಮನೆಯ ಶೃಂಗಾರದಲ್ಲಿ ಬಣ್ಣಗಳ ಹೊಂದಿಕೆ ಈ ವಿಷಯಗಳು ಡ್ರಾಯಿಂಗದಲ್ಲಿ ಸಮಾವೇಶವಾಗಬೇಕು.

ಮೂಲೋದ್ಯೋಗವಿಲ್ಲದ ಸಾದಾ ಹೆಣ್ಣು ಮಕ್ಕಳ ಶಾಲೆಗಳಲ್ಲಿ ಪ್ರತಿ ವಿಷಯಗಳನ್ನು ಗೃಹವಿಜ್ಞಾನದ ಚಟುವಟಿಕೆಗಳೊಂದಿಗೆ ಸಮವಾಯಗೊಳಿಸುವದು ಹೆಚ್ಚು ಅನುಕೂಲ. ನೂಲುವ ನೇಯುವ ಮೂಲೋದ್ಯೋಗವಿದ್ದ ಶಾಲೆಗಳಲ್ಲಿಯೂ ಗೃಹವಿಜ್ಞಾನದ ಚಟುವಟಿಕೆಗಳು ಸಾಕಷ್ಟು ನಡೆಯಬೇಕು.

ಒಟ್ಟಿನಲ್ಲಿ ಶಾಲೆ ಬಿಟ್ಟು ಹೊರಬೀಳುವ ಹೆಣ್ಣು ಮಕ್ಕಳು ಹಿಂದಿನ ಹಾಗು ಮುಂದಿನ ಆದರ್ಶಗಳನ್ನು ಹೊಂದಿ ಸುಗೃಹಿಣಿಯರಾಗಿ ಹೊರಬೀಳಬೇಕು.

ಮಕ್ಕಳ ಶಿಕ್ಷಣ

ಕುಮಾರಿ **ವೇಣು ಆ. ಶೀಲಭದ್ರ,** ಅಸಿ. ಮಿ. ಕ. ಹೆ. ಮ. ಜೀ. ಶಿ. ಶಾ. ನಂ. ೧. ಬಾಗಲಕೋಟೆ

ಮಕ್ಕಳು ಎಂಬ ಶಬ್ದವು ಕರ್ಣ ಪಟಲದ ಮೇಲೆ ಬಿದ್ದಾಗ ಶುಭ್ರವಾದ ಬಿಳಿಯ ಬಟ್ಟೆ, ದೇವಲೋಕದ 'ಹೂ' ಎಂಬ ಮಾತು ನೆನಪಾಗದಿರದು. ಹೂಗಳಲ್ಲಿರುವ ಕೋಮಲತೆ, ಪ್ರಸನ್ನತೆ, ಪರಿಮಳ ಎಲ್ಲವೂ ಸಾಮಾನ್ಯವಾಗಿ ಮಕ್ಕಳಲ್ಲಿ ಇರುವವು. ಕಾರಣ ಅವರ ಮನವೆಂಬ ಹೂವು ಸಂಪೂರ್ಣವಾಗಿ ಅರಳುವಂತೆ ನೋಡಿಕೊಳ್ಳುವದೇ ಶಿಕ್ಷಣ. ಅಂದರೆ ಅವರು ತಮ್ಮ ಜೀವನವನ್ನು ಸಾರ್ಥಕಗೊಳಿಸುವ ವ್ಯಕ್ತಿಗಳಾಗಿ ಪರಿಣಮಿಸುತ್ತಾರೆ. ಇದರ ಗುಟ್ಟನ್ನು ಇಂದಿನ ನಮ್ಮ ದೇಶದ ಮುಂದಾಳುಗಳಾದ "ಚಾಚಾ ನೆಹರೂಜಿ" ಯವರು ಚನ್ನಾಗಿ ತಿಳಿದು ಮಕ್ಕಳ ಶಿಕ್ಷಣಕ್ಕೆ ಅನೇಕ ಅನುಕೂಲತೆಗಳನ್ನು ಮಾಡಿದ್ದಾರೆ. ಇನ್ನೂ ಹೆಚ್ಚಿನವುಗಳನ್ನು ಮಾಡುತ್ತಲಿದ್ದಾರೆ.

ಮಕ್ಕಳ ಶಿಕ್ಷಣಕ್ಕಾಗಿ ಮಗುವಿನ ಮೂರನೆಯ ವಯಸ್ಸಿನಿಂದ ಆರನೆಯ ವಯಸ್ಸಿನ ವರೆಗೆ ಸಾಗಬೇಕಾದ ಶಿಕ್ಷಣದ ಯೋಜನೆಗಳು ಮುಖ್ಯವಾಗಿ ಶಿಶುವಿಹಾರ, ಮೊಂಟೇಸರಿ ಶಾಲೆಗಳಲ್ಲಿ ಸಮಾವೇಶವಾಗುತ್ತವೆ. ಈ ವಯಸ್ಸಿನಲ್ಲಿ ನಡೆಯುವ ಶಿಕ್ಷಣ ಮಹತ್ವಪೂರ್ಣವಾದದ್ದು. ಏಕೆಂದರೆ ಮಕ್ಕಳ ಸಹಜ ಪ್ರವೃತ್ತಿಗಳು ಅದೇ ಹೊರ ಹೊಮ್ಮುತ್ತಿರುವ ಉತ್ಸಾಹದ ನೂತನೋತ್ಸವದ ಕಾಲವದು. ಶಿಕ್ಷಣಕ್ಕೆ ಅತ್ಯಂತ ಅನಕೂಲವಾಗುವ ಕೌತುಕ, ಅನುಕರಣ ಮುಂತಾದವುಗಳು ಚಿಮ್ಮುತ್ತಿರುವದು ಇದೇ ಅವಧಿಯಲ್ಲಿ. ಈ ಶೈಶವದ ಉತ್ಸಾಹ ವ್ಯರ್ಥ ಕಳೆದುಹೋಗಬಾರದು. ಈ ಉತ್ಸಾಹದ ಪ್ರವಾಹಕ್ಕೆ ಸರಿಯಾದ ಮಾರ್ಗಗಳು ದೊರೆಯಬೇಕು. ಅಂತೆಯೇ "ಮೂರು ವರ್ಷದ ಬುದ್ಧಿ ನೂರು ವರ್ಷ" ಎಂಬ ನಾಣ್ನುಡಿಯನ್ನು ಹೇಳುವರು.

ಕವಿರವೀಂದ್ರರು ಮಗು ಪ್ರಪಂಚವನ್ನು ತಿಳಿ ನೋಟದಿಂದ ನೋಡಬಲ್ಲದು. ಅದರ ಹೊಸ ಕಣ್ಣಿಗೆ ಎಲ್ಲವೂ ಹೊಸ ಹೊಸತಾಗಿ ರಸಮಯವಾಗಿ ಕಂಡರೆ ಆಶ್ಚರ್ಯವಿಲ್ಲ ಎಂದು ಒಂದೆಡೆ ಹೇಳಿರುವರು.

ಮಕ್ಕಳ ಶಿಕ್ಷಣದಲ್ಲಿಯೇ ಒಳ್ಳೆಯ ಶಿಕ್ಷಕರ ಪ್ರಭಾವವಾಗುವದು. ಒಳ್ಳೆಯ ಮನೆಯಲ್ಲಿ ಒಳ್ಳೆಯ ತಾಯಿ-ತಂದೆಗಳ ಮಾರ್ಗದರ್ಶನವನ್ನು ಪಡೆದ ಮಕ್ಕಳು ಹೇಗೆ ಧನ್ಯರೋ ಹಾಗೇ ಒಳ್ಳೆಯ ಗುರುಗಳ ಸಂಪರ್ಕವನ್ನು ಪಡೆಯುವ ಬಾಲಕರು ಕೂಡಾ ಭಾಗ್ಯವಂತರೇ. ಶಿಕ್ಷಣವು ತ್ರಿಮುಖನಾದದ್ದು, ಅದರಲ್ಲಿ ಕಲಿಯುವ ಬಾಲಕರು ಒಂದು ಮುಖವಾದರೆ, ಕಲಿಸುವ ಶಿಕ್ಷಕರು ಅದರ ಇನ್ನೊಂದು ಮುಖ. ಬಾಲಕ ಮತ್ತು ಶಿಕ್ಷಕ ಇವರ ಸಜೀವ ಸಂಪರ್ಕದ ಪರಿಣಾಮವಾಗಿ ಮಕ್ಕಳಿಗೆ ದೊರೆಯುವ ಜ್ಞಾನವು ಅದರ ಮೂರನೆಯ ಮುಖವಾಗಿದೆ. ಇವುಗಳಲ್ಲಿ ಯಾವದು ಶ್ರೇಷ್ಠವೆಂದು ಹೇಳಲು ಬರುವಂತಿಲ್ಲ. ಇದರ ಬಗ್ಗೆ ವಾದಗಳೂ ಆಗಿವೆ; ಆಗುತ್ತಲಿವೆ.

ಸಹಾನುಭೂತಿಪರ ಸುಪ್ರಸನ್ನ-ಚಿತ್ತರಾದ ಉತ್ಸಾಹಿಗಳೂ, ಕರ್ತವ್ಯ ನಿಷ್ಠರಾದ ಶಿಕ್ಷಕರ ಉಸಿರಿನಿಂದ ಶಾಲೆಯಲ್ಲಿ ಉತ್ತಮವಾದ ಶಿಕ್ಷಣಕ್ಕೆ ಅನಕೂಲವಾಗುವ ವಾತಾವರಣವು ಸಿದ್ಧವಾಗುತ್ತದೆ. ಮಕ್ಕಳ ಮನವನ್ನು ಅರಿತು ಅವರೊಡನೆ ವ್ಯವಹರಿಸುವ ಶಿಕ್ಷಕರೇ ಅತ್ಯಂತ ಯೋಗ್ಯವಾದ ಶಿಕ್ಷಕರು. ಇಲ್ಲಿ ಶಿಕ್ಷಕರಿಗೆ ಜ್ಞಾನವು ಕೈದೀವಿಗೆಯಾಗಿ ಪರಿಣಮಿಸುತ್ತದೆ. ಮಕ್ಕಳ ಮನವೆಂಬ ಭೂಮಿಯನ್ನು ಹದಮಾಡಿ ನಂತರ ಉತ್ತಮ ಬೀಜವೆಂಬ ವಿಷಯ ಜ್ಞಾನವನ್ನು ಅವರಲ್ಲಿ ಬಿತ್ತಿದರೆ ಮಾತ್ರ ಉತ್ಕೃಷ್ಟ ಬೆಳೆಯನ್ನು ಅಪೇಕ್ಷಿಸಬಹುದು.

ಮಕ್ಕಳ ಭಾವ ಬುದ್ಧಿಗಳನ್ನು ಗಮನಿಸಿ ವಾತಾವರಣದ ಪ್ರಭಾವವನ್ನು ಬೀರುವಂತೆ ಶಾರೀರಿಕ ದೃಷ್ಟಿಯಿಂದ ಕ್ರೀಡಾರಂಗದಂತಹ ರಂಗಜೀವನ ಇನ್ನೊಂದಿಲ್ಲ; ಸಂಗೀತ ಸಂಘ, ಸಾಹಿತ್ಯ ಸಂಘ, ನಾಟ್ಯಸಂಘ, ಚರ್ಚಾಕೂಟ, ಶಾಲಾ ಪತ್ರಿಕಾ ಸಮಿತಿ, ಪ್ರದರ್ಶನ ಸಮಿತಿ, ಪ್ರವಾಸ ವ್ಯವಸ್ಥಾ ಸಮಿತಿ ಮೊದಲಾದವನ್ನು ಏರ್ಪಡಿಸಿದರೆ ನಾಳೆ ನಾಡಿನ ನಾಗರಿಕರಾಗಲು, ಇಂದು ಬೆಳೆಯುವ ಮಕ್ಕಳಿಗೆ ಯೋಗ್ಯ ಶಿಕ್ಷಣ ಸಿಗಲು ಮಾರ್ಗವಾಗುವದು. ಆಟದ ಬಯಲೂ ಒಂದು ಬಯಲುಶಾಲೆ. ಇದರಿಂದ ಕೇವಲ ಶಾರೀರಿಕ ಬೆಳವಣಿಗೆ ಮಾತ್ರವಲ್ಲ.

ಮನದ ಆರೋಗ್ಯಕ್ಕೂ ಬೆಳವಣಿಗೆಗೂ ಕಾರಣವಾಗುತ್ತದೆ. ಆದುದರಿಂದ ಪ್ರಶಸ್ತವಾದ ಸಮಯದಲ್ಲಿ ನಿತ್ಯವೂ ಬಾಲಕರು ಆಟದ ಬಯಲಿನಲ್ಲಿ ಸೇರಿ, ತಮ್ಮ ಹುಮ್ಮಸ್ಸನ್ನು ಸಾಂಘಿಕ ಆಟಗಳಲ್ಲಿ ಪ್ರಕಟ ಪಡಿಸುವಂತೆ ಜೊತೆಗೆ ಸಂಘ ಜೀವನದ ಕೆಲವೊಂದು ಉತ್ತಮ ನೀತಿ ನಿಯಮಗಳನ್ನು ಸಾಂಘಿಕ ಆಟಗಳ ಮೂಲಕ ತಮ್ಮಲ್ಲಿ ಸಹಜವಾಗಿ ಅಳವಡಿಸಿಕೊಳ್ಳುವಂತೆ ಸಹಾನುಭೂತಿಪರ ರೀತಿಯಲ್ಲಿ ಮಾರ್ಗದರ್ಶನ ಮಾಡುವದು ಶಿಕ್ಷಕರ ಕರ್ತವ್ಯ.

ಈ ತರವಾಗಿ ಎಲ್ಲ ಬಗೆಯಿಂದ ಶಿಕ್ಷಣದೊರೆಯಬೇಕಾದರೆ ಮಕ್ಕಳ ಮನೋಭಾವವನ್ನು ಅರಿತುಕೊಳ್ಳಬೇಕಾಗುವದು. ಅದಕ್ಕಾಗಿ ಪ್ರೌಢರಾದ ನಾವು ಅವರ ದಾರಿಯಲ್ಲಿಯೇ ಸಾಗಿ ಅವರನ್ನು ನಮ್ಮ ದಾರಿಗೆ ತರಬೇಕಾಗುವದು. ಆದ್ದರಿಂದ ಮಕ್ಕಳ ಮನೋಭಾವ ರೀತಿ-ನೀತಿಗಳನ್ನು ತಿಳಿದುಕೊಂಡು ಸ್ವಾಭಾವಿಕವಾದ ರೀತಿಯಲ್ಲಿ ತನ್ಮೂಲಕ ಸಾಹಾನುಭೂತಿಯಿಂದ ಅವರ ಅಂತರಂಗದಲ್ಲಿ ಸೇರಿ ಅಲ್ಲಿ ಅವರದೇ ವ್ಯಕ್ತಿತ್ವವು ಮಾಡುವಂತೆ ಅವರಿಗೆ ಗುರುಹಿರಿಯರು ನೆರವಾಗಬೇಕಾಗುತ್ತದೆ. ಈ ತರಹದ ಮಾರ್ಗದರ್ಶನವು ಶೈಶವದಲ್ಲಿ ಹೆಚ್ಚಾಗಿ ದೊರೆತಷ್ಟು ಒಳ್ಳೆಯದಾಗುತ್ತದೆ.

ಒಟ್ಟಿನಲ್ಲಿ ಮಕ್ಕಳಿಗೂ ಶಿಕ್ಷಣದ ವಿಷಯಗಳಿಗೂ ಸಜೀವ ಸಂಬಂಧವನ್ನುಂಟುಮಾಡುವವರು ಶಿಕ್ಷಕರು. ಜೀವಕ್ಕೆ ಜೀವ ಓಗೊಡುತ್ತದೆ; ಭಾವಕ್ಕೆ ಭಾವ ಮಿಡಿಯುತ್ತದೆ. ಇದಕ್ಕಾಗಿ ಶಾಲೆಯಲ್ಲಿಯ ಗುರುಗಳು ಮಾತ್ರ ಗುರುಗಳಾಗಿರದೆ ಮನೆಯ ಹಿರಿಯರೂ ಗುರುಗಳಾಗಿರುವರು.

ಈ ಬಗೆಯಾಗಿ ಸುಸಂಸ್ಕೃತ ತಾಯಿ-ತಂದೆಗಳ ಗುರುಹಿರಿಯರ ಮಡಿಲಲ್ಲಿ ಬೆಳೆದ ನೆಹೆರೂಜಿಯವರು ಇಂದು ನಮ್ಮ ನಾಡಿನ ನಾಯಕತ್ವವನ್ನು ವಹಿಸಿ ತಮ್ಮಂತೆಯೇ ಮಕ್ಕಳಿಗೆ ಶಿಕ್ಷಣ ದೊರೆಯಲೆಂಬ ಹಿರಿದಾದ ಬಯಕೆಯುಳ್ಳವರಾಗಿದ್ದಾರಲ್ಲದೆ ತಮಗೆ ಎಷ್ಟೇ ಬೇಸರ ಬಂದರೂ ಮಕ್ಕಳು ಅವರ ಸಮ್ಮುಖದಲ್ಲಿ ಬಂದಾಗ ಮಕ್ಕಳಂತೆ ಅವರಲ್ಲಿ ನವ ಉತ್ಸಾಹ ಬಂದು ಅವರೊಡನೆ ಆಟವಾಡಿ ನಕ್ಕು ನಲಿದು ಬೇಸರದಿಂದ ದೂರಾಗುವರು. ಕಾರಣ ಇಂದಿನ ಅವರ ಜನ್ಮದಿನವನ್ನು ಕೂಡಾ ಬಾಲದಿನಾಚರಣೆ ಎಂಬ ನಾಮಕರಣದಿಂದ ಆಚರಿಸುವದು. ಮಕ್ಕಳ ಸರ್ವತೋನ್ಮುಖ ಏಳ್ಗೆಯನ್ನು ಸೂಚಿಸುವದೆಂದು ಹೇಳಬಹುದು. ಕಾರಣ ನಾವಾದರೂ ಮಕ್ಕಳೊಡನೆ "ಆಡುತ್ತ ಕಲಿ, ಮಾಡುತ್ತ ಕಲಿಸು" ಎಂಬ ತತ್ವದಂತೆ ನಮ್ಮ ಶಿಕ್ಷಣಕಾರ್ಯವನ್ನು ಮುಂದುವರಿಸೋಣ. ಹಾಗೂ ಇದಕ್ಕೆ ಅನವರತ ಅತಃಕರಣವು ಅನಂತವಾಗಿರಲೆಂದು ಹಾರೈಸೋಣ.

ಜಾನ್ ಫಿಝ್ಗೆರಾಲ್ಡ ಕೆನೆಡಿ

(John Fitzgerald Kennedy)

ಯುನಾಯಿಟೆಡ್ ಸ್ಟೇಟ್ಸದ ನಿಯುಕ್ತ ಅಧ್ಯಕ್ಷ

ಲೇಖಕ : ಶೀ ಬವುಶಿಂ

ಮೊದಲ ಮಾತು

ಸಿನೇಟರ (Senetor) ಜಾನ್‌ಕೆನೆಡಿಯವರು ಯುನಾಯಿಟೆಡ್ ಸ್ಟೇಟ್ಸದ ಅಧ್ಯಕ್ಷ ಪದವಿಗೋಸ್ಕರ ಡೆಮೋಕ್ರಾಟಿಕ್ ಪಕ್ಷದ ಹುರಿಯಾಳಾಗಿ ಸ್ಪರ್ಧಿಸಿ ತಮ್ಮ ಎದುರಾಳಿಯಾದ ರಿಪಬ್ಲಿಕ್ ಪಕ್ಷದ ಸಿನೇಟರ ನಿಕ್ಸನ್ನನ್ನು ಸೋಲಿಸಿ ಹೋದ ತಿಂಗಳು ೧೦ನೆಯ ದಿನಾಂಕ ಬಹುಮತದಿಂದ ಆಯ್ಕೆಯನ್ನು ಹೊಂದಿದರಷ್ಟೇ. ಈ ಹೋರಾಟವು ಅತ್ಯಂತ ತುರುಸಿನದಾಗಿತ್ತು. ಅದು ಪಕ್ಷಗಳ ಬಲಾಬಲವನ್ನು ಕುರಿತಾದ ಏರಾಟವಾಗಿರದೆ ಹೆಚ್ಚಾಗಿ ಹುರಿಯಾಳುಗಳ ವೈಯಕ್ತಿಕ ಮೇಲ್ಮೈಯ ಬಗೆಗಾದ ಸ್ಪರ್ಧೆಯಾಗಿ ಪರಿಣಮಿಸಿತೆಂಬುದು ವರದಿಗಳನ್ನು ಸೂಕ್ಷ್ಮ ದೃಷ್ಟಿಯಿಂದವಲೋಕಿಸಿದರೆ ಕಂಡು ಬಾರದೆ ಇರದು. ಈ ಚುನಾವಣೆಯ ಮೇಲೆ ವಿಶ್ವದ

ರಾಜ್ಯನೀತಿಯ ಹೊತ್ತಿಗೆಯನ್ನು ಇಂಗ್ಲಂಡದಲ್ಲಿದ್ದಾಗಲೇ ಬರೆದರು. ೧೯೫೫ರಲ್ಲಿ "ಧೈರ್ಯದ ಕಥೆ," ೧೯೬೦ರಲ್ಲಿ "ಶಾಂತಿಯ ತಂತ್ರಗಳು" ಎಂಬ ಪುಸ್ತಕಗಳನ್ನು ಬರೆದಿದ್ದಾರೆ. ಕೊನೆಯ ಗ್ರಂಥದಲ್ಲಿ ಅವರು ತಮ್ಮ ರಾಷ್ಟ್ರದ ವಿದೇಶ ವ್ಯವಹಾರಗಳ ಬಗೆಗಿದ್ದ ತಮ್ಮ ಅಮೌಲ್ಯವಾದ ವಿಚಾರ ಪ್ರಣಾಲಿಯನ್ನು ಲ್ಲೇಖಿಸಿದ್ದಾರೆ. ಆದುದರಿಂದ, ಆ ಗ್ರಂಥವು ಈಗ ಎಲ್ಲ ರಾಷ್ಟ್ರಗಳ ಧುರೀಣರ ಗಮನವನ್ನು ತನ್ನತ್ತ ಸೆಳೆದಿರಲು ಸಾಕು. ೧೯೪೬ರಲ್ಲಿ ಅವರು ರಾಜ್ಯಕೀಯ ರಂಗಕ್ಕೆ ಧುಮುಕಿದರು. ಆ ವರುಷ ಬೊಸ್ಟನ್ ಮತದಾರ ಕ್ಷೇತ್ರದಿಂದ ಪ್ರತಿನಿಧಿಗಳ ಮಂಡಳ(House of Representatives)ಕ್ಕೆ ಆಯ್ಕೆಯನ್ನು ಹೊಂದಿ ಮುಂದೆ ಎರಡು ಸಲ ಬಿಟ್ಟೂಬಿಡದೆ ಅದೇ ಮಂಡಳಕ್ಕೆ ಚುನಾಯಿಸಲ್ಪಟ್ಟರು. ೧೯೫೨ರಲ್ಲಿ ಡಿಮೋಕ್ರಾಟಿಕ್ ಪಕ್ಷದ ಪರವಾಗಿ ಮಾಸಾಚುಸೆಟ್ಸ್ ಕ್ಷೇತ್ರದಿಂದ ಸಿನೇಟರರಾದರು. ೧೯೫೮ರಲ್ಲಿ ಉಪಾಧ್ಯಕ್ಷ ಪದವಿಗೋಸುಗ ಪ್ರಯತ್ನಿಸಿದರಾದರೂ ಅವರಿಗೆ ಜಯ ಸಿಗಲಿಲ್ಲ. ಈ ಅಪಜಯದಿಂದ ಧೃತಿಗೆಡದೆ ಈ ಸಲದ ಚುನಾವಣಿಯಲ್ಲಿ ಅಧ್ಯಕ್ಷಪದವಿಗೋಸ್ಕರವೇ ಹುರಿಯಾಳಾಗಿ ನಿಂತು ಬಹುಮತದಿಂದ ಆಯ್ಕೆಯನ್ನು ಹೊಂದಿದರು. ದೀನ-ದರಿದ್ರರೂ ನಿಗ್ರೋ ಜನರೂ ಅವರಿಗೆ ಮತವನ್ನಿತ್ತರು. ಬಡವರ ಕೈವಾರಿಯೆಂದು ಕೀರ್ತಿವೆತ್ತಿದ್ದಾರೆ. ಅಧ್ಯಕ್ಷಪದವಿಯನ್ನು ವಹಿಸಿಕೊಂಡ ನಂತರ ಅವರು ತಮ್ಮ ರಾಷ್ಟ್ರದ "ಪ್ರಥಮ ನಾಗರಿಕ" (First Citizen) ರೆಂದೂ ಅವರ ಧರ್ಮಪತ್ನಿಯವರು"ಪ್ರಥಮ ಮಹಿಳೆ"(First Lady) ಯೆಂದು ಕರೆಯಲ್ಪಡುವದುಂಟು. ಅವರು ರೋಮನ್ ಕ್ಯಾಥೋಲಿಕರು. ಈ ವರೆಗೆ ಆ ಮತದವರಾರೂ ಅಧ್ಯಕ್ಷರಾಗಿಲ್ಲ. ಅವರೇ ಮೊದಲಿಗರು. ಅವರು ಈಗ ಳಿ ವರ್ಷಗಳ ಪ್ರಾಯದವರಿರುವರು. ಇಷ್ಟೊಂದು ಚಿಕ್ಕ ವಯಸ್ಸಿನ ಅಧ್ಯಕ್ಷರು ಹಿಂದಕ್ಕೆ ಆರೂ ಆಗಿಲ್ಲ. ಅವರೇ ಮೊದಲಿಗರು. ಹೀಗಾಗಿ ಈ ಎರಡು ಸಂಗತಿಗಳಲ್ಲಿ ಅವರು ಪ್ರಥಮ ಸ್ಥಾನವನ್ನು ಪಡೆದಿರುವರು. ಅವರ ಮುಖದ ಮೇಲೆ ಇನ್ನೂ ಹುಡುಗನ ಲಕ್ಷಣಗಳು ಸುರಿಯುತ್ತಿವೆ. ಅವರ ಮುಖವನ್ನು ನೋಡಿದರೆ, ಳಿ ವರ್ಷಗಳ ವಯಸ್ಸಾದವರಂತೆ ಅವರು ಕಾಣುವದಿಲ್ಲ. ಅವರಲ್ಲಿ ಅಸಾಧಾರಣವಾವ ಕಾರ್ಯಶಕ್ತಿ ಮತ್ತು ಕಾರ್ಯಕುಶಲತೆಗಳಿವೆ. ಆಡಳಿತದ ಯಂತ್ರವನ್ನು ಆಮೂಲಾಗ್ರವಾಗಿ ಬದಲಾಯಿಸಿ ಹೊಸ ಹುರುಪಿನ, ಕಾರ್ಯಾಧ್ಯಕ್ಷ ಮತ್ತು ಚಾಣಾಕ್ಷ ಸಿಬ್ಬಂದಿಯನ್ನು ನೇಮಿಸುವ ಲಕ್ಷಣಗಳು ಕಂಡುಬರುತ್ತಿವೆ.

ಅಧ್ಯಕ್ಷ ಪದವಿಯ ಹೊಣೆಗಳು

ಆ ರಾಷ್ಟ್ರದ ಅಧ್ಯಕ್ಷ ಪದವಿಯ ಹೊಣೆಗಳು ಅತ್ಯಂತ ಭಾರವಾಗಿವೆ. ವರ್ಷಂಪ್ರತಿ ೮೦೦೦ ಕೋಟಿ ಡಾಲರುಗಳ ಆಯ-ವ್ಯಯದ ಭಾರವು ಅವರ ತಲೆಯ ಮೇಲಿದೆ. ಹೊಸ ಕಾಯದೆಗಳನ್ನು ಮಾಡುವದಾದರೆ, ಕಾಂಗ್ರೆಸದಲ್ಲಿಯ ನಿಚ್ಚಳ ಬಹುಮತವನ್ನು ತಮ್ಮತ್ತ ಆಕರ್ಷಿಸಿಕೊಳ್ಳಬೇಕು. ದಿನ ದಿನಕ್ಕೂ ಗಂಭೀರ ಸ್ವರೂಪವನ್ನು ಹೊಂದುತ್ತಿರುವ ವಿದೇಶನೀತಿಯ ಸಂಪೂರ್ಣ ಜವಾಬದಾರಿಯನ್ನು ಅವರೇ ಹೊರಬೇಕು. ಅಧ್ಯಕ್ಷರಾದವರು ಭೂ-ಜಲ-ವಾಯು ಪಡೆಗಳ ಅತ್ಯುಚ್ಚ ಅಧಿಕಾರಿಯಾಗಿ ಅವರೇ ಆಡಳಿತವನ್ನು ಸಾಗಿಸಬೇಕು. ಅವರ ಅಧಿಕಾರ ವ್ಯಾಪ್ತಿಯು ಇಷ್ಟೊಂದು ವಿಶಾಲವಾಗಿದ್ದರೂ ಅವರು ಜನತೆಯ ಸೇವಕರಾಗಿ ಜನತೆಯ ವಿಶ್ವಾಸಕ್ಕೆ ಪಾತ್ರರಾಗಿರಬೇಕು. ಸಾರಾಂಶವೆಂದರೆ, ಆ ರಾಷ್ಟ್ರದ ಅಧ್ಯಕ್ಷರು ನಮ್ಮ ಮಹಾನುಭಾವಿ ಬಸವಂಣನವರ "ಎನಗಿಂತ ಕಿರಿಯರಿಲ್ಲ" ಎಂಬ ಲೋಕಪ್ರಿಯ ವಚನವನ್ನು ತಮ್ಮ ಹೃದಯದ ಮೇಲೆ ಬರೆದಿಟ್ಟುಕೊಳ್ಳಬೇಕು.

ಕೊನೆಯ ಮಾತು

ಅವರು ನ್ಯೂಯಾರ್ಕ ನಗರದಲ್ಲಿಯ ಕೋಟ್ಯಾಧೀಶರ ಸುಂದರ ಮಗಳೊಬ್ಬಳನ್ನು ಲಗ್ನವಾಗಿದ್ದಾರೆ. ಅವರ ಹೆಸರು ಜಾಕ್ವೆಲಿನ್ ಎಂದು ಇದೆ. ಆ ದಂಪತಿಗಳಿಗೆ ಕ್ಯಾರೋಲಿನ್ ಎಂಬೊಬ್ಬ ಮೂರು ವರ್ಷದ ಮಗಳಿದ್ದಾಳೆ. ಶ್ರೀಮತಿ ಜಾಕ್ವೆಲಿನ್‌ರವರು ಈಗ ಗಂಡು ಮಗುವನ್ನು ಹೆತ್ತಿದ್ದಾರೆ.

ರಿಪಬ್ಲಿಕ್ ಪಕ್ಷವು ಎಂಟು ವರ್ಷಗಳ ವರೆಗೆ ಆಡಳಿತವನ್ನು ಸಾಗಿಸಿದ ನಂತರ ಡಿಮೋಕ್ರಾಟಿಕ್ ಪಕ್ಷವು ಈಗ ಅಧಿಕಾರದಲ್ಲಿ ಬರಲಿದೆ. ಸ್ವಾತಂತ್ರ್ಯ ಪ್ರಾಪ್ತಿಯ ನಂತರ ೩೪ ಜನ ಅಧ್ಯಕ್ಷರು ಈ ವರೆಗೆ ಆಗಿದ್ದು ಕೆನೆಡಿಯವರು ೩೫ನೆಯ ಅಧ್ಯಕ್ಷರಾಗುವರು. ಅವರು ಭಾರತದ ಮಿತ್ರರಿದ್ದು ನಮ್ಮ ರಾಷ್ಟ್ರದ ಬಗೆಗೆ ಅವರಿಗೆ ಕಳಕಳಿಯಿದೆ. ಅನಭಿವೃದ್ಧ ರಾಷ್ಟ್ರಗಳಿಗೆ ಹೆಚ್ಚಿನ ಧನ

ಸಹಾಯವನ್ನು ಸಲ್ಲಿಸಬೇಕೆಂಬುದು ಅವರ ಸ್ಪಷ್ಟ ಧೋರಣವಿದೆ. ಭಾರತವು ಅಂತಹದೊಂದು ರಾಷ್ಟ್ರ ವಿರುವದರಿಂದ ಅವರ ಕಾಲಕೇರ್ದಿಯಲ್ಲಿ ನಮ್ಮ ರಾಷ್ಟ್ರದ ಔದ್ಯೋಗೀಕರಣದ ದೊಡ್ಡ ದೊಡ್ಡ ಯೋಜನೆಗಳಿಗೆ ಹೆಚ್ಚಿನ ಧನಸಹಾಯವು ದೊರೆಯುವದೆಂಬ ದೃಢವಾದ ಆಶೆಯು ನಮಗಿರುವದು ಸ್ವಾಭಾವಿಕ. ಈ ವರೆಗೆ ಹಿಗ್ಗಿದ ವಿಶ್ವದಲ್ಲಿಯ ತ್ವೇಷವನ್ನು ಕೆನೆಡಿಯವರು ಬೇಗನೆ ಕುಗ್ಗಿಸುವರೆಂಬ ಭರವಸೆಯು ಎಲ್ಲ ರಾಷ್ಟ್ರಗಳ ಮುಖಂಡರಲ್ಲಿ ಕುದುರಲು ಪ್ರಾರಂಭಿಸಿದೆ. ನೆನೆಗುದಿಗೆ ಬಿದ್ದ ಬರ್ಲಿನ್ ಪ್ರಶ್ನೆಯನ್ನು ಸಹ ಅವರು ಏನಾದರೊಂದು ಹೊಸ ಹಂಚಿಕೆಯನ್ನು ಶೋಧಿಸಿ ಪರಿಹರಿಸುವ ಲಕ್ಷಣಗಳು ತೋರುತ್ತಿವೆ. ಚೀನದ ಬಗೆಗೂ ಅವರು ಅಷ್ಟೊಂದು ಉಗ್ರ ಧೋರಣವನ್ನು ತಳೆಯಲಿಕ್ಕಿಲ್ಲ. ಒಂದೇ ಮಾತಿನಲ್ಲಿ ಹೇಳುವದಾದರೆ, ಅವರ ರಾಷ್ಟ್ರಕ್ಕೂ ಉಳಿದ ರಾಷ್ಟ್ರಗಳಿಗೂ ಈಗ ಅಗತ್ಯವಾಗಿ ಬೇಕಾಗಿದ್ದ ಶಾಂತಿ ಸಮಾಧಾನಗಳನ್ನು ಒದಗಿಸಿ ಕೊಡಲು ಅವರು ಕಾರಣೀಭೂತರಾಗುವರೆಂದು ನಾವು ಹಾರೈಸುತ್ತೇವೆ.

— ಜಯ ಹಿಂದ —

ಸಮಾಜ ಶಿಕ್ಷಣ ಮತ್ತು ಪ್ರಜಾಪ್ರಭುತ್ವ

ಲೇಖಕರು : " ಶ್ರೀ ಸದಾನಂದ "

ಮಾನವನು ಸ್ವಾಭಾವಿಕವಾಗಿಯೇ ಸಮಾಜ ಜೀವಿಯಾಗಿರುತ್ತಾನೆ. ' ಸಮಾಜ ' ಇದರ ಅರ್ಥವನ್ನು ಎರಡು ರೀತಿಯಲ್ಲಿ ಮಾಡಲಿಕ್ಕೆ ಬರುತ್ತದೆ. ಸಂಕುಚಿತ ಅರ್ಥದಲ್ಲಿ ಸಮಾಜವೆಂದರೆ ಒಂದು ಗುಂಪು. ಸಮಾನ ಬೇಡಿಕೆಗಳುಳ್ಳ ಅಥವಾ ಒಂದೇ ಪ್ರಕಾರದ ಉದ್ದೇಶವನ್ನು ಈಡೇರಿಸುವ ಹಂಬಲವುಳ್ಳ ಜನರು ಯಾವಾಗಲೂ ಒಂದು ಗುಂಪನ್ನು ರಚಿಸಿಕೊಳ್ಳುತ್ತಾರೆ. ಪುರಾತನ ಕಾಲದಲ್ಲಿ ಅರಣ್ಯಗಳಲ್ಲಿ ವಾಸಿಸುವ ಮಾನವರಿಗೆ ಕಾಡುಪ್ರಾಣಿಗಳ ಭಯವಿದ್ದುದರಿಂದ ಅವರು ಯಾವಾಗಲೂ ಒಟ್ಟಾಗಿಯೇ ಇರುತ್ತಿದ್ದರು. ಆದರೆ ಕೇವಲ ಗುಂಪಿಗೆ ಸಮಾಜವೆನ್ನುವ ಹಾಗಿದ್ದರೆ ಆಕಳು, ಎಮ್ಮೆಗಳ ಗುಂಪಿಗೆ ಸಮಾಜವೆಂದು ಏಕೆ ಅನ್ನಬಾರದು? ಮನುಷ್ಯೇತರ ಪ್ರಾಣಿಗಳ ಗುಂಪುಗಳಿಗೆ ನಾವು ಸಾಮಾನ್ಯವಾಗಿ ಹಿಂಡು ಅನ್ನುತ್ತೇವೆ. ಆದರೆ ಮನುಷ್ಯರಲ್ಲಿ ಸಮಾಜವಿರುತ್ತದೆ. ವಿಶಾಲಾರ್ಥದಲ್ಲಿ ಸಮಾಜವೆಂದರೆ ಅದೊಂದು ಮಾನಸಿಕ ಸ್ಥಿತಿ. society is a mental state. ಸಮಾಜವೆಂದರೆ ಅದೊಂದು ಮೂರ್ತವಸ್ತುವಲ್ಲ. ಅದು ಪ್ರತಿಯೊಬ್ಬ ವ್ಯಕ್ತಿಯ ಹೃದಯಕ್ಕೆ ಸಂಬಂಧಿಸಿದ ಸಂಗತಿಯಾಗಿರುತ್ತದೆ. ಯಾವದೊಂದು ಕಾರ್ಯವನ್ನು ಮಾಡಬೇಕಾದರೆ ಒಬ್ಬ ವ್ಯಕ್ತಿ ಅನೇಕಸಾರಿ ಹಿಂದು ಮುಂದು ನೋಡುತ್ತಾನೆ. ಅನೇಕ ಸಲ ವಿಚಾರಿಸುತ್ತಾನೆ. ತನ್ನ ವರ್ತನೆಯನ್ನು ತನ್ನ ಸಮಾಜ ನೋಡುತ್ತದೆಯೆಂಬ ಭಾವನೆಯೇ ಅವನನ್ನು ಆ ರೀತಿ ಮಾಡಲು ಹಚ್ಚುತ್ತದೆ. ಈ ರೀತಿ ಸಮಾಜದಲ್ಲಿ ವ್ಯಕ್ತಿ ವ್ಯಕ್ತಿಗೆ ಅಭೇದ್ಯವಾದ ಸಂಬಂಧವು ಬಂದಿರುತ್ತದೆ. ಆಯಾ ಸಮಾಜಕ್ಕೆ ತನ್ನದೇ ಆದ ವಿಶಿಷ್ಟ ನೀತಿ ನಿಯಮಗಳಿರುತ್ತವೆ. ಈ ನೀತಿ ನಿಯಮುಗಳನ್ನು ಆ ಸಮಾಜದ ಮುಖ್ಯ ಘಟಕವಾದ ಪ್ರತಿಯೊಬ್ಬ ವ್ಯಕ್ತಿಯು ತಿಳಿದು ಕೊಳ್ಳಬೇಕಾಗುತ್ತದೆ. ಅವುಗಳನ್ನು ಅವನು ಪಾಲಿಸಬೇಕಾಗುತ್ತದೆ. ಇಷ್ಟೇಅಲ್ಲ ಅವನು ವ್ಯಕ್ತಿಗತ ಉನ್ನತಿಗಿಂತಲೂ ತನ್ನ ಸಮಾಜದ ಉನ್ನತಿಯನ್ನು ಹೆಚ್ಚು ಬಯಸಬೇಕಾಗುತ್ತದೆ. ಸಮಾಜದ ಅಭಿವೃದ್ಧಿಗಾಗಿ ಆತನು ಕೈಲಾದಷ್ಟು ಪ್ರಯತ್ನಿಸಬೇಕಾಗುತ್ತದೆ. ಈ ಉದ್ದೇಶದಿಂದ ಅವನು ತನ್ನ ಅನೇಕ ಪ್ರವೃತ್ತಿಗಳನ್ನು ಹತ್ತಿಕ್ಕಿಕೊಳ್ಳಬೇಕಾಗುತ್ತದೆ. ತನ್ನ ಸಮಾಜದ ಉದ್ಧಾರವೇ ತನ್ನ ಉದ್ಧಾರವೆಂಬ ವಿಶಾಲ ದೃಷ್ಟಿ ಆತನಲ್ಲಿ ಉಂಟಾಗಬೇಕಾಗುತ್ತದೆ. ಈ ವಿಶಾಲ ದೃಷ್ಟಿಯುಳ್ಳಂಥ ಸಮಾಜವನ್ನು ರಚಿಸುವ ಮಹಾನ್ ಗುರಿಯನ್ನು ನಮ್ಮ ದೇಶದ ನಾಯಕರು ಇಟ್ಟು ಕೊಂಡಿದ್ದಾರೆ. ನಮ್ಮ ದೇಶದಲ್ಲಿ ಪರಕೀಯರ ಆಳಿಕೆಯ ಪರಿಣಾಮವಾಗಿ ಸಮಾಜವು ದುರ್ಬಲವಾಗಿ ದುಃಖ, ದಾರಿದ್ರ್ಯ, ದುರಾಚಾರಗಳಿಂದ ಬೆಂದು ಬೇಗುದಿಗೊಂಡು ಹೋಗಿತ್ತು. ಭಾರತೀಯರ ಸಮಾಜದಲ್ಲಿ ಜಾತಿ-ಭೇದ, ಪಕ್ಷ-ಭೇದಗಳು ತುಂಬಿ ತುಳುಕುವಂಥ ಪರಿಸ್ಥಿತಿಯು ನಿರ್ಮಾಣವಾಯಿತು. ಶ್ರೀಮಂತ-ಬಡವ,

ಆಗು-ಹೋಗುಗಳು ಅವಲಂಬಿಸಿರುವದರಿಂದ ಅದು ಜಗತ್ತಿನ ಗಮನವನ್ನು ತನ್ನತ್ತ ಸೆಳೆದುಕೊಂಡಿತ್ತು. ರಶಿಯ ಅಮೇರಿಕೆಗಳಲ್ಲಿಯ ಪರಸ್ಪರ ತಿಕ್ಕಾಟವು ಅಂತ. ರಾಷ್ಟ್ರೀಯ ರಂಗದಲ್ಲಿಯ ತ್ಷೇಷವನ್ನು ದಿನ ದಿನಕ್ಕೆ ಹೆಚ್ಚಿಸುತ್ತಲಿದೆ. ಕ್ಯೂಬಾ-ಕಾಂಗೋಗಳಲ್ಲಿ ಯುದ್ಧದ ಕಾರ್ಮೋಡಗಳು ತಲೆದೋರಿವೆ. ತೃತೀಯ ವಿಶ್ವಯೋಧವು ಒಮ್ಮೆ ಸ್ಫೋಟವಾಯಿತೆಂದರೆ ಇಡಿಯ ಜಗತ್ತಿನ ನಾಶವು ಕಟ್ಟಿಟ್ಟದ್ದೇ ಸರಿ. ಈ ಮಾತನ್ನು ಮನದಂದು ನಮ್ಮ ರಾಷ್ಟ್ರದ ಪ್ರಧಾನಾಮಾತ್ಯರಾದ ಭಾರತರತ್ನ ಪಂಡಿತ ಜವಾಹರಲಾಲ ನೆಹರೂರವರು ಅಕ್ಟೋಬರ ತಿಂಗಳಲ್ಲಿ ಕಲೆತ ಸಂಯುಕ್ತ ರಾಷ್ಟ್ರಸಂಘದ ಮಹಾಧಿವೇಶನದಲ್ಲಿ ಮತ್ತೊಮ್ಮೆ ಚರ್ಚೆಗೋಸ್ಕರ ಶೃಂಗಸಭೆ (Summit Talks) ಯನ್ನು ಕರೆಯಬೇಕೆಂದು ಒತ್ತಾಯಿಸಿದರು. ರಶಿಯದ ಪ್ರಧಾನಾಮಾತ್ಯರಾದ ನಿಕಿಟಾ ಕ್ರುಶ್ಚೇವರು ಕಳಿಸಿದ ಅಭಿನಂದಪರ ತಂತಿಗೆ ಉತ್ತರ ರೂಪವಾಗಿ ಅಮೇರಿಕೆಯ ಭಾವಿ ಅಧ್ಯಕ್ಷರಾದ ಕೆನೆಡಿಯವರು ತಾವು ಅಧಿಕಾರವನ್ನು ವಹಿಸಿಕೊಂಡ ನಂತರ ವಿಶ್ವದ ಶಾಂತಿರಕ್ಷಣೆಗೋಸುಗ ಪ್ರಯತ್ನಿಸುವದಾಗಿ ಭರವಸೆಯನ್ನಿತ್ತಿದ್ದಾರೆ. ಇದು ನಿಜಕ್ಕೂ ಸಂತೋಷದ ಸಂಗತಿ. ಈ ಉದಾತ್ತ ಧೋರಣವನ್ನು ಅವರು ಕಾರ್ಯರೂಪಕ್ಕಿಳಿಸಿದರೆ, ವಿಶ್ವದಲ್ಲಿ ಕಂಡುಬರುವ ತ್ಷೇಷವು ತನ್ನಷ್ಟಕ್ಕೆ ತಾನೇ ನಿರ್ನಾಮವಾಗಿ ಎಲ್ಲ ರಾಷ್ಟ್ರಗಳು ನೆಮ್ಮದಿಯನ್ನು ಪಡೆಯುವದರಲ್ಲಿ ಎಳ್ಳಷ್ಟಿತು ಸಂದೇಹವಿಲ್ಲ. ಅಂತಹವರ ಬಗೆಗೆ ಅಲ್ಪ ಪರಿಚಯವನ್ನು ಮಾಡಿಕೊಡಲು ಇಲ್ಲಿ ಪ್ರಯತ್ನಿಸಲಾಗಿದೆ.

ಬಾಲ್ಯ ಹಾಗು ಶಿಕ್ಷಣ

ಕೆನೆಡಿಯವರು ಮಾಸಾಚುಸೆಟ್ಸದಲ್ಲಿಯ ಬ್ರುಕ್ಲಿನ್ ಎಂಬಲ್ಲಿ ೧೯೧೭ನೆಯ ಇಸವಿ ಮೇ ತಿಂಗಳ ೨೭ನೆಯ ದಿನಾಂಕ ಜನಿಸಿದರು. ಅವರ ತಂದೆ ಜೋಸೆಫ್ ಕೆನೆಡಿಯವರಿಗೆ ಇವರು ದ್ವಿತೀಯ ಪುತ್ರರು. ಜೋಸೆಫ್ ಕೆನೆಡಿಯವರು ನವಕೋಟಿ ನಾರಾಯಣರು. ಅವರಿಗೆ ಒಟ್ಟು ಒಂಬತ್ತು ಜನ ಮಕ್ಕಳು. ಅವರು ತಮ್ಮ ಪ್ರತಿಯೊಂದು ಮಗುವಿಗೆ ದಶಲಕ್ಷ ಡಾಲರುಗಳ ಒಂದೊಂದು ವಿಶ್ವಸ್ತ ನಿಧಿಯನ್ನು ಮಾಡಿಟ್ಟಿದ್ದರು. ಜಾನ್ ಕೆನೆಡಿಯವರ ಅಧ್ಯಯನವೆಲ್ಲ ಹಾರ್ವರ್ಡ ವಿಶ್ವವಿದ್ಯಾಲಯದಲ್ಲಿಯೂ ಲಂಡನ್ ಪಟ್ಟಣದಲ್ಲಿಯ ಸ್ಕೂಲ ಆಫ್ ಇಕಾನಾಮಿಕ್ಸದಲ್ಲಿಯೂ ಜರುಗಿತು. ಅವರು ಇತಿಹಾಸ, ಆಡಳಿತ ಮತ್ತು ಅರ್ಥಶಾಸ್ತ್ರಗಳಲ್ಲಿ ನಿಪುಣರು. ಪತ್ರಿಕೋದ್ಯಮದಲ್ಲಿಯೂ ಅವರಿಗೆ ಗತಿಯು ಚನ್ನಾಗಿದೆ.

ನೌಕಾಪಡೆಯಲ್ಲಿಯ ಸೇವೆ

ವಿದ್ಯಾಭ್ಯಾಸವನ್ನು ಮುಗಿಸಿಕೊಂಡು ಹೊರಬೀಳುವಷ್ಟರಲ್ಲಿ ದ್ವಿತೀಯ ವಿಶ್ವಯೋಧವು ಪ್ರಾರಂಭವಾಯಿತು. ೧೯೪೧ನೆಯ ಇಸವಿ ಸಪ್ಟಂಬರ ತಿಂಗಳಲ್ಲಿ ಅವರು ತಮ್ಮ ರಾಷ್ಟ್ರದ ಜಲಪಡೆಯನ್ನು ಸೇರಿ ಬೇಹುಗಾರಿಕೆಯ ಟಾರ್ಪೆಡೋ ನೌಕೆಯ ಕಮಾಂಡರರಾಗಿ ನೇಮಣೂಕಿಯನ್ನು ಹೊಂದಿದರು. ಮುಂದೆ ಲೆಫ್ಟನೆಂಟ ಎಂಬ ಹುದ್ದೆಗೆ ಬಡತಿ ಸಿಕ್ಕು ಆ ಹುದ್ದೆಯಲ್ಲಿ ಅವರು ೧೯೪೫ರ ವರೆಗೆ ಪಾಸಿಫಿಕ್ ಮಹಾಸಾಗರದ ನೈರುತ್ಯ ಭಾಗದಲ್ಲಿ ಉತ್ತಮ ರೀತಿಯಿಂದ ಕೆಲಸ ಮಾಡಿದರು. ಸಾಲೋಮನ್ ನಡುಗಡ್ಡೆಗಳ ವಲಯದಲ್ಲಿ ವೈರಿಗಳ ಕೂಡ ಘಟಿಸಿದ ಚಕಮಕಿಯಲ್ಲಿ ಅವರ ನೌಕೆಯು ವೈರಿಗಳಿಂದ ಮುಳುಗಿಸಲ್ಪಟ್ಟಾಗ ತಮ್ಮ ಜೀವನದ ಪರಿವೆಯಿಲ್ಲದೆ ಅವರು ತಮ್ಮ ನೌಕೆಯ ಮೂವರು ಸಿಬ್ಬಂದಿಯವರ ಜೀವವನ್ನುಳಿಸಿದ ಸಾಹಸಕ್ಕೋಸ್ಕರ ಅವರಿಗೆ ಪರ್ಪಲ್ ಹಾರ್ಟ (Purple Heart) ಎಂಬ ಬಿರುದು ಸಿಕ್ಕಿತು. ಆ ಯುದ್ಧದಲ್ಲಿ ಅವರಿಗೆ ತೀವ್ರ ತರದ ಗಾಯಗಳಾದ್ದರಿಂದ ಅವರು ೧೯೪೫ನೆಯ ಇಸವಿಯ ಏರಿಗೆ ಸೈನಿಕ ಆಸ್ಪತ್ರೆಯಲ್ಲಿ ಶುಶ್ರೂಷೆಯನ್ನು ಹೊಂದಬೇಕಾಯಿತು. ಗುಣಮುಖರಾದ ನಂತರ ಅವರು ೧೯೪೫ರಲ್ಲಿ ಸಾನ್‌ಫ್ರಾನ್ಸಿಸ್ಕೋದಲ್ಲಿ ಸ್ಥಾಪಿಸಲ್ಪಟ್ಟ ಸಂಯುಕ್ತ ರಾಷ್ಟ್ರಸಂಘದ ಪರಿಷತ್ತಿನಲ್ಲಿ ಮತ್ತು ಪಾಟ್ಸಡ್ಯಾಮದಲ್ಲಿ ಕಲೆತ ಸಭೆಯಲ್ಲಿ ಅಂತರಾಷ್ಟ್ರೀಯ ಸುದ್ದಿ ಸಂಸ್ಥೆಯ ಪ್ರತಿನಿಧಿಯಾಗಿ ಕೆಲಸ ಮಾಡಿದರು.

ರಾಜಕೀಯ ರಂಗ

ಅವರು ಉತ್ತಮ ಬರೆಹಗಾರರು ಇರುವರು. ಅವರ ತಂದೆಯವರು ಇಂಗ್ಲಂಡದಲ್ಲಿ ರಾಯಭಾರಿಗಳಾಗಿದ್ದಾಗ ಇವರೂ ಅವರ ಜೊತೆಗೆ ಅಲ್ಲಿದ್ದರು. ೧೯೪೦ರಲ್ಲಿ "ಇಗ್ಲಂಡವು ಏಕೆ ನಿದ್ರಿಸಿತು" ಎಂಬದೊಂದು

ಶಿಕ್ಷಿತ-ಅಶಿಕ್ಷಿತ ಮುಂತಾದ ವರ್ಗಭೇದಗಳೂ ಕಾಣಿಸಿಕೊಂಡವು. ಇಂಥ ಸಮಾಜ ಭಾರತೀಯರದಾದರೆ ದೇಶಕ್ಕೆ ಸಿಕ್ಕ ಸ್ವಾತಂತ್ರ್ಯವು ಸುರಕ್ಷಿತವುಳಿಯಲಾರದೆಂದು ಗಾಂಧೀಜಿ ಮನಗಂಡರು. ಭಾರತಕ್ಕೆ ವರ್ಗರಹಿತ, ಶೋಷಣರಹಿತ, ಅಹಿಂಸಾತ್ಮಕಸಮಾಜ ಬೇಕೆಂದು ಅವರು ಒತ್ತಿ ಹೇಳಿದರು. ಹಾಗೂ ಅವರ ಅನುಯಾಯಿಗಳಾದ ಪಂಡಿತ ಜವಾಹರಲಾಲ ನೆಹರು ಅವರು ಪ್ರಜಾಪ್ರಭುತ್ವ ಪದ್ಧತಿಯಿಂದಲೇ ಭಾರತೀಯ ಸಮಾಜವು ಮುಂದಡಿ ಇಡುವದೆಂದೂ ಭಾರತದಲ್ಲಿ ಸಮಾಜವಾದಿ ಸಮಾಜವು ಸ್ಥಾಪನೆಯಾಗುವದೆಂದೂ ಭಾರತವು ಇತರ ಅನೇಕ ರಾಷ್ಟ್ರಗಳಂತೆ ಉನ್ನತಿಯ ಶಿಖರವನ್ನು ಕ್ರಮೇಣವಾಗಿ ಏರುವದೆಂದೂ ತಮ್ಮ ವೈಜ್ಞಾನಿಕ ವಿಚಾರಗಳಿಂದ ಕಂಡು ಹಿಡಿದಿದ್ದಾರೆ. ಅಂತೆಯೇ ಪ್ರಜಾಪ್ರಭುತ್ವ ಪದ್ಧತಿಯೇ ಭಾರತಕ್ಕೆ ಒಗ್ಗುವ ರಾಜ್ಯದಾಡಳಿತೆಯ ಪದ್ಧತಿಯೆಂದು ಅವರು ವಿಶ್ವಾಸ ತಾಳಿದ್ದಾರೆ.

ಪ್ರಜಾಪ್ರಭುತ್ವ ಪದ್ಧತಿಯಲ್ಲಿ ದೇಶದ ರಾಜ್ಯಾಡಳಿತೆಯನ್ನು ಜನತೆಯನ್ನು ಪ್ರತಿನಿಧಿಸುವ ಸರಕಾರವು ಸಾಗಿಸಿಕೊಂಡು ಹೋಗುತ್ತದೆ. ಅಂಥ ಸರಕಾರವನ್ನು ಆರಿಸುವ ಹೊಣೆಯು ಜನತೆಯ ಮೇಲಿರುತ್ತದೆ. ದೇಶದಲ್ಲಿಯ ಆಗು ಹೋಗುಗಳಿಗೆ ಪ್ರತಿಯೊಬ್ಬ ವ್ಯಕ್ತಿಯು ಹೊಣೆಗಾರನಿರುತ್ತಾನೆ. ಈ ಪದ್ಧತಿಯು ದೇಶದ ಪ್ರತಿಯೊಬ್ಬ ವ್ಯಕ್ತಿಗೆ ಕೆಲವು ವಿಶಿಷ್ಟ ಮೂಲಭೂತ ಹಕ್ಕುಗಳನ್ನು ಕೊಟ್ಟಿರುತ್ತದೆ. ಈ ಹಕ್ಕುಗಳ ಅರ್ಥವು ಪ್ರತಿಯೊಬ್ಬನಿಗೂ ಸರಿಯಾಗಿ ತಿಳಿದಿರಬೇಕು. ಅವುಗಳನ್ನು ಯೋಗ್ಯ ರೀತಿಯಲ್ಲಿ ಎಲ್ಲರೂ ಉಪಯೋಗಿಸಿ ಕೊಳ್ಳಬೇಕೆಂದು ಪ್ರಜಾಪ್ರಭುತ್ವ ಸರಕಾರವು ಬಯಸುತ್ತದೆ. ಪ್ರಜಾಪ್ರಭುತ್ವದ ಅರ್ಥವನ್ನು ಪ್ರಜಾಪ್ರಭುತ್ವದಲ್ಲಿ ತನ್ನ ಕರ್ತವ್ಯದ ಹೊಣೆಗಾರಿಕೆಗಳನ್ನು ಪ್ರತಿಯೊಬ್ಬರು ತಿಳಿದುಕೊಳ್ಳಬೇಕು. ತಮ್ಮ ಮತದಾನದಿಂದ ತಮ್ಮನ್ನು ಪ್ರತಿನಿಧಿಸುವ ಮಂತ್ರಿಯೊಬ್ಬನನ್ನೇ ಆರಿಸಿಕೊಡುವದೇ ಪ್ರಜಾಪ್ರಭುತ್ವವೆಂದು ತೀರ ಸಂಕುಚಿತ ಅರ್ಥದಲ್ಲಿ ತಿಳಿಯಲಾಗುತ್ತದೆ. ಆದರೆ ಕೇವಲ ರಾಜಕೀಯವಷ್ಟೇ ಅಲ್ಲ ಆರ್ಥಿಕ ಕ್ಷೇತ್ರದಲ್ಲೂ ಸಾಮಾಜಿಕ ಕ್ಷೇತ್ರದಲ್ಲೂ ಪ್ರಜಾಪ್ರಭುತ್ವವು ನಮಗೆ ಬೇಕಾಗಿದೆ. ಸಮಾಜದಲ್ಲಿ ಮೇಲುಕೀಳೆಂಬ ಸ್ಪೃಶ್ಯ-ಅಸ್ಪೃಶ್ಯರೆಂಬ ಮುಂತಾದ ಹೀನ ಭಾವನೆಗಳು ಬೇರು ಸಹಿತ ನಿರ್ಮೂಲವಾಗಬೇಕಾಗಿದೆ. ಸಮಾಜದಲ್ಲಿ ಪ್ರತಿಯೊಬ್ಬ ವ್ಯಕ್ತಿಯ ಸ್ಥಾನವು ಅವನ ಜಾತಿ, ಮತ, ಪಂಥಗಳಿಂದ ಅಥವಾ ಅವನಲ್ಲಿದ್ದ ಐಶ್ವರ್ಯದ ಪ್ರಮಾಣದ ಮೇಲಿಂದ ಗಣಿಸಲ್ಪಡದೆ ತನ್ನ ಸಮಾಜಕ್ಕೆ ಸಲ್ಲಿಸುವ ಸೇವೆಯ ಮೇಲೆ ಗಣಿಸಲ್ಪಡಬೇಕಾಗುತ್ತದೆ. ಸಮಾಜದಲ್ಲಿಯ ಸ್ವಾರ್ಥವು ಸಾಮಾಜಿಕತೆಯ ಸ್ವರೂಪವನ್ನು ಹೊಂದಬೇಕಾಗಿದೆ. ಆರ್ಥಿಕ ಪ್ರಜಾಪ್ರಭುತ್ವದಲ್ಲಿ ಸಮಾಜದ ಆರ್ಥಿಕ ಪರಿಸ್ಥಿತಿಯನ್ನು ಸಮಾನತೆಯ ನಿಯಮಗಳಿಗನುಸಾರವಾಗಿ ಮಾರ್ಪಾಡು ಮಾಡಬೇಕಾಗಿದೆ. ವ್ಯಕ್ತಿಗತ ಲಾಭದ ಬದಲು ಸಹಕಾರಿ ಪದ್ಧತಿಗಳ ಯಶಸ್ಸಿನ ಸಲುವಾಗಿ ಜನತೆಯಲ್ಲಿವೂ ಶ್ರಮಿಸಬೇಕಾಗಿದೆ. ದೊಡ್ಡ ದೊಡ್ಡ ಉದ್ದಿಮೆಗಳಿಂದ ದೇಶದ ಆರ್ಥಿಕ ಮಟ್ಟವನ್ನು ಉನ್ನತಗೊಳಿಸಬೇಕಾಗಿದೆ. ಇದ್ದ ಉದ್ದಿಮೆಗಳನ್ನು ರಾಷ್ಟ್ರೀಕರಣ ಮಾಡುವದಕ್ಕಿಂತ ಸರಕಾರದ ಆಡಳಿತೆಯಲ್ಲಿ ಸಹಕಾರಿ ತತ್ವಗಳ ತಳಹದಿಯ ಮೇಲೆ ಹೊಸ ಹೊಸ ಉದ್ದಿಮೆಗಳನ್ನು ಪ್ರಾರಂಭಿಸಬೇಕಾಗಿದೆ. ಇಡೀ ರಾಷ್ಟ್ರವನ್ನು ಕಲ್ಯಾಣ ರಾಜ್ಯವನ್ನಾಗಿ ಮಾಡುವ ಕನಸನ್ನೇ ರಾಷ್ಟ್ರದ ಮುಂದಾಳುಗಳು ಕಾಣುತ್ತಿದ್ದಾರೆ. ಈ ಕನಸು ನನಸಾಗಬೇಕಾಗಿದ್ದರೆ ಭಾರತದಲ್ಲಿ ಸುಶಿಕ್ಷಿತರ ಪ್ರಮಾಣವು ದೊಡ್ಡದಾಗಬೇಕು.

ನಮ್ಮ ದೇಶವು ಹಳ್ಳಿಗಳ ನಾಡಾಗಿದೆ. ಭಾರತೀಯರಲ್ಲಿ ಹೆಚ್ಚಿನ ಸಂಖ್ಯೆಯಲ್ಲಿ ಇರುವವರೆಂದರೆ ಹಳ್ಳಿಗರೇ. ಈ ಜನರ ಜೀವನವು ಅನೇಕ ರೀತಿಯಿಂದ ಹಿಂದುಳಿದ ದ್ದಾಗಿದೆ. ಈ ಹಿಂದುಳಿಯುವಿಕೆಗೆ ಮೂಲಕಾರಣವೆಂದರೆ ಶಿಕ್ಷಣದ ಅಭಾವವೆಂದು ಬೇರೆ ಹೇಳಬೇಕಾಗಿಲ್ಲ. ಈ ದೇಶದ ಸುಶಿಕ್ಷಿತರ ಪ್ರಮಾಣವು ೧೦೦ಕ್ಕೆ ೨೦ ರಷ್ಟು ಕೂಡ ಇಲ್ಲ. ಇಂಥ ಅಶಿಕ್ಷಿತ ಜನರ ಮೇಲೆ ಪ್ರಜಾಪ್ರಭುತ್ವದ ಹೊಣೆಯನ್ನು ಹೊರಿಸುವದು ಕೇವಲ ಹಾಸ್ಯಾಸ್ಪದ ಸಂಗತಿಯಾದೀತು. ಅವರ ಮೇಲಿದ್ದ ಹೊಣೆಗಳನ್ನು ಅವರಿಗೆ ತಿಳಿಸುವ ಮೊದಲು ಅವರ ಜೀವನದ ಮಟ್ಟವನ್ನು ಸುಧಾರಿಸುವದು ಅನಿವಾರ್ಯ. ಅವರ ಜೀವನಕ್ಕೆ ಶಿಕ್ಷಣದ ಸಂಸ್ಕಾರವನ್ನು ಮಾಡಬೇಕು. ಕೇವಲ ನಿರಕ್ಷರಿಗಳಿಗೆ ಅಕ್ಷರ, ಓದು, ಬರೆಹಗಳನ್ನು ಕಲಿಸಿ ಅವರು ಸಾಕ್ಷರಿಗಳಾದರೆಂದು ಸಾರಿ "ನಾನು ಒಂದು ಸಾವಿರ ಜನರನ್ನು ಸಾಕ್ಷರರನ್ನಾಗಿ ಮಾಡಿದ್ದೇನೆ" ಎಂದು ಬೊಬ್ಬೆ ಕುಟ್ಟುತ್ತ ಓಡಾಡುತ್ತಿರುವ ಜನರು ತಮ್ಮ ಕರ್ತವ್ಯದ ಕಾಲುಭಾಗವನ್ನು ಮಾತ್ರ ಮಾಡಿದ್ದೇವೆ

ಸ್ವಶಿಸ್ತು ತಂತಾನೇ ಉತ್ಪನ್ನವಾಗುತ್ತದೆ. ಶಿಸ್ತಿನಿಂದ ಒಡಗೂಡಿದ ಸಮಾಜವೇ ಪ್ರಜಾಪ್ರಭುತ್ವದ ಯಶಸ್ಸಿಗೆ ಕಾರಣವಾಗುತ್ತದೆ. "The less the imposed discipline the more the self discipline higher is the development of the democratic society" ಎಂದು ಶ್ರೀ ಜವಾಹರ ಲಾಲ ನೆಹರೂ ಹೇಳಿದ್ದಾರೆ. ಅಂತೆಯೇ ಸ್ವಯಂಪ್ರೇರಿತ ಶಿಸ್ತನ್ನು ಸಮಾಜದಲ್ಲಿ ಉಂಟುಮಾಡುವದು ಸಮಾಜ ಶಿಕ್ಷಣದ ಕರ್ತವ್ಯವಾಗಿದೆ.

ಈ ಶಿಕ್ಷಣದ ಪ್ರಸಾರ ಕಾರ್ಯದಲ್ಲಿ ಸುಶಿಕ್ಷಿತ ರೆನ್ನಿಸಿಕೊಳ್ಳುವ ಪ್ರತಿಯೊಬ್ಬರೂ ಭಾಗವಹಿಸಬೇಕು. ಎಷ್ಟೋ ರಾಷ್ಟ್ರಗಳಲ್ಲಿ ಇಂಥ ಶಿಕ್ಷಣಪ್ರಸಾರದ ಕಾರ್ಯವು ಸುಶಿಕ್ಷಿತರಿಗೆ ಕಡ್ಡಾಯದ್ದಾಗಿದೆ. ಅಂಥ ಕಡ್ಡಾಯದ ಕಾಯಿದೆ ಇದ್ದರೆ ಪ್ರತಿಯೊಬ್ಬ ಸುಶಿಕ್ಷಿತನು ತನ್ನ ಬೇಡಿಕೆಗಳು ಪೂರೈಸಲ್ಪಡಬೇಕಾದರೆ ಅವನಿಗೆ ಹಾಕಿಕೊಟ್ಟಷ್ಟು ಜನಸಮೂಹವನ್ನು ಸುಶಿಕ್ಷಿತ ಸಮೂಹವನ್ನಾಗಿ ಮಾಡಲೇ ಬೇಕಾಗುತ್ತದೆ. ಅದರೆ ಪ್ರಜಾಪ್ರಭುತ್ವವಾದೀ ಭಾರತದಲ್ಲಿ ಇಂಥ ಕಟ್ಟಳೆಗಳಿಗೆ ಹೆಚ್ಚಿನ ಮಹತ್ವವಿರದೆ ಈ ತರಹದ ಮಹಾನ್ ಕಾರ್ಯಗಳು ಸ್ವಇಚ್ಛೆಯಿಂದ ಆಗಬೇಕಾಗುತ್ತವೆ. ಆದುದರಿಂದ ಕೇವಲ ಶಿಕ್ಷಕರೇ ಈ ಕಾರ್ಯವನ್ನು ಮಾಡಲಿ ಅಥವಾ ಅದಕ್ಕಾಗಿ ನೇಮಿಸಲ್ಪಟ್ಟವರು ಈ ಕೆಲಸವನ್ನು ನೋಡಿಕೊಳ್ಳಲಿ ಎಂದರೆ ಅದು ದೇಶದ ಹಿತದ ದೃಷ್ಟಿಯಿಂದ ಅಷ್ಟೊಂದು ಯೋಗ್ಯವೆನಿಸಲಿಕ್ಕಿಲ್ಲ. ಪ್ರತಿಯೊಬ್ಬನೂ ಈ ಕಾರ್ಯದಲ್ಲಿ ಕೈಲಾದ ಮಟ್ಟಿಗೆ ಭಾಗವಹಿಸಬೇಕು. ಕಟ್ಟಕಡೆಗೆ "ನಾನು ಒಬ್ಬನನ್ನಾದರೂ ಸುಶಿಕ್ಷಿತನನ್ನಾಗಿ ಮಾಡೇನು" ಎಂಬ ಧ್ಯೇಯವು ಪ್ರತಿಯೊಬ್ಬನದಾಗಿರಬೇಕು. ಹೀಗೆ ಮಾಡಿದಲ್ಲಿ ದೇಶವು ಅಭ್ಯುದಯ ಹೊಂದದೆ ಏನು ಮಾಡೀತು?

ಪ್ರಾಥಮಿಕ ಶಾಲಾ ಪ್ರಮಾಣಪತ್ರ ಪರೀಕ್ಷೆ, ಟ್ರೇನಿಂಗ ಕಾಲೇಜ; ಎಲಿಮೆಂಟರಿ ಮತ್ತು ಇಂಟರಮೀಡಿಯೆಟ್ ಗ್ರೇಡ ಮುಂ. ಡ್ರಾಯಿಂಗ ಪರೀಕ್ಷೆಗಳಿಗೆ—

ಜನಪ್ರಿಯವಾದ ಮತ್ತು ಸರಕಾರದಿಂದ ಮಂಜೂರಾದ ಒಂದೇ ಒಂದು ಪುಸ್ತಕ

ಆದರ್ಶ ಚಿತ್ರಕಲಾ

(Ideal Drawing)

ಶ್ರೀ ಎಸ್. ಕೆ. ಜೋಶಿ, ಮತ್ತು ಶ್ರೀ ಜಿ. ಡಿ. ನಾಲಿ.
ಎಲ್ಲ ದೊಡ್ಡ ಪುಸ್ತಕ ವ್ಯಾಪಾರಸ್ಥರಲ್ಲಿ ದೊರೆಯುವದು.
ಬೆಲೆ ೧—೧೨—೯ ಅಂಚೆವೆಚ್ಚ ಪ್ರತ್ಯೇಕ.

ಐದು ಮತ್ತು ಐದಕ್ಕಿಂತ ಹೆಚ್ಚು ಪ್ರತಿ ತರಿಸಿಕೊಳ್ಳುವವರಿಗೆ ಅಂಚೆ ವೆಚ್ಚವಿಲ್ಲ. ಇದು ಕನ್ನಡದಲ್ಲಿಯೂ ಸಿಗುತ್ತದೆ.

ಜಿ. ವಾಯ್. ರಾನೆ

ಪ್ರಕಾಶಕರು, ೩೪೩, ಕಸಬಾಪೇಟೆ ಪುಣೆ.

ಚಡಚಣ ಶ್ರೀ ಅರವಿಂದ ಗ್ರಂಥಾಲಯದ

ನವಪ್ರಕಟನೆಗಳು

ಸರ್ವಧರ್ಮಸಮನ್ವಯ ತತ್ತ್ವವನ್ನು ಆಧರಿಸಿ ಸುಲಭವೂ ಲಲಿತವೂ ಆದ ಪುಸ್ತಕಗಳನ್ನು ಒದಗಿಸಿ ಕೊಟ್ಟು, ವಾಚಕರಲ್ಲಿ ಸದಭಿರುಚಿಯನ್ನು ಹುಟ್ಟಿಸಿ, ನಮ್ಮ ನಾಡು ಜಾತ್ಯತೀತತೆಯನ್ನು ರೂಪಿಸಿಕೊಂಡು ಯುಗವಾಣಿಗೆ ಕಿವಿಗೊಡುವಂತೆ ಮಾಡುವುದು ನಮ್ಮ ಪ್ರಕಟನೆಗಳ ಉದ್ದೇಶ.

ವರುಷಕ್ಕೆ ೫ ರೂ. ಕೊಟ್ಟು ಗ್ರಾಹಕರಾದರಿಗೆ ನಮ್ಮ ನಾಲ್ಕು ಪುಸ್ತಕಗಳು ಮುಕ್ಕಾಲು ಬೆಲೆಗೆ ದೊರೆಯುವವು. ಸುಂದರವಾದ ಅಚ್ಚುಕಟ್ಟುಗಳು ಮನೆ ಮನೆಯಲ್ಲಿಯೂ ಇರಬೇಕಾದ ಪುಸ್ತಕಗಳು. ಇಂದೇ ಗ್ರಾಹಕರಾಗಿರಿ.

ಶ್ರೀ ಅರವಿಂದ ಗ್ರಂಥಾಲಯ
ಪೋ : ಚಡಚಣ
ಜಿ. : ವಿಜಾಪುರ

ದಿವಂಗತರಾದ ಏರ ಮಾರ್ಶಲ್ ಸುವ್ರತ ಮುಖರ್ಜಿ

(ವಾಯುಪಡೆಯ ಪ್ರಪ್ರಥಮ ಹಿಂದಿ ಮುಖ್ಯ ದಳಪತಿ)

ಲೇಖಕರು : **ಶ್ರೀ ಬಮಶಿಂ**

ಪ್ರಸಾವನೆ :

ಹೋದ ನವಂಬರ ತಿಂಗಳ ೮ನೆಯ ದಿನಾಂಕ ಏರ್ ಮಾರ್ಶಲ್ (Air Marshal) ಮುಖರ್ಜಿಯವರು ಟೋಕಿಯೋ ನಗರದ ಭೋಜನಕೂಟವೊಂದರಲ್ಲಿ ಊಟ ಮಾಡುತ್ತಿದ್ದಾಗ ಮಾಂಸದ ಸಣ್ಣ ಚೂರೊಂದು ಅವರ ಶ್ವಾಸನಲಿಕೆಯ ದ್ವಾರದಲ್ಲಿ ಅಕಸ್ಮಿಕವಾಗಿ ಸಿಲುಕಿಕೊಂಡಿದ್ದರ ಪರಿಣಾಮದಿಂದ ನಿಧನರಾದ ಸುದ್ದಿಯನ್ನು ಕೇಳಿ ರಾಷ್ಟ್ರಕ್ಕೆ ರಾಷ್ಟ್ರವೇ ಶೋಕಸಾಗರದಲ್ಲಿ ಮುಳುಗಿತು. ನಮ್ಮ ರಾಷ್ಟ್ರದ ಧುರೀಣರೆಲ್ಲ ಅವರ ಗುಣಗಾನವನ್ನು ಮಾಡುತ್ತ ತಮಗಾಗಿದ್ದ ಸಂತಾಪವನ್ನು ವ್ಯಕ್ತಪಡಿಸಿ ಕಂಬನಿಗಳನ್ನು ಸುರಿಸಿದರು. ೧೯೫೬ನೆಯ ಇಸವಿ ಏಪ್ರಿಲ ತಿಂಗಳ ೧ನೆಯ ದಿನಾಂಕದಿಂದ ಅವರು ನಮ್ಮ ರಾಷ್ಟ್ರದ ನೈಮಾನಿಕ ಪಡೆಯ ಮುಖ್ಯ ದಳಪತಿಯಾದರು. ಈ ಆರು ವರ್ಷಗಳ ಸುದೀರ್ಘ ಕಾಲಾವಧಿಯಲ್ಲಿ ತಮ್ಮ ಇಲಾಖೆಯಲ್ಲಿ ಅಸಂಖ್ಯ ಸುಧಾರಣೆಗಳನ್ನೆಸಗಿದ್ದಾರೆ. ಆ ಪಡೆಯಲ್ಲಿಯ ವಿಮಾನಗಳನ್ನೆಲ್ಲ ಜೆಟ್ ವಿಮಾನಗಳನ್ನಾಗಿ ಪರಿವರ್ತಿಸಿದ್ದುದು ಅವರ ಸಾಹಸವನ್ನು ಕೈಯೆತ್ತಿ ತೋರಿಸುತ್ತಿದೆ. ಅಂತಹವರ ಅಲ್ಪ ಪರಿಚಯವನ್ನಿಲ್ಲಿ ಮಾಡಿಕೊಡಲು ಪ್ರಯತ್ನಿಸಲಾಗಿದೆ.

ಬಾಲ್ಯ ಹಾಗೂ ಶಿಕ್ಷಣ

೧೯೧೧ನೆಯ ಇಸವಿ ಮಾರ್ಚ ತಿಂಗಳ ೫ನೆಯ ದಿನಾಂಕ ಕಲಕತ್ತೆಯಲ್ಲಿ ಜನಿಸಿದರು. ಅವರ ಪ್ರಾಥಮಿಕ ಮತ್ತು ಮಾಧ್ಯಮಿಕ ಶಿಕ್ಷಣವೆಲ್ಲ ಕಲಕತ್ತೆಯಲ್ಲಿಯೇ ಜರುಗಿತು. ೧೯೨೯ರಲ್ಲಿ ತಮ್ಮ ತಂದೆ ತಾಯಿಗಳ ಜೊತೆಯಲ್ಲಿ ಇಂಗ್ಲಂಡಕ್ಕೆ ಪ್ರಯಾಣ ಬೆಳಿಸಿ ಅಲ್ಲಿ ವೈದ್ಯ ಶಾಸ್ತ್ರದ ಅಭ್ಯಾಸವನ್ನು ಕೈಕೊಳ್ಳಬೇಕೆಂದು ಬಯಸಿದ್ದರು. ತಾನೊಂದು ಬಗೆದರೆ ದೈವವು ಮತ್ತೊಂದು ಬಗೆಯಿತೆಂಬಂತೆ ಅವರ ಸ್ಥಿತಿಯಾಯಿತು. ಇಂಗ್ಲಂಡವನ್ನು ತಲಪುವಷ್ಟರಲ್ಲಿ ಹಿಂದೀಯರನ್ನು ಆ ವರುಷದಿಂದ ವಾಯುಪಡೆಯಲ್ಲಿ ಸೇರಿಸಿಕೊಳ್ಳುವೆಂದೂ ಅದಕ್ಕೋಸ್ಕರ ಸ್ಪರ್ಧಾತ್ಮಕ ಪರೀಕ್ಷೆಯೊಂದು ಏರ್ಪಡಿಸಲ್ಪಟ್ಟಿದೆಯೆಂದೂ ಅವರಿಗೆ ಗೊತ್ತಾಯಿತು. ಕೂಡಲೇ ಅವರು ವೈದ್ಯಶಾಸ್ತ್ರದ ಹಂಬಲವನ್ನು ಬಿಟ್ಟುಗೊಟ್ಟು ವೈಮಾನಿಕ ಪಡೆಯಲ್ಲಿ ಸೇರುವದನ್ನು ನಿರ್ಧರಿಸಿ ಆ ಪರೀಕ್ಷೆಗೆ ಕುಳಿತು ಅದರಲ್ಲಿ ಯಶವನ್ನು ಪಡೆದರು. ಕ್ರಾನ್‌ವೆಲ್ಲದಲ್ಲಿಯ ವೈಮಾನಿಕ ದಳದ ಕಾಲೇಜದಲ್ಲಿ ಎರಡು ವರ್ಷಗಳ ತರಬೇತಿಯನ್ನು ಹೊಂದಿದ ನಂತರ ಪಾಯಲಟ್ (ವಿಮಾನವನ್ನು ನಡೆಸುವವ) ಎಂದು ನೇಮಿಸಲ್ಪಟ್ಟರು.

ಭಾರತದ ವಾಯುಪಡೆಯಲ್ಲಿ ನೌಕರಿ

ಭಾರತದ ವೈಮಾನಿಕ ಪಡೆಯು ಮೊತ್ತ ಮೊದಲು ೧೯೩೩ರಲ್ಲಿ ಮೈದೋರಿತು. ಅಂದಿನಿಂದ ಅವರ ನೌಕರಿಯು ಆ ಪಡೆಯಲ್ಲಿ ಪ್ರಾರಂಭವಾಯಿತು. ಮುಂದೆ ಆರು ವರ್ಷಗಳವರೆಗೆ ವಾಯವ್ಯ ಸರಹದ್ದಿನಲ್ಲಿಯ ಬೇರೆ ಬೇರೆ ಠಾಣ್ಯಗಳಲ್ಲಿ ವಾಯುದಳದ ಮೊದಲನೆಯ ತಂಡದಲ್ಲಿ ಕೆಲಸ ಮಾಡಿದರು. ೧೯೩೯ನೆಯ ಇಸವಿ ಮಾರ್ಚ ತಿಂಗಳಲ್ಲಿ ಒಂದು ತಂಡದ ಅಧಿಕಾರಿಯಾಗಿ ನೇಮಕವನ್ನು ಹೊಂದಿದರು. ಹೀಗೆ ಅಧಿಕಾರವನ್ನು ಹೊಂದಿದ ಹಿಂದೀಯರಲ್ಲಿ ಅವರೇ ಮೊದಲಿಗರು. ಹಲವು ಗಂಡಾಂತರ ಪ್ರಸಂಗಗಳಲ್ಲಿ ಧೈರ್ಯ-ಸಾಹಸಗಳನ್ನು ತೋರ್ಪಡಿಸಿದ್ದಕ್ಕೋಸ್ಕರ ಮೇಲಿನವರಿಂದ ಮೆಚ್ಚುಗೆಯನ್ನು ಪಡೆದರು. ಕ್ವೇಟಾದಲ್ಲಿಯ ಸ್ಟಾಫ್ ಕಾಲೇಜ (ಅಧಿಕಾರಿಗಳ ತರಬೇತಿಯ ಶಿಬಿರದಲ್ಲಿ) ಶಿಕ್ಷಣವನ್ನು ಹೊಂದಿದ ನಂತರ ರಾಯಲ್ ಏರ ಫೋರ್ಸ (Royal Air Force) ದ ೨೩೩ನೆಯ ನಂಬರಿನ ತಂಡದ ಮುಖ್ಯಾಧಿಕಾರಿಯಾಗಿ ನೇಮಿಸಲ್ಪಟ್ಟರು. ೧೯೪೨ರಲ್ಲಿ ಅವರು ಆ ಹುದ್ದೆಯಲ್ಲಿದ್ದಾಗ ಸಿಕಂದರಾಬಾದ ಮತ್ತು ತಿರುಚಿನಾಪಲ್ಲಿಯಲ್ಲಿ ಕೆಲಸ ಮಾಡಿದರು. ೧೯೪೩ನೆಯ ಇಸವಿ ಆಗಷ್ಟ ತಿಂಗಳಲ್ಲಿ ಕೋಹಟದಲ್ಲಿಯ ವೈಮಾನಿಕ ದಳಗಳ ಠಾಣ್ಯದ ಪ್ರಪ್ರಥಮ ಹಿಂದೀ ಅಧಿಕಾರಿಯಾದರು. ಮುಂದೆ ಮೂರು ವರ್ಷಗಳ ನಂತರ ಗ್ರುಪ ಕ್ಯಾಪ್ಟನ್ ದರ್ಜಿಗೆ ಸರಿಸಮಾನವಾದ ದರ್ಜಿಯ ಡಾಯರೆಕ್ಟರ

ಎಂದು ತಿಳಿದುಕೊಳ್ಳಬೇಕು. ಕೇವಲ ಅಕ್ಷರ ಜ್ಞಾನದಿಂದ ಜನತೆಯ ಜೀವನ ಸುಧಾರಿಸುವದು ಅಸಂಭವ. ಅವರಿಗೆ ಜೀವನದ ಎಲ್ಲ ರಂಗಗಳಲ್ಲಿಯೂ ಶಿಕ್ಷಣವು ಬೇಕು. ಆದುದರಿಂದಲೇ "ಪ್ರೌಢ ಶಿಕ್ಷಣ"ವು ಈಗ "ಸಮಾಜ ಶಿಕ್ಷಣ"ವಾಗಿದೆ. ಸರಕಾರದವರ ಉದ್ದೇಶಗಳಿಗನುಸಾರವಾಗಿ ಸಮಾಜ ಶಿಕ್ಷಣವು ಇಡೀ ದೇಶದಲ್ಲಿ ಭರದಿಂದ ನಡೆದುದಾದರೆ ಕೆಲವೇ ವರ್ಷಗಳಲ್ಲಿ ಭಾರತವು ಪ್ರಗತಿಪಥದಲ್ಲಿ ಮುನ್ನಡೆಯುವದೆಂಬುದು ನಿಃಸಂಶಯ. ಆದುದರಿಂದ ಶಿಕ್ಷಣ ಕ್ಷೇತ್ರದಲ್ಲಿ ದುಡಿಯುತ್ತಿರುವ ನಾವು ಸಮಾಜ ಶಿಕ್ಷಣದ ಬಗ್ಗೆ ಸಂಪೂರ್ಣ ತಿಳಿದುಕೊಳ್ಳುವದು ಅವಶ್ಯ. ಸ. ಶಿ. ಕಾರ್ಯವನ್ನು ಮಾಡಿದೆನೆಂದು ದಾಖಲೆಗಳ ಮೂಲಕ ಸಿದ್ಧಮಾಡಿ ಕೆಲ ಉದ್ದೇಶಗಳನ್ನು ಈಡೇರಿಸಿಕೊಳ್ಳುವ ಪ್ರವೃತ್ತಿಯನ್ನು ನಾವು ಕೊಂಚಮಟ್ಟಿಗೂ ಬೆಳೆಯಿಸಿಕೊಳ್ಳಬಾರದು. ಹಾಗೆ ಮಾಡಿದ್ದಾದರೆ ಇಡೀ ದೇಶಕ್ಕೆ ದ್ರೋಹ ಬಗೆದಂತಾಗುವದಲ್ಲದೆ ಸ್ವಯಂ ಆತ್ಮ ವಂಚನೆಯನ್ನು ಮಾಡಿಕೊಂಡಂತಾಗುವದೆಂದು ತಿಳಿದುಕೊಳ್ಳಬೇಕು.

ಮೊಟ್ಟಮೊದಲು ಸಮಾಜದಲ್ಲಿದ್ದ ಮೂಢ ನಂಬಿಕೆಗಳನ್ನು ದೂರಮಾಡಲು ಹೆಣಗಬೇಕು. ಸಮಾಜದೊಳಗಿನ ಅಸಮಾನತೆಯ ಭಾವನೆಯನ್ನು ನಿರ್ಮೂಲಗೊಳಿಸಲು ಪ್ರಯತ್ನಿಸಬೇಕು. ಶಿಕ್ಷಣದ ಅಭಾವವು ದೈಹಿಕ, ಬೌದ್ಧಿಕ, ನೈತಿಕ ಅಧೋಗತಿಯನ್ನು ಉಂಟುಮಾಡುತ್ತದೆಂದು ಮನಗಂಡು ಆ ಎಲ್ಲ ಕ್ಷೇತ್ರಗಳಲ್ಲಿಯೂ ಅಭಿವೃದ್ಧಿಯನ್ನುಂಟು ಮಾಡುವ ಜ್ಞಾನವನ್ನು ಅಶಿಕ್ಷಿತರಿಗೆ ಮಾಡಿಕೊಡಬೇಕು. ಹಳ್ಳಿಯ ಜನರು ಆರೋಗ್ಯದ ನಿಯಮಗಳನ್ನು ಅರಿತಿರುವದಿಲ್ಲ. ಅಂತೆಯೇ ಮೇಲಿಂದ ಮೇಲೆ ಅವರು ಪಿಡುಗು ರೋಗಾದಿಗಳಿಗೆ ಬಲಿಯಾಗಬೇಕಾಗುತ್ತದೆ. ಹಳ್ಳಿಗಳಲ್ಲಿ ಸಾಕಷ್ಟು ನೈಸರ್ಗಿಕ ಅನುಕೂಲತೆಗಳಿದ್ದರೂ ಅವುಗಳ ಉಪಯೋಗವನ್ನು ಅವರು ಅರಿತುಕೊಳ್ಳುತ್ತಿರುವದಿಲ್ಲ. ಸಮಾಜ ಶಿಕ್ಷಣವು ಅವರಿಗೆ ಆರೋಗ್ಯದ ನಿಯಮಗಳು, ಅಚ್ಚುಕಟ್ಟುತನ, ಶರೀರಸಂವರ್ಧನೋಪಾಯಗಳು ಮುಂತಾದವುಗಳ ಜ್ಞಾನ ಮಾಡಿಕೊಡಬೇಕು. ಯಾವದೇ ಪ್ರಕಾರದ ಬೇನೆಯ ಲಕ್ಷಣಗಳು ಕಂಡ ಕೂಡಲೇ ಅವುಗಳನ್ನು ಹಿಂಗಿಸುವದಕ್ಕೋಸ್ಕರ ಕೈಕೊಳ್ಳಲು ಪ್ರಥಮೋಪಚಾರಗಳು ಅವರಿಗೆ ತಿಳಿದಿರಬೇಕು. ಶಿಶುಗಳ ಆರೈಕೆ, ಮನೆಯನ್ನು ಓರಣವಾಗಿಡುವದು, ಉತ್ತಮ ಗೃಹಿಣಿಯರ ಕರ್ತವ್ಯಗಳು ಎಲ್ಲ ತಾಯಂದಿರಿಗೆ ತಿಳಿದಿರಬೇಕು. ಕೇವಲ ವೈಯಕ್ತಿಕ ಆರೋಗ್ಯವನ್ನಷ್ಟೇ ಅಲ್ಲದೆ ಸಾರ್ವಜನಿಕ ಆರೋಗ್ಯದ ಕಡೆಗೆ ಲಕ್ಷಪೂರೈಸುವಂತೆ ಅವರನ್ನು ಪ್ರಜ್ಞೋದಿಸಬೇಕು. ಎರಡನೆಯದಾಗಿ ಹಳ್ಳಿಗಳಲ್ಲಿ ಅನೇಕ ಗುಂಪುಗಳಿರುತ್ತವೆ. ಈ ಗುಂಪುಗಳಲ್ಲಿ ಮೇಲಿಂದ ಮೇಲೆ ತಿಕ್ಕಾಟಗಳಾಗುತ್ತಿರುತ್ತವೆ. ಸ. ಶಿ. ಕಾರ್ಯಕರ್ತರು ಈ ಗುಂಪುಗಳಲ್ಲಿ ಐಕ್ಯತೆಯನ್ನುಂಟು ಮಾಡಿ ಪ್ರತಿಯೊಬ್ಬರ ಮನೋವೃತ್ತಿಯನ್ನು ವಿಶಾಲಗೊಳಿಸುವ ಕಲೆಯನ್ನು ಅರಿತಿರಬೇಕಾಗುತ್ತದೆ. "ಎಲ್ಲರೂ ತನಗಾಗಿ, ತಾನು ಎಲ್ಲರಿಗಾಗಿ" ಎಂಬ ಧ್ಯೇಯವನ್ನು ಮುಂದಿಟ್ಟುಕೊಂಡು ಆತನು ಇಡೀ ಸಮಾಜವನ್ನು ಸುಸಂಘಟಿತ ರೀತಿಯಲ್ಲಿ ರಚಿಸಬೇಕಾಗುತ್ತದೆ. ಸರಕಾರದವರು ಜನತೆಯ ಹಿತದ ದೃಷ್ಟಿಯಿಂದ ಅನೇಕ ಯೋಜನೆಗಳನ್ನು ಕಾರ್ಯಗತ ಮಾಡುತ್ತಿರುತ್ತಾರೆ. ಈ ಯೋಜನೆಗಳ ಅರ್ಥವು ಎಲ್ಲ ಜನರಿಗೂ ತಿಳಿದಿರಬೇಕು. ಇಲ್ಲದೆ ಇದ್ದರೆ ಅವು ನಿಷ್ಫಲವಾಗುವವು. ಅದರಲ್ಲಿಯೂ ಹಳ್ಳಿಗಳ ಉನ್ನತಿಗೋಸ್ಕರ ಸಿದ್ಧಪಡಿಸಿದ ಯೋಜನೆಗಳು ಹಳ್ಳಿಗರಿಗೆ ತಿಳಿದಿರಬೇಕು. ಸ. ಶಿ. ಈ ಸಂಗತಿಯನ್ನು ಗಮನಿಸಿ ಅವರಿಗೆ ದೇಶದಲ್ಲಿಯ ನಾನಾ ಯೋಜನೆಗಳ ಸ್ವರೂಪವನ್ನು ಅವುಗಳಿಂದ ಜನತೆಗಾಗುವ ಹಿತದ ಕಲ್ಪನೆಯನ್ನೂ ಮಾಡಿಕೊಡಬೇಕು. ಅಲ್ಲದೆ ಒಕ್ಕಲುತನ, ಬಡಿಗತನ ಮುಂತಾದ ಉದ್ಯೋಗಗಳಲ್ಲಿ ಸಂಶೋಧಿತ ಹೊಸ ಹೊಸ ಪದ್ಧತಿಗಳನ್ನು ಹಳ್ಳಿಯ ಜನರಿಗೆ ತಿಳಿಸಿಕೊಡಬೇಕು. ದೇಶ ವಿದೇಶಗಳಲ್ಲಿ ನಡೆದ ಘಟನೆಗಳ ಜ್ಞಾನವು ಅವರಿಗಿರಬೇಕು. ಅಂತೆಯೇ ವರ್ತಮಾನಪತ್ರ, ರೇಡಿಯೋ ಮುಂತಾದ ಸಾಧನಗಳ ಉಪಯೋಗವನ್ನು ಅವರಿಗೆ ತಿಳಿಸಿಕೊಡಬೇಕು. ಈ ರೀತಿ ಅವರ ಜೀವನದಲ್ಲಿ ಉತ್ಕೃಷ್ಟವಾದ ಕ್ರಾಂತಿಯೊಂದನ್ನು ಉಂಟು ಮಾಡಿ ಅವರು ಯೋಗ್ಯ ನಾಗರಿಕರಾಗುವ ಮಟ್ಟಕ್ಕೆ ಬಂದ ನಂತರ ನಾವು ಅವರಿಗೆ ಪ್ರಜಾಪ್ರಭುತ್ವದ ತತ್ವಗಳನ್ನು ತಿಳಿಸಿಕೊಡಬೇಕು.

ಈ ರೀತಿ ಜನತೆಗೆ ಜೀವನದ ಎಲ್ಲ ರಂಗಗಳಲ್ಲಿಯೂ ಶಿಕ್ಷಣವನ್ನು ಕೊಟ್ಟು ಅವರ ಜೀವನವನ್ನು ಸರ್ವತೋಮುಖ ವಿಕಾಸ ಮಾಡುವದೇ ಸಮಾಜ ಶಿಕ್ಷಣದ ಹೆಗ್ಗುರಿಯಾಗಿದೆ. ಸಮಾಜ ಶಿಕ್ಷಣವು ಯೋಗ್ಯ ರೀತಿಯಲ್ಲಿ ಕೈಕೊಳ್ಳಲ್ಪಟ್ಟಿದ್ದಾದರೆ ಭಾರತೀಯ ಸಮಾಜದಲ್ಲಿ

ಆಫ್ ಟ್ರೇನಿಂಗ ಆದರು. ಸ್ವಾತಂತ್ರ್ಯ ಪ್ರಾಪ್ತಿಯ ನಂತರ ವೈಮಾನಿಕ ಸಿಬ್ಬಂದಿಯ ಡೆಪ್ಯೂಟಿ ಚೀಫ್ ರಾದರು, ಮತ್ತು ಮುಂದೆ ವ್ಹಾಯಿಸ್ ಮಾರ್ಶಲ್ಲರಾದರು. ಕೊನೆಗೆ ೧೯೫೪ರಲ್ಲಿ ವೈಮಾನಿಕ ಪಡೆಯ ಪ್ರಪ್ರಥಮ ಹಿಂದೀ ಮಾರ್ಶಲ್ಲರಾದರು. ಹೀಗಾಗಿ ಅವರಿಗೆ ಅವರ ನವಕರಿಯಲ್ಲಿ ಮೂರುಸಲ ಪ್ರಪ್ರಥಮರಾದ ಬಹುಮಾನವು ಸಿಕ್ಕಿತು.

ಮಾರ್ಶಲ್ಲರಾದ ನಂತರ

೧೯೫೬ನೆಯ ಇಸವಿ ಜುಲೈ ತಿಂಗಳಲ್ಲಿ ರಶಿಯನ್ ಸರಕಾರದ ಆಮಂತ್ರಣದ ಮೇರೆಗೆ ಮಾಸ್ಕೊಕ್ಕೆ ಸಂದರ್ಶನವಿತ್ತು. ಅಲ್ಲಿ ಆ ಸಮಯದಲ್ಲಿ ಎರ್ಪಡಿಸಲಾಗಿದ್ದ ವೈಮಾನಿಕಪಡೆಯ ಚಟುವಟಿಕೆಗಳ ಪ್ರದರ್ಶನವನ್ನು ವೀಕ್ಷಿಸಿದರು. ಅದರ ಮುಂದಿನ ವರುಷ ಯುನಾಯಿಟೆಡ್ ಸ್ಟೇಟ್ಸದ ವಾಯುಪಡೆಯ ದಳಪತಿಯ ಆಮಂತ್ರಣವನ್ನು ಸ್ವೀಕರಿಸಿ ಅಮೇರಿಕಕ್ಕೆ ಪ್ರಯಾಣ ಬೆಳಿಸಿ ಆ ರಾಷ್ಟ್ರದ ವೈಮಾನಿಕ ದಳಗಳ ಠಾಣ್ಯಗಳನ್ನೆಲ್ಲ ನಿರೀಕ್ಷಿಸಿ ಕೊಂಡು ಸ್ವದೇಶಕ್ಕೆ ಆಗಮಿಸಿದರು. ಆ ಎರಡೂ ಬಲಾಢ್ಯ ರಾಷ್ಟ್ರಗಳು ವೈಮಾನಿಕ ಚಟುವಟಿಕೆಗಳಲ್ಲಿ ಸಾಧಿಸಿದ ಪ್ರಗತಿಯನ್ನು ಅಭ್ಯಸಿಸಿಕೊಂಡು ಬಂದದ್ದರ ಫಲವಾಗಿ ನಮ್ಮ ವೈಮಾನಿಕ ಪಡೆಯಲ್ಲಿ ಕಳೆದ ನಾಲ್ಕು ವರ್ಷಗಳಲ್ಲಿ ಎಷ್ಟೋ ಸುಧಾರಣೆಗಳನ್ನು ಜಾರಿಯಲ್ಲಿ ತಂದರು. ಅವುಗಳಲ್ಲಿ ಮುಖ್ಯವಾದುದೆಂದರೆ ಮೇಲೆ ಈಗಾಗಲೇ ಹೇಳಿದಂತೆ ವಾಯುಪಡೆಯಲ್ಲಿಯ ವಿಮಾನಗಳನ್ನು ಜೆಟ್ ವಿಮಾನಗಳನ್ನಾಗಿ ಪರಿವರ್ತಿಸಿದ್ದುದು.

ಕೊನೆಯ ಮಾತು

ನಮ್ಮ ದೇಶದ ಉತ್ತರ ಗಡಿಯ ಗುಂಟ ಚೀನದ ಆಕ್ರಮಣವು ಒಂದೇ ಸವನೆ ಹೆಚ್ಚುತ್ತಲಿದೆ. ಈ ಸಮಯದಲ್ಲಿ ಏರ ಮಾರ್ಶಲ್ ಸುವ್ರತ ಮುಖರ್ಜಿಯವರಂತಹ ನುರಿತ ಮಹಾ ದಂಡನಾಯಕನು ಕಣ್ಮರೆಯಾದದ್ದು ನಿಜಕ್ಕೂ ನಮ್ಮ ರಾಷ್ಟ್ರದ ದುರದೃಷ್ಟ! ರಾಷ್ಟ್ರಕ್ಕೆ ಅದೊಂದು ಎಂದಿಗೂ ತುಂಬಿಬಾರದ ಹಾನಿಯು. ವೈಮಾನಿಕ ಪಡೆಯಲ್ಲಿ ಅವರು ಸಾಧಿಸಿದ ಪ್ರಗತಿಯೂ ಹುಟ್ಟಿಸಿದ ಶಿಸ್ತು–ಸಂಘಟನೆಗಳೂ ಸ್ತುತ್ಯವಾದವುಗಳು. ಅವರು ತಳದಿಂದ ಮೇಲಕ್ಕೇರಿದ ಅಧಿಕಾರಿಯಾಗಿದ್ದುದರಿಂದ ಅವರಿಗೆ ಎಲ್ಲ ತರಹದ ಅನುಭವವು ವೆಗ್ಗಳವಾಗಿತ್ತು. ಅವರ ಆ ಅಮೌಲ್ಯವಾದ ಅನುಭವದ ಫಲವು ನಮ್ಮ ರಾಷ್ಟ್ರಕ್ಕೆ ಇನ್ನೂ ಹಲವು ವರ್ಷಗಳ ವರೆಗೆ ಅವಶ್ಯವಾಗಿ ಬೇಕಾಗಿತ್ತೆಂಬುದು ನಮ್ಮ ಪ್ರಾಂಜಲ ಮತ. ಈಶ್ವರೇಚ್ಛೆಗೆ ಉಪಾಯವಿಲ್ಲ. ಅವರ ಕಳೇಬರವು ವಿಮಾನದಿಂದ ದಿಲ್ಲಿಗೆ ತರಲ್ಪಟ್ಟು ಅಲ್ಲಿ ದಿನಾಂಕ ೧೯ರಂದು ಎಲ್ಲ ಸೈನಿಕ ವೈಭವದೊಂದಿಗೆ ಅಂತ್ಯಸಂಸ್ಕಾರವು ಜರುಗಿತು. ಆಗ ದಿಲ್ಲಿಯಲ್ಲಿದ್ದ ಧುರೀಣರೆಲ್ಲರು ಅದರಲ್ಲಿ ಭಾಗ ವಹಿಸಿದ್ದರು. ಅವರ ಧರ್ಮಪತ್ನಿ ಶ್ರೀಮತಿ ಶಾರದಾದೇವಿಯವರಿಗೂ ಅವರ ಮಕ್ಕಳಿಗೂ ಇನ್ನುಳಿದ ಆಪ್ತೇಷ್ಟರಿಗೂ ಹೇಳತೀರದಷ್ಟು ದುಃಖವಾಗಿರಲು ಸಾಕು. ಆ ದುಃಖವನ್ನು ಸಹಿಸಲು ಅವರೆಲ್ಲರಿಗೆ ಪರಮಾತ್ಮನು ಶಕ್ತಿಯನ್ನೀಯಲಿ. ಮಾರ್ಶಲ್ಲರವರ ಆತ್ಮಕ್ಕೆ ದಯಾಘನನಾದ ಪರಮಾತ್ಮನು ಚಿರಶಾಂತಿಯನ್ನು ದಯಪಾಲಿಸಲಿ!

ಪ್ರಶ್ನಾರ್ಥಕ ಚಿಹ್ನ (?)

ಲೇಖಕರು:– **ಶ್ರೀ ಎಲ್. ಎಸ್. ಪಾಟೀಲ,** ಅ. ಎ. ಓ., ಧಾರವಾಡ.

ಮಾನವನಲ್ಲಿ ಜ್ಞಾನೋದಯವಾದಂದಿನಿಂದ ಇಲ್ಲಿಯವರೆಗೆ, ಅಂದರೆ ಶಿಲಾಯುಗದಿಂದ ಸ್ಪುಟ್ನಿಕ್ ಯುಗದವರೆಗೆ, ಅವನು ಬಹುದೂರ ನಡೆದಿದ್ದಾನೆ. ಮತ್ತು ದೊಡ್ಡ ಎತ್ತರಗಳನ್ನು ಕಂಡಿದ್ದಾನೆ. ಜೀವನದ ಎಲ್ಲ ಕ್ಷೇತ್ರಗಳಲ್ಲಿ ಮಾನವನು ಸಾಧಿಸಿದ ಮತ್ತು ಸಾಧಿಸುತ್ತಲಿರುವ ಅತ್ಯದ್ಭುತ ಪ್ರಗತಿಯು ಅವಲಂಬಿಸಿದ್ದುದು ಒಂದೇ ಒಂದು ಚಿಕ್ಕ ಚಿಹ್ನದ ಮೇಲೆ. ಅದುವೇ ಪ್ರಶ್ನಾರ್ಥಕ ಚಿಹ್ನ.

ವಿಮಾನವು ಹವೆಯಲ್ಲಿ ಹೇಗೆ ವಿಹರಿಸುತ್ತದೆ ? ಗಡಿಯಾರವು ಏಕೆ ಟಿಕ್ ಟಿಕ್ ಎನ್ನುತ್ತದೆ ? ರೇಡಿಯೋ

ಹೇಗೆ ಹಾಡುತ್ತದೆ ? ಪೃಥ್ವಿಯ ಕ್ಷೇತ್ರ ಮತ್ತು ಗಾತ್ರಗಳೆಷ್ಟು ? ಚಂದ್ರನ ಮೇಲಿನ ಕಲೆಗಳೇನು ? ಇತ್ಯಾದಿ ಅನೇಕ ಮಕ್ಕಳ ಪ್ರಶ್ನೆಗಳನ್ನು ಪಾಲಕರು ಮತ್ತು ಶಿಕ್ಷಕರು ದಿನಾಲು ಕೇಳಿದ್ದು ಮತ್ತು ಕೇಳುತ್ತಿರುವದು ಹೊಸತಲ್ಲ. ಆದರೆ ಈ ಬಗೆಗೆ ಅವರು ತೆಗೆದುಕೊಂಡ ಕ್ರಮ ಮಹತ್ವದ್ದಾಗಿದೆ.

ಬಾಲಕರ ಪ್ರಶ್ನೆಗಳ ಸುರಿಮಳೆಯು ಅವರಲ್ಲಿಯ ಜ್ಞಾನದ ದಾಹದ ದ್ಯೋತಕವೆಂದು ಪಾಲಕರು ಮತ್ತು ಶಿಕ್ಷಕರು ಅರಿತು ಅದನ್ನು ಆದರಿಸಬೇಕು. ಆದಾಗ್ಯೂ ಪಾಲಕರನೇಕರು ಮತ್ತು ಕೆಲ ಶಿಕ್ಷಕರು ಸಹ ಮಕ್ಕಳ ಪ್ರಶ್ನೆಗಳಿಗೆ ಎಷ್ಟೂ ಮಹತ್ವ ಕೊಡದೆ ಅವು ತೊಂದರೆಯನ್ನುಂಟುಮಾಡುವ ಅನಾವಶ್ಯಕ ಸಾದಾ ವಿಷಯಗಳೆಂದು ಭಾವಿಸಿ, 'ಇಂಥ ಸುಲಭ ತಿಳಿಗೇಡಿ ಪ್ರಶ್ನೆಗಳನ್ನು ಕೇಳಬೇಡ' 'ನನ್ನನ್ನು ಪೀಡಿಸಬೇಡ' 'ಸುಮ್ಮನಾಗು, ಇಲ್ಲದಿದ್ದರೆ ನಿನ್ನನ್ನು ದಂಡಿಸುವೆನು' ಇತ್ಯಾದಿ ಉತ್ತರಗಳನ್ನು ಕೊಟ್ಟು, ಮಕ್ಕಳನ್ನು ಸಮಾಧಾನಪಡಿಸುತ್ತಾರೆ, ಇದರಿಂದ ಸ್ವಲ್ಪ ಸಮಯ ಪ್ರಶ್ನೆಗಳ ತೊಂದರೆ ತಪ್ಪಬಹುದು. ಆದರೆ ಮಕ್ಕಳಲ್ಲಿಯ ಸ್ವಾಭಾವಿಕವಾದ ಜಿಜ್ಞಾಸೆಯ ಪರಿಣಾಮವಾಗಿ ಅವರು ತಮ್ಮ ಪ್ರಶ್ನೆಗಳಿಗೆ ಸಮರ್ಪಕ ಉತ್ತರ ಸಿಗುವವರೆಗೆ ಅಥವಾ ಶಿಕ್ಷೆ ಅಥವಾ ಬೇರೆ ಉಪಾಯಗಳಿಂದ ಸುಮ್ಮನಿರುವಂತೆ ಮಾಡಲ್ಪಡುವವರೆಗೆ ಪ್ರಶ್ನೆಕೇಳುವದನ್ನು ಮತ್ತು ಪೀಡಿಸುವದನ್ನು ಬಿಡುವದಿಲ್ಲ.

ಪ್ರಶ್ನೆಗಳನ್ನು ಕೇಳಿದ್ದಕ್ಕೆ ಪ್ರಾಯಶ್ಚಿತ್ತ ಕೊಡುವದು ಶಿಕ್ಷಕರ ಹಾಗು ಪಾಲಕರನೇಕರ ಪ್ರಮಾದ. ನಮಗೆ ದಣಿವು ಆದಾಗ ಅಥವಾ ಸ್ವಾಸ್ಥ್ಯವಿಲ್ಲದಾಗ ಮಕ್ಕಳ ಮಾತು ಮತ್ತು ಪ್ರಶ್ನೆಗಳಿಂದ ತೊಂದರೆಯಾಗುವದು ನಿಜ. ಆದರೆ ಅವರಪ್ರಶ್ನೆಗಳನ್ನು ಉತ್ತರಿಸುದಿರುವದರಿಂದ ಅವರ ಸಮಸ್ಯೆಯ ಪರಿಹಾರವಾಗದೆ ಅವರಲ್ಲಿಯ ಕುತೂಹಲವನ್ನು ಕೊಂದಂತಾಗುವದು. ಇಂಥ ಪ್ರಸಂಗಗಳಲ್ಲಿ ಕೆಲ ಮಕ್ಕಳು ಸಾಧ್ಯವಾದರೆ ಗಡಿಯಾರವನ್ನು ಒಡೆದು ಅದು ಏಕೆ ಟಿಕ್ ಟಿಕ್ ಎನ್ನುತ್ತದೆಂಬುದನ್ನು ಪರೀಕ್ಷಿಸುವ ಸಂಭವವಿದೆ. ಇನ್ನು ಕೆಲವರು ಚಿಕ್ಕ ವಯಸ್ಸಿನಲ್ಲಿಯೇ ಪಾಲಕರನ್ನು ಬಿಟ್ಟು ಪರರಕಡೆಗೆ ತಮ್ಮ ಪ್ರಶ್ನೆಗಳಿಗೆ ಪರಿಹಾರ ಹುಡುಕಲಾರಂಭಿಸುತ್ತಾರೆ. ದೊಡ್ಡ ಮಕ್ಕಳ ಕೆಲ ಮಹತ್ವದ ಪ್ರಶ್ನೆಗಳಿಗೆ ಪಾಲಕ ಮತ್ತು ಶಿಕ್ಷಕರಿಂದ ಸರಿಯಾದ ಮಾರ್ಗದರ್ಶನವಾಗದಿದ್ದಲ್ಲಿ ಅಥವಾ ಅವರನ್ನು ಬೆದರಿಸಿದಲ್ಲಿ, ಅವರು ಮುಗ್ಧ ಮತ್ತು ಪುಕ್ಕ ಪ್ರಾಣಿಗಳಾಗಿ ಬೆಳೆಯುತ್ತಾರೆ; ಮತ್ತು ಬದುಕುತ್ತಾರೆ.

ಮಕ್ಕಳ ಪ್ರಶ್ನೆ ಕೇಳುವ ಪ್ರವೃತ್ತಿಯನ್ನು ಸಂತೈಸುವ ಒಂದೇ ಒಂದು ಉತ್ತಮ ಮಾರ್ಗವೆಂದರೆ, ಅವರ ಪ್ರಶ್ನೆಗಳಿಗೆ ಸಮರ್ಪಕ ಉತ್ತರ ಕೊಡುವದು. ಗಡಿಯಾರವು ಅದರ ಒಳಗಿರುವ ಯಂತ್ರದ ಕಾರ್ಯದ ಪರಿಣಾಮವಾಗಿ ಟಿಕ್ ಟಿಕ್ ಅನ್ನುತ್ತದೆ ಎಂದು ಹೇಳುವುದು ಸುಲಭವಾಗಿರುವದಲ್ಲವೇ ? ಮಗು ಇದರಿಂದ ಸಮಾಧಾನ ಹೊಂದುವುದು ಸಿದ್ಧ. ಚಿಕ್ಕ ಮಕ್ಕಳ ಪ್ರತಿ ಪ್ರಶ್ನೆಗೆ ಸರಳವಾದ ಉತ್ತರವಿರುತ್ತದೆಂಬುದನ್ನು ಬೇರೆ ಹೇಳಬೇಕಿಲ್ಲ. ಆದರೆ ಈ ಬಗೆಗೆ ಪಾಲಕ ಹಾಗೂ ಶಿಕ್ಷಕರಲ್ಲಿ ಬೇಕಾದುದು ಸ್ವಲ್ಪ ತಾಳ್ಮೆ. ಮನಸ್ಸು ಮತ್ತು ಆಸ್ಥೆ, ಒಂದು ಚಿಕ್ಕ ಸರಿಯಾದ ಉತ್ತರವು ಮಕ್ಕಳ ಜಾಣ್ಮೆಯನ್ನು ಪ್ರಚೋದಿಸಿ ಅವರಲ್ಲಿಯ ಜಿಜ್ಞಾಸೆಯನ್ನು ಸಂತೈಸುವದಲ್ಲದೇ ಪಾಲಕ ಹಾಗು ಶಿಕ್ಷಕರಲ್ಲಿ ವಿಶ್ವಾಸ, ಪ್ರೇಮ ಮತ್ತು ಆದರಗಳನ್ನುಂಟುಮಾಡುತ್ತದೆ.

ಮಕ್ಕಳ ಪ್ರಶ್ನೆಗಳು ಪ್ರತಿದಿನ ಹೆಚ್ಚುತ್ತಾ ಹೋಗುವದು ನಿಜ. ಆದರೆ ಪ್ರತಿ ಪ್ರಶ್ನೆಗೆ ಸಮಂಜಸವಾದ ಉತ್ತರ ಸಿಗುತ್ತಾ ಹೋದರೆ ಮಕ್ಕಳ ಜ್ಞಾನಾಭಿವೃದ್ಧಿಯಾಗಿ ಅವರು ಬೆಳೆದಂತೆ ಅವರಲ್ಲಿ ಶಿಸ್ತು, ಕಾರ್ಯದಕ್ಷತೆ ಇತ್ಯಾದಿಗಳನ್ನುಂಟುಮಾಡಲು ಸುಲಭವಾಗುತ್ತದೆ.

ಮಕ್ಕಳನ್ನು ತರಬೇತುಗೊಳಿಸುವಾಗ ಮತ್ತು ಅವರ ಮಟ್ಟವನ್ನು ಎತ್ತರಿಸಲು ಪ್ರಯತ್ನಿಸುವಾಗ,ಪ್ರಶ್ನಾರ್ಥಕ ಚಿಹ್ನಗಳು ಪಾಲಕರ ಮತ್ತು ಶಿಕ್ಷಕರ ದಾರಿದೀಪಗಳಾಗಬೇಕು. ಪ್ರಶ್ನಾರ್ಥಕ ಚಿಹ್ನವಿಲ್ಲದಿದ್ದರೆ ಮಾನವನು ಸದ್ಯಕ್ಕೆ ಸಾಧಿಸಿದ ಪ್ರಗತಿಯನ್ನು ನಾವು ಕಾಣುತ್ತಿದ್ದಿಲ್ಲ. ಜ್ಞಾನಾರ್ಜನೆಯ ಮಾರ್ಗದಲ್ಲಿ ಮಾನವನನ್ನು ತೊಡಗಿಸಿದ್ದು ಪ್ರಶ್ನಾರ್ಥಕ ಚಿಹ್ನ. ಮಕ್ಕಳನ್ನು ಪ್ರಾಮಾಣಿಕ ಮತ್ತು ಉಪಯುಕ್ತ ನಾಗರಿಕರನ್ನಾಗಿ ಮಾಡಿ ಜಗತ್ತಿನ ಪ್ರಗತಿ ಮತ್ತು ಮಾನವನ ಕಲ್ಯಾಣಕ್ಕಾಗಿ ಅವರನ್ನು ಪರಿಶ್ರಮಿಸಲು ಹಚ್ಚಿದುದು ಪ್ರಶ್ನಾರ್ಥಕ ಚಿಹ್ನ. ಕಾರಣ ಮಕ್ಕಳ ಪ್ರಶ್ನೆಗಳಿಗೆ ಎಲ್ಲರೆ, ವಿಶೇಷನಾಗಿ ಪಾಲಕರ ಮತ್ತು ಶಿಕ್ಷಕರ ಸಹಾನುಭೂತಿ, ಸಹನೆ ಸಾಕಷ್ಟು ಸಿಗಲಿ.

ಪ್ರಶ್ನಾರ್ಥಕ ಚಿಹ್ನವು ಚಿರಾಯುವಾಗಲಿ !
(Long live the Question Mark !)

ಸಮಾಜ ಶಿಕ್ಷಣದ ಪ್ರಸಾರದ ಪ್ರಗತಿ.

ಲೇಖಕರು:- **ಶ್ರೀ ಈಶ್ವರಚಂದ್ರ ಚಿಂತಾಮಣಿ,** ಮುಖ್ಯಗುರುಗಳು; ಜೀವನ ಶಿಕ್ಷಣ ಸಾಲೆ, ಜೈ ನಾಪೂ .

ನಮ್ಮ ಭಾರತದೇಶದ ಏಳ್ಗೆಗೆ-ಕಲ್ಯಾಣ ರಾಜ್ಯದ ರಚನೆಗೆ ಅಶಿಕ್ಷಿತತನವು ಮಹಾ ಸಮಸ್ಯೆಯಾಗಿ-ಅತಂಕವಾಗಿ ಪರಿಣಮಿಸಿರುದೆಂಬುದು ಗೊತ್ತಿದ್ದ ಸಂಗತಿ. ಕೋಟ್ಯಂತರ ಜನ ಭಾರತೀಯರು ಅಕ್ಷರಜ್ಞಾನವಿಲ್ಲದೆ, ತಮ್ಮ ನಾಗರಿಕತೆಯ ಹೊಣೆಗಾರಿಕೆಯ ತಿಳಿವು ಇಲ್ಲದೆ ಇರುವದು ಶುಭವಲ್ಲ. ಕೋಟ್ಯಂತರ ನಿರಕ್ಷರಿ ಭಾರತೀಯರನ್ನು ಸಾಕ್ಷರಿಗಳನ್ನಾಗಿ ಮಾಡಲು, ಇಪರನ್ನು ನವ ನಾಗರಿಕರನ್ನಾಗಿ ಅಣಿಗೊಳಿಸಲು ನಮ್ಮ ಸರಕಾರದವರು ಟೊಂಕಕಟ್ಟಿದ್ದಾರೆ. ' ಸಮಾಜ ಶಿಕ್ಷಣ 'ದ ಆಂದೋಲನ ಪ್ರಸಾರ ಭರದಿಂದ ನಡೆದಿದೆ. ಆದರೆ ' ಸಮಾಜ ಶಿಕ್ಷಣ 'ದ ಪ್ರಗತಿಯು ಕೇವಲ ಸರಕಾರವನ್ನಷ್ಟೇ ಅವಲಂಬಿಸಿರದೆ ಸಮಾಜದಲ್ಲಿಯ ಸುಶಿಕ್ಷಿತ ತರುಣರ-ಹಿರಿಯರ, ಶಿಕ್ಷಣ ಪ್ರೇಮಿಗಳ ಮೇಲೂ ನಿಂತಿರುತ್ತದೆ.

ಜಗತ್ತಿನಲ್ಲಿಯ ಮುಂದುವರಿದ ರಾಷ್ಟ್ರಗಳಲ್ಲಿ ಆಗಿರುವ ಜ್ಞಾನಪ್ರಸಾರದ ಪ್ರಗತಿಯನ್ನು ನೋಡಿದರೆ ಈ ದಿಶೆಯಲ್ಲಿ ನಾವು ತೀರ ಕೆಳಗಿದ್ದೇವೆಂಬುದು ಸ್ಪಷ್ಟ. ಬೇರೆ ಬೇರೆ ದೇಶಗಳಲ್ಲಿಯ ಸುಶಿಕ್ಷಿತರ ಸಂಖ್ಯೆಗಳಿಗೆ ಹೋಲಿಸಿ ನೋಡಿದಾಗ ನಮಗೆ ಅಸಹ್ಯವೆನಿಸುತ್ತದೆ; ಇನ್ನಾದರೂ ನಾವು ಎಚ್ಚರಾಗಬಾರದೇ! ಡೆನ್ಮಾರ್ಕ, ಸ್ವೀಡನ್ ದೇಶಗಳಲ್ಲಿ ಅಶಿಕ್ಷಿತ ಜನರೇ ಶೂನ್ಯ. ಅಂದರೆ ಎರಡೂ ದೇಶಗಳಲ್ಲಿ ಎಲ್ಲರೂ ಸುಶಿಕ್ಷಿತರಿದ್ದಾರೆ. ನ್ಯೂಝಿಲಂಡ, ಜರ್ಮನಿ, ಫಿನ್‌ಲಂಡ್, ಬ್ರಿಟನ್, ಜಪಾನ, ರಷಿಯಾ ಈ ಆರು ದೇಶಗಳಲ್ಲಿ ೧೦೦ಕ್ಕೆ ೯೯ರಂತೆ ಸುಶಿಕ್ಷಿತರಿದ್ದಾರೆ. ಫ್ರಾನ್ಸ ಹಾಗೂ ಆಸ್ಟ್ರೇಲಿಯಾಗಳಲ್ಲಿ ೯೮%, ಅಮೇರಿಕಾ ೯೭%, ಝುಕೋಸ್ಲೋವಿಕಾ ಹಾಗೂ ಕಾನಡಾಗಳಲ್ಲಿ ೯೫%, ಇಟಲಿ ೮೦%, ಸ್ಪೇನ್ ೭೦%, ಸಿಲೋನ ೬೦%, ಬರ್ಮಾ ೫೬%, ಚೀನ ಹಾಗೂ ಮೆಕ್ಸಿಕೋ ೫೦% ಕೊನೆಯದಾದ ನಮ್ಮ ಭಾರತ ದೇಶದಲ್ಲಿ ಮಾತ್ರ ೧೦೦ಕ್ಕೆ ೧೭.೭ ಮಾತ್ರ. ಈ ಅಂಕಿ ಸಂಖ್ಯೆಗಳ ಅವಲೋಕನದಿಂದ ವಿದ್ಯಾಪ್ರಸಾರದಲ್ಲಿ ನಮ್ಮ ಸ್ವಾನಮಾನಗಳ ಕಲ್ಪನೆ ಓದುಗರಿಗೆ ಆಗದಿರದು. ನಮ್ಮ ದೇಶದಲ್ಲಿ ವಿದ್ಯಾಪ್ರಸಾರ ಅತ್ಯಂತ ತೀವ್ರಗತಿಯಿಂದ, ಜವಾಬ್ದಾರಿಯಿಂದ, ಉತ್ಸಾಹದಿಂದ ಸರಕಾರ ಹಾಗೂ ಜನತೆಯಿಂದ ಒಟ್ಟಾಗಿ ನಡೆಯಬೇಕಾಗಿದೆ.

ಶಿಕ್ಷಣ ಪ್ರಸಾರದ ಮಹತ್ಕಾರ್ಯವನ್ನು ದುರ್ಲಕ್ಷಿಸಿದ ಜನರಾಗಲಿ, ದೇಶವಾಗಲಿ ಎಂದಿಗೂ ಮುನ್ನಡೆಯುವದು ಸಾಧ್ಯವಿಲ್ಲ. ಲೋಕದಲ್ಲಿ ಮುಂದುವರೆದ ದೇಶಗಳೆಲ್ಲ ಪ್ರಥಮ ಪ್ರಾಶಸ್ತ್ಯ ಜ್ಞಾನಪ್ರಸಾರಕ್ಕೆ ಕೊಟ್ಟುದುಂಟು. ಆದರೆ ನಮ್ಮ ದೇಶದಲ್ಲಿಯ, ನಮ್ಮ ಸಮಾಜ ಹಾಗೂ ಜನಾಂಗಗಳಲ್ಲಿಯ ಇಂದು ಮೈಗೂಡಿ-ನೈಜವೆತ್ತು ನಿಂತಿರುವ-ನಡೆದಿರುವ ದುರ್ಲಕ್ಷ ಪ್ರವೃತ್ತಿ, ತಾತ್ಸಾರ ಸ್ವಭಾವ, ನಮಗೇಕೆ ಬೇಕು? ' ಎಂಬ ತಿರಸ್ಕಾರ ಈ ರೋದನ ಮೊದಲು ತೊಲಗಬೇಕು. ಸರಕಾರದವರು ಸಾಕ್ಷರತಾ ಪ್ರಸಾರಕ್ಕಾಗಿ ಅನಂತರ ಯೋಜನೆ ಕೈಕೊಂಡಿದ್ದಾರೆ; ಸತತ ಪ್ರಯತ್ನಿಸುತ್ತಾರೆ. ಆದರೆ ದುರ್ದೈವದ ಸಂಗತಿ- ಎಂದರೆ ಸರಕಾರದ ಧ್ಯೇಯ ಧೋರಣೆಗಳ, ದೊರೆವ ಧನದ ದುರಪಯೋಗ ಮಾಡಿಕೊಳ್ಳುವ ನಾವು ಮಹಾ ಪಾಪಕ್ಕೆ ಗುರಿಯಾಗುತ್ತಿದ್ದೇವೆ. ಸಾಕ್ಷರತೆಯ ಪ್ರಸಾರವನ್ನು ಕೇವಲ ಅಂಕಿಗಳ ಮೇಲಿಂದ, ವರ್ಗಗಳ ಸಂಖ್ಯೆಗಳ ಮೇಲಿಂದ ತೃಪ್ತಿಕರವಾಗಿ ಕಂಡುಕೊಂಡರೆ ಸಾಲದು. ಕೇವಲ 'ನೌಕರ ವರ್ಗ 'ದ ಮೇಲಿರುವ ಈ ಹೊಣೆಯನ್ನು ಗ್ರಾಮೀಣ ಸಂಘ ಸಂಸ್ಥೆಗಳು, ಸಮಾಜ ಕಾರ್ಯಕರ್ತರು ಸಹ ಹೊತ್ತು ನೆರವಾಗಬೇಕಾದುದು ಈಗ ಅತ್ಯವಶ್ಯವಿರುತ್ತದೆ. ಯಾಕಂದರೆ ಗ್ರಾಮಗಳಲ್ಲಿಯ ಹೊಣೆಗಾರ ಸಂಘ ಸಂಸ್ಥೆಗಳ ಸೂತ್ರಧಾರರಿಗೆ ಗ್ರಾಮದ ಜನರೆಲ್ಲ ಒಂದಿಲ್ಲೊಂದು ಕಾರಣದಿಂದ ವಿಧೇಯರಾಗಿರುವದರಿಂದ ' ಸಮಾಜ ಶಿಕ್ಷಣ ' ಪ್ರಸಾರ ಕಾರ್ಯಕ್ಕೆ ಸರಪಂಚರ, ಪಾಟೀಲರ, ತಲಾಟಿಗಳ, ಸಹಕಾರಿ ಸಂಘಗಳ ಅಧ್ಯಕ್ಷರ ಪ್ರೋತ್ಸಾಹ ಲಭ್ಯವಾದಲ್ಲಿ ತುಂಬ ಅನುಕೂಲವಾಗಬಲ್ಲದು. ಈ ಹಿರಿಯರು ಮನಸಾರೆ ಯಾವುದನ್ನೂ ತಾವಾಗಿಯೇ ಕೈಗೆತ್ತಿಕೊಳ್ಳುವಷ್ಟು ಆತ್ಮವಿಕಾಸ ವಿಚಾರವಿಕಾಸ ಆದವರು ತೀರ ವಿರಳವೆಂದು ಹೇಳಿದರೆ ತಪ್ಪಾಗದು. ಅವರವರ ಮೇಲಧಿಕಾರಿಗಳಿಂದ 'ಸಮಾಜ 'ಶಿಕ್ಷಣ' ಪ್ರಸಾರ ಮಾಡುವ ಹುಕುಂ-ಕಟ್ಟುನಿಟ್ಟಾಗಿ

ಜಾರಿಯಾದಲ್ಲಿ ಚಾಚೂ ತಪ್ಪದೇ ನೆರವೇರಿಸುವ ಸಾಹಸ ಮಾಡಬಹುದು. ಗ್ರಾಮ ಜೀವನದ ಹಲವು ಮುಖಿ ಗಳನ್ನು, ಹೃದಯವನ್ನು, ಆಗು–ಹೋಗು–ಸ್ಥಿತಿ-ಗತಿ ಗಳನ್ನು ಕಂಡುಂಡ ನಮಗೆ ಹೀಗಾದರೆ ಒಳಿತಾದೀತೆಂದು ಅನಿಸುತ್ತದೆ. ಸಾಕ್ಷರತಾ ಪ್ರಸಾರಕ್ಕಾಗಿ ಸರಕಾರದವರು ಹೊಣೆಗಾರ ವ್ಯಕ್ತಿಗಳನ್ನು ಹಿಡಿಯದೆ ಹೋದರೆ ಇದ್ದ ಸ್ಥಿತಿಯೇ ಮುಂದೆಯೂ ಉಳಿಯಬಹುದಾಗಿದೆ.

ಸಮಾಜ ಶಿಕ್ಷಣವು ಕೇವಲ ಅಕ್ಷರಜ್ಞಾನವಾಗಿರದೆ ಅಶಿಕ್ಷಿತರನ್ನು ಸಾಕ್ಷರರನ್ನಾಗಿ ಮಾಡಿ, ಅವರನ್ನು ನವ ನಾಗರಿಕರನ್ನಾಗಿ ಮಾಡುವದಾಗಿರುತ್ತದೆ. ಸರಕಾರದ ಆದೇಶದ ಪ್ರಕಾರ ಮುಖ್ಯಗುರಿಗಳೆಂದರೆ :

೧) ಓದು, ಬರಿಹ, ಗಣಿತಗಳ ಸಾಮಾನ್ಯ ಜ್ಞಾನ ಮಾಡಿ ಕೊಡುವದು.

೨) ನಿರಕ್ಷರಿಗಳ ಆರ್ಥಿಕ ಸ್ಥಿತಿಗತಿಗಳನ್ನು ಸುಧಾರಿಸುವದು.

೩) ಅವರ ಇರುವಿಕೆಯಲ್ಲಿಯೇ ಶಿಕ್ಷಣ ಕೊಡುವುದು.

ಈ ಗುರಿಗಳ ಸಾಧನೆಯಿಂದ ನಿರಕ್ಷರಿಗಳು ಸಾಕ್ಷರರಾಗಿ ನವನಾಗರಿಕತೆಯ ಹೊಸ್ತಿಲಲ್ಲಿ ಕಾಲಿಡಬೇಕು. ನಾಗರಿಕತೆಯ ಶಿಕ್ಷಣವೇ ಸಮಾಜ ಶಿಕ್ಷಣವಾಗಿದೆ. ಕಲ್ಯಾಣ ರಾಷ್ಟ್ರ ನಿರ್ಮಾಣ ಕಾರ್ಯದಲ್ಲಿ ಅನೇಕ ಪ್ರಯತ್ನಗಳಲ್ಲಿ ಸಮಾಜ ಶಿಕ್ಷಣವೂ ಮಹತ್ವದ ಪಾತ್ರ ವನ್ನು ಹೊಂದಿದೆ. ಆದರೆ ಈ ಮಹತ್ಕಾರ್ಯ ನಿಃಸ್ವಾರ್ಥ ಸೇವೆಯ ಮುಖಾಂತರ ಶೀಘ್ರವಾಗಿ ಸಾಗಿದಲ್ಲಿ ನಮ್ಮ ರಾಷ್ಟ್ರವು ಪ್ರಗತಿ ಪಥದಲ್ಲಿ ಮುನ್ನಡೆಯಲು ಸಮರ್ಥ–ವಾಗುವದು.

ಜನತೆಯ ನಿರಕ್ಷರತ್ವವನ್ನು ಹೊಡೆದೋಡಿಸು ವುದು ಕೇವಲ ಚರ್ಚೆ, ಭಾಷಣ, ಘೋಷಣೆಗಳಿಂದ ಸಾಧ್ಯವಿಲ್ಲ ಎಂಬುದನ್ನು ಶಿಕ್ಷಣ ತಜ್ಞರೆಲ್ಲ ಬಲ್ಲರು. ಪ್ರತ್ಯಕ್ಷ ಕಾರ್ಯಮಾಡಿ ಪ್ರಗತಿ ಸಾಧಿಸಬೇಕಾದ ಪವಿತ್ರ ಕೆಲಸವಿದು.

ಭಾರತದಲ್ಲಿಯ ಅಸಂಖ್ಯಾತ ನಿರಕ್ಷರಿಗಳು ಪ್ರೌಢರು ಸಾಕ್ಷರರಾದಲ್ಲಿ ಅವರಿಂದ ಪ್ರಾಥಮಿಕ ಹಾಗೂ ಮಾಧ್ಯಮಿಕ ಶಿಕ್ಷಣದ ಪ್ರಗತಿಯು ತಾನಾಗಿಯೇ ಆಗುತ್ತದೆ. ಆದುದರಿಂದ ಈ ಹೊಣೆಹೊತ್ತ ಗುರುಗಳು, ಗ್ರಾಮಗಳಲ್ಲಿಯ ಹಿರಿಯರು, ಸಂಘ ಸಂಸ್ಥೆಗಳು ತೀವ್ರ ಗತಿಯಿಂದ ಸಮಾಜ ಶಿಕ್ಷಣ ಪ್ರಸಾರ ಮಾಡುವದು ಅತ್ಯಂತ ಮಹತ್ವದ ಕರ್ತವ್ಯವಾಗಿದೆ.

ಭಾರತದಲ್ಲಿ ಸಮಾಜ ಶಿಕ್ಷಣದ ಆವಶ್ಯಕತೆ

ಲೇಖಕರು :– **ಶ್ರೀ ಎಸ್. ಆರ್. ಮಕರಿ** ಗುರೂಜಿ ಕ. ಗು. ಶಾಲೆ ಮಕರಿ.

ಭಾರತಾದ್ಯಂತ ಡಿಶಂಬರ ತಿಂಗಳ ಮೊದಲನೆಯ ವಾರವನ್ನು ಸಮಾಜಶಿಕ್ಷಣ ಸಪ್ತಾಹವೆಂದು ಆಚರಿಸ–ಲಾಗುತ್ತಿದೆ. ಕೇವಲ ನಿರಕ್ಷರಿಗಳನ್ನು ಸಾಕ್ಷರಿಗಳನ್ನಾಗಿ ಮಾಡುವ ಸಂಕುಚಿತ ಮನೋಭಾವನೆಯನ್ನು ಬಿಟ್ಟು–ಕೊಟ್ಟು ಪ್ರತಿಯೊಬ್ಬ ವ್ಯಕ್ತಿಯೂ ಆಧುನಿಕ ಸಮಾಜ ದಲ್ಲಿ ಸಹಯೋಗ ಪಡೆಯುವಂತೆ ಸಮರ್ಥರನ್ನಾಗಿ ಮಾಡುವದು ಸಮಾಜ ಶಿಕ್ಷಣದ ಆದ್ಯ ಕರ್ತವ್ಯವಾಗಿದೆ. ಸಮಾಜ ಶಿಕ್ಷಣದ ಪ್ರಚಾರ ಕೇವಲ ಶಿಕ್ಷಕ ಅಥವಾ ಶಿಕ್ಷಣ ಕ್ಷೇತ್ರದವರಿಗೆ ಸಂಬಂಧಪಟ್ಟ ವಿಷಯವಾಗಿರದೆ ಪ್ರತಿಯೊಬ್ಬ ನಾಗರಿಕನ ಹೊಣೆಯೆಂದು ಅರಿತಾಗ ಅದರ ಸಿಹಿಫಲ ದೊರೆಯುವದು.

ಶಿಕ್ಷಣವು ಪ್ರತಿಯೊಬ್ಬ ವ್ಯಕ್ತಿಯೂ ಅಭ್ಯಾಸಬಲ–ದಿಂದ ಪಡೆದುಕೊಳ್ಳಬೇಕಾದ ಮೂರನೆಯ ಕಣ್ಣು. ಈ ಜ್ಞಾನ ಚಕ್ಷುವನ್ನು ಪಡೆಯದ ಪ್ರತಿಯೊಬ್ಬನೂ ಮುಂದುವರಿದ ಸಮಾಜದಲ್ಲಿ ಕುರುಡನೇ ಸರಿ. ಆದುದ–ರಿಂದ ಕೇವಲ ಪಶುಗಳಂತೆ ಜೀವನಕ್ಕಾಗಿ ಜೀವನ ಸಾಗಿಸದೆ ಪ್ರತಿಯೊಬ್ಬ ಮನುಷ್ಯನೂ ಆದಿದೈವಿಕ,

ಆದಿಭೌತಿಕ ಹಾಗೂ ಆಧ್ಯಾತ್ಮಿಕ ಬಲವನ್ನು ಜ್ಞಾನ ಸಂಪಾದನೆಯಿಂದ ಪಡೆದುಕೊಳ್ಳಲು ಯತ್ನಿಸಿದಾಗ ಮನುಷ್ಯತ್ವಕ್ಕೆ ಬೆಲೆ ಬಂದೀತು ! ಆದುದರಿಂದ ಸಾಕ್ಷರತೆ ಜ್ಞಾನಸಂಪಾದನೆಗೆ ಸುಲಭ ಸೋಪಾನವು. ಕಾರಣ ಸಮಾಜ ಶಿಕ್ಷಣ ಸಪ್ತಾಹದಲ್ಲಿ ಸಾಕ್ಷರತಾ ಪ್ರಚಾರಕ್ಕೆ ವಿಶೇಷ ಪಾಶಸ್ತ್ಯವನ್ನು ಕೊಡಲಾಗಿದೆ.

ನಮ್ಮ ದೇಶ ಹಳ್ಳಿಗಳನಾಡು. ಶತಮಾನಗಳಕಾಲ ಪರಕೀಯರ ಆಳಿಕೆಗೆ ಒಳಪಟ್ಟು ಹಿಂದುಳಿದ ಪ್ರದೇಶವು. ವೇದವೇದಾಂಗಗಳಿಗೆ ಉಗಮಸ್ಥಾನವಾದ ಆರ್ಯ, ಜೈನ ಹಾಗೂ ಬೌದ್ಧ ಧರ್ಮಗಳಿಗೆ ಮಾತೃಸ್ಥಾನವಾದ ಭಾರತದಲ್ಲಿ ಇಂದು ಅಜ್ಞಾನ ಹಾಗೂ ನಿರಕ್ಷರತೆಯ ತಾಂಡವ ನೃತ್ಯವಾಡುತ್ತಿರುವದು, ಯಾವ ರಾಷ್ಟ್ರಾಭಿಮಾನಿಗೂ ಸಹಿಸದ ವಿಷಯ. ಅಲ್ಲದೆ ಪ್ರತಿಯೊಬ್ಬ ಮಾನವತಾವಾದಿಗೆ ಇದರಿಂದ ದುಃಖವಾಗದೆ ಇರಲಾರದು.

ಭಾರತದಲ್ಲಿಯ ನಿರಕ್ಷರಿಗಳ ಸಂಖ್ಯೆ ಮುಂದುವರಿದ ದೇಶಗಳಾದ ಅಮೇರಿಕಾ, ಇಂಗ್ಲಂಡ, ಜರ್ಮನಿಗಳಲ್ಲಿಯ ಸಾಕ್ಷರರ ಸಂಖ್ಯೆಗೆ ಸರಿಹೋಗುವಂತಿದೆ. ನಿರಕ್ಷರತಾ ನಿರ್ಮೂಲನೆಕಾರ್ಯ ಸ್ವತಂತ್ರಭಾರತದ ಪ್ರಥಮ ಕರ್ತವ್ಯವಾಗಿದೆ. ನಮ್ಮ ದೇಶವು ಪ್ರಜಾಪ್ರಭುತ್ವ ಸಂಪನ್ನ ಸಹಕಾರಿ ಪದ್ಧತಿಯನ್ನು ಆಯ್ದುಕೊಂಡಿದೆ. ಪ್ರತಿಯೊಬ್ಬ ಪ್ರಜೆಯ ಮತಾಭಿಪ್ರಾಯದ ಮೇಲೆ ನಾಡಿನ ಭವಿತವ್ಯ ನಿರ್ಮಾಣವಾಗುತ್ತಲಿದೆ. ಅಂದಮೇಲೆ ಮತಾಭಿಪ್ರಾಯವನ್ನು ವ್ಯಕ್ತಪಡಿಸುವದಕ್ಕೆ ಸಾಕ್ಷರತೆಯ ನಿತಾಂತ ಅವಶ್ಯಕತೆ ಇದೆ. ಭಾರತದಲ್ಲಿ ಪ್ರಜಾಪ್ರಭುತ್ವವು ಯಶಸ್ವಿಯಾಗಬೇಕಾದರೆ ಸಮಾಜ ಶಿಕ್ಷಣದ ಪ್ರಚಾರ ಎಷ್ಟು ಮಾಡಿದರೂ ಕಡಿಮೆಯೇ. ನಿರಕ್ಷರತೆ ನಿರ್ಮೂಲನೆಗೆ ಸಮಾಜ ಶಿಕ್ಷಣವೇ ರಾಮಬಾಣವು.

ಈಗ ನೂರು ವರುಷಗಳ ಹಿಂದೆಯೇ ರಾಜಾರಾಮ ಮೋಹನರಾಯ ಮೊದಲಾದ ರಾಷ್ಟ್ರೀಯ ವಾದಿಗಳು ಈ ದಿಶೆಯಲ್ಲಿ ಪ್ರಯತ್ನಿಸಿರುವದನ್ನು ನಾವು ಇತಿಹಾಸದಿಂದ ಕಂಡಿದ್ದೇವೆ. ಆದರೆ ೨೦ ನೆಯ ಶತಮಾನದ ಪವಾಡ ಪುರುಷರಾದ ಸ್ವಾತಂತ್ರ್ಯಶಿಲ್ಪಿ ಮಹಾತ್ಮಾ ಗಾಂಧೀಜೀಯವರು ತಮ್ಮ ವಿಧಾಯಕ ಕಾರ್ಯಕ್ರಮಗಳಲ್ಲಿ ನಿರಕ್ಷರತಾ ನಿರ್ಮೂಲನೆಗೆ ಪ್ರಥಮ ಪ್ರಾಶಸ್ತ್ಯ ಕೊಟ್ಟಂದಿನಿಂದ ಅದಕ್ಕೆ ವಿಶೇಷ ಕಳೆ ಬಂದಿದೆ.

ಭಾರತದ ಘಟನೆಯಲ್ಲಿ ಕಡ್ಡಾಯದ ಪ್ರಾಥಮಿಕ ಶಿಕ್ಷಣ ತತ್ವವನ್ನು ಒಪ್ಪಿಕೊಂಡು ಆ ದಿಶೆಯಲ್ಲಿ ಸರಕಾರ ಕಾರ್ಯೋನ್ಮುಖವಾಗಿರುವದರಿಂದ ಬೆಳೆಯುತ್ತಿರುವ ಜನಸಂಖ್ಯೆಯ ಮಾನದಿಂದ ನಿರಕ್ಷರತೆಯ ಪ್ರಮಾಣ ಏರದಿರುವದು ಸಮಾಧಾನದ ವಿಷಯವಾಗಿದೆ.

ಸಮಾಜಶಿಕ್ಷಣ ಪ್ರಸಾರದ ಹಿನ್ನೆಲೆಯಲ್ಲಿ ಅದಕ್ಕೊಂದು ಇತಿಹಾಸವೇ ಇದೆ. ೧೯೩೭ ರಲ್ಲಿ ಪ್ರಥಮವಾಗಿ ಕಾಂಗ್ರೆಸ ಸರಕಾರವು ಪ್ರೌಢ ಶಿಕ್ಷಣಕ್ರಮವನ್ನು ಪ್ರಾರಂಭಿಸಿತು. ಹಗಲು ದುಡಿದು ರಾತ್ರಿ ವಿಶ್ರಮಿಸುವ ಕಾಲದಲ್ಲಿ ಅಶಿಕ್ಷಿತರಿಗೆ ಸುಶಿಕ್ಷಿತರು ಅಕ್ಷರಜ್ಞಾನವನ್ನು ಮಾಡಿಕೊಡುವ ನಿರಕ್ಷರತಾ ನಿರ್ಮೂಲನ ಯಜ್ಞ ಪ್ರಾರಂಭವಾಯಿತು. ಸರಕಾರದ ಬೊಕ್ಕಸದ ಬಹುಭಾಗ ಸಾಕ್ಷರತಾ ಪ್ರಸಾರಕ್ಕಾಗಿ ವಿನಿಯೋಗವಾಗುತ್ತ ಬಂದಿದೆ.

ಪ್ರೌಢ ಶಿಕ್ಷಣ ಅಥವಾ ವಯಸ್ಕರ ಶಿಕ್ಷಣ ಪ್ರಸಾರ ಕಾರ್ಯದಲ್ಲಿ ಸಾಕ್ಷರರನ್ನಾಗಿ ಮಾಡುವುದು ಮುಖ್ಯ ಕಾರ್ಯವಾಗಿತ್ತು. ಆದರೆ ಕೇವಲ ಸಾಕ್ಷರರನ್ನಾಗಿ ಮಾಡದೆ ದೇಶದ ಅಭಿವೃದ್ಧಿಯಲ್ಲಿ ಬೆಳೆದುಬಂದ ಸಮಾಜದಲ್ಲಿ ಸಮರ್ಥ ರೀತಿಯಿಂದ ಪ್ರತಿಯೊಬ್ಬ ಪ್ರಜೆಯೂ ಕಾರ್ಯೋನ್ಮುಖನಾಗುವಂತೆ ಪ್ರಯತ್ನಿಸುವದೇ ಸಮಾಜಶಿಕ್ಷಣದ ಆಶೆಯಾಗಿದೆ.

ಸಮಾಜಶಿಕ್ಷಣದಿಂದ ಯಾರೂ ಸರ್ವಜ್ಞರಾಗದಿದ್ದರೂ ಎಲ್ಲರೂ ಸಾರಜ್ಞರಾದರೆ ಸಾಕು. ಅದುವೇ ನಾಡಿನ ಭಾಗ್ಯವೆನ್ನಬೇಕು.

ಸಮಾಜಶಿಕ್ಷಣ ಪ್ರಸಾರದಲ್ಲಿ ಶಾಲೆ, ಕಾಲೇಜುಗಳು ಬಾನುಲಿ ಕೇಂದ್ರಗಳು, ಸಂಘಸಂಸ್ಥೆಗಳು, ಶಿಕ್ಷಣಪ್ರೇಮಿಗಳು, ಒಕ್ಕೊರಲಿನಿಂದ ಕಾರ್ಯೋನ್ಮುಖವಾದರೆ ಅಜ್ಞಾನಾಂಧಕಾರವಳಿದು ಜ್ಞಾನಪ್ರಕಾಶ ಬೆಳಗದಿರದು.

ಸಮಾಜಶಿಕ್ಷಣದಿಂದಲೇ ಸಮಾಜೋದ್ಧಾರವಾಗಬಲ್ಲದು.

— ಜಯ ಹಿಂದ —

ಪಂಚಾಂಗ ಪ್ರಕರಣ

ಪರಿಚಯಕಾರರು:— ಶ್ರೀ ಬೇವೂರ ಹನುಮಂತಜೋಯ್ಸರು

ದಿನಾಲು ನಿಮ್ಮ ಶಾಲೆಯಲ್ಲಿ ಪಂಚಾಂಗವನ್ನು ಹೇಳುವಿರಷ್ಟೇ! ಆ ಪಂಚಾಂಗದ ಪಂಚ (೫) ಅಂಗಗಳಾವವು ಎಂಬುದನ್ನು ಸರಿಯಾಗಿ ವಿವರವಾಗಿ ತಿಳಿದಿರಬೇಕಾದುದು ಅವಶ್ಯವಿದೆ. ತಿಥಿ, ವಾರ, ನಕ್ಷತ್ರ, ಯೋಗ, ಕರಣ ಇವೇ ಆ ಪಂಚಾಂಗದ ಪಂಚ ಅಂಗ ಅಂಗಗಳು. ಈ ಪಂಚ ಅಂಗಗಳಲ್ಲಿಯೂ ಶುಭಾಶುಭ ಗಳಿವೆ. ಐದು ಅಂಗಗಳೂ ಶುಭವಾಗಿ ಇದ್ದದಿನ ಯಾವು ದಾದರೊಂದು ಕಾರ್ಯವನ್ನು ಮಾಡಿದರೆ, ಅದು ಫಲದ್ರೂಪವೂ ಸಿದ್ಧಿಯದೂ ಆಗುವದು. ಅಂಥ ಐದು ಅಂಗಗಳೂ ಶುಭವಾಗಿರುವ ದಿನವು ಕೂಡಿ ಬರುವದು ತೀರ ಅಪರೂಪವು. ಹಾಗೆ ಕೂಡಿಬಂದಲ್ಲಿ ಅದು ಅತ್ಯುತ್ತಮ ಯೋಗವು. ಒಂದು ವೇಳೆ ಈ ಯೋಗವು ಒದಗಿ ಬರದಿದ್ದು ಈ ಐದು ಅಂಗಗಳಲ್ಲಿ ಕೆಲವಾದರೂ ಶುಭವಾಗಿದ್ದರೆ ಬಹುಮಟ್ಟಿಗೆ ಒಳ್ಳೆಯ ಕಾರ್ಯವಾಗುವದು. ಪಂಚ ಅಂಗಗಳೂ ಶುದ್ಧಿ ಇಲ್ಲದ ದಿವಸ ಯಾವುದಾದರೂ ಒಂದು ಮಹತ್ವದ ಕಾರ್ಯ ಕೈಕೊಂಡರೆ ಆ ಕಾರ್ಯವು ಕೈಗೂಡಲಾರದು. ಕಾರ್ಯಕ್ಕೆ ವಿಘ್ನಗಳೂ ಬಹಳ. ಆದುದರಿಂದ ಆ ಪಂಚ ಅಂಗಗಳ ಪರಿಚಯವನ್ನು ಚನ್ನಾಗಿ ಮಾಡಿಕೊಂಡಿರಬೇಕು. ಅವುಗಳನ್ನು ಒಂದೊಂದಾಗಿ ಅವಲೋಕಿಸುವಾ.

ತಿಥಿ

ಸಾಮಾನ್ಯತಃ ನಾವು ಪ್ರತಿಪದೆಯಿಂದ ಪೌರ್ಣಿಮೆಯ ವರೆಗೆ ಆಗುವ ಹದಿನೈದು ದಿನಗಳಿಗೆ ಹದಿನೈದು ತಿಥಿಗಳೆಂದು ಕರೆಯುತ್ತೇವೆ. ಅವೇ ಹದಿನೈದು ತಿಥಿಗಳು ಹುಣ್ಣಿಮೆಯ ಮರುದಿನದಿಂದ ಅಮವಾಸ್ಯೆಯ ವರೆಗೆ ಪುನಃ ಬರುತ್ತವೆ. ಒಂದು ದಿನವು ಕಳೆದು ಮತ್ತೊಂದು ದಿನವು ಉದಯವಾದರೆ ನಾವು ಒಂದು ತಿಥಿ ಎಂದು ಹೇಳುತ್ತೇವೆ. ಉದಾಹರಣೆಗಾಗಿ ಸೋಮವಾರ ಪ್ರತಿಪದೆಯೆಂದು ತಿಳಿಯುವಾ, ಮಂಗಳವಾರ ಬೆಳಗು ಬಂದೊಡನೆಯೇ ನಾವು ಪ್ರತಿಪದೆಯು ಹೋಗಿ ದ್ವಿತಿಯಾ ತಿಥಿಯು ಬಂದಿತೆಂದು ಹೇಳುತ್ತೇವೆ. ಆದರೆ ಇದು ಸಾಮಾನ್ಯ ರೂಢಿಯ ಲೆಕ್ಕವು. ಶಾಸ್ತ್ರಶುದ್ಧವಾಗಿ ತಿಥಿಯ ಗಣನೆಯನ್ನು ಹೀಗೆ ಮಾಡುತ್ತಾರೆ. ರವಿ ಚಂದ್ರರ ಯುತಿಯೇ ಅಮವಾಸ್ಯೆಯು. ಯುತಿಯೆಂದರೆ ಒಂದೇ ರಾಸಿಯಲ್ಲಿ ಒಂದೇ ಅಂಶದ ಮೇಲೆ ಇರುವದು. ರವಿ ಚಂದ್ರರು ಎಂದು ಯಾವ ವೇಳೆಯಲ್ಲಿ ಒಂದೇ ರಾಶಿಯಲ್ಲಿ ಒಂದೇ ಅಂಶದ ಮೇಲೆ ಬರುವರೋ ಅಂದು ಆ ಕಾಲಕ್ಕೆ ಅಮವಾಸ್ಯೆಯಾಗುವದು. ಚಂದ್ರನು ದಿನಾಲು ತೀವ್ರಗತಿಯಿಂದ ಅಂದರೆ ೧೨ ರಿಂದ ೧೬ ಅಂಶಗಳ ವರೆಗೆ ಚಲಿಸುತ್ತಾನೆ. ರವಿಯು ದಿನಾಲು ೧ ಅಂಶ ಹೋಗುತ್ತಾನೆ. ರವಿ ಚಂದ್ರರ ಗತಿಯಲ್ಲಿ ೧೨ ಅಂಶಗಳ ಅಂತರವಾದೊಡನೆಯೇ ಒಂದು ತಿಥಿಯಾದ ಹಾಗೆ. ಒಂದು ತಿಥಿಯಾಗಬೇಕಾದರೆ ಅವರಿಬ್ಬರಲ್ಲಿ ಸರಿಯಾಗಿ ೧೨ ಅಂಶಗಳ ಅಂತರ ವಿರಬೇಕು. ತಿಥಿಗಳ ಕ್ಷಯ ವೃದ್ಧಿಗಳಿಗೆ ಈ ರವಿ ಚಂದ್ರರ ಗತಿಯೇ ಕಾರಣವು. ಚಂದ್ರನು ಒಮ್ಮೊಮ್ಮೆ ಒಂದು ದಿನಕ್ಕೆ ೧೬ ಅಂಶದಷ್ಟು ಮುಂದೆ ಹೋಗುತ್ತಾನೆ. ರವಿಯು ಮಾತ್ರ ಒಂದು ದಿನಕ್ಕೆ ಒಂದೇ ಅಂಶ ಹೋಗುತ್ತಾನೆ. ಹೀಗಾದಲ್ಲಿ ಅವರಿಬ್ಬರ ನಡುವಿನ ಅಂತರವು ೧೫ ಅಂಶಗಳಷ್ಟು ಆಗಿ ಬಿಡುತ್ತದೆ ಒಂದು ತಿಥಿಗೆ ಹನ್ನೆರಡೇ ಅಂಶಗಳ ಅಂತರ ಸಾಕು. ೩ ಅಂಶ ಹೆಚ್ಚು ಅಂತರವಾಗಿ ಬಿಡುವದರಿಂದ ಆ ತಿಥಿಯು ಹೋಗಿ ಆಗಲೇ ಬೇರೊಂದು ತಿಥಿಯು ಅಂದೇ ಬಂದು ಬಿಟ್ಟಿರುತ್ತದೆ. ತಿಥಿಗಳ ಕ್ಷಯ ವೃದ್ಧಿಯು ಈ ತೆರನಾಗಿ ಆಗುವದುಂಟು. ಸಾಮಾನ್ಯತಃ ನಾವು ಸೂರ್ಯೋದಯಕ್ಕೆ ಯಾವ ತಿಥಿ ಇರುವದೋ ಅದನ್ನೇ ಇಡೀ ದಿವಸದ ತಿಥಿಯೆಂದು ಗಣಿಸುತ್ತೇವೆ. ಮತ್ತೊಂದು ತಿಥಿಯನ್ನು ಮರುದಿನದ ಸೂರ್ಯೋದಯಕ್ಕೇ ಹಿಡಿಯುತ್ತೇವೆ.

ತಿಥಿಗಳು ಒಟ್ಟು ಹದಿನೈದು ಎಂದು ಈ ಮೊದಲೇ ಹೇಳಿದೆಯಷ್ಟೇ? ಅವು ಯಾವವು ಎಂಬುದನ್ನು ಇಲ್ಲಿ ನೋಡುವಾ.

[೧] ಪ್ರತಿಪದೆ [೨] ದ್ವಿತಿಯಾ [೩] ತೃತಿಯಾ [೪] ಚತುರ್ಥಿ [೫] ಪಂಚಮಿ [೬] ಷಷ್ಠಿ [೭] ಸಪ್ತಮಿ [೮] ಅಷ್ಟಮಿ [೯] ನವಮಿ [೧೦] ದಶಮಿ

[೧೧] ಏಕಾದಶಿ [೧೨] ದ್ವಾದಶಿ [೧೩] ತ್ರಯೋದಶಿ [೧೪] ಚತುರ್ದಶಿ [೧೫] ಪೌರ್ಣಿಮಾ. ಪೌರ್ಣಿಮೆಯ ಮರುದಿನದಿಂದ ಅಮವಾಸ್ಯೆಯ ವರೆಗೆ ಪುನಃ ಅವೇ ತಿಥಿಗಳಿಂದ ಗಣನೆ ಮಾಡುತ್ತಾರೆ. ಅಮವಾಸ್ಯೆಯ ಮರುದಿನದ ಪ್ರತಿಪದೆಯಿಂದ ಪೌರ್ಣಿಮೆಯ ವರೆಗೆ ಬರುವ ಹದನೈದು ದಿನಗಳಿಗೆ ಶುಕ್ಲಪಕ್ಷವೆಂದೂ, ಪೌರ್ಣಿಮೆಯ ಮರುದಿನದ ಪ್ರತಿಪದೆಯಿಂದ ಅಮವಾಸ್ಯೆಯ ಹದಿನೈದು ದಿನಗಳಿಗೆ ಕೃಷ್ಣಪಕ್ಷವೆಂದೂ ಕರೆಯುವರು. ಪಂಚ ಅಂಗಗಳಲ್ಲಿ ಶುಭಾಶುಭಗಳಿರುತ್ತವೆಂದು ಮೇಲೆ ಹೇಳಿದೆಯಷ್ಟೇ? ತಿಥಿಗಳಲ್ಲಿಯೂ ಶುಭಾಶುಭಗಳುಂಟು.

ಶುಭ ತಿಥಿಗಳು:-ದ್ವಿತಿಯಾ ತೃತಿಯಾ, ಪಂಚಮಿ ಸಪ್ತಮಿ, ದಶಮಿ, ದ್ವಾದಶಿ, ತ್ರಯೋದಶಿ,

ಅಶುಭ ತಿಥಿಗಳು :— ಚತುರ್ಥಿ, ಷಷ್ಠಿ, ಅಷ್ಟಮಿ, ನವಮಿ, ದ್ವಾದಶಿ, ಚತುರ್ದಶಿ. ಪ್ರತಿಪದೆಯಲ್ಲಿ ಕೃಷ್ಣ ಪ್ರತಿಪದೆಯು ಶುಭವೂ, ಶುಕ್ಲಪ್ರತಿಪದೆಯು ಅಶುಭವೂ ಆಗಿರುವದು.ವೃದ್ಧಿಕ್ಷಯಗಳಿದ್ದಲ್ಲಿ ಶುಭವೂ ಕೂಡಾ ಅಶುಭವಾಗುವದು. ಕೆಲವರು ದ್ವಾದಶಿ ತಿಥಿಯನ್ನು ಶುಭವೆಂದೂ ಹೇಳುವರು. ವಿಶೇಷತಃ ಕೃಷ್ಣಪಕ್ಷದ ದ್ವಾದಶಿಯಿಂದ ಅಮವಾಸ್ಯೆ ಪೂರ್ಣ ನಾಲ್ಕು ದಿನಗಳು ಸಾಮಾನ್ಯತಃ ಅಶುಭವೆಂದು ಹೇಳುವರು. ಏಕಂದರೆ ಈ ಕಾಲದಲ್ಲಿ ಚಂದ್ರನು ಬಲಹೀನನಾಗಿರುತ್ತಾನೆ.

ವಾರ

ಸುರ್ಯೋದಯದಿಂದ ಸೂರ್ಯೋದಯದ ವರೆಗಿನ ಕಾಲವು ಒಂದು ವಾರವೆನಿಸುವದು. ಒಟ್ಟು ಏಳು ವಾರಗಳುಂಟು. ರವಿವಾರ, ಚಂದ್ರವಾರ, ಮಂಗಳವಾರ ಬುಧವಾರ, ಗುರುವಾರ, ಶುಕ್ರವಾರ, ಶನಿವಾರ ಇವೇ ಆ ಏಳು ವಾರಗಳು. ಇವುಗಳಲ್ಲಿ ಸೋಮವಾರ, ಬುಧವಾರ, ಗುರುವಾರ, ಶುಕ್ರವಾರಗಳು ಶುಭವಾರಗಳು. ರವಿವಾರ, ಮಂಗಳವಾರ, ಶನಿವಾರಗಳು ಅಶುಭವಾರಗಳು.

ಪೃಥ್ವಿಯು ಮಧ್ಯಬಿಂದುವೆಂದು ತಿಳಿದು ಶನಿಯಿಂದ ಆದಿಯಾಗಿ ಸಪ್ತಗ್ರಹಗಳು ತಿರುಗುವೆಂದು ನಮ್ಮ ಪ್ರಾಚೀನರ ತಿಳವಳಿಕೆ. ಇವುಗಳಲ್ಲಿ ಎಲ್ಲಕ್ಕೂ ಮಂದಗತಿಯ ಗ್ರಹವೆಂದರೆ ಶನಿಯು. ಅವನಿಗಿಂತ ತೀವ್ರಗತಿಯುಳ್ಳವನು ಗುರುವು. ಅಲ್ಲಿಂದ ಮಂಗಳ, ರವಿ, ಶುಕ್ರ, ಬುಧ, ಚಂದ್ರರು ಅನುಕ್ರಮವಾಗಿ ಹೆಚ್ಚೆಚ್ಚು ತೀವ್ರಗತಿಯುಳ್ಳವರಾಗಿದ್ದಾರೆ. ಈ ಕ್ರಮದಲ್ಲಿ ಶನಿಯಿಂದ ನಾಲ್ಕನೆಯವನು ರವಿಯು. ಅವನು ಮೊದಲನೆಯ ದಿವಸದ ಅಧಿಪತಿಯಾಗುವನು. ಇದೇ ಕ್ರಮದಲ್ಲಿ ಎಣಿಸಲು ಅಂದರೆ ರವಿಯಿಂದ ನಾಲ್ಕನೆಯವನು ಎರಡನೆಯ ದಿವಸದ ಅಧಿಪತಿಯು. ಚಂದ್ರನಿಂದ ನಾಲ್ಕನೆಯವನು ಮಂಗಳನಾಗುವನು. ಈ ಕ್ರಮದಲ್ಲಿ ವಾರಗಳ ಉತ್ಪತ್ತಿಯನ್ನು ಹೇಳುವರು.

ಒಂದು ದಿವಸಕ್ಕೆ ೨೪ ತಾಸುಗಳಿರುವವು. ಅವುಗಳಿಗೆ 'ಹೋರಾ' ಎನ್ನುವರು. ಶನಿವಾರ ದಿವಸದ ಮೊದಲನೆಯ ತಾಸು ಶನಿಯ ಹೋರಾ ಇರುತ್ತದೆ. ಹೋರಾಗಳನ್ನು ಎಣಿಸುವ ಕ್ರಮ,- ಅರ್ಕ, ಶುಕ್ರ, ಬುಧ, ಚಂದ್ರ, ಮುಂದಜೀವ (ಗುರು), ಧರಾಸುತ (ಮಂಗಳ). ಶನಿವಾರದಿವಸ ಶನಿಯಿಂದ ಆರಂಭಮಾಡಿ ಹೋರೆಗಳನ್ನು ಎಣಿಸಿದರೆ ಒಂದು ದಿವಸದಲ್ಲಿ ಈ ಹೋರೆಗಳು ಮೂರುಸಾರೆ ಬರುವವು. ದಿವಸದಲ್ಲಿ ೨೪ ತಾಸುಗಳಿರುವವು. ೩ ಬಾರಿಗೆ ೨೧ ತಾಸುಗಳಿರುವವು. ಇನ್ನುಳಿದ ಮೂರು ತಾಸುಗಳಿಗೆ ಹೋರಾ ಕ್ರಮದಿಂದ ಎಣಿಸಿದಲ್ಲಿ ೩ ಹೋರೆಗಳಲ್ಲಿ ಆ ದಿವಸವು ಮುಗಿಯುವದು. ೪ ನೆಯ ಹೋರಾಧಿಪತಿಗೆ ೨ ನೇ ದಿವಸವು ಸುರುವಾಗುವದು.ಆದ್ದರಿಂದ ೪ನೆಯ ಹೋರಾಧಿಪತಿಯೇ ಮರುದಿನದ ಅಧಿಪತಿ ಯಾಗುವನು. ಆದ್ದರಿಂದ ಶನಿ ಆದಿಯಿಂದ ಗ್ರಹಕ್ರಮದಲ್ಲಿ ೪ ನೇಯವನು ರವಿಯಾಗುವನು. ಆದ್ದರಿಂದ ಶನಿವಾರದ ನಂತರ ಬರುವ ವಾರವು ರವಿವಾರವು. ಈ ತೆರನಾಗಿ ವಾರಗಳ ಉತ್ಪತ್ತಿಯನ್ನು ಹೇಳುವರು.

ನಕ್ಷತ್ರ

ಪೃಥ್ವಿಯ ಮಧ್ಯರೇಖೆಗೆ ವಿಷುವವೃತ್ತವೆನ್ನುವರು. ಆ ವಿಷುವವೃತ್ತಕ್ಕೆ ೨೩½ ಅಂಶ ಕೋನ ಮಾಡಿಕೊಂಡು ಪೃಥ್ವಿಯು ತಿರುಗುವದು. ಈ ಭ್ರಮಣ ಮಾರ್ಗಕ್ಕೆ ಕ್ರಾಂತಿ ವೃತ್ತವೆನ್ನುವರು. ಈ ಕ್ರಾಂತಿ ವೃತ್ತದಲ್ಲಿ ೩೬೦ ಅಂಶಗಳನ್ನು ಮಾಡುವರು. ಇದಕ್ಕೆ ೨೭ರಿಂದ ಭಾಗಿಸಿದರೆ ೧೩೨೦ ಅಂಶವು ಕ್ರಾಂತಿವೃತ್ತದ ಭಾಗವು. ಈ ಭಾಗವು ಒಂದು ನಕ್ಷತ್ರವೆನಿಸುತ್ತದೆ. ಚಂದ್ರನು ಆಯಾ ಭಾಗದಲ್ಲಿ ಹಾಯ್ದು ಹೋಗುವಾಗ ಆ ನಕ್ಷತ್ರವೆನ್ನುವರು.

ಒಟ್ಟು ಕ್ರಾಂತಿವೃತ್ತ ಪ್ರದೇಶದಲ್ಲಿ ಇಪ್ಪತ್ತೇಳು ನಕ್ಷತ್ರಗಳಿವೆ.

೧) ಅಶ್ವಿನಿ ೨) ಭರಣಿ ೩) ಕೃತ್ತಿಕಾ ೪) ರೋಹಿಣಿ ೫) ಮೃಗಶಿರಾ ೬) ಆರಿದ್ರಾ ೭) ಪುನರ್ವಸು ೮) ಪುಷ್ಯ ೯) ಆಶ್ಲೇಷಾ ೧೦) ಮಘಾ ೧೧) ಪೂರ್ವಾ (ಹುಬ್ಬಿ) ೧೨) ಉತ್ತರಾ ೧೩) ಹಸ್ತಾ ೧೪) ಚಿತ್ತಾ ೧೫) ಸ್ವಾತಿ ೧೬) ವಿಶಾಖಾ ೧೭) ಅನುರಾಧಾ ೧೮) ಜ್ಯೇಷ್ಠಾ ೧೯) ಮೂಲಾ ೨೦) ಪೂರ್ವಾಷಾಢ ೨೧) ಉತ್ತರಾಷಾಢ ೨೨)ಶ್ರವಣಾ ೨೩) ಧನಿಷ್ಠಾ ೨೪) ಶತತಾರಾ ೨೫) ಪೂರ್ವಾಭಾದ್ರಪದಾ ೨೬) ಉತ್ತರಾಭಾದ್ರಪದಾ ೨೭) ರೇವತಿ.

ಈ ಇಪ್ಪತ್ತೇಳು ನಕ್ಷತ್ರಗಳಲ್ಲದೆ ಅಭಿಜಿತು ಎಂಬ ಇಪ್ಪತ್ತೆಂಟನೆಯ ನಕ್ಷತ್ರವನ್ನು ಹೇಳುವರು. ಈ ಇಪ್ಪತ್ತೆಂಟು ನಕ್ಷತ್ರಗಳೂ ಕ್ರಾಂತಿವೃತ್ತ ಪ್ರದೇಶದಲ್ಲಿಯೇ ಬರುವವು. ಕ್ರಾಂತಿ ವೃತ್ತ ಪ್ರದೇಶವನ್ನು ಬಿಟ್ಟು ಇನ್ನೂ ಕೆಲವು ಸ್ಥಿರ ತಾರೆಗಳು ಉಂಟೆಂದು ಕಂಡು ಹಿಡಿದಿದ್ದಾರೆ. ಪಾಶ್ಚಾತ್ಯರು ೭೨ ಸ್ಥಿರ ತಾರೆಗಳುಂಟೆಂದು ಹೇಳುವರು. ನಮ್ಮವರೂ ಕೂಡ ಕೆಲವು ಸ್ಥಿರ ತಾರೆಗಳನ್ನು ಹೇಳಿದ್ದಾರೆ. ಅಗಸ್ತ್ಯ, ಬ್ರಹ್ಮ, ಹೃದಯ ಮೊದಲಾದ ಕ್ರಾಂತಿವೃತ್ತ ಪ್ರದೇಶವನ್ನು ಬಿಟ್ಟು ಇದ್ದ ಸ್ಥಿರತಾರೆಗಳು, ಪೌರ್ವಾತ್ಯರು ಹೇಳಿದ ತಾರೆಗಳು. ಪ್ರತಿಯೊಂದು ನಕ್ಷತ್ರಕ್ಕೂ ನಾಲ್ಕು ಚರಣಗಳುಂಟು. ಒಂದು ಚರಣವೆಂದರೆ ೩ ಅಂಶ ೨೦ ಕಲೆಗಳು.

ಶುಭ ನಕ್ಷತ್ರಗಳು :– ಅಶ್ವಿನಿ, ರೋಹಿಣಿ, ಮೃಗಶಿರಾ, ಪುನರ್ವಸು, ಪುಷ್ಯ, ಉತ್ತರಾ, ಹಸ್ತಾ, ಚಿತ್ತಾ, ಸ್ವಾತಿ, ಅನುರಾಧಾ, ಉತ್ತರಾಷಾಢಾ, ಶ್ರವಣಾ ಧನಿಷ್ಠಾ, ಶತತಾರಾ, ಉತ್ತರಾಭಾದ್ರಪದ, ರೇವತಿ,

ಅಶುಭ ನಕ್ಷತ್ರಗಳು :– ಭರಣಿ, ಕೃತ್ತಿಕಾ, ಆರಿದ್ರಾ, ಆಶ್ಲೇಷಾ, ಮಘಾ, ಪೂರ್ವಾ, ವಿಶಾಖಾ, ಜ್ಯೇಷ್ಠಾ, ಮೂಲಾ, ಪೂರ್ವಾಷಾಢ, ಪೂರ್ವಾಭಾದ್ರಪದ.

ಮೇಲ್ಕಾಣಿಸಿದ ಈ ಶುಭಾಶುಭ ನಕ್ಷತ್ರಗಳಲ್ಲಿ ಮತ್ತೆ ಕೆಲಗುಣಧರ್ಮಗಳಿಂದ ಅವುಗಳ ವರ್ಗೀಕರಣ ಮಾಡುವರು. ಒಂದೊಂದು ಕಾರ್ಯವನ್ನು ಆ ಕಾರ್ಯದ ಗುಣಧರ್ಮ ನೋಡಿಕೊಂಡು ಆ ಗುಣಧರ್ಮದ ನಕ್ಷತ್ರಗಳಲ್ಲಿ ಕೈಕೊಳ್ಳುವದುಂಟು. ಆ ವರ್ಗೀಕರಣವನ್ನು ಇಲ್ಲಿ ಅವಲೋಕಿಸುವಾ.

(ಮುಂದುವರಿಯುವದು.)

[ಳನೆಯ ಪುಟದಿಂದ ಬಂದುದು]

ಇಂಥ ಬೃಹತ್ ಕಾರ್ಯಕ್ಕೆ ಧನವೂ ಬೇಕು. ಸ. ಶಿ. ಸಪ್ತಾಹ ಆಚರಣೆಯ ಸಂದರ್ಭದಲ್ಲಿ ಧನ ಸಂಚಯದ ಕಾರ್ಯವೂ ನಡೆಯುವದು. ಸಿರಿವಂತರೂ ಬಡವರೂ ಕೂಡಿಯೇ ಧನನೀಡಬೇಕು. 'ಹನಿಗೆ ಹನಿ ಕೂಡಿದರೆ ಹಳ್ಳ 'ವೆಂಬ ಗಾದೆಯಂತೆ ಸಣ್ಣವರಿಂದಲೂ ಬೃಹತ್ ಕಾರ್ಯಗಳಾಗುತ್ತವೆ. ಏಕೀಕೃತವಾದಲ್ಲಿ– "ಪತ್ರಂ ಪುಷ್ಪಂ ಫಲಂ ತೋಯಂ !" ಎಂಬಂತೆ ಎಷ್ಟೇ ಕೊಡಲಿ ಭಕ್ತಿಯಿಂದ ಕೊಡುವ ಮನಸ್ಸಾಗಲಿ. ಬೇಡುವದರ ಜೊತೆಗೆ ಕೊಡುವ ಬುದ್ಧಿಯೂ ನಮ್ಮಲ್ಲಿ ಬೆಳೆದು ಬರಬೇಕು. ಈ ಸಪ್ತಾಹದಲ್ಲಿ ನಿಮ್ಮ ಕೈಯಿಂದಾದಷ್ಟು ಧನ ಸಹಾಯ ನೀಡುವಿರಾಗಿ ನಂಬಿದ್ದೇನೆ.

ಕೊನೆಯದಾಗಿ ಇಂಥ ಕಾಯಕವನ್ನು ಕೈಕೊಳ್ಳುವಲ್ಲಿ ಅನೇಕ ಅಡಚಣೆಗಳು ತಲೆದೋರಬಹುದು. ಯೋಗ್ಯ ಪ್ರತಿಫಲವೂ ದೊರೆಯಲಿಕ್ಕಿಲ್ಲ. ವಿಶೇಷವಾಗಿ ಪ್ರಾಥಮಿಕ ಶಿಕ್ಷಕರಿಗೆ ಈ ಕಾಯಕವು ತುಂಬಾ ಕಷ್ಟದಾಯಕವೆನಿಸಬಹುದು. ಆದರೆ ಕಳೆದ ಒಂದು ದಶಕವನ್ನು ನಾವು ಸಿಂಹಾವಲೋಕನಕ್ರಮದಿಂದ ನಿರೀಕ್ಷಿಸಿದಲ್ಲಿ ಈ ಕಾಯಕವನ್ನು ಕೈಕೊಂಡವರು ವಿಶೇಷವಾಗಿ ಪ್ರಾಥಮಿಕ ಶಿಕ್ಷಕರೇ ಎಂದು ಕಂಡು ಬರುತ್ತದೆ. ಹೊರಗಿನವರೂ ಇರಬಹುದು; ಆದರೆ ಅವರ ಸಂಖ್ಯೆ ಕಡಿಮೆ. ಇಷ್ಟರಿಂದ ತೃಪ್ತಿ ಪಡದೆ ಇನ್ನೂ ಮುನ್ನುಗ್ಗಬೇಕಾಗಿದೆ. ಆದ್ದರಿಂದ ಇಂಥ ರಾಷ್ಟ್ರ ಸೇವಾ ಕಾರ್ಯವನ್ನು ತ್ಯಾಗ, ಸೇವಾಭಾವಗಳ ಬುದ್ಧಿಯಿಂದ ಕೈಕೊಳ್ಳಬೇಕು. ತ್ಯಾಗ, ಸೇವಾ, ಬುದ್ಧಿಗಳು ಎಷ್ಟು ದೃಢತರವಾಗುವವೋ ಅಷ್ಟಷ್ಟು ಈ ಕಾರ್ಯವು ಯಶಸ್ವಿಯಾದೀತು! ಆದುದರಿಂದ ತ್ಯಾಗ ಸೇವೆಗಳು ನಿಮ್ಮ ಗುರಿಗಳಾಗಿರಲಿ. ಪರಮಾತ್ಮನು ಅಂಥ ಸದ್ಬುದ್ಧಿಯನ್ನು ನಿಮಗೆ ದಯಪಾಲಿಸಲಿ. ಈ ಸಪ್ತಾಹದಲ್ಲಿ ಆ ಬುದ್ಧಿಯ ಜಾಗ್ರತೆಯಾಗಲಿ ಎಂದು ಹಾರೈಸಿ ಈ ನಿಮ್ಮ ಸಪ್ತಾಹವು ಉದ್ಘಾಟಿತವಾಯಿತೆಂದು ಉದ್ಘೋಷಿಸುವೆ.

— ಜೈ ಹಿಂದ —

ಗಂ ಕವಿತಾ ಸಂಕಲನ ೧೫೦ **ನಾವು ನಮ್ಮವರು** ಭಾಗ ೨ ಕಥಾ ಸಂಕಲನ ೧೫೦

(ಪ್ರಾಥಮಿಕ ಶಿಕ್ಷಕ ಸಾಹಿತಿಗಳ ಫೋಟೊ ಪರಿಚಯ ಕಥೆ ಕವನಗಳು)

ಮಾನ್ಯ ಎ. ಸಿ. ದೇವೇಗೌಡರು ಶಿಕ್ಷಣಾಧಿಕಾರಿಗಳು [D. P. I.] ಮೈಸೂರು ರಾಜ್ಯ ಅವರ ಮುನ್ನುಡಿ.

ಮಾನ್ಯ ಸಿದ್ಧಯ್ಯ ಪುರಾಣಿಕ 'ಕಾವ್ಯಾನಂದ'ರು ಡಿ. ಸೆಕ್ರೆಟರಿ ಶಿಕ್ಷಣ ವಿಭಾಗ ಇವರ ಹಿನ್ನುಡಿಗಳು.

ಕೇವಲ ೩ ರೂಪಾಯಿ [ಅಂಚೆಸೇರಿ] ವಾರ್ಷಿಕ ಚಂದಾ ಹಣದಲ್ಲಿ ೩ನೆಯ ಮಾಲೆಯ ೧–೩ನೆಯ ಕುಸುಮ ಪಡೆಯಿರಿ.

ಪ್ರಾಥಮಿಕ ಶಿಕ್ಷಕರ ಕಥೆ, ಕಾದಂಬರಿ, ಕವನ, ನಾಟಕಾದಿ ಕೃತಿಗಳು ೪೦೦ ಪುಟಗಳಲ್ಲಿ.

ಅಗಸ್ಟ ದಿಂದ ಅಗಸ್ಟಕ್ಕೆ ಒಂದು ವರುಷ ● ಬಿಡಿ ಕುಸುಮ ಚಂದಾದಾರರಿಗೆ ೫ ಬೆಲೆಯಲ್ಲಿ [ಅಂಚೆಬೇರೆ]

ವರ್ಷದ ಮಧ್ಯದಲ್ಲಿ ಚಂದಾದಾರರಾದರೂ ಆ ವರ್ಷದ ಎಲ್ಲ ಪುಸ್ತಕಗಳು ದೊರೆಯುವವು.

ಇಂದೇ ಚಂದಾಹಣ ಕಳಿಸಿ ತಮ್ಮದೇ ಆದ ಶಿಕ್ಷಕರ ಬಳಗವು ಬೆಳೆವಂತೆ ನೆರವಾಗಿರಿ. ಈ ಅಲ್ಪ ಹಣ ತಮ್ಮ ಶಿಕ್ಷಕ ಮಿತ್ರರ ಏಳ್ಗೆಗೆ ಮೀಸಲು. ಗೆಳೆಯರನ್ನು, ವಾಚನಾಲಯಗಳನ್ನು ಚಂದಾದಾರರನ್ನು ಮಾಡಿ ನೆರವಾಗಿರಿ.

ವಿವರಗಳಿಗೆ: **ಭಾರತೀ ಸಾಹಿತ್ಯ ಭಂಡಾರ** ಅಂಚೆ: **ಯರನಾಳ** ಜಿಲ್ಲೆ: **ಬಿಜಾಪುರ**

ಕಲ್ಯಾಣ ಕನ್ನಡ ಗುಡಿಯ ಕಾಣಿಕೆ

ವರ್ಣ ಸಂಧಿ! ಸಚಿತ್ರ ಗ್ರಂಥ!! ಸುಂದರ ಮುದ್ರಣ!!!

"ಶಿಕ್ಷಣ–ಶಿಕ್ಷಕ–ದರ್ಶನ"

ಶಿಕ್ಷಕರಿಗೂ, ಶಿಕ್ಷಕ ವಿದ್ಯಾರ್ಥಿಗಳಿಗೂ, ಶಿಕ್ಷಣಾಭಿಮಾನಿಗಳಿಗೂ, ಉಪಯುಕ್ತವಾಗುವಂಥ, ತನು–ಮನ ತಣಿಸುವಂಥ, ಶಿಕ್ಷಣ ತಜ್ಞರಿಂದ ಪರಿಶೀಲಿಸಲ್ಪಟ್ಟಂಥ, ಭಾರತದಲ್ಲಿಯ ಮಾನ್ಯ ಮಂತ್ರಿವರ್ಯರಿಂದ, ರಾಜ್ಯಪಾಲರಿಂದ, ಶಿಕ್ಷಣಾಧಿಕಾರಿಗಳಿಂದ, ಪ್ರಿನ್ಸಿಪಾಲರಿಂದ, ಸಾಹಿತಿಗಳಿಂದ ಪ್ರಶಂಸೆ ಪಡೆದ ಅಭಿಪ್ರಾಯಗಳುಳ್ಳಂಥ, ಕರ್ನಾಟಕ ವಿಶ್ವವಿದ್ಯಾಲಯದ ಉಪ ಕುಲಪತಿಗಳಾದ ರ್ಯಾಂಗ್ಲರ್ ಶ್ರೀ ಡಿ. ಸಿ. ಪಾವಟೆಯವರು ಮುನ್ನುಡಿ ಬರೆದಂಥ, ಮೋಹಕ ಗ್ರಂಥ.

ಶ್ರೀ ನಿಂಬಾಳ ಶಿಕ್ಷಕ ದಂಪತಿಗಳಿಂದ ಸಂಗ್ರಹಿಸಲ್ಪಟ್ಟಿದೆ. ಅಖಿಲ ಕರ್ನಾಟಕದ ಗಣ್ಯ ಶಿಕ್ಷಕ–ಶಿಕ್ಷಕಿಯರ ೫೫ ಬಣ್ಣಗಳಲ್ಲಿ ೪೧ ಫೋಟೊ ಬ್ಲಾಕ್, ಲೇಖನ, ಪರಿಚಯಗಳುಳ್ಳಂಥ ೪೭೫ ಪುಟಗಳ ಅಮರ ಸಾಹಿತ್ಯ ಗ್ರಂಥ. ನ್ನಡದಲ್ಲಿ ಒಂದು ಉತ್ತಮ ಮಾದರಿಯ ಶಿಕ್ಷಣಿಕ ಉದ್ಗ್ರಂಥ.

ದಿ. ೧೫ ಅಗಸ್ಟ ಸ್ವಾತಂತ್ರ್ಯ ದಿನದಂದು ಮಾನ್ಯ ಶ್ರೀ ಎ. ಎಚ್. ದಳವಾಯಿ, ಎ. ಓ. ಸಾಹೇಬರ ಅಧ್ಯಕ್ಷತೆ ಲ್ಲಿ ಪ್ರೊ ಬಿ. ಟಿ. ಸಾಸನೂರ ಅವರ ಅಮೃತಹಸ್ತದಿಂದ ಈ ಗ್ರಂಥ ಪ್ರಕಾಶನಗೊಂಡಿದೆ

ವಿವರಗಳಿಗೆ ಇಂದೇ ಈಗಲೇ ಬರೆಯಿರಿ.

ಂದಾ ಪ್ರತಿ ೩ ರೂ.] ವ್ಯಾಪಾರಸ್ಥರಿಗೆ ಧಾರಾಳವಾದ ಕಮೀಷನ್. [ಸುಂದರ ಪ್ರತಿ ೪ ರೂ.

ವಿಳಾಸ :– ಶ್ರೀ ನಿಂಬಾಳ ಕಲ್ಯಾಣಪ್ಪ, ಪೋಸ್ಟ:— ತಾಂಬಿ, ಜಿಲ್ಲಾ:— ವಿಜಾಪುರ.

Regd. No. B. 53

ಮೂರೇ ತಿಂಗಳಲ್ಲಿ] ಇಂತಹದು ಇನ್ನೊಂದಿಲ್ಲ [ಪುನರ್ಮುದ್ರ

ಆದರ್ಶ ಹಿಂದಿ-ಕನ್ನಡ ವ್ಯಾಕರಣ 1

ಬೆಲೆ : ೧ ರೂಪಾಯಿ.

ಲೇ. : ಎ. ಎಚ್. ಹುಂಡೇಕಾರ ಮತ್ತು ಎಮ್. ಎಚ್. ಬೆಳಲದವರ

ಪ್ರಾಥಮಿಕ ಶಾಲೆಗಳ ೫, ೬ ಮತ್ತು ೭ನೆಯ ಇಯತ್ತೆಗಳ ಹಿಂದಿ ಅಭ್ಯಾಸ ಪತ್ರಿಕೆಗನುಸಾರವಾಗಿ ಬರೆಯಲ್ಪ
ಪ್ರಪ್ರಥಮ ಹಿಂದಿ-ಕನ್ನಡ ವ್ಯಾಕರಣ ಪುಸ್ತಕ!

ಶಿಕ್ಷಕರಿಗೂ ಹಾಗು ವಿದ್ಯಾರ್ಥಿಗಳಿಗೂ ಸುಗಮವಾಗಿ ತಿಳಿಯುವಂತೆ ವ್ಯಾಕರಣದ ವಿವಿಧ ಅಂಗಗಳನ್ನು ಯೊ
ಉದಾಹರಣೆಗಳೊಂದಿಗೆ ವಿವೇಚಿಸಲಾಗಿದೆ. ಇದರ ಬಗ್ಗೆ ಕೆಳಗಿನ ಮಹನೀಯರು ಈ ರೀತಿ ಅಭಿಪ್ರಾಯಪಟ್ಟಿದ್ದಾರೆ:—

೧) ವಿದ್ಯಾರ್ಥಿಗಳಿಗೆ ಹಾಗು ಶಿಕ್ಷಕರಿಗೆ ಸಮರ್ಪಕವಾದ ರೀತಿಯಲ್ಲಿ ಮಾರ್ಗದರ್ಶನ ಮಾಡಬಲ್ಲದು.
ಶ್ರೀ ಆರ್. ಸಿ. ಭೂಸನೂರಮಠ, ಎಂ.ಎ., ರಾ. ಭಾ. ವಿಶಾ

೨) ಹಿಂದಿ ಕಲಿಯಲೆತ್ನಿಸುವ ಸಣ್ಣವರಿಗೂ ದೊಡ್ಡವರಿಗೂ ಈ ಪುಸ್ತಕವು ತುಂಬ ಉಪಯುಕ್ತವಾಗಿದೆ.
ಪ್ರೊ. ಸರೋಜಿನಿ ಮಹಿಷಿ, ಎಂ.ಎ., ಎಲ್‌ಎಲ್. ಬಿ., ರಾ. ಭಾ. ರತ್ನ ಜನತಾ ಕಾಲೇಜ, ಧಾರವಾ

೩) ಪ್ರಾಥಮಿಕ ಶಾಲೆಗಳ ವಿದ್ಯಾರ್ಥಿ ಮತ್ತು ಶಿಕ್ಷಕರಿಗೆ ಉಪಯುಕ್ತವಾಗುವ ರೀತಿಯಲ್ಲಿ ಬರೆದಿದ್ದಾರೆ.
ಶ್ರೀ ಎ. ಫ್ಹಿ. ಕೌದಿ, ಬಿ. ಎ., ಕಾರ್ಯಾಧ್ಯಕ್ಷ, ಕರ್ನಾಟಕ ಪ್ರಾಂತೀಯ ಹಿಂದಿ ಪ್ರಚಾರ ಸಭಾ, ಧಾರವಾ

೪) ಮಕ್ಕಳ ಮಾತೃಭಾಷೆಯ ವ್ಯಾಕರಣ ಭಾಗಕ್ಕೆ ಹೊಂದಿಕೆಯಾಗಿ ಇದನ್ನು ಸಾಗಿಸಿದ್ದು, ಈ ಹೊತ್ತಿಗೆ
ವೈಶಿಷ್ಟ್ಯವಾಗಿದೆ. ಶ್ರೀ ಎಸ್. ಎಮ್. ಮೇಗೂರ, ಬಿ.ಎ., ಬಿ.ಟಿ., ಡಿ.ಪಿ.ಈಡಿ., ಡಿ.ಬಿ.ಈ., ಎ.ಒ., ಸ
ಸ್ಕೂಲ ಬೋರ್ಡ, ಧಾರವಾ

೫) ಹಿಂದಿ ಕಲಿಯುವವರಿಗೆ ಕೈ ದೀವಿಗೆಯಾಗಿದೆ! ಶ್ರೀ ಎಸ್. ವಾಯ್. ಶೀಲವಂತ, ಬಿ ಎ., ಎಂ.ಈ
ಡಿ.ಪಿ.ಈಡಿ.,ಡಿ.ಬಿ.ಈ.. ರಾ. ಭಾ. ವಿಶಾರದ, ಎ.ಡಿ.ಇ.ಆಯ್., ಧಾರವಾ

ಎರಡನೆಯ ಮುದ್ರಣದ ಪ್ರತಿಗಳು ಮಾರಾಟಕ್ಕೆ ಸಿದ್ಧವಾಗಿವೆ. ಕೂಡಲೇ ಬರೆಯಿರಿ. ಯೋಗ್ಯ ಕಮೀಶನ್ ಕೊಡಲಾಗುವ
ಇನ್ನು ಮುಂದೆ ಈ ಕೆಳಗಿನ ವಿಳಾಸಕ್ಕೆಯೇ ಪತ್ರವ್ಯವಹಾರ ಮಾಡಬೇಕು.

ಅಧಿಕೃತ ಮಾರಾಟಗಾರರು :— **ಭಾರತ ಬುಕ್ ಡಿಪೋ,** ಗಾಂಧಿಚೌಕ, **ಧಾರವಾಡ**

Printed by Shri S. F. Kattimani, at Manohar Power Printing Press, Hubli.
Edited & Published by Sjts. G. M. Joshi, B. M. Shintri, S R. Tatti & Smt. P. A. Bhash
at the Kannada Jeevan Shikshan Office, Govt Training College for Men, Dharw

ಪ್ರಜಾಮತ

ಪ್ರಧಾನ ಸಂಪಾದಕರು: ಶ್ರೀ ಜಿ. ಎಂ. ಜೋಶಿ

ಪ್ರತಿ ಪ್ರತಿ: ೬ ಆಣೆ

ವಾ. ಚ. ೪ ರೂ.

ಜೀವನ ಶಿಕ್ಷಣ

— ಸಂಪಾದಕ ಮಂಡಲ —

ಸಂಚಾಲಕರು: ಶ್ರೀ ಎಮ್. ಜಿ. ಹಂದ್ರಾಳ, ಬಿ.ಎ. (ಆನರ್ಸ), ಎಮ್.ಈಡಿ., ಡಿ.ಬಿ.ಈಡಿ.,
ಎಜ್ಯುಕೇಶನಲ್ ಇನಸ್ಪೆಕ್ಟರ, ಧಾರವಾಡ.

ಪ್ರಧಾನ ಸಂಪಾದಕರು: ಶ್ರೀ ಜಿ. ಎಮ್. ಜೋಶಿ,
ಪ್ರಿನ್ಸಿಪಾಲ, ಗಂಡು ಮಕ್ಕಳ ಸರಕಾರಿ ಟ್ರೇನಿಂಗ ಕಾಲೇಜ, ಧಾರವಾಡ.

—: ಸದಸ್ಯರು :—

ಶ್ರೀಮತಿ ಪಿ. ಎ. ಭಾಸ್ಕರ, ಲೇಡಿ ಸುಪರಿಂಟೆಂಡೆಂಟ, ಹೆಣ್ಣು ಮಕ್ಕಳ ಸರಕಾರಿ ಟ್ರೇನಿಂಗ ಕಾಲೇಜ. ಧಾರವಾಡ.

ಶ್ರೀ ಬಿ. ಎಂ. ಶಂಶ್ರಿ, ಬಿ.ಎ.,ಬಿ.ಟಿ., ನಿವೃತ್ತ ಅಸಿಸ್ಟಂಟ ಎಜ್ಯುಕೇಶನಲ್ ಇನಸ್ಪೆಕ್ಟರ ದಕ್ಷಿಣ ಭಾಗ,
(ಮುಂಬಯಿ ಕರ್ನಾಟಕ) ಹಾಗು ಗೌ. ಕಾರ್ಯದರ್ಶಿ ಮತ್ತು ಲಾಯಬ್ರೇರಿಯನ್.
ಸಾಹಿತ್ಯ ಸಮಿತಿ ಲಿಂಗಾಯತ ವಿದ್ಯಾಭಿವೃದ್ಧಿ ಸಂಸ್ಥೆ, ಧಾರವಾಡ

ಶ್ರೀ ಎಸ್. ಆರ್. ತಟ್ಟಿ, ರಿಟಾಯರ್ಡ ಪ್ರಿನ್ಸಿಪಾಲ, ಪ್ರಾಥಮಿಕ ಶಿಕ್ಷಕರ ಟ್ರೇನಿಂಗ ಕಾಲೇಜ. ನವಲಗುಂದ.

ಸಂಪುಟ ೯೬ ನವೆಂಬರ ೧೯೬೦ ಸಂಚಿಕೆ ೬

— ಪರಿವಿಡಿ —

೧	ಸಂಪಾದಕೀಯ	....	೧
೩	ಚಾಚ್ಯಾ ನೆಹರೂಜಿಗೊಂದು ಪತ್ರ	.... ಕು.ರಾದ ಶಿವಾನಂದ, ಶಶಿ, ಜ್ಯೂ. ಜವಾಹರ	೩
೩	ಜಗದ ಬಂಧು ಜವಾಹರ	.... ಶ್ರೀ ಉಪರಾಳ ಎಂ. ಎಫ್.	೪
೪	ರೂಢಿಯ ನಿಯಮಗಳು	.... ಶ್ರೀ ತಟ್ಟಿ ಶಾಮರಾಯರು	೫
೫	ದಶಾಂಶ ಪದ್ಧತಿಯ ತೂಕ-ಅಳತೆಗಳೂ ಅಭ್ಯಾಸ ಪತ್ರಿಕೆಯೂ	.... ಶ್ರೀ 'ಬಮುಶಿಂ'	೯
೬	ವಿಶ್ವದ ಕೌತುಕಗಳು	.... ಶ್ರೀ 'ಬಮುಶಿಂ'	೧೦
೭	ಗ್ರಾಮೀಣ ಜೀವನದಲ್ಲಿ ಶಾಲಾಗುರು	.... ಶ್ರೀ ಮು. ಗುಳಿವಾರಿ	೧೨
೮	ಶಿಕ್ಷಣ ರಂಗದಲ್ಲಿ ಸಹಜೀವನ	.... ಶ್ರೀ ಎಸ್. ಎಸ್. ಭೂಸರಡ್ಡಿ	೧೪
೯	ಕೃಷಿ ಅರ್ಥಶಾಸ್ತ್ರವೂ ಜೀವನ ಶಿಕ್ಷಣವೂ	.... ಶ್ರೀ ಮು. ಬ. ಶ್ಯಾಡಗುಪ್ಪಿ	೧೬
೧೦	ಸಮಾಜ ಶಿಕ್ಷಣ ತರಬೇತಿ ವರ್ಗ, ಧಾರವಾಡ (ರಿಪೋರ್ಟ)	.... ಶ್ರೀ ಎಸ್. ವ್ಹಿ. ಪಂಡಿತ	೧೪
೧೧	ಮಕ್ಕಳ ಸಾಹಿತ್ಯ	.... ಶ್ರೀ ಶಂ. ಗು. ಬಿರಾದಾರ	೨೦
೧೨	ಚೈತನ್ಯಮೂರ್ತಿ ಚಾಚ್ಯಾ ನೆಹರು	.... ಶ್ರೀ 'ಆನಂದ'	೨೨
೧೩	ನಿವೃತ್ತ ಶಿಕ್ಷಣಾಧಿಕಾರಿಗಳಾದ ಶ್ರೀಮಾನ್ ಜಿ. ಕೆ. ಕೊಪ್ಪೀಕರರು	.... ಶ್ರೀ 'ಗಾಲವ'	೨೬
೧೪	ನಿಸರ್ಗ ರಾಣಿ	.... ಶ್ರೀ ಸಿ. ವ್ಹಿ. ಹಿರೇಮಠ	೨೮

ಸಂಪಾದಕೀಯ

ಮಕ್ಕಳ ದಿನಾಚರಣೆ :

ಕಳೆದ ಕೆಲವು ವರ್ಷಗಳಿಂದಲೂ ಭಾರತದಲ್ಲಿಯೂ ಉಳಿದ ರಾಷ್ಟ್ರಗಳಲ್ಲಿಯೂ ಮಕ್ಕಳ ದಿನಾಚರಣೆ ನಡೆಯುತ್ತ ಬಂದಿದೆ. ಈ ದಿನಾಚರಣೆಯು ನವ್ಹಂಬರ ದಿನಾಂಕ ೧೪ ರಂದು ಆಗುವದರಲ್ಲಿ ಬಹಳ ಔಚಿತ್ಯವಿದೆ. ಅಂದು ನಮ್ಮ ಪ್ರಧಾನ ಮಂತ್ರಿಗಳಾದ ಶ್ರೀ ಜವಾಹರ-ಲಾಲ ನೆಹರೂ ಅವರ ಜನ್ಮದಿನ. ಶ್ರೀ ನೆಹರೂರವರು ಮಕ್ಕಳ ಬಗ್ಗೆ ತೋರಿಸುವ ಆಸ್ಥೆ ಹಾಗೂ ಆಸಕ್ತಿಗಳು ಜಗತ್ಪ್ರಸಿದ್ಧವಾಗಿವೆ. ಅವರು ಮಕ್ಕಳ ಯೋಗ್ಯ ಬೆಳವ-ಣಿಗೆಗೆ ಅತ್ಯುನ್ನತ ಬೆಲೆಯನ್ನು ಕೊಟ್ಟಿದ್ದಾರೆ. ಅವರು ಮನೆಯಲ್ಲಿಯ ಮಕ್ಕಳನ್ನು ತೋಟದಲ್ಲಿಯ ಹೂಗಳಿಗೆ ಸ್ವಾರಸ್ಯಮಯವಾಗಿ ಹೋಲಿಸಿದ್ದಾರೆ. ಮಕ್ಕಳ ಕಲ್ಯಾಣ ಕಾರ್ಯಗಳು ಭಾರತದಾತ್ಯಂತ ನಡೆದರೆ ನೆಹರೂರವರಿಗೆ ಹಿಡಿಸಲಾರದಷ್ಟು ಸಂತೋಷವಾಗುವದರಲ್ಲಿ ಸಂಶಯವಿಲ್ಲ. ಈ ದಿನ ಮಕ್ಕಳ ಕಲ್ಯಾಣವನ್ನು ಸಾಧಿಸುವ ಚಳವಳಿಯ ಘಟಕಗಳಾದ ಆಹಾರ, ಆರೋಗ್ಯ, ಆಟ, ವಿನೋದ, ವಿಶ್ರಾಂತಿ ಹಾಗೂ ವಿಕಾಸಗಳ ಬಗೆಗೆ ಅವಶ್ಯವಾದ ಕ್ರಮಗಳನ್ನು ಸಾರ್ವಜನಿಕರ ಸಹಾಯ ಸಹಕಾರಗಳಿಂದ ಕೈಕೊಳ್ಳಲಾಗುವದು. ಅಂದು ನಗರ ಸಂಕೀರ್ತನೆ, ಸಾಂಸ್ಕೃತಿಕ ಚಟುವಟಿಕೆಗಳು, ಸಂದ್ಯಾಟ, ಸಭೆ, ಚಲನ ಚಿತ್ರ ಪ್ರದರ್ಶನ, ಮುಖಂಡರ ಭಾಷಣ ಹಾಗೂ ಮಕ್ಕಳಿಗೆ ಮಿಠಾಯಿ ಹಂಚುವಿಕೆ ಇವೇ ಮೊದಲಾದ ವಿಷಯಗಳು ಕಾರ್ಯಕ್ರಮದ ಮುಖ್ಯ ಭಾಗಗಳಾಗುವವು. ಮಕ್ಕಳ ಕಲ್ಯಾಣ ಕಾರ್ಯದ ಸಲುವಾಗಿ ನಿಧಿ ಸಂಗ್ರಹವೂ ನಡೆಯುವದು. ಈ ದಿನಾಚರಣೆಯಲ್ಲಿ ಪಾಲಕರೂ ಶಿಕ್ಷಕರೂ ಸಹಕರಿಸಿ, ಅದನ್ನು ಅತ್ಯಂತ ಯಶಸ್ವೀ ಮಾಡುವರೆಂದು ನಾವು ಆಶಿಸದೆ ಇರಲಾರೆವು. ನಮ್ಮ ಪ್ರಧಾನ ಮಂತ್ರಿಗಳಾದ ಶ್ರೀ ನೆಹರೂರವರ ಹಿರಿಯತನ ಹಾಗೂ ಮಾರ್ಗದರ್ಶನಗಳಿಂದಲೇ ವಿಶ್ವ-ಶಾಂತಿಯು ನೆಲೆಗೊಳ್ಳುವ ಸುದಿನವು ಶೀಘ್ರ ಬರಲೆಂದೂ ಹಾಗೂ ಶ್ರೀ ಜವಾಹರರ ಜನ್ಮ ದಿನೋತ್ಸವವು ಅನಂತವಾಗಿ ಬರಲೆಂದೂ ನಮ್ಮೆಲ್ಲರ ಹಾರೈಕೆ.

ಯುಕ್ತ ರಾಷ್ಟ್ರಸಂಘ ದಿನಾಚರಣೆ :

ದಿ. ೨೪-೧೦-೬೦ರಂದು ಯು. ಎನ್. ಓ. ದಿನಾಚರಣೆಯನ್ನು ಆಚರಿಸಿದುದು ಎಲ್ಲರಿಗೂ ಗೊತ್ತಿದೆ. ಜಗತ್ತಿನ ಕಲ್ಯಾಣಕ್ಕಾಗಿ ವಿವಿಧರಾಷ್ಟ್ರಗಳಲ್ಲಿ ಸಮತೋ-ಲನವನ್ನು ಕಾಯ್ದು ಶಾಂತತೆ ನೆಲೆಸುವದಕ್ಕಾಗಿ, ರಾಷ್ಟ್ರಗಳಲ್ಲಿ ಬಹುಮುಖ ಪ್ರಗತಿಯನ್ನು ಸಾಧಿಸುವದ-ಕ್ಕಾಗಿ ಈ ಸಂಘವು ಪ್ರಯತ್ನಿಸುತ್ತಿರುವದು. ಎಲ್ಲ ಅಂತರ್ರಾಷ್ಟ್ರೀಯ ತಂಟೆಗಳು ಶಾಂತಿಯುತ ರೀತಿಯಲ್ಲಿ ಪರಿಹಾರವಾಗಬೇಕು. ಇಂತಹ ಕಠಿಣವಾದ ಕಾರ್ಯ-ವನ್ನು ವಹಿಸಿಕೊಳ್ಳುವಲ್ಲಿ ಯುಕ್ತರಾಷ್ಟ್ರಸಂಘವೇ ಸ್ಪಷ್ಟ-ವಾದ ರಂಗವಾಗಿದೆ. ಎಂದು ರಾಷ್ಟ್ರಪತಿ ರಾಜೇಂದ್ರ ಪ್ರಸಾದರು ಯುಕ್ತರಾಷ್ಟ್ರ ದಿನಾಚರಣೆಯ ಕಾಲಕ್ಕೆ ಹೇಳಿದರು. ಇಂದಿನ ಸಮಸ್ಯೆಗಳನ್ನು ಶಾಂತಿಯುತವಾಗಿ ಬಿಡಿಸುವಲ್ಲಿ ಏನೇ ತೊಂದರೆಗಳಿದ್ದರೂ ಯುಕ್ತರಾಷ್ಟ್ರ ಸಂಘವು ಮಾತ್ರ ರಚನಾತ್ಮಕ ಸಂಸ್ಥೆಯೆಂಬುದನ್ನು ಸಿದ್ಧಮಾಡಿ ತೋರಿಸಿದೆ. ಯುದ್ಧವನ್ನು ತಡೆಯದಿದ್ದರೆ ಇಲ್ಲವೆ ಕನಿಷ್ಠ ನಿಯಂತ್ರಿಸದಿದ್ದರೆ ಮಾನವಕುಲಕ್ಕೇನೇ ಮಹಾವಿಪತ್ತು ಬಂದೊದಗುವದೆಂಬುದು ಎಲ್ಲರಿಗೂ ತಿಳಿದಿದೆ. ಆದ್ದರಿಂದ ಆಕ್ರಮಣ ಬುದ್ಧಿಯು ತೊಲಗಿ ಶಾಂತಿಯುತ ಸಹಜೀವನ ತತ್ವವು ಮಾನವತೆಯ ಆಸ್ತಿಯಾಗಬೇಕು. ಇಂತಹದೊಂದು ಆದರ್ಶದ ದಿನವು ಬರಲಿದೆ. ಅಂತಹ ದಿನವನ್ನು ಯುಕ್ತರಾಷ್ಟ್ರಸಂಘವೇ ಉದಯಿಸಿ ತರುವದೆಂದು ನಮ್ಮೆಲ್ಲರಿಗೆ ಭರವಸೆ ಇದೆ.

ಶಿಕ್ಷಣ ಮಂತ್ರಿಗಳ ಸಮ್ಮೇಳನದ ಶಿಫಾರಸುಗಳು :

ಕೇಂದ್ರ ಶಿಕ್ಷಣ ಮಂತ್ರಿ ಡಾ. ಕೆ. ಎಲ್. ಶ್ರೀಮಾಲಿಯವರ ಅಧ್ಯಕ್ಷತೆಯಲ್ಲಿ ದಿಲ್ಲಿಯಲ್ಲಿ ಸೇರಿದ ರಾಜ್ಯ ಶಿಕ್ಷಣ ಮಂತ್ರಿಗಳ ಸಮ್ಮೇಳನದಲ್ಲಿ ಸಾರ್ವತ್ರಿಕ ಕಡ್ಡಾಯದ ಪ್ರಾಥಮಿಕ ಶಿಕ್ಷಣ ಕಾರ್ಯವನ್ನು ಎಲ್ಲ ರಾಜ್ಯಗಳಲ್ಲಿಯೂ ತ್ವರಿತಗೊಳಿಸಬೇಕು, ಶಾಲಾ ಶಿಕ್ಷಕರ ವೇತನ ಪ್ರಮಾಣಗಳನ್ನು ಉತ್ತಮಗೊಳಿಸಬೇಕು ಮತ್ತು ಹಿಂದಿ ಬಗ್ಗೆ ಆಸಕ್ತಿ ಬೆಳೆಯಲು ಪ್ರೋತ್ಸಾಹಿಸ-ಬೇಕು ಮುಂತಾದ ಶಿಫಾರಸುಗಳನ್ನು ಅಂಗೀಕರಿಸಲಾ-

ಯಿತು. ತೃತೀಯ ಪಂಚವಾರ್ಷಿಕ ಯೋಜನೆಯಲ್ಲಿ ಸಕ್ತಿ ಶಿಕ್ಷಣ ಯೋಜನೆಯನ್ನು ಯಶಸ್ವಿಗೊಳಿಸುವದಕ್ಕಾಗಿ ಕೇಂದ್ರ ಶಿಕ್ಷಣ ಶಾಖೆಯ ಮಂತ್ರಿ ಡಾ. ಕೆ. ಎಲ್. ಶ್ರೀಮಾಲಿಯವರು ಶಿಕ್ಷಣ ಮಂತ್ರಿಗಳ ಪರಿಷತ್ತಿನಲ್ಲಿ ನಾಲ್ಕಂಶಗಳ ಕಾರ್ಯಕ್ರಮವೊಂದನ್ನು ವಿವರಿಸಿದರು:—

೧) "ರಾಜ್ಯಗಳಲ್ಲಿ ಸದ್ಯ ಊರ್ಜಿತದಲ್ಲಿರುವ ಸಕ್ತಿ ಶಿಕ್ಷಣದ ಕಾನೂನುಗಳು ಹಳೆಯವಾಗಿದ್ದು, ಈ ಕಾರ್ಯಕ್ರಮದ ಕಾರ್ಯಾಚರಣೆಯ ಮೊದಲನೆಯ ಕ್ರಮವೆಂದು ರಾಜ್ಯ ಶಿಕ್ಷಣ ಮಂತ್ರಿಗಳು ಹೊಸ ಕಾನೂನುಗಳನ್ನು ಜಾರಿಗೆ ತರಬೇಕಾಗುವದು. ೨) ರಾಜ್ಯದಲ್ಲಿ ಮಂತ್ರಿಗಳು, ಪಾಲಕರು ತಮ್ಮ ಮಕ್ಕಳನ್ನು ವಿಶೇಷವಾಗಿ ಹೆಣ್ಣುಮಕ್ಕಳನ್ನು ಶಾಲೆಗೆ ಕಳಿಸಿಕೊಡುವಂತೆ ಪಾಲಕರಲ್ಲಿ ಅಭಿಪ್ರಾಯ ಹುಟ್ಟಿಸಲು ಆಂದೋಲನ ನಡೆಸುವ ಕ್ರಮ ಕೈಕೊಳ್ಳಬೇಕು. ೩) ರಾಜ್ಯಗಳು ಮಕ್ಕಳಿಗೆ ಶಾಲೆಯ ಸಮವಸ್ತ್ರ, ಪಠ್ಯಪುಸ್ತಕಗಳು ಮತ್ತು ಉಚಿತವಾಗಿ ಮಧ್ಯಾಹ್ನದ ಊಟ ಒದಗಿಸುವಲ್ಲಿ ಪಾಲಕರಿಗೆ ನೆರವಾಗುವ ಸಾಮೂಹಿಕ ಪ್ರಯತ್ನ ನಡೆಯುವ ಕ್ರಮ ಕೈಕೊಳ್ಳಬೇಕು. (೪) ಕೇಂದ್ರ ಶಿಕ್ಷಣ ಶಾಖೆಯು ಸೂಚಿಸಿದ ಟ್ರೇಂಡ್ ಮತ್ತು ಅನ್‌ಟ್ರೇಂಡ್ ಪ್ರಾಥಮಿಕ ಶಿಕ್ಷಕರ ಕನಿಷ್ಠ ವೇತನವು ಅನುಕ್ರಮವಾಗಿ ರೂ. ೫೦ ಮತ್ತು ರೂ. ೪೦ ಕೊಡುವಂತೆ ರಾಜ್ಯ ಸರಕಾರಗಳು ನೋಡಿಕೊಳ್ಳಬೇಕು." ಈ ಎಲ್ಲ ಶಿಫಾರಸುಗಳು ಕಾರ್ಯಕಾರೀಯಾಗುವಂತೆ ಸಹಾಯ ಸಹಕಾರ ನೀಡುವದು ನಮ್ಮೆಲ್ಲರ ಆದ್ಯ ಕರ್ತವ್ಯವಾಗಿದೆಯೆಂದು ನಾವು ಹೇಳದೆ ಇರಲಾರೆವು.

ಶ್ರೀ ಜಿ. ಕೆ. ಕೊಪ್ಪೀಕರ ಇವರ ನಿವೃತ್ತಿ :

ಧಾರವಾಡ ವಿಭಾಗದ ಶಿಕ್ಷಣ ಖಾತೆ ಡೆಪ್ಯೂಟಿ ಡಾಯರೆಕ್ಟರರಾಗಿ ಕೆಲಸ ಮಾಡುತ್ತಿದ್ದ ಶ್ರೀ ಜಿ. ಕೆ. ಕೊಪ್ಪೀಕರ ಇವರು ದಿನಾಂಕ ೪-೧೧-೧೯೬೦ರಂದು ಸೇವಾ ನಿವೃತ್ತರಾದರು. ಸರಕಾರಿ ಗಂಡು ಮಕ್ಕಳ ಟ್ರೇನಿಂಗ ಕಾಲೇಜ ಹಾಗೂ ಹಲವಾರು ಶೈಕ್ಷಣಿಕ ಸಂಘ-ಸಂಸ್ಥೆಗಳು ಶ್ರೀ ಕೊಪ್ಪೀಕರ ಇವರ ಸೇವೆಯನ್ನು ಪ್ರಶಂಸಿಸಿ, ಸತ್ಕಾರಕೂಟಗಳನ್ನು ಏರ್ಪಡಿಸಿದ್ದವು. ಶ್ರೀ ಕೊಪ್ಪೀಕರ ಇವರು ಶೈಕ್ಷಣಿಕ ಕ್ಷೇತ್ರದಲ್ಲಿ ಬಹುಮುಖ ಅನುಭವ ಪಡೆದಿದ್ದರು. ಒಳ್ಳೆ ಶಿಕ್ಷಕರಾಗಿಯೂ, ದಕ್ಷ ಆಡಳಿತೆಗಾರರಾಗಿಯೂ, ದೂರದರ್ಶಿ ಯೋಜನಾಧಿಕಾರಿಗಳಾಗಿಯೂ ಹಾಗೂ ತಮ್ಮ ಅತ್ಯಂತ ಸಹೃದಯ ಮಾನವೀಯತೆಯಿಂದಲೂ, ಅವರು ಎಲ್ಲ ಪ್ರೀತ್ಯಾದರಗಳಿಗೆ ಪಾತ್ರರಾಗಿದ್ದರು. ತಮ್ಮ ಸೇವಾ ನಿವೃತ್ತಿ ಅವಧಿಯಲ್ಲಿಯೂ, ಅವರು ತಮ್ಮ ಶೈಕ್ಷಣಿಕ ಅನುಭವದ ಲಾಭವನ್ನು ಇತರರಿಗೂ ಮಾಡಿಕೊಟ್ಟು ಮಾರ್ಗದರ್ಶನ ಮಾಡುವರೆಂದು ನಾವು ಆಶಿಸದೆ ಇರಲಾರೆವು. ಶ್ರೀ ಕೊಪ್ಪೀಕರ ಇವರಿಗೂ ಹಾಗೂ ಅವರ ಕುಟುಂಬದ ಎಲ್ಲ ಸದಸ್ಯರಿಗೂ ದೇವರು ದೀರ್ಘ ಆಯುರಾರೋಗ್ಯ ದಯಪಾಲಿಸಲಿ ಎಂದು ನಾವು ಪ್ರಾರ್ಥಿಸುವೆವು.

ಚಾಚಾ ನೇಹರೂಜಿಗೊಂದು ಪತ್ರ

ಚಾಚಾಜಿ !

'ನಾವು ಬರೆಯುವ ಪತ್ರವನ್ನು ಕಂಡು ನಿಮಗೆ ಅಚ್ಚರಿಯಾಗಬಹುದು. ಪತ್ರ ಬರೆಯುವವರು ನಾವು ಮೂರು ಮಂದಿ. ನನ್ನ ಹೆಸರು ಶಿವಾನಂದ. ನಮ್ಮ ತಂದೆಗೆ ಇದೇ ವಿದ್ಯಾಲಯದಲ್ಲಿ ದೊಡ್ಡ ಕೆಲಸ, ನಾನೂ ತಂಗಿ ಶಶಿಯೂ ಇದೇ ವಿದ್ಯಾಲಯದ ಪ್ರಾಯೋಗಿಕ ಶಾಲೆಯಲ್ಲಿ ಓದುತ್ತಿದ್ದೇವೆ. ನನಗೆ ಇದೀಗ ಹತ್ತು ವರ್ಷ, ತಂಗಿಗೆ ಎಂಟು. ಆ ಮೇಲೆನನ್ನ ಕಿರಿಯ ತಮ್ಮ ಜವಾಹರ. ಮುಂ ವಾಗಿ ಈ ಕಾಗದ ಬರೆಯಲು ಕಾರಣವೇನಂದರೆ ಇವನ ಏಕೆಂದರೆ 'ಇಂದು ಅವನ ಹುಟ್ಟುಹಬ್ಬದ ತಯಾ ಇಂದುದಣೇ ಅವನಿಗೆ ಐದು ತುಂಬುತ್ತವೆ. ನೀವು ಹುಟ್ಟಿ ದಿವಸವೇ ಅವನೂ ಹುಟ್ಟಿದ್ದರ ಸಲುವಾಗಿ ಅವನ ಅಪ್ಪ ಜವಾಹರ ಎಂದು ಮುದ್ದಾಗಿ ಹೆಸರಿಟ್ಟಿದ್ದಾರೆ ನಮ್ಮ ಮನೆಯವರೆಲ್ಲರಿಗೂ ಅವನು ಪ್ರೀತಿಯ ಕೃಷ್ಣ ತಂದೆ ತಮ್ಮ ಗೆಳೆಯರ ಮುಂದೆ ಈ ಜವಾಹರನನ್ನ

ಹೊಗಳುತ್ತ ಈತ ನಮ್ಮವನೆಯ ಜ್ಯೋತಿ "ಜ್ಯೂನಿಯರ್ ಜವಾಹರಲಾಲ ನೆಹರು" ಎಂದು ಹೇಳುತ್ತಾರೆ. ಅಪ್ಪ ಅವನಿಗಾಗಿ ಇಂದು ನಿಮ್ಮಂತಹ ನೆಹರು ಶರ್ಟು, ಗಾಂಧೀ ಟೋಪಿ–ಜಾಕೀಟು ನಿಮ್ಮ ಹಾಗೆ ಪಾಯಜಾಮ ಬೂಟು ಇತ್ಯಾದಿ ತಂದಿದ್ದಾರೆ. ಅಪ್ಪ, ಅವ್ವ, ಅಜ್ಜಿ ನಿಮ್ಮ ಮೇಲೆ ಬಹಳೇ ಪ್ರೀತಿ. ಮನೆಯ ಬಾಗಿಲ ಮೇಲೆ ದೊಡ್ಡದಾದ ನಿಮ್ಮ ಫೋಟೋ ತಂದು ತೂಗು ಹಾಕಿದ್ದಾರೆ! ಅವ್ವ ನಿಮ್ಮನ್ನು ದೇವರುಗಳ ನಡುವೆ ಕೂಡಿಸಿ ದಿನಾಲು ಪೂಜಿಸುತ್ತಾಳೆ, ಒಂದು ದಿನ ನಿಮ್ಮಂತೆಯೇ ಉಡುಪು ಹಾಕಿಕೊಂಡು ಬಂದು ನಮ್ಮ ಜ್ಯೂನಿಯರ ಜವಾಹರಲಾಲ ಥೇಟು ನಿಮ್ಮಂತೆಯೇ ಆಗಿ ಅವ್ವನನ್ನು ಕೇಳಿದ. 'ಅವ್ವ ಇದಾವ ದೇವರು? ಈ ದೇವರಿಗೆ ನಾಲ್ಕು ಕೈಗಳೇಕೆ ಇಲ್ಲ? ಕೈಯಲ್ಲಿ ಬಿಲ್ಲು ಹಿಡಿದಿಲ್ಲವಲ್ಲ? ಇವನೂ ನನ್ನಂತೆಯೇ ಅರಿವೆ ಹಾಕಿಲ್ಲವೆ?" ಎಂದ. ಅವ್ವ ನಕ್ಕಳು. "ಮಗು! ಇವರು ನಮ್ಮ ದೇಶದ ಹಿರಿಯರು. ನಮ್ಮ ದೇಶದ ಎಲ್ಲ ಜನರನ್ನೂ ದೇವರಂತೆ ಕಾಪಾಡುತ್ತಾರೆ. ಈ ಕಂಚಿನ ದೇವರುಗಳನ್ನು ಪೂಜಿಸುವದಕ್ಕಿಂತ ಪ್ರತ್ಯಕ್ಷವಾಗಿರುವ ಇವರನ್ನು ಪೂಜಿಸುವದು ಒಳ್ಳೆಯದು."

"ಅವ್ವ, ನಾನೂ ಜವಾಹರನೇ ಅಲ್ಲವೇ? ನನ್ನನ್ನೂ ಏಕೆ ಪೂಜೆ ಮಾಡುವದಿಲ್ಲ ನೀನು...." ಇದು ನಮ್ಮ ಜವಾಹರನ ಹಟ. "ನೀನೂ ಅವರಂತೆಯೇ ದೊಡ್ಡವನಾಗಬೇಕು, ಮಗು, ಧಾರವಾಡದಿಂದ ದಿಲ್ಲಿಯವರೆಗೆ ಕಲಿಯಬೇಕು, ಬುದ್ಧಿವಂತನಾಗಬೇಕು.... ಆಗ ನಾನು ಅಷ್ಟೇಏಕೆ ನಾಡಿನ ಎಲ್ಲ ತಾಯಂದಿರೂ ನಿನ್ನನ್ನು ಪೂಜಿಸುತ್ತಾರೆ...." ಎಂದಾಗ "ಹೌದಮ್ಮ.... ನಾನು ಅವನಂತೆಯೇ ಆಗಬೇಕು" ಎಂದು ಉಬ್ಬಿ ಕುಣಿದಾಡುತ್ತಾನೆ ನಮ್ಮ ಜವಾಹರ. ಅಂದಿನಿಂದ ಈತ ಅಪ್ಪ ಅವ್ವನನ್ನು ಮೊದಲು ಮಾಡಿಕೊಂಡು ನಮ್ಮನ್ನೆಲ್ಲ ಪರೇಡು ಮಾಡಿಸುತ್ತಾನೆ. ಸೆಟೆದು ನಿಂತು ನಿಮ್ಮಂತೆಯೇ ಗಂಭೀರವಾಗಿ ವಂದನೆ ಕೊಡುತ್ತಾನೆ. ಅಜ್ಜಿ ಅವನ ಕುದುರೆಯ ಸವಾರಿ. ನಮಗೆಲ್ಲರಿಗೂ ಲೀಡರ. ಅಜ್ಜಿಯ ಕೆಮ್ಮು ದಮ್ಮುಗಳು ಬಂದಾಗ ಅವನ ಸವಾರಿ ಡಿಕ್ಕಿ ಹೊಡೆಯುತ್ತದೆ.

ಚಾಚಾಜಿ! ನೀವು ಮಕ್ಕಳ ಮೇಲೆ ಬಹಳ ಪ್ರೀತಿಯಂತೆ! ನೀವು ಹೊದಲ್ಲೆಲ್ಲ ಮಕ್ಕಳು "ಚಾಚಾ ನೆಹರು.... ಚಾಚಾ ನೆಹರು" ಎಂದು ನಿಮ್ಮ ಸುತ್ತ ಮುತ್ತುವರಂತೆ. ಎಲ್ಲಿಂದಲೋ ಅಪ್ಪ ನಿಮ್ಮದೊಂದು ಚಿತ್ರವನ್ನು ತಂದಿದ್ದಾರೆ. ಅದನ್ನು ನೋಡುತ್ತ ಕುಳಿತು ಕೊಳ್ಳಲು ನಮಗೆ ಬಲು ಹಿಗ್ಗು. ಅದರಲ್ಲಿ ನೀವು ನಮ್ಮಂತಿರುವ ಹತ್ತಿಪ್ಪತ್ತು ಮಕ್ಕಳೊಡನೆ ನಗುತ್ತ ಆಡುತ್ತಿದ್ದೀರಿ. ನೀವು ಜಗತ್ತಿನಲ್ಲಿಯೇ ದೊಡ್ಡ ಪುರುಷರಂತೆ. ಆದರೆ ಮಕ್ಕಳೊಡನೆ ನೀವು ಹರಟಿ ಹೊಡೆಯುವದನ್ನು ನೋಡಿ ನಮಗೂ ನಿಮ್ಮಲ್ಲಿಯೇ ಓಡಿ ಬರಬೇಕೆಂದು ಅನಿಸುತ್ತದೆ.... ನಿಮ್ಮೊಡನೆ ಬೆರೆತು ಪೋಜು ಮಾಡಬೇಕೆಂದು ಅನಿಸುತ್ತದೆ. "ಅಜ್ಜಿ ಈ ನೆಹರೂಜಿಯವರು ನಿಮ್ಮಕಿಂತಲೂ ಎಷ್ಟು ವರ್ಷಕ್ಕೆ ಕಿರಿಯರಮ್ಮ!" ಎಂದು ನಾನು ಕೇಳಿದಾಗ "ಅವರು ನನ್ನಕ್ಕಿಂತಲೂ ಹದಿನೈದು ವರ್ಷಕ್ಕೆ ಹಿರಿಯರಪ್ಪ" ಎಂದು ಹೇಳಿದಾಗ ನನಗೆ ನಗೆ ತಡೆಯಲಾಗಲಿಲ್ಲ. "ಅಲ್ಲ ಅಜ್ಜಿ! ನೀನು ಎಲ್ಲ ಮುದುಕಿಯಾಗಿದ್ದೀ, ಅವರನ್ನು ನೋಡಿದರೆ ಇನ್ನೂ ಸೆಟೆದು ಅಡ್ಡಾಡುತ್ತಾರೆ; ನೀನು ಎಲ್ಲಾ ಬಾಗಿಹೋಗಿದ್ದಿಯಲ್ಲ!" ಎಂದೆ. "ಹೌದಪ್ಪ....ಅವರು ಬಹಳೇ ಆರೋಗ್ಯವಂತರು. ಅದಕ್ಕೆ ಕಾರಣವೆಂದರೆ ಅವರು ತಕ್ಕಷ್ಟೇ ಊಟ ನಿತ್ಯ ವ್ಯಾಯಾಮ ಮಾಡುತ್ತಾರೆ..." ಎಂದಳು. ಅದನ್ನು ಕೇಳಿ ನನಗೆ ಬಹಳೇ ಆಶ್ಚರ್ಯವಾಯಿತು. ಅಂದಿನಿಂದ ನಾವು ತಲೆಕೆಳಗಾಗಿ ನಿಲ್ಲುವ ಆಸನ ಹಾಕಲು ಕಲಿಯುತ್ತಿದ್ದೇನೆ. ನನ್ನನ್ನು ನೋಡಿ ಶಶಿಗೆ ಏಕೆ ಬೇಕೋ ತಿಳಿಯದು, ಅವಳೂ ಆಟವಾಡುತ್ತಿದ್ದಾಳೆ. ನಮ್ಮ ಜವಾಹರನದಂತೂ ಕ್ಷಣಕ್ಷಣಕ್ಕೆ ಆಸನದ ಡುಬುಕಿಯಲಾಗ ಹೊಡೆಯುವಾಗ ಬಲು ಪೋಜೆನಿಸುತ್ತಿದೆ. ಹೀಗೆ ನೀವು ನಮ್ಮ ಮನೆಯ ಆದರ್ಶ ಪುರುಷರಾಗಿದ್ದೀರಿ. ನಿಮ್ಮ ನೆವದಿಂದ ನಮ್ಮ ಮನೆಯಲ್ಲಿ ಈ ಜ್ಯೂನಿಯರನ ನಿತ್ಯನಾಟಕವಾಗುತ್ತಿದೆ. ಅದಕ್ಕೆ ಅವನೇ ಸೂತ್ರಧಾರಿ! ಅದು ಇರಲಿ.

ನಾಳೆ ಬೆಳಗು ನಿಮ್ಮ ಜಯಂತಿಯಂತೆ! ಆದುದರಿಂದ ನಮ್ಮ ಜವಾಹರನದೂ ಜಯಂತಿ! ಶಶಿ ಕೇಳಿದಳು "ಇಂದು ಜವಾಹರಲಾಲರಿಗೆ ಎಷ್ಟು ವಯಸ್ಸಾಯ್ತಮ್ಮ?" "ಅದು ನೋಡು ಅವರಿಗೆ ನಾಳೆಗೆ ಎಪ್ಪತ್ತೊಂದು ವರ್ಷ ತುಂಬುತ್ತವೆ...." ಎಂದು ತಾಯಿ ಹೇಳಿದಳು. "ಅಂದರೆ ಅವರು ಬಾಳ ಮುದುಕರಾದಂತಾಯ್ತಮ್ಮ ಪಾಪ...." ಎಂದಳು. ಶಶಿ "ಛೇ.... ಯಾರು ಹೇಳುತ್ತಾರೆಯೇ? ಜವಾಹರಲಾಲರಿಗೆ ಎಪ್ಪತ್ತೊಂದು ವರ್ಷ ತುಂಬಿದರೂ ಮುದುಕರಲ್ಲ! ಇನ್ನೂ ತರುಣರು. ಅವರಿಗೆ ಇನ್ನೂ

ಮುಪ್ಪು ಬಂದಿಲ್ಲ. ಅದು ಅವರಿಗೆ ಬರಲೇ ಬಾರದು!" ಎಂದು ತಾಯಿ ಸಿಟ್ಟಿನಿಂದ ಅಂದಳು.

ಚಾಚಾಜಿ! ನೀವು ನಿಮ್ಮ ಜಯಂತಿ ದಿನಾಚರಣೆಯನ್ನು ಮಕ್ಕಳ ದಿನಾಚರಣೆಯೆಂದು ಆಚರಿಸಬೇಕೆಂದು ಹೇಳಿದರಂತೆ ಹೌದೆ? ಅಂತೆಯೇ ನಮ್ಮ ಶಾಲೆಯಲ್ಲಿ ಬಹಳೇ ಕಾರ್ಯಕ್ರಮಗಳನ್ನು ನಾಳೆ ಇಟ್ಟು ಕೊಂಡಿದ್ದಾರೆ. ಬೆಳಗಿನಲ್ಲಿ ಪ್ರಭಾತ ಫೇರಿ.... ನೋಟೋ ಮೆರವಣಿಗೆಯಂತೆ. ನಮ್ಮ ಮನೆಯಲ್ಲಿಯೂ ನಿಮ್ಮ ದಿನಾಚರಣೆಯ ಭಾರೀತಯಾರಿ ನಡೆಯಿಸಿರುವರು. ಇಂದುರಾತ್ರಿ ಒಂಭತ್ತು ಘಂಟೆ ಬಾರಿಸಿದೆ. ನಿದ್ದೆಬರಲೊಲ್ಲದು. ಶಶಿ ಬಂದು ಕಾಡುತ್ತಿದ್ದಾಳೆ. ಆಕೆಗೂ ನಾಳಿನ ಸಂಭ್ರಮದ ಕನಸುಗಳಂತೆ. ಚಾಚಾಜಿಯವರು ನಮ್ಮ ಮೇಲೆ ಬಹಳ ಇಷ್ಟ ಅದಕ್ಕಾಗಿ. ಅವರಿಗೆ ಕಾಗದ ಬರೆಯಬೇಕು ಎಂದು ದುಂಬಾಲು ಬಿದ್ದಳು. ನಮ್ಮ ಜ್ಯೂನಿಯರನ ಧ್ವಜವಂದನೆ ಅಜ್ಜಿಯ ಎದುರು ಇನ್ನೂ ನಡೆದಿದೆ. ನಾಳೆ ಬೆಳಗು ಅವನ ಹುಟ್ಟು ಹಬ್ಬ. ಆನಂದದ ದಿನ. ನಿಮ್ಮಿಂದ ಆಶೀರ್ವಾದವು ಬರಬೇಕಂತೆ, ಅದು ನಮ್ಮ ಜವಾಹರನಿಗೆ ಸಲ್ಲಬೇಕಂತೆ! ನಮ್ಮ ಜವಾಹರನ ಎಳೆಯತನ ನಿಮಗೆ ಬರಬೇಕಂತೆ! ನಿಮ್ಮ ಬುದ್ಧಿ ಕುಶಲತೆಗಳು ಇವನಿಗೆ ಬರಬೇಕಂತೆ! ಇದು ಶಶಿಯ ಹಟ. ಅದಕ್ಕಾಗಿ ಈ ಪತ್ರದ ಕಾರಣ ತೋರಿಸಿ ಆಕೆ ಬರೆಯಿಸುತ್ತಿದ್ದಾಳೆ! ಅದುದರಿಂದ ಚಾಚಾಜಿ! ನೀವು ನಮ್ಮನ್ನೆಲ್ಲ ಮರೆಯಬಾರದು. ನಾನು ಶಶಿ– ನಿಮ್ಮಂತೆ ದೊಡ್ಡವರಾಗಬೇಕು. ನಮ್ಮ ಜ್ಯೂನಿಯರ ಜವಾಹರನು ನಿಮ್ಮ ಇಂದಿನ ಜಯಂತಿಯನ್ನು ಆಚರಿಸುವಷ್ಟು ವಯಸ್ಸಿನವನಾಗಬೇಕು. ನೀವು ಸ್ವತಃ ನಿಮ್ಮ ಮುಗ್ಧಕಣ್ಣುಗಳಿಂದ ಕಂಡು ಹರಸುವಂತಾಗಬೇಕೆಂದು ಹಾರೈಸಿ ಈ ಕಾಗದವನ್ನು ಬರೆಯುತ್ತಿದ್ದೇನೆ. ನಮ್ಮ ಹಾರೈಕೆ ಕೈಗೂಡಲಿಕ್ಕಿಲ್ಲವೆ ಚಾಚಾಜಿ!

ನಾವು ನಿಮ್ಮ ಕಾಗದವನ್ನು ಬಹಳೇ ಆತುರದಿಂದ ಪೋಸ್ಟಿನ ದಾರಿ ಕಾಯುತ್ತೇವೆ. ಮರುಕಾಗದಬರೆಯುವಿರಲ್ಲವೆ ಚಾಚಾಜಿ....?

'ನೆಹರು ಚಾಚಾಜಿ ಕಿ ಜಿಂದಾಬಾದ್' ಎಂದು

ನಿಮ್ಮವರಾದ ನಾವು ಮೂವರು

ಶಿವಾನಂದ, ಶಶಿ,

(ಜ್ಯೂ. ಜವಾಹರ)

ಜಗದ ಬಂಧು ಜವಾಹರ

ಬಾಲಕವಿ: ಈ. ಉಪರಾಳ ಎಂ. ಎಫ್.
ಕ. ಗಂ. ಜೀ. ಶಿ. ಶಾಲಾ ಗೋಪನಕೊಪ್ಪ (ಹುಬ್ಬಳಿ.)
S.S.C. II year traind

ಜಗದ ಬಂಧುವೇ ಶಾಂತಿದೂತನೆ |
ಜಗದ ಜ್ಯೋತಿ ಜವಾಹರನೆ ||
ಇಂದು ನಿನ್ನಯ ಜನ್ಮದಿನಾ |
ನಮಗೆಲ್ಲರಿಗಾನಂದ ದಿನಾ ||೧||

ನಿನ್ನಯ ಮಾತೆ! ಸ್ವರೂಪರಾಣಿ |
ಕಮಲಾದೇವಿಯು ನಿನ್ನಯರಾಣಿ ||
ಮೋತಿಲಾಲನು ನಿನ್ನಯ ಪಿತನು |
ಭಾರತಮಾತೆಗೆ ನೀನೆ ಹಿತನು ||೨||

ನೀನಿರುವೆ ಧನವಂತರ ಪುತ್ರ |
ಆದರೂ ದೀನ-ದಲಿತರ ಮಿತ್ರ ||
ಚಿಕ್ಕಮಕ್ಕಳ ಪ್ರೇಮದಮೂರ್ತಿ |
ಭಾರತಕ್ಕೆ ತಂದೆ ನೀ ಕೀರ್ತಿ ||೩||

ನಿನ್ನಯ ಗುರುವು ಗಾಂಧಿ ಮಹಾತ್ಮಾ |
ಸವೆದುದು ಭಾರತಕೆ ನಿನ್ನಾತ್ಮ ||
ಜಗದ ಪ್ರೀತಿಯ ಆಗರವಾಗಿ |
ಮನದೀ ಹರಿಯುವೆ ಸಾಗರವಾಗಿ ||೪||

ನಿನ್ನಯ ಮಣಿಯು ಸರಸಾವೀಣೆಯು |
ನಿನ್ನಯ ಶ್ರಮವು ಭಾರತದೆಳ್ಗೆಯು ||
ನಿನ್ನಾಯುಷ್ಯವು ವರ್ಧಿಸಲೆಂದು |
ಭಾರತೀಯರು ಬೇಡುವೆವಿಂದು ||೫|

ಹಿಂಸೆಯ ಶತ್ರು ಶಾಂತಿಯ ಮಿತ್ರ |
ಜಗಕೆ ಪ್ರೀತಿ ನಿನ್ನಯ ಚಿತ್ರ ||
ಸ್ವತಂತ್ರಭಾರತ ಸಾರಥಿಯಾಗಿ |
ನಡಿಸುವೆ ರಾಷ್ಟ್ರದ ಉನ್ನತಿಗಾಗಿ ||೬

ಆರಾಮ ಹರಾಮ ಹೈ ನಿನ್ನಯ ಮಂತ್ರ |
ಸಂಚಶೀಲಗಳೇ ಮುಖ್ಯ ತಂತ್ರ ||
ಭಾರತದೆಳ್ಗೆಯ ಜಗವು ಕಾಣಲಿ |
ಭಾರತದಾದೇಶವನು ಜಗವು ಕೇಳಲಿ ||೭

ರೂಢಿಯ ನಿಯಮಗಳು

ಲೇಖಕರು :— ಶ್ರೀ ತಟ್ಟಿ ರಾಮರಾಯರು, ಎಮ್.ಎ.

ಅಭ್ಯಾಸಗಳ ಅಥವಾ ರೂಢಿಗಳ ಮಹತ್ವವನ್ನು ತಿಳಿದುಕೊಳ್ಳುವದು ಶಿಕ್ಷಕರಿಗೆ ಅತ್ಯಂತ ಮಹತ್ವದ ಸಂಗತಿಯಾಗಿದೆ. ಈ ವಿಷಯದಲ್ಲಿ ಮನಃ ಶಾಸ್ತ್ರದ ಪ್ರಯೋಜನವನ್ನು ನಾವು ಪಡೆಯಬಹುದು. ಒಳ್ಳೆಯ ದಾಗಲಿ ಕೆಟ್ಟದಾಗಲಿ ರೂಢಿ ಎಂಬ ಅರ್ಥದಲ್ಲಿ ಚಟವೆಂಬ ಶಬ್ದವನ್ನು ಉಪಯೋಗಿಸಬಹುದಾದರೂ 'ಚಟ' ಎಂದಾಗ ಕೆಟ್ಟ ಚಟವೆಂಬ ಅರ್ಥವೇ ಕೂತು ಬಿಟ್ಟಿದೆ. ಜನರು ತಂಬಾಕು ಸೇದುವ ಚಟ, ಕುಡಿಯುವ ಚಟ, ಬಯ್ಗಳ ಚಟ ಮುಂತಾದ ಚಟಗಳ ವಿಷಯವಾಗಿ ಮಾತನಾಡಿದರೂ ಅಲಿಪ್ತನಾಗಿರುವ ಚಟ, ಮಿತಿಯನ್ನಿಟ್ಟುಕೊಳ್ಳುವ ಚಟ, ಧೈರ್ಯವನ್ನು ಕಳಕೊಳ್ಳದಿರುವ ಚಟ ಇತ್ಯಾದಿ ಚಟಗಳ ಮಾತನ್ನು ಉಪಯೋಗಿಸುವದಿಲ್ಲ. ಆದರೆ ನಿಜವಾದ ಸ್ಥಿತಿಯೆಂದರೆ ವ್ಯಸನಗಳಷ್ಟೇ ಸದ್ಗುಣಗಳೂ ರೂಢಿಯಿಂದ ಬಂದವಾಗಿರುತ್ತವೆ. ಅದಕ್ಕೊಂದು ಖಂಡಿತ ಸ್ವರೂಪ ವಿರುವಷ್ಟರ ಮಟ್ಟಿಗೆ ನಮ್ಮ ಜೀವನವೆಲ್ಲವೂ ರೂಢಿಗಳ ಒಂದು ಗಂಟಿನಂತೆ ಇದೆ; ವ್ಯಾವಹಾರಿಕ ಜೀವನವೇ ಆಗಲಿ ಭಾವನಾತ್ಮಕ ಜೀವನವೇ ಆಗಲಿ, ಬೌದ್ಧಿಕ ಜೀವನವೇ ಆಗಲಿ ನಮ್ಮ ಅದೃಷ್ಟವು ಯಾವದೇ ಇರಲಿ ಅದರ ಕಡೆಗೆ ತಪ್ಪಿಸಲಿಕ್ಕೆ ಬರದಂತೆ ನಮ್ಮ ಹಿತದಲ್ಲಿಯೇ ನಮ್ಮ ಕೇಡಿನಲ್ಲಿಯೇ ಪರ್ಯವಸಾನವಾಗುವಂತೆ ವ್ಯವಸ್ಥಿತವಾಗಿ ಸಂಘಟಿತವಾಗಿರುವದು.

ಸ್ವಲ್ಪ ಸಣ್ಣವರಿರುವಾಗಲೇ ಹುಡುಗರು ಈ ಸಂಗತಿಗಳನ್ನು ತಿಳಿದುಕೊಳ್ಳಬಲ್ಲವರಾಗಿರುವದರಿಂದಲೂ ತಮ್ಮ ಕರ್ತವ್ಯದ, ಹೊಣೆಗಾರಿಕೆಯ ಭಾವನೆ ಅವರಲ್ಲಿ ಮೂಡಲಿಕ್ಕೆ ಈ ಬೋಧನೆಯು ಬಹುಮಟ್ಟಿಗೆ ಕಾರಣೀಭೂತವಾಗಿರುವದರಿಂದಲೂ ಶಿಕ್ಷಕರು ಹುಡುಗರಿಗೆ ರೂಢಿಯ ನಿಯಮಗಳ ತಾತ್ವಿಕ ಬೋಧನೆಯನ್ನು ಅವರಿಗೆ ತಿಳಿಯದಂತೆ ಸಾಧ್ಯವಿದ್ದಷ್ಟು ಸುಲಭವಾದ ಮಾತಿನಲ್ಲಿ ಮಾಡಲಿಕ್ಕೆ ಕಲಿತು ಕೊಳ್ಳುವದು ಅವಶ್ಯವಾಗಿದೆ.

ನಾವು ರೂಢಿಯ ನಿಯಮ-ನಿಬಂಧನೆಗೆ ಒಳಪಟ್ಟಿರುವದಕ್ಕೆ ಜೀವವು ಸಶರೀರವಾಗಿರುವದೇ ಕಾರಣವೆಂದು ಹೇಳಬಹುದು. ದೇಹದ ನರಮಂಡಲದಲ್ಲಿರುವ ಸಜೀವ ಸಾಮಗ್ರಿಯು ನರಗಳಲ್ಲಿ ಹರಿದು ಬರುವ ಸಂದೇಶಗಳಿಗೆ ಹೊಂದಿಕೊಳ್ಳುವ ಹಿಗ್ಗುವ ಕುಗ್ಗುವ ಸ್ವಭಾವವುಳ್ಳದ್ದಾಗಿರುವದು; ಅದರಿಂದಲೇ ಮೊದಲು ಒಂದು ಕೆಲಸವನ್ನು ಮಾಡುವಾಗ ಕಷ್ಟವಾಗುವದು, ಆದರೆ ಮುಂದೆ ಸ್ವಲ್ಪ ಅವಧಿಯಲ್ಲಿಯೇ ಅದನ್ನು ಹೆಚ್ಚು ಹೆಚ್ಚು ಸುಲಭವಾಗಿ ಮಾಡಲು ಬರುವದು; ಮತ್ತು ಕೊನೆಗೆ ಸಾಕಷ್ಟು ಅಭ್ಯಾಸವಾದ ಮೇಲೆ ಅದನ್ನು ಯಾಂತ್ರಿಕಪ್ರಾಯವಾಗಿಯೇ ಮಾಡುವೆವು ಅಥವಾ ಅದರ ಅರಿವೇ ಇಲ್ಲದ ಹಾಗೆ ಅದು ನಡೆದು ಹೋಗುವದು. ನಮ್ಮ ನರಮಂಡಲವು ನಮ್ಮ ನಿತ್ಯಆಚರಣೆಯ ವ್ಯವಹಾರದ ಬಡಿತದಂತೆ ಬೆಳೆಯುತ್ತ ಬರುವದು; ಒಂದು ಕಾಗದದ ಹಾಳೆಯನ್ನಾಗಲಿ ಒಂದು ಅಂಗಿಯನ್ನಾಗಲಿ ನೋಡಿರಿ. ಒಮ್ಮೆ ಅದು ಮಡಿಚಲ್ಪಟ್ಟು ಗೆರೆಮಾಡಿದರಾಯಿತು. ಮುಂದೆ ಬೇಕಾದಷ್ಟು ಸಲ ಮಡಿಚಬೇಕಾದಾಗ ಅದು ಅದೇ ಹಾಗೆಯೆ ಮಡಿಚಿಕೊಳ್ಳುವದು.

ರೂಢಿ ಅಥವಾ ಅಭ್ಯಾಸವು ಹೀಗೆ ಸ್ವಭಾವದ್ದೇ ಮತ್ತೊಂದು ರೂಪವೆಂದು ಹೇಳಬಹುದು. ಸ್ವಭಾವ ಕ್ಕಿಂತಲೂ ಬಲಿಷ್ಟವೆಂದೂ ಹೇಳಬಹುದು. ಪ್ರೌಢ ಜೀವನ ದಲ್ಲಿ ಅದರ ಮಹತ್ವವು ಅಷ್ಟೊಂದಿದೆ; ಯಾಕಂದರೆ ಆಚರಣೆಯಿಂದ ನಾವು ಕಲಿತ ಅಭ್ಯಾಸಗಳು ಅವೊಂದು ಅವಧಿಯಲ್ಲಿ ನಮ್ಮಲ್ಲಿ ಮೂಲಭೂತವಾಗಿದ್ದ ಬಹುತರ ಯಾವತ್ತೂ ಸ್ವಾಭಾವಿಕ ಪ್ರಚೋದನೆಗಳನ್ನು ಅವು ಕಾರ್ಯಕಾರಿಯಾಗದಂತೆ ಅವನ್ನು ಹಿಸುಕಿಬಿಟ್ಟಿರುತ್ತವೆ. ನಮ್ಮ ಕಾರ್ಯಾಚರಣೆಯ ತೊಂಬತ್ತೊಂಬತ್ತು ಶತಾಂಶ ಭಾಗ, ಅಷ್ಟೇಕೆ ಒಂಬೈನೂರ ತೊಂಬತ್ತೊಂಬತ್ತು ಸಹ ಸ್ಯಾಂಶ ಭಾಗವೆಂದರೂ ಆಗಬಹುದು; ನಮ್ಮ ಆಚರಣೆಯ ಇಷ್ಟು ಅಂಶವು ಕೇವಲ ಯಾಂತ್ರಿಕವಾಗಿ ರೂಢಿಯಿಂದ ನಡೆಯುವದು. ಬೆಳಗು ಮುಂಜಾವದಲ್ಲಿ ಏಳುವದರಿಂದ ಆರಂಭವಾಗಿ ರಾತ್ರಿ ಮಲಗಿಕೊಳ್ಳುವ ವರೆಗೆ ನಾವು ಬಟ್ಟೆ ಹಾಕಿಕೊಳ್ಳುವದು, ತೆಗೆದಿಡುವದು, ತಿನ್ನುವದು, ಉಣ್ಣುವದು, ಭೆಟ್ಟಿಯಾಗುವದು, ಕೈಮುಗಿಯುವದು, ಮರಳುವದು, ಅಷ್ಟೇಕೆ ನಮ್ಮ ದಿನಬಳಕೆಯ ಮಾತುಗಳು ಸಹ

ಪುನಃ ಪುನರಾವೃತ್ತಿಯಿಂದ ಒಂದು ಸ್ಥಿರವಾದ ಚೌಕಟ್ಟಿನಲ್ಲಿ ಕೂತುಬಿಟ್ಟಿರುವವೆಂದರೆ ಅವು ಸಹ, ನಾವು ಕಣ್ಣುರೆಪ್ಪೆಬಡಿಯುವದು, ಬಿಕ್ಕುವದು. ಆಕಳಿಸುವದು ಇವುಗಳ ಹಾಗೆ ಉದ್ದೇಶರಹಿತ ಯಾಂತ್ರಿಕ ಕ್ರಿಯೆಗಳಂತೆ ಆಗಿಬಿಟ್ಟಿರುವವೆಂದರೇನು ತಪ್ಪಲ್ಲ. ನಮ್ಮ ಇಂದ್ರಿಯಗಳ ಮೇಲೆ ಆಗುವ ಪ್ರತಿಯೊಂದು ಪ್ರಚೋದನೆ ಕ್ರಿಯೆಗೆ ಬಂದು ಕೂಡಲೇ ಯಾಂತ್ರಿಕವಾಗಿ ನಡೆಯುವ ಒಂದು ಪ್ರತಿಕ್ರಿಯೆಯು ರೂಪಿಸಲ್ಪಟ್ಟಿರುತ್ತದೆ. ನಾನು ಈಗ ಬರೆಯುತ್ತಿರುವ ಶಬ್ದಗಳೇ ನಾನು ಹೇಳುವ ಮಾತಿಗೆ ಉದಾಹರಣೆಯಾಗಿದೆ. ವಿಲ್ಯಯಮ್ ಜೇಮ್ಸನ ಮನೋವಿಜ್ಞಾನದ ಪುಸ್ತಕವನ್ನು ಓದಿದಾಗ— ಈ ವಿಷಯದ ವಿವರಣೆಯನ್ನು ಓದಿದಾಗ ನನ್ನ ಮನಸ್ಸಿನ ಮೇಲೆ ಅಚ್ಚೊತ್ತಿದ ಶಬ್ದಗಳು ಪುನಃ ಪುನಃ ಸ್ವಲ್ಪ ಹೆಚ್ಚು ಕಡಿಮೆಯಾಗಿ ಈ ನನ್ನ ಲೇಖನದಲ್ಲಿ ನಿಮ್ಮಿಂದ ಕೇಳಲ್ಪಡುತ್ತಿವೆ. ನಾವು ರೂಢಿಗಳ ಕಟ್ಟನಂತೆ ಇರುವಷ್ಟರ ಮಟ್ಟಿಗೆ ಕಟ್ಟುನಿಟ್ಟಿನ ಮುದ್ರೆಯ ಸ್ವಭಾವದವರಾಗಿ ಬಿಟ್ಟಿರುತ್ತೇವೆ; ಹಿಂದಿನ ನಮ್ಮ ಗುಣದೋಷಗಳನ್ನೇ ನಾವು ನಕಲುಮಾಡುವಂತಿರುತ್ತದೆ. ಹೀಗೆ ರೂಢಿಗಳು ನಮ್ಮನ್ನು ಒಂದು ಅಚ್ಚೊತ್ತಿದ ವ್ಯಕ್ತಿತ್ವದ ಕಡೆಗೆ ಎಳೆಯುತ್ತಿರುವದನ್ನು ತಿಳಿದುಕೊಂಡ ನಾವು ಶಿಕ್ಷಕರು ಮುಖ್ಯವಾಗಿ ಮಾಡಬೇಕಾದ ಕಾರ್ಯವೆಂದರೆ ನಮ್ಮ ವಿದ್ಯಾರ್ಥಿಗಳಲ್ಲಿ ನಾವು ನೆಲೆಗೊಳಿಸಬೇಕಾದದ್ದು ಮುಂದೆ ಅವರ ಅಖಂಡ ಆಯುಷ್ಯದಲ್ಲಿ ಅವರಿಗೆ ಅತ್ಯಂತ ಉಪಯುಕ್ತವಾಗುವಂತಹ ರೂಢಿಗಳ ಸಂಘಟನೆಯಾಗಿರುವದು. ಆಚರಣೆಯೇ ವಿದ್ಯೆಯ ಪ್ರಯೋಜನ, ರೂಢಿಗಳೆಂಬ ಮಣ್ಣಿನಿಂದಲೇ ಆಚರಣೆಯ ಮೂರ್ತಿಯು ರೂಪಿಸಲ್ಪಡುತ್ತಿದೆ.

ಎಲ್ಲ ವಿದ್ಯಾಭ್ಯಾಸದಲ್ಲಿರುವ ಒಂದು ದೊಡ್ಡ ಸಾಧನೆಯೆಂದರೆ ನಮ್ಮ ನರಮಂಡಲವು ನಮ್ಮ ಶತ್ರುವಾಗದೆ ನಮ್ಮ ಇಷ್ಟ ಮಿತ್ರನಾಗುವಂತೆ ಮಾಡುವದು ಆಗಿದೆ. ವಿದ್ಯಾಭ್ಯಾಸದಲ್ಲಿ ನಾವು ಸುಪ್ರಸಿದ್ಧ ಸಂಪತ್ತು ನಿಧಿಯಾಗಿ ಬಂಡವಾಳವಾಗಿ ಉಳಿದು ಆ ನಿಧಿಯ ಬಡ್ಡಿಯ ವ್ಯಯದಿಂದಲೇ ಸಂತುಷ್ಟರಾಗಿ ನಾವು ಜೀವಿಸುವಂತಾಗಬೇಕು. ಇದಕ್ಕಾಗಿ ಆದಷ್ಟು ಬೇಗನೆ, ಸಾಧ್ಯವಾದಷ್ಟು ಉಪಯುಕ್ತ ಕರ್ಮಗಳನ್ನು ಸ್ವಯಂಚಾಲಿತವಾಗಿ, ರೂಢಿಬದ್ಧವಾಗಿ ನಡೆಯುವಂತೆ ಮಾಡಬೇಕು. ಮತ್ತು ಆದೇ ಕಾಲಕ್ಕೆ ಯಾವ ಹಾದಿಗಳು ರೀತಿಗಳು ನಮಗೆ ಲಾಭದಾಯಕವಲ್ಲವೋ ಅವುಗಳಲ್ಲಿ ಕಾಲಿಡದಂತೆ ಎಚ್ಚರ ಪಡಬೇಕು. ನಮ್ಮ ದೈನಂದಿನ ಜೀವನದ ಕಿರುಕಳ ಸಂಗತಿಗಳನ್ನು ಹೆಚ್ಚು ಹೆಚ್ಚಾಗಿ ಹೀಗೆ ಹೀಗೆ ನಾವು ಈ ನಮ್ಮ ಪರಿಶ್ರಮಬೇಕಾದಾಗಸ್ವಯಂಚಾಲಿತ ಯಂತ್ರದ ತಾಬೇಕ್ಕೆ ಕೊಟ್ಟುಬಿಡುವೆವೋ ಹಾಗೆ ಹಾಗೆ ನಮ್ಮ ಮನಸ್ಸಿನ ಮೇಲ್ಮಟ್ಟದ ಶಕ್ತಿಗಳಿಗೆ ತಮ್ಮದೇ ಆದ ವಿಶಿಷ್ಟ ಕಾರ್ಯಕ್ಕೆ ಅವಕಾಶವು ಲಭಿಸುವದು. ಯಾವನಲ್ಲಿ ಎಲ್ಲವೂ ಅನಿಶ್ಚಿತವಾಗಿದ್ದು ಒಂದು ಕೆಲಸವೂ ರೂಢಿಯ ಯಂತ್ರದಿಂದ ನಡೆಯುವದಿಲ್ಲವೋ ಅಂತಹ ಕಷ್ಟ ಜೀವಿಯಾದ ಮಾನವನು ಇನ್ನೊಬ್ಬನಿಲ್ಲ. ಒಂದು ಊಟ ಮಾಡುವದು, ನೀರು ಕುಡಿಯುವದು, ದಿನಾಲು ಏಳುವದು, ಮಲಗಿಕೊಳ್ಳುವದು ಪ್ರತಿಯೊಂದು ಸಣ್ಣಕೆಲಸದ ಆರಂಭಕ್ಕೆ ಹತ್ತುವದು, ಇವೆಲ್ಲವೂ ಸ್ಪಷ್ಟವಾದ ಉದ್ದೇಶಪೂರ್ವಕವಾದ ವಿಚಾರದಿಂದ ನಿರ್ಣಿತವಾಗ ಬೇಕಾದಂತಹ ಕಷ್ಟ ಜೀವನ ಬೇರೊಂದಿಲ್ಲ. ಇಂತಹ ಮನುಷ್ಯನ ಅರ್ಧವೇಳೆಯು ಈ ನಿರ್ಣಯ ಮಾಡುವದರಲ್ಲಾಗಲಿ, ಆಗಿ ಹೋದದ್ದರ ಬಗ್ಗೆ ವಿಷಾದ ಪಡುವದರಲ್ಲಿಯಾಗಲಿ ಹೋಗುವದು ಇಂತಹ ನಿತ್ಯದ ಸಣ್ಣ ಕಾರ್ಯಗಳು ಅವನಲ್ಲಿ ಪೂರ್ತಿಯಾಗಿ ರೂಢಮೂಲವಾಗಿರಬೇಕಾಗಿದ್ದು, ಅವು ಅವನ ಪ್ರಜ್ಞೆಯಲ್ಲಿ ಸಹ ಹಣಿಕಿಹಾಕದಂತೆ ಅಂತರ್ಗತವಾಗಿರಬೇಕು. ಇಂತಹ ಪ್ರತಿನಿತ್ಯದ ಕಾರ್ಯಗಳು ಯಾರಾದರೂ ಓದುಗರ ಮನಸ್ಸಿನಲ್ಲಿ ಯಾಂತ್ರಿಕವಾಗಿ ನೆಲಸಿರದಿದ್ದರೆ ಈಗಲೆ ಈ ಕ್ಷಣವೇ ಅವರು ಅದನ್ನು ಸರಿಪಡಿಸಿಕೊಳ್ಳಲಿಕ್ಕೆ ಪ್ರಯತ್ನಿಸಬೇಕು.

ಪ್ರೊಫೆಸರ್ ಬೇನ್ ಅವರ ಪುಸ್ತಕದ 'ನೈತಿಕ ಅಭ್ಯಾಸಗಳು' ಎಂಬ ಅಧ್ಯಾಯದಲ್ಲಿ ಕೆಲವು ಉತ್ತಮ ವ್ಯಾವಹಾರಿಕ ಸೂಚನೆಗಳು ಇವೆ— ಎರಡು ದೊಡ್ಡ ಉಪದೇಶದ ಮಾತುಗಳೂ ಇವೆ. ಒಂದನೆಯದು, ಯಾವದೊಂದು ಹೊಸ ಅಭ್ಯಾಸವನ್ನು ಹಚ್ಚಿಕೊಳ್ಳಬೇಕಾದಾಗ ಅಥವಾ ಹಳೆಯ ಒಂದು ಚಟವನ್ನು ಬಿಡಬೇಕಾದಾಗ ಅದಕ್ಕೆ ಒಂದು ಅಪೂರ್ವ ಉತ್ಸಾಹದಿಂದ, ಗಟ್ಟಿಮನಸ್ಸಿನಿಂದ ದೃಢಸಂಕಲ್ಪದಿಂದ ಮೊದಲಿಡಬೇಕು. ನಿಮ್ಮ ಸದುದ್ದೇಶವನ್ನು ಬಲಪಡಿಸುವಂತಹ ಎಲ್ಲ ಪರಿಸರದ ಕಾರಣಗಳನ್ನು ಕೂಡಿಸಿರಿ. ಹೊಸ ರೀತಿಯನ್ನು ಪ್ರೋತ್ಸಾಹಿಸುವಂತಹ ಪರಿಸ್ಥಿತಿಯನ್ನು ನಿರ್ಮಾಣ

ಮಾಡಿಕೊಳ್ಳಿರಿ. ಹಳೆಯ ರೀತಿಗೆ ವಿಸಂಗತವಾಗುವಂತಹ ಭಿಟ್ಟಿ ಮುಂತಾದ ಕೆಲಸಗಳನ್ನು ಇಟ್ಟುಕೊಳ್ಳಿರಿ. ಸಾರ್ವಜನಿಕವಾಗಿ ಪ್ರತಿಜ್ಞೆ ಮಾಡುವ ಪ್ರಸಂಗವಿದ್ದರೆ ಒಳ್ಳೆಯದೇ, ಮಾಡಿರಿ. ಸಾರಾಂಶ ನಿಮ್ಮ ನಿಶ್ಚಯಕ್ಕೆ ಎಲ್ಲ ಸಹಾಯಕ ಸಂಗತಿಗಳ ಕಟ್ಟನ್ನು ಹಾಕಿರಿ. ಇದರಿಂದ ನಿಮ್ಮ ಹೊಸ ನಿರ್ಧಾರವನ್ನು ನೀವು ಸಡಿಲು ಮಾಡ ಬಹುದೆಂಬ ಮೋಹವು ಉಂಟಾಗದಷ್ಟು ನಿಮ್ಮ ನೂತನ ಆರಂಭಕ್ಕೆ ಬಲವು ದೊರೆಯುವದು. ಸಡಿಲಿಸುವ ಮೋಹ ಉಂಟಾಗದೆ ಒಂದೊಂದು ದಿನ ಕಳೆದಂತೆ ಆ ಮೋಹವು ಎಂದೂ ಉಂಟಾಗದಂತೆ ದೂರ ತಳ್ಳಲ್ಪಡುವದು.

ವಿಲಾಯತಿಯಲ್ಲಿ ಒಬ್ಬ ಗೃಹಸ್ಥನು ವೃತ್ತಪತ್ರದಲ್ಲಿ ಹೀಗೊಂದು ಪ್ರಕಟನೆಯನ್ನು ಕೊಟ್ಟಿದ್ದನಂತೆ: "ಈ ದಿನಾಂಕದ ನಂತರ ನನ್ನನ್ನು ಯಾರಾದರೂ ಸಾರಾಯಿಯ ಅಂಗಡಿಯಲ್ಲಿ ನೋಡಿದರೆ ಆತನಿಗೆ ೫೦ ಪೌಂಡು ಬಕ್ಷಿಸ್ ಕೊಡುವೆನು"— ಮತ್ತು ಮುಂದುವರಿದು "ಇದರ ಕಾರಣವೆಂದರೆ ನಾನು ನನ್ನ ಹೆಂಡತಿಗೆ ವಚನ ಕೊಟ್ಟಿದ್ದೇನೆ" ಎಂದು. ಇಂತಹ ಹೆಂಡತಿ ಇರುವಾಗ ಮತ್ತು ಹೊಸ ನಿರ್ಧಾರವನ್ನು ಹೇಗೆ ಆರಂಭಿಸಬೇಕೆಂಬದನ್ನು ಚೆನ್ನಾಗಿ ತಿಳಿದವನಿದ್ದಾಗ ೫೦ ಪೌಂಡು ಪಣಕ್ಕೆ ಹಚ್ಚುವದು ಆ ಗೃಹಸ್ಥನಿಗೆ ಯಶದೊರೆಯುವದರ ಖಂಡಿತ ಲಕ್ಷಣವಾಗಿದೆ.

ಎರಡನೆಯ ನೆನಪಿಡತಕ್ಕ ಮಾತೆಂದರೆ, ಹೊಸ ಪದ್ಧತಿಯು ನಿಮ್ಮ ಜೀವನದಲ್ಲಿ ಗಟ್ಟಿಯಾಗಿ ಮನೆ ಮಾಡಿದೆ ಎನ್ನುವತನಕ ಆ ಪದ್ಧತಿಯನ್ನು ಸಡಿಲಿಸಿದ ಅಪವಾದವನ್ನು ಬರಗೊಡಬೇಡಿರಿ. ಒಂದೊಂದು ಅಪವಾದವು ಕಾಳಜಿಪೂರ್ವಕ ಸುತ್ತುತ್ತಿರುವ ಒಂದು ದಾರದ ಉಂಡಿಯನ್ನು ಕೆಳಗೆ ಒಗೆದಂತೆ; ಒಮ್ಮೆ ಜಾರಿ ಬಿತ್ತೆಂದರೆ ಎಷ್ಟೋಸುತ್ತು ಸುತ್ತಿದ್ದನ್ನು ಕಳೆದು ಬಿಡುತ್ತದೆ. ನಮ್ಮ ಜ್ಞಾನಕ್ರಿಯಾ ತಂತುಗಳಿಂದ ಕೂಡಿದ ನರಮಂಡಲವು ಒಮ್ಮೆಯೂ ತಪ್ಪದೆ ಸರಿಯಾಗಿ ತನ್ನ ಕಾರ್ಯ ಮಾಡುವಂತಾಗಬೇಕಾದರೆ ಚ್ಯುತಿಯಿಲ್ಲದತರಬೇತಿಯ ಸಾತತ್ಯವು ಬೇಕು. ಈ ಸಂದರ್ಭದಲ್ಲಿ ಪ್ರೊ. ಬೇನ್ ಹೇಳುವರು:

"ಬೌದ್ಧಿಕ ಕಲಿಕೆಗಳಿಂದ ಭಿನ್ನವಾಗಿರುವ ನೈತಿಕ ಅಭ್ಯಾಸಗಳ ಒಂದು ವಿಶೇಷವೆಂದರೆ ಅಲ್ಲಿ ಎರಡು ಒಂದನ್ನೊಂದು ವಿರೋಧಿಸುವ ಶಕ್ತಿಗಳಿರುವದು; ಒಂದನ್ನು ಕ್ರಮವಾಗಿ ಬಲಗೊಳಿಸಿ ಮತ್ತೊಂದರ ಮೇಲೆ ಅದು ತಲೆ ಎತ್ತುವಂತೆ ಮಾಡಬೇಕು. ಇಂಥ ಸನ್ನಿವೇಶದಲ್ಲಿ ಈ ಕಾಳಗಗಳಲ್ಲಿ ಒಂದರಲ್ಲೂ ಸೋಲಬಾರದು. ತಪ್ಪು ಮಾರ್ಗಕ್ಕೆ ದೊರೆತ ಒಂದು ಜಯವು ಸರಿಯಾದ ಮಾರ್ಗಕ್ಕೆ ದೊರೆತ ಹತ್ತಾರು ಗೆಲವುಗಳನ್ನು ಕೆಡಿಸಿ ಬಿಡುತ್ತದೆ. ಅಸಕೃದಾವೃತ್ತಿಯ ಜಯದಿಂದ ಒಂದು ಪಕ್ಷವು ಮತ್ತೊಂದನ್ನು ಬೇಕಾದಂತಹ ಪರಿಸ್ಥಿತಿಯಲ್ಲೂ ಧೈರ್ಯದಿಂದ ಎದುರಿಸಬಲ್ಲದು ಎಂಬ ಮಟ್ಟ ಮುಟ್ಟುವ ವರೆಗೆ ಆ ಮೊದಲಿನ ಪಕ್ಷಕ್ಕೆ ಒಮ್ಮೆಯೂ ಸೋಲಿಲ್ಲದ ಅನೇಕ ವಿಜಯದ ಸಾತತ್ಯವನ್ನು ತರಬೇಕು. ಇದು ತಾತ್ವಿಕವಾಗಿ ಮಾನಸಿಕ ಪ್ರಗತಿಯ ಅತ್ಯುತ್ತಮ ಮಾರ್ಗವಾಗಿದೆ."

ಹಿಂದೆ ಹೇಳಿದ ಎರಡು ಉಪದೇಶದ ಮಾತುಗಳಿಗೆ ಮೂರನೆಯದೊಂದನ್ನು, ಇದನ್ನು ಸೇರಿಸಬಹುದು: ನೀವು ಮಾಡಿದ ಪ್ರತಿಯೊಂದು ನಿರ್ಧಾರದಂತೆ ನಡೆಯಲು ನಿಮಗೆ ಸಿಕ್ಕುವ ತೀರ ಮೊಟ್ಟ ಮೊದಲಿನ ಅವಕಾಶವನ್ನು ತಪ್ಪದೆ ಹಿಡಿಯಿರಿ; ನೀವು ಅಳವಡಿಸಿಕೊಳ್ಳಬೇಕೆನ್ನುವ ಅಭ್ಯಾಸದ ಕಡೆಗೆ ನಿಮಗೆ ಉಂಟಾದ ಭಾವನಾತ್ಮಕ ಪ್ರಚೋದನೆಯಾದ ಸಮಯವನ್ನು ಬಿಡಬೇಡಿರಿ. ನಮ್ಮ ನಿರ್ಧಾರಗಳೂ ಆಕಾಂಕ್ಷೆಗಳೂ ನಮ್ಮ ಮಿದುಳಿಗೆ ಹೊಸದೊಂದು ಅಚ್ಚನ್ನು ಹಾಕುವದು; ರೂಢಿಯ ವಿಷಯವು ಮನಸ್ಸಿನಲ್ಲಿ ಮಾತ್ರ ರೂಪಗೊಂಡಾಗ ಅಲ್ಲ, ಆದರೆ ಕಾರ್ಯಾಚರಣೆಯು ಪ್ರಚೋದನೆಯಾದಾಗ.

ಎಷ್ಟೇ 'ಅಮೃತವಾಣಿ' ಗಾದೆಯ ಮಾತುಗಳ ಸಂಗ್ರಹವು ನಮ್ಮ ತಲೆಯಲ್ಲಿದ್ದರೂ, ನಮ್ಮ ಭಾವನೆಗಳು ಎಷ್ಟೋ ಮೆಚ್ಚಿಗೆಯವಿದ್ದರೂ, ನಡೆದುಕೊಳ್ಳಲಿಕ್ಕೆ ದೊರೆತ ಪ್ರತಿಯೊಂದು ಪ್ರತ್ಯಕ್ಷ ಅವಕಾಶದ ಉಪಯೋಗವನ್ನು ನಾವು ಮಾಡಿಕೊಳ್ಳದಿದ್ದರೆ, ನಮ್ಮ ಚಾರಿತ್ರ್ಯವು ಸುಧಾರಿಸದೆಯೇ ಉಳಿಯಬಹುದು. "ನರಕದ ನೆಲಗಟ್ಟು ಸದುದ್ದೇಶಗಳಿಂದ ಹರವಿದೆ" ಮೇಲಿನ ವಿಚಾರಗಳಿಂದ ಈ ಮಾತಿನ ಸಮಂಜಸತೆಯು ತಾನೇ ಹೊಳೆಯುವದು. ಜೆ. ಎಸ್. ಮಿಲ್ ಎಂಬ ತತ್ವಜ್ಞಾನಿಯು "ಚಾರಿತ್ರ್ಯವು ಪರಿಪೂರ್ಣವಾಗಿ ರೂಪುಗೊಂಡ ಸಂಕಲ್ಪ"ವೆಂದು ಹೇಳಿದ್ದಾನೆ. ಆತನು ಹೇಳುವ ಅರ್ಥದಲ್ಲಿ, ಇಚ್ಛಾಶಕ್ತಿ ಅಥವಾ ಸಂಕಲ್ಪಶಕ್ತಿಯೆಂದರೆ ಜೀವನದಲ್ಲಿ ದೊಡ್ಡದಾಗಿ ಬರುವ ಪರೀಕ್ಷೆಯ ಸಮಯಗಳಲ್ಲಿ ಸ್ಥೈರ್ಯದಿಂದ ನಿಶ್ಚಿತ

ರೀತಿಯಲ್ಲಿ ಕೂಡಲೇ ನಡೆದುಕೊಳ್ಳಹಚ್ಚುವ ಪ್ರವೃತ್ತಿಗಳ ಆಗರವು. ಎಷ್ಟರ ಮಟ್ಟಿಗೆ ಆಚರಣೆಯ ಕೃತಿಗಳು ಅವಿಚ್ಛಿನ್ನ ಪರಂಪರೆಯಿಂದ ನಮ್ಮಲ್ಲಿ ನಡೆದಿವೆಯೋ ಅಷ್ಟು ಮಟ್ಟಿಗೆ ಮಾತ್ರ ಕಾರ್ಯಾಚರಣೆಯ ಪ್ರವೃತ್ತಿಯು ನಮ್ಮಲ್ಲಿ ಬೇರುಬಿಟ್ಟಿದೆ ಎಂದು ಹೇಳಬಹುದು; ಅಷ್ಟು ಮಾತ್ರ ನಮ್ಮ ಮಿದುಳು ಬೆಳೆದಿದೆ ಎಂದು ಹೇಳಬೇಕು. ಮನಸ್ಸಿನಲ್ಲಿ ಆದ ನಿರ್ಧಾರ ಅಥವಾ ಮನಸ್ಸಿನಲ್ಲಿ ಹೊಳೆದು ಬೆಳಗಿದ ಭಾವನೆ ವಿಧಾಯಕ ಕೃತಿಯಲ್ಲಿ ಫಲಬಿಡದೆ ನಂದಿ ಹೋದರೆ ಲಭಿಸಿದ ಪ್ರಸಂಗವೊಂದನ್ನು ಕಳೆದುಕೊಂಡದ್ದಕ್ಕಿಂತ ಅದು ಕೆಟ್ಟದಾಗುವದು. ಅದು ಮುಂದಿನ ನಿರ್ಧಾರಗಳು ಭಾವನೆಗಳು ಕಾರ್ಯಾಚರಣೆಯಲ್ಲಿ ಪರ್ಯವಸಾನವಾಗದಂತೆ ತನ್ನ ತಂತ್ರವನ್ನು ಹೂಡುವದು. ಆಚರಣೆಗೆ ಸಜ್ಜಾದ ನರಮಂಡಲವಿಲ್ಲದ, ಬರಿಯ ಭಾವನೆಯ, ಕಲ್ಪನೆಯ, ಕನಸಿನ ಸಾಮ್ರಾಜ್ಯದಲ್ಲಿ ತೊಡಗಿರುವದಕ್ಕಿಂತ ತುಚ್ಛವೂ, ಹೇಯವೂ, ಕೀಳೂ, ಆದ ಮಾನವ ಸ್ವಭಾವವೇ ಇಲ್ಲ. ಪರಿಸ್ಥಿತಿಯ ಶುಷ್ಕ ಸಂಪರ್ಕವೆಂಬ ಸಮುದ್ರದಲ್ಲಿ ಈಸುತ್ತ ಒಂದಾದರೂ ಪೌರುಷದ ಕಾರ್ಯವನ್ನು ಮಾಡದೇ ಇರುವವನ ಜುಗುಪ್ಸಿತ ಜೀವನವೇ ಅದು.

ಇದರಿಂದ ನಾಲ್ಕನೆಯದೊಂದು ಬುದ್ಧಿಯ ಮಾತು ಹೊಳೆಯುವದು. ನಿಮ್ಮ ವಿದ್ಯಾರ್ಥಿಗಳಿಗೆ ಬಹಳ ಉಪದೇಶ ಮಾಡುವ ಸೋಜಿಗೆ ಹೋಗಬೇಡಿರಿ; ಒಳ್ಳೆಯ ಆಚರಣೆಯ ಮಾತುಗಳನ್ನು ಮಿತಿಮೀರಿ ಆಡಬೇಡಿರಿ. ಆಚರಣೆಗೆ ಇಳಿಸುವ ಒಳ್ಳೆಯ ಕೆಲಸದ ಸಂಧಿಗಳಿಗಾಗಿ ಕಾಯಿರಿ; ಬಂದ ಸಂಧಿಗಳನ್ನು ಕೂಡಲೆ ಉಪಯೋಗ ಮಾಡಿಕೊಳ್ಳಿರಿ. ಹೀಗೆ ಒಂದೇ ಪೆಟ್ಟಿಗೆ ಹುಡುಗರು ತಿಳುಕೊಂಡು, ಅನುಭವಿಸಿ, ಕೆಲಸ ಮಾಡಲಿಕ್ಕೆ ಹಚ್ಚಿರಿ. ಆಚರಣೆಯ ಚಲನಗಳೇ ಚಾರಿತ್ರ್ಯಕ್ಕೆ, ಶೀಲಕ್ಕೆ ಒಂದು ರಂಗನ್ನು ಕೊಡುವವು; ಒಳ್ಳೆಯ ಚಟಗಳು ಅಂಗಾಂಗಗಳಲ್ಲಿ ಭೇದಿಸುವಂತೆ ಮಾಡುವವು. ಭಾಷಣ ಪ್ರವಚನಗಳು ಪುನರಾವೃತ್ತಿಯಿಂದ ಬೇಸರವನ್ನುಂಟು ಮಾಡುವವು.

ಡಾರ್ವಿನ್ನನು ತನ್ನ ಆತ್ಮಚರಿತ್ರೆಯಲ್ಲಿ ಹೀಗೆ ಹೇಳಿದ್ದಾನೆ. "ಮೂವತ್ತು ವಯಸ್ಸಿನ ವರೆಗೆ ಅಥವಾ ಒಂದಿಷ್ಟು ಮುಂದೆ ಅನೇಕ ಬಗೆಯ ಕಾವ್ಯ–ಕವನಗಳು ನನಗೆ ಒಳ್ಳೇ ಆನಂದವನ್ನುಂಟು ಮಾಡುತ್ತಿದ್ದವು. ನಾನು ಶಾಲೆಯಲ್ಲಿ ಕಲಿಯುವಾಗಲೂ ಕೂಡ ಷೇಕ್ಸ್‌ಪಿಯರ್‌ನ ನಾಟಕಗಳಲ್ಲಿ ನನಗೆ ವಿಲಕ್ಷಣ ಆನಂದವೆನಿಸುತ್ತಿತ್ತು— ವಿಶೇಷತಃ ಐತಿಹಾಸಿಕ ನಾಟಕಗಳಲ್ಲಿ. ಮೊದಮೊದಲು ನಾನು ಚಿತ್ರಗಳನ್ನು ನೋಡಿ, ಸಂಗೀತ ಕೇಳಿ ಬಹಳ ಸಂತೋಷಪಡುತ್ತಿದ್ದೆನು. ಆದರೆ ಈಗ ಎಷ್ಟೋ ವರ್ಷಗಳಿಂದ ಕವಿತೆಯ ಒಂದು ಸಾಲು ಕೂಡ ಓದಬೇಕೆನಿಸುವದಿಲ್ಲ. ಇತ್ತಿತ್ತಲಾಗಿ ಷೇಕ್ಸ್‌ಪಿಯರ್ ಓದಬೇಕೆಂದು ಪ್ರಯತ್ನಿಸಿದೆ; ಆದರೆ ಅದು ಹೇಳಕೂಡದಷ್ಟು ನೀರಸವೆನಿಸಹತ್ತಿತು. ನನಗೆ ಬೇಸರ ಬಂದಿತು. ಚಿತ್ರ ನೋಡುವದರಲ್ಲಿಯೂ ಸಂಗೀತ ಕೇಳುವದರಲ್ಲಿಯೂ ನನಗೆ ಆಸ್ಥೆ ಹೋಗಿ ಬಿಟ್ಟಿದೆ. ಕಲೆಹಾಕಿದ ಸತ್ಯ ಸಂಗತಿಗಳ ರಾಶಿಗಳಿಂದ ಪರಿಶೀಲಿಸಿ ವ್ಯಾಪಕವಾದ ನಿಯಮಗಳನ್ನು ತೆಗೆಯುವ ಒಂದು ಬಗೆಯ ಯಂತ್ರವಾಗಿ ಬಿಟ್ಟಿದೆ ನನ್ನ ಮನಸ್ಸು. ಆದರೆ ಯಾವುದರ ಮೇಲೆ ಉನ್ನತವಾದ ಶ್ರೇಷ್ಠ ಅಭಿರುಚಿಗಳು ನಿಂತಿರುವವೋ ಆ ಒಂದು ಮಿದುಳಿನ ಭಾಗವೇ ಏಕೆ ಹೀಗೆ ನಿರ್ಜೀವವಾಗಿ ಬಿಟ್ಟಿದೆ ಎಂಬದು ನನಗೆ ತಿಳಿಯಲೊಲ್ಲದು. ನನ್ನ ಹಿಂದಿನ ಜೀವನವನ್ನು ಪುನಃ ಜೀವಿಸುವಂತಿದ್ದರೆ ಪ್ರತಿವಾರಕ್ಕೊಮ್ಮೆಯಾದರೂ ಸ್ವಲ್ಪ ಕಾವ್ಯವನ್ನು ಓದುವದನ್ನು ಸ್ವಲ್ಪ ಸಂಗೀತ ಕೇಳುವದನ್ನು ಇಟ್ಟುಕೊಳ್ಳುತ್ತಿದ್ದೆನು. ಹಾಗೆ ಮಾಡಿದ್ದರೆ ಈಗ ನಿಷ್ಕ್ರಿಯವಾಗಿರುವ ಮಿದುಳಿನ ಪ್ರದೇಶವು ಉಪಯೋಗದಿಂದ ಸಜೀವವಾಗಿರುತ್ತಿತ್ತು. ಈ ಅಭಿರುಚಿ–ಆಸಕ್ತಿಗಳನ್ನು ಕಳೆದುಕೊಂಡದ್ದು ಸೌಖ್ಯವನ್ನು ಕಳಕೊಂಡದ್ದೇ ಆಗಿದೆ; ಇಷ್ಟೇ ಅಲ್ಲ ಅದರಿಂದ ಬುದ್ಧಿ ಶಕ್ತಿಗೂ ಹಾನಿ ತಟ್ಟಬಹುದು; ಇದಕ್ಕೂ ಹೆಚ್ಚಾಗಿ ನಮ್ಮ ಸ್ವಭಾವದ ಹಾರ್ದಿಕ ಭಾವನೆಗಳನ್ನು ಕಮರಿಸುವದರಿಂದ ಅದು ನಮ್ಮ ಚಾರಿತ್ರ್ಯಕ್ಕೆ ವಿಕೃತಿಯನ್ನು ಉಂಟು ಮಾಡಬಹುದು"

(ಮುಂದುವರಿಯುವದು)

ದಶಾಂಶ ಪದ್ಧತಿಯ ತೂಕ-ಅಳತೆಗಳೂ ಅಭ್ಯಾಸ ಪತ್ರಿಕೆಯೂ

ಲೇಖಕರು:— ಶ್ರೀ 'ಬಮಶಿಂ'

ದಶಾಂಶ ಪದ್ಧತಿಯ ನಾಣ್ಯಗಳು:

ದಶಾಂಶ ನಾಣ್ಯ ಪದ್ಧತಿಯು ಜಾರಿಯಲ್ಲಿ ಬಂದು ಮೂರು ವರ್ಷಗಳು ಸಂದು ಹೋದವು. ಅದರ ಉಪಯುಕ್ತತೆಯನ್ನೂ ಅದರಿಂದಾಗುವ ಲಾಭಗಳನ್ನೂ ಈಗ ಆರೂ ಅಲ್ಲಗಳೆಯಲಾರರು. ಅದರಷ್ಟು ಸುಲಭವಾದ ಪದ್ಧತಿಯು ಜಗತ್ತಿನಲ್ಲಿ ಬೇರೆ ಆವುದೂ ಈಗ ಇರುವದಿಲ್ಲ. ಹಳ್ಳಿಗರಿಗಂತೂ ಅದು ಅತ್ಯುಪಯುಕ್ತವಾದದ್ದಾಗಿದೆ. ಎಲ್ಲ ಸರಕಾರಿ ಕಚೇರಿಗಳಲ್ಲಿಯೂ, ಸಾರ್ವಜನಿಕ ಸಂಸ್ಥೆಗಳಲ್ಲಿಯೂ, ಬ್ಯಾಂಕುಗಳಲ್ಲಿಯೂ, ಪೇಟೆಯಲ್ಲಿಯ ಎಲ್ಲ ಅಂಗಡಿಗಳಲ್ಲಿಯೂ ಈಗ ಎಲ್ಲ ವ್ಯವಹಾರಗಳೂ ಲೆಕ್ಕ ಪತ್ರಗಳೂ ಹೊಸ ನಾಣ್ಯಗಳಲ್ಲಿ ಸಾಗಿವೆ. ಹೊಸ ನಾಣ್ಯಗಳು ಅಮಲಿನಲ್ಲಿ ಬಂದಾಗಿನಿಂದ ವೇಳೆಯ ಮತ್ತು ಶ್ರಮದ ಉಳಿತಾಯವು ಬಹಳಷ್ಟಾಗಿದೆಯೆಂಬುದು ನಿರ್ವಿವಾದವು. ಪ್ರಾರಂಭದಲ್ಲಿ ಜನತೆಗೆ ಹೊಸ ನಾಣ್ಯಗಳಿಗೆ ಹೊಂದಿಕೊಂಡು ಹೋಗುವದರಲ್ಲಿ ಅಲ್ಪ ಸ್ವಲ್ಪು ತೊಂದರೆಗಳಾದುದು ನಿಜ. ಎಣಿಕೆಗೂ ಜಮಾಖರ್ಚಿನ ಲೆಕ್ಕಗಳಿಗೂ ಈ ಪದ್ಧತಿಯು ಅತ್ಯಂತಸುಲಭವಿರುವದನ್ನು ಜನರು ಈಗ ಕಂಡು ಹಿಡಿದಿರುವದರಿಂದ ಇದನ್ನು ಈಗ ಎಲ್ಲರೂ ಅತ್ಯಂತ ಆದರದಿಂದ ಸ್ವೀಕರಿಸುತ್ತಿರುವರೆಂಬುದು ಸಂತೋಷದ ಸಂಗತಿ.

ದಶಾಂಶ ಪದ್ಧತಿಯ ತೂಕ-ಅಳತೆಗಳು:

ದಶಾಂಶ ಪದ್ಧತಿಯ ನಾಣ್ಯಗಳ ಸುಧಾರಣೆಯು ಮುಂದೆ ಬರಬಹುದಾಗಿದ್ದ ದಶಾಂಶ ಪದ್ಧತಿಯ ತೂಕ-ಅಳತೆಗಳ ನಾಂದಿಯಾಗಿತ್ತಷ್ಟೇ. ಇದಕ್ಕೋಸ್ಕರ ಸರಕಾರದವರು ರಾಷ್ಟ್ರವನ್ನು ಮೊದಲೇ ಎಚ್ಚರಿಸಿ ಅದರ ಸಹಕಾರವನ್ನು ಕೋರಿದ್ದರು. ಈ ವರೆಗೆ ನಮ್ಮ ದೇಶದಲ್ಲಿ ನಾನಾ ತರಹದ ತೂಕ-ಅಳತೆಗಳು ಜಾರಿಯಲ್ಲಿದ್ದವು. ಪ್ರತಿಯೊಂದು ರಾಜ್ಯವು ತನ್ನದೇ ಆದೊಂದು ಪದ್ಧತಿಯನ್ನನುಸರಿಸುತ್ತಿತ್ತಲ್ಲದೆ ರಾಜ್ಯಗಳಲ್ಲಿಯ ಜಿಲ್ಲೆ ಜಿಲ್ಲೆಗಳಲ್ಲಿಯೂ ವಿವಿಧ ಪದ್ಧತಿಗಳ ತೂಕ-ಅಳತೆಗಳಿದ್ದವು. ಹೀಗಾಗಿ, ಜನರಿಗೂ ವ್ಯವಹಾರಸ್ಥರಿಗೂ ಆವು ಇಲ್ಲದ ಸಂಕಟಗಳಿಗೀಡು ಮಾಡುತ್ತಿದ್ದವು. ಈ ತೊಂದರೆಗಳನ್ನು ಹೊಡೆದೋಡಿಸಲು ನಮ್ಮ ಕೇಂದ್ರಸರಕಾರವು ಈ ಹೊಸ ಪದ್ಧತಿಯನ್ನು ೧೯೬೦ ನೆಯ ಇಸವಿ ಅಕ್ಟೋಬರ ತಿಂಗಳ ೧ನೆಯ ದಿನಾಂಕದಿಂದ ಬಳಕೆಯಲ್ಲಿ ತಂದಿದೆ. ರಾಷ್ಟ್ರದಲ್ಲಿ ಒಂದೇ ನಮೂನೆಯ ತೂಕ-ಅಳತೆಗಳಿದ್ದರೆ, ವ್ಯಾಪಾರೋದ್ದಿಮೆಗಳಿಗೂ ವ್ಯವಹಾರಸ್ಥರಿಗೂ ಜನತೆಗೂ ಹೇಳತೀರದಷ್ಟು ಲಾಭವಾಗುವದು, ನೆಮ್ಮದಿಯಾಗುವದು. ಹೊಸ ನಾಣ್ಯ ಪದ್ಧತಿಯಂತೆ ತೂಕ-ಅಳತೆಗಳ ಈ ಹೊಸ ಪದ್ಧತಿಯು ಎಣಿಕೆಗೂ ಜಮಾಖರ್ಚಿನ ಲೆಕ್ಕಗಳಿಗೂ ಅತ್ಯಂತ ಸುಲಭವು. ಇವುಗಳ ಕೋಷ್ಟಕಗಳಾದರೂ ನೆನಪಿಡಲು ಬಹಳ ಸುಲಭ. ಮೇಲಕ್ಕೂ ಕೆಳಗೂ ಅನುಕ್ರಮವಾಗಿ ಹತ್ತರ ಪಟ್ಟುಗಳನ್ನೂ ಭಾಗಗಳನ್ನೂ ಮಾಡುತ್ತ ಸಾಗಬೇಕು. ಜನತೆಗೆ ತೊಂದರೆಗಳಾಗದಂತೆ ಸರಕಾರವು ಕ್ರಮೇಣವಾಗಿ ಈ ಹೊಸ ಪದ್ಧತಿಗಳನ್ನು ಜಾರಿಯಲ್ಲಿ ತರುತ್ತಿರುವದು ನಿಜಕ್ಕೂ ಅಭಿನಂದನಾರ್ಹವು. ಹೊಸ ನಾಣ್ಯಗಳನ್ನು ಅಳವಡಿಸಿಕೊಳ್ಳಲು ಜನತೆಗೆ ಮೂರು ವರ್ಷಗಳು ಹಿಡಿದಂತಾದವು. ಇನ್ನು ಕೆಲವು ವರ್ಷಗಳಲ್ಲಿ ಹೊಸ ತೂಕ-ಅಳತೆಗಳನ್ನು ಸಹ ಜನರು ಅತ್ಯಾದರದಿಂದ ಅಳವಡಿಸಿಕೊಳ್ಳುವರೆಂಬುದರಲ್ಲಿ ಎಳ್ಳಷ್ಟಿತು ಸಂದೇಹವಿಲ್ಲ. ಅವುಗಳನ್ನು ರೂಢಿ ಮಾಡಿಕೊಳ್ಳಲು ಜನತೆಗೆ ಸಾಕಷ್ಟು ಅವಧಿಯನ್ನು ಕೊಡುವದು ಹಿತಕರವು. ಒಂದೆರಡು ವರ್ಷಗಳು ಹೆಚ್ಚು ಹಿಡಿದರೂ ಚಿಂತೆಯಿಲ್ಲ; ಆದರೆ ಇಂತಹ ಸುಧಾರಣೆಗಳನ್ನು ಅಮಲಿನಲ್ಲಿ ತರುವಾಗ ಗಡಿಬಿಡಿಯು ಮಾತ್ರ ತರವಲ್ಲವೆಂದು ಹೇಳಿದರೆ, ಅದು ತಪ್ಪಾದೀತೆಂದು ನಮಗನಿಸುವದಿಲ್ಲ. ಜನತೆಯ ಹಿತಕ್ಕೋಸುಗವೇ ಸರಕಾರವು ಈ ಹೊಸ ಸುಧಾರಣೆಗಳನ್ನು ಕೈಕೊಂಡಿದೆಯಲ್ಲವೇ? ಪ್ರಾಯೋಗಿಕವಾಗಿ ನಮ್ಮ ಕೇಂದ್ರ ಸರಕಾರವು ಪ್ರತಿಯೊಂದು ರಾಜ್ಯದಲ್ಲಿ ಹಲವು ಜಿಲ್ಲೆಗಳನ್ನಾಯ್ದುಕೊಂಡಿದೆ. ನಮ್ಮ ರಾಜ್ಯದಲ್ಲಿ ಬೆಂಗಳೂರು, ಧಾರವಾಡ ಮತ್ತು ರಾಯಚೂರ ಜಿಲ್ಲೆಗಳಲ್ಲಿ ಇದೇ ಅಕ್ಟೋಬರ ೧ನೆಯ ದಿನಾಂಕದಿಂದ ಹೊಸ ತೂಕ-ಅಳತೆಗಳು ಬಳಕೆಯಲ್ಲಿ ಬಂದಿವೆ.

ಅಭ್ಯಾಸ ಪತ್ರಿಕೆ:

ಈ ಸುಧಾರಣೆಗಳ ಪರಿಣಾಮವು ನಮ್ಮ ಪ್ರಾಥಮಿಕ ಸಾಲೆಗಳ ಅಭ್ಯಾಸ ಪತ್ರಿಕೆಯ ಮೇಲೆ ಆಗುತ್ತಿದೆಯೆಂಬು ದನ್ನು ಬೇರೆ ಹೇಳಬೇಕಾಗಿಲ್ಲ. ಅಭ್ಯಾಸ ಪತ್ರಿಕೆಯ ಗಣಿತ ವಿಷಯದಲ್ಲಿ ಚಿಕ್ಕಮಕ್ಕಳು ನಾಣ್ಯಗಳ ತೂಕಗಳ ಅಳತೆಗಳ ಮತ್ತು ಮಾಪುಗಳ ಎಷ್ಟೋ ಕೋಷ್ಟಕಗಳನ್ನು ಕಲಿಯುತ್ತಿವೆ, ಕಂಠಪಾಠ ಮಾಡುತ್ತಿವೆ.ಅವುಗಳಲ್ಲಿಹಲವು ಕೆಲಸಕ್ಕೆ ಬಾರದವುಗಳಿವೆ. ಮಕ್ಕಳ ನಿತ್ಯದ ವ್ಯವಹಾರ ಗಳಲ್ಲಿ ಅವುಗಳ ಉಪಯೋಗವುತಿಲಮಾತ್ರವೂ ಆಗುವದಿಲ್ಲ. ಒಂದು ನಾಣ್ಯದಿಂದ ಮತ್ತೊಂದು ನಾಣ್ಯಕ್ಕೆ ಪರಿವರ್ತಿ ಸುವದು, ಒಂದು ತೂಕದಿಂದ ಮತ್ತೊಂದು ತೂಕಕ್ಕೆ ರೂಪಾಂತರಿಸುವದು, ಒಂದು ಅಳತೆಯಿಂದ ಮತ್ತೊಂದು ಅಳತೆಗೆ ಬದಲಾಯಿಸುವದು, ಒಂದು ದೊಡ್ಡ ಮಾಪಿಗೆ ಸಣ್ಣ ಮಾಪುಗಳು ಎಷ್ಟಾಗುವವೆಂಬುದನ್ನು ಹೇಳುವದು, ಮುಂತಾದವುಗಳಲ್ಲಿ ಚಿಕ್ಕ ಮಕ್ಕಳ ವೇಳೆಯೂ ಶ್ರಮವೂ ಬಹಳಷ್ಟು ವ್ಯರ್ಥವಾಗಿ ಹಾಳಾಗುತ್ತಿದೆಯೆಂಬುದು ಓದುಗರ ಗಮನಕ್ಕೆ ಬಂದಿರಲು ಸಾಕು. ಹೊಸ ಪದ್ಧತಿ ಯಲ್ಲಿ ಮಕ್ಕಳ ವೇಳೆಯೂ ಹಾಳಾಗುವದಿಲ್ಲ. ಶ್ರಮವೂ ವ್ಯರ್ಥವಾಗಿ ವ್ಯಯವಾಗುವದಿಲ್ಲ. ಹೊಸ ಪದ್ಧತಿಯಲ್ಲಿ ಮಕ್ಕಳು ನಾಣ್ಯಗಳ, ತೂಕಗಳ, ಅಳತೆಗಳ ಮತ್ತು ಮಾಪುಗಳ ಕೋಷ್ಟಕಗಳನ್ನಷ್ಟು ಕಲಿತರೆ ಸಾಕು. ಅವು ಬಹಳಾದರೆ ನಾಲ್ಕು ಕೋಷ್ಟಕಗಳಾಗುವವು. ಅವು ಹತ್ತರ ಪಟ್ಟಿಗಳು ಇಲ್ಲವೆ ಭಾಗಗಳಿರುವದರಿಂದ ರೂಪಾಂತರಿಸುವ ಶ್ರಮವೂ ಆಗುವದಿಲ್ಲ ವೇಳೆಯೂ ಹತ್ತುವದಿಲ್ಲ. ಏರಿಕೆಯ ರೂಪಾಂತರದಲ್ಲಿ ದಶಾಂಶ ಚಿನ್ಹವನ್ನು ಹಿಂದಕ್ಕೆ, ಇಳಿಕೆಯ ರೂಪಾಂತರದಲ್ಲಿ ಮುಂದಕ್ಕೆಸರಿಸುತ್ತ ಸಾಗಬೇಕಾಗುವದು. ದಶಾಂಶಗಳಿಗೂ ವ್ಯವಹಾರಿ ಅಪೂರ್ಣಾಂಕಗಳಿಗೂ ಇರುವ ಸಂಬಂಧವನ್ನು ಮಕ್ಕಳಿಗೆ ತಿಳಿಸಿ ಕೊಡಲು ಈ ಪದ್ಧತಿಯು ಒಳ್ಳೇ ಸಹಾಯಕ ವಾಗಬಲ್ಲದು. ಇಷ್ಟೊಂದು ಸುಲಭವಾದ ಪದ್ಧತಿಯು ಬೇರೊಂದಿಲ್ಲ. ಆದುದರಿಂದ ಈಗಿನ ನಮ್ಮ ಅಭ್ಯಾಸ ಪತ್ರಿಕೆಯಲ್ಲಿಯ ಗಣಿತ ವಿಷಯವು ತಿದ್ದುಪಡಿ ಯನ್ನು ಆದಷ್ಟು ಬೇಗನೆ ಹೊಂದುವದೊಳಿತು. ಕೆಲಸಕ್ಕೆ ಬಾರದ ಕೋಷ್ಟಕಗಳನ್ನೆಲ್ಲ ಆಮೂಲಾಗ್ರವಾಗಿ ತೆಗೆದು ಹಾಕಿ ಹೊಸ ಪದ್ಧತಿಯ ನಾಲ್ಕು ಕೋಷ್ಟಕಗಳನ್ನು ಸೇರಿಸಬೇಕು. ಉದಾಹರಣೆಗಳು ಸಹ ಹೊಸ ಪದ್ಧತಿಯ ನಾಣ್ಯ ತೂಕ-ಅಳತೆ ಮಾಪುಗಳನ್ನೇ ಆಧರಿಸಿರಬೇಕು. ತತ್ಪರಿಣಾಮದಿಂದ ಈಗಿದ್ದ ಗಣಿತ ಪುಸ್ತಕಗಳೆಲ್ಲ ಕೂಡಲೇ ಮಾರ್ಪಾಟುಗಳನ್ನು ಹೊಂದಲೇ ಬೇಕಾಗುವದು. ಸ್ಕಾಲರಶಿಪ್, ಪಿ. ಎಸ್. ಸಿ. ಮತ್ತು ಪಿ. ಟಿ. ಸಿ. ಪರೀಕ್ಷೆಗಳಲ್ಲಿಯ ಪ್ರಶ್ನೆಗಳು ಹೊಸ ಪದ್ಧತಿಯನ್ನೇ ಆಧರಿಸಿರಬೇಕಾಗುವದು. ಹಾಗೆ ಮಾಡುವ ಮುನ್ನ ಎಲ್ಲ ಸಾಲೆಗಳಿಗೂ ಟ್ರೇನಿಂಗ ಸಂಸ್ಥೆಗಳಿಗೂ ಪರಿಪತ್ರಗಳ ಮುಖಾಂತರ ತಿಳಿಯ ಪಡಿಸಬೇಕು. ಹೀಗೆ ಮಾಡಿದರೆ, ಈ ಹೊಸ ಪದ್ಧತಿಯ ತೂಕ, ಅಳತೆ, ಮಾಪುಗಳು ಸಾಕಷ್ಟು ಪ್ರಚಾರ ಹೊಂದಿ ಬೇಗನೇ ಜನಪ್ರಿಯವಾಗುವವು. ಪ್ರತಿಯೊಂದು ಜೀವನ ಶಿಕ್ಷಣ ಸಾಲೆಗೆ ಹೊಸ ತೂಕಗಳ, ಅಳತೆಗಳ ಮತ್ತು ಮಾಪುಗಳ ಸೆಟ್ಟುಗಳನ್ನು ಶಿಕ್ಷಣ ಇಲಾಖೆಯವರು ಬೇಗನೆ ಒದಗಿಸಬೇಕಾಗುವದು. ಕಾರಣ ವೆಂದರೆ ಮಕ್ಕಳ ನಿತ್ಯದ ಚಟುವಟಿಕೆಗಳಿಗೆ ಈ ಸೆಟ್ಟು ಗಳು ಅವಶ್ಯವಾಗಿ ಬೇಕಾಗುತ್ತವೆ. ಹತ್ತಿ ನೂಲುಗಳನ್ನು ತೂಗಲಿಕ್ಕೂ, ನೂಲಿನ ಗಟ್ಟಿಗತನವನ್ನು ಪರೀಕ್ಷಿಸಲಿಕ್ಕೂ ಮಡಿಗಳ ಕ್ಷೇತ್ರಗಳನ್ನು ಅಳೆಯಲಿಕ್ಕೂ ಒಕ್ಕಲತನದ ಹುಟ್ಟುವಳಿಯನ್ನು ಅಳೆಯಲಿಕ್ಕೂ ಈ ಸೆಟ್ಟುಗಳ ಅವಶ್ಯಕತೆಯಿದೆ.

—: ಜಯ ಹಿಂದ :—

ವಿಶ್ವದ ಕೌತುಕಗಳು

ಲೇಖಕರು:— ಶ್ರೀ 'ಬಮಶಿಂ'

ಇಜಿಪ್ತದ ಪಿರಾಮಿಡ್ಡುಗಳು:

ಮೂರು ಪಿರಾಮಿಡ್ಡುಗಳದೊಂದು ಸಮೂಹವಿದೆ. ಅವುಗಳ ಹೆಸರುಗಳು 'ಖುಫು' (Khufu) 'ಖಾಫ್ರಾ' (Khafra) ಮತ್ತು 'ಮೆಂಕಾರಾ' (Menkara) ಎಂದು ಇವೆ. ಅವು ಆಯಾ ಅರಸರಿಂದ ರಚಿಸಲ್ಪಟ್ಟಿರುವ ದರಿಂದ ಆಯಾ ಅರಸರ ಹೆಸರುಗಳೇ ಅವಕ್ಕೆ ಬಂದಿವೆ. ಆಯಾ ಅರಸರ ಗೋರಿಗಳ ಮೇಲೆ ಅವು ಕಟ್ಟಲ್ಪಟ್ಟಿವೆ. ಅವು ಕಾಯರೋ ಪಟ್ಟಣದ ಬದಿಯಲ್ಲಿರುವ ಗೀಝಾ

ಗ್ರಾಮೀಣ ಜೀವನದಲ್ಲಿ ಶಾಲಾಗುರು

ಲೇಖಕರು :— ಶ್ರೀ ಮ. ಗು. ಹಿವಾರಿ, ಅ. ಮಾ. ಕ. ಗಂ. ಶಾ. ನಂ. ೧, ಬೆಳಗಾವಿ

[ಕಳೆದ ಸಂಚಿಕೆಯಿಂದ ಬಂದುದು]

ಅಂದಿನ ಶಾಲಾಗುರುವಿಗೆ ಹೊಟ್ಟೆಬಟ್ಟೆಯ ಚಿಂತೆ ಯಿದ್ದಿಲ್ಲ. ಅವನ ಸಂಬಳ ಸಾರಿಗೆಗಳು ಆಗೂ ತೀರ ನಿಕೃಷ್ಟಾವಸ್ಥೆಯಲ್ಲಿಯೇ ಇದ್ದವು. ಆಗ ಪ್ರಾಥಮಿಕ ಶಾಲೆಯ ಉಪಧ್ಯಾಯನಿಗೆ ೪-೫ ರೂ. ಸಂಬಳ ಸಿಗುತ್ತಿತ್ತು ಅದು ಅಗ್ಗದ ಕಾಲವಾಗಿತ್ತು. ಆ ಅಲ್ಪ ಸಂಬಳದಲ್ಲಿಯೇ ಶಾಲಾಗುರು ನೆಮ್ಮದಿಯಿಂದ ಬಾಳಿ ತನ್ನ ಸಂಸಾರ ರಥ ವನ್ನು ಮುನ್ನಡೆಸುತ್ತಿದ್ದನು. ಗ್ರಾಮೀಣ ಜನತೆ ಅವನನ್ನು ತಮ್ಮವನೆಂದೇ ಬಗೆಯುತ್ತಿತ್ತು. ರೈತರು ತಮ್ಮ ಹೊಲ–ಗದ್ದೆಗಳಲ್ಲಿ ಬೆಳೆದ ಕಾಳು ಕಡಿ, ಪಲ್ಲೆಕಾಯಿ, ಮತ್ತು ಹಾಲು ಮೊಸರು ಇತ್ಯಾದಿ ಅವನಿಗೆ ಸ್ವಸಂತೋಷ ದಿಂದ ಉಚಿತವಾಗಿ ತಂದು ಕೊಡುತ್ತಿದ್ದರು. ಇದಕ್ಕೆ ಪ್ರತಿಯಾಗಿ ಶಾಲಾಗುರು ಅವರಿಗೆ ಮೇಲೆ ವಿವರಿಸಿದಂತೆ ಅನೇಕ ಬಗೆಯಾಗಿ ಸಹಾಯ ನೀಡುತ್ತಿದ್ದನು. ಈ ಬಗೆ ಯಾಗಿ ಆಗ ಶಾಲಾಗುರು ಗ್ರಾಮದ ಗಣ್ಯವ್ಯಕ್ತಿಯಾಗಿದ್ದ ನಲ್ಲದೆ ಅದರ ಸೂತ್ರ ಚಾಲಕನಾಗಿ ಕಾರ್ಯನಿರ್ವಹಿ ಸುತ್ತಿದ್ದನು.

ಇಂದಿನ ಗ್ರಾಮೀಣ ಜೀವನವನ್ನು ಅಂದಿನ ಗ್ರಾಮೀಣ ಜೀವನದೊಂದಿಗೆ ಹೋಲಿಸಿ ನೋಡಿದಾಗ ಆಜಗಜಾಂತರ ಕಂಡುಬಾರದಿರದು. ಇಂದಿನ ಗ್ರಾಮ ಅಂದಿನ ಕುಗ್ರಾಮವಾಗಿಲ್ಲವಾದರೂ ಅಂದಿನ ಸಂಸ್ಕೃತಿಯ ಸೌರಭವು ಅಲ್ಲಿ ಸೂಸದಾಗಿದೆ. ಇಂದಿನ ಬಹುಜನ ಗ್ರಾಮೀಣರು ಸಾಕ್ಷರರಾಗುತ್ತಿದ್ದಾರೇನೋ ನಿಜ. ಅವರಲ್ಲಿ ಸಾಮಾಜಿಕ ದೃಷ್ಟಿವಮಾತ್ರ ಮೂಡಿಬರದಿರುವ ಶೋಚ ನೀಯ ಸ್ಥಿತಿ ಗೋಚರಿಸದಿರದು. ಹೃದಯ ವೈಶಾಲ್ಯ ಹಾಗೂ ಮನೋವಿಕಾಸಗಳಿಲ್ಲದೆ ಕ್ಷುದ್ರ ಆಚಾರ ವಿಚಾರ ಗಳಿಗೆ ಅಂಟಿಕೊಂಡು ಸ್ವಾರ್ಥಬುದ್ಧಿ ಬೆಳೆಸಿಕೊಂಡು ಬಣ ಗುಂಪುಗಳನ್ನು ಕಟ್ಟಿಕೊಂಡು ತಮ್ಮ ತಮ್ಮೊಳಗೆ ಕಾದಾ ಡುತ್ತಿದ್ದಾರೆ. ತತ್ಪರಿಣಾಮವಾಗಿ ನ್ಯಾಯಾಲಯಗಳಿದ್ದ ಲ್ಲಿಗೆ ಓಡಾಡುತ್ತಿದ್ದಾರೆ. ರೇಲ್ವೆಹಾಸಲು, ಬಸ್ ಚಾರ್ಜು ವಕೀಲಿ ಫೀ, ಖಾನಾವಳಿ, ಚಹಾಫರಾಳ, ಸಿನೇಮಾ ಖರ್ಚು ಹೀಗೆ ಇನ್ನೂ ಅನೇಕ ಬಗೆಯಾಗಿ ವ್ಯಯಿಸಿ ಕೈಬರಿದು ಮಾಡಿಕೊಂಡು ಗ್ರಾಮಗಳಿಗೆ ಮರಳುತ್ತಾರೆ. ಗ್ರಾಮದ ಹಣ ಹೀಗೆ ವ್ಯರ್ಥವಾಗಿ ನಗರ ಪಟ್ಟಣಗಳ ಕಡೆಗೆ ಹರಿದು ಬರಹತ್ತಿದೆ. ಇಂದು ನಗರವಾಸಿಗಳಿಗಿಂತ ಗ್ರಾಮೀಣ ಜನತೆಯ ಆರೋಗ್ಯಸ್ಥಿತಿಯು ಹದಗೆಡುತ್ತಿದೆ. ಗ್ರಾಮಗಳಲ್ಲಿ ವೈದ್ಯಕೀಯ ಸೌಕರ್ಯಗಳು ಕಡಿಮೆಯಾದ್ದ ರಿಂದ ಈ ಮಾರ್ಗದಿಂದಲೂ ಗ್ರಾಮಾಂತರ ಪ್ರದೇಶದ ಹಣವು ನಗರ ಪಟ್ಟಣಗಳ ಕಡೆಗೆ ಹರಿದು ಬರುತ್ತಿದೆ. ಹಳ್ಳಿಯ ಬಹುಜನರಿಂದು ವ್ಯಸನಾದಿಗಳಲ್ಲಿ ಬಹಳೇ ಮುಂದುವರೆದಿದ್ದಾರೆ. ಕುಡಿಯುವದು (ಮದ್ಯಪಾನ) ಹೆಚ್ಚಾಗಿದೆ. ಅನಾಚಾರ, ಅತ್ಯಾಚಾರಗಳು ವಿಶೇಷವಾಗಿ ಕಂಡು ಬರಹತ್ತಿವೆ. 'ಓಸಿ' ಯಂತಹ ಜುಗಾರ ಆಟವು ಗ್ರಾಮಗಳಲ್ಲಿ ಕಾಲೂರಿ ನಿಂತಿದೆ. ಚಹದ ಚಟವಂತೂ ಅತಿಯಾಗಿದೆ. ನಾಲ್ಕು ಚಪ್ಪರು (ಗುಡಿಸಲು) ಗಳಿದ್ದಲ್ಲಿ ಒಂದು ಹಾಟೇಲು ಕಾಣಿಸಿಯೇ ತೀರುತ್ತದೆ. ಹೀಗೆಲ್ಲ ಗ್ರಾಮೀಣರಹಣವು ಸಿಕ್ಕಾಪಟ್ಟೆಯಾಗಿ ವ್ಯಯವಾಗುತ್ತಿದೆ. ಯೋಗ್ಯ ಆಹಾರ ವಿಹಾರಗಳಿಗೆ ಹಣವಿಲ್ಲದೆ ಬಹುಜನ ಗ್ರಾಮೀಣರು ಹೆಣದ ಮೋರೆ ಮಾಡಿಕೊಂಡು ಜೀವಿಸು ತ್ತಿದ್ದಾರೆ. ಇಂಥವಿಷಮಯ ಸಾಮಾಜಿಕ ಪರಿಸರದಲ್ಲಿದ್ದು ಕಾರ್ಯ ಮಾಡಬೇಕಾಗಿರುವ ಶಾಲಾಗುರು ಮೈತುಂಬ ಕಣ್ಣುಳ್ಳವನಾಗಿಯೂ ತಲೆತುಂಬ ವಿಚಾರವುಳ್ಳವ ನಾಗಿಯೂ ಯೋಗ್ಯ ಸಾಮಾಜಿಕ ದೃಷ್ಟಿ ಮೂಡಿಸಿ ಕೊಂಡವನಾಗಿಯೂ ಇರಬೇಕಾಗಿದೆ. ಇಲ್ಲವಾದರೆ ಇಂದಿನ ಗ್ರಾಮೀಣ ಜೀವನದ ಹುಚ್ಚು ಹೊಳೆಯಲ್ಲಿ ಆತನೂ ಕೊಚ್ಚಿಹೋಗಿ ಅವನೂ ಒಬ್ಬ ಸಮಾಜ ಕಂಟಕನಾಗಿ ಮಾರ್ಪಡುವನು.

ರೈತ, ಗ್ರಾಮದ ಅಷ್ಟೇ ಏಕೆ ರಾಷ್ಟ್ರದ ಬೆನ್ನೆಲುವು ಆಗಿದ್ದಾನೆ. ಇಂದವನ ಸ್ಥಿತಿಗತಿಗಳು ಹೇಳಿಕೊಳ್ಳುವ ಮಟ್ಟದಲ್ಲಿಲ್ಲ. ಸರಕಾರ ಈ ದಿಶೆಯಲ್ಲಿ ಸಾಕಷ್ಟು ಕಾರ್ಯ ಮಾಡುತ್ತಲಿದೆ. ಆ ಮಾತು ಬೇರೆ. ರೈತನ ಆರ್ಥಿಕ ಸ್ಥಿತಿ ಉನ್ನತ ಮಟ್ಟಕ್ಕೇರಿ ಅವನ ಸಾಮಾಜಿಕ ಸ್ಥಿತಿಗತಿಗಳೂ ಮೇಲಕ್ಕೇರಿ ಬರಬೇಕಾಗಿದೆ. ರೈತ ಗ್ರಾಮದ ತಂದೆಯಿದ್ದ

ಹಾಗೆ ಅಲ್ಲಿಯ ಕೈಕಸಬುದಾರರನ್ನು ಬುದ್ಧಿಜೀವಿಗಳನ್ನು ಉದಾರ ಬುದ್ಧಿಯಿಂದಲೂ ವಿಶ್ವಾಸದಿಂದಲೂ ಕಾಣುವಂತಾಗಬೇಕು. ಹೀಗಾಗಬೇಕಾದರೆ ಅವನು ಸಾಕ್ಷರನಾಗಿ ಸಾಮಾಜಿಕ ಹಾಗೂ ಸಾಂಸ್ಕೃತಿಕ ಸಂಸ್ಕಾರಗಳನ್ನು ಪಡೆಯಬೇಕಾಗುತ್ತದೆ. ಈ ಕಾರ್ಯವನ್ನಿಂದು ಗ್ರಾಮೀಣ ಶಾಲಾಗುರು ಅರಿತುಕೊಂಡು ಒಳ್ಳೆಯ ಚಾಣಾಕ್ಷತನದಿಂದ ನೆರವೇರಿಸಬೇಕಾಗಿದೆ. ಏಕಂದರೆ ರೈತನಿದುವರೆಗೆ ಕೆಲವೊಂದು ಬುದ್ಧಿ ಜೀವಿಗಳ ಮೋಸಗಾರಿಕೆಗೆ ಒಳಗಾಗಿ ಕಷ್ಟಪಟ್ಟಿದ್ದಾನೆ. ಆತನಿಗೆ ಕೆಲವೊಂದು ಬುದ್ಧಿ ಜೀವಿಗಳ ಬಗೆಗೆ ಅಪನಂಬಿಕೆ ಉಂಟಾದಲ್ಲಿ ಸೋಜಿಗವೇನಿಲ್ಲ. ಗ್ರಾಮದ ಕೆಲವೆ, ಬುದ್ಧಿ ಜೀವಿಗಳ ಮಾಲಿಕೆಯಲ್ಲಿ ಶಾಲಾಗುರು ಸಮಾವೇಶವಾಗುವನಾದ್ದರಿಂದ ಈ ಅಂಶವನ್ನು ಅವನು ಅವಶ್ಯಗಮನಿಸುವದೊಳಿತು.

ಶಾಲಾಗುರುವಿನ ಕಾರ್ಯಕ್ಷೇತ್ರ ಶಾಲೆಯ ವಿಚಾರ ಬಿಟ್ಟು ಈ ಗ್ರಾಮೀಣ ರಗಳೆ ಅವನಿಗೇತಕ್ಕೆಂದು ಕೇಳುವವರೂ ನಮ್ಮಲ್ಲಿದ್ದಾರೆ. ಶಾಲಾಗುರುವಿನ ಕಾರ್ಯ ಕ್ಷೇತ್ರ ಶಾಲೆಯಾದರೂ ಅದರ ಹಿನ್ನೆಲೆಯಲ್ಲಿ ಇಡೀ ಗ್ರಾಮೀಣ ಜೀವನವೇ ನಿಂತಿರುತ್ತದೆ. ಶಾಲೆಯಿರುವದು ಗ್ರಾಮಕ್ಕಾಗಿ ಅರ್ಥಾತ್ ಗ್ರಾಮದ ಜನರಿಗಾಗಿ ಅಲ್ಲವೆ? ಅದು ಕಾರಣ ಗ್ರಾಮೀಣರ ಆಗು ಹೋಗುಗಳ ಪರಿಣಾಮ ಶಾಲಾಜೀವನದ ಮೇಲೆಯೂ ಆಗುತ್ತದೆ. ಈ ವಿಚಾರವನ್ನು ನಾವಿಂದು ಅರಿಯಬೇಕು. ಇದನ್ನರಿಯದೇ ಹೋದರೆ ಮಳಲಿನ ಮೇಲೆ ಮನೆ ಕಟ್ಟಿದವರ ಸ್ಥಿತಿಯಂತೆ ಶಿಕ್ಷಣ ಕಾರ್ಯವನ್ನೆಸಗುವವರ ಸ್ಥಿತಿಯಾಗುವದು.

ಗ್ರಾಮಾಂತರ ಪ್ರದೇಶದ ಶಾಲಾಗುರುವಿನ ಹೊಣೆಗಾರಿಕೆಯು ಬಲುದೊಡ್ಡದಾಗಿದೆ. ಅದರಂತೆ ಅವನ ಜೀವನವನ್ನು ಒಳಹೊಕ್ಕು ನೋಡಿದುದಾದರೆ ಅವನ ತೊಂದರೆ ತಾಪತ್ರಯಗಳ ಅರಿವಾಗದಿರದು. ನಗರ ಪಟ್ಟಣಗಳಿಗಿಂತ ಗ್ರಾಮಗಳಿಲ್ಲಿಂದು ವಸತಿ ಸೌಕರ್ಯದ ಅಭಾವವು ವಿಶೇಷವಾಗಿದೆ. ಗ್ರಾಮದ ನೌಕರರಿಗೆ ವಸತಿಗಳು ದೊರೆಯುವದು ಕರಕಷ್ಟವಾಗಿದೆಯೆನ್ನುವ ವಿಚಾರ ಬಹುಜನ ಗ್ರಾಮೀಣ ಶಾಲಾಗುರುಗಳಿಗೆ ಅನುಭವವೇದ್ಯವಾಗಿರಲು ಸಾಕು. ವಸತಿಗಳೇ ದೊರೆಯದಿರುವಾಗ ಯೋಗ್ಯ ವಸತಿಗಳ ಮಾತಂತೂ ದೂರವೇ ಉಳಿಯಿತು. ಕೆಲವೊಂದು ಜೀವನಾವಶ್ಯಕ ಪದಾರ್ಥಗಳು ಕೆಲವೊಂದು ಹಳ್ಳಿಗಳಲ್ಲಿ ದುರ್ಮಿಳವಾಗಿರುವವು. ಅವುಗಳಿಗಾಗಿ ನೆರೆಯ ಪಟ್ಟಣಗಳಿಗೆ ಶಾಲಾಗುರು ಅಲೆದಾಡ. ಬೇಕಾಗುತ್ತದೆ. ಗ್ರಾಮಗಳಲ್ಲಿ ಸಾಮಾನ್ಯವಾಗಿ ಹೈನದ ಕೊರತೆಯಿರದು. ಆದರೂ ಇತ್ತಿತ್ತಲಾಗಿ ಕೆಲವೊಂದು ಗ್ರಾಮಗಳಲ್ಲಿ ಈ ಕೊರತೆ ಕಂಡು ಬರಹತ್ತಿದೆ. ಗ್ರಾಮದ ಜನರು ಹಣದಾಶೆಗಾಗಿ ಇದ್ದುಬಿದ್ದ ಹಾಲು ಮೊಸರು ಎಲ್ಲಾ ಒಯ್ದು ಸಮೀಪದ ನಗರ ಪಟ್ಟಣಗಳಿಗೆ ತುಂಬಿಬರುತ್ತಾರೆ. ಮೋಜಿನ ವಿಷಯವೆಂದರೆ, ಪಲ್ಲೆಕಾಯಿ ಬೆಳೆಯುವ ಗ್ರಾಮಗಳಲ್ಲಿಯೇ ಪಲ್ಲೆಕಾಯಿ ಮೂರಿಸಿಗದಂತಹ ಪರಿಸ್ಥಿತಿಯಿರುತ್ತದೆ. ಎಲ್ಲವನ್ನು ಹಣಕ್ಕಾಗಿ ಪಟ್ಟಣಕ್ಕೇ ಸಾಗಿಸುವರು. ತಮ್ಮ ಹಾಗೂ ತಮ್ಮ ಗ್ರಾಮದ ವಿಚಾರ ಅವರ ತಲೆಯಲ್ಲಿ ಸುಳಿಯಲಾರದು.

ಇನ್ನೊಂದು ಮೋಜಿನ ಸಂಗತಿಯೆನಿಸಬಹುದಾದರೂ ಕಟುಸತ್ಯವಾದ ಸಂಗತಿಯು ಹೀಗಿರುವದು. ಒಂದು ಗ್ರಾಮ ಅಲ್ಲಿಯಬೆಣ್ಣೆಯನ್ನೆಲ್ಲ ನೆರೆಯ ಪಟ್ಟಣದ ವ್ಯಾಪಾರಿಗಳು (ಬೆಣ್ಣೆ ತೂಗಿಸುವವರು) ಕೊಂಡು ಬೇರೆಡೆಗೆ ಸಾಗಿಸುತ್ತಿದ್ದರು. ಹಳ್ಳಿಯಲ್ಲಿ ಬೆಣ್ಣೆಯನ್ನು ಉಪಯೋಗಿಸುವವರು ತೀರ ಕಡಿಮೆ. ಶಾನುಭೋಗರು, ಅಪ್ಪೆತಪ್ಪಿ ಶಾಲಾಮಾಸ್ತರರು ಇವರೇ ಬೆಣ್ಣೆಯ ಬಳಕೆದಾರರು. ಒಮ್ಮೆ ಶಾಲಾಗುರುಗಳೊಬ್ಬರಿಗೆ ೧-೨ ಸೇರು ಬೆಣ್ಣೆ ಬೇಕಾಗಿತ್ತಂತೆ. ಅವರು ಒಕ್ಕಲಗಿತ್ತಿಯ ಮನೆಗೆ ಹೋಗಿ ಕೇಳಿದರು. ಆಗ ಒಕ್ಕಲಗಿತ್ತಿಯು "ನಮ್ಮಲ್ಲಿ ಬೆಣ್ಣೆ ಇಲ್ರಿ" ಎಂದಳು. ಮಾಸ್ತರರು ಅವಾಕ್ಕಾಗಿ ಕೇಳಿದರು. "ಏನವಾ ತೂಗಿಸುವವರಿಗೆ ಬೆಣ್ಣೆ ಇರತದ ನಮ್ಮಂತಹ ಉಣ್ಣುವವರಿಗೆ ಇರೊದಿಲ್ಲೇನು?" ಒಕ್ಕಲುಗಿತ್ತಿ ಹೇಳಿದಳು. "ನೀವೇನೂ ಅಸರಂತ ಕೊಳ್ಳುವವರಲ್ಲಾ. ಮೇಲಾಗಿ ಅವರ್ಹಾಂಗ ನೀವೇನೂ ನಮ್ಮ ಮಕ್ಕಳಮರಿ ಕೈಯಾಗ ರೊಕ್ಕಾ ಕೊಡಾವರಲ್ಲಾ. ಗಡಿಗಿಗೆ ೧-೨ ಆಣೆರೊಕ್ಕಾ ಹೆಚ್ಚಿಗೆ ಕೊಡತಾರ ಅದಕ್ಕsನಾವು ಅವರಿಗೆ ಹಾಕತೇವ. ನಿಮಗ ೧ ಆಣೆ ತುಪ್ಪ ಹೇಳಿದ್ರ ಜಿಕೀರಿ ಮಾಡ್ತೀರಿ. ಅದಕ್ಕ ಇಲ್ಲ ಅನ್ನೋದ." ಈ ವಿಚಾರ ಸರಣಿಯ ಹಿನ್ನೆಲೆಯಲ್ಲಿ ಇಂದಿನ ಒಕ್ಕಲು ಕುಟುಂಬದ ಸಾಮಾಜಿಕ ದೃಷ್ಟಿಯನ್ನೂ ಗ್ರಾಮೀಣ ಶಾಲಾಗುರುವಿನ ಆರ್ಥಿಕ ಸಹಾಯಕತೆಯನ್ನೂ ಕಂಡುಕೊಳ್ಳಬಹುದಾಗಿದೆಯಲ್ಲವೇ?

ಗ್ರಾಮೀಣಜೀವನದ ಏರುಪೇರುಗಳನ್ನು ಗ್ರಾಮೀಣ ವಿಭಾಗದ ಶಾಲಾಗುರು ಚನ್ನಾಗಿ ಅರಿತುಕೊಂಡು ಮುನ್ನಡೆದಿದ್ದಾರೆ, ಅವನ ಶಿಕ್ಷಣ ಕಾರ್ಯ ಫಲಕಾರಿಯಾಗುವದಲ್ಲದೆ ತನ್ಮೂಲಕ ಗ್ರಾಮದ ಅಭಿವೃದ್ಧಿಯಾಗುವದು. ಗ್ರಾಮಾಭಿವೃದ್ಧಿ ಕಾರ್ಯಕ್ಕೆ ಕೈನೀಡಿದ ಶಾಲಾಗುರು ನಿಜವಾಗಿಯೂ ರಾಷ್ಟ್ರನಿರ್ಮಾಪಕನಾಗಿರುವನಲ್ಲವೆ?

ಶಿಕ್ಷಣ ರಂಗದಲ್ಲಿ ಸಹಜೀವನ

ಲೇಖಕರು:— ಶ್ರೀ ಎಸ್. ಎಸ್. ಭೂಸರಡ್ಡಿ, S.T.C. ಬೇಸಿಕ್ ಟ್ರೇಂಡ್ ಶಾಲಾಗುರುಗಳು ಅಸೂಟಿ (ರೋಣ)

ಇಂದು ನಾಡಿನ ಮೂಲೆ ಮೂಲೆಯಿಂದಲೂ-ಸಹಜೀವನದ ಕೂಗೊಂದು ಕೇಳಿ ಬರುತ್ತಿದೆ. ಜಗತ್ತಿನಲ್ಲಿಯ ವಿಷಮತೆಯ ಹಲಾಹಲಕ್ಕೆ ಅಂಜನವೆಂದರೆ-ಸಹಜೀವನದ ತತ್ವಗಳನ್ನು ಅರಿತು ಅದರಂತೆ ಜನತೆಯು ಆಚಾರ-ವಿಚಾರ-ರೀತಿ-ನೀತಿಗಳನ್ನು ತಿದ್ದಿಕೊಂಡು ನಡೆಯ ಬೇಕಾಗಿದೆ. ಅನೇಕ ದಾರ್ಶನಿಕರು, ತತ್ವಜ್ಞಾನಿಗಳು, ಧಾರ್ಮಿಕ ಮಹಾಪುರುಷರು, ಸಾಮಾಜಿಕ ಶ್ರೇಷ್ಠ ಕಾರ್ಯಕರ್ತರು ಸಹಜೀವನದ ತತ್ವಗಳ ಪ್ರಚಾರಕ್ಕೆ ಒಪ್ಪಿ ಎಲ್ಲೆಲ್ಲಿಯೂ ಸಹಜೀವನದ ಸಿಹಿ ಫಲಗಳು ಜನತೆಯು ಪಡೆಯುವಂತೆ ಪ್ರಯತ್ನ ಭರದಿಂದ ನಡೆದಿದೆ. ಮಹಾತ್ಮಾ ಗಾಂಧಿಯವರು ಈ ತತ್ವಗಳಿಗೆ ಒಂದು ಮೂರ್ತ ಸ್ವರೂಪ ಕೊಟ್ಟು ರಾಷ್ಟ್ರೀಯ ಶಿಕ್ಷಣವನ್ನು ಬಳಕೆಯಲ್ಲಿ ತಂದರು. ಅದರ ವಿವಿಧ ಅಂಗಗಳಲ್ಲಿ- ಸಹಜೀವನದ ತತ್ವಗಳು-ಅಪರೋಕ್ಷವಾಗಿ ಬೆರೆತುಗೊಂಡಿವೆ. ನಾಳಿನ-ನಾಡಿನ ನಾಯಕರಾದ-ಇಂದಿನ-ಮಕ್ಕಳ ನರ-ನರಗಳಲ್ಲಿ ರೋಮ-ರೋಮಗಳಲ್ಲಿ ಸಹಜೀವನದ ತತ್ವಗಳು ಹರಿಯುವಂತೆ, ತಮ್ಮ ಅಪಾರ ಅನುಭವದಿಂದ, ಅಮೂಲ್ಯ ಮಾರ್ಗದರ್ಶನದಿಂದ ರಾಷ್ಟ್ರೀಯ ಶಿಕ್ಷಣವನ್ನು ರೂಪಿಸಿದ್ದಾರೆ. ವ್ಯಕ್ತಿ ವ್ಯಕ್ತಿಗಳಲ್ಲಿ, ಶಕ್ತಿ ಶಕ್ತಿಗಳಲ್ಲಿ ಘರ್ಷಣೆ ನಡೆದಿರುವ ಇಂದಿನ ಅಂತರರಾಷ್ಟ್ರೀಯ ಪ್ರಕ್ಷುಬ್ಧ ವಾತಾವರಣದಲ್ಲಿ ಶಾಂತಯುತ ಸಹಜೀವನವು, ವಿಚಾರ ವಾದಿಗಳ, ಶಿಕ್ಷಣ ತಜ್ಞರ ಲಕ್ಷ ಸೆಳೆದಿರುವದು ಸಂತೋಷದ ಸಂಗತಿಯಾಗಿದೆ. ಮಹಾತ್ಮಾ ಗಾಂಧೀಜಿಯವರ ಉತ್ತರಾಧಿಕಾರಿಗಳಾದ ನಮ್ಮ ಪ್ರಧಾನ ಮಂತ್ರಿ ಜವಾಹರಲಾಲ ನೆಹರೂರವರು, ಭೂದಾನ ಯಜ್ಞದ ಜನಕ ವಿನೋಬಾ ಭಾವೆಯವರು, ಈ ಮಹಾ ಕಾರ್ಯವನ್ನು ಯಶಸ್ವಿ ರೀತಿಯಾಗಿ ಆಚರಣೆಗೆ ತರಲು ಅಹೋರಾತ್ರಿ ಪ್ರಯತ್ನಿಸುತ್ತಿದ್ದಾರೆ. ಭಾರತವು ಜಗತ್ತಿಗೆ ಕೊಟ್ಟ ದಿವ್ಯ ಸಂದೇಶವಾದ ಪಂಚಶೀಲ ತತ್ವ ಮಾಲಿಕೆಯ ಸೂತ್ರವೇ ಈ ಸಹಜೀವನವಾಗಿದೆ.

ಪರಸ್ಪರ ತಿಳುವಳಿಕೆಯ ತಳಹದಿಯ ಮೇಲೆ ಸುಖ-ಶಾಂತಿ-ಸಮಾಧಾನಗಳ ಮೃದು-ಮಧುರ ಸುಂದರ ಜೀವನ ಸಾಗಿಸುವದೇ ಈ ಸಹ ಜೀವನದ ತಿರುಳಾಗಿದೆ; ಆಶಯವಾಗಿದೆ. ಇದು ವ್ಯಕ್ತಿಗಳಿಗೆ ಅನ್ವಯಿಸುವಷ್ಟೇ ರಾಷ್ಟ್ರೀಯ ಶಕ್ತಿಗಳಿಗೂ ಅನ್ವಯಿಸುತ್ತದೆ. ಇಂದಿನ ಅಟಂಬಾಂಬ, ಅಣ್ವಾಸ್ತ್ರ-ಯುದ್ಧ ಭೀತಿ, ರಾಜಕೀಯ ಕುಹಕ ನೀತಿಗಳ ಸದ್ದಡಗಿ ಎಲ್ಲೆಡೆಯಲ್ಲಿಯೂ, ಸತ್ಯ-ಶಾಂತಿ-ಪ್ರೀತಿ-ಪ್ರೇಮಗಳ ಬಾವುಟವೇ ಹಾರಾಡುತ್ತಿರಬೇಕೆಂಬುದು ಇದರ ಮುಖ್ಯ ಧ್ಯೇಯ; ಗುರಿ. ಈ ಪಾಠವನ್ನು ಜಾಗತಿಕ ರಾಜಕೀಯ ಘರ್ಷಣೆಗೆ ಪುಟ ಕೊಡುತ್ತಿರುವ ಪಾಶ್ಚಿಮಾತ್ಯ ರಾಷ್ಟ್ರಗಳು ಅರಿತುಕೊಳ್ಳಬೇಕಾಗಿದೆ. ರಾಷ್ಟ್ರ-ರಾಷ್ಟ್ರಗಳ ಈ ಮಾತು ಹಾಗಿರಲಿ; ನಾವು ನಮ್ಮ ಮನೆ, ನಮ್ಮ ಊರು, ನಮ್ಮ ನಾಡುಗಳ ವಿಷಯವನ್ನು ವಿವೇಚಿಸುವದು ಅವಶ್ಯವಾಗಿದೆ (Charity begins at home). ಈ ಸಣ್ಣ ಕ್ಷೇತ್ರದಲ್ಲಿ ಸಹಜೀವನ ಸಾಧಿಸದೆ, ರಾಷ್ಟ್ರದಲ್ಲಿಯೂ ಸಾಧ್ಯವಾಗಲಾರದು. ಜಾಗತಿಕ ಸಹಜೀವನವಂತೂ ಗಾಳಿ-ಗೋಪುರವೇ ಆದೀತು. ಆದ್ದರಿಂದ ಸಹಜೀವನದ ಪ್ರತಿಪಾದನೆಯು ಮೊದಲು, ತಮ್ಮ ಹತ್ತಿರ ಹತ್ತಿರದ ಕ್ಷೇತ್ರಗಳಲ್ಲಿ ಅದರ ಬೀಜ ಬಿತ್ತುವದು ಅತ್ಯಂತ ಮಹತ್ವದ ವಿಷಯವಾಗಿದೆ. ಇಂಥ ವಿಚಾರಗಳನ್ನು ಕಾಯದೇಯಿಂದಾಗಲೀ, ಭಾಷಣಗಳಿಂದಾಗಲೀ ಕಲಿಸುವದು ಸಾಧ್ಯವಾಗದ ಮಾತು. ಬಲಿತ ಗಿಡ ಬಾಗಲಾರದು. ಅದು ಎಳೆಯದಿರುವಾಗಲೇ ನಮಗೆ ಬೇಕಾದ ಹಾಗೆ ಬೆಳೆಯಿಸಿಕೊಳ್ಳಬಹುದು. ಅದ್ದರಿಂದ ಇಂಥ ಶ್ರೇಷ್ಠತಮ ವಿಚಾರಗಳನ್ನು, ಉಜ್ವಲ ಆದರ್ಶಗಳನ್ನು, ಮಾನವನ ಎಳೆ ವಯಸ್ಸಿನಲ್ಲಿಯೇ ಕಲಿಸಲ್ಪಡಬೇಕು. ಇದೇ ವಿಚಾರ ಮಂಥನದಿಂದ ನಾವು ಮುಂದೆ ಸಾಗುವದಾದರೆ, ಈ ಸಹಜೀವನ ಪಾಠಗಳು ನಮ್ಮ ಅಡಿಗೆಯ ಮನೆಗಳಿಂದಲೇ ನಡೆಯಬೇಕೆಂಬ ವಿಚಾರಕ್ಕೆ ಬರುತ್ತವೆ. ಯಾಕಂದರೆ, ಮನೆಯ ಪ್ರಥಮ ಪಾಠಶಾಲೆ, ತಾಯಿಯೇ— ಅಲ್ಲಿ ಅವಳು ಪ್ರಥಮ ಗುರು. ಮನೆಯ ಹಿರಿಯರ ಆಚಾರ-ವಿಚಾರಗಳನ್ನು, ರೀತಿ ನೀತಿಗಳನ್ನು ಮಗುವು ಅನುಕರಣೆಯಿಂದ ಸ್ವಾಭಾವಿಕವಾಗಿ ಕಲಿಯುತ್ತದೆ.

ಮಕ್ಕಳು ಎಳೆಯವರಿರುವಾಗಲೇ ಈ ಸಹ ಜೀವನದ ಕ್ರಿಯಾತ್ಮಕ (Learning by doing) ಕಲ್ಪನೆ

ಗಳನ್ನು ಬೆಳೆಯಿಸಬೇಕು. ತಾಯಿ-ತಂದೆಗಳ ಜೀವನ ಮಗುವಿಗೆ ಮೊದಲೇ ಮಾದರೀಯಾಗಿದೆ. ಅವನ ಜೀವನ ಒಕ್ಕಟ್ಟಿನದಾಗಿದ್ದರೆ, ಪ್ರೀತಿಯದಾಗಿದ್ದರೆ, ಶಾಂತಿ-ಸಮಾಧಾನಗಳಿಂದ ತುಂಬಿದ್ದರೆ, ನೆರೆ–ಹೊರೆಯವರೊಡನೆ ಸಪ್ರೇಮ–ಸಂಬಂಧವನ್ನಿಟ್ಟು ಕೊಂಡಿದ್ದರೆ, ಅದು ಮಗುವಿನ ಮನಸ್ಸಿನ ಮೇಲೆ, ಅತ್ಯಂತ ಪರಿಣಾಮ ಮಾಡಿ, ಅವನಿಗೆ ಗೊತ್ತಿಲ್ಲದಂತೆಯೇ ಅವನು ಆದರ್ಶ ಬಾಲಕನಾಗಿ, ಪೂರಕ ಶಕ್ತಿಯಾಗಿ ನಿಲ್ಲುತ್ತದೆ—ತಂದೆಯಂತೆ ಮಗನಲ್ಲವೆ? ಜತಿಯಂತೆ ಮತಿಯು. ತನ್ನ ಹಿರಿಯರ ಹೆಜ್ಜೆಯಲ್ಲಿ ಹೆಜ್ಜೆಯನ್ನಿಟ್ಟು, ಮುನ್ನಡೆ ಬಯಸುವ ಆ ಮಗು ಸಹಜೀವನದ ತಿರುಳನ್ನು ಸಹಜವಾಗಿ ಅರಗಿಸಿ ಕೊಳ್ಳುತ್ತದೆ. ಹಾಗೆಯೇ ಮೊದಲು ಮನೆಯಲ್ಲಿ ಶಿಸು ಸಹಜೀವನದ ಸಂದರ್ಭ ಕಲ್ಪಿಸಿಕೊಂಡು, ಆ ದಿಸೆಯಲ್ಲಿ ತನ್ನ ಮನೋಭೂಮಿಕೆಯನ್ನು, ಮನೋವ್ಯಾಪಾರವನ್ನು ಮುಂದುವರಿಸುತ್ತದೆ.

ಆ ಬಳಿಕ ಬರುವ ಕ್ಷೇತ್ರ ಶಾಲೆ. ತಾಯಿ–ತಂದೆಗಳ ತರುವಾಯ ಮಗುವಿನ ಬುದ್ಧಿಯ ಬೆಳವಣಿಗೆಗೆ ಸಹಾಯಕವಾಗುವ ವ್ಯಕ್ತಿಯೆಂದರೆ— ಶಿಕ್ಷಕ. ಶಿಕ್ಷಕರ ಜೀವನದಲ್ಲಿಯೂ ಒಳ್ಳೆಯ ಆದರ್ಶಗಳು ಎದ್ದು ಕಾಣುತ್ತಿದ್ದರೆ, ಅವು ಮಕ್ಕಳ ಮನ ಸೆಳೆಯುತ್ತವೆ. ಹಾಗೆ ಬೆಳೆಯಬೇಕೆಂದು ಆಶೆ ಅವರಲ್ಲಿ ಚಿಗುರಿಕೊಳ್ಳುತ್ತದೆ. ಅದರ ಹೊರತಾಗಿ ಮಕ್ಕಳಿಗೆ ತಮ್ಮ ನಿತ್ಯದ ಶಾಲಾ–ಪಾಠ–ಅಭ್ಯಾಸಗಳ ಮುಖಾಂತರವಾಗಿಯೂ ಒಳ್ಳೇ ನಾಗರಿಕರಾಗುವ ವಿಚಾರಗಳನ್ನು ಕಲಿಯುತ್ತಲೇ ಇರುತ್ತಾರೆ. ಆದರೆ ಅವುಗಳನ್ನೆಲ್ಲಾ ಕಲಿಸುವ ಶಿಕ್ಷಕರು, ಬಾಲಕರೊಡನೆ ನಡೆದುಕೊಳ್ಳುವ ರೀತಿ, ಅವರಲ್ಲಿಡುವ ಪ್ರೀತಿಗಳ ಮೇಲೆ ಬಾಲಕರ ಮಾನಸಿಕ ಬೆಳವಣಿಗೆ (Mental development) ಹೆಚ್ಚಾಗಿ ಅವಲಂಬಿಸಿರುತ್ತದೆ. ಈ ಶಿಕ್ಷಣದ ಅವಧಿ ಮಕ್ಕಳನ್ನು ಒಳ್ಳೆಯ ಆದರ್ಶಗಳ ಕಡೆಗೆ ಮುನ್ನಡೆಸುವ ಸುವರ್ಣ ಸಮಯವಾಗಿದೆ. ಹದವಾದ ಹೊಲದಲ್ಲಿ ಉತ್ತಮ ಬೀಜಗಳನ್ನು ಹಾಕಿದರೆ, ಶ್ರೇಷ್ಠ ಬೆಳೆಯು ಬರಲಾರದೆ? ಅದರೊಂದಿಗೆ ಕಾಲಕ್ಕೆ ಸರಿಯಾಗಿ ಗೊಬ್ಬರ, ಮಳೆಯಾದರಂತೂ ಫಲ ಕಟ್ಟಿಟ್ಟಬ್ದ್ದಿ. ಆದ್ದರಿಂದ ಶಿಕ್ಷಕರು ಈ ಸಮಯದಲ್ಲಿ ಮಕ್ಕಳ ಮನದಲ್ಲಿ ನಾವು ಕಟ್ಟಬೇಕೆಂಬ ಗುರಿಯಿಟ್ಟ ಸಮಾಜ ಪೂರ್ವಸಿದ್ಧತೆಯ ವಿಚಾರಗಳನ್ನು ಅಪರೋಕ್ಷವಾಗಿ (Indirectly) ತುಂಬಬೇಕು. ಆದರ್ಶ ಗ್ರಾಮ ನಿರ್ಮಾಣದ ವ್ಯವಸ್ಥೆಯನ್ನು ಮೊದಲು ಮಾಡಿಕೊಂಡು, ರಾಷ್ಟ್ರ–ರಾಷ್ಟ್ರಗಳ ಸ್ನೇಹ–ಸಂಬಂಧದವರೆಗೂ, ಜಾಗತಿಕ ಸಹಜೀವನದ ವರೆಗೂ ಅವರ ಜ್ಞಾನದ ಮೇರೆಯನ್ನು ವಿಸ್ತರಿಸಬಹುದು. ಮನೆಗೆದ್ದು ಮಾರುಗೆದೆಯಬೇಕು.

ಹೊಸ ಸಮಾಜದ ಹೊಸ ಕಲ್ಪನೆಗಳನ್ನು ಶಾಲೆಯಲ್ಲಿಯೇ ಕಲಿತ ಮಗು ತನ್ನ ಭವಿಷ್ಯದಲ್ಲಿ ಅವುಗಳನ್ನು ಕ್ರಿಯಾರಂಗದಲ್ಲಿಳಿಸಲು ಒಂದಿಲ್ಲೊಂದು ರೀತಿಯಿಂದ ಪ್ರಯತ್ನ ಮಾಡುತ್ತಾನೆ. ಅಂತೆಯೇ ಹಿರಿಯರು ಸಹಜೀವನದ ಪ್ರತಿಪಾದಕರಾಗಲಿ ಎಂದು ಬಯಸುವದಕ್ಕಿಂತಲೂ, ಕಿರಿಯರು ಸಹಜೀವನದ ಸಾಧಕರಾಗಲಿ ಎಂಬ ಆಶೆಯನ್ನು ನಾವು ಇಟ್ಟುಕೊಳ್ಳಬೇಕು.

ಹೀಗೆ ಮನೆ–ಶಾಲೆಗಳಲ್ಲಿ ಸಹಜೀವನದ ಶಾಂತಿ ಮಾರ್ಗ ಮಕ್ಕಳ ಕಣ್ಣೆದುರು ಇದ್ದರೆ, ಅವರು ದೊಡ್ಡವರಾದಾಗ, ರಾಷ್ಟ್ರದ ನಾಗರಿಕರೆನಿಸಿಕೊಳ್ಳುವಾಗ ಅದೇ ದಾರಿಯನ್ನು ಹಿಡಿದು ಮುನ್ನಡೆಯುತ್ತಾರೆ. ರಾಷ್ಟ್ರೀಯ ಸಹಜೀವನಕ್ಕಾಗಿ ಪ್ರಯತ್ನ ಮಾಡುತ್ತಾರೆ. ರಾಷ್ಟ್ರ–ರಾಷ್ಟ್ರಗಳಲ್ಲಿ ಈ ರೀತಿಯಾಗಿ ಶೈಕ್ಷಣಿಕ ಪ್ರಗತಿಯಾದರೆ, ಅದು ಜಾಗತಿಕ ಶಾಂತಿಯುತ ಸಹಜೀವನದ ಪ್ರಥಮ ಸೋಪಾನವಾದೀತು.

"ಕೃಷಿ ಅರ್ಥಶಾಸ್ತ್ರವೂ ಜೀವನ ಶಿಕ್ಷಣವೂ"

ಲೇಖಕರು:— **ಶ್ರೀ ಮ. ಬ. ಶ್ಯಾಡಗುಪ್ಪಿ,** ಅ. ಮಾ. ದೇವಿಹೊಸೂರ

ಪ್ರಪಂಚದಲ್ಲಿ ಮಾನವ ಮಾನವೇತರ ಎಲ್ಲ ಪ್ರಾಣಿಗಳಿಗೂ ಅತೀ ಅವಶ್ಯವಾದದ್ದು ಆಹಾರ. ಸಾಮಾನ್ಯವಾಗಿ ಆಹಾರವು ಭೂಮಿ, ಹವೆ, ನೀರು ಮುಂತಾದವುಗಳ ಸಂಯೋಗದಿಂದ ಉಂಟಾಗುತ್ತದೆ. ಇಂಥ ಅತೀ ಸ್ವಾನುಖ್ಯವಾದ ಆಹಾರವನ್ನು ಹೆಚ್ಚಾಗಿ ಉತ್ಪನ್ನ ಮಾಡುವ ಅರ್ಥಾತ್ ಒಕ್ಕಲತನದ ಸುಧಾರಣೆಯ ಕ್ರಮವೇ ಈ ವ್ಯವಸಾಯದ ಅರ್ಥಶಾಸ್ತ್ರದ ಗುರಿ ಎಂದು ಹೇಳಬಹುದು.

ರೈತನ ಆರ್ಥಿಕ ಜೀವನಕ್ಕೂ ಸಾಮಾನ್ಯ ಅರ್ಥಶಾಸ್ತ್ರಕ್ಕೂ ಒಂದು ತರದ ನಿಕಟ ಸಂಬಂಧವಿದೆ. ವ್ಯವಸಾಯಿಕ ರಸಾಯನ ಶಾಸ್ತ್ರವು ಸಾಮಾನ್ಯ ರಸಾಯನ ಶಾಸ್ತ್ರದ ಒಂದು ಕವಲು ಆಗಿರುವಂತೆ, ವ್ಯವಸಾಯಿಕ ಅರ್ಥಶಾಸ್ತ್ರವೂ ಸಹ ಸಾಮಾನ್ಯ ಅರ್ಥಶಾಸ್ತ್ರದ ಒಂದು ಶಾಖೆಯಾಗಿದೆ. ನಾನಾ ವಿಧವಾದ ನೂತನ ಕ್ರಮವನ್ನು ಜಮೀನಿನ ಮೇಲೆ ಪ್ರಯೋಗ ಮಾಡಿ ಹೆಚ್ಚು ಪ್ರತಿಫಲವನ್ನು ಪಡೆಯಬೇಕೆಂಬುದೇ ಕೃಷಿ ವ್ಯವಸಾಯಿದ ಅರ್ಥಶಾಸ್ತ್ರದ ಗುರಿಯು. ರೈತನು ತನ್ನ ಪ್ರಯತ್ನದಿಂದ ಜಮೀನಿನ ಪ್ರತಿಫಲವನ್ನು ಹೆಚ್ಚಿಸಿ ತಾನು ಪಡೆಯುವನಲ್ಲದೆ, ಅದನ್ನು ಇತರರಿಗೂ ಹಂಚುತ್ತಾನೆ. ಆದ್ದರಿಂದ ರೈತನು ವ್ಯವಸಾಯಿಕ ಅರ್ಥಶಾಸ್ತ್ರವನ್ನು ಅಳವಡಿಸಿಕೊಂಡು ತನ್ನ ಲಾಭನಷ್ಟಗಳನ್ನು ಹೆಚ್ಚು ಗಣನೆಗೆ ತಂದುಕೊಳ್ಳುವಂತೆ ಮಾಡಿಕೊಳ್ಳಬೇಕು.

ಈ ಕ್ರಮವನ್ನು ಸಾಧಿಸಲಿಕ್ಕೆ ಬಂಡವಲು, ದೇಹ ಶ್ರಮ, ಜ್ಞಾನ ಮತ್ತು ಇತರ ಯಂತ್ರೋಪಕರಣಗಳ ಸಾಮಗ್ರಿಗಳನ್ನು ಹೆಚ್ಚು ಲಾಭ ದೊರೆಯುವ ರೀತಿಯಲ್ಲಿ ಉಪಯೋಗಿಸಿಕೊಳ್ಳುವ ಕಲೆಯನ್ನು ಸಾಧಿಸಬೇಕು. ದನಸ ಧಾನ್ಯಗಳ ಬೆಲೆ, ತಾವು ಕೊಳ್ಳುವ ಯಂತ್ರೋಪಕರಣಗಳು, ಬೀಜ, ಗೊಬ್ಬರ ಇವುಗಳನ್ನು ಸರಿಯಾದ ಕ್ರಮದಲ್ಲಿ ಒಂದುಗೂಡಿಸುವ ಹಾಗು ಉಪಯೋಗಿಸುವ ತಿರುಳನ್ನು ತಂದು ಕೊಡಬೇಕು. ರೈತನಲ್ಲಿ ಈ ತರಹದ ವ್ಯಾಪಾರದ ದೃಷ್ಟಿಕೋನವನ್ನು ಉಂಟು ಮಾಡಬೇಕು.

ಹಿಂದುಸ್ತಾನದ ರೈತನು ಒಕ್ಕಲತನದಲ್ಲಿ ಹೆಚ್ಚು ಪ್ರಗತಿ ಹೊಂದುದೆ ಇದ್ದುದಕ್ಕೆ ಅವನ ಅಜ್ಞಾನ, ವ್ಯವಸಾಯಿಕ ಕ್ರಮದಲ್ಲಿ ಅವ್ಯವಸ್ಥೆಯ ಆಸಕ್ತಿ, ಅಶ್ರದ್ಧೆ, ಆಲಸ್ಯ ಮುಂತಾದವುಗಳು ಮುಖ್ಯವಾಗಿರುತ್ತವೆ. ಸಾಮಾನ್ಯವಾಗಿ ಹಳ್ಳಿಯಲ್ಲಿ ರೈತರು ಒಂದು ವರ್ಷದಲ್ಲಿ ನಾಲ್ಕಾರು ತಿಂಗಳು ಮಾತ್ರ ಕೆಲಸ ಮಾಡಿ ಮಿಕ್ಕ ವೇಳೆಯನ್ನು ವ್ಯರ್ಥ ಕಳೆಯುತ್ತಾರೆ. ಹೀಗಾಗಿ ರೈತರು ಆರ್ಥಿಕ ಮುಗ್ಗಟ್ಟಿನಲ್ಲಿ ಸಿಕ್ಕು ತೊಳಲುತ್ತಾರೆ. ದೇಶದ ಒಟ್ಟು ಜನಸಂಖ್ಯೆಯಲ್ಲಿ ಶೇಕಡಾ ಮೂರರಷ್ಟು ಜನರು ಕೈಗಾರಿಕೆಯನ್ನು ಅವಲಂಬಿಸಿದ್ದಾರೆ. ಶೇಕಡಾ ಎಪ್ಪತ್ತು ಮೂರರಷ್ಟು ಜನರು ಒಕ್ಕಲತನವನ್ನು ಅವಲಂಭಿಸಿರುತ್ತಾರೆ. ಇಷ್ಟು ಜನರು ವಿರಾಮ ಕಾಲದಲ್ಲಿ ಯಾವುದಾದರೊಂದು ಲಾಭದಾಯಿಕ ಕೈಗಾರಿಕೆಯನ್ನು ಕೈಕೊಳ್ಳುವಂತೆಯಾದರೆ ದೇಶದ ಸಂಪತ್ತು ಹೆಚ್ಚುವದಲ್ಲದೆ ಅವರ ಜೀವನ ಕ್ರಮವೂ ಉತ್ತಮಗೊಳ್ಳುವದು. ಸಾಮಾನ್ಯವಾಗಿ ರೈತನ ಪ್ರಗತಿಗೆ ಅವರ ಮಂದತನವೂ ಒಂದು ಒಲವಾದ ಕಾರಣವಾಗಿದೆ. ಸಧ್ಯ ರೈತರಿಗೆ ಹಿಂದಿನ ಪದ್ಧತಿಯನ್ನು ಬಿಡಲು ಇಷ್ಟವಿಲ್ಲ. ಅವರ ವಿವಾಹ ಪದ್ಧತಿ, ಅವಿಭಕ್ತ ಕುಟುಂಬ, ಜಾತಿ, ಸ್ತ್ರೀಯರ ಸ್ಥಾನ, ದುಂದುಗಾರಿಕೆ ಇವೆಲ್ಲವು ಒಂದಿಲ್ಲೊಂದು ರೀತಿಯಲ್ಲಿ ಅವರ ವೆಚ್ಚವನ್ನು ಹೆಚ್ಚು ಮಾಡಿ ಬಡತನವನ್ನು ಹೆಚ್ಚು ವೃದ್ಧಿಗೊಳಿಸುತ್ತವೆ. ಕಾರಣ ರೈತರ ಜೀವನ ಕ್ರಮವನ್ನು ಉತ್ತಮಪಡಿಸಿ ವ್ಯವಸಾಯ ಕ್ರಮವನ್ನು ವೃದ್ಧಿಗೊಳಿಸುವ ಕಾರ್ಯಕ್ರಮದ ಬಗ್ಗೆ ವ್ಯವಸ್ಥೆಯಾಗಬೇಕು. ನಮ್ಮ ರೈತರ ಕಷ್ಟ ಪರಂಪರೆಯನ್ನು ನಿವಾರಿಸಲಿಕ್ಕೆ ಪ್ರಯತ್ನಿಸುವ ಮೊದಲು ಅವರ ನಿಜವಾದ ಸ್ಥಿತಿಯನ್ನು ಅರಿತುಕೊಳ್ಳಬೇಕು.

ಕೃಷಿ ಅರ್ಥಶಾಸ್ತ್ರದ ಬಗ್ಗೆ ಒಬ್ಬ ಕೃಷಿ ಪಂಡಿತರು ಹೀಗೆ ಅನ್ನುತ್ತಾರೆ— "ಸೃಷ್ಟಿಯಲ್ಲಿ ಮನುಷ್ಯನಿಗೆ ಬೇಕಾದ ಎಷ್ಟೋ ಪದಾರ್ಥಗಳು ಬೇಕಾದಷ್ಟಿವೆ, ಆದರೆ ಅವುಗಳಿಂದ ಲಾಭ ಹೊಂದಬೇಕಾದರೆ ಅವುಗಳ ಅಭ್ಯಾಸ ನಮಗೆ ಚನ್ನಾಗಿ ಗೊತ್ತಿದ್ದು ಅವುಗಳ ಸಂಗಡ ಹೋರಾಡ

ಬೇಕಾಗುತ್ತದೆ." ಹೀಗೆಂದು ಅಂದಿರುವರು. ಕಾರಣ ಮನುಷ್ಯನು ದುಡಿಯಬೇಕು; ದುಡಿದುಣ್ಣಬೇಕು. ಶ್ರಮದಿಂದಲೇ ಮನುಷ್ಯನಿಗೆ ಬೇಕಾಗುವ ಆಹಾರಸಾಮಗ್ರಿಗಳು ದೊರಕುವದರಿಂದ ಆದಷ್ಟು ಹೆಚ್ಚು ಶ್ರಮಪಡಬೇಕಾಗುವದು. ಒಕ್ಕಲತನವು ಎಲ್ಲ ಉದ್ಯೋಗಗಳಲ್ಲಿ ಬಹಳ ಸ್ವತಂತ್ರ ಉದ್ಯೋಗವೆಂದು ಗೊತ್ತಾಗಿದೆ. ಹೌದು ಒಕ್ಕಲಿಗನು ಶಹರದವರಿಗಿಂತ ಬಹಳ ಮಟ್ಟಿಗೆ ಸ್ವತಂತ್ರ ಜೀವಿಯಾಗಿರುವನು. ಆದರೆ ಅವನಿಗೆ ವ್ಯಾಪಾರಸ್ಥರ ಮತ್ತು ಕೈಗಾರಿಕೆ ಉದ್ಯೋಗದವರ ಸಂಪರ್ಕವು ಬಹಳ ಕಡಿಮೆ ಇರುತ್ತದೆ. ಆದರೆ ಅವನು ಯಾವಾಗಲೂ ಕೃಷಿ ಸೃಷ್ಟಿಕ್ರಮದ ಕೂಡ ಸಂಪರ್ಕವನ್ನು ಬೆಳೆಸಬೇಕಾಗುತ್ತದೆ. ಕೈಗಾರಿಕೆಯ ಅಥವಾ ಗಿರಣಿಯ ಉದ್ಯೋಗಸ್ಥರಿಗೆ ಪ್ರತಿ ದಿವಸ ಯಾವ ಕೆಲಸಗಳನ್ನು ಮಾಡಬೇಕೆಂದು ತರಾಯಿ (ಗೊತ್ತುಪಡಿಸು) ಸಲಿಕ್ಕೆ ಬರುತ್ತದೆ. ಆದರೆ ರೈತನು ಯಾವುದಾದರೊಂದು ಕೆಲಸ(ಕಾರ್ಯ) ಮಾಡಲಿಕ್ಕೆ ಇಚ್ಛಿಸಬಹುದು, ಹವೆ ಮತ್ತು ಹದವು ಏನು ಹೇಳುವದೆಂಬುದನ್ನು ಅವನು ನಿರೀಕ್ಷಿಸಬೇಕಾಗುವದು. ಕಾರಣ ರೈತನು ಶಹರದವರಿಗಿಂತ ಹೆಚ್ಚು ಸ್ವಾವಲಂಬಿ ಇದ್ದರೂ ಸೃಷ್ಟಿಯ ಕ್ರಮದ ಮೇಲೆ ಬಹಳಷ್ಟು ಅವಲಂಬಿಸಬೇಕಾಗುತ್ತದೆ. ಮತ್ತು ತನ್ನ ನೆರೆಹೊರೆಯವರ ಮೇಲೆಯೂ ಅವಲಂಬಿಸಿರಬೇಕಾಗುತ್ತದೆ.

ಮೊದಲಿನ ಕಾಲದಲ್ಲಿ ರೈತನು ಎರಡನೇದವರ ಬೇಡಿಕೆಗಳಿಗೆ ಲಕ್ಷಕೊಡದೆ, ತನ್ನ ಕುಟುಂಬದ ಜೀವನದ ಇರುವಿಕೆಗೆ ಬೇಕಾದ ಬೆಳೆಗಳನ್ನು ಮಾತ್ರ ಬೆಳೆದುಕೊಳ್ಳುತ್ತಿದ್ದನು. ಆದರೆ ಈಗಿನ ಒಕ್ಕಲಿಗನು ವೇಟೆಯಲ್ಲಿ ವ್ಯಾಪಾರ ಮಾಡುವದರ ಸಲುವಾಗಿ ಬೆಳೆಗಳನ್ನು ಮುಖ್ಯವಾಗಿ ಬೆಳೆಯುತ್ತಾನೆ. ಮತ್ತು ವೇಟೆಯಿಂದ ಬೇಕಾದ ಸಾಮಗ್ರಿಗಳನ್ನು ಕೊಂಡು ತರುತ್ತಾನೆ. ಆದ್ದರಿಂದ ಈಗಿನ ರೈತನು ತಾನು ಬೆಳೆಯುವ ಮಾಲಿಗೆ ವೇಟೆಯಲ್ಲಿ ಇರುವ ಅದರ ಬೇಡಿಕೆ, ಕಿಮ್ಮತ್ತು ಮತ್ತು ಅದನ್ನು ಬೆಳೆಸಲಿಕ್ಕೆ ಹತ್ತುವ ಖರ್ಚು ಇವುಗಳ ಬಗ್ಗೆ ವಿಚಾರಿಸಿ ಬೆಳೆದಲ್ಲಿ ತನ್ನ ಒಕ್ಕಲತನವನ್ನು ಸುವ್ಯವಸ್ಥತೆಯಲ್ಲಿ ಇಟ್ಟುಕೊಳ್ಳುವದಕ್ಕೆ ಸಾಧ್ಯವಾಗುತ್ತದೆ. ಪ್ರತಿಯೊಂದು ಕೆಲಸವನ್ನು ಋತುಮಾನಕ್ಕನುಸರಿಸಿ ಹದವರಿತು ತಪ್ಪದೇ ಮಾಡಬೇಕು. ಒಂದು ಹದ ತಪ್ಪಿದರೆ ಅದು ಎಂದೂ ಸಿಗಲಾರದು. ಕಾರಣ ರೈತರ ದುಡಿತ, ಸರಳ ವಿಚಾರ, ಜಾಣತನದ ವ್ಯವಸ್ಥೆ ಇವುಗಳ ಮೇಲೆಯೇ ವ್ಯವಸಾಯದ ಆರ್ಥಿಕ ಅಭಿವೃದ್ಧಿಯು ಅವಲಂಭಿಸಿದೆ.

ಈ ವ್ಯವಸಾಯ ಕ್ರಮದಲ್ಲಿ ನಾವು ಆರ್ಥಿಕ ಅಭಿವೃದ್ಧಿಯನ್ನು ಪಡೆಯಬೇಕೆಂಬುದಾಗಲೀ, ಆಹಾರದಲ್ಲಿ ಸಂಪೂರ್ಣ ಸ್ವಾವಲಂಬಿಗಳಾಗಬೇಕೆಂಬುದಾಗಲೀ, ರೈತನ ಆರ್ಥಿಕ ಜೀವನದಲ್ಲಿ ಒಂದು ಕ್ರಾಂತಿಯನ್ನು ಸಾಧಿಸಬೇಕೆಂಬುದಾಗಲೀ ಎಲ್ಲವನ್ನು ಒಮ್ಮೆಲೇ ಮಾಡಿ ಮುಗಿಸುವನೆಂಬುದು ಸಾಧ್ಯವೂ ಇಲ್ಲ, ಸಾಧುವೂ ಅಲ್ಲ. ಹಾಗೆ ದುಡುಕುವದು ಕೆಡಕಿನ ಮೂಲವಾಗಿ ಪರಿಣಮಿಸಬಹುದು. ಅದನ್ನರಿತ ಪೂಜ್ಯ ಮಹಾತ್ಮಾ ಗಾಂಧೀಜಿಯವರು ಯಾವುದೇ ಕೆಲಸವನ್ನು ಕೈಕೊಂಡಾಗ ಅದನ್ನು ಅಹಿಂಸಾತ್ಮಕವಾಗಿ, ಕ್ರಿಯಾತ್ಮಕವಾಗಿ, ರಚನಾತ್ಮಕವಾಗಿ ಯಾವ ಒತ್ತಾಯಕ್ಕೂ ಒಳಗಾಗದೆ. ನಿರ್ಭೀತಿಯಿಂದ ಕಂಡು ಕೇಳಿ ದಿನಗಳಿದರೂ ಚಿಂತೆಯಿಲ್ಲ. ಹಂತ-ಹಂತವಾಗಿ ಅದರಲ್ಲಿ ಪ್ರಗತಿಯನ್ನು ಸಾಧಿಸಬೇಕೆಂದು ಆಗಾಗ ಜನತೆಗೆ ಹೇಳುತ್ತಲೇ ಇದ್ದರು. ಅದಕ್ಕಾಗಿಯೇ ಅವರು ಮೇಲ್ತಾಣಿಸಿದ ಈ ಗುರುತರವಾದ ಕ್ರಾಂತಿಯನ್ನು ಸಾಧಿಸಿ ಕೈವಶ ಮಾಡಿಕೊಳ್ಳಬೇಕಾದರೆ, ಭಾರತದ ಬಡತನವನ್ನು ಹೋಗಲಾಡಿಸಬೇಕಾದರೆ ಶಿಕ್ಷಣವೇ ಅದರ ಅಡಿಪಾಯವೆಂದು ಸಾರಿದರು. ಶಿಕ್ಷಣದಲ್ಲಿ ಯಾವುದಾದರೊಂದು ಉದ್ಯೋಗವು ಶಿಕ್ಷಣದ ಮಾಧ್ಯಮವಾಗಬೇಕು. ಅದರ ಮುಖಾಂತರವೇ ಮಗುವಿನ ಜ್ಞಾನಾರ್ಜನೆ ಸಾಗಬೇಕು. ಎಂದು ಪ್ರಯೋಗಾತ್ಮಕವಾಗಿ ಸಾರಿ, ಮೂಲ ಶಿಕ್ಷಣ (ಜೀವನ ಶಿಕ್ಷಣ) ವನ್ನು ಸಾರ್ವತ್ರಿಕವಾಗಿ ರಾಷ್ಟ್ರೀಯ ತಳಹದಿಯ ಮೇಲೆ ರೂಪಿಸಿದರು. "ಕಾಯಕವೇ ಕೈಲಾಸ" ಎಂಬ ಬಸವಣ್ಣನವರ ಉಕ್ತಿಯನ್ನು ಕಾರ್ಯರೂಪದಲ್ಲಿ ತಂದರು. "ರಾಟಿಯನ್ನು ತಿರುಗಿಸಿರಿ, ಬಡತನದ ಕಾಟವನ್ನು ನೀಗಿಸಿರಿ" ಎಂಬ ಮಂತ್ರವನ್ನು ಊದಿ ಭಾರತೀಯರನ್ನು ಬಡಿದೆಬ್ಬಿಸಿದರು. ಅಲ್ಲದೆ ಜೀವನ ಶಿಕ್ಷಣದಲ್ಲಿ ಅಯ್ದುಕೊಂಡ ಉದ್ಯೋಗಗಳು (ಉದ್ಯಮ) ಭಾರತೀಯ ಪರಿಸರಕ್ಕೆ ಒಳಪಟ್ಟವುಗಳೂ, ಸುಲಭದಲ್ಲಿ ಅತ್ಯಲ್ಪ ಖರ್ಚಿನಿಂದ ಕೂಡಿದವುಗಳೂ ಇದ್ದು, ಅವು ಭಾರತದ ಮೂಲಭೂತ (ಪ್ರಾಥಮಿಕ) ಬೇಡಿಕೆಗಳನ್ನು ಪೂರೈಸುವಂಥವುಗಳು ಇರಬೇಕು, ಎಂದು ಹೇಳಿ ಅವುಗಳ ಮುಖಾಂತರವೇ ಸ್ವತಂತ್ರ ಭಾರತದ ಸುಖ ಸಮೃದ್ಧಿಯನ್ನು ಬಯಸಿ

ಭಾವೀ ಜನಾಂಗವನ್ನು ಈ ತಳಹದಿಯ ಮೇಲೆಯೇ ತಯಾರಗೊಳಿಸಬೇಕೆಂದು ಹೇಳಿದರು. ಅಂತೆಯೇ ನಮ್ಮ ಜೀವನ ಶಿಕ್ಷಣ ಶಾಲೆಗಳಲ್ಲಿ ಒಕ್ಕಲತನದ ವಿಷಯವೂ ಒಂದು ಶಿಕ್ಷಣದ ಮಾಧ್ಯಮವಾಗಿದೆ. ಈ ಉದ್ಯಮಕ್ಕೆ ಉಳಿದ ಎಲ್ಲ ಉದ್ಯೋಗಗಳೂ ಪೂರಕ ಉದ್ಯೋಗಗಳಾಗಿವೆ ಎಂದು ಬೇರೆ ಹೇಳಬೇಕಾಗಿಲ್ಲ.

ಈ ವಿಷಯದ ಅಧ್ಯಯನ ಅಧ್ಯಾಪನದಿಂದ ಮಗುವು ತನ್ನ ಜೀವನದಲ್ಲಿ ಅನಂತ ಜ್ಞಾನವನ್ನು ಹೊಂದಿ ಕ್ರಿಯಾತ್ಮಕವಾಗಿ ಅನುಭವ ಪಡೆಯುತ್ತಾನೆ; ಅಲ್ಲದೆ ಉಪಮೂಲೋದ್ಯೋಗ (ನೂಲುವದು– ನೇಯುವದು, ಬಡಿಗತನ, ಕಮ್ಮಾರಿಕೆ, ಕುಂಬಾರಿಕೆ, ತೊಗಲು ಹದಗೊಳಿಸುವದು ಮುಂ.) ಗಳಲ್ಲಿ ತರಬೇತಿ ಹೊಂದಿ ತನ್ನ ಜೀವನದಲ್ಲಿ (ಇರುವಿಕೆ) ಮುಖ್ಯ ಉದ್ಯೋಗದೊಂದಿಗೆ ವಿರಾಮ ಕಾಲದಲ್ಲಿ ಉಪದಂಧೆಯನ್ನು ಕೈಕೊಂಡು ತನ್ನ ಆರ್ಥಿಕ ಪ್ರಗತಿಯನ್ನು ಸಾಧಿಸದೇ ಇರಲಾರನು. ಒಕ್ಕಲತನವು ಕೇವಲ ಹುಂಬರ ದಂಧೆಯಂದೂ, ರಂಟೆ, ಕುಂಟೆ ಹಿಡಿಯಲು ಬಂದರೆ ಸಾಕೆಂದೂ, ಇಷ್ಟರಿಂದಲೇ ಒಕ್ಕಲತನದ ಅನುಭವವಾಯಿತೆಂದೂ ಅನ್ನುವ ನಮ್ಮ ಹಳ್ಳಿಗಳಲ್ಲಿಯ ಅಜ್ಞಾನವು ಇಂದು ಮಾಯವಾಗಬೇಕಾಗಿದೆ. (ಇತ್ತಿತ್ತಲಾಗಿ ಕಡಿಮೆಯಾಗುತ್ತ ನಡೆದಿದೆ) ಒಕ್ಕಲತನವು ಹುಂಬರ (ಅಜ್ಞರ) ಕೆಲಸವಾಗಿರದೆ, ಅದು ಕೇವಲ ತಜ್ಞರ ದಂಧೆಯಾಗಿದೆ. ಒಕ್ಕಲತನ ಶಾಸ್ತ್ರವು ಎಲ್ಲ ವಿಷಯಗಳ ತಾಯಿಯಾಗಿದೆ ಎಂಬುದನ್ನು ಮರೆಯುವಂತಿಲ್ಲ. ಅಂತೆಯೇ "ಕೋಟಿ ವಿದ್ಯೆಗಳಲ್ಲಿ ಮೇಟಿ ವಿದ್ಯೆಯೇ ಮೇಲು" ಎಂದು ಹೇಳುವ ಈ ಮಾತು ಮೇಲಿನ ಸಂಗತಿಯನ್ನು ಸ್ಪಷ್ಟ ಪಡಿಸುತ್ತದೆ. ಈ ಶಾಸ್ತ್ರವು ಕೇವಲ ಪುಸ್ತಕೀಯ ವಿದ್ಯೆಯಾಗಿರದೆ ಅನುಭವಾತ್ಮಕವಾದ ಪ್ರಯೋಗಗಳಿಂದ ಕೂಡಿದುದಾಗಿದೆ. ಆಧುನಿಕ ಶಿಕ್ಷಣ ತಜ್ಞರೂ ಅದನ್ನೇ ಪ್ರತಿಪಾದಿಸುತ್ತಾರೆ. ಈ ಉದ್ಯಮದಲ್ಲಿ ನಾವು ಪ್ರಗತಿಯನ್ನು ಸಾಧಿಸಬೇಕೆಂದು ಆರಿತಾಗ ಅದರ ಪೂರ್ವ ಪೀಠಿಕೆಯಂದರೆ ಪ್ರಾಥಮಿಕ ಶಿಕ್ಷಣವೆಂದೇ ಹೇಳಬಹುದು. ಅದಕ್ಕಾಗಿ ನಮ್ಮ ಸರಕಾರವು ಪ್ರಾಥಮಿಕ ಶಿಕ್ಷಣದಿಂದ ಪೊದಲುಗೊಂಡು ತಾಂತ್ರಿಕ ಶಿಕ್ಷಣದ ವರೆಗೂ ಹಂತ ಹಂತವಾಗಿ ಈ ಶಾಸ್ತ್ರದ ಅಧ್ಯಯನಕ್ಕೆ ಅವಕಾಶ ಕಲ್ಪಿಸಿದೆ; ಕಾರ್ಯರೂಪದಲ್ಲಿಯೂ ತಂದಿದೆ.

ನಮ್ಮ ಪ್ರಜಾ ಸರಕಾರವು ಮೇಲೆ ವಿವರಿಸಿದಂತೆ ಒಕ್ಕಲತನದ ಏಳ್ಗೆಯ ಸಲುವಾಗಿ ಎಳೆಯ ಮಕ್ಕಳಿಂದ ಹಿಡಿದು ಪ್ರೌಢರ ವರೆಗೂ ಒಕ್ಕಲತನದ ಶಿಕ್ಷಣವನ್ನು ಶಾಸ್ತ್ರೀಯವಾಗಿ ಕೊಡಲು ಅನೇಕ ಅವಕಾಶಗಳನ್ನು ಕಲ್ಪಿಸಿಕೊಟ್ಟಿದೆ, ಕೊಡುತ್ತಲೂ ಇದೆ. ಈ ವಿಷಯದ ಮೇಲೆ ಎಷ್ಟೋ ಸಂಶೋಧನೆಗಳನ್ನು ಕಂಡು ಹಿಡಿದಿದೆ. ಪ್ರತ್ಯೇಕ ಶಾಲೆ, ಕಾಲೇಜುಗಳನ್ನು ತೆರೆದಿದೆ. ಒಕ್ಕಲಿಗರ ಹಿತದ ಸಲುವಾಗಿ ನೀರಾವರಿ, ಸುಧಾರಿಸಿದ ಉಪಕರಣ, ಬೀಜ, ಗೊಬ್ಬರ, ತಾಂತ್ರಿಕ ಜ್ಞಾನ ಮುಂತಾದವುಗಳಿಗೆ ತನ್ನ ಪಂಚವಾರ್ಷಿಕ ಯೋಜನೆಗಳಲ್ಲಿ ಅಗ್ರಸ್ಥಾನ ಕೊಟ್ಟು ಹಣವನ್ನು ನೀರಿನಂತೆ ವೆಚ್ಚ ಮಾಡುತ್ತಲಿದೆ. ಈಗಾಗಲೇ ಎಷ್ಟೋ ಪ್ರಗತಿಯನ್ನು ಈ ವ್ಯವಸಾಯ ಕ್ರಮದಲ್ಲಿ ಸಾಧಿಸಿದೆ. ಸರಕಾರದ ಈ ಸದುದ್ದೇಶವನ್ನು ನಮ್ಮ ರೈತರು ತಮ್ಮ ವ್ಯವಸಾಯದಲ್ಲಿ ಅಳವಡಿಸಿಕೊಂಡು ತಮ್ಮ ಮಕ್ಕಳನ್ನು ಈ ವಿಷಯದಲ್ಲಿ ತಜ್ಞರನ್ನಾಗಿ ಮಾಡಿಸಿ, ತಾವು ತಮ್ಮ ಆರ್ಥಿಕ ಮುಗ್ಗಟ್ಟಿನಿಂದ ಬಿಡುಗಡೆ ಹೊಂದಿ ದೇಶದ ಸಾಂಪತ್ತಿಕ ಅಭಿವೃದ್ಧಿಯನ್ನು ಹೆಚ್ಚಿಸಬೇಕೆಂದು ಬೇಡುವೆ.

ಸಮಾಜ ಶಿಕ್ಷಣ ತರಬೇತಿ ವರ್ಗ, ಧಾರವಾಡ

ವರದಿಗಾರರು: **ಶ್ರೀ ಎಸ್. ಪಿ. ಪಂಡಿತ,** ಗವ್ಹರ್ನಮೆಂಟ ಟ್ರೇ. ಕಾ. ಧಾರವಾಡ

ಧಾರವಾಡ ಜಿಲ್ಲೆಯ ಸ. ಶಿ. ಕ್ಷೇತ್ರದಲ್ಲಿ ಕಾರ್ಯ ಮಾಡುತ್ತಿರುವ ಕಾರ್ಯಕರ್ತರಿಗೆ ಅವಶ್ಯವಿರುವ ತರಬೇತಿ ಕೊಡಲು ಈ ವರ್ಗವು ದಿ. ೨೧–೯–೧೯೬೦ ರಿಂದ ದಿ. ೪–೧೦–೧೯೬೦ರ ವರೆಗೆ ಧಾರವಾಡದ ಗಂಡು ಮಕ್ಕಳ ಸರಕಾರಿ ಟ್ರೇನಿಂಗ ಕಾಲೇಜದಲ್ಲಿ ಜರುಗಿತು. ಸ. ಶಿ. ವರ್ಗದ ಉದ್ಘಾಟನೆಯನ್ನು ಶ್ರೀ ಎಸ್. ಬಿ. ಪಾಟೀಲ, ಪ್ರಿನ್ಸಿಪಾಲ, ಗ್ರಾಮಸೇವಕ ತರಬೇತಿ ಕೇಂದ್ರ, ಇವರು ನೆರವೇರಿಸಿದರು. ಶ್ರೀ ಮ. ಗು. ಹಂದ್ರಾಳ, ಜಿಲ್ಲಾ ಶಿಕ್ಷಣಾಧಿಕಾರಿಗಳು ಧಾರವಾಡ, ಇವರು ಅಧ್ಯಕ್ಷತೆ ವಹಿಸಿದ್ದರು.

ಈ ವರ್ಗದ ಲಾಭ ಪಡೆದ ಸ. ಶಿ. ಕಾರ್ಯಕರ್ತರ ಒಟ್ಟು ಸಂಖ್ಯೆ ೪೯. ಇವರಲ್ಲಿ ೩೫ ಜನ ಧಾರವಾಡ ಜಿಲ್ಲಾ ಸ್ಕೂ. ಬೋರ್ಡಿನ ಶಿಕ್ಷಕರು; ೨ ಜನ ಧಾರವಾಡ ಮ್ಯು. ಸ್ಕೂ. ಬೋ. ಶಿಕ್ಷಕರು; ೨ ಜನ ಹುಬ್ಬಳ್ಳಿ ಮ್ಯು.ಸ್ಕೂ.ಬೋ. ಶಿಕ್ಷಕರು; ಹಾಗೂ ೧೦ ಜನ ಖಾಸಗಿ ಶಾಲೆಯಶಿಕ್ಷಕರಿದ್ದರು. ವರ್ಗದ ಎಲ್ಲ ಕೆಲಸವು ಇಬ್ಬರು ಅ.ಡೆ.ಎ.ಇ. ಮತ್ತು ಇಬ್ಬರು ಟ್ರೇ. ಕಾ. ದ ಶಿಕ್ಷಕರಿಂದ ಪ್ರಿನ್ಸಿಪಾಲರು ಸರಕಾರಿ ಟ್ರೇ. ಕಾ. ಇವರ ನೇತೃತ್ವದಲ್ಲಿ ಸಾಗಿತು.

ಪ್ರತಿದಿನದ ಕಾರ್ಯಕ್ರಮವು ಮುಂಜಾನೆ ಪ್ರಾರ್ಥನೆಯಿಂದ ಪ್ರಾರಂಭವಾಗಿ, ಸಂಜೆಯ ವರೆಗೆ ವಿವಿಧ ಚಟುವಟಿಕೆಗಳನ್ನೊಳಗೊಂಡಿತ್ತು. ತರಬೇತಿಗೆ ನಿಯುಕ್ತವಾದ ಅಭ್ಯಾಸ ಪತ್ರಿಕೆಯನ್ನು ಅನುಲಕ್ಷಿಸಿ ಅವಶ್ಯವಿದ್ದ ವಿವಿಧ ವಿಷಯಗಳಲ್ಲಿ ಜ್ಞಾನಮಾಡಿಕೊಡಲು ಕೆಳಗೆ ಕಾಣಿಸಿದ ಮಹನೀಯರನ್ನು ಆಮಂತ್ರಿಸಲಾಗಿತ್ತು.

ಶ್ರೀಗಳಾದ ದ. ರಾ. ಬೇಂದ್ರೆ, ಬೆಟಗೇರಿ ಕೃಷ್ಣ ಶರ್ಮ, ಎಸ್. ಎಸ್. ಹುಕ್ಕೇರಿ, ಎನ್. ವ್ಹಿ. ಥೊಬ್ಬಿ, ಆಯ್. ಎಸ್. ಬಿದರಿ, ಪಿ. ಪಿ. ಕಟ್ಟಿ, ಎಮ್.ಜಿ.ಕಟ್ಟಿ, ಎಸ್. ಎಸ್. ನಾಡಕರ್ಣಿ, ಗುರುನಾಥ ಜೋಶಿ, ಎನ್. ಆರ್. ಕುಲಕರ್ಣಿ, ಎಫ್. ಸಿ. ಉಣಕಲ್ಲ, ಜಿ. ಎಸ್. ಕಡಗದ, ಬುರ್ಲಿ ಬಂದು ಮಾಧವ, ಡಿ. ಜೆ. ಇಟ್ನಾಳ, ಕುಮಾರಿ ಸರೋಜಿನಿ ಮಹಿಷಿ ಹಾಗೂ ಶ್ರೀಮತಿ ಎಸ್. ಎಸ್. ಪಂಡಿತ ಇವರು ವಿವಿಧ ಉಪಯುಕ್ತ ವಿಷಯಗಳಾದ ಸಮಾಜ ಶಿಕ್ಷಣ, ಸಮಾಜ ಸೇವೆ, ಸ. ಶಿ. ಕಾರ್ಯಕ್ರಮದಲ್ಲಿ ಸಾಂಸ್ಕೃತಿಕ ಚಟುವಟಿಕೆಗಳ ಸ್ಥಾನ, ವಿವಿಧ ಸರಕಾರಿ ಖಾತೆಗಳ ಪರಿಚಯ, ಸ. ಶಿ. ವರ್ಗದ ವಿವರವಾದ ಅಭ್ಯಾಸ ಪತ್ರಿಕೆ, ಪ್ರೌಢರ ಮಾನಶ್ಶಾಸ್ತ್ರ, ಗ್ರಾಮೋದ್ಯೋಗಗಳು, ಹಳ್ಳಿಯ ಆರ್ಥಿಕ ಸಮಸ್ಯೆಗಳು, ಪ್ರೌಢರ ಜೀವನದಲ್ಲಿ ವಿಜ್ಞಾನದ ಉಪಯೋಗ, ಸಮಾಜ ಶಿಕ್ಷಣ ಮತ್ತು ಪ್ರಜಾಪ್ರಭುತ್ವ ಪದ್ಧತಿ, ದೃಕ್‌ಶಿಕ್ಷಣದ ಉಪಕರಣಗಳು, ಪ್ರೌಢರಿಗೆ ಕಲಿಸುವ ಪದ್ಧತಿಗಳು, ಸಮಾಜ ಶಿಕ್ಷಣ ಮತ್ತು ಜನಪದ ಸಾಹಿತ್ಯ ಮುಂತಾದ ಹಲವಾರು ಉಪಯುಕ್ತ ವಿಷಯಗಳ ಬಗ್ಗೆ ವಿವರವಾಗಿ ಚರ್ಚೆ ಮಾಡಿದರು.

ಪ್ರಾಯೋಗಿಕ ಜ್ಞಾನಕ್ಕಾಗಿ ಗ್ರಾಮಸೇವಕರ ತರಬೇತಿ ಕೇಂದ್ರ, ಬಾನುಲಿ ಕೇಂದ್ರ ಮತ್ತು ವಿಶ್ವವಿದ್ಯಾಲಯಗಳಿಗೆ ಶೈಕ್ಷಣಿಕ ಪ್ರವಾಸಗಳನ್ನು ಕೈಕೊಳ್ಳಲಾಗಿತ್ತು. ಸ. ಶಿ. ವರ್ಗದಲ್ಲಿ ಉಪಯುಕ್ತವಾಗುವಂತಹ ಚಿತ್ರಪಟ, ನಕಾಶೆ ಇತ್ಯಾದಿಗಳನ್ನು ಶಿಕ್ಷಣಾರ್ಥಿಗಳು ತಮ್ಮ ತರಬೇತಿ ಅವಧಿಯಲ್ಲಿ ಸಿದ್ಧಪಡಿಸಿದರು. ಪ್ರೌಢರ ಜೀವನಕ್ಕೆ ಸಂಬಂಧಿಸಿದ ವಿವಿಧ ವಿಷಯಗಳನ್ನೊಗೊಂಡ ಲೇಖನಗಳನ್ನು ಸಂಗ್ರಹಿಸಿ ಕೈಬರಿಹದ 'ಕಿರಣ' ಎಂಬ ಪತ್ರಿಕೆಯೊಂದನ್ನು ಹೊರಡಿಸಿದ್ದು ಈ ಶಿಬಿರದ ವೈಶಿಷ್ಟ್ಯವೆಂದು ಹೇಳಬಹುದು. ದಿನಾಂಕ ೨—೧೦—೧೯೬೦ ರಂದು ಗಾಂಧಿ ಜಯಂತಿಯ ನಿಮಿತ್ತವಾಗಿ ಅಖಿಲ ಭಾರತ ಸ್ವಚ್ಛತಾ ದಿನ, ಹರಿಜನ ದಿನ ಹಾಗೂ ಪಾನಪ್ರತಿಬಂಧ ದಿನಾಚರಣೆಗಳನ್ನು ಜಿಲ್ಲಾ ಶಿಕ್ಷಣಾಧಿಕಾರಿ, ಧಾರವಾಡ ಇವರ ಅಧ್ಯಕ್ಷತೆಯಲ್ಲಿ ನೆರವೇರಿಸಲಾಯಿತು.

ಒಟ್ಟನಲ್ಲಿ ವಿವಿಧ ಖಾತೆಗಳ ಅಧಿಕಾರಿಗಳ ಮತ್ತು ಇತರ ತಜ್ಞರ ಸಹಾಯ-ಸಹಕಾರಗಳನ್ನು ಪಡೆದು, ಸ.ಶಿ. ತರಬೇತಿ ವರ್ಗವನ್ನು ಪ್ರಾರಂಭಿಸುವದರಲ್ಲಿ ಅಡಕವಾದ ಮೂಲೋದ್ಯೋಗಗಳನ್ನು ಅಲ್ಪಾವಧಿಯಲ್ಲಿಯೇ ಸಾಧಿಸಲು ಸಾಧ್ಯವಿದ್ದ ಎಲ್ಲ ಪ್ರಯತ್ನಗಳನ್ನು ಶಿಕ್ಷಣ ಖಾತೆಯ ನೇತೃತ್ವದಲ್ಲಿ ಯಶಸ್ವೀ ರೀತಿಯಿಂದ ಮಾಡಲಾಯಿತು.

ಚಡಚಣ ಶ್ರೀ ಅರವಿಂದ ಗ್ರಂಥಾಲಯದ

ನವಪ್ರಕಟನೆಗಳು

ಸರ್ವಧರ್ಮಸಮನ್ವಯ ತತ್ತ್ವವನ್ನು ಆಧರಿಸಿ ಸುಲಭವೂ ಲಲಿತವೂ ಆದ ಪುಸ್ತಕಗಳನ್ನು ಒದಗಿಸಿ ಕೊಟ್ಟು, ವಾಚಕರಲ್ಲಿ ಸದಭಿರುಚಿಯನ್ನು ಹುಟ್ಟಿಸಿ, ನಮ್ಮ ನಾಡು ಜಾತ್ಯತೀತತೆಯನ್ನು ರೂಪಿಸಿಕೊಂಡು ಯುಗವಾಣಿಗೆ ಕಿವಿಗೊಡುವಂತೆ ಮಾಡುವುದು ನಮ್ಮ ಪ್ರಕಟನೆಗಳ ಉದ್ದೇಶ.

ವರುಷಕ್ಕೆ ೫ ರೂ. ಕೊಟ್ಟು ಗ್ರಾಹಕರಾದರಿಗೆ ನಮ್ಮ ನಾಲ್ಕು ಪುಸ್ತಕಗಳು ಮುಕ್ಕಾಲು ಬೆಲೆಗೆ ದೊರೆಯುವವು. ಸುಂದರವಾದ ಅಚ್ಚುಕಟ್ಟುಗಳು ಮನೆ ಮನೆಯಲ್ಲಿಯೂ ಇರಬೇಕಾದ ಪುಸ್ತಕಗಳು. ಇಂದೇ ಗ್ರಾಹಕರಾಗಿರಿ.

ಶ್ರೀ ಅರವಿಂದ ಗ್ರಂಥಾಲಯ
ಪೋ : ಚಡಚಣ
ಜಿ. : ವಿಜಾಪುರ

ಮಕ್ಕಳ ಸಾಹಿತ್ಯ

ಲೇಖಕರು :— ಶ್ರೀ ಶಂ. ಗು. ಬಿರಾದಾರ, ಗುರುಗಳು ಸಾರವಾಡ

[ಬೆಂಗಳೂರಲ್ಲಿ ದಿನಾಂಕ ೮-೨-೧೯೬೦ ರಿಂದ ೧೯-೩-೧೯೬೦ರ ವರೆಗೆ ಆರು ವಾರಗಳ ಕಾಲ ಭಾರತ ಹಾಗು ಮೈಸೂರು ಸರಕಾರದವರು ಕೂಡಿ "ಮಕ್ಕಳ ಸಾಹಿತ್ಯ ರಚನಾಲಯ"ದ ಕಾರ್ಯಕಲಾಪಗಳನ್ನು ಜರುಗಿಸಿದರು. ರಾಜ್ಯದ ಬೇರೆ ಬೇರೆ ಭಾಗಗಳಿಂದ ಮಕ್ಕಳ ಸಾಹಿತ್ಯದಲ್ಲಿ ಅನುಭವವುಳ್ಳ-ಅಭಿರುಚಿಯುಳ್ಳ ಶಿಕ್ಷಕರು ಹಾಗು ಹೊರಗಿನ ಸಾಹಿತಿಗಳು ಒಟ್ಟು ಇಪ್ಪತ್ತು ಜನರನ್ನು ಆಯ್ಕೆ ಮಾಡಲಾಗಿತ್ತು. ವಿಜಾಪುರ ಜಿಲ್ಲೆಯಿಂದ 'ಸಿಸು' ಸಂಗಮೇಶ (ಭಾರತೀ ಸಾಹಿತ್ಯ ಭಾಂಡಾರದ ಸಂಪಾದಕರು) ಹಾಗು ನಾನು ಇಬ್ಬರು ಈ ರಚನಾಲಯದಲ್ಲಿ ಸದಸ್ಯರಾಗಿ ಭಾಗವಹಿಸಿದ್ದೆವು. ಸಂಚಾಲಕರಾದ ಶ್ರೀ ಎಂ. ಆರ್. ರಾಮಯ್ಯ ಶ್ರೀ ಎನ್. ಆರ್. ಹಿರೇಮಠ ಸಂದರ್ಶಕರಾದ ಸರ್ವಶ್ರೀ ಡಾ|| ನ್ಹಿ. ಕೆ. ಜವಳಿ, ಕಾವ್ಯಾನಂದ, ದ. ರಾ. ಬೇಂದ್ರೆ ಸತ್ಯರಾಜನ್, ಎ. ಸಿ. ದೇವೇಗೌಡ (ವಿದ್ಯಾಧಿಕಾರಿಗಳು ಮೈಸೂರು ರಾಜ್ಯ) ಮೊದಲಾದವರ ಭಾಷಣಗಳ ಸಾರ ಸಂಗ್ರಹಗಳನ್ನು ಸಮಯಾನುಸಾರ ಉಪಯೋಗಿಸಿ ಈ ಲೇಖನ ಬರೆಯಲಾಗಿದೆ.]

೧. ಹುಟ್ಟು ಹಾಗೂ ಬೆಳವಣಿಗೆ :

ಸಾಹಿತ್ಯದ ಸೃಷ್ಟಿ ಹುಟ್ಟು ಎಂದಾಯಿತೆಂದು ಹೇಳುವದು ಕಠಿಣ. ಸಂಸ್ಕೃತಿ, ಶಿಕ್ಷಣ, ಸಾಹಿತ್ಯ, ಇವು ಒಂದಕ್ಕೊಂದು ಸಂಬಂಧವಿರುತ್ತವೆ. ಶಿಕ್ಷಣವು ಹಿಂದಿನವರ ಸಂಸ್ಕೃತಿಯನ್ನು ಮುಂದುವರಿಸುತ್ತಿದ್ದರೆ ಸಾಹಿತ್ಯವು ಜೀವನದ ಪಡಿನೆಳಲಾಗಿ ಬೆಂಬತ್ತುವದು. ಮಾನವನಲ್ಲಿ ಸಂಸ್ಕೃತಿಯ ಚಿಹ್ನಗಳು ಎಂದು ಮೂಡಿದವೋ ಅಂದೆಯೆ ಸಾಹಿತ್ಯದ ಉಗಮವಾಯಿತೆಂದು ಹೇಳಬಹುದು. ಮಕ್ಕಳಿಗೆ ಕತೆ-ಹಾಡುಗಳನ್ನು ಹೇಳುವ ಕಲೆ ಬಹು ಪುರಾತನ ಕಾಲದಿಂದಲೂ ರೂಢಿಯಲ್ಲಿದೆ.

ಪುರಾತನಕಾಲದಲ್ಲಿ ಸಾಹಿತ್ಯಪ್ರಕಟನೆಗೆ ಮುದ್ರಣ ಯಂತ್ರದ ಅನುಕೂಲತೆಯಿರಲಿಲ್ಲ. ಮರದ ಕಟ್ಟಿಗೆಗಳಲ್ಲಿ ಹಾಗು ಕಲ್ಲುಗಳಲ್ಲಿ ಕೆತ್ತಿ ಸಾಹಿತ್ಯ ರೂಪಿಸಿದರು. ಹೀಗಾಗಿ ಆಗಿನ ಕಾಲದ ಸಾಹಿತ್ಯ ಬೆಳವಣಿಗೆಯಾಗಲು ಸಾಧ್ಯವಾಗಲಿಲ್ಲ. ಮಧ್ಯಕಾಲದಲ್ಲಿ ತಾಳೆಯೋಲೆಗಳ ಮೇಲೆ ಬರೆಯ ತೊಡಗಿದರು. ಇದರಿಂದಲೂ ಸಾಹಿತ್ಯ ಪ್ರಸಾರ ಅಷ್ಟೊಂದಾಗಲಿಲ್ಲ. ಮುದ್ರಣ ಯಂತ್ರವನ್ನು ಕಂಡು ಹಿಡಿದ ನೋಲೆ ಕಲ್ಪನೆ ಮೀರಿ ಸಾಹಿತ್ಯ ಸೃಷ್ಟಿಯಾಯಿತು. ಮುದ್ರಣ ಯಂತ್ರವನ್ನು ಮೊದಲು ಕಂಡು ಹಿಡಿದ ಶ್ರೇಯಸ್ಸು ಚೀನಾ ದೇಶಕ್ಕೆ ಸಲ್ಲುತ್ತದೆ. ಕ್ರಿ. ಶ. ಎರಡು ಸಾವಿರವರುಷಗಳ ಹಿಂದೆ ಮಕ್ಕಳಸಾಹಿತ್ಯವು ನಮ್ಮಲ್ಲಿತ್ತು ಎಂಬುದನ್ನು ಕಂಡು ಹಿಡಿದಿದ್ದಾರೆ. ನಮ್ಮ ತಾಳೆಯೋಲೆ ಗ್ರಂಥಗಳನ್ನು ಪಾರ್ಶಿಯಾ ಭಾಷೆಗೆ ಭಾಷಾಂತರಿಸಿ ಅವುಗಳನ್ನು ಅವರು ತಮ್ಮದನ್ನಾಗಿ ಮಾಡಿಕೊಂಡರು. ಅಲ್ಲಿಂದ ಆ ಸಾಹಿತ್ಯವು ಅರೇಬಿಯಾ ಭಾಷೆಗೆ ಸಾಗಿತು. ಆ ಮೇಲೆ ಪಶ್ಚಿಮ ಯುರೋಪ ದೇಶದವರ ಕೈಸೇರಿತು. ಈ ರೀತಿ ನಮ್ಮ ಜಾತಕ ಕತೆಗಳು ಬೇರೆಯವರ ಕೈಸೇರಿ ಅವರ ಕೃತಿಗಳಾಗಿ ಬಿಟ್ಟವು.

ಹಳೆಗನ್ನಡ ಸಾಹಿತ್ಯದಲ್ಲಿ ಮಕ್ಕಳ ಸಾಹಿತ್ಯ ತೀರ ವಿರಳ. ಕೋಳೂರ ಕೊಡಗೂಸಿನಂತಹ ಒಂದೆರಡು ಉದಾಹರಣೆಗಳು ದೊರೆಯಬಹುದು. ಈ ಇಪ್ಪತ್ತನೆಯ ಶತಮಾನದಲ್ಲಿ ಸಾಹಿತ್ಯವು ಬಹಳೇ ಬೆಳೆದಿದ್ದರೂ ನಮ್ಮ ದೇಶದ ಮಕ್ಕಳ ಸಾಹಿತ್ಯದಲ್ಲಿ ಅದರಲ್ಲಿಯೂ ಕನ್ನಡ ಸಾಹಿತ್ಯದಲ್ಲಿ ಅಷ್ಟೊಂದು ಪ್ರಗತಿಯಾಗಲಿಲ್ಲ. ಅಮೇರಿಕಾ ಹಾಗು ರಶಿಯಾ ದೇಶಗಳಲ್ಲಿ ಮಕ್ಕಳ ಸಾಹಿತ್ಯದ ಕಡೆಗೆ ವಿಶೇಷಗಮನ ಕೊಟ್ಟಿದ್ದಾರೆ. ಅಮೇರಿಕೆಯ ಪ್ರತಿಯೊಂದು ಹಳ್ಳಿಗೂ ಎರಡು ವಾಚನಾಲಯಗಳಿವೆ. ೧೯೧೯ ರಿಂದ ಮಕ್ಕಳ ಸಾಹಿತ್ಯಕ್ಕೆ ಬಹುಮಾನ ಕೊಡುವ ಯೋಜನೆಯನ್ನು ನಡಿಸಿಕೊಂಡು ಬಂದಿದ್ದಾರೆ. ಅಲ್ಲಿ ಮಕ್ಕಳ ಸಾಹಿತ್ಯದ ವಿಷಯದಲ್ಲಿ ಹೊಸ ಹೊಸ ಪ್ರಯೋಗಗಳೂ ನಡೆದಿವೆ. ಈಗ ಕಟ್ಟು ಕತೆಗಳಿಗೆ ಅಷ್ಟು ಮಹತ್ವ ಕೊಡದೆ ವಾಸ್ತವಘಟನೆಗಳ ಸಾಹಿತ್ಯಕ್ಕೆ ಮಹತ್ವಕೊಡುತ್ತಿದ್ದಾರೆ. ನಸರ್ಗಿ ಕತೆಗಳೂ ಪ್ರಾಣಿಕತೆಗಳೂ ಹೇರಳವಾಗಿ ಸೃಷ್ಟಿಯಾಗಿವೆ.

೨. ಮಕ್ಕಳಿಗೆ ಬೇಕಾದ ಸಾಹಿತ್ಯ :

ಮನೋರಂಜನೆಯನ್ನುಂಟು ಮಾಡುವಂತಹದೇ ಮಕ್ಕಳ ಸಾಹಿತ್ಯವೆಂದು ಕೆಲವರು ಬಗೆದರೆ ಇನ್ನು ಕೆಲವರು ಸರಳವಾಗಿ ಸುಲಭವಾಗಿ ಬರೆದುದೆಲ್ಲವು ಮಕ್ಕಳ ಸಾಹಿತ್ಯವೆಂದು ಗ್ರಹಿಸುತ್ತಾರೆ. ಇದು ಸಂಪೂರ್ಣ ಸರಿಯಾದುದಲ್ಲ. ಮನೋರಂಜನೆಯ ಜೊತೆಗೆ ಮಕ್ಕಳ ಬುದ್ಧಿ ಭಾವನೆಗಳ ವಿಕಾಸಕ್ಕೆ ಪೋಷಕವೂ ಆಗಿರಬೇಕು. ಮಕ್ಕಳ ಅನುಭವ ಭಾವನೆ ಕಲ್ಪನೆಗಳನ್ನೊಳಗೊಂಡ ಸಾಹಿತ್ಯವನ್ನು ಸೃಜಿಸಬೇಕು.

ಮಕ್ಕಳ ಸಾಹಿತ್ಯ ರಚನೆಯಲ್ಲಿ ಮಗುವೇ ಕೇಂದ್ರವಾಗಿರಬೇಕು. ಆಯಾ ಮಗುವಿನ ವಯೋಮಿತಿಗನುಸಾರವಾಗಿ ಅವರಿಗೆ ಸರಿಹೋಗುವ ಸಾಹಿತ್ಯ ರಚಿಸಬೇಕು. ಶೈಶವಾವಸ್ಥೆಯಲ್ಲಿ (೧ ರಿಂದ ೩ನೆಯ ವಯಸ್ಸಿನಲ್ಲಿ) ಮಗುವು ತನ್ನ ತಾಯಿ ಹಾಗೂ ತನ್ನನ್ನು ಪ್ರೀತಿಸುವ ಇತರ ಜನರನ್ನು ಆಶ್ರಯಿಸುವದು. ಪಾಗು ಬಣ್ಣ ಬಣ್ಣದ ಆಕರ್ಷಕ ವಸ್ತುಗಳನ್ನು ಕಂಡಾಗ ಅವುಗಳ ಮೇಲೆ ವಿಶೇಷ ಆಸಕ್ತಿ ತೋರಿಸುವದು. ಆದರೆ ಈ ವಯಸ್ಸಿನಲ್ಲಿ ಸ್ವತಂತ್ರವಾಗಿ ಆಲೋಚನೆ ಮಾಡಲಾರದು. ಬಾಲ್ಯಾವಸ್ಥೆಯಲ್ಲಿ (೩ ರಿಂದ ೫ನೆಯ ವಯಸ್ಸಿನಲ್ಲಿ) ತಾನು ತನ್ನದುಎಂಬ ಅರಿವಾಗುವದು. ಸೂಚನೆಯನ್ನು ಗ್ರಹಿಸುವದು, ಅನುಕರಣ ಪ್ರವೃತ್ತಿ ಹೆಚ್ಚಾಗಿ ಕಂಡುಬರುವದು. ತನಗೂ ಒಂದು ಸ್ಥಾನಮಾನಬೇಕು. ಹೊಗಳಿಕೆಬೇಕು. ಎಂಬ ಭಾವನೆ ಹುಟ್ಟುವದು. ಕೌಮಾರ್ಯದಲ್ಲಿ (೫ ರಿಂದ ೮ ವಯಸ್ಸು) ಸ್ವತಂತ್ರವಾಗಿ ಏನಾದರೊಂದು ಕಾರ್ಯ ಮಾಡಬೇಕು ಎಂಬ ಭಾವನೆ ಬೆಳೆಯುತ್ತದೆ, ಚಟುವಟಿಕೆ ಹೆಚ್ಚುವದು. ಸಂಗ್ರಹ ಪ್ರವೃತ್ತಿಯೂ ಬೆಳೆಯುವದು. ಕೌಮಾರ್ಯದ ೨ನೆಯ ಹಂತದಲ್ಲಿ (೮ ರಿಂದ ೧೨ ನೆಯ ವಯಸ್ಸು) ಮಗುವಿಗೆ ಸುತ್ತಲಿನ ಸಮಾಜದ ಅರಿವಾಗುತ್ತದೆ. ದೂರ ದೂರ ಸಾಗಬೇಕು. ಹೊಸದನ್ನು ನೋಡಬೇಕೆಂಬ ಭಾವನೆ ವೃದ್ಧಿಯಾಗುತ್ತದೆ. ಈ ಕಾರಣದಿಂದ ಜೊತೆಯವರ ಸ್ನೇಹ ಬೆಳೆಸುತ್ತದೆ. ಇಲ್ಲಿಯೇ ಸಾಂಘಿಕ ಜೀವನದ ಆರಂಭವಾಗುತ್ತದೆ ಎಂದು ಹೇಳಬಹುದು. ಈ ಅವಸ್ಥೆಯಲ್ಲಿ ಮಗುವು ಅಡ್ಡದಾರಿ ಹಿಡಿಯುವ ಸಂಭವವಿರುತ್ತದೆ. ಕಾರಣ ಅದಕ್ಕೆ ಸರಿಯಾದ ಅವಕಾಶ ಕಲ್ಪಿಸಿಕೊಡಬೇಕು.

ನಾವು ಮಕ್ಕಳಿಗಾಗಿ ಸಾಹಿತ್ಯವನ್ನು ಸೃಷ್ಟಿಸುವಾಗ ಯಾವ ಬಗೆಯ ಮಕ್ಕಳಿಗೆ ಎಂತಹ ಸಾಹಿತ್ಯಬೇಕೆಂಬುದನ್ನು ಮೊದಲು ಕಂಡು ಕೊಳ್ಳಬೇಕು. ಅದು ಮಕ್ಕಳ ಮನಸ್ಸನ್ನು ಆಕರ್ಷಿಸುವದೋ ಅವರ ಬುದ್ಧಿ ಭಾವನೆಗಳಿಗೆ ನಿಲುಕುವದೋ ಎಂಬುದನ್ನು ಅವಶ್ಯ ಗಮನಿಸಬೇಕು. ಚಿಕ್ಕ ಮಗುವಿಗೆ ದೇಶಾಭಿಮಾನದಂತಹ ಗಹನ ವಿಷಯವನ್ನು ಆಯ್ಕೆ ಮಾಡಿದರೆ ಉಪಯೋಗವಾಗಲಾರದು. ಆಗ ಮಗುವು ತನ್ನ ತಾಯಿ ತಂದೆ ಬಂಧುಗಳು ಈ ವಿಷಯದ ಕಡೆಗೆ ಹೆಚ್ಚಾಗಿ ಗಮನ ಕೊಡುವದರಿಂದ ಅಂತಹ ವಿಷಯಗಳನ್ನೇ ಆರಿಸಿಕೊಳ್ಳಬೇಕು. ದೇಶಾಭಿಮಾನ ಹುಟ್ಟಬೇಕಾದರೆ ಸಾಮಾನ್ಯವಾಗಿ ಹತ್ತು ವರ್ಷಗಳಾದರೂ ಆಗಿರಬೇಕು.

ಮಕ್ಕಳ ಸಹಜ ಪ್ರವೃತ್ತಿಗಳೇ ಅಭಿರುಚಿಗಳು. ಅವರ ಅಭಿರುಚಿಗೆ ತಕ್ಕಂತೆ ಸಾಹಿತ್ಯವಿರಬೇಕು. ನಮ್ಮ ದೃಷ್ಟಿಯಿಂದ ಸಾಹಿತ್ಯವನ್ನು ಸೃಷ್ಟಿಸಬಾರದು. ಮಕ್ಕಳ ಮನಸ್ಸನ್ನು ಅರಿತುಕೊಂಡು ಅವರ ಅಭಿರುಚಿಗನುಸಾರವಾಗಿ ಸಾಹಿತ್ಯ ರಚಿಸಬೇಕು. ಮಾನಸ ಶಾಸ್ತ್ರ ಓದಿ ಮಕ್ಕಳ ಸಾಹಿತ್ಯ ರಚಿಸುವದು, ಅಡಿಗೆಯ ವಿಧಾನ ಓದಿ ಅಡಿಗೆ ಮಾಡಿದಂತೆ ಯಾವದೊಂದು ಸಿದ್ಧಾಂತಕ್ಕೆ ಹೊಂದಿಕೊಂಡು ಬರೆಯುವದು ಒಳ್ಳೆಯದಲ್ಲ. ಅನುಭವ ಜನ್ಯ ಸಾಹಿತ್ಯವೇ ನಿಜವಾದ ಸಾಹಿತ್ಯ ಎಂದು "ಕಾವ್ಯಾನಂದ"ರು ಹೇಳಿದಂತೆ ಸಾಹಿತಿಗಳು ಶಾಸ್ತ್ರಕ್ಕೆ ಕಟ್ಟು ಬೀಳದೆ ಮಕ್ಕಳ ಕೂಡ ಸಂಪರ್ಕಬೆಳೆಸಿ ಅನುಭವ ಪಡೆಯಬೇಕು.

ಮಕ್ಕಳು ಭಾವನಾ ಜೀವಿಗಳು. ಅವರಿಗೆ ಭಾವನೆಯ ಸಾಹಿತ್ಯ ಹೆಚ್ಚು ಪ್ರೀಯವಾದುದು. "ಅಜ್ಜಿ ಕತೆಹೇಳು?" ಎಂದು ಅಜ್ಜಿಯನ್ನು ಪೀಡಿಸುವ ಮಕ್ಕಳನ್ನು ನಾವು ಕಾಣುತ್ತೇವೆ. ಅದ್ಭುತ ರಮ್ಯವಾದ ಭಾವನಾಮಯ ಕತೆ ಹೇಳುವಾಗ ಮಕ್ಕಳು ಭಾವನೆಯ ತೆರೆಯಲ್ಲಿ ತೇಲಾಡುವದನ್ನು ಕಾಣುತ್ತೇವೆ. ಆದರೆ ಮಕ್ಕಳಲ್ಲಿ ಇಂದು ಭಾವನೆಯೊಂದನ್ನೆ ಬೆಳೆಯಿಸಿದರೆ ಸಾಲದು. ಬುದ್ಧಿ ಭಾವನೆಗಳ ಸುಗಮವೇ ಸಾಹಿತ್ಯದ ಗುರಿಯಾಗಿರಬೇಕು. ಕಲ್ಪನೆಯ ಜೊತೆಯಲ್ಲಿ ವಾಸ್ತವವೂ ಸೇರಬೇಕು. ಮಕ್ಕಳ ಮನರಂಜನೆಯ ಜೊತೆಗೆ ಅವರ ಬುದ್ಧಿ ಭಾವನೆ, ನೀತಿ, ವಿಚಾರ, ಆಚಾರ ಇವು ಕೂಡ ಬೆಳೆದು ಬರಬೇಕು. ಕರುಣ, ಪ್ರೇಮ, ತ್ಯಾಗ, ದೇಶಾಭಿಮಾನ ಮುಂತಾದ ಚಿತ್ರಣಗಳನ್ನು ಅವರೆದುರು ನಿಲ್ಲಿಸಬೇಕು. ವೈಜ್ಞಾನಿಕ

ಸಾಹಸಮಯ ವಿಷಯಗಳೂ ಇರಬೇಕು. ಪಕ್ಷಿ ಪ್ರಾಣಿಗಳ ಕತೆಗಳೂ ಮಕ್ಕಳ ಕುತೂಹಲವನ್ನು ಕೆರಳಿಸುತ್ತವೆ. ಕೇವಲ ಪೌರಾಣಿಕ ಹಾಗು ಕಾಲ್ಪನಿಕ ಕಟ್ಟುಕತೆಗಳಿಂದ ಬಾಲಕರ ಸರ್ವತೋಮುಖ ವಿಕಾಸವಾಗಲಾರದು. ಡಾ|| ಜವಳಿಯವರು ಹೇಳಿದಂತೆ ಕೆಳಗೆ ಕಾಣಿಸಿದ ವೈಚಾರಿಕ ದೃಷ್ಟಿ ಮಕ್ಕಳಲ್ಲಿ ಒಡಮೂಡುವಂತಹ ಸಾಹಿತ್ಯರಚಿಸಬೇಕು.

ಲೋಕಸತ್ತೆಯ ತತ್ವಗಳನ್ನು ಬೆಳೆಯಿಸಬೇಕು. ಲೌಕಿಕ ವಿವೇಕಾತ್ಮಕ ದೃಷ್ಟಿ ಹೆಚ್ಚಬೇಕು. ಮೂಢ ನಂಬುಗೆಗಳನ್ನು ಹೊಡೆದು ಹಾಕಬೇಕು. ಪಂಚಶೀಲದ ತತ್ವಗಳನ್ನು ಒಡಮೂಡಿಸಬೇಕು, ಸ್ವದೇಶಿ ಅಂತರ್ದೇಶಿ ದೃಷ್ಟಿ ಬೆಳೆಯಿಸಬೇಕು. ನಾಡಿನ ಮಹಾ ಪುರುಷರ ಹಾಗು ನಾಡಿನ ಗತ ವೈಭವ ಇವುಗಳ ಜ್ಞಾನವಾಗಬೇಕು. ಬೇರೆ ಬೇರೆ ಸಂಸ್ಕೃತಿ ಹಾಗೂ ಉಪಸಂಸ್ಕೃತಿಗಳ ಪರಿಚಯ ವಾಗಬೇಕು, ಸಾಹಿತ್ಯದಲ್ಲಿ ವಕ್ರದೃಷ್ಟಿ ಸಂಕುಚಿತ ದೃಷ್ಟಿ ಹಾಗೂ ಮತೀಯ ದೃಷ್ಟಿ ಎಳ್ಳಷ್ಟೂ ಇರಕೂಡದು. ಒಂದು ಮತದ ಬಗ್ಗೆ,ರಾಜಕೀಯದ ಬಗ್ಗೆ ದುರ್ಬೋಧನೆ ಮಾಡಕೂಡದು. ಸಮತೋಲನ ಸಾಹಿತ್ಯ ಬೆಳೆದು ಬರ ಬೇಕು. ಯಾವ ಸಾಹಿತ್ಯದಲ್ಲಿಯೂ ಧರ್ಮ, ಜಾತಿ ಶಬ್ದ ಗಳಿರಕೂಡದು. ಜನತಾ ಸಾಹಿತ್ಯಬೇಕು.

೩. ಪ್ರಗತಿಯ ಹಾದಿ:

ಇಂದು ನಾಡಿನ ಹಿರಿಯ ಸಾಹಿತಿಗಳಲ್ಲಿ ಎಷ್ಟು ಮಂದಿ ಮಕ್ಕಳಿಗಾಗಿ ಸಾಹಿತ್ಯಸೃಷ್ಟಿಸಿದ್ದಾರೆ? ಮಕ್ಕಳ ಸಾಹಿತ್ಯದ ವಿಷಯದಲ್ಲಿ ಎಷ್ಟುಜನರು ಪ್ರಯೋಗಗಳನ್ನು ನಡಿಸಿದ್ದಾರೆ? ಈ ವಿಷಯದಲ್ಲಿ ಎಷ್ಟು ಜನರು ಪಿಎಚ್.ಡಿ. ಪ್ರಶಸ್ತಿಗಳಿಸಿದ್ದಾರೆ? ಇವುಗಳನ್ನೆಲ್ಲ ಸೂಕ್ಷ್ಮವಾಗಿ ನಿರೀಕ್ಷಿ ಸಿದಾಗ ನಮ್ಮ ಪ್ರಗತಿ ಆಶಾದಾಯಕವಾಗಿ ತೋರುತ್ತಿಲ್ಲ. ವಾರ ಪತ್ರಿಕೆ ಮಾಸ ಪತ್ರಿಕೆಗಳಲ್ಲಿ ಆಗಾಗ ಲೇಖನ ಗಳೇನೋ ಬರುತ್ತಿವೆ. ಅವುಗಳಲ್ಲಿ ಮಕ್ಕಳು ಬರೆದಸಾಹಿತ್ಯ ಹಾಗೂ ಹಿರಿಯರು ಮಕ್ಕಳಿಗಾಗಿ ಬರೆದ ಸಾಹಿತ್ಯ ಎಂದು ಎರಡು ವರ್ಗಗಳನ್ನು ಮಾಡಬಹುದು. ಮಕ್ಕಳು ಬರೆದ ಸಾಹಿತ್ಯದಲ್ಲಿ ಅಪೂರ್ಣತೆ ಅಪಕ್ವತೆ ಕಂಡು ಬಂದರೆ ಹಿರಿಯರು ಮಕ್ಕಳಿಗಾಗಿ ಬರೆದ ಸಾಹಿತ್ಯದಲ್ಲಿ ಬರಹ ಮಾತ್ರ ಸರಳವಾಗಿದ್ದು ವಿಷಯ ತಮ್ಮದೇ ದೃಷ್ಟಿ ಕೋನ ದಿಂದ ಆಯ್ಕೆ ಮಾಡಿದ್ದಿರುತ್ತದೆ. ಈ ಕಾರಣಗಳಿಂದಾಗಿ ಅವು ಮಕ್ಕಳಿಗೆ ಅಷ್ಟೊಂದು ಪ್ರೀಯವಾಗಲಾರವು. ಇಂದಿನ ಅನೇಕ ಹಿರಿಯ ಸಾಹಿತಿಗಳು ಆರಂಭದಲ್ಲಿ ಒಳ್ಳೆಗು ಸಾಹಿತ್ಯವನ್ನು ಸೃಷ್ಟಿಸಿದ್ದಾರೆ. ಆದರೆ ಅದನ್ನು ಮುಂದುವರಿಸಿಕೊಂಡು ಹೋಗುವ ಸಾಹಸವನ್ನು ಬಹು ಜನರು ಮಾಡಿರುವದಿಲ್ಲ. ಒಬ್ಬಿಬ್ಬರು ಈ ಕಾರ್ಯಕ್ಕಾಗಿ ಶ್ರಮಿಸುತ್ತಿರಬಹುದು. ಒಬ್ಬಿಬ್ಬರಿಂದ ಈ ಕಾರ್ಯ ಪೂರ್ತಿ ಯಾಗಲಾರದು. ಬಹುಜನ ಹಿರಿಯ ಸಾಹಿತಿಗಳು ಈ ಕಡೆ ದೃಷ್ಟಿ ಹೊರಳಿಸಬೇಕು. ಮಕ್ಕಳ ಸಾಹಿತ್ಯದ ಬೆಳವಣಿಗೆ ಯಾಗಿಲ್ಲವೆಂಬ ಕೂಗು ಎಂದಿನಿಂದಲೂ ಕೇಳಬರುತ್ತಿದೆ. ಕೇವಲ ಆಗಿಲ್ಲವೆಂದು ಕೂಗುವದರಿಂದಾಗಲಿ ನಮ್ಮ ಮಕ್ಕಳ ಸಾಹಿತ್ಯದ ದೌರ್ಬಲ್ಯ ದರ್ಪಣವನ್ನು ಎದುರು ಹಿಡಿಯುವದರಿಂದಾಗಲಿ ನಮ್ಮ ಕಾರ್ಯ ಪೂರ್ತಿಯಾಗ ಲಾರದು. ನಾಳಿನ ನಾಡನ್ನು ರೂಪಿಸುವ ಇಂದಿನ ಮಕ್ಕಳಿಗೆ ಒಳ್ಳೆಯ ಸಾಹಿತ್ಯವನ್ನು ಒದಗಿಸಿಕೊಡಬೇಕಾ ದುದು ನಮ್ಮ ಕರ್ತವ್ಯವಾಗಿದೆ. ಸರಕಾರದವರು ಈ ವಿಷಯದಲ್ಲಿ ಆಸಕ್ತಿತಳೆದಿರುವದು ಸಂತೋಷದ ಸಂಗತಿ. ಮಕ್ಕಳ ಸಾಹಿತ್ಯ ದೃಷ್ಟಿಯ ಆಕರ್ಷಣೆಗಾಗಿ ಬಹುಮಾನ ಯೋಜನೆಯನ್ನು ರೂಪಿಸಿದ್ದಾರೆ. ಸಾಹಿತಿಗಳಿಗೆ ಈ ವಿಷಯದಲ್ಲಿ ಹೆಚ್ಚಿನ ಅನುಕೂಲತೆಗಳನ್ನು ಒದಗಿಸ ತೊಡ ಗಿದ್ದಾರೆ. ಇನ್ನೂಹೆಚ್ಚಾಗಿ ಸರಕಾರ ಹಾಗು ಸಾಹಿತಿಗಳು ಈ ವಿಷಯದತ್ತ ಆಸಕ್ತಿವಹಿಸಬೇಕು. ಒಳ್ಳೆಯ ಸಾಹಿತ್ಯ ಕೃತಿಗಳನ್ನು ಸರಕಾರವೇ ಕೊಂಡು ಪ್ರಕಟಿಸಬೇಕು. ಇದಕ್ಕಾಗಿ ಒಂದು ತಜ್ಞರ ಸಮಿತಿಯನ್ನು ನೇಮಿಸಬೇಕು. ಮಕ್ಕಳ ಸಾಹಿತ್ಯದಲ್ಲಿ ವಿಶೇಷ ಪರಿಶ್ರಮಪಟ್ಟು ಸಾಹಿತಿ ಗಳಿಗೆ ಸರಕಾರವು ಗೌರವ ಧನದೊಂದಿಗೆ ಸನ್ಮಾನಿಸಬೇಕು. ಪ್ರತಿ ಹಳ್ಳಿಗೊಂದು ಮಕ್ಕಳ ವಾಚನಾಲಯ ನಿರ್ಮಾಣ ವಾಗಬೇಕು. ಸಾಹಿತ್ಯ ಸಮ್ಮೇಲನಗಳಲ್ಲಿ ಮಕ್ಕಳ ಸಾಹಿತ್ಯದ ವಿಷಯವಾಗಿ ಉಪನ್ಯಾಸಗಳು ನಡೆಯಬೇಕು. ಸಾಹಿತಿಗಳು, ಶಿಕ್ಷಕರು, ಸರಕಾರ ಇಂದಿನ ಮಕ್ಕಳಿಗೆ ಒಳ್ಳೆಯ ಸಾಹಿತ್ಯವನ್ನು ಒದಗಿಸಿ ಕೊಟ್ಟು ನಾಡಿನ ಭವಿಷ್ಯ ಜೀವನವನ್ನು ಉಜ್ವಲಗೊಳಿಸುವದಾಗಬೇಕು.

ಚೈತನ್ಯಮೂರ್ತಿ ಚಾಚ್ಯಾ ನೆಹರು

ಲೇಖಕರು :— **ಶ್ರೀ ಆನಂದ**

ಗಾಂಧೀಜಿಯ ಮಾನವತಾ ಧರ್ಮವು ಅವರನ್ನು ಜನತೆಯ ಕಣ್ಣಲ್ಲಿ ದೇವ ಪೀಠಕ್ಕೆ ಏರಿಸಿತು. ಅವರ ಸತ್ಯ ಅಹಿಂಸೆಗಳ ತೇಜಸ್ಸಿಗೆ ಮಾನವ ಕೋಟಿ ಶರಣು ಹೋಗಿ ಸೇವರೆಂದು ಆರಾಧಿಸಹತ್ತಿತ್ತು. ಗಾಂಧೀಜಿಗೆ ತನ್ನ ಕಣ್ಣೆ ದುರಿಗೆ ತನ್ನ ಪೂಜೆ ನಡೆದುದು ಸರಿ ಎನಿಸಲಿಲ್ಲ. ತನ್ನ ಜಯಂತಿಯನ್ನು ಆಚರಿಸಬೇಡಿ ಎಂದು ಹೇಳಿಬಿಟ್ಟರು. ನಮಗೆ ನನ್ನ ಜಯಂತಿಯನ್ನು ಆಚರಿಸುವದೇ ಬೇಕಿದ್ದರೆ ೨ ದಿನವು ದೀನದಲಿತರ ಸೇವೆಗಾಗಿ ಮೀಸಲಿರಲಿ ಎಂದು ಸೇಳಿದರು. ಅಂದಿನಿಂದ ಗಾಂಧಿ ಜಯಂತಿ ಚರಖಾ ಜಯಂತಿಯಾಗಿ ಮಾರ್ಪಾಡು ಹೊಂದಿತು.

ಗಾಂಧೀಜಿಯ ಉತ್ತರಾಧಿಕಾರಿಯಾದ ಪಂಡಿತ ಜೀಯ ಮಾತೂ ಹಾಗೆ. ಅವರೂ ಕೂಡ ವ್ಯಕ್ತಿ ಪೂಜೆ ಸಲ್ಲದೆಂದು ಹೇಳುವರು. ನನ್ನ ಹುಟ್ಟುಹಬ್ಬವನ್ನು ಮಕ್ಕಳ ದಿನವೆಂದು ಬೇಕಾದರೆ ಆಚರಿಸಿಕೊಳ್ಳಿ ಎಂದರು, ಅವರ ಮಾತು ಭಾರತೀಯರಿಗೆ ವೇದವಾಕ್ಯವಿದ್ದ ಹಾಗೆ. ಅಂದಿನಿಂದ ಜವಾಹರ ಜಯಂತಿಯನ್ನು 'ಮಕ್ಕಳ ದಿನ' ವೆಂದು ದೇಶದಾದ್ಯಂತ ಆಚರಿಸಲಾಗುತ್ತಿದೆ. ಮಕ್ಕಳೆಂದರೆ ಜವಾಹರರಿಗೆ ತುಂಬ ಪ್ರೀತಿ. ನಿಜವಾದ ನಾಡಿನ ಸಂಪತ್ತೆಂದರೆ ಮಕ್ಕಳೇ ಎಂಬುದು ನಮ್ಮ ಪ್ರಧಾನಿಗಳ ದೃಢ ವಿಶ್ವಾಸ. ಇದರ ಅರ್ಥ ಮಕ್ಕಳಸಂಖ್ಯೆ ಬೆಳೆಯಬೇಕೆಂದಲ್ಲ, ಮಕ್ಕಳ ತೇಜಸ್ಸು ಬೆಳೆಯಬೇಕು. ಯಾವ ದೇಶದಲ್ಲಿ ತೇಜಸ್ವಿಗಳಾದ ಮಕ್ಕಳಿರುವರೋ ಆ ದೇಶವು ನಿಜಕ್ಕೂ ಮುಂದುವರಿಯುವದು. ಬೀತನರಪೇತಗಳಾದ ಮಕ್ಕಳಿಂದ ಯಾವ ನಾಡೂ ಗತಿಗಾಣದು. ಅಂತೆಯೇ ನೆಹರೂರವರು ಹೇಳುತ್ತಾರೆ. " ಮಕ್ಕಳ ಮನಸ್ಸು ಪ್ರಫುಲ್ಲಿತವಾಗಿರಲಿ; ಅವರು ಸದಾ ಹರ್ಷಚಿತ್ತರಾಗಿರಲಿ; ದೃಢಕಾಯರೂ, ಆರೋಗ್ಯವಂತರೂ, ಬುದ್ಧಿವಂತರೂ ಆಗಿರಲಿ " ಎಂದು. ಈ ತೆರನಾದ ಮಕ್ಕಳ ಸಂವರ್ಧನೆಯಾಗ ಬೇಕಾದರೆ ಮಕ್ಕಳ ಕಡೆಗೆ ಪಾಲಕರ, ನಾಯಕರ, ಇಡೀ ದೇಶದ ಲಕ್ಷ್ಯವೇ ಅತ್ತ ಹರಿಯ ಬೇಕಾಗುತ್ತದೆ. ಅಂಥ ಮಕ್ಕಳ ನಿರ್ಮಾಣ ಕಾರ್ಯದಲ್ಲಿ ಎಲ್ಲರ ಮನಸ್ಸೂ ಹರಿಯುವಂತೆ ಮಾಡುವದೇ ಇಂದಿನ ಮಕ್ಕಳ ದಿನಾಚರಣೆಯ ಉದ್ದೇಶ. ಈ ಉದ್ದೇಶ ತಿಳಿಯದೆ ಈ ಉದ್ದಿಶ್ಯ ಸಾಧನೆಗಾಗಿ ಪ್ರಯತ್ನಿಸದೆ ಇದ್ದರೆ ಎಷ್ಟು ಮಿಠಾಯಿ ಹಂಚಿದರೂ ಎಷ್ಟು ಸಭೆ ಸಮ್ಮೇಲನಗಳನ್ನು ಮಾಡಿದರೂ ವ್ಯರ್ಥವೇ ಸೈ !

೧೪ನೆ ನವ್ಹಂಬರ ೧೪ ಭಾರತ ರತ್ನ ಜವಾಹರರು ಜನಿಸಿದ ಪುಣ್ಯದಿನವು. ಪ್ರಯಾಗವು ಭಾರತದ ಪುಣ್ಯ ಕ್ಷೇತ್ರವು. ಹನ್ನೆರಡುವರುಷಗಳಿಗೊಮ್ಮೆ ಈ ಪುಣ್ಯಭೂಮಿಯಲ್ಲಿ ' ಕುಂಭ ಮೇಳಾ ' ಎಂಬ ಜಾತ್ರೆಯೊಂದು ನೆರೆವೇರುವದು. ಲಕ್ಷೋಪಲಕ್ಷ ಯಾತ್ರಿಕರು ಪ್ರಯಾಗದ ಸಂಗಮದಲ್ಲಿ ಮೈದೊಳೆದು ಪಾಪಕ್ಷಾಲನೆ ಮಾಡಿಕೊಂಡು ಪುಣ್ಯ ಪಡೆಯುತ್ತಾರೆ. ಅಂಥ ಪುಣ್ಯ ಕ್ಷೇತ್ರವೇ ನಮ್ಮ ಪುಣ್ಯ ಪುರುಷರಾದ ಜವಾಹರರ ಜನ್ಮ ಭೂಮಿಯು. ಆ ತ್ರಿವೇಣಿ ಸಂಗಮದ ದಡದಲ್ಲಿಯೇ ಆನಂದ ಭವನ ಯಾವ ಆನಂದ ಭವನವು ಸ್ವರಾಜ್ಯ ಭವನವಾಗಿ ಇಂದು ದೇಶದ ಸೊತ್ತಾಗಿದೆಯೋ ಆ ಆನಂದ ಭವನವೇ ಜವಾಹರರ ಮನೆ. ಈ ಮನೆಯನ್ನು ಜವಾಹರರು ಹತ್ತು ವರುಷದವರಿರುವಾಗ ಮೋತಿಲಾಲರು ಮಾರಲಿಕ್ಕೆ ತೆಗೆದುಕೊಂಡರಂತೆ. ಯಾತ್ರಿಕರು ಆ ಮನೆಗೂ ಭೆಟ್ಟಿ ಈಯುತ್ತಿದ್ದರು; ಈಗಲೂ ಭೆಟ್ಟಿ ಈಯುತ್ತಾರೆ. ಅಂದಿನ ಆಕರ್ಷಕ ವ್ಯಕ್ತಿ ಜವಾಹರರ ತಂದೆ ಮೋತಿಲಾಲರಾಗಿದ್ದರು. ಮೋತೀಲಾಲರು ಶ್ರೀಮಂತರು, ಮೇಧಾವಿಗಳು, ಮುತ್ಸದ್ದಿಗಳು, ಅಷ್ಟೇ ಗಂಭೀರರೂ ಕೂಡ. ಅವರ ಗಾಂಭೀರ್ಯವು ಮಕ್ಕಳನ್ನು ಸನಿಹದಲ್ಲಿ ಬರಗೊಡದಷ್ಟು ಒಮ್ಮೊಮ್ಮೆ ಕಟುವಾಗಿರುತ್ತಿದ್ದಿತು. ಆದರೂ ಮಕ್ಕಳಲ್ಲಿಯ ಅವರ ಮಮತೆ ಅಗಾಧವಾಗಿದ್ದಿತು. ಸಮಯ ಸಿಕ್ಕಾಗಲೆಲ್ಲ ಮಕ್ಕಳ ಕೂಡ ವಿನೋದವಾಡುತ್ತಿದ್ದರು. ಆದರೆ ಅಂಥ ಸಮಯ ಅವರಿಗೆ ಸಿಕ್ಕುವದೇ ದುರ್ಲಭವಾಗಿದ್ದಿತು; ಆ ವಕೀಲಿ ವೃತ್ತಿಯ ಜಂಜಾಟದಲ್ಲಿ; ರಾ ಜ ಕೀ ಯ ಆಂದೋಲನದಲ್ಲಿ.

ಪಂಡಿತಜೀಯ ಮನೆತನ ಒಳ್ಳೇ ಶ್ರೀಮಂತ ಮನೆತನ. ಮನೆಯಲ್ಲಿ ವೈಭವಶಾಲಿ ಪ್ರಭುತ್ವದ ವಾತಾವರಣ. ತಮ್ಮ ಮಕ್ಕಳು ಇನ್ನುಳಿದ ಮಕ್ಕಳು ಶಾಲೆಗೆ ಹೋಗುವಂತೆ ಶಾಲೆಗೆ ಹೋಗಿ ಎಲ್ಲ ಮಕ್ಕಳ ಜೊತೆಗೆ

ಕೂತುಕಲಿತು ಬರುವದು ಮೋತಿಲಾಲರಿಗೆ ಒಗ್ಗುತ್ತಿರಲಿಲ್ಲ. ಮನೆಯಲ್ಲಿ ಪ್ರತ್ಯೇಕವಾದ ಏರ್ಪಾಡು ಮಾಡಿದರು ಮಕ್ಕಳಿಗೆಕಲಿಸಲು. ಜವಾಹರರನ್ನು ಎಳೆವಯಸ್ಸಿನಲ್ಲಿಯೇ ಕಲಿಯಲು ಇಂಗ್ಲಂಡಕ್ಕೆ ಕಳುಹಿದರು. ಹದಿನಾಲ್ಕನೆಯ ವರುಷದಲ್ಲಿ ಕಲಿಯಲು ಹ್ಯಾರೋಕ್ಕೆ ಹೋಗಿ ಕೆಂಬ್ರಿಜ್ ದಲ್ಲಿ ಅಭ್ಯಾಸ ಪೂರ್ಣಮಾಡಿ ೧೯೧೪ ರಲ್ಲಿ ಭಾರತಕ್ಕೆ ಹಿಂದಿರುಗಿದರು. ವೈಭವಶಾಲಿ ಪ್ರಭುತ್ವದ ವಾತಾವರಣ ದಲ್ಲಿ ಹುಟ್ಟಿ, ಪಾಶ್ಚಾತ್ಯ ಸಂಸ್ಕೃತಿಯ ಬೆಳಕಿನಲ್ಲಿ ಬೆಳೆದು ಐಶ್ವರ್ಯ ಸಾಗರದ ಮಡಲಿನಿಂದ ಎದ್ದ ಈ ಮಗು ಇಂದು ವಿಶ್ವದಲ್ಲಿಯ ದೀನದಲಿತರ ಕೈವಾರಿಯಾದುದನ್ನು ಕಂಡು ಯಾರು ಮೂಗಿನ ಮೇಲೆ ಬೆರಳಿಟ್ಟುಕೊಳ್ಳಲಿಕ್ಕಿಲ್ಲ?

ನೆಹರೂರವರಿಗೆ ಚಿಕ್ಕಂದಿನಿಂದಲೂ ಕುದುರೆಯ ಮೇಲೆ ಸವಾರಿ ಮಾಡುವದೆಂದರೆ ಬಲುಮೋಜಿನ ಹಾಗೂ ಪ್ರೀತಿಯ ವಿಷಯವಾಗಿದ್ದಿತು. ಅವರ ತಂದೆಯವರು ಮನೆಯಲ್ಲಿ ಕೆಲವು ಉತ್ತಮ ಶುಭ್ರ ಕುದುರೆಗಳನ್ನು ಸಾಕಿದ್ದರು. ತೀರ ಚಿಕ್ಕವಯಸ್ಸಿನಲ್ಲಿಯೇ ಕುದುರೆ ಹತ್ತುವದನ್ನು ಕಲಿತರು. ಇಂದಿಗೂ ವಿರಾಮ ಸಿಕ್ಕಾಗ ನಿರ್ಭೀತಿಯಿಂದ ಕುದುರೆ ಸವಾರಿ ಮಾಡುವರು. ನೆಹರೂರವರು ಇಂಗ್ಲಂಡದಿಂದ ತಿರುಗಿ ಬಂದಾಗ ಮನೆಯವರೆಲ್ಲರೂ ಮಸೂರಿಯಲ್ಲಿ ಬೇಸಿಗೆಯ ವಿಶ್ರಾಮಧಾಮದಲ್ಲಿ ವಾಸಿಸುತ್ತಿದ್ದರು. ನೆಹರೂರವರ ಬರವನ್ನು ಕುತೂಹಲಿಗಳಾಗಿ ಎಲ್ಲರೂ ನಿರೀಕ್ಷಿಸುತ್ತಿದ್ದರು. ತಾಯಿಯಂತೂ ಯಾವಾಗಲೂ ಕಣ್ಣುಗಳನ್ನು ಹೊರಗೆ ಹಾಕಿರುತ್ತಿದ್ದಳು. ನೆಹರೂರವರ ಆಗಮನವು ಅಂದು ಅವಳಿಗೆ ಬಾನಿನಿಂದ ಬುವಿಗೆ ಇಳಿದು ಬಂದ ಜ್ಯೋತಿಯಂತಾಗಿದ್ದಿತು.

೧೯೧೬ ರ ಫೆಬ್ರುವರಿ ೮ ರಂದು ಪಂಡಿತಜೀಯ ಮದುವೆಯಾಯಿತು. ಆಗರ್ಭ ಶ್ರೀಮಂತರ ಮನೆತನದ ಮದುವೆಯೆಂದಮೇಲೆ ಕೇಳುವದೇನು ? ತಿಂಗಳುಗಟ್ಟಲೇ ಮದುವೆಯ ಸಿದ್ಧತೆಯು ನಡೆಯಿತು. ರತ್ನಪಡಿ ವ್ಯಾಪಾರಿಗಳು, ಶಿಂಪಿಗರು, ಅಕ್ಕಸಾಲಿಗರು ಮನೆಗೆ ಎಡತಾಕುತ್ತಲಿದ್ದರು. ಮದುವೆಯ ಯೋಜನಾ ಕಾರ್ಯದಲ್ಲಿ ಅನೇಕ ಜನ ಕರ್ಣಿಕರು ತೊಡಗಿದ್ದರು. ಮದುವೆ ದಿಲ್ಲಿಯಲ್ಲಿ ವಧುವಿನ ಮನೆಯಲ್ಲಿ ನಡೆಯಲಿದ್ದಿತು. ಮದುವೆಗೆ ಇನ್ನೂ ಒಂದು ವಾರವಿದೆ ಎನ್ನುವಾಗಲೇ ಸುಮೂರ್ತವೊಂದನ್ನು ನೋಡಿಕೊಂಡು ನಿಬ್ಬಣ ಹೊರಟಿತು. ಒಂದು ನೂರುಜನ ಬೀಗರನ್ನು ಹೊತ್ತ ಶೃಂಗಾರಿಸಿದ ಸ್ಪೇಶಲ್ ಉಗೆಬಂಡಿಯೊಂದು ಅಲ್ಹಾಬಾದ ನಿಲ್ದಾಣದಿಂದ ಹೊರಟಿತು. ಅನೇಕ ಜನ ಆಪ್ತೇಷ್ಟರು ದಿಲ್ಲಿಯಲ್ಲಿ ಬಂದು ಸೇರಿಕೊಂಡರು. ಬೀಗರಿಗೆ ಈ ಮಹಾ ಬೀಗರನ್ನು ಎಲ್ಲಿ ಇಳಿಸಬೇಕೆಂಬ ಸಮಸ್ಯೆ ದೊಡ್ಡದಾಯಿತು. ಅನೇಕ ಛತ್ರುಗಳನ್ನು ಹೊಡೆದು ' ನೆಹರೂರ ಮದುವೆಯ ಬೀಡು ' ಎಂಬ ಹೊಸ ನಗರವನ್ನೇ ನಿರ್ಮಾಣ ಮಾಡಿದರು. ಜೀವನದ ಜೊತೆಗಾರ್ತಿಎಂದು ನೆಹರೂವರು ಕಮಲಾದೇವಿ ಕೌಲರೆಂಬ ವಧುವಿನ ಪಾಣಿಗ್ರಹಣ ಮಾಡಿದರು. ಮದುವೆಯಾದ ಹತ್ತು ದಿನಗಳ ನಂತರ ಬೀಗರ ಜಂಬೂ ಸವಾರಿ ಪುನಃ ಅಲಹಾಬಾದಕ್ಕೆ ಹೊರಟಿತಂತೆ. ಮೂರು ತಾಸುಗಳಲ್ಲಿ ಮದುವೆ ಮುಗಿಸುವ ಇಂದಿನ ಸಮಾರಂಭಗಳೆತ್ತ ! ಮೂರು ವಾರಗಳ ಆ ವಿಜೃಂಭಣೆಯೆತ್ತ ! ಮದುವೆಯಾದ ಮರುವರುಷವೇ ಅಂದರೆ ೧೯೧೭ ರ ನವ್ಹಂಬರ ೧೯ ರಂದು ಭಾರತ ರತ್ನರ ಏಕಮೇವ ಪುತ್ರಿ ಇಂದಿರಾರ ಜನನವಾಯಿತು. ಕುವರಿಯು ಕುಲಕೋಟಿಗಳ ಉದ್ಧಾರ ಮಾಡುವಳೆಂದು ನಮ್ಮ ಹೊನ್ನಮ್ಮ ಕವಯಿತ್ರಿ ಹಾಡಿದ್ದಾಳೆ. ಆ ಕುವರಿಯಿಂದು ತನ್ನ ಕುಲ ಕೋಟಿಯನ್ನು ಉದ್ಧಾರ ಮಾಡಲಿ ಬಿಡಲಿ; ಭಾರತದ ಕೋಟಿ ಕೋಟಿ ದೀನದಲಿತರ ಉದ್ಧಾರಕ್ಕಾಗಿ ಟೊಂಕ ಕಟ್ಟಿನಿಂತುದನ್ನು ನೋಡಿದರೆ ನಮ್ಮ ಕವಯಿತ್ರಿಯವಾಣಿ ಋಜುವಾಣಿ ಎಂಬುದನ್ನು ಹೇಳಲೇಬೇಡ.

ಜಾಲಿಯನವಾಲಾ ಬಾಗದ ದುರಂತದ ಬಿರುಗಾಳಿಯು ತಂದೆ ಮಕ್ಕಳೀರ್ವರ ಹೃದಯದಲ್ಲಿ ಸುಪ್ತವಾಗಿದ್ದ ಸ್ವಾತಂತ್ರ್ಯ ಕಿಡಿಯನ್ನು ಪ್ರಜ್ವಲಿಸಿತು, ೧೯೨೦ ರಲ್ಲಿ ಗಾಂಧೀಜಿಯವರ ಸತ್ಯಾಗ್ರಹ ಚಳವಳಿಯೂ ಪ್ರಾರಂಭವಾಯಿತು. ಯಾವ ಮೋಡಿಯೋ ಏನೋ ಪಂಡಿತಜೀಯನ್ನು ಆಕರ್ಷಿಸಿತು ! ಪುಂಗಿಯ ನಾದಕ್ಕೆ ಮಾರು ಹೋಗುವ ಶೇಷನಂತೆ ಗಾಂಧೀಜಿಯ ಮೋಡಿಗೆ ತಾರುಣ್ಯದ ರಕ್ತದಿಂದ ಕುದಿಯುತ್ತಿದ್ದ ಜವಾಹರರು ಮಾರು ಹೋದರು. ಅದೊಂದು ಸಮ್ಮೋಹನಾಸ್ತ್ರವನ್ನು ಬೀರಿದಂತಾಯಿತು. ಅಂದು ಧೀಂಕಿಟ್ಟ ಪುರುಷ ಸಿಂಹನು ೭೫ ರ ಅಂಚನ್ನು ಸಮೀಪಿಸಿದ್ದರೂ ಇನ್ನೂ ಬಳಲಿಕೆ ಎಂಬುದಿಲ್ಲ, ತಿರುಗುವ ಮಾತಂತೂ ಎಲ್ಲಿಯೋ ! ಮೊದ ಮೊದಲುಮೋತೀಲಾಲರು ಮಗನಿಗೆ ಸನ್ಮತಿಯೀಯಲಿಲ್ಲ. ಆದರೆ ಅವರೇ ಅತ್ಯ ಆಕರ್ಷಿತರಾದ ಸಮಯ ಬಂದಾಗ್ಗೆ ಮಗನಿಗೆ ಅಡ್ಡಿಮಾಡುವದೆಂತು ! ವೈಭವಶಾಲಿ ಪ್ರಭುತ್ವದ

ವಾತಾವರಣದ ಮನೆ ಪ್ರಜಾಪ್ರಭುತ್ವದ ಬೀಜಸಂಗ್ರಹಿಸುವ ಜನತಾ ಜನಾರ್ದನನ ಅಡುಂಬೋಲವಾಯಿತು ಆನಂದ ಭವನವು.

ಪಂಡಿತಜೀಯವರು ಅಂದಿನಿಂದ ಸ್ವಾತಂತ್ರ್ಯ ಪ್ರಾಪ್ತಿಯ ವರೆಗೆ ಹತ್ತಾರು ಸಲ ಜೇಲಿಗೆ ಹೋದರು. ಆಳರಸರ ದಬ್ಬಾಳಿಕೆಗೆ ಗುರಿಯಾದರು. ಅನನ್ವಿತ ಅತ್ಯಾಚಾರಗಳಿಗೂ ಬಲಿಯಾದರು. ಆದರೂ ಪುಟಕ್ಕಿಟ್ಟ ಚಿನ್ನದಂತೆ ಮತ್ತೆ ಪ್ರಜ್ವಲಿತರಾಗಿಯೇ ಹೊರಬರುತ್ತಿದ್ದರು. ಮನೆ ಜೀವನದಲ್ಲಿಯಂತೂ ಅವರಂಥ ದುಃಖ ಪಟ್ಟವರು ಬೇರಾರೂ ಇರಲಿಕ್ಕಿಲ್ಲ. ಯಾವ ಸಂದರ್ಭದಲ್ಲಿ ದಾಂಪತ್ಯದ ಸುಖ ವಿಹಾರಕ್ಕಾಗಿ (Honey Moon) ಕಾಶ್ಮೀರಕ್ಕೆ ತೆರಳಬೇಕಾಗಿದ್ದಿತೋ ಆ ಸಂದರ್ಭದಲ್ಲಿ ಜೇಲಿಗೆ ಓಡಿದರು. ತಾವೊಬ್ಬರೇ ಅಲ್ಲ ಮನೆಯವರೆಲ್ಲರೂ ಜೇಲು ಜೀವನವನ್ನೇ ಮೆಚ್ಚುವಂತೆ ಪ್ರಭಾವ ಬೀರಿದರು. ಮುಂದೆ ಕೆಲ ದಿನಗಳಲ್ಲಿ ಕಮಲಾದೇವಿಯವರ ಆರೋಗ್ಯವೂ ಕೆಟ್ಟಿತು. ಕಳೆದು ಹೋದ ಆರೋಗ್ಯ ಸಂಪತ್ತು ಮರಳಿ ಬರಲೇ ಇಲ್ಲ. ಕೊನೆಗೆ ೧೯೩೬ ನೆಯ ಫೆಬ್ರುವರಿ ೨೮ ರಂದು ಕಮಲಾ ನೆಹರೂರವರು ಇಹಲೋಕ ಯಾತ್ರೆಯನ್ನು ಮುಗಿಸಿದರು. ಅವರ ಮರಣ ಸ್ಪಿರುರಲಂಡದ ಲಾಸನ್ನೆದ ಹತ್ತರ ಸಂಭವಿಸಿತು. ಪುಣ್ಯಕ್ಕೆ ಪ್ರಾಣೋತ್ಕ್ರಮಣದ ಕಾಲದಲ್ಲಿ ಪಂಡಿತಜೀಯವರ ಅಂಕವು ಅವರ ತಲೆದಿಂಬಾಗಿದ್ದಿತು. ಏಕಮಾತ್ರ ಪುತ್ರಿ ಇಂದಿರಾ ಕಣ್ಣೀರು ಕೋಡಿಯಾಗಿ ಹರಿಯುತ್ತಲಿದ್ದವು.

೧೯೩೧ ನೆಯ ಇಸ್ವಿಯ ಫೆಬ್ರುವರಿ ೬ ನೆಯ ದಿನಾಂಕಕ್ಕೆ ಬೆಳಗುಮುಂಜಾನೆ ಪ್ರೀತಿಯ ತಂದೆಯವರೂ ತೀರಿಕೊಂಡರು. ೧೯೩೨ ನೆಯ ಜನೇವರಿ ೨೬ ರಂದು ತಂದೆಯವರ ದೇಹಸ್ಥಿತಿ ಸರಿಯಿಲ್ಲವೆಂದು ನೆಹರೂರವರನ್ನೂ ಇನ್ನೂ ಕೆಲವು ನಾಯಕರನ್ನೂ ಜೇಲಿನಿಂದ ಬಿಡುಗಡೆ ಮಾಡಿದ್ದರು. ಧೀರ ತಂದೆಯನ್ನು ಕಳೆದುಕೊಂಡ ನೆಹರೂಜಿ ಅಧೀರರಾಗಲಿಲ್ಲ. ಮರಣ ಸಮಯದಲ್ಲಿ ಮೋತಿಲಾಲರಾಡಿದ ನುಡಿ ಅವರ ದೇಶವಾತ್ಸಲ್ಯದ ಪ್ರತಿಬಿಂಬದಂತಿದೆ "ನನಗೆ ಸ್ವತಂತ್ರ ಭಾರತದ ತೊಡೆಯ ಮೇಲೆ ಚಿರಶಾಂತಿ ಪಡೆಯ ಬೇಕೆಂಬಾಶಯವಿದೆ"! ಎಂಥ ಉಜ್ವಲ ದೇಶಾಭಿಮಾನವಿದು. ೧೯೩೮ ರಲ್ಲಿ ಜವಾಹರರ ತಾಯಿಯು ಸರ್ಗವನ್ನೈದಿದರು. ನೆಹರು ತಾಯಿಯ ತಲೆದಿಂಬಿಗೊರಗಿ 'ಅವಳೂ ಹೋಗಿ ಬಿಟ್ಟಳು' ಎಂದು ಒಂದೇ ಒಂದು ಉದ್ಗಾರ ತೆಗೆದರಂತೆ. ಯಾವ ತಾಯಿಯ ಅಂತಃಕರಣದ ವಜ್ರ ಪಂಜರದಲ್ಲಿ ಈ ಪಕ್ಷಿ ಬೆಳೆದಿದ್ದಿತೋ ಆ ತಾಯಿಯ ರಕ್ಷೆ ಇನ್ನಿಲ್ಲದಾಯಿತು! ವಿಶ್ವ ಮಾತೆಯ ಮಡಿಲ ಉಡಿಯೇ ಇಂದು ಅವರ ಆಶ್ರಯ ಸ್ಥಾನ. ನೆಹರೂರವರನ್ನೂ ತಾಯಿಯಂತೆ ಸಾಕಿ ಸಲುಹಿದ ಅವರ ಅಬಚಿಯವರೂ ತಂಗಿಯ ಮರಣದ ಆಘಾತಕ್ಕೆ ಗುರಿಯಾಗಿ ಅವರು ಗತಿಸಿದ ಇಪ್ಪತ್ತುನಾಲ್ಕು ಗಂಟೆಗಳಲ್ಲಿಯೇ ಪ್ರಾಣಬಿಟ್ಟರು. ನೆಹರೂರವರ ಪಾಲಿಗೆ ಉಳಿದಿತೇನು? ಭಾರತ ಮಾತೆಯೇ ಅವರ ತಾಯಿಯಾದಳು. ವಿಶ್ವವೇ ಅವರ ಅಬಚಿಯಾದಳು.

ನೆಹರೂರ ಧೈರ್ಯ, ಅವರ ಸಾಹಸ ಪ್ರವೃತ್ತಿ, ಅದ್ವಿತೀಯವಾದ ದೇಶಪ್ರೇಮ, ನಿರ್ಭಯ ಮನೋವೃತ್ತಿಗಳು ಅವರನ್ನು ಧೀರೋದಾತ್ತನಾಯಕರನ್ನಾಗಿ ಮಾಡಿವೆ. ನಾವಿಂದು ಕಾವ್ಯ ನಾಟಕಗಳಲ್ಲಿ ಓದುತ್ತಿರುವ ಧೀರೋದಾತ್ತ ನಾಯಕನನ್ನು ಮೂರ್ತಿವತ್ತಾಗಿ ಕಾಣಬೇಕೆಂದು ಅಪೇಕ್ಷಿಸಿದರೆ ಒಂದುಕ್ಷಣ ನೆಹರೂರವರನ್ನು ಕಾಣಬೇಕು. ಆಂಗ್ಲ ಕವಿಯೋರ್ವನು ಹೇಳುತ್ತಾನೆ.

"Not all the armies of all the empires of earth can crush the spirit of one true man. And that one man will prevail" ಇಂಥ ಒಂದು ಚೈತನ್ಯವೇ ಮೈವೆತ್ತು ಬಂದಂತಿದ್ದಾರೆ ಪಂಡಿತಜೀಯವರು. ಅಂಥ ಒಂದು Spirit ಇಂದಿನ ಬಾಲಕರಲ್ಲಿ ಮೂಡಿ ಬರಲಿ.

ನಿವೃತ್ತ ಶಿಕ್ಷಣಾಧಿಕಾರಿಗಳಾದ ಶ್ರೀಮಾನ್ ಜಿ. ಕೆ. ಕೊಪ್ಪೀಕರರು

ಪರಿಚಯ ಮಾಡಿಸಿದವರು :— ಶೇ ಗಾಲವ

ಧಾರವಾಡ ವಿಭಾಗದ ಡೆಪ್ಯೂಟಿ ಡೈರೆಕ್ಟರರಾದ ಶ್ರೀಮಾನ್ ಜಿ. ಕೆ. ಕೊಪ್ಪೀಕರವರು ಇದೇ ತಿಂಗಳ (ನವ್ಹಂಬರ) ಳನೆಯ ದಿನಾಂಕ ಸೇವಾ ನಿವೃತ್ತರಾದರು. ಶ್ರೀಯುತರು ಸುಮಾರು ಮೂವತ್ತು ವರುಷಗಳ ಅಖಂಡ ಸೇವೆಯನ್ನು ಸಲ್ಲಿಸಿ ನಿವೃತ್ತರಾದ ಈ ಸಂದರ್ಭದಲ್ಲಿ ಅವರ ಜೀವನದ ಹಲ ಕೆಲವು ಸ್ಮೃತಿಗಳನ್ನು ನೆನೆದು ಗೌರವ ಸಲ್ಲಿಸುವುದು ಅಪ್ರಸ್ತುತವೆನಿಸಲಾರದು. ಅದರಲ್ಲಿಯೂ ಶಿಕ್ಷಣ ಪ್ರಪಂಚದಲ್ಲಿ ದುಡಿಯುವವರು-ಅವರ ಕಾರ್ಯ ನೆನೆಯುವದು ಧರ್ಮವೂ ಆಗಿದೆ.

ಕಾರವಾರವು ನಿಸರ್ಗ ಸೌಂದರ್ಯದ ನೆಲೆವೀಡು. ಅಲ್ಲಿಯ ನೆಲ, ಸಮುದ್ರ, ಉತ್ತುಂಗ ವೃಕ್ಷಗಳು ಎಂಥವರ ಮನಸ್ಸನ್ನೂ ಮುಗ್ಧ ಮಾಡುವವು. ಆ ರಮಣೀಯ ಶಾಂತ ಸಮುದ್ರದ ಮಳಲ ದಡದ ಮನೆಯೊಂದರಲ್ಲಿ ಕ್ರಿ. ಶ. ೧೯೦೫ನೆಯ ನವ್ಹಂಬರ ೪ರಂದು ಜನ್ಮವೆತ್ತಿದರು. ಅವರ ತಂದೆಯವರೂ ಶಿಕ್ಷಕರಾಗಿದ್ದರೆಂದು ತಿಳಿದು ಬರುವುದು. ಪ್ರಾಥಮಿಕ ಶಿಕ್ಷಣವನ್ನು ಪೂರೈಸಿಕೊಂಡ ನಂತರ ಮಾಧ್ಯಮಿಕ ಶಿಕ್ಷಣಕ್ಕಾಗಿ ಬೆಳಗಾಂವಿಯಲ್ಲಿಯ ಜಿ. ಎ. ಹೈಸ್ಕೂಲು ಸೇರಿದರು. ಹಿಂದೂ ಹೈಸ್ಕೂಲ ಕಾರವಾರ, ಗವ್ಹರ್ಮೆಂಟ ಹೈಸ್ಕೂಲ ಕಾರವಾರ ಇಲ್ಲಿಯೂ ಮಾಧ್ಯಮಿಕ ಶಿಕ್ಷಣವನ್ನು ಮುಂದುವರಿಸಿ ಮುಂಬೈ ವಿಶ್ವವಿದ್ಯಾಲಯದ ಮ್ಯಾಟ್ರಿಕ್ ಪರೀಕ್ಷೆಯನ್ನು ೧೯೨೨ರಲ್ಲಿ ಪಾಸಾದರು.

ತ್ರೀಯುತರ ಉಚ್ಚ ಶಿಕ್ಷಣವು ೧೯೨೨ ರಿಂದ ೧೯೨೭ರ ಪರ್ಯಂತ ಮುಂಬೈ ಮಹಾನಗರದಲ್ಲಿಯ ವಿಲ್ಸನ್ ಕಾಲೇಜದಲ್ಲಾಯಿತು. ೧೯೨೭ರಲ್ಲಿ ಮೊದಲು ಬಿ. ಎ. ಪದವಿಯನ್ನು ಪಡೆದು ಮರು ವರುಷ ವಿಜ್ಞಾನ ಪದವಿಯಾದ ಬಿ. ಎಸ್‌ಸಿ. ಯಲ್ಲಿಯೂ ತೇರ್ಗಡೆ ಹೊಂದಿದರು. ಶ್ರೀಯುತರು ತಮ್ಮ ಪದವಿ ಪರೀಕ್ಷೆಗಾಗಿ, ಪದಾರ್ಥವಿಜ್ಞಾನಶಾಸ್ತ್ರ ಹಾಗು ರಸಾಯನಶಾಸ್ತ್ರಗಳನ್ನು ತೆಗೆದುಕೊಂಡಿದ್ದರು. ಪದವಿ ಪಡೆದ ನಂತರ ಅದೇ ಕಾಲೇಜದಲ್ಲಿ ಡೆಮಾನ್‌ಸ್ಟ್ರೇಟರೆಂದು೨೭-೨೭ ರಲ್ಲಿ ನೇಮಕ ಗೊಂಡು ಕೆಲಸ ಮಾಡಿದರು. ಅಂದಿನಿಂದಲೇ ಅವರ ಸೇವೆಯ ಪ್ರಾರಂಭವೆಂದು ಹೇಳಬಹುದು.

ಕ್ರಿ.ಶ. ೧೯೨೭ ರಿಂದ ೩೦ರ ವರೆಗೆ ಮುಂಬೈ ಹಾಗು ಆಗಿನ ಮುಧೋಳ ಸಂಸ್ಥಾನದ ಖಾಸಗಿ ಹೈಸ್ಕೂಲುಗಳಲ್ಲಿ ಶಿಕ್ಷಕರೆಂದು ಕಾರ್ಯ ಮಾಡಿದರು.

೧೯೩೦ರ ಜುಲೈ ತಿಂಗಳಲ್ಲಿ ಇವರಿಗೆ ಪ್ರಪ್ರಥಮವಾಗಿ ಸರಕಾರಿ ನೌಕರಿಯು ದೊರೆಯಿತು. ಆಗ್ಗೆ ಹುಬ್ಬಳ್ಳಿಯಲ್ಲಿದ್ದ ಆ್ಯಂಗ್ಲೋ ಉರ್ದು ಹೈಸ್ಕೂಲದಲ್ಲಿ ಇವರು ಶಿಕ್ಷಕರಾದರು. ಒಂದೆರಡುಸಲ ಇವರ ಬಿಡುಗಡೆಯೂ ಆಗಿ ಕೊನೆಗೆ ೧೯೩೧ರ ಜೂನ ತಿಂಗಳಿಂದ ಇವರ ಸಂತತವಾದ ಸೇವೆ ಪ್ರಾರಂಭವಾಯಿತು. ೧೯೩೪-೩೫ರಲ್ಲಿ ಮುಂಬೈಯಲ್ಲಿ ಬಿ. ಟಿ. ಪದವಿಯನ್ನು ಸಂಪಾದಿಸಲು ಸರಕಾರದಿಂದಲೇ ನಿಯೋಜಿತರಾಗಿ ಹೋದರು. ೧೯೩೫ರಲ್ಲಿ ದ್ವಿತೀಯ ಶ್ರೇಣಿಯಲ್ಲಿ ಪಾಸಾಗಿ ತರಬೇತಿಯನ್ನು ಮುಗಿಸಿ ಬಂದರು. ಪ್ರಾರಂಭದಲ್ಲಿ ಬೆಳಗಾಂವಿಯ ಸರ್ದಾರ್ಸ ಹೈಸ್ಕೂಲಿಗೆ ಬಂದರೂ ಕೂಡ ಮುಂದೆ ಧಾರವಾಡದಲ್ಲಿಯ ಗಂಡುಮಕ್ಕಳ ಸರಕಾರಿ ಟ್ರೇನಿಂಗ ಕಾಲೇಜಕ್ಕೆ ಬದಲಿಯಾಗಿ ಬಂದರು. ಇವರ ಅವಿಶ್ರಾಂತ ಪರಿಶ್ರಮ, ಕಲಿಸುವಲ್ಲಿ ತೋರಿಸುವ ಲವಲವಿಕೆ ಉತ್ಸಾಹಗಳು ಇವರಿಗೆ ಛಾತ್ರ ವರ್ಗದಲ್ಲಿಯೂ, ಮೇಲಧಿಕಾರಿಗಳಲ್ಲಿಯೂ ಪ್ರೀತಿಯನ್ನು ಸಂಪಾದಿಸಿ

ಕೊಟ್ಟವು. ಅದೇ ವರುಷವೇ ಟ್ರೇನಿಂಗ ಕಾಲೇಜದಲ್ಲಿ ೩ನೆಯ ವರುಷವು ಪ್ರಾರಂಭವಾಗಿದ್ದಿತು. ಶಾಸ್ತ್ರೀಯ ವಿಷಯವನ್ನು ಕಲಿಸುವುದು ಇವರಿಗೆ ಮೀಸಲಾಗಿದ್ದಿತು.

ಇವರ ಉತ್ಸಾಹ ಲೋಕಪ್ರಿಯತೆಗಳು ಸರಕಾರದ ಗಮನಕ್ಕೆ ಬಂದವು. ಕೂಡಲೇ ಇವರನ್ನು ಮುಂಬೈ ಮರ್ಯುಗಾಂವ ಬಂದರದಲ್ಲಿಯ ಡಫರಿನ್ ಆರ್ಫ್.ಎಮ್. ಎಸ್. ಟಿ. ಎಸ್. ಗೆ ವರ್ಗಾಯಿಸಲಾಯಿತು. ಅಲ್ಲಿ ೧೯೩೬ ರಿಂದ ಸುಮಾರು ಸಪ್ತವರ್ಷಗಳ ಪರ್ಯಂತ ಸೈನಿಕ ವಾತಾವರಣದಲ್ಲಿ ಶಿಸ್ತಿನ ಸೇವೆಸಲ್ಲಿಸಿದರು. ಅಲ್ಲಿರುವಾಗಲೇ ಕ್ಯಾಡೆಟ್ಸ್‌ರ ಉಪಯೋಗಕ್ಕಾಗಿ ಹೊತ್ತಿಗೆಯೊಂದನ್ನು ಬರೆದರು. ಗಣಿತ ಹಾಗು ವಿಜ್ಞಾನ ವಿಷಯಗಳಿರಡರ ಮೇಲೂ ಅನೇಕ ಲೇಖನಗಳನ್ನು ಬರೆದು 'ಕಲಿಸುವುದು' (Teaching) ಎಂಬ ಪತ್ರಿಕೆಯಲ್ಲಿ ಪ್ರಕಟಿಸಿದರು.

೧೯೪೫ರಲ್ಲಿ ಪುನಃ ಮರಳಿ ಮಾತೃ ಶಾಖೆಗೆ ಬಂದರು. ಮುಂಬೈಯಲ್ಲಿಯ ಎಲ್ಫಿನ್‌ಸ್ಟನ್ ಟೆಕ್ನಿಕಲ್ ಹೈಸ್ಕೂಲದಲ್ಲಿ ಉಪಪ್ರಾಧ್ಯಾಪಕರೆಂದು ನೇಮಕಗೊಂಡು ಗಣಿತ ವಿಷಯವನ್ನು ಕಲಿಸುವ ಹೊಣೆ ಹೊತ್ತರು. ೧೯೪೭ರಲ್ಲಿ ಬೆಳಗಾಂವಿಯಲ್ಲಿಯ ಸರ್ದಾರ್ಸ ಹೈಸ್ಕೂಲಿಗೆ ಹೆಡ್‌ಮಾಸ್ತರರೆಂದು ಬಂದರು. ೧೯೫೦ ಜುಲೈ ತಿಂಗಳಲ್ಲಿ ಸರ್ದಾರ್ಸ ಹೈಸ್ಕೂಲು ತನ್ನ ಶತಮಾನೋತ್ಸವವನ್ನು ಆಚರಿಸುವಲ್ಲಿ ಇವರಪಾತ್ರವು ಹಿರಿಯದಾಗಿದ್ದಿತು. ತದನಂತರ ಕಲಿಸುವ ಕ್ಷೇತ್ರದಿಂದ ಆಡಳಿತೆಯ ಪ್ರಾಂಗಣಕ್ಕೆ ಇಳಿದು ಬಂದರು. ೧೯೫೦ ರಿಂದ ೫೨ರ ವರೆಗೆ ಧಾರವಾಡ ವಿಭಾಗದ ಅಸಿಸ್ಟಂಟ ಎಜ್ಯುಕೇಶನ್ ಇನಸ್ಪೆಕ್ಟರೆಂದು ಕಾರ್ಯನಿರ್ವಹಿಸಿದರು. ೧೯೫೩ರಲ್ಲಿ ಠಾಣಾ ಜಿಲ್ಲೆಯ ಶಿಕ್ಷಣಾಧಿಕಾರಿಗಳೆಂದು ನೇಮಕಗೊಂಡು ಹೋದರು. ಅಲ್ಲಿ ಠಾಣಾ ಜಿಲ್ಲೆಯಲ್ಲಿಯ ಆದಿವಾಸಿಗಳ ಶಿಕ್ಷಣದ ಸ್ಥಿತಿಗತಿ ಎಂಬ ಬಗೆಗೆ ಒಂದು ಚಿಕ್ಕ ಹೊತ್ತಿಗೆಯನ್ನು ಬರೆದು ಪ್ರಕಟಿಸಿದರು

ರಾಜ್ಯ ಪುನರ್ಘಟನೆಯ ದಿನವೇ ಧಾರವಾಡ ಜಿಲ್ಲೆಯ ಶಿಕ್ಷಣಾಧಿಕಾರಿಗಳೆಂದು ಬಂದರು. ಸುಮಾರು ಮೂರು ವರ್ಷಗಳ ಪರ್ಯಂತ ಶಿಕ್ಷಣಾಧಿಕಾರಿಗಳೆಂದು ಕೆಲಸ ಮಾಡಿದರು. ತಮ್ಮ ಈ ಅಧಿಕಾರದ ಕಾಲಾವಧಿಯಲ್ಲಿ ಹೆಡ್‌ಮಾಸ್ತರರ ಹಾಗು ಉಪಶಿಕ್ಷಕರ ಒಂದು ಚರ್ಚಾಗೋಷ್ಠಿಯನ್ನು ಧಾರವಾಡದಲ್ಲಿ ಏರ್ಪಾಡು ಮಾಡಿದರು. ೧೯೫೯ರ ಜನೇವರಿಯಲ್ಲಿ ಬೆಂಗಳೂರ ನಗರದ ಶಿಕ್ಷಣಾಧಿಕಾರಿಗಳೆಂದು ತೆರಳಿದರು. ಅಲ್ಲಿಂದ ಮುಂದೆ ಕೆಲ ದಿನಗಳಲ್ಲಿಯೇ ಅಲ್ಲಿಯೇ ಯೋಜನಾಧಿಕಾರಿಗಳೆಂದು ನೇಮಕಗೊಂಡು ರಾಜ್ಯದ ಶಿಕ್ಷಣದ ಯೋಜನೆಗಳನ್ನು ರೂಪಿಸುವಲ್ಲಿ ದುಡಿದರು. ೧೯೬೦ನೆಯ ಅಗಸ್ಟ ತಿಂಗಳ ೧೫ನೆಯ ದಿನಾಂಕ ಪುನಃ ಧಾರವಾಡಕ್ಕೆ ಡೆಪ್ಯೂಟಿ ಡಾಯರೆಕ್ಟರೆಂದು ಬಂದು ನಿವೃತ್ತರಾಗುವವರೆಗೂ ದುಡಿದರು.

ಶ್ರೀಯುತರ ಸ್ವಭಾವವು ಅತ್ಯಂತ ಮೃದುವಾದುದು. ಯಾರಿಗೂ ಕಠೋರ ಮಾತುಗಳನ್ನು ಆಡಿ ಅರಿಯರು. ಮುಖದ ಮೇಲೆ ಸಂಸ್ಕೃತಿಯ ಮುದ್ರೆ ಅಚ್ಚೊತ್ತಿದಂತಿದೆ. ಆದರೆ ಯಾರ ದಾಕ್ಷಿಣ್ಯಕ್ಕೂ ಒಳಗಾಗದವರು. ಸರಕಾರದ ಕಾನೂನುಗಳ ಚೌಕಟ್ಟನ್ನು ಬಿಟ್ಟು ಒಂದು ಕೂದಲೆಳೆಯಷ್ಟು ತಪ್ಪಿಯೂ ಕೂಡಾ ಹೊರಬರರು. 'ಕಾಯ್ದೆ ಬದ್ಧ ಕೊಪ್ಪೀಕರರೆಂದೇ' ಜನರು ಹೇಳಿಕೊಳ್ಳುತ್ತಿದ್ದರು. ಉತ್ತಮ ಶಿಕ್ಷಕರಾಗಿ, ಲೋಕಪ್ರಿಯ ಆಡಳಿತಗಾರರಾಗಿ, ಶಿಸ್ತಿನ ಸೈನಿಕನಂತೆ ಅವಿಶ್ರಾಂತ ಮೂವತ್ತು ವರುಷಗಳ ಪರ್ಯಂತ ದುಡಿದು ನಿವೃತ್ತಿ ಹೊಂದಿದ ಕೊಪ್ಪೀಕರರನ್ನು ಕೃತಜ್ಞತೆಯಿಂದ ನೆನೆಯಬೇಕಾದದು ಕರ್ತವ್ಯವೇ ಆಗಿದೆ. ಶ್ರೀಯುತರ ಸಂಬಂಧವು ಪ್ರಾಥಮಿಕ ಶಿಕ್ಷಕರ ಕೂಡ ಜೀವನ ಶಿಕ್ಷಣ ಪತ್ರಿಕೆಯ ಕೂಡ ಬಂಧುಬಾಂಧವ್ಯವು ಮಧುರವಾಗಿ ಬೆಳೆದಿದೆ.

ಈ ಸಂದರ್ಭದಲ್ಲಿ ಶ್ರೀಯುತರಿಗೆ ದೇವರು ಆಯುರಾರೋಗ್ಯಗಳನ್ನು ದಯಪಾಲಿಸಲೆಂದೂ ಇವರ ಮಾಗಿದ ಬುದ್ಧಿಯ, ಪಡೆದ ಅನುಭವದ ಲಾಭವು ಶಿಕ್ಷಣ ಪ್ರಪಂಚಕ್ಕೆ ಇನ್ನೂ ದೊರಕುವಂತಾಗಲಿ ಎಂದೂ ಪ್ರಾರ್ಥಿಸಿಕೊಳ್ಳುವೆವು.

— ನಿಸರ್ಗ ರಾಣಿ —

ಲೇ: ಶ್ರೀ ಸಿ. ವ್ಹಿ. ಹಿರೇಮಠ, ಟೀಚರ್ಸ ಕಾ. ಬೆಳಗಾವ

ಒಂದಿರುಳ ಸಂಜೆಯಲಿ ನಿನ್ನರಳು ಮೊಗ ನೋಡಿ
ಚೆಂದುಟಿಯ ಚಲುವೆ ಇವಳಾರು ಎಂದೆ |
ಮುಂದೊಮ್ಮೆ ಸಂಧಿಸಿದೆ. ನಿನ್ನ ಆಗಮನಕ್ಕೆ
ಬಂದುಹೋದಳೊ ಏನೋ ಅಂದಿನಾ ಇಂದುಧರೆ ‖ ೧ ‖

ಸರಿದಿದ್ದ ಎನ್ನೆದೆಯ ಸೆರೆಹಿಡಿದು ಹೋದವಳೇ
ಅರುಹಿನಾ ಸರಸ ವಿರಸ ಬೆರೆಸಲು ಬೇಡ |
ಅರಿಯದವಳಾ ಎಂದು ಮರುಳುಗೊಳಿಸಲು ಬೇಡ
ತಿರೆಯಲ್ಲಿ ನಿನ್ನ ಇರವೆಲ್ಲಿ ಹೇಳೆನಗೆ ‖ ೨ ‖

ಅರಳು ಮರುಳಿನ ತರಳೆ ಕೊರಳ ಕೊಂಕಿಸಿದೇಕೆ
ಎರಳೆ ಅಂದದಿ ನೀನು ಹೊರಳಿ ನೋಡಿದಿಯೇಕೆ |
ಇರುಳಿಲ್ಲ ನಾ ನಿನ್ನ ಬರವನ್ನೆ ಆಲಿಸಿದೆ
ಬಿರುಗಾಳಿಯೆ ನೀನು ಬಲ್ಲೆಯಾ ಅವಳನ್ನು ‖ ೩ ‖

ಬಳಕುವಾ ಎಳೆ ಬಾಲೆ ಏನನರಿಯದ ಅಬಲೆ
ಇಳೆಯಲ್ಲ ಶೋಧಿಪೆನು ಅಂದಿನಾ ಅವಳನ್ನು |
ಜುಳುಗುಡುವಹೊನಲಿನೊಳು ಕೊಳಲನೂದುವಗೆಳೆಯ
ಸುಳಿಯ ಸೆರಗಿನ ಅವಳ ಬಲ್ಲೆಯಾ ಅಲ್ಲಿ ‖ ೪ ‖

ನನ್ನ ನೆರಳನು ನಾನು ನಂಬದಾಗಿಹುದಿಲ್ಲಿ
ನಾನುಂಡ ಸಿಹಿಯೂಟ ಕಹಿಯಾಗಿ ವರಿಣಮಿಸಿ |
ನೋರೆಪಪ್ಪಿದೆ ಎನ್ನ ಅರಿಯದಾ ಹವಣಿಕೆಯು
ಯಾರ ಮೊರೆಯಿಡಲೀಗ ವಿರಹ ವೇದನೆಗಾಗಿ ‖ ೫ ‖

ಎಲ್ಲಿಹಳು ಎನ್ನ ಆ ಸೆವೆಸೆಳೆದ ಕಮಲಮುಖಿ
ಮಲ್ಲಿಗೆಯ ರಾಶಿಯೇ ಅವಳ ನಗೆಯೆಂದೆಂಬೆ |
ಎಲ್ಲವನು ಬಲ್ಲಂಥ ಬಲ್ಲಿದನೆ ಹೇಳವಳ
ಸೊಲ್ಲನಾಲಿಸಲಿಕ್ಕೆ ತಾಣವೆಲ್ಲಿಹುದೆನಗೆ ‖ ೬ ‖

ಹಾಲಗೆನ್ನೆಯ ಮೊಗವು ಹಳಹಳಿಯನೆಬ್ಬಿಸಿದೆ
ಬೊಗಸೆಗಣ್ಣಿನ ದೇಹ ಸೊಗಸನೀಗಿಹುದಿಲ್ಲಿ |
ತರುಣಿಯಾ ವಿರಹಕ್ಕೆ ಕರಳು ಕೊರೆಯುತಲಿಹುದು
ಇರುಳದೇವಿಯೇ ಹೇಳು ನೀನೆಲ್ಲಿ ಕಂಡಿರುವೆ ‖ ೭ ‖

ಕಲ್ಲದೇವನ ಪೂಜೆಗವಳೇಕೆ ಹೋಗುವಳು ?
ಕಲ್ಲೆದೆಯ ಕಾಮಿನಿಯ ಬಲ್ಲವರು ಯಾರು ?
ಎಲ್ಲರನು ಸಂತಯಿಪ ಜಲದೇವಿಯೇ ನೀನು
ಎಲ್ಲಿಹಳು ನನ್ನವಳು ಬಲ್ಲೆಯಾ ಇಂದು ‖ ೮ ‖

ಆಗಸದ ಅಂಚಿನಲಿ ಸಂಚರಿಪ ವಿಹಗವೆ
ಕೋಚವೂ ತಡಬೇಡ ಕಂಡಿರುವೆಯಾ |
ಇಂಚರದ ದನಿಗೈವ ಕೋಗಿಲೆಯೆ ನಿನ್ನ
ಇನಿದನಿಯನಾಲಿಸಲು ಬಂದಿದ್ದಳೇನವಳು ? ‖ ೯ ‖

ಎನ್ನ ಮನದಾಸೆಯನು ಗಾಳಿಗೋಪುರಗೈದ
ಕಣ್ಣು ಕೊರೆದಿಹ ಆ ಚಿನ್ನರೂಪಸಿ ಎಲ್ಲಿ ? |
ಮನಸೆಳೆವ ಗೀತೆಗಳ ಮನದುಂಬಿ ಹಾಡುವೆನು
ವನದೇವಿಯೇ ನೀನು ಅನುಕೂಲವಾಗಮ್ಮ ‖ ೧೦ ‖

ತಿಳಿಗೊಳದ ತಾನರೆಯೆ ಬಿಳಿದೆರೆಯ ತಿಳಿಮುಗಿಲೆ
ಹಚ್ಚಹಸುರನು ಬಿಚ್ಚಿ ಸ್ವಚ್ಛಂದವಹ ಭೂದೇವಿ |
ಇಚ್ಛಿಸಿದ ಹರಕೆಯನು ಜವದಲ್ಲಿ ಈಯುವೆನು
ಎಚ್ಚರಿಸಬಾರದೇ ನಾಚಿರುವ ನನ್ನವಳ ‖ ೧೧ ‖

ವ್ಯಾಥಮಿಕ ಶಾಲಾ ಪ್ರಮಾಣಪತ್ರ ಪರೀಕ್ಷೆ, ಟ್ರೇನಿಂಗ ಕಾಲೇಜ; ಎಲಿಮೆಂಟರಿ ಮತ್ತು ಇಂಟರಮೀಡಿಯೆಟ್ ಗ್ರೇಡ ಮುಂ. ಡ್ರಾಯಿಂಗ ಪರೀಕ್ಷೆಗಳಿಗೆ—

ಜನಪ್ರಿಯವಾದ ಮತ್ತು ಸರಕಾರದಿಂದ ಮಂಜೂರಾದ ಒಂದೇ ಒಂದು ಪುಸ್ತಕ

ಆದರ್ಶ ಚಿತ್ರಕಲಾ

(Ideal Drawing)

ಶ್ರೀ ಎಸ್. ಕೆ. ಜೋಶಿ, ಮತ್ತು **ಶ್ರೀ ಜಿ. ಡಿ. ವಾಲಿ.**

ಎಲ್ಲ ದೊಡ್ಡ ಪುಸ್ತಕ ವ್ಯಾಪಾರಸ್ಥರಲ್ಲಿ ದೊರೆಯುವದು.

ಬೆಲೆ ೧—೧೫—೯ ಅಂಚೆವೆಚ್ಚ ಪ್ರತ್ಯೇಕ.

ಐದು ಮತ್ತು ಐದಕ್ಕಿಂತ ಹೆಚ್ಚು ಪ್ರತಿ ತರಿಸಿಕೊಳ್ಳುವವರಿಗೆ ಅಂಚೆ ವೆಚ್ಚವಿಲ್ಲ. ಇದು ಕನ್ನಡದಲ್ಲಿಯೂ ಸಿಗುತ್ತದೆ.

ಜಿ. ವಾಯ್. ರಾಣೆ

ಪ್ರಕಾಶಕರು, ೩೪೩, ಕಸಬಾಪೇಟೆ ಪುಣೆ.

ಲಿಂಗೈಕ್ಯ ಶ್ರೀಮತಿ ಶಿಂತ್ರಿ ಬಸಮ್ಮನವರ ಪುಣ್ಯತಿಥಿ ಆಚರಣೆ ಪ್ರಾರಂಭೋತ್ಸವ

ಮಿಶ್ರಿಕೋಟಿ, ಸಪ್ಟಂಬರ ೧೨— ಇಂದು ಈ ಸಮಾರಂಭವು ಸ್ಥಳ ಸಂಕೋಚದ ಮೂಲಕ ಕನ್ನಡ ಹೆಣ್ಣು ಮಕ್ಕಳ ಜೀವನ ಶಿಕ್ಷಣ ಶಾಲೆಯಲ್ಲಿ ಜರುಗದೆ ಕನ್ನಡ ಗಂಡು ಮಕ್ಕಳ ಜೀವನ ಶಿಕ್ಷಣ ಶಾಲೆಯಲ್ಲಿ ಪ್ರೊ.ಕಮಲಾದೇವಿ ಶಿಂತ್ರಿಯವರ ಅಧ್ಯಕ್ಷತೆಯಲ್ಲಿ ಅತ್ಯಂತ ವೈಭವದಿಂದ ನೆರವೇರಿತು. ಪ್ರೊ. ಸರೋಜನಿದೇವಿ ಶಿಂತ್ರಿಯವರು ಮುಖ್ಯ ಅತಿಥಿಗಳಾಗಿ ಆಗಮಿಸಿದ್ದರು. ಈ ಸಮಾರಂಭದ ವೈಶಿಷ್ಟ್ಯವೆಂದರೆ ಮಹಿಳೆಯರು ಕಿಕ್ಕಿರಿದು ಕಲೆತಿದ್ದರು. ಹಿಂದಿನ ಆವ ಸಮಾರಂಭದಲ್ಲಿಯೂ ಇಷ್ಟೊಂದು ಸಂಖ್ಯೆಯಲ್ಲಿ ಪನಿತೆಯರು ಭಾಗವಹಿಸಿರಲಿಲ್ಲ. ಶ್ರೀ ಬಿ. ಎಂ. ಶಿಂತ್ರಿ ನಿವೃತ್ತ ಶಿಕ್ಷಣಾಧಿಕಾರಿ, ಶ್ರೀಮತಿ ಎಂ. ಎಸ್. ನಾಡಕರ್ಣಿ ಬೀಟ ಆಫೀಸರ, ಶ್ರೀ ಬಿ. ಸಿ. ಪಾಟೀಲ ಕ್ಲಾರ್ಕ ಡೆಪ್ಯೂಟಿ ಡಾಯರೆಕ್ಟರ ಆಫೀಸ ಧಾರವಾಡ ಇವರು ಉಪಸ್ಥಿತರಿದ್ದರು. ಪ್ರತಿ ವರುಷ ಪುಣ್ಯತಿಥಿಯನ್ನು ಆಚರಿಸಲು ಶ್ರೀ ತಮ್ಮಣ್ಣಾ ಕರಡಿ ಯವರು ಶಾಶ್ವತ ನಿಧಿಯನ್ನು ದೇಣಿಗೆಯಾಗಿಕೊಟ್ಟಿದ್ದ ಕ್ಯೋಸ್ಥರ ಅವರನ್ನು ಸಭೆಯಲ್ಲಿ ಗೌರವಿಸಲಾಯಿತು. ರಾಷ್ಟ್ರಗೀತೆಯಾದ ನಂತರ ಪನಿವಾರ (ಪ್ರಸಾದ) ವು ಎಲ್ಲ ಸಾಲೆಗಳ ಮಕ್ಕಳಿಗೆ ಹಂಚಲ್ಪಟ್ಟಿತು.

ಚಿನ್ನಪ್ಪ ಮುತ್ತಲಗೇರಿ
ಪ್ರಧಾನ ಶಿಕ್ಷಕಿಯರು

ನೂರೇ ತಿಂಗಳಲ್ಲಿ] ಇಂತಹದು ಇನ್ನೊಂದಿಲ್ಲ [ಪುನರ್ಮುದ್ರಣ

ಆದರ್ಶ ಹಿಂದಿ-ಕನ್ನಡ ವ್ಯಾಕರಣ 1

ಬೆಲೆ: ೧ ರೂಪಾಯಿ.

ಲೇ.: ಎ. ಎಚ್. ಹುಂಡೇಕಾರ ಮತ್ತು ಎಮ್. ಎಚ್. ಬಿಳಲದವರ

ಪ್ರಾಥಮಿಕ ಶಾಲೆಗಳ ೫, ೬ ಮತ್ತು ೭ನೆಯ ಇಯತ್ತೆಗಳ ಹಿಂದಿ ಅಭ್ಯಾಸ ಪತ್ರಿಕೆಗನುಸಾರವಾಗಿ ಬರೆಯಲ್ಪಟ್ಟ ಪ್ರಪ್ರಥಮ ಹಿಂದಿ-ಕನ್ನಡ ವ್ಯಾಕರಣ ಪುಸ್ತಕ!

ಶಿಕ್ಷಕರಿಗೂ ಹಾಗು ವಿದ್ಯಾರ್ಥಿಗಳಿಗೂ ಸುಗಮವಾಗಿ ತಿಳಿಯುವಂತೆ ವ್ಯಾಕರಣದ ವಿವಿಧ ಅಂಗಗಳನ್ನು ಯೋಗ್ಯ ಉದಾಹರಣೆಗಳೊಂದಿಗೆ ವಿವೇಚಿಸಲಾಗಿದೆ. ಇದರ ಬಗ್ಗೆ ಕೆಳಗಿನ ಮಹನೀಯರು ಈ ರೀತಿ ಅಭಿಪ್ರಾಯಪಟ್ಟಿದ್ದಾರೆ:—

೧) ವಿದ್ಯಾರ್ಥಿಗಳಿಗೆ ಹಾಗು ಶಿಕ್ಷಕರಿಗೆ ಸಮರ್ಪಕವಾದ ರೀತಿಯಲ್ಲಿ ಮಾರ್ಗದರ್ಶನ ಮಾಡಬಲ್ಲದು.
ಶ್ರೀ ಆರ್. ಸಿ. ಭೂಸನೂರಮಠ, ಎಂ.ಎ., ರಾ. ಭಾ. ವಿಶಾರದ

೨) ಹಿಂದಿ ಕಲಿಯಲೆತ್ನಿಸುವ ಸಣ್ಣವರಿಗೂ ದೊಡ್ಡವರಿಗೂ ಈ ಪುಸ್ತಕವು ತುಂಬ ಉಪಯುಕ್ತವಾಗಿದೆ.
ಪ್ರೊ. ಸರೋಜಿನಿ ಮಹಿಷಿ, ಎಂ.ಎ., ಎಲ್‌ಎಲ್. ಬಿ., ರಾ. ಭಾ. ರತ್ನ ಜನತಾ ಕಾಲೇಜ, ಧಾರವಾಡ.

೩) ಪ್ರಾಥಮಿಕ ಶಾಲೆಗಳ ವಿದ್ಯಾರ್ಥಿ ಮತ್ತು ಶಿಕ್ಷಕರಿಗೆ ಉಪಯುಕ್ತವಾಗುವ ರೀತಿಯಲ್ಲಿ ಬರೆದಿದ್ದಾರೆ.
ಶ್ರೀ ಎ. ವ್ಹಿ. ಕೌದಿ, ಬಿ. ಎ., ಕಾರ್ಯಾಧ್ಯಕ್ಷ, ಕರ್ನಾಟಕ ಪ್ರಾಂತೀಯ ಹಿಂದಿ ಪ್ರಚಾರ ಸಭಾ, ಧಾರವಾಡ

೪) ಮಕ್ಕಳ ಮಾತೃಭಾಷೆಯ ವ್ಯಾಕರಣ ಭಾಗಕ್ಕೆ ಹೊಂದಿಕೆಯಾಗಿ ಇದನ್ನು ಸಾಗಿಸಿದ್ದು, ಈ ಹೊತ್ತಿಗೆಯ ವೈಶಿಷ್ಟ್ಯವಾಗಿದೆ. ಶ್ರೀ ಎಸ್. ಎಮ್. ಮೇಗೂರ, ಬಿ.ಎ, ಬಿ.ಟಿ, ಡಿ.ಪಿ.ಈಡಿ., ಡಿ.ಬಿ.ಈ., ಎ.ಓ., ಮು. ಸ್ಕೂಲ ಬೋರ್ಡ, ಧಾರವಾಡ.

೫) ಹಿಂದಿ ಕಲಿಯುವವರಿಗೆ ಕೈ ದೀವಿಗೆಯಾಗಿದೆ! ಶ್ರೀ ಎಸ್. ವಾಯ್. ಶೀಲವಂತ, ಬಿ.ಎ., ಎಂ.ಈಡಿ., ಡಿ.ಪಿ.ಈಡಿ.,ಡಿ.ಬಿ.ಈ., ರಾ. ಭಾ. ವಿಶಾರದ, ಎ.ಡಿ.ಇ.ಆಯ್., ಧಾರವಾಡ.

ಎರಡನೆಯ ಮುದ್ರಣದ ಪ್ರತಿಗಳು ಮಾರಾಟಕ್ಕೆ ಸಿದ್ಧವಾಗಿವೆ. ಕೂಡಲೇ ಬರೆಯಿರಿ. ಯೋಗ್ಯ ಕಮೀಶನ್ ಕೊಡಲಾಗುವದು ಇನ್ನು ಮುಂದೆ ಈ ಕೆಳಗಿನ ವಿಳಾಸಕ್ಕೆಯೇ ಪತ್ರವ್ಯವಹಾರ ಮಾಡಬೇಕು.

ಅಧಿಕೃತ ಮಾರಾಟಗಾರರು:— ಭಾರತ ಬುಕ್ ಡಿಪೋ, ಗಾಂಧಿಚೌಕ, ಧಾರವಾಡ

Regd. No. B. 53

ಭಾಗ ೧ ಕವಿತಾ ಸಂಕಲನ ೧೫ಂ **ನಾವು ನಮ್ಮವರು** ಭಾಗ ೨ ಕಥಾ ಸಂಕಲನ ೧

(ಪ್ರಾಥಮಿಕ ಶಿಕ್ಷಕ ಸಾಹಿತಿಗಳ ಫೋಟೊ ಪರಿಚಯ ಕಥೆ ಕವನಗಳು)

ಮಾನ್ಯ ಎ. ಸಿ. ದೇವೇಗೌಡರು ಶಿಕ್ಷಣಾಧಿಕಾರಿಗಳು [D. P. I.] ಮೈಸೂರು ರಾಜ್ಯ ಅವರ ಮುನ್ನುಡಿ.

ಮಾನ್ಯ ಸಿದ್ಧಯ್ಯ ಪುರಾಣಿಕ 'ಕಾವ್ಯಾನಂದ'ರು ಡಿ. ಸೆಕ್ರೆಟರಿ ಶಿಕ್ಷಣ ವಿಭಾಗ ಇವರ ಹಿನ್ನುಡಿಗಳು.

- ಕೇವಲ ೩ ರೂಪಾಯಿ [ಅಂಚೆಸೇರಿ] ವಾರ್ಷಿಕ ಚಂದಾ ಹಣದಲ್ಲಿ ೩ನೆಯ ಮಾಲೆಯ ೧-೩ನೆಯ ಕುಸುಮ ಪಡೆಯಿರಿ.
- ಪ್ರಾಥಮಿಕ ಶಿಕ್ಷಕರ ಕಥೆ, ಕಾದಂಬರಿ, ಕವನ, ನಾಟಕಾದಿ ಕೃತಿಗಳು ೪೦೦ ಪುಟಗಳಲ್ಲಿ.
- ಅಗಸ್ಟ ದಿಂದ ಅಗಸ್ಟಕ್ಕೆ ಒಂದು ವರುಷ
- ಬಿಡಿ ಕುಸುಮ ಚಂದಾದಾರರಿಗೆ ೩ ಬೆಲೆಯಲ್ಲಿ [ಅಂಚೆ
- ವರ್ಷದ ಮಧ್ಯದಲ್ಲಿ ಚಂದಾದಾರರಾದರೂ ಆ ವರ್ಷದ ಎಲ್ಲ ಪುಸ್ತಕಗಳು ದೊರೆಯುವವು.
- ಇಂದೇ ಚಂದಾಹಣ ಕಳಿಸಿ ತಮ್ಮದೇ ಆದ ಶಿಕ್ಷಕರ ಬಳಗವು ಬೆಳೆವಂತೆ ನೆರವಾಗಿರಿ. ಈ ಅಲ್ಪ ಹಣ ತಮ್ಮ ಶಿಕ್ಷಕ ಮಿ ಏಳ್ಗೆಗೆ ಮೀಸಲು. ಗೆಳೆಯರನ್ನು, ವಾಚನಾಲಯಗಳನ್ನು ಚಂದಾದಾರರನ್ನು ಮಾಡಿ ನೆರವಾಗಿರಿ.

ವಿವರಗಳಿಗೆ: **ಭಾರತೀ ಸಾಹಿತ್ಯ ಭಂಡಾರ** ಅಂಚೆ: **ಯರನಾಳ** ಜಿಲ್ಲೆ: **ವಿಜಾಪುರ**

ಕಲ್ಯಾಣ ಕನ್ನಡ ಗುಡಿಯ ಕಾಣಿಕೆ

ಸುವರ್ಣ ಸಂಧಿ! ಸಚಿತ್ರ ಗ್ರಂಥ!! ಸುಂದರ ಮುದ್ರಣ!

"ಶಿಕ್ಷಣ-ಶಿಕ್ಷಕ-ದರ್ಶನ"

ಶಿಕ್ಷಕರಿಗೂ, ಶಿಕ್ಷಕ ವಿದ್ಯಾರ್ಥಿಗಳಿಗೂ, ಶಿಕ್ಷಣಾಭಿಮಾನಿಗಳಿಗೂ, ಉಪಯುಕ್ತವಾಗುವಂಥ, ತನು-ಮ ತಣಿಸುವಂಥ, ಶಿಕ್ಷಣ ತಜ್ಞರಿಂದ ಪರಿಶೀಲಿಸಲ್ಪಟ್ಟಂಥ, ಭಾರತದಲ್ಲಿಯ ಮಾನ್ಯ ಮಂತ್ರಿವರ್ಯರಿಂದ, ರಾಜ್ಯಪಾಲರಿಂ ಶಿಕ್ಷಣಾಧಿಕಾರಿಗಳಿಂದ, ಪ್ರಿನ್ಸಿಪಾಲರಿಂದ, ಸಾಹಿತಿಗಳಿಂದ ಪ್ರಶಂಸೆ ಪಡೆದ ಅಭಿಪ್ರಾಯಗಳುಳ್ಳಂಥ, ಕರ್ನಾಟ ವಿಶ್ವವಿದ್ಯಾಲಯದ ಉಪ ಕುಲಪತಿಗಳಾದ ರ್ಯಾಂಗ್ಲರ್ ಶ್ರೀ ಡಿ. ಸಿ. ಪಾವಟೆಯವರು ಮುನ್ನುಡಿ ಬರೆದಂ ಅಮೋಘ ಗ್ರಂಥ.

ಶ್ರೀ ನಿಂಬಾಳ ಶಿಕ್ಷಕ ದಂಪತಿಗಳಿಂದ ಸಂಗ್ರಹಿಸಲ್ಪಟ್ಟಿದೆ. ಅಖಿಲ ಕರ್ನಾಟಕದ ಗಣ್ಯ ಶಿಕ್ಷಕ-ಶಿಕ್ಷಕಿಯ ಬಣ್ಣ ಬಣ್ಣಗಳಲ್ಲಿ ೪೧ ಫೋಟೊ ಬ್ಲಾಕ್, ಲೇಖನ, ಪರಿಚಯಗಳುಳ್ಳಂಥ ೪೭೫ ಪುಟಗಳ ಅಮರ ಸಾಹಿತ್ಯ ಗ್ರಂ ಕನ್ನಡದಲ್ಲಿ ಒಂದು ಉತ್ತಮ ಮಾದರಿಯ ಶೈಕ್ಷಣಿಕ ಉದ್ಗ್ರಂಥ.

ದಿ. ೧೫ ಅಗಸ್ಟ ಸ್ವಾತಂತ್ರ್ಯ ದಿನದಂದು ಮಾನ್ಯ ಶ್ರೀ ಎ. ಎಚ್. ದಳವಾಯಿ, ಎ. ಓ. ಸಾಹೇಬರ ಅಧ್ಯ ಯಲ್ಲಿ ಪ್ರೊ. ಬಿ. ಟಿ. ಸಾಸನೂರ ಅವರ ಅಮೃತಹಸ್ತದಿಂದ ಈ ಗ್ರಂಥ ಪ್ರಕಾಶನಗೊಂಡಿದೆ

ವಿವರಗಳಿಗೆ ಇಂದೇ ಈಗಲೇ ಬರೆಯಿರಿ.

ಸಾದಾ ಪ್ರತಿ ೩ ರೂ.] ವ್ಯಾಪಾರಸ್ಥರಿಗೆ ಧಾರಾಳವಾದ ಕಮೀಷನ್. [ಸುಂದರ ಪ್ರತಿ ೪ ರೂ

ವಿಳಾಸ :- ಶ್ರೀ ನಿಂಬಾಳ ಕಲ್ಯಾಣಪ್ಪ, ಪೋಸ್ಟ:— ತಾಂಬಿ, ಜಿಲ್ಲಾ:— ವಿಜಾಪುರ.

Printed by Shri S. F. Kattimani, at Manohar Power Printing Press, Hubli.
Edited & Published by Sjts. G. M. Joshi, B. M. Shintri, S. R. Tatti & Smt. P. A. Bhaska at the Kannada Jeevan Shikshan Office, Govt. Training College for Men, Dharwa



ಜೀವನ ಶಿಕ್ಷಣ

ಪ್ರಧಾನ ಸಂಪಾದಕರು : ಶ್ರೀ ಜಿ. ಎಂ. ಜೋಶಿ

ರಾಟೆಯ ಮೇಲೆ ನೂಲು ತೆಗೆಯುವದು ಗಾಂಧೀಜಿಯವರ ದೈನಂದಿನ ಕಾರ್ಯಕ್ರಮವಾಗಿತ್ತು. ಯಾವುದೇ ಪ್ರಸಂಗದಲ್ಲಿಯೂ ನೂಲುವ ತಮ್ಮ ಕಾರ್ಯಕ್ರಮವನ್ನು ಬಿಡುತ್ತಿರಲಿಲ್ಲ. ರಾಟೆಯು ಜೀವನದ ಆರ್ಥಿಕ ಪುನರುಜ್ಜೀವನದ ದ್ಯೋತಕವಾಗಿತ್ತು.

ಸೇವಾಗ್ರಾಮದಲ್ಲಿ ಗಾಂಧೀಜಿಯವರ ಕೋಣೆ.

ಜೀವನ ಶಿಕ್ಷಣ

— ಸಂಪಾದಕ ಮಂಡಲ —

ಸಂಚಾಲಕರು : ಶ್ರೀ ಎಮ್. ಜಿ. ಹಂದ್ರಾಳ, ಬಿ.ಎ. (ಆನರ್ಸ), ಎಮ್.ಈಡಿ.,ಡಿ.ಬಿ.ಈಡಿ.,
ಎಜ್ಯುಕೇಶನಲ್ ಇನಸ್ಪೆಕ್ಟರ, ಧಾರವಾಡ.

ಪ್ರಧಾನ ಸಂಪಾದಕರು : ಶ್ರೀ ಜಿ. ಎಮ್. ಜೋಶಿ,
ಪ್ರಿನ್ಸಿಪಾಲ, ಗಂಡು ಮಕ್ಕಳ ಸರಕಾರಿ ಟ್ರೇನಿಂಗ ಕಾಲೇಜ, ಧಾರವಾಡ.

—: ಸದಸ್ಯರು :—

ಶ್ರೀಮತಿ ಪಿ. ಎ. ಭಾಸ್ಕರ, ಲೇಡಿ ಸುಪರಿಂಟಿಂಡೆಂಟ, ಹೆಣ್ಣು ಮಕ್ಕಳ ಸರಕಾರ ಟ್ರೇನಿಂಗ ಕಾಲೇಜ, ಧಾರವಾಡ,

ಶ್ರೀ ಬಿ. ಎಂ. ಶಿಂತ್ರಿ, ಬಿ.ಎ.,ಬಿ.ಟಿ., ನಿವೃತ್ತ ಅಸಿಸ್ಟಂಟ ಎಜ್ಯುಕೇಶನಲ್ ಇನಸ್ಪೆಕ್ಟರ ದಕ್ಷಿಣ ಭಾಗ,
(ಮುಂಬಯಿ ಕರ್ನಾಟಕ) ಹಾಗು ಗೌ. ಕಾರ್ಯದರ್ಶಿ ಮತ್ತು ಲಾಯಬ್ರೇರಿಯನ್.
ಸಾಹಿತ್ಯ ಸಮಿತಿ ಲಿಂಗಾಯತ ವಿದ್ಯಾಭಿವೃದ್ಧಿ ಸಂಸ್ಥೆ, ಧಾರವಾಡ

ಶ್ರೀ ಎಸ್. ಆರ್. ತಟ್ಟಿ, ರಿಟಾಯರ್ಡ ಪ್ರಿನ್ಸಿಪಾಲ, ಪ್ರಾಥಮಿಕ ಶಿಕ್ಷಕರ ಟ್ರೇನಿಂಗ ಕಾಲೇಜ, ನವಲಗುಂದ.

ಸಂಪುಟ ೯೭ ಅಕ್ಟೋಬರ ೧೯೭೦ ಸಂಚಿಕೆ ೫

— ಪರಿವಿಡಿ —

೧	ಸಂಪಾದಕೀಯ	....	....	೨
೨	ನಮ್ಮ ತೋಟ : ಸಾಲೆಯು	....	ಶ್ರೀ ಈಶ್ವರ ಹಿರೇನಂದಿಹಳ್ಳಿ	೩
೩	ಮಹಾತ್ಮಾ ಗಾಂಧೀಯವರು	....	ಶ್ರೀ ಬಿ. ಎಸ್. ಹೊರ್ತಿ	೪
೪	ಜೀವನ ಶಿಕ್ಷಣ ಶಾಲೆಗಳ ಮುಖಾಂತರ ಗ್ರಾಮೋದ್ಧಾರ	....	ಶ್ರೀ ಶ್ಯಾ. ಶ್ರೀ. ಹುಕ್ಕೇರಿ	೫
೫	ಜೀವನ ಶಿಕ್ಷಣವೂ ಪ್ರಯೋಜನ ಪ್ರಮಾಣವಾದವೂ	....	ಶ್ರೀ 'ಬಮಶಿಂ'	೯
೬	ಮಾನವನ ಸಹಜ ಸ್ವಭಾವಿಕ ಪ್ರವೃತ್ತಿಗಳಿಗೂ ಅದರ ಆಚರಣೆಗೂ ಇರುವ ಸಂಬಂಧ	....	ಶ್ರೀ ತಟ್ಟಿ ಶ್ಯಾಮರಾಯರು	೧೩
೭	ಜೀವನ ಶಿಕ್ಷಣ ಶಾಲೆಗಳಲ್ಲಿ ಶಿಕ್ಷಣ ಮಾಪನ	....	ಶ್ರೀ ಡಿ. ಎನ್. ನಾಡಕರ್ಣಿ	೧೭
೮	ಗಾಂಧೀಜಿ ಜೀವನದ ಕೆಲವು ಘಟನೆಗಳು	....	ಶ್ರೀ ಎಸ್. ಎಸ್. ಭೂಸರಡ್ಡಿ	೨೦
೯	ಶಿಶು ಶಿಕ್ಷಣ	....	ಕು. ವನಿತಾ ದ. ಪಾಟೀಲ	೨೧
೧೦	ರಾಷ್ಟ್ರಪಿತ ಗಾಂಧೀಜಿ	....	ಶ್ರೀ ಕೆ. ಆರ್. ಆಶ್ರಿತ	೨೪
೧೧	ಗ್ರಾಮೀಣ ಜೀವನದಲ್ಲಿ ಶಾಲಾ ಗುರು	....	ಶ್ರೀ ಮ. ಗು. ಹಿವಾರಿ	೨೭

ಮುಖಪುಟದ ಭಾವಚಿತ್ರ ಸಂಯುಕ್ತ ಕರ್ನಾಟಕ ದಿನಪತ್ರಿಕೆ ಕೃಪೆಯಿಂದ

ಸಂಪಾದಕೀಯ

ರಾಷ್ಟ್ರಪಿತನ ಜಯಂತಿ :

ಅಕ್ಟೋಬರ ೨ನೆಯ ದಿನವು ಮಹಾತ್ಮರ ಜನ್ಮ ದಿನವು. ಅಂದಿನಿಂದ ಒಂದು ಸಪ್ತಾಹದವರೆಗೆ ಮಹಾತ್ಮರ ವಿಧಾಯಕ ಕಾರ್ಯಕ್ರಮದ ಭಾಗವಾಗಿ ಅನೇಕ ಚಟುವಟಿಕೆಗಳು ಕೈಕೊಳ್ಳಲ್ಪಡುವವು. ಭಾರತೀಯರಿಗೆ ಮಹಾತ್ಮರ ಜಯಂತಿಯ ಆಚರಣೆಯೆಂದರೆ ಅದೊಂದು ರಾಷ್ಟ್ರೀಯ ವಿಧಾಯಕ ಉತ್ಸವವಾಗಿದೆ. ಈ ಸಪ್ತಾಹದಲ್ಲಿ ಸ್ವಚ್ಛತಾ ಕಾರ್ಯಕ್ರಮ, ಹರಿಜನೋದ್ಧಾರ, ಪಾನಪ್ರತಿಬಂಧ, ಖಾದಿಯ ಪ್ರಸಾರ, ಗ್ರಾಮೋದ್ಧಾರ, ಮಹಾತ್ಮರ ತತ್ವಗಳ ಪ್ರಚಾರ ಹಾಗೂ ಆಚರಣೆ ಇವೇ ಮೊದಲಾದ ಚಟುವಟಿಕೆಗಳು ಹಳ್ಳಿಗಳಲ್ಲಿಯೂ ನಗರಗಳಲ್ಲಿಯೂ ನಡೆಯುವವು. ಈ ಸಪ್ತಾಹದಲ್ಲಿ ಹಳ್ಳಿಗರೂ, ಪಟ್ಟಣಿಗರೂ, ಶಾಲೆ ಕಾಲೇಜುಗಳ ಶಿಕ್ಷಕರೂ, ವಿದ್ಯಾರ್ಥಿಗಳೂ, ಬೇರೆ ಬೇರೆ ಖಾತೆಗಳ ಅಧಿಕಾರಿಗಳೂ ಸ್ವಚ್ಛತೆಯ ಮಹತ್ವ, ಅಸ್ಪೃಶ್ಯತೆಯ ನಿವಾರಣೆ, ಪಾನಪ್ರತಿಬಂಧ, ಸಾಕ್ಷರತೆಯ ಪ್ರಸಾರ, ಪಂಚವಾರ್ಷಿಕ ಯೋಜನೆ ಮುಂತಾದ ರಚನಾತ್ಮಕ ಕಾರ್ಯಗಳನ್ನು ಈ ಸಲವೂ ಮಾಡಿರಲಿಕ್ಕೆ ಸಾಕು.

ಮಾನವತೆಗೆ ಮುನ್ನೋಟದ ದೃಷ್ಟಿಯನ್ನು ಕರುಣಿಸುವ ಇಂಥ ಮಹಾತ್ಮರ ದಿವ್ಯನಾಮಸ್ಮರಣೆಯನ್ನು ವರ್ಷದಲ್ಲಿ ಒಂದು ಸಲ ಮಾಡಿದರೆ ನಮ್ಮ ಜೀವನವು ಉದ್ದೀಪನಗೊಳ್ಳುವದಿಲ್ಲ. ಅವರ ತತ್ವ ಹಾಗೂ ಆದರ್ಶಗಳಂತೆ ನಾವು ಕಿಂಚಿತ್ತಾದರೂ ಬದುಕಿದರೆ ನಮ್ಮ ಜೀವನವು ಸಾರ್ಥಕವಾಗುತ್ತದೆ. 'ಗಾಂಧಿ' ಎಂದರೆ ಅದು ಕೇವಲ ಒಂದು ಹೆಸರಲ್ಲ; ಅದು ಒಂದು ಜೀವನದ ರೀತಿ. ಗಾಂಧೀ ಭಾವನೆಯು ಬೆಳೆದುಕೊಂಡರೆ ಒಬ್ಬರು ಇನ್ನೊಬ್ಬರನ್ನು ನಿಗ್ರಹಿಸುವ, ಒಂದು ದೇಶವು, ಇನ್ನೊಂದು ದೇಶವನ್ನು ಅಪಹರಿಸುವ ಸರಿಪಾಠ ನಿಂತು ಹೋಗುವದು. ಅದು ದ್ವೇಷಕ್ಕೆ ಬದಲಾಗಿ ಪ್ರೀತಿಯನ್ನೂ, ಕತ್ತಲೆಗೆ ಬದಲಾಗಿ ಬೆಳಕನ್ನೂ, ಮೃತ್ಯುವಿಗೆ ಬದಲಾಗಿ ಜೀವವನ್ನೂ ನೀಡುತ್ತದೆ.

ಪ್ರತಿಯೊಂದು ವ್ಯಕ್ತಿ, ಪ್ರತಿಯೊಂದು ಗ್ರಾಮ ಒಂದಕ್ಕೊಂದು ಪೂರಕವಾಗಿ ಒಂದು ಘಟಕವಾಗಿ ಬೆಳೆದು ಅಭಿವೃದ್ಧಿಯನ್ನು ಹೊಂದಬೇಕೆಂದು ಗಾಂಧೀಜಿ ಹೇಳಿ ತೋರಿಸಿದರು. ಹಳ್ಳಿ ಬೆಳೆದರೆ, ಭಾರತ ಬೆಳೆಯುವ ದೆಂದು ಅವರು ದೃಢವಾಗಿ ನಂಬಿದ್ದರು. ಉದ್ದಿಮೆ ಗಳನ್ನು ಕಟ್ಟಿ ಅಲ್ಲಿಗೆ ಜನರನ್ನು ಒಯ್ಯುವದಕ್ಕಿಂತಲೂ, ಜನರು ಇದ್ದಲ್ಲಿಯೇ ಉದ್ದಿಮೆಗಳನ್ನು ಸ್ಥಾಪಿಸಿ ಅವರಿಗೆ ಕೆಲಸ ಕೊಡಬೇಕೆಂದು ಗಾಂಧೀಜಿ ಹೇಳುತ್ತಲೇ ಬಂದರು. ನಡೆಯೇ ನುಡಿಯಾಗಿ ಬದುಕಿದ ಗಾಂಧೀಜಿಯವರ ಆದರ್ಶ ಜೀವನದ ಕಿಂಚಿತ್ ಭಾಗವಾದರೂ ನಮ್ಮ ಆಚರಣೆಯಲ್ಲಿ ಬಂದರೆ, ಅವರ ಜಯಂತಿಯ ನಿಜವಾದ ಆಚರಣೆಯಾಗುವದರಲ್ಲಿ ಯಾವ ಸಂದೇಹವಿಲ್ಲ.

ವಿಶ್ವಶಾಂತಿ :

'ನಿಶ್ಯಸ್ತ್ರೀಕರಣವು ಸಹಕಾರಕ್ಕೆ ಸಹಾಯಕವಾದ ವಾತಾವರಣವನ್ನು ಕಲ್ಪಿಸುವುದಲ್ಲದೆ, ಯುದ್ಧದಿಂದ ಪ್ರಪಂಚವನ್ನು ರಕ್ಷಿಸುವ ದಿಶೆಯಲ್ಲಿ ಕೇವಲ ಇದೊಂದೇ ಮಾರ್ಗವಾಗಿದೆ' ಎಂದು ಪಂಡಿತ ಜವಾಹರಲಾಲ ನೆಹರು ಇವರು ಯುಕ್ತರಾಷ್ಟ್ರ ಸಾಮಾನ್ಯ ಸಭೆಯನ್ನು ಉದ್ದೇಶಿಸಿ ದಿ. ೩-೧೦-೧೯೬೦ನೆಯ ದಿನ ಅವರು ಹೇಳಿದರು. ಅವರು ಮತ್ತೂ ಹೇಳಿದ್ದೆಂದರೆ ಪರಸ್ಪರ ಅವಿಶ್ವಾಸದ ಮೂಲಕ ಜಗತ್ತಿನಲ್ಲಿ ಈಗ ಉಂಟಾಗಿರುವ ಶೀತಲ ಯುದ್ಧದ ವಾತಾವರಣವು ನಿವಾರಣೆಯಾಗಿ, ಜನರು ನಿರ್ಭೀತಿಯಿಂದ ಬದುಕುವಂತಾಗಬೇಕು. ಹಿಂದೆ ಲೀಗ ಆಫ್ ನೇಶನ್ಸ ಮಾಡಿದ ತಪ್ಪುಗಳನ್ನೇ ಇಂದಿನ ಯುಕ್ತರಾಷ್ಟ್ರ ಸಂಘವು ಮಾಡಕೂಡದು. ನೆಹರುರವರ ಭಾಷಣವು ವಿಶಾಲ ತಳಹದಿಯ ಮೇಲೆ ಆಧಾರಿತವಾಗಿತ್ತೆನ್ನುವ ಕಾರಣದಿಂದ ಎಲ್ಲ ವರ್ಗಗಳ ಪ್ರಶಂಸೆಗೆ ಪಾತ್ರವಾಯಿತು. ಕಾಂಗೋದ ದುರ್ಘಟನೆಯನ್ನಾಗಲಿ, ಅಲ್ಜೀರಿಯಾದ ಸ್ವಾತಂತ್ರ್ಯವನ್ನಾಗಲಿ, ದಕ್ಷಿಣ ಆಫ್ರಿಕೆಯ ವರ್ಣಭೇದ ಘೋರಣೆಯನ್ನಾಗಲಿ ನೆಹರು ರವರು ಯಾವ ವಿಷಯವನ್ನೆ ಕುರಿತು ಮಾತನಾಡಿದರೂ, ಕೇಳಿದವರ ಮನಸ್ಸಿನಲ್ಲಿ ಅನುಕೂಲ ಪ್ರತಿಕ್ರಿಯೆ ಉಂಟಾಗುವಂತೆ ಇದ್ದಿತು.

ಜಗತ್ತು ಈಗ ಇರುವಂಥ ಇರುಕಿನ ಸ್ಥಿತಿಯಲ್ಲಿ ಹಿಂದೆ ಯಾವ ಕಾಲದಲ್ಲಿಯೂ ಇರಲಿಲ್ಲ. ಹಿಂದೆ ರಾಜ್ಯ

ರಾಜ್ಯಗಳಲ್ಲಿ ವ್ಯಾಜ್ಯ ಉಂಟಾದರೆ, ಸ್ಥಳೀಯ ಘರ್ಷಣೆ ಉಂಟಾಗುತ್ತಿದ್ದವು. ಈಗ ಘರ್ಷಣೆ ಉಂಟಾದರೆ ವಿನಾಶವು ಪ್ರಾದೇಶಿಕವಾಗದೆ ಸಾರ್ವತ್ರಿಕವಾಗುತ್ತದೆ. ಈಗ ಜಗತ್ತು ಎದುರಿಸುವ ದುರ್ಧರ ಪ್ರಸಂಗವು ನಿವಾರಣೆ ಗೊಳ್ಳುವದಕ್ಕೆ ಒಂದೇ ದಾರಿ. ದೊಡ್ಡ ರಾಷ್ಟ್ರಗಳು ನಿಶ್ಶಸ್ತ್ರೀಕರಣ ಸಾಧಿಸಿ ಪಂಚಶೀಲ ವ್ರತವನ್ನು ಪಾಲಿಸ ಬೇಕು. ಹಾಗೆ ಸಹಬಾಳ್ವೆ ಮಾಡಿದರೆ ಮಾತ್ರ ಜಗತ್ತನ್ನು ಸರ್ವನಾಶದಿಂದ ರಕ್ಷಿಸಬಹುದು.

೧೯೬೧ರ ಪಿ. ಟಿ. ಸಿ. ಪರೀಕ್ಷೆ

ಧಾರವಾಡ, ೧೯೬೧ರ ಪಿ. ಟಿ. ಸಿ. ಪರೀಕ್ಷೆಗೆ ಪುನಃ ಕುಳಿತುಕೊಳ್ಳಲು ಪರವಾನಗಿಯನ್ನು ಬಯಸುವವರು ಎಜ್ಯುಕೇಶನಲ್ ಇನಸ್ಪೆಕ್ಟರರ ಕಡೆಗೆ ತಾವು ಕಲಿತ ಕಾಲೇಜದ ಪ್ರಿನ್ಸಿಪಾಲರ ಮುಖಾಂತರ ದಿನಾಂಕ ೩೦-೧೦-೧೯೬೦ರ ಒಳಗಾಗಿ ಅರ್ಜಿ ಮಾಡಿಕೊಳ್ಳ ತಕ್ಕದ್ದು. ಮುಂಬೈ ಹೊಸ ಅಭ್ಯಾಸ ಪತ್ರಿಕೆ ಪ್ರಕಾರ ಮೂರು ಚಾನ್ಸುಗಳನ್ನು ಹಳೆ ಅಭ್ಯಾಸ ಪತ್ರಿಕೆ ಪ್ರಕಾರ ಐದು ಚಾನ್ಸುಗಳನ್ನು ಮುಗಿಸದೆ ಇದ್ದವರು ಮತ್ತು ಮುಂಬೈ ಎಸ್. ಎಸ್. ಸಿ. ಅಭ್ಯಾಸ ಪತ್ರಿಕೆ ಪ್ರಕಾರ ನಪಾಸ ಆದವರು ಅರ್ಜಿ ಮಾಡಿಕೊಳ್ಳತಕ್ಕದ್ದು.

ಅರ್ಜಿಯಲ್ಲಿ (೧) ಪೂರ್ಣ ಹೆಸರು (೨) ಕಳೆದ ಸಲ ಕುಳಿತ ವರ್ಷ, ಕೇಂದ್ರ, ಸೀಟ ನಂ. (೩) ಮೊದಲ ಸಲ ಕುಳಿತ ಕೇಂದ್ರ, ವರ್ಷ, ಸೀಟ ನಂ. (೪) ಕಳೆದ ಪರೀಕ್ಷೆಯಲ್ಲಿ ನಪಾಸಾದ ಗುಂಪು. (೫) ಪೂರ್ಣ ವಿಳಾಸ ಇವೆಲ್ಲವುಗಳನ್ನು ತಪ್ಪದೆ ಕಾಣಿಸಬೇಕು. ಪರೀಕ್ಷೆ ಪಾಸ್ಮಾ, ಫೀ ತುಂಬುವ ಅವಧಿಯನ್ನು ನಂತರ ತಿಳಿಸಲಾಗುವದೆಂದು ಕ. ಗಂ. ಸ. ಟ್ರೇ. ಕಾ. ಧಾರವಾಡದ ಪ್ರಿನ್ಸಿಪಾಲರು ತಿಳಿಸುತ್ತಾರೆ.

ನಮ್ಮ ತೋಟ: ಸಾಲೆಯು.

ನಮ್ಮ ತೋಟ: ಸಾಲೆಯು
ಗುರುಗಳದರ ಮಾಲೆಯು.
ನಾವು ಇಲ್ಲಿ ಸಸಿಗಳು
ಅರಳುತಿರುವ ಹೂಗಳು. ॥ ೧ ॥

ನಮ್ಮ ಮನದ ಮಡಿಯಲಿ
ಶಬ್ದ ಬೀಜ ನೆಡುವರು.
ಜ್ಞಾನ ರಸವ ಸುರಿವರು
ಸಿದ್ಧ ಫಲವ ಪಡೆವರು. ॥ ೨ ॥

ಇಂದಿನಾಳ್ವ ದೊರೆಗಳು
ಇದ್ದರಿಲ್ಲಿ ತರುಗಳು.
ಮುಂದೆ ಬರುವ ಹಿರಿಯರು
ಸಧ್ಯ ಬೆಳೆಯುತಿರುವರು. ॥ ೩ ॥

ನೂರು ಬಗೆಯ ಸಸಿಗಳು
ನಮ್ಮ ನಾಡ ಸಿರಿಗಳು.
ಹಿರಿದು ಕಿರಿದು ಸರಿಸಮ
ಜಗದ ತೋಟ ಘಮಘಮ. ॥ ೪ ॥

ನಮ್ಮ ತೋಟ: ಸಾಲೆಯು
ಗುರುಗಳದರ ಮಾಲೆಯು.
ನಾವು ಬಿರಿವ ಹೂಗಳು
ಜಗಕೆ ಶೋಭೆ ತರುವೆವು. ॥ ೫ ॥

— ಈಶ್ವರ ಹಿರೇಸಂದಿಹಳ್ಳಿ,
T. C. M. ಧಾರವಾಡ.

—: ಸಿರಿಗನ್ನಡಂ ಗೆಲ್ಗೆ :—

—. ಮಹಾತ್ಮಾ ಗಾಂಧೀಯವರು :—

ಲೇಖಕರು :— ಶ್ರೀ ಬಿ. ಎಸ್. ಹೊರ್ತಿ, ಉಪಗುರುಗಳು ಜೀವನ ಶಿಕ್ಷಣ ಸಾಲೆ, ಹಿರೇಲೋಣಿ

(ಧಾಟಿ :— " ನಿಂತಿಹನು ನೋಡೆ ಈತ | ರುಕುಮಾಯಿದೇವಿ ಕಾಂತ "॥ ಎಂಬಂತೆ)

ನಿಂತಿಹನು ನೋಡೆ ಈತ |
ಮೋಹನ ದಾಸ ತಾತ ॥
ಕಸ್ತೂರಿ ಬಾಯಿ ಕಾಂತ |
ಜಗದಲ್ಲಿ ಬೆಳಗಿ ನಿಂತ ॥ ಪಲ್ಲ ॥

ಮೈಯಲ್ಲಿ ಖಾದಿ ಉಡುಪು |
ತಲೆಗಿಲ್ಲ ಯಾವ ತೊಡಪು ॥
ಕೈಯಲ್ಲಿ ಕೋಲು ಹಿಡಿದು |
ಬಗಲಲ್ಲಿ ಜೀಲ ತೊಡೆದು ॥ ೧ ॥

ಪುತ್ಲಳಿ ಬಾಯಿ ಕಂದ |
ಭಾರತದಿ ಹುಟ್ಟಿ ಬಂದ ॥
ಸತ್ಯದ ಮಹಿಮೆ ಕಂಡ |
ನೀತೀಯ ನೇಮ ನುಂಡ ॥ ೨ ॥

ಮೋಹನ ದಾಸ ಬಂದ |
ಫೋರ ಬಂದರದಿಂದ ॥
ನವಯುಗವನೊಂದು ತಂದ |
ಶ್ರೀ ಕರಮಚಂದ ನಂದ ॥ ೩ ॥

ದಕ್ಷಿಣದ ಆಫ್ರಿಕೆ ಸಾರಿ |
ದಲಿತರಿಗೆ ವಾರಿ ತೋರಿ ॥
" ಸತ್ಯದ-ಆಗ್ರಹ " ಸಾರಿ |
ಬುವಿಗೆಲ್ಲ ಬೆಳಕು ಬೀರಿ ॥ ೪ ॥

ಅಹಿಂಸಾ ಮಾರ್ಗ ದಿಂದ |
ಹೋರಾಡಿ ಜಯವ ತಂದ ॥
ಭಾರತಕೆ ಮರಳಿ ಬಂದ |
ಹೊಸ ಕೈದುವನ್ನು ತಂದ ॥ ೫ ॥

ಜೊಕ್ಕಾದ ಹಿಂದು ಗಳಲಿ |
ಮಿಕ್ಕಾದ ಜಾತಿ ಗಳಲಿ ॥
ಬಿಕ್ಕಟ್ಟು ಬೇಗ ಬಿಡಿಸಿ |
ಒಕ್ಕಟ್ಟು ಸಮತೆ ಬೆಳೆಸಿ ॥ ೬ ॥

" ಸತ್ಯದ-ಆಗ್ರಹ " ಬಳಸಿ |
ಆಂಗ್ಲೇಯರನ್ನು ಕಳಿಸಿ ॥
ಸ್ವಾತಂತ್ರ್ಯವನ್ನು ಗಳಿಸಿ |
ಜಗಕೆಲ್ಲ ದಿಗಿಲು ಗೊಳಿಸಿ ॥ ೭ ॥

ತಕಲಿಯ ನೂಲು ತೆಗೆದು |
ಬಡತನದ ಬವಣೆ ಕಳೆದು ॥
ನಕಲಿಯ ಶಿಕ್ಷಣ ಕಳೆದು |
' ಜೀವನ ಶಿಕ್ಷಣ ' ತಂದು ॥ ೮ ॥

ರಾಟೆಯ ಮರ್ಮ ತಿಳಿಸಿ |
ಖಾದಿಯ ಮಮತೆ ಬೆಳೆಸಿ ॥
ಮೇಟಿಯ ಧರ್ಮ ತಿಳಿಸಿ |
ಕಮತದ ಮಮತೆ ಬೆಳೆಸಿ ॥ ೯ ॥

ಜಾತೀಯ ಭೂತ ನೋಡಿ |
ನೀತೀಯ ಪಾಠ ನೀಡಿ ॥
ಜನರಿಂದ ಅದನು ಡೂಡಿ |
ಶಾಂತತೆಯನುಂಟು ಮಾಡಿ ॥ ೧೦ ॥

ದಿಲ್ಲೀಯ ನಗರ ದಲ್ಲಿ |
ಪ್ರಾರ್ಥನೆಯ ಕೂಟದಲ್ಲಿ ॥
ಗೋಡ್ಸೇನ ಗುಂಡಿನಿಂದ |
ಪ್ರಾಣವನು ತೊರೆದ ಧೀರ ॥ ೧೧ ॥

ಜೀವನ ಶಿಕ್ಷಣ ಶಾಲೆಗಳ ಮುಖಾಂತರ ಗ್ರಾಮೋದ್ಧಾರ

[ಲೇಖಕರು : **ಶ್ಯಾ. ಶ್ರೀ. ಹುಕ್ಕೇರಿ,** ಪ್ರಿನ್ಸಿಪಾಲ, ಜಿ. ಬಿ. ಟಿ. ಸಿ., ಧಾರವಾಡ]

(ಈ ವಿಷಯವನ್ನು ಕುರಿತು ೭-೯-೧೯೬೦ರಂದು ಸ್ಥಳೀಯ ಜೀವನ ಶಿಕ್ಷಣ ತರಬೇತಿ ಸಂಸ್ಥೆಗಳ ವಿದ್ಯಾರ್ಥಿಗಳಿಂದ ಒಂದು ಚರ್ಚೆಯನ್ನು ಪದವೀಧರ ಜೀವನ ಶಿಕ್ಷಣ ಕೇಂದ್ರದ ಹಿಂದಿನ ವಿದ್ಯಾರ್ಥಿಗಳ ಸಂಘದವರು ಏರ್ಪಡಿಸಿದ್ದರು. ಆ ಚರ್ಚೆಯಲ್ಲಿ ಕೇಳಿದ ವಿಚಾರಗಳಿಂದ ಪ್ರಚೋದನೆಯುಂಟಾಗಿ ಈ ಲೇಖನವು ಬರೆಯಲ್ಪಟ್ಟಿದೆ. ಆದರೆ ಇಲ್ಲಿ ವ್ಯಕ್ತ ಪಡಿಸಿದ ಅಭಿಪ್ರಾಯಗಳಿಗೆ ಲೇಖಕರೇ ಹೊಣೆಗಾರರು.)

ದಿನ ದಿನಕ್ಕೆ ಬೆಳೆಯುತ್ತಿರುವ ಜೀವನ ಶಿಕ್ಷಣ ಶಾಲೆಗಳಲ್ಲಿ ದುಡಿಯುವ ಎಷ್ಟೋ ಶಿಕ್ಷಕರಿಗೆ ಜೀವನ ಶಿಕ್ಷಣ ಪದ್ಧತಿಯನ್ನು ರೂಪಿಸುವಾಗ ಗಾಂಧಿಜಿಯವರು ಗ್ರಾಮೋದ್ಧಾರವನ್ನು ತಮ್ಮ ಮುಖ್ಯೋದ್ದೇಶವೆಂದು ಗಣಿಸಿದ್ದರು ಎಂಬ ವಿಷಯ ಸಾಕಷ್ಟು ಸ್ಪಷ್ಟವಾದಂತಿಲ್ಲ. ಡಾ. ಝಾಕಿರ ಹುಸೇನ ಕಮಿಟಿಯವರ ವರದಿ ಮತ್ತು ಅಭ್ಯಾಸ ಪತ್ರಿಕೆಗಳನ್ನೊಳಗೊಂಡ ಹೊತ್ತಿಗೆಗೆ ಪೊಪಲ ನೆಯ ಸಲ ಮುನ್ನುಡಿಯನ್ನು ಬರೆಯುವಾಗ ಕಮಿಟಿ ಯವರು ಮೂಲಶಿಕ್ಷಣವೆಂದು ಕರೆದುದಕ್ಕೆ " ಹಳ್ಳಿಯ ಕೈಗಾರಿಕೆಗಳ ಮುಖಾಂತರ ಕೊಡುವ ಗ್ರಾಮೀಣ ರಾಷ್ಟ್ರೀಯ ಶಿಕ್ಷಣ " ಎಂದು ಕರೆಯುವದು ಹೆಚ್ಚು ಸರಿಯಾದುದು ಎಂಬ ಅಭಿಪ್ರಾಯವನ್ನು ಅವರು ವ್ಯಕ್ತ ಪಡಿಸಿದ್ದಾರೆ. ಮುಂದೆ ೧೯೪೮ ರ ಜಳುವಳಿಯಲ್ಲಿ ಸ್ವಾನಬದ್ಧತೆಯಿಂದ ಬಿಡುಗಡೆ ಹೊಂದಿದ ಕೂಡಲೆ ಅವರು " ಕೆಲವೇ ವರ್ಷಗಳಲ್ಲಿ ನಮ್ಮ ಹಳ್ಳಿಗಳಲ್ಲಿ ನಿಜವಾದ ಸಂಪತ್ತು ಉಂಟಾಗಿ ಹಳ್ಳಿಗಳು ನಿರ್ಮಲ, ನಿರೋಗ, ಶಾಂತಿಯುಕ್ತ ಮತ್ತು ಸುಖಿಯಾಗುವ ವೆಂಬುದು ನನ್ನ ಕನಸು. ಹೀಗಾಗದಿದ್ದರೆ ಹೊಸ ಶಿಕ್ಷಣದ ನಮ್ಮ ಕಾರ್ಯದಲ್ಲಿ ಏನೋ ಕೊರತೆಯಿದೆ ಎಂದು ನಾನು ಭಾವಿಸುವೆ " ಎನ್ನುತ್ತಾರೆ.

ಜೀವನ ಶಿಕ್ಷಣ ಶಾಲೆಗಳ ಮುಖಾಂತರ ಈ ಗ್ರಾಮೋದ್ಧಾರವನ್ನು ಹೇಗೆ ಸಾಧಿಸಬೇಕು ಎಂಬುದಕ್ಕೆ ಮುಖ್ಯತಃ " ಹಳ್ಳಿಯ ಕೈಗಾರಿಕೆಗಳಲ್ಲಿ ತರಬೇತು ನೀಡಿ ", " ಜ್ಞಾನಪ್ರಸಾರ ಮಾಡಿ ", " ಮನೋರಂಜನ ಕಾರ್ಯ ಕ್ರಮಗಳನ್ನು ಏರ್ಪಡಿಸಿ ". " ಸಹಾಯಿ ಕಾರ್ಯಕ್ರಮ ದ್ವಾರಾ ಆರೋಗ್ಯ ಮತ್ತು ನೈರ್ಮಲ್ಯಗಳನ್ನು ಬೆಳೆಸಿ ಕೊಂಡು " " ಸರಕಾರೀ ಪಂಚವಾರ್ಷಿಕ ಯೋಜನೆಗಳ ಗ್ರಾಮಾಭಿವೃದ್ಧಿ ಕಾರ್ಯಕ್ರಮಗಳಲ್ಲಿ ಭಾಗ ವಹಿಸಿ " ಎಂದು ಉತ್ತರ ಕೊಡಬಹುದು.

ಈ ವಿಷಯಗಳನ್ನೇ ಸ್ವಲ್ಪ ವಿಸ್ತೃತವಾಗಿ ತಿಳಿದು ಕೊಳ್ಳುವ.

ಹಳ್ಳಿಯ ಕೈಗಾರಿಕೆಗಳಲ್ಲಿ ತರಬೇತನ್ನು ಹೇಗೆ ನೀಡಬೇಕು? ಅದರಿಂದ ಗ್ರಾಮೋದ್ಧಾರ ಹೇಗಾಗುತ್ತದೆ? ಎಂಬ ಅಂಶವನ್ನು ಸ್ವಲ್ಪ ಆಲೋಚಿಸುವ. ಜೀವನ ಶಿಕ್ಷಣ ಶಾಲೆಗಳಲ್ಲಿ ಸದ್ಯಕ್ಕಂತೂ ನೂಲು-ನೇಯ್ಗೆ, ಕೈತೋಟ, ಒಕ್ಕಲುತನ, ರಟ್ಟಿನ ಕೆಲಸ,-ಬಡಿಗತನ ಈ ಗ್ರಾಮೋದ್ಯೋಗಗಳನ್ನು ಕಲಿಸುತ್ತಾರೆ. ವಿದ್ಯಾರ್ಥಿ ಗಳಲ್ಲಿ ಕೆಲವರು ತಮ್ಮ ಅಭ್ಯಾಸವನ್ನು ಮಾಧ್ಯಮಿಕ ಶಾಲೆಗಳಲ್ಲಿ ಮುಂದುವರಿಸುತ್ತಾರೆ. ಆದರೆ ಬಹು ಸಂಖ್ಯಾಕರು ತಮ್ಮ ಪ್ರಾಥಮಿಕ ಶಿಕ್ಷಣವನ್ನು ಮುಗಿಸಿ ಇಲ್ಲವೆ ಅರ್ಧಕ್ಕೆ ಬಿಟ್ಟು ಗ್ರಾಮೋದ್ಯೋಗಗಳಲ್ಲಿ ತೊಡಗುತ್ತಾರೆ. ಶಾಲೆಯಲ್ಲಿ ತಾವು ಕಲಿತ ಗ್ರಾಮೋ ದ್ಯೋಗವನ್ನೇ ಅವರು ಕೈಕೊಳ್ಳುವರೆಂಬ ನಿಯಮವಿಲ್ಲ. ಆದರೆ ಅವರು ಪಡೆದ ತರಬೇತು ವ್ಯರ್ಥ ಹೋಗಲಾರದು. ಶಾಲೆಯಲ್ಲಿ ನೂಲು-ನೇಯ್ಗೆಯನ್ನು ಕಲಿತು ಒಕ್ಕಲುತನ ಮಾಡ ಹೊರಟರೆ ಹೊಲದಲ್ಲಿ ಕೆಲಸವಿಲ್ಲದಾಗ ಅವರು ಮನೆಯಲ್ಲಿ ನೂಲಬಹುದು-ಅಂಬರ ಚರಖಾವನ್ನು ಉಪಯೋಗಿಸಬಹುದು. ಬಡಿಗತನವನ್ನು ಕಲಿತಿದ್ದರೆ ಆ ಕೆಲಸ ಮಾಡಿ ಸ್ವಲ್ಪ ಹಣ ಸಂಪಾದಿಸಬಹುದು. ವಿರಾಮದ ವೇಳೆಯಲ್ಲಿ ಸಾಧ್ಯವಿದ್ದಷ್ಟು ಉತ್ಪಾದಕ ಕಾರ್ಯ ಮಾಡಿ ತಮ್ಮ ಆರ್ಥಿಕ ಸ್ಥಿತಿಯನ್ನು ಸುಧಾರಿಸಿ ಕೊಳ್ಳಬೇಕೆಂಬುದು ನಿಸ್ಸಂದೇಹವಾಗಿ ಮೂಲೋದ್ಯೋಗ ಕಲಿಸುವವರ ಒಂದು ಉದ್ದೇಶವಿದೆ. " ಹಳ್ಳಿಯ ಕೈಗಾರಿಕೆಗಳಲ್ಲಿ ತರಬೇತು ಕೊಡುವಷ್ಟು ಯೋಗ್ಯತೆ ಶಿಕ್ಷಕರಿಗಿರುವದಿಲ್ಲ-ಅವರು ಸುಮ್ಮನೆ ಕಾಲಹರಣ ಮಾಡು ತ್ತಾರೆ. ಈ ಶಿಕ್ಷಕರಿಗಿಂತಲೂ ಊರೊಳಗಿನ ಕೆಲವು ಕಸಬುಗಾರರು ಹೆಚ್ಚು ಸಮರ್ಥರಿರುತ್ತಾರೆ " ಎಂಬು ದೊಂದು ಆಕ್ಷೇಪಣೆಯಿದೆ. ಇದಕ್ಕೆ ಉತ್ತರವೆಂದರೆ

ಶಿಕ್ಷಕರು ತಮ್ಮ ಅಸಮರ್ಥತೆಯನ್ನು ಸ್ವಪ್ರಯತ್ನದಿಂದ ಹೋಗಲಾಡಿಸಿಕೊಳ್ಳಬೇಕು. ಕರ್ತವ್ಯ ಬುದ್ಧಿಯಿಂದ ಕಲಿಸಬೇಕು. ಊರೊಳಗೆ ಕೆಲವು ಕಸಬುಗಾರರು ಹೆಚ್ಚು ಸಮರ್ಥರಿದ್ದರೆ ಅವರ ಸಹಕಾರವನ್ನು ಯೋಗ್ಯ ರೀತಿಯಿಂದ ಪಡೆಯಬೇಕು. ಆದರೆ ಈ ಕಸಬುಗಳಲ್ಲಿ ಸುಧಾರಿಸಿದ ಪದ್ಧತಿಗಳು ಶಾಲೆಗಳಿಂದ ಪ್ರಸಾರವಾಗಬೇಕು. ಶಾಲೆಗಳು ಇಂತಹ ಕೇಂದ್ರಗಳಾಗಬೇಕು. ಈ ವಿಷಯದಲ್ಲಿ ಸರಕಾರೀ ಸಹಾಯವನ್ನು ಪ್ರಯತ್ನಿಸಿ ಪಡೆಯಬಹುದು ಎಂದು ಸೂಚಿಸಿದರೆ ತಪ್ಪಾಗಲಾರದು. ಜೀವನ ಶಿಕ್ಷಣ ಶಾಲೆಗಳಲ್ಲಿ ಸ್ವಾಭಾವಿಕವಾಗಿ ದೊರೆಯುವ ಈ ಅವಕಾಶವನ್ನು ಈ ರೀತಿ ಗ್ರಾಮೋದ್ಧಾರಕ್ಕೆ ಉಪಯೋಗಿಸುವದು ಕರ್ತವ್ಯನಿಷ್ಠ ಶಿಕ್ಷಕರಿಗೆ ಸಾಧ್ಯವಿಲ್ಲವೇ? "ಈ ಯಂತ್ರಯುಗದಲ್ಲಿ ಹಳೆಯ ಪದ್ಧತಿಯ ಕೈಗಾರಿಕೆಗಳು ಅಡಗುತ್ತಿವೆ. ಅವುಗಳ ಉಪಯೋಗ ಕಾಲವಿರುದ್ಧವಾದುದು" ಎಂದರೆ ಇದಕ್ಕೆ ಉತ್ತರವಿಷ್ಟು: ಸದ್ಯಕ್ಕೆ ಹಳ್ಳಿಯ ನಿರುದ್ಯೋಗವನ್ನು ಕಳೆಯಲು ಸಾಧ್ಯವಿದ್ದ ಮಾರ್ಗದಿಂದ ನಾವು ಪ್ರಯತ್ನ ಮಾಡಬೇಕು. ಯಾವುದೇ ಚಿಕ್ಕ ಯಂತ್ರಗಳನ್ನು ಹಳ್ಳಿಯಲ್ಲಿ ಉಪಯೋಗಿಸುವದು ಸಾಧ್ಯವಾಗುವಂತಿದ್ದರೆ ಆ ಬಗೆಗೆ ಹಳ್ಳಿಯ ಸಮಾಜದಿಂದ ಪ್ರಯತ್ನವಾಗಬೇಕು. ಅದರಲ್ಲಿ ಶಾಲೆಯೂ ತನ್ನ ಯೋಗ್ಯ ಪಾತ್ರವನ್ನು ವಹಿಸಬಹುದು. ಜೀವನ ಶಿಕ್ಷಣ ಶಾಲೆಗಳ ದೃಷ್ಟಿ ಪ್ರಗತಿ ವಿರುದ್ಧವಾಗಿಲ್ಲ. ಇದನ್ನು ನಮ್ಮ ಶಿಕ್ಷಕರು ಚೆನ್ನಾಗಿ ಅರಿತುಕೊಳ್ಳಬೇಕು.

ಇನ್ನು ಜೀವನ ಶಿಕ್ಷಣ ಶಾಲೆಗಳು ಜ್ಞಾನಪ್ರಸಾರ ಮಾಡಿ ಹೇಗೆ ಗ್ರಾಮೋದ್ಧಾರ ಮಾಡಬಹುದು ಎಂಬುದನ್ನು ತಿಳಿದುಕೊಳ್ಳುವ. ನಮ್ಮ ದೇಶಕ್ಕೆ ಕಲಂಕ ಪ್ರಾಯವಾದ ನಿರಕ್ಷರತೆಯನ್ನು ತೊಡೆದು ಹಾಕಲು ನಮ್ಮ ಶಾಲೆಗಳು ಟೊಂಕ ಕಟ್ಟಬೇಕು. ಈಗಿನ ಸಮಾಜ ಶಿಕ್ಷಣ ವರ್ಗಗಳು ಸಾಮಾನ್ಯವಾಗಿ ತೋರಿಕೆಗೆ ಮಾತ್ರ ಇವೆ. ಯಾವ ಒಳ್ಳೆಯ ಕೆಲಸವನ್ನೂ ಅವು ಮಾಡುವದಿಲ್ಲ ಎಂಬುದು ಎಷ್ಟೋ ಮಟ್ಟಿಗೆ ನಿಜವಾದ ಸಂಗತಿಯೇ ಸರಿ. ಆದರೆ ಹೀಗೆಂದ ಮಾತ್ರಕ್ಕೆ ನಾವು ನಿರಾಶೆಯಿಂದ ಕೈಕಟ್ಟಿ ಕುಳಿತುಕೊಳ್ಳುವದು ಯೋಗ್ಯವೇ? ಸಮಾಜ ಶಿಕ್ಷಣ ವರ್ಗಗಳಿಂದ ಮುಖ್ಯವಾಗಿ ಜ್ಞಾನಪ್ರಸಾರ ನಡೆಯಬೇಕು. ಅಕ್ಷರ ಜ್ಞಾನವನ್ನು ಅನುಷಂಗಿಕವಾಗಿ ಆದರೆ ದೃಢನಿರ್ಧಾರದಿಂದ ಕೊಡಬೇಕು. ಸದ್ಯದ ನಮ್ಮ ರಾಜ್ಯದ ಸ್ಥಿತಿ, ದೇಶದ ಸ್ಥಿತಿ, ಜಗತ್ತಿನ ಸ್ಥಿತಿ, ಆರೋಗ್ಯ ಪಾಲನೆ ನಿಜವಾದ ಧರ್ಮ ಇತ್ಯಾದಿ ಜೀವನೋಪಯುಕ್ತ ವಿಷಯಗಳನ್ನು ಕುರಿತು ಶಿಕ್ಷಕರು ವೃತ್ತಪತ್ರವಾಚನ, ಚಿತ್ರದರ್ಶನ, ಪುಸ್ತಕವಾಚನ ಇವುಗಳನ್ನು ಮಾಡಿ ಆವಶ್ಯಕ ಮಾಹಿತಿಯನ್ನು ಮೌಖಿಕವಾಗಿ ಕೊಟ್ಟರೆ ಜನರು ಸಮಾಜ ಶಿಕ್ಷಣ ವರ್ಗವನ್ನು ಸೇರಲು ಆಕರ್ಷಣೆಯುಂಟಾಗಬಹುದು. ಇವುಗಳಲ್ಲಿ ಭಜನೆ-ಹಾಡು-ಆಟ-ನಾಟಕಗಳನ್ನು ಪ್ರಸಂಗಾನುಸಾರವಾಗಿ ಸೇರಿಸಬೇಕು. ಜನತೆಯ ಉತ್ಕರ್ಷಕ್ಕೆ ಸಂಬಂಧವಿಲ್ಲದ ಯಾವ ಜ್ಞಾನವೂ ಆಕರ್ಷಕವಾಗಲಾರದು. ಆ ಸಂಬಂಧ ಸ್ಥಾಪಿಸುವದೇ ಸಮಾಜ ಶಿಕ್ಷಕನ ಮುಖ್ಯ ಕರ್ತವ್ಯ. ಜನರಲ್ಲಿ ನಿಜವಾದ ಜ್ಞಾನಲಾಲಸೆಯನ್ನು ಹುಟ್ಟಿಸಿದರೆ ಅವರಿಗೆ ತಮ್ಮ ತರ್ಕವ್ಯದ ಅರಿವು ತಾನಾಗಿ ಆಗುತ್ತದೆ. ಜೀವನ ಶಿಕ್ಷಣ ಶಾಲೆಗಳು ಈ ದೃಷ್ಟಿಯಲ್ಲಿ ಪುರೋಗಾಮಿಯಾಗಬಲ್ಲವು. ಅಕ್ಷರಜ್ಞಾನ ಬೆಳೆದಂತೆ ಹಳ್ಳಿಯ ವಾಚನಾಭಿರುಚಿಯನ್ನು ಬೆಳೆಸುವದು ಸಾಧ್ಯವಿದೆ. ಕ್ರಮೇಣ ಇದರಿಂದ ಮೂಢ ನಂಬಿಕೆಗಳೂ ಅಳಿಯಬಹುದು.

ಈ ಜ್ಞಾನ ಪ್ರಸಾರಕ್ಕೆ ತನ್ಮೂಲಕ ಸಂಸ್ಕೃತಿ ಪ್ರಸಾರಕ್ಕೆ ನಾವು ಮನೋರಂಜನ ಕಾರ್ಯಕ್ರಮಗಳನ್ನು ಉಪಯೋಗಿಸಿಕೊಳ್ಳಬೇಕು. ಮೇಲಿಂದ ಮೇಲೆ ಮಕ್ಕಳ ಅಭ್ಯಾಸ ಮುಳುಗಿಸಿ ನಾಟಕ ಮಾಡಿಸುವದು ಈ ಕಾರ್ಯಕ್ರಮಗಳ ಉದ್ದೇಶವಲ್ಲ. ಯಾವ ಮನೋರಂಜನ ಕಾರ್ಯಕ್ರಮವನ್ನು ಏರ್ಪಡಿಸಬೇಕಾದರೂ ಅದರ ಉದ್ದೇಶವನ್ನು ಚೆನ್ನಾಗಿ ತಿಳಿದುಕೊಂಡಿರುವ ಒಂದು ವ್ಯಕ್ತಿಯಾದರೂ ಇರುವದು ಅತ್ಯಂತ ಆವಶ್ಯಕ. ಹಾಗಿಲ್ಲದಿದ್ದರೆ ಕಾರ್ಯಕ್ರಮಗಳು ಬರಿ ಕಾಲಹರಣ ಮಾಡಬಹುದು-ಒಮ್ಮೊಮ್ಮೆ ಕೆಟ್ಟ ಹಾಡು, ಪದ, ಆಟ, ನಾಟಕ, ಅಣಕ ಇವುಗಳಿಂದ ಜ್ಞಾನಪ್ರಸಾರ ಮಾಡುವ ಬದಲಾಗಿ ಅಜ್ಞಾನ ಪ್ರಸಾರ ಮಾಡಿ ತನ್ಮೂಲಕ ಸಮಾಜದ ಅವನತಿಗೆ ಕಾರಣವಾಗಬಹುದು. ಜನರಲ್ಲಿ ಒಡಕ ಹುಟ್ಟಿಸುವ, ವಿಲಾಸ ಭಾವನೆಯನ್ನು ಹುಟ್ಟಿಸುವ ಯಾವ ಕಾರ್ಯಕ್ರಮವಾದರೂ ತ್ಯಾಜವೇ ಸರಿ. ಆದುದರಿಂದ ಈ ಕಾರ್ಯಕ್ರಮಗಳನ್ನು ಏರ್ಪಡಿಸುವ ಶಿಕ್ಷಕ ಒಳ್ಳೆಯ ವ್ಯಕ್ತಿ, ಬುದ್ಧಿವಂತ ವ್ಯಕ್ತಿ ಆಗಿರುವದು

ಅವಶ್ಯಕ. ಎಂದರೆ ಮಾತ್ರ ಅವನು ವಿವೇಕದಿಂದ ಒಳ್ಳೆಯ ಕಾರ್ಯಕ್ರಮಗಳನ್ನು ಏರ್ಪಡಿಸುವದು ಸಾಧ್ಯವಿದೆ. ಮನೋರಂಜನೆಯ ಮುಖ್ಯೋದ್ದೇಶ ಲೋಕಶಿಕ್ಷಣ. ಶಿಕ್ಷಕರು ಇದನ್ನು ದೃಢವಾಗಿ ತಿಳಿದುಕೊಂಡಿರಬೇಕು. ಕಲಾಭಿವೃದ್ಧಿ ಇದಕ್ಕೆ ಅನುಸರಿಸಿಯೇ ಆಗಬೇಕು. ಜಾನಪದ ಗೀತಗಳನ್ನು, ಹಳ್ಳಿಯ ಕರಡಿ ಮಜಲು, ಗೀಗೀಪದ, ಯಕ್ಷಗಾನ, ಕೋಲಾಟ, ಬೈಲಾಟ ಇತ್ಯಾದಿ ಮನೋರಂಜಕ ಕಾರ್ಯಕ್ರಮಗಳನ್ನೂ, ಜ್ಞಾನಪ್ರಸಾರ, ಸಂಸ್ಕೃತಿ ಪ್ರಸಾರ ಈ ದೃಷ್ಟಿಗಳಿಂದ ಸುಜ್ಞ ಶಿಕ್ಷಕನು ಉಪಯೋಗಿಸಿಕೊಂಡರೆ ಅದರಿಂದ ಸರ್ವಧರ್ಮ ಸಮ ದೃಷ್ಟಿ, ಸಹಕಾರ, ಉದ್ಯೋಗಶೀಲತೆ ಇತ್ಯಾದಿ ಸದ್ಗುಣಗಳು ಬೇರೂರಲು ಪ್ರತ್ಯಕ್ಷ ಪ್ರಯೋಜನ ವಾಗುವದು.

ನಮ್ಮ ಹಳ್ಳಿಗಳಲ್ಲಿ ಅಸ್ವಚ್ಛತೆ ಮತ್ತು ಅದರ ಬಗೆಗೆ ಅಜ್ಞಾನ ಬಹಳ ಆಳವಾಗಿದೆ. ಜೀವನ ಶಿಕ್ಷಣ ಶಾಲೆಗಳ ದೈನಿಕ ಕಾರ್ಯ ಸಫಾಯಿಯಿಂದಲೇ ಆರಂಭವಾಗುತ್ತದೆ. ತಮ್ಮ ಶಾಲೆಯನ್ನು ಅದರ ಸುತ್ತಮುತ್ತಲಿನ ಸ್ಥಳವನ್ನು ಸ್ವಚ್ಛವಾಗಿರಿಸುವದು ಆ ಶಾಲೆಗಳ ಆದ್ಯ ಕರ್ತವ್ಯವಾಗಿದೆ. ಊರಲ್ಲಿ ಅಸ್ವಚ್ಛತೆ ಕಾಣುತ್ತಿದ್ದರೆ ಜೀವನ ಶಿಕ್ಷಣ ಶಾಲೆಯು ಅದನ್ನು ನೋಡುತ್ತ ಸುಮ್ಮನಿರಲಾರದು. ಊರಿನ ನಿರ್ಮಲೀಕರಣಕ್ಕೆ ಶಿಕ್ಷಕರೂ ವಿದ್ಯಾರ್ಥಿಗಳೂ ಸಾಧ್ಯವಿದ್ದಷ್ಟು ಸಹಾಯ ಸಲ್ಲಿಸಬೇಕು. ಮಕ್ಕಳ ವೈಯಕ್ತಿಕ ಸ್ವಚ್ಛತೆಗೆ ಲಕ್ಷ ಕೊಡುವಾಗ ಅದರ ಕಾರಣ ಗಳನ್ನು ವಿವರಿಸುವಂತೆ ಗ್ರಾಮ ಸ್ವಚ್ಛತೆಯ ಕಾಲಕ್ಕೂ ಅದರ ಕಾರಣಗಳನ್ನು ಸಂಬಂಧ ಪಟ್ಟವರಿಗೆ ತಿಳಿಸಿ ಹೇಳು ವದು ಶಿಕ್ಷಕರ ಕರ್ತವ್ಯವೇ ಸರಿ. ಈ ಕಾರ್ಯಕ್ರಮಗಳನ್ನು ಶಾಲೆಗಳು ಮನಃಪೂರ್ವಕವಾಗಿ ಸಕಾರಣವಾಗಿ ಮಾಡಿದರೆ ಅವುಗಳ ಪರಿಣಾಮ ಊರ ಜನರ ಮೇಲೆ ಆಗುವದು ಅನಿವಾರ್ಯ. ಕಾಂಪೋಸ್ಟ ಕುಣಿ ತೋಡುವದು, ತಾತ್ಕಾಲಿಕ ಕಕ್ಕಸ ಮೂತ್ರಿಗಳನ್ನು ತಯಾರಿಸಿ ಗೊಬ್ಬರಕ್ಕಾಗಿ ಅವುಗಳ ಉಪಯೋಗ ಮಾಡಿಸುವದು ಇತ್ಯಾದಿ ಸಂಗತಿಗಳನ್ನು ಊರ ಪ್ರಮುಖರ ಸಹಾಯದಿಂದ ಪ್ರಯೋಗಾಮಿ ಶಿಕ್ಷಕನು ಸಾಧಿಸಬಹುದು. ಸಾಮಾನ್ಯವಾಗಿ ಊರಲ್ಲಿ ಪಕ್ಷ-ಪಂಗಡಗಳಿರುವದರಿಂದ ಶಿಕ್ಷಕನು ನಮ್ಮ ದೇಶದ ಪ್ರತಿನಿಧಿಗಳು ಸಂಯುಕ್ತರಾಷ್ಟ್ರ ಸಂಘದಲ್ಲಿ ವರ್ತಿಸುವಂತೆ ಹಳ್ಳಿಯಲ್ಲಿ ವರ್ತಿಸಬೇಕಾಗುವದು. ಸಾಮಾನ್ಯ ಶಿಕ್ಷಕರಿಂದ ಇದು ಎಷ್ಟೋ ಸಲ ಸಾಧ್ಯ ವಾಗದೆ ಅವರು ತೊಂದರೆಗೊಳಗಾಗುತ್ತಾರೆ. ಇದಕ್ಕೆ ಉಪಾಯವೇನೆಂದು ಕೇಳಿದರೆ "ಶಿಕ್ಷಕನ ಬುದ್ಧಿ-ಹೃದಯ-ಕಾರ್ಯಶಕ್ತಿಗಳ ಸದುಪಯೋಗವೇ ಉಪಾಯ" ಎಂದು ಹೇಳದೆ ಗತ್ಯಂತರವಿಲ್ಲ. ಹಾಗೆಂದರೆ ಸಮಾಜ ಜೀವನವೇ ಒಂದು ಕಲೆಯಾಗಿದೆ, ಸಾಧನೆಯಾಗಿದೆ. ನಮ್ಮ ನಮ್ಮ ಯೋಗ್ಯತೆ ನಮ್ಮ ನಮ್ಮ ಪರಿಸ್ಥಿತಿಗಳ ಪ್ರಕಾರ ಫಲ ದೊರೆಯುತ್ತದೆ. ಇದಕ್ಕೆ ಶಿರ ಬಾಗಿಸಿ ಕರ್ತವ್ಯಪಾಲನೆ ಮಾಡುವದೊಂದೇ ಉಪಾಯ. ಆದರೆ ಒಳ್ಳೆಯ ಕಾರ್ಯದ ಪರಿಣಾಮ ಕೂಡಲೇ ವ್ಯಕ್ತವಾಗದಿದ್ದರೂ ಒಟ್ಟಿನಲ್ಲಿ ಸಮಾಜದ ಮೇಲೆ ಆಗದೆ ಇರಲಾರದು. ಅದೇ ಸಮಾಜ ಪ್ರಗತಿಗೆ ನಮ್ಮ ಅಳಿಲು ಸೇವೆ ಎನ್ನಬೇಕು.

ಸರಕಾರೀ ಪಂಚವಾರ್ಷಿಕ ಯೋಜನೆಗಳ ಗ್ರಾಮಾಭಿವೃದ್ಧಿ ಕಾರ್ಯಕ್ರಮಗಳಲ್ಲಿ ಭಾಗವಹಿಸುವದು ಒಂದು ಪವಿತ್ರ ಕರ್ತವ್ಯವೆಂಬ ಭಾವನೆ ಎಲ್ಲ ಶಿಕ್ಷಕರಲ್ಲಿಯೂ ಮೂಡುವದು ಅತ್ಯಂತ ಆವಶ್ಯಕ. ಹಾಗಾಗದಿದ್ದರೆ ನಮ್ಮ ದೇಶದ ದುರ್ದೈವ ಇನ್ನೂ ಪ್ರಬಲ ವಾಗಿದೆ ಎಂದು ಭಾವಿಸಬೇಕಾದೀತು. ನಮ್ಮ ದೇಶದ ಹಿಂದುಳಿಕೆಯನ್ನು ಪರಿಹರಿಸಲು ನಮ್ಮ ಸರಕಾರವು ತಯಾರಿಸಿದ ಯೋಜನೆಯಲ್ಲಿ ಹಳ್ಳಿಗರು ಭಾಗವಹಿಸ ದಿದ್ದರೆ ಆ ಹಿಂದುಳಿಕೆ ತೊಲಗುವ ಮಾರ್ಗವಾವುದು? ಪ್ರಭಾತಫೇರಿ – ಶ್ರಮದಾನ – ವಿವಿಧ ವಿನೋದಾವಳಿ ಇತ್ಯಾದಿ ಎಷ್ಟೋ ಕಾರ್ಯಕ್ರಮಗಳು ತೋರಿಕೆಗಾಗಿ ಆಗುತ್ತವೆ. ಮಕ್ಕಳ ಅಭ್ಯಾಸವನ್ನು ಮುಳುಗಿಸುತ್ತವೆ ಎಂದು ಪ್ರಾಮಾಣಿಕ ಶಿಕ್ಷಕರಿಗೆ ಎಷ್ಟೋ ಸಲ ಭಾವನೆ ಬರುವದುಂಟು. ಆಗ ಅವರು ತಮ್ಮ ಪ್ರಾಮಾಣಿಕ ವಿಚಾರಗಳನ್ನು ಅಷ್ಟೇ ಪ್ರಾಮಾಣಿಕ ವಿಚಾರಶೀಲ ಪ್ರಮುಖರಲ್ಲಿ ಆರಿಕೆ ಮಾಡಿಕೊಂಡು ತಮ್ಮ ಸಂಶಯ ಪರಿಹಾರ ಮಾಡಿಕೊಳ್ಳಬೇಕು. ಆದರೆ ಈ ಕಾರ್ಯ ಕ್ರಮಗಳಲ್ಲಿಯ ಉತ್ತಮಾಂಶವನ್ನು ಗ್ರಹಿಸಿ ಅದು ಸಾಧ್ಯವಿದ್ದಷ್ಟು ಈಡೇರುವಂತೆ ಪ್ರಯತ್ನಿಸುವದು ನಮ್ಮೆಲ್ಲರ ಕರ್ತವ್ಯವಾಗಿದೆ. ಅಪ್ರಮಾಣಿಕತೆ ಕಂಡಲ್ಲಿ ಶಾಂತರೀತಿಯಲ್ಲಿ ಸಮಂಜಸವಾಗಿ ಅದನ್ನು ಪ್ರತಿಭಟಿಸು ವದೂ ನಮ್ಮ ಕರ್ತವ್ಯವೇ ಸರಿ. ಆದರೆ ಹೀಗೆ ಮಾಡು ವಾಗ ನಮ್ಮ ನಮ್ಮ ಕಾರ್ಯಕ್ಷೇತ್ರಗಳಲ್ಲಿ ನಾವು

ಪ್ರಾಮಾಣಿಕರೂ ಉದ್ಯೋಗಿಗಳೂ ದಕ್ಷರೂ ಆಗಿರುವದು ಮೂಲಭೂತವಾಗಿದೆ. ಇಲ್ಲದಿದ್ದರೆ ನಮ್ಮ ಪ್ರತಿಭಟನೆಗೆ ಬೆಲೆಯಿಲ್ಲ. ಒಮ್ಮೊಮ್ಮೆ ಅದರಿಂದ ದುಷ್ಪರಿಣಾಮಗಳೂ ಆಗಬಹುದು.

ಮೇಲೆ ವಿವರಿಸಿದಂತೆ ಜೀವನ ಶಿಕ್ಷಣ ಶಾಲೆಗಳು ಗ್ರಾಮೋದ್ಧಾರದಲ್ಲಿ ಯೋಗ್ಯಪಾತ್ರವನ್ನು ವಹಿಸುವದು ಸಾಧ್ಯವಿದೆ. ಶಾಲೆಯು ಮುಖ್ಯವಾಗಿ ಜ್ಞಾನದಾನದ ಕೇಂದ್ರ. ಎಲ್ಲ ಬಗೆಯ ಸಮಾಜ ಹಿತಕಾರಕ ಜ್ಞಾನವನ್ನು ಅದು ಸದ್ಭಾವನೆಯಿಂದ ಸತ್ಕೃತಿಯಿಂದ ಸಾಧ್ಯವಿದ್ದಷ್ಟು ಹರಡಬೇಕು. ಶಿಕ್ಷಕನ–ಮುಖ್ಯವಾಗಿ ಪ್ರಧಾನ ಶಿಕ್ಷಕನ ವ್ಯಕ್ತಿತ್ವ ಎಂದರೆ ವಿಕಸಿತ ವ್ಯಕ್ತಿತ್ವ ಅಥವಾ ವ್ಯಕ್ತಿತ್ವವೇ ಶಾಲೆಯ ಯೋಗ್ಯತೆಯನ್ನು ನಿರ್ಧರಿಸುತ್ತದೆ. ಶಿಕ್ಷಕರು ಇದನ್ನು ನೆನೆದು ಆದರ್ಶ ಜೀವಿಗಳಾಗಲು ಯತ್ನಿಸಿದರೆ ಅವರಿಗೆ ಹಳ್ಳಿಯ ಸಮಾಜದಲ್ಲಿ ಮನ್ನಣೆ ದೊರೆತೇ ದೊರೆಯುವದು. ಈ ಮನ್ನಣೆಯ ಮುಖಾಂತರವೇ ಹಳ್ಳಿಯ ಆರ್ಥಿಕ, ಬೌದ್ಧಿಕ, ಸಾಂಸ್ಕೃತಿಕ ಮಟ್ಟವನ್ನು ಎತ್ತರಿಸಲು ಅವರು ನೆರವು ನೀಡುವದು ಸಾಧ್ಯವಿದೆ. ಹೀಗೆ ಮಾಡಿದರೆ ನಾವು ನಮ್ಮ ರಾಷ್ಟ್ರಪಿತನ ಕನಸನ್ನು ನನಸಾಗಿಸಲು ಕೈಲಾದ ಮಟ್ಟಿಗೆ ಪ್ರಯತ್ನ ಮಾಡಿದಂತಾದೀತು.

ಪ್ರಾಥಮಿಕ ಶಾಲಾ ಪ್ರಮಾಣಪತ್ರ ಪರೀಕ್ಷೆ, ಟ್ರೇನಿಂಗ ಕಾಲೇಜ; ಎಲಿಮೆಂಟರಿ ಮತ್ತು ಇಂಟರಮೀಡಿಯೆಟ್ ಗ್ರೇಡ ಮುಂ. ಡ್ರಾಯಿಂಗ ಪರೀಕ್ಷೆಗಳಿಗೆ—

ಜನಪ್ರಿಯವಾದ ಮತ್ತು ಸರಕಾರದಿಂದ ಮಂಜೂರಾದ ಒಂದೇ ಒಂದು ಪುಸ್ತಕ

ಆದರ್ಶ ಚಿತ್ರಕಲಾ

(Ideal Drawing)

ಶ್ರೀ ಎಸ್. ಕೆ. ಜೋಶಿ, ಮತ್ತು ಶ್ರೀ ಜಿ. ಡಿ. ವಾಲಿ.

ಎಲ್ಲ ದೊಡ್ಡ ಪುಸ್ತಕ ವ್ಯಾಪಾರಸ್ಥರಲ್ಲಿ ದೊರೆಯುವದು.

ಬೆಲೆ ೧—೧೨—೯ ಅಂಚೆವೆಚ್ಚ ಪ್ರತ್ಯೇಕ.

ಐದು ಮತ್ತು ಐದಕ್ಕಿಂತ ಹೆಚ್ಚು ಪ್ರತಿ ತರಿಸಿಕೊಳ್ಳುವವರಿಗೆ ಅಂಚೆ ವೆಚ್ಚವಿಲ್ಲ. ಇದು ಕನ್ನಡದಲ್ಲಿಯೂ ಸಿಗುತ್ತದೆ.

ಜಿ. ವಾಯ್. ರಾಣೆ

ಪ್ರಕಾಶಕರು, ೩೪೩, ಕಸಬಾ ಪೇಟೆ ಪುಣೆ.

ಚಡಚಣ ಶ್ರೀ ಅರವಿಂದ ಗ್ರಂಥಾಲಯದ

ನವಪ್ರಕಟನೆಗಳು

ಸರ್ವಧರ್ಮಸಮನ್ವಯ ತತ್ತ್ವವನ್ನು ಆಧರಿಸಿ ಸುಲಭವೂ ಲಲಿತವೂ ಆದ ಪುಸ್ತಕಗಳನ್ನು ಒದಗಿಸಿ ಕೊಟ್ಟು, ವಾಚಕರಲ್ಲಿ ಸದಭಿರುಚಿಯನ್ನು ಹುಟ್ಟಿಸಿ, ನಮ್ಮ ನಾಡು ಜಾತ್ಯತೀತತೆಯನ್ನು ರೂಪಿಸಿಕೊಂಡು ಯುಗವಾಣಿಗೆ ಕಿವಿಗೊಡುವಂತೆ ಮಾಡುವುದು ನಮ್ಮ ಪ್ರಕಟನೆಗಳ ಉದ್ದೇಶ.

ವರುಷಕ್ಕೆ ೫ ರೂ. ಕೊಟ್ಟು ಗ್ರಾಹಕರಾದರಿಗೆ ನಮ್ಮ ನಾಲ್ಕು ಪುಸ್ತಕಗಳು ಮುಕ್ಕಾಲು ಬೆಲೆಗೆ ದೊರೆಯುವವು. ಸುಂದರವಾದ ಅಚ್ಚುಕಟ್ಟುಗಳು ಮನೆ ಮನೆಯಲ್ಲಿಯೂ ಇರಬೇಕಾದ ಪುಸ್ತಕಗಳು. ಇಂದೇ ಗ್ರಾಹಕರಾಗಿರಿ.

ಶ್ರೀ ಅರವಿಂದ ಗ್ರಂಥಾಲಯ

ಪೋ : ಚಡಚಣ

ಜಿ. : ವಿಜಾಪುರ

ಜೀವನ ಶಿಕ್ಷಣವೂ ಪ್ರಯೋಜನ ಪ್ರಮಾಣ ವಾದವೂ

ಲೇಖಕರು: ಶ್ರೀ 'ಬಮತಿಂ'

ಪ್ರಯೋಜನ ಪ್ರಮಾಣವೆಂದರೇನು ?

ಪ್ರಯೋಜನ ಪ್ರಮಾಣವಾದ (Pragmatism) ವು ಭಾವನಾವಾದ (Idealiam) ದ ವಿರುದ್ಧವೆಂದಂತಹ ದೊಂದು ವಿಚಾರಪ್ರಣಾಲಿಯು. ಇದರ ಮುಖ್ಯ ಪುರಸ್ಕರ್ತನು ಅಮೇರಿಕದ ನಾಮಾಂಕಿತ ಶಿಕ್ಷಣ ತಜ್ಞನಾದ ಜಾನಡ್ಯೂಯಿಯು. ಆತನ ಹೊಸ ಹೊಸ ಪ್ರಯೋಗ ಗಳಿಂದಲೂ ಅವಿಚ್ಛಿನ್ನವಾದ ಪ್ರಚಾರದಿಂದಲೂ ಅದು ಈಗ ಪ್ರಯೋಜನ ಪರೀಕ್ಷಾ ತತ್ತ್ವ (Expermentalism) ವೆಂಬ ಪ್ರಸಿದ್ಧಿಯನ್ನು ಪಡೆದಿದೆ. ಪ್ರಚಲಿತ ಶತಮಾನದ ಆದಿಯಿಂದ ಹೊರಟ ಈ ತತ್ತ್ವಶಾಸ್ತ್ರವು ಅಮೇರಿಕನ್ನರ ಸಂಸ್ಕೃತಿಯ ಮಹತ್ವವನ್ನೂ ಶಿಕ್ಷಣದಲ್ಲಿ ಅವರು ಈ ವರೆಗೆ ಗೈದ ಪ್ರಗತಿಯನ್ನು ಜಗತ್ತಿಗೆ ಪ್ರಸಿದ್ಧಿ ಸಿದೆ. ನಮ್ಮ ಸಂಸ್ಕೃತಿಗೆ ಪ್ರಾಚೀನಕಾಲದ ಹಿನ್ನೆಲೆ ಯಿದ್ದಂತೆ ಅಮೇರಿಕನ್ನರ ಸಂಸ್ಕೃತಿಗೆ ಇಲ್ಲವೇನೋ ನಿಜ. ಆದಾಗ್ಯೂ, ಅದು ಇತ್ತೀತ್ತಲಾಗಿ ಈ ವಾದದ ಪರಿಣಾಮ ದಿಂದ ಅದ್ಭುತ ಪ್ರಗತಿಯನ್ನು ಹೊಂದಿ ಜಗತ್ತಿನ ಗಮನ ವನ್ನು ತನ್ನತ್ತ ಸೆಳೆದಿದೆ. ಎಲ್ಲ ವಿಜ್ಞಾನಗಳಲ್ಲಿ ಕಂಡು ಬರುವ ಪ್ರಯೋಗ ಪದ್ಧತಿಯನ್ನು ಈ ವಾದವು ಮನ್ನಿಸು ತ್ತಿದೆ. ಎಲ್ಲವೂ ಅಬಾಧಿತವಾಗಿ ನಡೆಯುವವೇ ವಿನಾ ಅವು ಥಟ್ಟನೆ ಸಂಭವಿಸುವದಿಲ್ಲವೆಂದು ಅದು ಅನ್ನುತ್ತಿದೆ. ನಮ್ಮ ಕಂಣಿಗೆ ಕಾಣಿಸುವ ವಸ್ತುಗಳೆಲ್ಲ ನಿಸರ್ಗಕ್ಕೆ ಸಂಬಂಧಿಸಿದವುಗಳು. ನಿಸರ್ಗಕ್ಕೂ ಅನುಭವಕ್ಕೂ ಅದು ಮಹತ್ವವನ್ನು ಕೊಡುತ್ತಿದೆ. ನಮಗೆ ಜ್ಞಾನವು ಸಿಗುವದು ಅನುಭವದಿಂದಲ್ಲವೇ? ಆದುದರಿಂದ, ಅದು ಅನುಭವಕ್ಕೆ ಹೆಚ್ಚಿನ ಸ್ಥಾನವನ್ನು ಕೊಡುವದುಂಟು. ನಮ್ಮ ಜೀವನ ಶಿಕ್ಷಣದಲ್ಲಿ ಸಹ ಮಗುವಿನ ಅನುಭವಕ್ಕೇ ಪ್ರಾಧಾನ್ಯತೆ ಕೊಡಲ್ಪಟ್ಟಿದೆ. ಮಗುವು ತನ್ನ ಸ್ವಂತ ಅನುಭವದಿಂದಲೇ ತನ್ನ ಜ್ಞಾನದ ಮಂದಿರವನ್ನು ರಚಿಸಿಕೊಳ್ಳುತ್ತಿದೆ. ಅದು ಇತ್ತಂಡ ವಾದವು. ಅದು ಪ್ರತಿಯೊಂದು ಜೀವಿಯ ಇಡಿಯ ದೇಹವನ್ನು ಒಂದೇ ಒಂದು ವ್ಯವಸ್ಥಿತ ದೇಹ ವೆಂದೂ ವಿಮರ್ಶಿಸುತ್ತಿದೆ. ಮತ್ತು ಪರಸ್ಪರಾವಲಂಬಿ ಗಳಾಗಿ ಕೆಲಸ ಮಾಡುವ ಅದರ ಅಂಗಗಳನ್ನು ಬಿಡಿಬಿಡಿ ಯಾಗಿಯೂ ವಿಮರ್ಶಿಸುತ್ತಿದೆ.

ಅದರ ತತ್ತ್ವಗಳು :

ಸಮಸ್ಯಗಳಿಂದ ಕೂಡಿದ ಸನ್ನಿವೇಶಗಳನ್ನು ಎದುರಿ ಸಿದಾಗಲೇ ಜೀವಿಯಲ್ಲಿ ವಿಚಾರಗಳು ಮತ್ತು ಪ್ರತಿಕ್ರಿಯೆ ಗಳು ತಲೆದೋರುವದುಂಟು. ಅಂತಹ ಸನ್ನಿವೇಶಗಳು ಜೀವಿಯನ್ನು ಕಾರ್ಯೋನ್ಮುಖನಾಗಿಸಲು ಕೆರಳಿಸುತ್ತಿವೆ ಯಷ್ಟೇ. ತತ್ಪರಿಣಾಮವಾಗಿ, ಜೀವಿಗೂ ಅದರ ಸುತ್ತು ಮುತ್ತಲಿನ ಸನ್ನಿವೇಶಗಳಿಗೂ ಪರಸ್ಪರ ಸಂಬಂಧವು ಬೆಳೆದು ಸಮಸ್ಯಗಳು ತಮ್ಮಷ್ಟಕ್ಕೆ ತಾವೇ ಉದಯಿಸು ತ್ತಿವೆ. ಅಂತಹ ಪರಿಸ್ಥಿತಿಗಳನ್ನು ಎದುರಿಸುವ ಜೀವಿಯ ಹರಿದಾಟಗಳಲ್ಲಿ ಇಲ್ಲವೆ ಚಟುವಟಿಕೆಗಳಲ್ಲಿ ಸಮ ಸ್ಥಿತಿ ಯನ್ನು ಇಲ್ಲವೆ ಸಮತೆಯನ್ನು ಪಡೆಯಬೇಕೆಂಬ ಅವಶ್ಯ ಕತೆಯಿರುವದುಂಟು. ಎಲ್ಲ ಜೀವಿಗಳಿಗೆ ಅಷ್ಟೇ ಅಂಗಗಳಿ ದ್ದರೂ ಆ ಜೀವಿಗಳು ನಿರ್ದಿಷ್ಟ ಸನ್ನಿವೇಶಗಳಲ್ಲಿ ಒಂದೇ ತೆರನಾಗಿ ಕೆಲಸ ಮಾಡಲಾರವು. ಈ ವಾದವು ಚಟುವಟಿಕೆ ಗಳಿಗೆ: ಪ್ರಾಧಾನ್ಯತೆಯನ್ನು ಕೊಡುತ್ತಿದೆ. ಚಟುವಟಿಕೆ ಯನ್ನು ಹೆಚ್ಚು ಜಾಣತನದ್ದಾಗಿಯೂ ಹೆಚ್ಚು ಸರಿಯಾದ ದ್ದಾಗಿಯೂ ಮಾಡಬೇಕೆಂಬುದು ಈ ವಾದದ ತಿರುಳು. ಪ್ರಯೋಗದಿಂದ ಸಿದ್ಧ ಮಾಡಿ ತೋರಿಸಿದ ಹೊರತು ಅದು ಅವುದನ್ನೂ ನಿಜವೆಂದು ನಂಬುವದಿಲ್ಲ. ಈ ಮಾತು ಅಹ್ಹೊಂದು ಯೋಗ್ಯವಾದೀತೆಂದು ನಮಗನಿಸುವ ದಿಲ್ಲ. ಉದಾಹರಣಾರ್ಥವಾಗಿ, ದೇವರು ಇದ್ದಾನೆಂಬು ದನ್ನು ಸಿದ್ಧಮಾಡಿ ತೋರಿಸುವ ಬಗೆ ಹೇಗೆ? ಉಪಕರಣ ಗಳ ಸಹಾಯದಿಂದ ಇದನ್ನು ಪ್ರಯೋಗ ಮಾಡಿ ತೋರಿ ಸುವದು ಎಂದಾದರೂ ಶಕ್ಯವಾದೀತೇ? ಭೌತಿಕ ವಿಜ್ಞಾನ ಗಳು ಅದರ ಬುನಾದಿಯು. ಬರೇ ಪಾಂಡಿತ್ಯದಿಂದ ಮಾನವನಿಗೆ ಏನೂ ಪ್ರಯೋಜನವಿಲ್ಲ. ಅದುದರಿಂದಲೇ 'ಓದಿ ಕೆಟ್ಟ, ಕೂಸಿ ಭಟ್ಟ' ಎಂಬ ನಾಣ್ನುಡಿಯು ರೂಢಿ ಯಲ್ಲಿ ಬಂದಿದೆ. ತನ್ನ ಪಾಂಡಿತ್ಯವನ್ನು ಕೃತಿಗಿಳಿಸಿದಾ ಗಲೇ ಅವನಿಗೆ ನಿಜವಾದ ಜ್ಞಾನವು ಪ್ರಾಪ್ತವಾಗುವದು. ಅವಕ್ಕೆ ನಾವು ಬುದ್ಧಿಯೆಂದು ಕರೆಯುತ್ತೇನೆ. 'ಓದು ಒಕ್ಕಾಲು ಇದ್ದರೆ, ಬುದ್ಧಿ ಮುಕ್ಕಾಲು ಇರಬೇಕು' ಎಂಬ ಗಾದೆಯ ಮಾತು ಸಹ ಈ ಸಂಗತಿಯನ್ನೇ ಒತ್ತಿ ಹೇಳು ತ್ತಿದೆ. ತನ್ನ ನಿತ್ಯದ ವ್ಯವಹಾರಗಳಲ್ಲಿ ತನ್ನ ಪಾಂಡಿತ್ಯ

ವನ್ನು ಉಪಯೋಗಿಸುತ್ತಿದ್ದರೆ ಮಾತ್ರ ಆತನಿಗೆ ಆ ನಿಜವಾದ ಬುದ್ಧಿಯು ಇಲ್ಲವೆ ವ್ಯವಹಾರ ಜ್ಞಾನವು ಲಭಿಸುವದು. ತನ್ನ ಚಟುವಟಿಕೆಗಳ ಇಲ್ಲವೆ ಕೃತಿಗಳ ಮುಖಾಂತರ ಆತನಿಗೆ ನಿಜವಾದ ಅನುಭವವೂ ಬುದ್ಧಿಯೂ ಪ್ರಾಪ್ತವಾಗುವದುಂಟು. ಮಗುವು ಮಾಡುತ್ತ ಕಲಿಯಬೇಕು. ಏನಾನೊಂದು ಚಟುವಟಿಕೆಯನ್ನು ಮಾಡದ ಹೊರತು ನಿಜವಾದ ಜ್ಞಾನವು ಪ್ರಾಪ್ತವಾಗಲಾರದು. ಪುಸ್ತಕೀಯ ಜ್ಞಾನವು ಏನೂ ಕೆಲಸದ್ದಲ್ಲ. ನಮ್ಮ ಈಗಿನ ಹೊಸ ಶಿಕ್ಷಣದ ಸೂತ್ರವೂ ಇದೇ ಆಗಿದೆ.

ವಿಚಾರಗಳು ಎಷ್ಟೇ ಚನ್ನಾಗಿದ್ದರೂ ಅವು ಕೃತಿಗಿಳಿಸಲು ತಕ್ಕವುಗಳಾಗಿರದಿದ್ದರೆ, ಅಂತವುಗಳಿಗೆ ಈ ವಾದವು ಮನ್ನಣೆಯನ್ನೀಯುವದಿಲ್ಲ. ವಿಚಾರದಿಂದಲೇ ಮಾನವನು ಕಾರ್ಯಪ್ರವೃತ್ತನಾಗುವದುಂಟು. ಕಾರ್ಯರೂಪಕ್ಕಿಳಿಯಲು ಸಮರ್ಥವಾದ ವಿಚಾರವೇ ಈ ವಾದದ ದೃಷ್ಟಿಯಲ್ಲಿ ಜಲೋ ವಿಚಾರವು. ಅದು ವಿಜ್ಞಾನಿಗಳ ವರ್ಧತಿಯನ್ನು ಅಂಗೀಕರಿಸಿದೆ. ವಿಜ್ಞಾನ (Science) ಕ್ಕೂ ಕಲೆ (Art) ಗೂ ವೈಷಮ್ಯವಿದೆಯೆಂದು ಹಲವರ ಮತ. ವಿಜ್ಞಾನವು ಪ್ರಾಯೋಗಿಕವಿದ್ದರೆ, ಕಲೆಯು ಸಾಂಪ್ರದಾಯಿಕವಿದೆ. ಈ ವಾದದ ಪುರಸ್ಕರ್ತರಾದ ಜಾನ ಡ್ಯೂಯಿ ಮೊದಲಾದವರು ಕಲೆಯು ಸಹ ಪ್ರಾಯೋಗಿಕವಿರುವದೆಂದು ಪ್ರತಿಪಾದಿಸುತ್ತಿದ್ದಾರೆ. ಕಲಾಭಿಜ್ಞಾನಿಯು ಒಮ್ಮಿಂದೊಮ್ಮೆಲೇ ಕಲಾಭಿಜ್ಞಾನಿಯಾಗಲಾರನು. ಆತನು ಎಷ್ಟೋ ವರ್ಷಗಳ ವರೆಗೆ ರೂಢಿ ಮಾಡಿ ಮಾಡಿ ಕಲಾವಂತನಾಗುವದುಂಟು. ತನ್ನ ವಿಚಾರಗಳನ್ನು ಪ್ರಯೋಗ ಮಾಡಿ ನೋಡಿದಾಗಲೇ ಆತನಿಗೆ ಕಲಾವಂತನಾಗಲು ಸಾಧ್ಯವು. ಗಾಯನಪಟುವು ಒಮ್ಮೆಲೇ ಗಾಯನಪಟುವಾಗಲಾರ. ಆತನು ಎಷ್ಟೋ ವರ್ಷಗಳ ವರೆಗೆ ರೂಢಿ ಮಾಡುವದರಿಂದ ನಿಪುಣನಾಗುವನು. ಇದರಂತೆ ಕಾದಂಬರಿಕಾರರು, ಕವಿಗಳು, ಕಥೆಗಾರರು, ಲೇಖಕರು, ಶಿಕ್ಷಕರು, ಉಪನ್ಯಾಸಕರು. ಮುಂತಾದವರನ್ನು ಇಲ್ಲಿ ಉದಾಹರಿಸಬಹುದು. ಆದುದರಿಂದ, ವಿಜ್ಞಾನಕ್ಕೂ ಕಲೆಗೂ ಅಷ್ಟೊಂದು ಹೇಳಿಕೊಳ್ಳುವಷ್ಟು ವೈಷಮ್ಯವಿಲ್ಲೆಂದು ಅವರು ಸಾಧಿಸುವರು.

ಶಿಕ್ಷಣದಲ್ಲಿ ಅದರ ಪಾತ್ರ

ಶಿಕ್ಷಣದ ಗೊತ್ತುಗುರಿಗಳ ಬಗೆಗೆ ಅದು ಮುಂಚಿತವಾಗಿ ಏನನ್ನೂ ಸೂತ್ರೀಕರಿಸಲು ಇಲ್ಲವೆ ನಿರ್ದಿಷ್ಟ ರೂಪದಲ್ಲಿ ಹೇಳಲು ಒಪ್ಪುವದಿಲ್ಲ. ಸಿದ್ಧಮಾಡಿ ತೋರಿಸದ ಹೊರತು ಅದು ಏನನ್ನೂ ಅಂಗೀಕರಿಸುವದಿಲ್ಲ. ಹೊಸ ಹೊಸ ಮೌಲ್ಯಗಳನ್ನು ಹುಟ್ಟಿಸುವದು ಶಿಕ್ಷಣದ ಉದ್ದೇಶವೆಂದು ಅದು ಸಾರುತ್ತಿದೆ. ಮೌಲ್ಯಗಳು ಶಾಶ್ವತವಾದವುಗಳೆಂಬುದನ್ನು ಭಾವನಾವಾದವು ನಂಬುವಂತೆ ಈ ವಾದವು ನಂಬುವದಿಲ್ಲ. ಮೌಲ್ಯಗಳು ಮೇಲಿಂದಮೇಲೆ ಬದಲಾಗುತ್ತಿವೆಯೆಂಬುದನ್ನು ಅದು ನಮಗೆ ಪ್ರಯೋಗಮಾಡಿ ತೋರಿಸುತ್ತಿದೆ. ಈಗಿದ್ದ ಮೌಲ್ಯಗಳು ಹಲವು ವರ್ಷಗಳ ನಂತರ ಬದಲಾಗುವ ಸಂಭವವಿದೆ. ಆದುದರಿಂದ, ಶಿಕ್ಷಕನು ಮೌಲ್ಯಗಳ ಬಗೆಗಿದ್ದ ತನ್ನ ವಿಚಾರಗಳನ್ನು ಮಕ್ಕಳ ಮನಸಿನ ಮೇಲೆ ಒತ್ತಾಯದಿಂದ ಹೇರಬಾರದು. ಮೊದಲೇ ಭಾವಿಸಿದ ವಿಚಾರಗಳನ್ನು ಮುಂಚಿತವಾಗಿ ಮಕ್ಕಳಿಗೆ ಕೊಡಲು ಶಿಕ್ಷಕನು ಎಂದೂ ಹಾತೊರೆಯಬಾರದು. ಮಗುವು ತನಗೆ ತಿಳಿದಂತೆ ತನ್ನ ವಿಚಾರವನ್ನೂ ಮೌಲ್ಯವನ್ನೂ ಅನುಭವವನ್ನೂ ತಾನೇ ಮಾಡಿಕೊಳ್ಳಲಿ. ಈ ಸೂತ್ರಗಳೆಲ್ಲ ಜೀವನ ಶಿಕ್ಷಣದಲ್ಲಿ ಅಡಕವಾಗಿವೆಯೆಂಬ ಮಾತನ್ನು ಓದುಗರ ಗಮನಕ್ಕೆ ಈ ಸಂದರ್ಭದಲ್ಲಿ ತರಬಯಸುವೆವು. ಜ್ಞಾನಕ್ಕೋಸ್ಕರ ಜ್ಞಾನವನ್ನು ಪಡೆಯಬೇಕೆಂಬುದನ್ನು ಅದು ಒಪ್ಪುವದಿಲ್ಲ ಕಾರಣವೆಂದರೆ, ಮಗುವು ತನಗೆ ಉಪಯೋಗವಾಗುವ ಜ್ಞಾನವನ್ನಷ್ಟೇ ಅದು ಪಡೆಯತಕ್ಕದ್ದೆಂದು ಈ ವಾದವು ಇಚ್ಛಿಸುತ್ತದೆ. ಶಿಕ್ಷಣವು ತತ್ತ್ವಶಾಸ್ತ್ರದ ಕ್ರಿಯಾತ್ಮಕ ರೂಪವೆಂಬುದನ್ನು ಅದು ಅಲ್ಲಗಳೆಯುತ್ತಿದೆ. ತತ್ತ್ವಶಾಸ್ತ್ರವು ಶಿಕ್ಷಣದಿಂದ ಹೊರಹೊಮ್ಮುತ್ತಿದೆಯಲ್ಲದೆ ಶಿಕ್ಷಣವು ತತ್ತ್ವಶಾಸ್ತ್ರದಿಂದ ಹೊರಹೊಮ್ಮಲಾರದು. ಯಶಸ್ವೀ ಪ್ರಯೋಗದಿಂದ ಇಲ್ಲವೆ ರೂಢಿಯಿಂದ ಉದ್ಭವಿಸುವ ವಿಚಾರಗಳ ಸೂತ್ರೀಕರಣವೇ ತತ್ತ್ವಶಾಸ್ತ್ರವೆಂದು ಡ್ಯೂಯಿಯು ಸಾರಿ ಹೇಳುತ್ತಾನೆ. ಮಾನವನ ಬೇಡಿಕೆಗಳನ್ನು ಪೂರೈಸಲೋಸುಗ ಬೌದ್ಧಿಕ, ನೈತಿಕ, ಕಲಾತ್ಮಕ ಚಟುವಟಿಕೆಗಳು ಕೈಕೊಳ್ಳಲ್ಪಡಬೇಕು. ಮೌಲ್ಯಗಳನ್ನು ಹುಟ್ಟಿಸಿದವನು ಮಗುವಲ್ಲದೆ ಮತ್ತಾರು? ದಿನದಿನಕ್ಕೆ ತನ್ನ ಸುತ್ತಲು ವಿಸ್ತಾರಗೊಳ್ಳುತ್ತಿರುವ ಪರಿಸ್ಥಿತಿಗಳಲ್ಲಿ ಕಾರ್ಯರೂಪಕ್ಕೆ ಬರಲು ಸಮರ್ಥವುಳ್ಳ ಮೌಲ್ಯಗಳನ್ನು ಮಗುವು ತನಗೋಸ್ಕರ ನಿರ್ಧರಿಸಿಕೊಳ್ಳುತ್ತಿದೆಯೆಂದು ಈ ವಾದದ ಅಭಿಪ್ರಾಯವು.ಈ ಅಭಿಪ್ರಾಯವು ನಿಜಕ್ಕೂ ಸ್ತುತ್ಯವಾದದ್ದು.

ೀವನ ಶಿಕ್ಷಣದ ಅಭಿಪ್ರಾಯವೂ ಇದೇ ಆಗಿದೆ. ಎಲ್ಲ ುಕ್ಕಳು ಒಂದೇ ಪರಿಸ್ಥಿತಿಯಲ್ಲಿರಲು ಶಕ್ಯವಿಲ್ಲ. ಆದುದ ಂದ, ಪ್ರತಿಯೊಂದು ಮಗುವು ತನಗೊಗ್ಗುವ ಮೌಲ್ಯ ಳನ್ನು ತಾನೇ ರಚಿಸಿಕೊಳ್ಳುತ್ತಿದೆ. ಶಿಕ್ಷಣದಲ್ಲಿ ನೈಸರ್ಗಿಕ ುತ್ತು ಸಾಮಾಜಿಕ ಪರಿಸ್ಥಿತಿಗಳ ಪಾತ್ರವು ಬಹಳಷ್ಟಿದೆ ನೂದುದರಿಂದ ಅವು ಆಧಾರಾಂಶಗಳಾಗಿ ಪರಿಣಮಿಸಿವೆ. ಹೊಸ ಮೌಲ್ಯಗಳನ್ನು ಹುಟ್ಟಿಸಲು ಸ್ವಂತ ಅನುಭವದ ಅವಶ್ಯಕತೆಯಿದೆ. ಸುತ್ತಲಿನ ಪರಿಸ್ಥಿತಿಯ ಕೂಡ ಪ್ರತಿ ಕ್ರಿಯೆಯಾದಾಗಲೇ ಸ್ವಂತ ಅನುಭವವು ಪ್ರಾಪ್ತಿವಾಗು ರದು. ಸ್ವಂತ ಅನುಭವವನ್ನು ಪಡೆದ ನಂತರ ಮೌಲ್ಯ ಳನ್ನು ನಿರ್ಮಿಸಿಕೊಳ್ಳಲು ಶಕ್ಯವು. ಜೀವನ ಶಿಕ್ಷಣವು ಈ ಮೂತನ್ನೊಪ್ಪುತ್ತಿದೆ. ಮಗುವು ಸರಿಯಾದ ಶಿಕ್ಷಣವನ್ನು ಪೊಂದಬೇಕೆಂದು ನಾವು ಬಯಸುವದಾದರೆ, ಅದಕ್ಕೆ ನಾವು ಸರಿಯಾದ ಸನ್ನಿವೇಶಗಳನ್ನು ಒದಗಿಸಿ ಕೊಡಬೇಕು. ಈ ವಾದವು ನೈಸರ್ಗಿಕ ಪರಿಸ್ಥಿತಿಗಿಂತ ಸಾಮಾಜಿಕ ಪರಿಸ್ಥಿತಿಗೆ ಹೆಚ್ಚು ಮಹತ್ವವನ್ನು ಕೊಡುತ್ತಿದೆ. ಶಿಕ್ಷಕನು ತನ್ನವೇ ಅದ ವಿಶಿಷ್ಟ ಉದ್ದೇಶಗಳನ್ನು ಇಲ್ಲವೆ ವಿಚಾರ ಳನ್ನು ಅಥವಾ ಶಿಕ್ಷಣದ ಗುರಿಗಳನ್ನು ಮಕ್ಕಳ ಮನಸಿನ ಮೇಲೆ ಒತ್ತಾಯಿಸಲು ಪ್ರಯತ್ನಿಸಬಾರದು. ಮಕ್ಕಳ ಸೈಜವಾದ ಒಲವುಗಳನ್ನು ಕೂಲಂಕಷವಾಗಿ ನಿರೀಕ್ಷಿಸಿ ಿವುಗಳನ್ನು ವಿಕಾಸಗೊಳಿಸಲು ಅವಶ್ಯವಿರುವ ಸಂದರ್ಭ ಗಳನ್ನು ಪೂರೈಸಬೇಕು. ಹೀಗೆ ಮಾಡಿದರೆ, ಉತ್ತಮ ಫಲಗಳು ದೊರೆಯುವವೆಂದು ಆಶಾವಾದಿಗಳಾಗಿದ್ದಾರೆ ಈ ವಾದದ ಪುರಸ್ಕರ್ತರು. ಜೀವನ ಶಿಕ್ಷಣವು ಸಹ ಅದೇ ಆಶೆಯನ್ನು ತಳೆದಿದೆ. ವ್ಯಕ್ತಿಯ ಮೇಲೂ ಪ್ರಜಾಪ್ರಭು ತ್ವದ ಮೇಲೂ ನಾವೆಲ್ಲರು ಅಗಾಧವಾದ ನಿಷ್ಠೆಯುಳ್ಳವ ರಾದ್ದರೆ, ಅವರ ಈ ಆಶಾವಾದಿತ್ವವು ಖಂಡಿತವಾಗಿ ವಿಕಾಸ ಗೊಳ್ಳುವದು. ಮಾನವರು ತಲೆಮಾರಿನಿಂದ ತಲೆಮಾರಿಗೆ ಪ್ರಗತಿಯನ್ನು ಹೊಂದುತ್ತ ಸಾಗಿರುವರೆಂದೂ ದಿನಗಳಿ ನಂತೆ ಅವರು ಹೆಚ್ಚೆಚ್ಚು ಪರಪೂರ್ಣತೆಯನ್ನು ಹೊಂದುವ ರೆಂದೂ ಈ ವಾದವು ನಂಬುತ್ತಿದೆ. ಅವರಲ್ಲಿ ಬೆಳೆದು ಬಂದ ಆಶಾವಾದಿತ್ವವೇ ಮಾನವರ ಪ್ರಗತಿಪಥದ ವಿಚಾರವನ್ನು ಅವರಲ್ಲಿ ಬೇರೂರಿಸಲು ಕಾರಣೀಭೂತವಾಗಿದೆ.

ಈ ವಾದಕ್ಕೂ ಜೀವನ ಶಿಕ್ಷಣಕ್ಕೂ ಇರುವ ಪರಸ್ಪರ ಸಂಬಂಧ:

'ಮಾಡುತ್ತ ಕಲಿ' ಎಂಬುದು ಈ ವಾದದ ತಿರುಳು. ಮೂಲಶಿಕ್ಷಣದ ತಿರುಳಾದರೂ ಇದೇ ಇರುತ್ತಿದೆ. ಇದನ್ನು ಸಾಧಿಸಬೇಕಾದರೆ, ಸಮುಸ್ಯಗಳಿಂದ ಕೂಡಿದ ಯೋಜನಾ ಪದ್ಧತಿಯು ಅವಶ್ಯವಾಗಿಬೇಕು. ಏನಾದ ರೊಂದನ್ನು ಹುಟ್ಟಿಸುತ್ತ ಇಲ್ಲವೆ ನಿರ್ಮಿಸುತ್ತ ಮಗುವು ಕಲಿಯಬೇಕು. ಉದ್ದೇಶ ಪೂರಿತ ಮತ್ತು ಸ್ವೇಚ್ಛೆಯಿಂದಾ ಯ್ದುಕೊಂಡ ಚಟುವಟಿಕೆಯನ್ನು ವಿಕಾಸಗೊಳಿಸಬೇಕು. ಸಾಂಪ್ರದಾಯಕ ಪದ್ಧತಿಗಳು ನಿಷ್ಪ್ರಯೋಜಕ. ಮಗುವು ತನ್ನಷ್ಟಕ್ಕೆ ತಾನೇ ಕಲಿಯಲು ಅದನ್ನು ಬಿಟ್ಟು ಬಿಡಬೇಕು. ಹೀಗೆ ಮಾಡಿದರೆ, ಉತ್ಪಾದಕ ಭಾವ ಮುಂದಾಗಿ ಕೆಲಸ ಮಾಡುವಿಕೆ, ಆತ್ಮವಿಶ್ವಾಸ ಮುಂತಾದವುಗಳು ಮಗುವಿ ನಲ್ಲಿ ಬೆಳೆದು ಬರುವವು. ಶಿಕ್ಷಕನು ಮಗುವನ್ನು ನಿರ್ಬಂಧಿಸ ತಕ್ಕದ್ದಲ್ಲ. ಆದರೆ ಆತನಿಗೆ ಮಾರ್ಗದರ್ಶಕನಾಗಿರಬೇಕು. ಈ ಸೂತ್ರಗಳು ಬೇಸಿಕ್ ಶಿಕ್ಷಣಕ್ಕೂ ಅನ್ವಯಿಸುತ್ತಿವೆ. ಕಲಿಯುವದೂ ಕಲಿಸುವದೂ ಪ್ರತಿಯೊಂದು ಮಟ್ಟದಲ್ಲಿ ಎದ್ದು ಕಾಣುವಂತಿರಬೇಕು. ಉದ್ದೇಶ ಪೂರಿತ ಚಟುವಟಿಕೆಯಲ್ಲಿ ಮಕ್ಕಳನ್ನು ತೊಡಗಿಸಿದಾಗ ಅದುಮುಂದೆ ಅವನಿಗೆ ಉಪಯುಕ್ತವಾಗತಕ್ಕದೆಂಬುದನ್ನು ನೋಡಿಕೊಳ್ಳುವ ಉದ್ದೇಶವು ಸರ್ವಥಾ ಇರಕೂಡದು. ಕಾರಣವೇನೆಂದರೆ, ಡ್ಯೂಯಿಯು ಅನ್ನುವಂತೆ ಶಿಕ್ಷಣವೇ ಜೀವನ, ಜೀವನವೇ ಶಿಕ್ಷಣವಿರುತ್ತದೆ. ಶಿಕ್ಷಣವು ಮುಂದಿನ ಜೀವನದ ತಯಾರಿಯು ಎಂದು ಸ್ಪೆನ್ಸರನು ಹೇಳುವ ಶಿಕ್ಷಣವು ಅದು ಎಂದಿಗೂ ಆಗಲಾರದು. ಶಿಕ್ಷಣವು ಮುಂದಿನಜೀವನದ ತಯಾರಿಕೆಯೆಂದು ಅಂದು ಕೊಂಡರೆ ಅದು ಶಿಕ್ಷಣವನ್ನು ನಿರ್ಬಂಧಿಸಿದಂತಾಗುತ್ತಿದೆ. ಜೀವನವೇ ಶಿಕ್ಷಣವೆಂದ ಮೇಲೆ ಜೀವನವು ಸಂಪೂರ್ಣವಾಗಿ ಸಾಗಲೇ ಬೇಕು. ಡ್ಯೂಯಿಯ ಈ ಅಮೌಲ್ಯವಾದ ಸೂತ್ರವನ್ನು ಮೂಲ ಶಿಕ್ಷಣವು ಒಪ್ಪಿದ್ದರಿಂದ ಅದಕ್ಕೆ ಇತ್ತಿತ್ತಲಾಗಿ ಜೀವನ ಶಿಕ್ಷಣವೆಂಬ ನಾಮಕರಣವಾಗಿದೆ. ಮತ್ತು ಹಾಗೆ ಆದುದು ಎಲ್ಲ ದೃಷ್ಟಿಯಿಂದಲೂ ಯೋಗ್ಯವೇ ಆಗಿದೆ. ವಿಕಾಸದ ಬೇರೆ ಬೇರೆ ಮಟ್ಟಗಳಲ್ಲಿ ಮಗುವಿನಲ್ಲಿ ಹೊಸ ಹೊಸ ಭಾವಗಳೂ ಒಲವುಗಳೂ ತಲೆದೋರುತ್ತಿವೆ. ಆದು ದರಿಂದ, ಆಯಾ ಮಟ್ಟಗಳಲ್ಲಿ ಆಯಾ ಭಾವಗಳನ್ನೂ ಒಲವುಗಳನ್ನೂ ವಿಕಾಸಗೊಳಿಸಲು ಅನುಗುಣವಾದ ಚಟುವಟಿಕೆಯಲ್ಲಿ ತೊಡಗಿಸಬೇಕು. ಈ ತತ್ತ್ವಕ್ಕನುಸರಿಸಿ ಜೀವನ ಶಿಕ್ಷಣದಲ್ಲಿ ಮಕ್ಕಳು ಮೇಲಿನ ಇಯತ್ತೆಗಳಿಗೆ ಸಾಗಿದಂತೆ ಹೆಚ್ಚೆಚ್ಚು ಗಡುಸಾದ ಚಟುವಟಿಕೆಗಳನ್ನು ಕೈಕೊಳ್ಳುವದುಂಟು.

ಅಭ್ಯಾಸ ಪತ್ರಿಕೆ :

ಹಳೇ ಅಭ್ಯಾಸ ಪತ್ರಿಕೆಯು ಬೇರೆ ಬೇರೆ ವಿಷಯ ಗಳ ಪ್ರಕಾರ ಹಂಚಿ ಹಾಕಲ್ಪಟ್ಟಿದೆಯಷ್ಟೇ. ಈ ಸಾಂಪ್ರ ದಾಯಿಕ ಪದ್ಧತಿಯು ಈ ವಾದಕ್ಕೊಗ್ಗುವದಿಲ್ಲ. ಬೇರೆ ಬೇರೆ ವಿಷಯಗಳನ್ನು ಒಂದಕ್ಕೊಂದು ಸಂಬಂಧವಿಲ್ಲದಂತೆ ಮಾಡಿ ಕೂಡ್ರಿಸುವದು ಶಕ್ಯವಿಲ್ಲ. ಕೆಲವೇ ವಿಷಯಗಳ ಅಭ್ಯಾಸವೆಂದರೆ ನಾವು ಆ ವಿಷಯಗಳ ಮುಖಾಂತರ ಮಾನವನ ಚಟುವಟಿಕೆಗಳನ್ನೆಲ್ಲ ಅಭ್ಯಾಸ ಮಾಡುತ್ತೇ ವೆಂದಂತಾಗುತ್ತಿದೆ. ಜ್ಞಾನವು ಅಖಂಡವಿದ್ದು ಅದು ಅಭ್ಯಾಸ ದೊಂದು ಕ್ಷೇತ್ರವೆಂದು ಗಣಿಸಲ್ಪಡಬೇಕು. ಕಲಿಯುವ ರೀತಿಯು ಸಮಗ್ರವಾದದ್ದಿರಬೇಕು. ಬೇರೆ ಬೇರೆ ವಿಷಯ ಗಳಲ್ಲಿ ಸಂಬಂಧೀಕರಣವಿಲ್ಲದೆ ಆವುದಾದರೊಂದರಲ್ಲಿ ಪ್ರವೀ ಣನಾಗಬೇಕೆಂಬ ಒಲವು ಒತ್ತಿತ್ತತ್ತಲಾಗಿ ಬಲಿಯುತ್ತಲಿದೆ. ಸಾಲೆಯಲ್ಲಿ ಕಲಿಯುವ ವಿಷಯಗಳು ಸಾಲೆಯ ಹೊರಗಿನ ಜೀವನಕ್ಕೆ ಸಂಬಂಧವಿಲ್ಲೆಂದು ತಿಳಿಯಕೂಡದು. ಇಲ್ಲಿ ಸಹ ಸಮಗ್ರತೆಯು ಇಲ್ಲವೆ ಏಕರೂಪತೆಯು ಅವಶ್ಯವಾಗಿ ಬೇಕು. ಅದುದರಿಂದ ಪ್ರಚಲಿತ ವಿಷಯಗಳು ಸಾಲೆಯ ವಿಷಯಗಳಲ್ಲಿ ಸೇರಿಸಲ್ಪಡಬೇಕು. ಉದಾಹರಣಾರ್ಥವಾಗಿ, ದೈನಿಕಗಳಲ್ಲಿಯೂ ಬೇರೆ ಪತ್ರಿಕೆಗಳಲ್ಲಿಯೂ ಪ್ರಕಟ ವಾಗುವ ಮಹತ್ವದ ಸುದ್ದಿಗಳೂ ಚರ್ಚಿಸಲ್ಪಡತಕ್ಕ ಮಹತ್ವದ ವಿಷಯಗಳೂ ಮಕ್ಕಳಿಗೆ ಪ್ರತಿನಿತ್ಯ ಗೊತ್ತಾಗ ಬೇಕು. ಈ ತರಹದ ವ್ಯವಸ್ಥೆಯು ಜೀವನ ಶಿಕ್ಷಣ ಸಾಲೆ ಗಳ ಅಭ್ಯಾಸ ಪತ್ರಿಕೆಯಲ್ಲಿ ಸೇರ್ಪಡೆಯಾಗಿದೆ. ಅನ್ಯೋನ್ಯ ಸಂಬಂಧವುಳ್ಳ ಸಮಗ್ರತೆಯ ಇಲ್ಲವೆ ಅನುಕಲನದ ತತ್ವದ ಪರಿಣಾಮದಿಂದ ಕೆಚ್ಚಿನ ಇಲ್ಲವೆ ಮಹತ್ವವುಳ್ಳ ವಿಷಯಗಳ ವಿಚಾರವು ಉದ್ಭವಿಸಿದೆ. ಆದ ವಿಷಯದ ಸುತ್ತುಮುತ್ತಲು ಉಳಿದ ಅಭ್ಯಾಸದ ವಿಷಯಗಳನ್ನು ಅನಾಯಾಸವಾಗಿ ಹೊಂದಿಸಲು ಬರು ವದೋ ಅಂತಹ ವಿಷಯಕ್ಕೆ ಕೆಚ್ಚಿನ ಇಲ್ಲವೆ ಮುಖ್ಯ ವಿಷಯವೆಂದು ಅನ್ನಬೇಕು. ಈ ಪ್ರಕಾರ ಹಲವು ರಕ್ಷ ಣೋಪಾಯಗಳಿಂದ ಒಂದೇ ವಿಷಯದಲ್ಲಿಯ ಪ್ರವೀಣತೆ ಯನ್ನು ಹೊರತು ಪಡಿಸಿದೆ. ಒಂದು ಕ್ಲಾಸಿನಲ್ಲಿಯ ಮಕ್ಕಳಿಗೆ ಒಬ್ಬನೇ ಒಬ್ಬ ಶಿಕ್ಷಕನು ಎಲ್ಲ ವಿಷಯಗಳನ್ನು ಕಲಿಸಬೇಕೆಂಬ ನಿಯಮವಿದೆ. ಸಾಲೆಯಲ್ಲಿ ಕಲಿಸುವ ವಿಷಯಗಳು ಜೀವನಕ್ಕೆ ಉಪಯುಕ್ತವಾದವುಗಳಾಗಲೇ ಬೇಕು. ಅವು ಹೆಜ್ಜೆಹೆಜ್ಜೆಗೆ ಸಾಲೆಯ ಹೊರಗಿನ ನಿತ್ಯ ಜೀವನಕ್ಕೆ ಹೊಂದಿಕೊಂಡಿರಬೇಕು; ಮಾತ್ರವಲ್ಲದೆ ಅವು ಎಲ್ಲ ದೃಷ್ಟಿಯಿಂದಲೂ ಪರಸ್ಪರ ಸಂಬಂಧವುಳ್ಳವುಗಳಿರ ಬೇಕು. ಬೇಸಿಕ್ ಶಿಕ್ಷಣವು ಈ ನಿಯಮಗಳನ್ನು ಪಾಲಿ ಸುತ್ತಿದೆ. ಮತ್ತು ಅದರಂತೆ ತನ್ನ ಅಭ್ಯಾಸ ಪತ್ರಿಕೆಯನ್ನು ಹವ್ಮಿಕೊಂಡಿದೆ.

ನೈತಿಕ ಶಿಕ್ಷಣ :

ನೈತಿಕ ಶಿಕ್ಷಣದ ಅವಶ್ಯಕತೆಯೇ ಉದ್ಭವಿಸುವ ದಿಲ್ಲವೆಂದು ಈ ವಾದದ ವಿಚಾರವು. ಧರ್ಮ ಮತ್ತು ನೀತಿ ಇವು ಒಂದೇ ಅಲ್ಲ. ಅವು ಬೇರೆ ಬೇರೆಯಾಗಿವೆ ಸ್ವೇಚ್ಛೆ ಯಿಂದ ಕೈಕೊಂಡ ಚಟುವಟಿಕೆಯಲ್ಲಿ ಜಾಗ್ರತೆಯಿಂದ ತೊಡಗಿರುವದು. ಮಗುವಿನಲ್ಲಿ ಶಿಸ್ತನ್ನುಂಟು ಮಾಡು ತ್ತಿದೆ. ಮಾಡತಕ್ಕ ಕೆಲಸವನ್ನು ಸರಿಯಾಗಿ ಮಾಡಲು ಕಲಿತರೆ, ಮಗು ಪೌರನೀತಿಯ ಕಾರ್ಯಾಭಾರಗಳನ್ನು ನಿರ್ವಹಿಸುವ ತರಬೇತನ್ನು ಹೊಂದುತ್ತಿರುತ್ತಾನೆ. ನಾಗರಿ ಕತ್ವ ಮತ್ತು ಸ್ವಭಾವರಚನೆಗಳಲ್ಲಿಯ ತರಬೇತು, ಸಾಲೆ ಗಳಲ್ಲಿಯ ಚಟುವಟಿಕೆಯ ಮುಖಾಂತರವೇ ಆಗುತ್ತಿದೆ. ಬೇಸಿಕ್ ಶಿಕ್ಷಣವು ಈ ಮಾತನ್ನು ಸಂಪೂರ್ಣವಾಗಿ ಒಪ್ಪು ತ್ತಿದೆಯಲ್ಲದೆ ಅದರಂತೆ ಅಭ್ಯಾಸ ಪತ್ರಿಕೆಯಲ್ಲಿ ಕಾರ್ಯ ಕಲಾಪಗಳನ್ನು ಆಯಾ ಇಯತ್ತೆಗಳಿಗನುಗುಣವಾಗುವಂತೆ ರಚಿಸಿಕೊಂಡಿದೆ. ಪ್ರತಿಯೊಂದು ತಲೆಮಾರಿನಲ್ಲಿ ನೈತಿಕ ವಿಚಾರವು ಮಾರ್ಪಾಟನ್ನು ಹೊಂದುತ್ತಿದೆ. ಮಗುವು ತನ್ನ ನೈತಿಕ ಮಟ್ಟವನ್ನು ತಾನೇ ರೂಪಿಸಿಕೊಳ್ಳಲಿ. ನಿರಂತರ ವಾಗಿ ಮಹತ್ವವನ್ನು ಪಡೆದಂತಹ ಆದರ್ಶ ನೈತಿಕ ಕಲ್ಪನೆ ಯನ್ನು ಈ ವಾದವು ಕಡೆಗಣಿಸುತ್ತಿದೆ. ಮೂಲ ಶಿಕ್ಷಣವು ಇಂತಹ ಗೋಜಿಗೆ ಹೋಗುವದಿಲ್ಲವಷ್ಟೇ ಅಲ್ಲದೆ ತಲೆ ತಲಾಂತರಗಳಿಂದ ಹಿರಿಮೆಯನ್ನು ಪಡೆದಂತಹ ಆದರ್ಶ ನೈತಿಕವನ್ನು ಒಪ್ಪಿಕೊಳ್ಳುತ್ತಿದೆ. ಹಾಗಿಲ್ಲದಿದ್ದರೆ, ಆದರ್ಶ ಪುರುಷರ ಹಾಗು ಮಹಿಳೆಯರ ಜಯಂತಿಗಳನ್ನು ನಮ್ಮ ಬೇಸಿಕ್ ಸಾಲೆಗಳಲ್ಲಿ ಆಚರಿಸುತ್ತಿರಲಿಲ್ಲ. ಆದರ್ಶ ನೈತಿಕ ಗಳು ಎಂದಿನಿಂದಲೋ ಆದರ್ಶವಾಗಿಯೇ ಉಳಿದಿವೆ. ಅವು ಗಳಲ್ಲಿ ಬದಲಾವಣೆಯಾಗುವದು ಅಸಂಭವ. ಆದರೆ, ಈ ವಾದದ ಅಭಿಪ್ರಾಯದಲ್ಲಿ ಒಂದು ಲಾಭವಿದ್ದಂತೆ ತೋರು ತ್ತಿದೆ. ಮಗುವು ತಾನು ಸ್ವತಂತ್ರನೆಂದು ಭಾವಿಸುತ್ತಿದೆ. ಆದಕ್ಕೆ ಪೂರ್ವಭಾವಿತ ವಿಚಾರಗಳ ನಿರ್ಬಂಧವಿರುವದಿಲ್ಲ. ಚಟುವಟಿಕೆಯಲ್ಲಿ ಸ್ವತಂತ್ರತೆಯಿದೆ. ಸಾಲೆಯಲ್ಲಿಯ ಕೆಲಸವು ಸಾಲೆಯ ಹೊರಗಿನ ನಿತ್ಯಜೀವನದಲ್ಲಿಯ ಕಾರ್ಯ

ಭಾರಗಳಷ್ಟು ನೈಜವಾದ ಉದ್ದೇಶಪೂರಿತವಾಗಿರಬೇಕು. ಸಾಲೆಯಲ್ಲಿ ಮಾಡುವ ಸಾಮಾಜಿಕ ಕಾರ್ಯಗಳು ಅತ್ಯಂತ ಮಹತ್ವವಾದವುಗಳು. ಈ ಸೂತ್ರಗಳನ್ನು ಮೂಲ ಶಿಕ್ಷಣವು ಸಂಪೂರ್ಣವಾಗಿ ಅಂಗೀಕರಿಸಿದೆ.

ಕೊನೆಯ ಮಾತು :

ಪ್ರಯೋಜನ ಪ್ರಮಾಣ ವಾದದ ಮುಖ್ಯ ತತ್ತ್ವ ಗಳನ್ನಷ್ಟೇ ಈ ಲೇಖನದಲ್ಲಿ ಚರ್ಚಿಸಲಾಗಿದೆ. ಈ ತತ್ತ್ವ ಗಳನ್ನೆಲ್ಲ ನಮ್ಮ ದೇಶಕ್ಕೆ ಅನ್ವಯಿಸುವದು ಮೂರ್ಖತನ ದ್ದಾದೀತು. ಆದುದರಿಂದ ಪೂಜ್ಯ ಬಾಪೂಜಿಯವರು ಹಂಸಕ್ಷೀರ ನ್ಯಾಯದಂತೆ ನಮ್ಮ ದೇಶಕ್ಕೊಗ್ಗುವ ಸೂತ್ರ ಗಳನ್ನಷ್ಟೇ ಆಯ್ದುಕೊಂಡದ್ದುಂಟು. ಉಳಿದವುಗಳನ್ನು ಬಿಟ್ಟು ಕೊಡಲಾಗಿದೆ. ಈ ವಾದದ ಜೀವಾಳವೆಂದೆನಿಸಿರುವ ಕೃತಿಪ್ರಧಾನ ಪದ್ಧತಿ (Dynamic Method) ಮತ್ತು ಯೋಜನಾ ಪದ್ಧತಿ (Project method) ಇವೆರಡೂ ಈ ನಮ್ಮ ಹೊಸ ಶಿಕ್ಷಣದಲ್ಲಿ ಹಾಸುಹೊಕ್ಕಾಗಿ ಹೆಣೆಯಲ್ಪಟ್ಟಿವೆ. ಶಿಕ್ಷಣದ ಹಳೆಯ ಸಂಪ್ರದಾಯಗಳೆಲ್ಲ ಈಗ ಭರದಿಂದ ಮಾಯವಾಗುತ್ತ ನಡೆದಿವೆ. ಹೊಸ ಶಿಕ್ಷಣವು ಈಗ ಎಲ್ಲರ ಗಮನವನ್ನು ತನ್ನತ್ತ ಸೆಳೆಯುತ್ತ ಲಿದೆ. ಎಲ್ಲ ಸಾಲೆಗಳು ಇನ್ನೂ ಬೇಸಿಕ್ ಸಾಲೆಗಳಾಗಿಲ್ಲ. ನಿಂತ ಕಾಲ ಮೇಲೆ ಎಲ್ಲವೂ ಒಮ್ಮೆಲೇ ಆಗಲು ಶಕ್ಯವಿಲ್ಲ. ಅದಕ್ಕೆ ಕಾಲಾವಕಾಶವು ಅವಶ್ಯವಾಗಿಬೇಕು. ನಮ್ಮ ರಾಷ್ಟ್ರವು ಪ್ರಜಾಪ್ರಭುತ್ವಕ್ಕಂಟಿಕೊಂಡು ಜಾತ್ಯತೀತ (Secular) ವಾಗಿದೆ. ನಮ್ಮ ರಾಷ್ಟ್ರದ ಈ ಧೋರಣೆಗಳಿ ಗನುಸರಿಸಿ ಈಗಿನ ಮತ್ತು ಮುಂದಿನ ಪೀಳಿಗೆಯ ಶಿಕ್ಷಣ ವನ್ನು ರೂಪಿಸಲಾಗಿದೆ. ತತ್ಪರಿಣಾಮವಾಗಿ, ಈಗಾಗಲೇ ನಮ್ಮ ಸಾಲೆಗಳ ಅಭ್ಯಾಸ ಪತ್ರಿಕೆಯಲ್ಲಿ ಬದಲಾವಣೆ ಗಳಾಗಿವೆ, ಇನ್ನೂ ಆಗುತ್ತಿಲಿವೆ. ಪ್ರತಿಯೊಬ್ಬ ಮಗುವಿ ನಲ್ಲಿ ಶಿಸ್ತು, ಸಹಕಾರ ಭಾವನೆ, ಮುಂದಾಳ್ತನ, ಆತ್ಮ ವಿಶ್ವಾಸ, ಸರತಿಯಂತೆ ಕೆಲಸ ಮಾಡುವದು, ಪರೋಪಕಾರ ಪ್ರಾಮಾಣಿಕತನ, ಸ್ವದೇಶಾಭಿಮಾನ ಮುಂತಾದ ಪ್ರಜಾ ಪ್ರಭುತ್ವಕ್ಕೊಗ್ಗುವ ಗುಣಗಳನ್ನು ಚಿಗುರಿಸಲು ಈಗಿನ ನಮ್ಮ ಹೊಸ ಶಿಕ್ಷಣದ ಅಭ್ಯಾಸ ಪತ್ರಿಕೆಯು ಹವಣಿ ಸುತ್ತಿದೆ. ಈ ಹೊಸ ಶಿಕ್ಷಣದ ಲಾಭವು ಬೇಗನೆ ಎಲ್ಲ ಸಾಲೆಗಳಿಗೆ ಸಿಗುವಂತೆ ಮಾಡುವದು ಸರಕಾರದ ಕರ್ತವ್ಯ ನೆಂದು ಬೇರೆ ಹೇಳಬೇಕಾಗಿಲ್ಲ. ಬೇಸಿಕ್ ಶಿಕ್ಷಣವನ್ನು ಸಾರ್ವತ್ರಿಕವಾಗಿ ಮಾಡುವಲ್ಲಿ ಪ್ರಗತಿಯು ಮಂದಗತಿ ಯಿಂದ ಸಾಗಿದೆಯಾದರೂ ಈಗಿದ್ದ ಬೇಸಿಕ್ ಸಾಲೆಗಳ ಪ್ರಗತಿಯು ಮಾತ್ರ ಅತ್ಯಂತ ಸಮಾಧಾನಕಾರವಿದೆಯೆಂಬ ಮಾತನ್ನು ನಾವು ಒಪ್ಪಿಕೊಳ್ಳಲೇಬೇಕು. ಮಾಡರ್ನ ರಿವ್ಯೂ ಎಂಬ ಪತ್ರಿಕೆಯಲ್ಲಿ ಈ ವಾದದ ತತ್ತ್ವಗಳೂ ಸೂತ್ರ ಗಳೂ, ಪ್ರಕಟಗೊಂಡಿವೆ ಅನ್ನುಗಳನ್ನು ಆಧಾರವಾಗಿಟ್ಟು ಕೊಂಡು ಈ ಲೇಖನವನ್ನು ರೂಪಿಸಲಾಗಿದೆ.

—: ಜಯ ಹಿಂದ :—

ಮಾನವನ ಸಹಜ ಸ್ವಾಭಾವಿಕ ಪ್ರವೃತ್ತಿಗಳಿಗೂ ಅವರ ಆಚರಣೆಗೂ ಇರುವ ಸಂಬಂಧ

ಲೇಖಕರು :— ನಿವೃತ್ತ ಪ್ರಿನ್ಸಿಪಾಲ, **ಶ್ರೀ ತಟ್ಟಿ ಶಾಮರಾಯರು,** ಎಮ್.ಎ.

ಮೊದಲು ಭಯ ಎಂಬ ಸಹಜ ಪ್ರವೃತ್ತಿಯ ವಿಷಯ ವಿಚಾರಿಸೋಣ. ದಂಡನೆಯ ಹೆದರಿಕೆಯು ಎಂದಿನಿಂದಲೂ ಶಿಕ್ಷಕನ ದೊಡ್ಡ ಆಯುಧವಾಗಿ ನಿಂತಿದೆ; ನುತ್ತ ಮುಂದಾದರೂ ಅದಕ್ಕೆ ಸಾಲೆಯ ಆವರಣದಲ್ಲಿ ಒಂದು ಪರಿಮಿತವಾದ ಸ್ಥಾನವು ಉಳಿದೇ ಉಳಿಯುವದು. ಇದು ಅತಿ ಪರಿಚಿತವಾದ ವಿಷಯವಾದ್ದರಿಂದ ಅದರ ಬಗ್ಗೆ ಹೆಚ್ಚು ಹೇಳುವದು ಬೇಡ.

ಮೆಚ್ಚಿಗೆ, ಪ್ರೀತಿ, ಪ್ರೇಮಾದರಗಳ ದೃಷ್ಟಿ, ಯಾರು ನಮಗೆ ಸೇರುವರೋ ಅವರಿಗೆ ಸಂತೋಷವಾಗು ವಂತೆ ನಡೆಯುವದು–ಇದೂ ಅಷ್ಟೇ ಪರಿಚಿತವಾದ ಅನುಭವ. ತನ್ನ ವಿದ್ಯಾರ್ಥಿಗಳಿಗೆ ತಾನು ತುಂಬಾ ಸೇರುವಂತಾಗಿ ಹೆಸರು ಪಡೆದ ಶಿಕ್ಷಕನಿಂದಾಗುವ ಕಾರ್ಯವು, ನೋಡಿದರೆ ಹುಡುಗರು ಜಿಗುಪ್ಸೆಪಟ್ಟು ಕೊಳ್ಳುವಂತಹ ಶಿಕ್ಷಕನಿಂದ ಎಂದೂ ಸಾಧಿಸದು.

ಏನು? ಅದೇನು? ಎಂದು ತಿಳಿದುಕೊಳ್ಳಬೇಕೆನ್ನುವ ಕುತೂಹಲವು ಮಾನವನ ಪ್ರಬಲವಾದ ಒಂದು ಪ್ರವೃತ್ತಿಯು. ಆಪಾತತಃ ಕಣ್ಣಿಗೆದುರು ಬಂದು ತಮ್ಮ ಪ್ರಕಾಶ ಪ್ರಭಾವದಿಂದ ಬೆರಗುಗೊಳಿಸುವ ಅಪೂರ್ವ ವಸ್ತುಗಳು ತರುಣರ ಮನಸ್ಸನ್ನು ಆಕರ್ಷಿಸುವ ವಲ್ಲದೆ ಅವುಗಳ ಬಗ್ಗೆ ಹೆಚ್ಚು ತಿಳಿದುಕೊಳ್ಳುವ ಇಚ್ಛೆಯು ತೃಪ್ತಿಯಾಗುವವರೆಗೆ ಅವರ ಅಂತಃಕರಣವನ್ನು ಸೆರೆ ಹಿಡಿಯುವವು. ಇದಕ್ಕೂ ಮೇಲಿನ ಮಟ್ಟದಲ್ಲಿ ಹೆಚ್ಚು ಹೆಚ್ಚು ಸಮರ್ಪಕವಾದ ಸಂಪೂರ್ಣ ಜ್ಞಾನವನ್ನು ಪಡೆಯಬೇಕೆಂಬ ಈ ತೃಷೆಯು ವಿಜ್ಞಾನದ ಮತ್ತು ತತ್ವಜ್ಞಾನದ ದೃಷ್ಟಿಯಿಂದ ಪರಿಣಮಿಸುವದು. ಇಂದ್ರಿಯ ವಿಷಯಗಳಿಗೆ ಸಂಬಂಧಿಸಿದ ಮತ್ತು ಬುದ್ಧಿಗೆ ಸಂಬಂಧಿಸಿದ ಈ ಪ್ರವೃತ್ತಿಯ ಎರಡೂ ಪ್ರಕಾರಗಳು ಬಾಲ್ಯದಲ್ಲಿಯೂ ತಾರುಣ್ಯದಲ್ಲಿಯೂ ವಿಶೇಷ ಪ್ರಭಾವ ಶಾಲಿಯಾಗಿದ್ದು ಮುಂದಿನ ಜೀವನದಲ್ಲಿ ಅದರ ಆವೇಶವು ತಗ್ಗುವದು. ಹೊಸದೇನಾದರೊಂದನ್ನು ಅನುಭವಿಸಿದ ರಾಯಿತು. ಸಣ್ಣ ಮಕ್ಕಳ ಕುತೂಹಲವು ಕೆರಳುವದು. ಹೊಡ್ಡವರು ಕೇಳುವಂತೆ ಸಣ್ಣ ಮಕ್ಕಳು ಸಾಲೆಯಲ್ಲಿ ಒಂದು ಭಾಷಣದತ್ತ ನಾಲ್ಕಾರು ನಿಮಿಷಗಳಿಗಿಂತ ಹೆಚ್ಚು ಹೊತ್ತು ಗಮನವೀಯಲಾರರು; ಹೊರಗಿನ ನೋಟಗಳು ಶಬ್ದಗಳು ಅವರ ಲಕ್ಷ್ಯವನ್ನು ಕೂಡಲೇ ಅಪಹರಿಸುವವು. ಇದರಂತೆ ಮಾಧ್ಯಮಿಕ ಶಾಲೆಯ ವಿದ್ಯಾರ್ಥಿಯು ಸಂಸ್ಕೃತ, ಇಂಗ್ಲಿಷ್, ಪದಾರ್ಥ ವಿಜ್ಞಾನ, ಬೀಜಗಣಿತ ಮೊದಲಾದ ವಿಷಯಗಳನ್ನು ಕಲಿಯುವದಕ್ಕೆ ಮಾಡ ಬೇಕಾದ ಬೌದ್ಧಿಕ ಪರಿಶ್ರಮವು ಮಧ್ಯವಯಸ್ಕರಾದವರಿಗೆ ಎಂದೂ ಒಗ್ಗುವದಿಲ್ಲ; ಆತನು ತನ್ನ ಪ್ರತಿನಿತ್ಯ ವ್ಯವಹಾರದ ಸಂಗತಿಗಳತ್ತ ತನ್ನ ಮನಸ್ಸು ಹಾಕುವನು.

ಕಣ್ಣಿಗೆ ಕಾಣುವ ಕೈಯಿಂದ ಹಿಡಿದು ನೋಡ ಬಹುದಾದ ಯಾವದೊಂದು ಹೊಸ ವಸ್ತುವನ್ನು ಪರೀಕ್ಷಿಸುವ ಪ್ರಶ್ನೆ ಬಂದಾಗ, ಇಲ್ಲವೆ ಯಾರಾದರೂ ಒಂದು ಕೆಲಸವನ್ನು ಮಾಡಿತೋರಿಸುವಾಗ ವಿದ್ಯಾರ್ಥಿಯ ಲಕ್ಷ್ಯವು ಹೆಚ್ಚು ಸ್ಥಿರವಾಗಿರುವದು. ಆದ್ದರಿಂದ ಸಾಲೆಯಲ್ಲಿ ಶಿಕ್ಷಕರ ಶಿಕ್ಷಣದ ಆರಂಭದ ತಂತ್ರವು ವಸ್ತುಗಳನ್ನು ಬಳಸಿ ಅಥವಾ ಕೆಲಸಗಳನ್ನು ಮಾಡಿ ವರ್ಣಿಸಿ ಸಾಧಿಸಲ್ಪಡ ಬೇಕು. ತಾತ್ಪಿಕ ಕುತೂಹಲ ಅಥವಾ ವಸ್ತು ವಸ್ತುಗಳ ನಡುವೆ ಇರುವ ಕಾರ್ಯಕಾರಣಾದಿ ಸಂಬಂಧ, ಇವು ಪ್ರೌಢ ವಯಸ್ಸಿನ ಹಂತಕ್ಕೆ ಬರುವ ವರೆಗೆ ಜಾಗ್ರತವಾಗುವದಿಲ್ಲ. ಒಮ್ಮೊಮ್ಮೆ ಅಚಾನಕ್ ಆಗಿ ಹುಡುಗರು "ದೇವರನ್ನು ಯಾರು ಮಾಡಿದರು?", "ನಮಗೆ ಐದೇ ಬೆರಳುಗಳು ಯಾಕೆ ಇರುವವು?" ಇತ್ಯಾದಿ ಕೇಳುವ ಪ್ರಶ್ನೆಗಳಿಗೆ ನಾವು ವಿಶೇಷ ಮಹತ್ವ ಕೊಡಬೇಕಾದುದಿಲ್ಲ. ಆದರೆ ಒಮ್ಮೆ ವಿದ್ಯಾರ್ಥಿಯಲ್ಲಿ ತಾತ್ಪಿಕ ಪೈಚಾರಿಕ ಕುತೂಹಲವು ಜಾಗ್ರತವಾಯಿತೆಂದರೆ ಕಲಿಯುವ ಒಂದು ಹೊಸ ತಂತ್ರವೇ ಅವನಿಗೆ ಸೇರಹತ್ತುವದು. ಸಯುಕ್ತಿಕತೆ, ಸಮರ್ಪಕತೆ, ಕಾರ್ಯಕಾರಣ ಸಂಬಂಧ, ಕಲ್ಪನಾ ಅರ್ಥ ಪೂರ್ಣ ವಿಚಾರಗಳು ಅವನಲ್ಲಿ ಆಸಕ್ತಿಯನ್ನು ಹುಟ್ಟಿಸುವವು. ಶಿಕ್ಷಕರಿಗೆ ಇದು ಗೊತ್ತಿದೆ. ಇಂತಹ ಅನಾಸಕ್ತ ಜಿಜ್ಞಾಸೆಯನ್ನು ಸಾಲೆಯಲ್ಲಿ ಕಲಿಯುವ ಮಕ್ಕಳಲ್ಲಿ– ಖಂಡಿತವಾಗಿ ಶಿಕ್ಷಕರು ಉದ್ಭೋಧಿಸಬಹುದು; ವಯಸ್ಕರನ್ನು ತಕ್ಕೊಂಡರೆ ಅದು ಹೆಚ್ಚು ಕಠಿಣವಾದುದು, ಅವರಲ್ಲಿ ಈ ಬೌದ್ಧಿಕ ಕುತೂಹಲವು ಮುಂದವಾಗಿ ಬಿಟ್ಟಿರುವದು— ಏನೋ ಒಂದು ಸ್ವಾರ್ಥ ಸಾಧನೆಯ ಕಾರ್ಯಕ್ಕೆ ಅದು ಸಂಬಂಧಪಟ್ಟಿದ್ದರೆ ಆಗ ಮಾತ್ರ ಅದು ಚೇತರಿಸಬಹುದು.

ಕೆಲವು ವಿಶಿಷ್ಟ ಪ್ರಕಾರದ ವಸ್ತುಗಳು ಮಕ್ಕಳ ಲಕ್ಷ್ಯವನ್ನು ಬೇಗನೆ ಎಳೆಯುವವು. ಎದುರಿಗಿರುವ ಪ್ರತ್ಯಕ್ಷ ವಸ್ತುಗಳು, ಚಲಿಸುವ ವಸ್ತುಗಳು, ಜೀವಂತ ಪ್ರಾಣಿಗಳು, ಮನುಷ್ಯನ ಕೆಲಸಗಳು, ಮನುಷ್ಯನ ನಡತೆಯ ವರ್ಣನೆಗಳು ಇವು ಅವನ ಗಮನವನ್ನು ಸೆಳೆದಷ್ಟು ವಿಚಾರ ಪ್ರಸಂಚವು ಅವನ ಮನಸ್ಸನ್ನು ಆಕರ್ಷಿಸುವ ದಿಲ್ಲ. ಇದರಿಂದ, ವಸ್ತುಪಾಠಗಳ ಪದ್ಧತಿಯೂ, ಹಸ್ತಶಿಕ್ಷಣ ಪದ್ಧತಿಯೂ ಮಕ್ಕಳ ಶಿಕ್ಷಣದಲ್ಲಿ ವಿಶೇಷ ಪ್ರಯೋಜನವನ್ನು ಪಡೆದಿವೆ ಎಂಬುದು ತಿಳಿಯುವದು.

ಅನುಕರಣ: ಮಾನವನು ಸರ್ವೋತ್ಕೃಷ್ಟ ಅನುಕರಣಪ್ರಿಯ ಪ್ರಾಣಿಯೆಂದೂ ಗಣಿಸಲಾಗಿದೆ. ಮನೋವಿಜ್ಞಾನದ ಯಾವ ಪುಸ್ತಕವನ್ನು ತೆಗೆದು ನೋಡಿದರೂ ಈ ವಿಷಯಕ್ಕೆ ಒಂದು ಪರಿಚ್ಛೇದವನ್ನಾದರೂ ಕೊಡದೆ ಹೋಗುವದಿಲ್ಲ. ಆದರೂ ಅದರ ಪರಿಪೂರ್ಣವ್ಯಾಪ್ತಿಯ ಪೂರ್ಣಸ್ವರೂಪವು ಮಾತ್ರ ಇತ್ತಿತ್ತಲಾಗಿ ಸಂಶೋಧನೆಗಳಿಂದ ಪ್ರಕಟವಾಗುತ್ತಿದೆ. ಮಸ್ಯರ್ ತಾರ್ಡ್ ಎಂಬ ಫ್ರೆಂಚ್ ವಿದ್ವಾಂಸನು ತನ್ನ ಅಪ್ರತಿಮ, ಅತ್ಯುತ್ತಮವಾದ "ಲೇ ಲ್ವಾ ದ ಲಾಮಿಟೇಸಿಯಾ" ಎಂಬ ಗ್ರಂಥದಲ್ಲಿ

ಈ ಸಂಶೋಧನೆಗೆ ಮಾರ್ಗದರ್ಶನ ಮಾಡಿದ್ದಾನೆ; ಅಮೇರಿಕೆಯಲ್ಲಿ ರಾಯ್ಸ್ ಮತ್ತು ಬಾಲ್ಡ್ವಿನ್ ಎಂಬ ಪ್ರಾಚಾರ್ಯರು ಆ ವಿಷಯವನ್ನು ಮುಂದೆವರಿಸುತ್ತಿದ್ದಾರೆ. ನಾವೆಲ್ಲರೂ–ಪ್ರತಿಯೊಬ್ಬರೂ–ನಾವೇನು ಇರುವೆವೋ, ಏನು ಆಗಿರುವೆವೋ–ಅದೆಲ್ಲ ನಮ್ಮಲ್ಲಿದ್ದ ಅನುಕರಣ ಪ್ರೇರಣೆಯಿಂದಲೇ. ಇತರರನ್ನು ಅನುಕರಣ ಮಾಡಿದ ಮೇಲೆ ನಮಗೆ ನಾವು ಏನು ಇರುವೆವು ಎಂಬ ಅರಿವು ಆಗುವದು—ಇತರರು ಹೇಗಿರುವರು ಎಂಬದರ ಅರಿವು ಮೊದಲಿನದು–ಗುಣರೂಪಾಕೃತಿಯ ಕಲ್ಪನೆಯಿಂದ ನಮ್ಮ ವ್ಯಕ್ತಿತ್ವದ ಭಾವವು ಬೆಳೆಯುವದು. ಒಂದು ವಿಧದ ಸಾಮಾಜಿಕ ಅನುವಂಶಿಕತೆಯಿಂದ–ಮಾನವ ಕುಲದ ಸಕಲ ಸಂಗೃಹೀತವಾದ ಸಂಪತ್ತು–ಭಾಷೆಗಳು, ಕಲೆಗಳು, ಸಂಸ್ಥೆಗಳು, ವಿಜ್ಞಾನಗಳು– ಒಂದು ತಲೆಮಾರಿನವರಿಂದ ಇನ್ನೊಂದು ತಲೆಮಾರಿನವರೆಗೆ ದತ್ತವಾಗಿವೆ.– ಪ್ರತಿಯೊಂದು ತಲೆಮಾರಿನವರು ತಮ್ಮ ಹಿಂದಿನ ತಲೆ ಮಾರಿನವರ ಕೇವಲ ಅನುಕರಣ ಮಾಡುವವರಾಗಿದ್ದಾರೆ ಎಂದು ಪ್ರೊಫೆಸರ್ ಬಾಲ್ಡ್ವಿನ್ ಅವರು ಪ್ರತಿಪಾದಿಸಿದ್ದಾರೆ. ಅನುಕರಣ, ನವೀನಸೃಷ್ಟಿ, ನಿರ್ಮಿತಿ— ಈ ಎರಡು ಕಾಲುಗಳ ಮೇಲೆ ಮಾನವಕುಲವು ಐತಿಹಾಸಿಕವಾಗಿ ನಡೆದು ಬಂದಿದೆ– ಎಂದು ಹೇಳಬಹುದು.

ಅನುಕರಣವು ಬರಬರುತ್ತ ಸ್ಪರ್ಧೆಯ, ಸರಿಗಟ್ಟಿಗೊಳ್ಳುವ ಪ್ರವೃತ್ತಿಯಲ್ಲಿ ಪರಿವರ್ತಿತವಾಗುತ್ತದೆ. ಇನ್ನೊಬ್ಬರು ಮಾಡುತ್ತಿರುವದನ್ನು ನೋಡಿ ಅವನಿಗಿಂತ ಕಡಿಮೆ ಯೋಗ್ಯತೆಯವನು ತಾನಾಗಬಾರದೆಂದು ಅವನನ್ನು ಅನುಕರಣ ಮಾಡುವದೇ ಸ್ಪರ್ಧೆಯಾಗಿರುತ್ತದೆ. ಈ ಎರಡೂ ಪ್ರವೃತ್ತಿಗಳು ಅನುಷ್ಠಾನದಲ್ಲಿ ಬರುವಾಗ ಅವುಗಳಲ್ಲಿರುವ ಭೇದವನ್ನು ಗುರ್ತು ಹಿಡಿಯುವದು ಕಷ್ಟ. ಸ್ಪರ್ಧೆಯ ಪ್ರವೃತ್ತಿಯು ಮಾನವ ಸಮಾಜದ ಜೀವನಾಡಿ, ನರವಿದ್ದಂತೆ. ಭಾಷಣಕಾರನ ಭಾಷಣವನ್ನು ಕೇಳಲು ಜನರು ಏಕೆ ಆತುರರಿರುತ್ತಾರೆ? ಶಿಕ್ಷಕರ ಸಂಘಗಳನ್ನು ನೀವು ಏಕೆ ರಚಿಸಿಕೊಳ್ಳುತ್ತೀರಿ? ಪ್ರತಿಯೊಂದು ಉದ್ಯೋಗದವರೂ ತಮ್ಮದೇ ಆದ ಒಂದು ಸಂಘವನ್ನು ಕಟ್ಟಿಕೊಂಡಿರುತ್ತಾರೆಂದಲ್ಲವೇ? ಮಕ್ಕಳು ನಿಮ್ಮ ಸಾಲೆಗೆ ಏಕೆ ಕಲಿಯಲು ಬರುತ್ತಾರೆ? ಏಕೆಂದರೆ ಅವರ ಪಾಲಕರು ನೆರೆಹೊರೆಯವರೆಲ್ಲರೂತಮ್ಮ ಮಕ್ಕಳನ್ನು ನಿಮ್ಮ ಸಾಲೆಗೆ ಕಳಿಸುವದನ್ನು ನೋಡಿ, ಒಬ್ಬೊಂಟಿಗರಾಗಿ ಅಥವಾ ವಿಚಿತ್ರ ಸ್ವಭಾವದವರಾಗಿ ಇರಲು ನಾವು ಇಷ್ಟಪಡುವದಿಲ್ಲ. ನಮ್ಮ ನೆರೆಯವರು ಸ್ಪೃಹಣೀಯ ಲಾಭಗಳೆಂದು ತಿಳಿಯುವ ಬಂಡವಾಳದಲ್ಲಿ ನಾವೂ ನಮ್ಮದೊಂದು ಪಾಲು ಇರಬೇಕೆಂದು ಬಯಸುವದರ ಮೂಲವೇ ಈ ಸ್ಪರ್ಧೆಯ ಪ್ರವೃತ್ತಿಯಾಗಿದೆ.

ಸಾಲೆಯ ವರ್ಗದ ಕೋಣೆಯಲ್ಲಿ ಅನುಕರಣ, ಸ್ಪರ್ಧೆಗಳಿಗೆ ಅತ್ಯುಚ್ಚವಾದ ಒಂದು ಸ್ಥಾನವಿರುವದು. ಕೆಲವು ಕಾರ್ಯಗಳನ್ನು ಮಕ್ಕಳ ತಂಡತಂಡಗಳೆಲ್ಲ ಕೂಡಿ ಮಾಡುವದರ ಪ್ರಯೋಜನವು ಪ್ರತಿಯೊಬ್ಬ ಶಿಕ್ಷಕನಿಗೆ ತಿಳಿದ ವಿಷಯ. ಯಾವ ಶಿಕ್ಷಕನ ರೀತಿ ನೀತಿಗಳು ಎಲ್ಲಕ್ಕೂ ಹೆಚ್ಚು ಅನುಕರಣ ಯೋಗ್ಯವೆಂದು ಅನಿಸುವವೋ ಆತನೇ ತನ್ನ ಗುರಿಯನ್ನು ಯಶಸ್ವಿಯಾಗಿ ಸಾಧಿಸಬಲ್ಲನೆಂದು ತಿಳಿಯಬಹುದು. ತನಗೆ ಮಾಡಲಿಕ್ಕೆ ಬಾರದ ಯಾವ ಕೆಲಸವನ್ನೂ ಮಕ್ಕಳಿಂದ ಮಾಡಿಸಲು ಧಾಡಸಿಕ ಬಾರದು. "ಹೋಗಿರಿ, ನಿಮ್ಮ ಪುಸ್ತಕದಲ್ಲಿ ಹೇಳಿದಂತೆ ಮಾಡಿರಿ" ಎನ್ನುವದಕ್ಕಿಂತ, "ಬನ್ನಿ, ಹೇಗೆ ಮಾಡಬೇಕೆಂದು ನಾನು ತೋರಿಸುತ್ತೇನೆ" ಎನ್ನುವ ಮಂತ್ರವು ಹೆಚ್ಚು ಪ್ರಚೋದಕನಾದದ್ದು. ಜಾಣತನ, ಹಸ್ತಕೌಶಲ್ಯ ಇದ್ದ ಶಿಕ್ಷಕನನ್ನು ಹುಡುಗರು ಮೆಚ್ಚುವರು. ಅವನು ಮಾಡುವದನ್ನು ನೋಡಿದರೆ ಸುಲಭವೆನಿಸುವದು; ತಾವೂ ಅಷ್ಟೇ ಚನ್ನಾಗಿ ಮಾಡಲು ತವಕಿಸುವರು. ಮಂದ ಬುದ್ಧಿಯ ನಿರ್ಜೀವ ಶಿಕ್ಷಕನೂ, "ಲಕ್ಷ್ಯಕೊಡಿರಿ, ಆಸ್ಥೆ ವಹಿಸಿರಿ, ತಿಳಿದುಕೊಳ್ಳಿರಿ" ಎಂದು ಮಕ್ಕಳೆದುರಿಗೆ ಎಷ್ಟು ಕೂಗಿಕೊಂಡರೂ ನಿಷ್ಫಲವೇ. ತಾನು ಮೊದಲು ಆಸ್ಥೆ ವಹಿಸಬೇಕು; ಆಗ ಅವನ ಉದಾಹರಣೆಯು ಎಲ್ಲ ಉಪದೇಶಕ್ಕಿಂತ ಫಲಕಾರಿಯಾಗುವದು.

ಪ್ರತಿಯೊಂದು ಸಾಲೆಯದೂ ಒಂದು ವಿಶಿಷ್ಟ ನೈತಿಕ ಬೌದ್ಧಿಕ ವಾತಾವರಣವಿರುವದು. ಈ ವೈಶಿಷ್ಟ್ಯವು ಪರಂಪರೆಯಿಂದ ಬಂದದ್ದು; ಅದು ಹಿಂದಿನ ಶಿಕ್ಷಕರೂ, ಪ್ರಭಾವಶಾಲಿಯಾದ ಗಟ್ಟಿಗರಾದ ಹಲವು ಹಿಂದಿನ ವಿದ್ಯಾರ್ಥಿಗಳೂ ಪಾಕಕೊಟ್ಟದ್ದು, ಉಳಿದವರು ಅದನ್ನು ತೀಡಿದ್ದು, ಹೀಗೆ ಒಂದು ತಂಡದವರು ಮುಂದಿನ ತಂಡದವರಿಗೆ ಹಾದಿಯನ್ನು ತೋರಿಸಿದ್ದು ಆಗಿರುವದು. ಹೊಸದಾಗಿ ಬಂದ ವಿದ್ಯಾರ್ಥಿಗಳು ಕೂಡಲೆ ಅದನ್ನೇ ಹಿಂಬಾಲಿಸುವರು. ಸಾಲೆಯ ಈ ಒಂದು ವಿಶಿಷ್ಟ ಅಚ್ಚು ಕಟ್ಟು ಬದಲಾಗುವದು ಬಹಳ ನಿಧಾನವಾಗಿ. ಹೊಸ

ಪ್ರಭಾವಶಾಲಿಗಳಾದ ವ್ಯಕ್ತಿಗಳು ಬಂದು ಬರಿಯ ಇದ್ದ ಹಳೆಯದನ್ನು ಅನುಸರಿಸದೆ ಹೊಸ ಮಾದರಿಗಳನ್ನು ತೋರಿಸಿ ಕೊಟ್ಟಾಗ ಅವರ ವರ್ಚಸ್ಸಿನಿಂದ ಆಗುವದು.

ಇತ್ತೀಚಿನ ಶಿಕ್ಷಣ ಪದ್ಧತಿಗಳ ಸುಧಾರಣೆಯಲ್ಲಿ ಸ್ಪರ್ಧೆಯ ಸಹಜ ವೃತ್ತಿಯ ಪ್ರಯೋಜನದ ಬಗ್ಗೆ ಒಂದಿಷ್ಟು ಅಸಡ್ಡೆಯ ಧ್ವನಿಯು ಕೇಳಬರುತ್ತಿದೆ. ಆದರ್ಶ ಶಿಕ್ಷಣ ವಿಚಾರದಲ್ಲಿ ಇಬ್ಬರು ವಿದ್ಯಾರ್ಥಿಗಳಲ್ಲಿ ಪರಸ್ಪರ ಸ್ಪರ್ಧೆಯು ಇರುವದು ಕೀಳೆಂದು ಬಗೆಯಬೇಕು ಎಂದು ರೂಸೋ ಶಿಕ್ಷಣ ತಜ್ಞನು ತನ್ನ 'ಏಮಿಲ್' ಎಂಬ ಪುಸ್ತಕದಲ್ಲಿ ತಿಳಿಸಿದ್ದಾನೆ. ಇದು ನೂರಾರು ವರ್ಷದ ಹಿಂದಿನ ಮಾತು. "ಏಮಿಲನನ್ನು ಇತರ ಹುಡುಗನೊಂದಿಗೆ ತನ್ನನ್ನು ಹೋಲಿಸಿಕೊಳ್ಳುವದಕ್ಕೆ ಬಿಡಬೇಡಿರಿ. ತಿಳುವಳಿಕೆ, ವಿಚಾರ ಅವನಲ್ಲಿ ಹುಟ್ಟಿದ ಕೂಡಲೆ ಸ್ಪರ್ಧೆಗೆ–ಓಡುವದರಲ್ಲಿ ಸಹ–ಅವಕಾಶ ಕೊಡ ಬೇಡಿರಿ. ಇನ್ನೊಬ್ಬನನ್ನು ನೋಡಿ ಅಹಂಕಾರ ಹೊಟ್ಟೆ ಕಿಚ್ಚುಗಳಿಂದ ಪ್ರೇರಿತನಾಗಿ ಯಾವದನ್ನು ಕಲಿಯಬಲ್ಲವ ನಾಗಿದ್ದನೋ ಅದನ್ನು ಆತನು ಕಲಿಯದೇ ಇರುವದು ಎಷ್ಟೋ ಲೇಸು. ಆದರೆ ಅವನು ಪ್ರತಿ ವರ್ಷ ಪಡೆದ ಪ್ರಗತಿಯನ್ನು ನಾನು ಲಕ್ಷ್ಯದಲ್ಲಿಟ್ಟು ಅದನ್ನು ಅವನ ಮುಂದಿನ ವರ್ಷಗಳ ಪ್ರಗತಿಯೊಂದಿಗೆ ಹೋಲಿಸಿ ನೋಡು ವೆನು. ಆಗ ನಾನು ಅವನಿಗೆ ಅನ್ನುವೆನು, "ಈಗ ನೀನು ಇಷ್ಟು ಇಂಚು ಎತ್ತರವಾಗಿದ್ದೀ; ಇದು ನೀನು ಜಿಗಿದು ದಾಟಿದ ಕಾಲುವೆ; ಇದು ನೀನೆ ಎತ್ತಿದ ಭಾರ; ಅಗೋ ಅದು ನೀನು ಹರಳನ್ನು ಒಗೆದ ದೂರದ ಗುರಿ; ಆ ಅಂತರವು ನೀನು ದಮ್ಮು ಹತ್ತದೆ ಓಡಿ ಹೋಗಿ ನಿಂತದ್ದು; ನೋಡು ಈಗ ನಿನಗೆ ಎಷ್ಟೆಷ್ಟು ಹೆಚ್ಚು ಸಾಮರ್ಥ್ಯ ಬಂದಿದೆ" ಈ ರೀತಿಯಾಗಿ ಅವನು ಇತರರನ್ನು ನೋಡಿ ಅಸೂಯೆ ಪಡದಂತೆ ಅವನನ್ನು ಪ್ರೋತ್ಸಾಹಿಸು ವೆನು. ತನ್ನ ಹಿಂದಿನ ಮಟ್ಟವನ್ನು ಮೀರಲು ಅವನಿಗೆ ಅಪೇಕ್ಷೆಯಾಗುವಂತೆ ಮಾಡುವೆನು. ತನ್ನ ಹಿಂದಿನ ಅಸ್ತಿತ್ವದೊಂದಿಗೆ ಸ್ಪರ್ಧಿಸುವ ಈ ರೀತಿಯಲ್ಲಿ ನನಗೇನೂ ಕೆಡಕು ಕಾಣುವದಿಲ್ಲ".

ಇನ್ನೊಬ್ಬನನ್ನು ಮೆಟ್ಟಿ ಹಾಕಬೇಕೆಂಬ ಬುದ್ಧಿಗಿಂತ ತನ್ನ ಹಿಂದಿನ ಸಾಧನೆಯೊಂದಿಗೆ ಸ್ಪರ್ಧೆಯನ್ನಿಟ್ಟುಕೊಳ್ಳು ವದು ಉದಾತ್ತಭಾವನೆಯೇನೋ ಹೌದು. ತರುಣರ ವಿದ್ಯಾಭ್ಯಾಸದಲ್ಲಿ ಅದಕ್ಕೆ ವಿಸ್ತೃತವಾದ ಅವಕಾಶವಿರು ವದು. ಆದರೆ ಒಬ್ಬ ತರುಣನ ಇನ್ನೊಬ್ಬರ ಸಂಗಡ ಇಟ್ಟುಕೊಳ್ಳಬಹುದಾದ ಎಲ್ಲ ವಿಧದ ಸ್ಪರ್ಧೆಯನ್ನು ಕೆಟ್ಟದೆಂದೂ ಪ್ರತಿಬಂಧಿಸುವದು— ಇಂತಹ ಸ್ಪರ್ಧೆಯು ದುರಾಸೆ. ಸ್ವಾರ್ಥಕ್ಕೆ ಬಲವಾಗಿ ಎಳೆಯಬಹುದು ಎಂಬ ಕಾರಣದಿಂದ— ಒಂದು ಅತಿರೇಕ ಇಲ್ಲವೆ ಮೂಢ ನಂಬಿಗೆ ಎಂದು ಹೇಳಬೇಕು. ಈ ವಿರಾಟದ ಭಾವನೆಯು ನಮ್ಮ ಜೀವನದ ತಳಪಾಯವೇ ಆಗಿದೆ; ಎಲ್ಲ ಸಾಮಾಜಿಕ ಸುಧಾರಣೆಯು ಅದರಿಂದಲೇ ಸಾಧಿಸಿದೆ. ಸ್ಪರ್ಧೆಯ ಲ್ಲಿಯೂ ಎರಡು ಪ್ರಕಾರಗಳು— ಒಂದು ಶ್ರೇಷ್ಠ, ಉದಾತ್ತವಾದ ಹೋರಾಟ, ಇನ್ನೊಂದು ಅಸಹನೆ, ದುರಾಶೆಯಿಂದ ಕೂಡಿದ ಕಲಹ. ಬಾಲ್ಯದಲ್ಲಿ ಮೊದಲ ನೆಯ ಉದಾರಭಾವನೆಯ ಸ್ಪರ್ಧೆಯೇ ಸಾಧಾರಣವಾಗಿ ಕಂಡು ಬರುವದು. ಇನ್ನೊಬ್ಬನಿಗಿಂತ ಮೇಲ್ ನಂಬರನ್ನು ಪಡೆಯಬೇಕೆಂಬ ಈ ಬುದ್ಧಿಯೇ ಕ್ರೀಡಾಂಗಣದಲ್ಲಿ ಉತ್ಸಾಹವನ್ನು ತರುವದು; ಆದರೆ ಅದೇ ವಿದ್ಯಾರ್ಥಿಗಳಲ್ಲಿ ನ್ಯಾಯನಿಷ್ಠುರತೆ, ದೊಡ್ಡ ಮನಸ್ಸು ಇವನ್ನು ವಿಕಾಸ ಗೊಳಿಸಬಲ್ಲವು. ಶಿಕ್ಷಕನು ಇಂತಹ ಸಾಧನೆಯನ್ನು ಉಪೇಕ್ಷೆ ಮಾಡಬಲ್ಲನೇ? ಗುಣಾಂಕಗಳು, ಪ್ರಶಸ್ತಿಗಳು, ಇನಾಮುಗಳು ಇಂತಹ ಇತರ ಪ್ರಯತ್ನದ ದೃಷ್ಟಿಯನ್ನೆಲ್ಲ ವಿದ್ಯಾರ್ಥಿಗಳಲ್ಲಿ ಕಂಡು ಬಂದ ಉಚ್ಚಗುಣಗಳನ್ನು ಪ್ರೋತ್ಸಾಹಿಸುವ ಎಲ್ಲ ವಿಧಾನಗಳನ್ನು ನಾವು ನಮ್ಮ ಸಾಲಿಗಳಿಂದ ಬಹಿಷ್ಕರಿಸಬೇಕೆಂದು ಅಶಿಸೋಣವೇ? ವಿಲಿಯಮ್ ಜೇಮ್ಸ್‌ರಂಥ ಮನೋವಿಜ್ಞಾನಿಗಳು ಈ ದೃಷ್ಟಿಯ ವಿಷಯದಲ್ಲಿ ಸಾಶಂಕರಾಗಿದ್ದಾರೆ.

(ಮುಂದುವರಿಯುವದು)

ಜೀವನ ಶಿಕ್ಷಣ ಶಾಲೆಗಳಲ್ಲಿ ಶಿಕ್ಷಣ ಮಾಪನ

[ಲೇಖಕರು :— **ಶ್ರೀ ಡಿ. ಎಸ್. ಕುಲಕರ್ಣಿ,** B.Sc., M.Ed., D.B.E.]

ಜೀವನ ಶಿಕ್ಷಣದ ಯಶಸ್ಸಿನ ಬಗ್ಗೆ ಇನ್ನೂ ಕೆಲವು ಜನರ ಮನಸ್ಸಿನಲ್ಲಿ ಸಂದೇಹವಿದೆ. ಇದಕ್ಕೆ ಕಾರಣವೆಂದರೆ ಜೀವನ ಶಿಕ್ಷಣ ಶಾಲೆಗಳಲ್ಲಿಯ ಮಕ್ಕಳ ಮಟ್ಟವನ್ನು ಅಳೆಯುವ ಸಾಧನಗಳು ನಿಶ್ಚಿತವಾಗಿಯೂ ಮತ್ತು ಸಾಕಷ್ಟು ಇರದಿರುವದೇ ಮುಖ್ಯವಾಗಿದೆ. ಆದುದರಿಂದ ಜೀವನ ಶಿಕ್ಷಣ ಶಾಲೆಗಳಲ್ಲಿ ದುಡಿಯುವ ಶಿಕ್ಷಕರು ಮಕ್ಕಳ ಮಟ್ಟವನ್ನು ಹೇಗೆ ತಿಳಿದುಕೊಳ್ಳಬೇಕೆಂಬುದನ್ನು ಈ ಲೇಖನದಲ್ಲಿ ನನಗೆ ತಿಳಿದ ಮಟ್ಟಿಗೆ ವಿವರಿಸಲು ಪ್ರಯತ್ನಿಸಿದ್ದೇನೆ.

ಜೀವನ ಶಿಕ್ಷಣ ಶಾಲೆಯ ಮಕ್ಕಳ ವೈಕ್ಷಣಿಕ ಅರ್ಹತೆಯ ಮಾಪನವು ಅವರು ಚಟುವಟಿಕೆಗಳಲ್ಲಿ ತೋರಿಸುವ ನೈಪುಣ್ಯತೆ, ಅವರು ಅವುಗಳನ್ನು ಸಂಘಟಿಸುವ ರೀತಿ ಮತ್ತು ಅವರು ಇವುಗಳ ಮುಖಾಂತರ ಪಡೆಯುವ ಜ್ಞಾನದಪರಿಶೀಲನೆಯ ಮುಖಾಂತರ ಸಾಗಬೇಕು, ಆದರೂ ನಾವು ಇಂದಿನ ಪರಿಸ್ಥಿತಿಗನುಗುಣವಾಗಿ ಮತ್ತು ಅಭ್ಯಾಸ ಪತ್ರಿಕೆಗೆ ಹೊಂದಿಕೆಯಾಗುವಂತೆ ವೌಲ್ಯ ಮಾಪನಗಳನ್ನು ನಿರ್ಮಿಸಬೇಕಾಗಿರುವದರಿಂದ ವಿಷಯಗಳ ಪ್ರಕಾರ ಕೆಲವು ಸಲಹೆಗಳನ್ನು ಈ ಲೇಖನದಲ್ಲಿ ವಿವರಿಸಿದೆ.

ಮಕ್ಕಳ ಮಟ್ಟವನ್ನು ಅಳೆಯುವಾಗ ಈ ವರೆಗೆ ನಾವು ಸಾಂಪ್ರದಾಯಿಕ ಪರೀಕ್ಷಾ ಪದ್ಧತಿಗಳನ್ನು ಅವಲಂಬಿಸಿದ್ದೆವು. ಇದರಿಂದ ಮಕ್ಕಳ ಬೌದ್ಧಿಕ ಮಟ್ಟವು ಮಾತ್ರ ನಮಗೆ ಗೊತ್ತಾಗುತ್ತಿತ್ತೇ ವಿನಃ ಮಗುವಿನಲ್ಲಿ ಹುದುಗಿರುವ ಗುಣಗಳ ಪರೀಕ್ಷೆಯಾಗುತ್ತಿರಲಿಲ್ಲ. ಆದರೆ ಜೀವನ ಶಿಕ್ಷಣದ ಗುರಿಯು ಕೇವಲ ಮಗುವಿನ ಬುದ್ಧಿ ವಿಕಾಸ ಮಾತ್ರವಲ್ಲದೆ ಮಗುವಿನ ಸರ್ವಾಂಗೀಣ ಉನ್ನತಿ ಅಂದರೆ ಶಾರೀರಿಕ, ಬೌದ್ಧಿಕ, ಕಲಾತ್ಮಕ ಹಾಗು ಆಧ್ಯಾತ್ಮಿಕ ಬೆಳವಣಿಗೆಯನ್ನುಂಟು ಮಾಡುವದೇ ಆಗಿರುತ್ತದೆ. ಕೇವಲ ವಿಷಯಗಳ ಪರೀಕ್ಷೆಯನ್ನು ತೆಗೆದುಕೊಳ್ಳುವದರಿಂದ ಮಗುವಿನ ಬೌದ್ಧಿಕ ಮಟ್ಟವನ್ನು ತಿಳಿಯಲು ಮಾತ್ರ ಸಾಧ್ಯವಾಗುತ್ತದೆ. ಆದರೆ ಉಳಿದವುಗಳಾದ ಶಾರೀರಿಕ, ಕಲಾತ್ಮಕ ಮತ್ತು ಆಧ್ಯಾತ್ಮಿಕ ಬೆಳವಣಿಗೆಗಳನ್ನು ತಿಳಿಯಲು ಅನುವಾಗುವದಿಲ್ಲ. ಜೀವನ ಶಿಕ್ಷಣ ಶಾಲೆಗಳಲ್ಲಿ ಕೇವಲ ಬೌದ್ಧಿಕ ಬೆಳವಣಿಗೆಯನ್ನು ಅಳೆಯುವದು ಉಚಿತವಾಗಲಾರದು. ಮಗುವಿನ ಪ್ರತಿಯೊಂದು ಅಂಗದ ಬೆಳವಣಿಗೆಯನ್ನು ಅಳೆಯುವದು ಅವಶ್ಯವಿದೆ. ಹೀಗೆ ಮಾಡುವಾಗ ಮಗುವಿನ ಮಾಪನದಲ್ಲಿ ಅವನು ಕಲಿತ ಎಲ್ಲ ಭಾಗಗಳ ಗಾತ್ರವಲ್ಲದೆ ಅದರಲ್ಲಿ ಅವನು ಪರಿಣತನೆಷ್ಟು ಆಗಿರುವನೆಂಬುದನ್ನು ಅಳೆಯಬೇಕು.

ಎಲ್ಲಕ್ಕೂ ಮೊದಲು ಬೌದ್ಧಿಕ ಮಟ್ಟವನ್ನು ಹೇಗೆ ಅಳೆಯಬೇಕೆಂಬುದನ್ನು ನೋಡುವಾ. ಎಷ್ಟೋ ಕಚ್ಚಾ ಜೀವನ ಶಿಕ್ಷಣ ಶಾಲೆಗಳಲ್ಲಿ ಪರೀಕ್ಷೆಗಳನ್ನು ತೆಗೆದುಕೊಳ್ಳದೆ ಕೇವಲ ಬಾಲಕರ ದಿನಚರಿಗಳ ಮೇಲೆಯೇ ಅವರ ಬುದ್ಧಿ ಮಟ್ಟವನ್ನು ಅಳೆಯುತ್ತಾರೆ. ಆದರೆ ಕೆಲವು ಜೀವನ ಶಿಕ್ಷಣ ಶಾಲೆಗಳಲ್ಲಿ ದಿನಚರಿಗಳನ್ನು ನೋಡುವದಲ್ಲದೆ ಅದರ ಕೂಡ ಕಾಲಕಾಲಕ್ಕೆ ಪರೀಕ್ಷೆಗಳನ್ನೇರ್ಪಡಿಸುವರು. ಇವೆರಡರ ಸಹಾಯದಿಂದ ಮಕ್ಕಳ ಬುದ್ಧಿ ಮಟ್ಟವನ್ನು ಅಳೆಯುವರು. ಕಾಲಕಾಲಕ್ಕೆ ಪರೀಕ್ಷೆಗಳನ್ನು ಏರ್ಪಡಿಸುವಾಗ ನಿಬಂಧ ಬರೆಹ ಪರೀಕ್ಷೆಗಳಿಗಿಂತ ವಸ್ತು ವಾಚಕ ಬರೆಹಗಳಿಗೆ ಹೆಚ್ಚು ಮಹತ್ವ ಕೊಡುವದುತ್ತಮ.

ಮಾತೃಭಾಷೆಯಲ್ಲಿ ಮಗುವಿನ ಬುದ್ಧಿ ಮಟ್ಟವನ್ನು ಅಳೆಯುವಾಗ ಕೆಳಗಿನಂತೆ ಮಗುವಿನ ಪರೀಕ್ಷೆಯನ್ನು ತೆಗೆದುಕೊಳ್ಳಬಹುದು. ಭಾಷೆಯ ಪರೀಕ್ಷೆಯನ್ನು ತೆಗೆದುಕೊಳ್ಳುವಾಗ ಮೂರು ಭಾಗಗಳನ್ನು ಮಾಡಬಹುದು. ಅವು ಯಾವವೆಂದರೆ (೧) ಮೌಖಿಕ ಪರೀಕ್ಷೆ (೨) ಬರೆಯುವದರಲ್ಲಿ ಜಾಣ್ಮೆ, (೩) ಮಾತು ಮತ್ತು ಬರೆಹಗಳ ಸಂಯೋಜನೆ.

(೧) ಮೌಖಿಕ ಪರೀಕ್ಷೆಯನ್ನು ಕೆಳಗಿನಂತೆ ತೆಗೆದುಕೊಳ್ಳಬಹುದು. ಮೌಖಿಕ ಪರೀಕ್ಷೆಗೆ ೫೦ ಗುಣಗಳೆಂದು ತಿಳಿದರೆ ಅವುಗಳನ್ನು ಕೆಳಗಿನಂತೆ ವಿಭಾಗಿಸಿ ಗುಣಗಳನ್ನು ಕೊಡಬಹುದು.

(೧) ಒಂದು ಅವತರಣಿಕೆ ಓದುವದು	(ಗುಣಗಳು)	೧೦
(೨) ಅದರ ಸಾರಾಂಶ ಕೊಡುವದು	,,	೧೦
(೩) ಕವಿತೆ ಅನ್ನುವದು	,,	೧೦
(೪) ಕವಿತೆಯ ಅರ್ಥಗ್ರಹಿಸುವದು	,,	೧೦
(೫) ಒಂದು ವಿಷಯದ ಬಗ್ಗೆ ಭಾಷಣ	,,	೧೦
	ಒಟ್ಟು	೫೦

(೨) ಲೇಖೀ ಪರೀಕ್ಷೆಯಲ್ಲಿ ಅದಷ್ಟು ವಸ್ತು ವಾಚಕ (ಬರಿಹಗಳಿರುವಂತೆ) ಪ್ರಶ್ನೆಗಳು ಇರುವಂತೆ ನೋಡಿಕೊಳ್ಳುವದುತ್ತಮ.

(೩) ಮಾತು ಮತ್ತು ಬರಿಹಗಳ ಸಂಯೋಜನೆ– ಯಾವದಾದರೊಂದು ವಿಷಯವನ್ನು ಕೊಟ್ಟು ಮಕ್ಕಳ ಸಿದ್ಧಭಾಷಣವನ್ನೇರ್ಪಡಿಸಬಹುದು.

ಗಣಿತ :— ಈ ವಿಷಯದ ಪರೀಕ್ಷೆಯನ್ನು ತೆಗೆದು ಕೊಳ್ಳುವಾಗ ಅದಷ್ಟು ಗಣಿತದ ತತ್ವಗಳು, ವಿಚಾರ, ಬುದ್ಧಿ ಮತ್ತು ಚಾಣಾಕ್ಷತನವನ್ನು ಹೊರಹೊಮ್ಮಿಸುವ ಲೆಕ್ಕಗಳಿರುವದೊಳಿತು. ಮೇಲಿನ ವರ್ಗಗಳಲ್ಲಿ ಅಚ್ಚು ಕಟ್ಟುತನ ಮತ್ತು ವೇಗ ಇವುಗಳ ಕಡೆಗೆ ಗಮನಕೊಡ ಬೇಕು. ಆದರೆ ಕೆಳಗಿನ ಮೂರು ವರ್ಗಗಳಲ್ಲಿ ಕೇವಲ ಅಚ್ಚುಕಟ್ಟುತನಕ್ಕೆ ಮಹತ್ವ ಕೊಡುವುದೊಳಿತು. ಪ್ರತಿ ಯೊಬ್ಬ ವಿದ್ಯಾರ್ಥಿಯ ಪ್ರತಿದಿನದ ಕೆಲಸ ಮಾಡುವ ರೀತಿಯನ್ನನುಸರಿಸಿ ಮತ್ತು ಮಾಸಿಕ, ತ್ರೈಮಾಸಿಕ, ಷಣ್ಮಾಸಿಕ, ವಾರ್ಷಿಕ ಪರೀಕ್ಷೆಗಳಲ್ಲಿ ಗುಣಗಳನ್ನು ಕೊಡಬೇಕು.

ಪೌರನೀತಿ :— ಮಕ್ಕಳು ದೈನಂದಿಕ ಮತ್ತು ಸಾಮಾಜಿಕ ಕಾರ್ಯಗಳಲ್ಲಿ ಭಾಗವಹಿಸುವ ರೀತಿ ಮತ್ತು ಅವುಗಳ ಬಗೆಗೆ ಇವರ ಮನೋಭಾವನೆಗಳಿಂದ ಅಳೆಯ ಬಹುದು. ಇದರ ಅಂಗವಾಗಿ ಬರುವ ಇತಿಹಾಸ ಹಾಗೂ ಭೂಗೋಲ ಈ ವಿಷಯಗಳನ್ನು ಮಕ್ಕಳು ವಾಚನಾಲಯ ದಲ್ಲಿ ಓದಿದ ಪುಸ್ತಕಗಳ ಮಹತ್ವದ ಭಾಗಗಳ ಟಿಪ್ಪಣಿ ಗಳನ್ನು ಇಡಲು ಹೇಳಿ ಅವುಗಳನ್ನು ಕಾಲ ಕಾಲಕ್ಕೆ ಶಿಕ್ಷಕರು ನಿರೀಕ್ಷಿಸಬೇಕು. ಮತ್ತು ಅವರು ಓದಿದ್ದನ್ನು ತಿಳಿದುಕೊಂಡ ಬಗ್ಗೆ ಪರೀಕ್ಷಿಸಬೇಕು. ಇದಲ್ಲದೆ ಅವುಗಳ ಆಧಾರವ ಮೇಲಿಂದ ಅವಶ್ಯವೆನಿಸಿದಲ್ಲಿ ಲೇಖೀಪರೀಕ್ಷೆ ಯನ್ನು ತೆಗೆದುಕೊಳ್ಳಬಹುದು.

ಸಾಮಾನ್ಯ ವಿಜ್ಞಾನ:— ವಿದ್ಯಾರ್ಥಿಯ ಸಂಕ್ಷಿಪ್ತ ಟಿಪ್ಪಣಿಗಳಿಂದ ಮತ್ತು ಲೇಖೀ ಪರೀಕ್ಷೆಗಳಿಂದ ಅಳೆಯ ಬಹುದು. ಇದಲ್ಲದೆ ಗೃಹಪಾಠಗಳು ಯೋಗ್ಯ ರೀತಿಯಿಂದ ಬರೆಯಲ್ಪಟ್ಟಿರುವವೋ ಹೇಗೆ ಎಂಬುದನ್ನು ನೋಡಬೇಕು.

ಕಲೆ ಹಾಗು ಗಾಯನ:— ಜೀವನ ಶಿಕ್ಷಣದಲ್ಲಿ ಬೌದ್ಧಿಕ ವಿಷಯಗಳಿಗೆ ಎಷ್ಟು ಮಹತ್ವವಿರುವದೋ ಅಷ್ಟೇ ಮಹತ್ವವು ಕಲೆ ಹಾಗು ಗಾಯನಗಳಿಗೆ ಇರುತ್ತದೆ. ಇವುಗಳನ್ನು ಕೆಳಗಿನವುಗಳ ಸಹಾಯದಿಂದ ಪರೀಕ್ಷಿಸ ಬಹುದು.

(೧) ಬಾಲಕರ ಚಿತ್ರಸಂಗ್ರಹ, ಕಲಾತ್ಮಕವಾದ ಸಾಮಾನುಗಳ ಸಂಗ್ರಹ ಮತ್ತು ಇವುಗಳನ್ನು ಇಡುವ ರೀತಿ.

(೨) ಸಿಂಗರಿಸುವ ಕಲೆಯಲ್ಲಿ ನಿಪುಣತೆ.

(೩) ಚಿತ್ರಕಲೆ, ಬಣ್ಣಕೊಡುವದು, ಮಣ್ಣಿನಿಂದ ವಸ್ತುಗಳನ್ನು ತಯಾರಿಸುವದು, ಇವುಗಳನ್ನು ತಯಾರಿ ಸುವಾಗ ಮಗುವುತೋರಿಸುವ ಪ್ರತಿಭೆ.

(೪) ಗಾಯನದಲ್ಲಿ ಅವನ ಜ್ಞಾನ–ಜಾನಪದ, ಲಘು ಮತ್ತು ಶಾಸ್ತ್ರೀಯ ಸಂಗೀತ.

(೫) ಸಾಮೂಹಿಕವಾಗಿ ಭಕ್ತಿಗೀತಗಳನ್ನು ಮತ್ತು ರಾಷ್ಟ್ರಗೀತೆಗಳನ್ನು ಅನ್ನುವದು.

(೬) ಉತ್ತಮ ಮತ್ತು ಕೆಟ್ಟ ಕಲಾಕೃತಿಗಳನ್ನು ಗುರುತಿಸಲು ಸಮರ್ಥನಿರುವನೇನೋ ಹೇಗೆ.

ಇವೆಲ್ಲವುಗಳನ್ನು ಶಿಕ್ಷಕನು ತನ್ನ ವರ್ಗದಲ್ಲಿ ಇರುವ ಪ್ರತಿಯೊಬ್ಬ ವಿದ್ಯಾರ್ಥಿಯ ಬಗ್ಗೆ ಪ್ರತಿದಿನ ಬರೆದಿಡುವು ದುತ್ತಮ. ಶಾಲೆಯಲ್ಲಿ ಪ್ರತಿಯೊಂದು ವರ್ಗದ ಪ್ರತಿ ಯೊಬ್ಬ ಮಗುವಿಗೆ ತನ್ನಲ್ಲಿರುವ ಪ್ರತಿಭೆಯನ್ನು ತೋರಿಸಲು ಅವಕಾಶವಿರಬೇಕು.

ಮೂಲೋದ್ಯೋಗದಲ್ಲಿ ಪ್ರಗತಿ:— ಮೂಲೋ ದ್ಯೋಗದ ಪ್ರತಿಯೊಂದು ಘಟ್ಟದಲ್ಲಿ ಬಾಲಕನು ಬುದ್ಧಿ ಕೌಶಲ್ಯವನ್ನು ಎಷ್ಟು ಪಡೆದಿರುತ್ತಾನೆಂಬುದನ್ನು ನೋಡ ಬೇಕು. ಬಾಲಕನ ಪ್ರಗತಿಯನ್ನು ಅಳೆಯುವಾಗ ಕೆಳಗಿನ ವುಗಳ ಕಡೆಗೆ ಲಕ್ಷ್ಯಗೊಡುವದುತ್ತಮ.

(೧) ಮಾಡಿದ ಕಾರ್ಯ. (೨) ಕಾರ್ಯದ ಗುಣ ಹಾಗು ಬಾಲಕನು ತೋರಿದ ಬುದ್ಧಿ, ವೇಗ ಮುಂತಾದವುಗಳು.

(೩) ಅದರ ಬಗ್ಗೆ ಆದರ. (೪) ಅದರಿಂದ ಗಳಿಸುವ ಸಾಮರ್ಥ್ಯ. (೫) ಶಾಸ್ತ್ರೀಯ ದೃಷ್ಟಿಕೋನ.

ಶಾರೀರಿಕ ಬೆಳವಣಿಗೆ:— ಇದನ್ನೂ ಸಹ ಮಕ್ಕಳ ದೈನಂದಿನ ಶಾರೀರಿಕ ಚಟುವಟಿಕೆಗಳ ಕಾರ್ಯಗಳಲ್ಲಿ ಭಾಗವಹಿಸುವದರ ಮೇಲಿಂದ ಅಳೆಯಬಹುದು.

(೧) ಮಗುವಿನ ಶಾರೀರಿಕ ಬೆಳವಣಿಗೆ, ತೂಕ, ಎತ್ತರ ಮೊದಲಾದವುಗಳು.

(೨) ಬಾಲಕನ ಆರೋಗ್ಯದ 'ರಿಕಾರ್ಡ'— ಬಾಲಕನ ಬೇನೆ ಬೇಸರಿಕೆಗಳು.

(೩) ಆಟಗಳಲ್ಲಿ ಬಾಲಕನು ಭಾಗವಹಿಸುವಿಕೆ.

(೪) ಬಾಲಕನ ಆರೋಗ್ಯದ ಚಟುವಟಿಕೆಗಳು.

ವ್ಯಕ್ತಿತ್ವದ ಬೆಳವಣಿಗೆ:— ಇದರಲ್ಲಿ ಬೌದ್ಧಿಕ ಮತ್ತು ಭಾವನಾತ್ಮಕ ಎಂದು ಸ್ಥೂಲವಾಗಿ ಎರಡು ಭಾಗಗಳನ್ನು ಮಾಡಬಹುದು. ಬೌದ್ಧಿಕ ಬೆಳವಣಿಗೆಗೆ ಸಹಾಯಕಗಳಾದ ವಿಷಯಗಳ ಮಟ್ಟವನ್ನು ಅಳೆಯುವ ವಿಧಾನವು ಈ ಹಿಂದೆ ಹೇಳಲ್ಪಟ್ಟಿದೆ. ವ್ಯಕ್ತಿಯ ಭಾವನೆಗಳು ಉತ್ತಮವಿದ್ದರೆ ಅವನ ಶೀಲವೂ (Character) ಕೂಡ ಉತ್ತಮವಿರುತ್ತದೆ. ಆದುದರಿಂದ ವ್ಯಕ್ತಿಯ ಭಾವನೆಗಳ ಬೆಳವಣಿಗೆಯನ್ನು ಅಳೆಯುವದೆಂದರೆ ಅವನ ಶೀಲವನ್ನು ಅಳೆದಂತೆಯೇ, ವ್ಯಕ್ತಿಯ ಶೀಲವನ್ನು ಕೆಳಗಿನವುಗಳ ಮುಖಾಂತರ ನಿರ್ಧರಿಸಬಹುದು. (೧) ಪ್ರತಿದಿನದ ಪಾಠಗಳನ್ನು ತಯಾರಿಸುವಲ್ಲಿ ನಿಯಮಿತತನ. (೨) ಪರೀಕ್ಷೆಯಲ್ಲಿ ಪ್ರಾಮಾಣಿಕತನ. (೩) ಶಿಕ್ಷಕರ ಅಪ್ಪಣೆಯನ್ನು ಪಾಲಿಸುವಿಕೆ. (೪) ಶಾಲೆಯ ಬಗ್ಗೆ ಅಭಿಮಾನ. (೫) ಆಟಗಳಲ್ಲಿ ನಿಯಮಾನುಸಾರವಾಗಿ ನಡೆಯುವದು. (೬) ಸತ್ಯತೆ. (೭) ಹಣದ ವ್ಯವಹಾರದಲ್ಲಿ ಪ್ರಾಮಾಣಿಕತನ. (೮) ಹೆಣ್ಣು ಮಕ್ಕಳ ಬಗ್ಗೆ ಆದರ ಭಾವನೆ. (೯) ಮಾತು, ಮನಸ್ಸು ಮತ್ತು ವಿಚಾರಗಳಲ್ಲಿರುವ ಪರಿಶುದ್ಧತೆ. (೧೦) ವೈಯಕ್ತಿಕ, ಶರೀರದ, ಅಡಿವೆಗಳ, ಮನೆಯ ಮತ್ತು ಶಾಲೆಯ ಬಗ್ಗೆ ಸ್ವಚ್ಛತೆ. (೧೧) ಬೇನೆಯವರ ಆರೈಕೆ. (೧೨) ಹಿಂದುಳಿದವರ ಬಗ್ಗೆ ಮತ್ತು ಬಡವರ ಬಗ್ಗೆ ಸಹಾನುಭೂತಿ. (೧೩) ಸತ್ಯಕ್ಕಾಗಿ ಹೋರಾಟ. (೧೪) ಅಭಿರುಚಿಗಳು (Hobbies).

ಸಾಂಘಿಕ ಜೀವನ:— ಇವುಗಳಲ್ಲಿ ದಿನನಿತ್ಯದ ಚಟುವಟಿಕೆಗಳು ಮತ್ತು ವಿಶೇಷ ಚಟುವಟಿಕೆಗಳೆಂದು ಎರಡು ಭಾಗಗಳನ್ನು ಮಾಡಬಹುದು. ಈ ಚಟುವಟಿಕೆಗಳಲ್ಲಿ ಬಾಲಕರು ಹೇಗೆ ವರ್ತಿಸುವರು ಮತ್ತು ಅವರ ಮನೋಭಾವನೆಗಳು ಈ ಚಟುವಟಿಕೆಗಳ ಕಡೆಗೆ ಹೇಗೆ ಇರುತ್ತವೆಂಬುದನ್ನು ನಿರೀಕ್ಷಿಸಿ ಶಿಕ್ಷಕರು ಪ್ರತಿಯೊಬ್ಬ ವಿದ್ಯಾರ್ಥಿಗೆ ಒಂದು ಪುಟವನ್ನು ಸಾಂಘಿಕ ಜೀವನದಲ್ಲಿ ಕೊಟ್ಟು ಬಾಲಕರು ಭಾಗವಹಿಸಿದ ರೀತಿಗಳ ಟಿಪ್ಪಣಿಯನ್ನು ಬರೆದಿಡಬೇಕು. ಬಾಲಕರ ಸಾಂಘಿಕ ಜೀವನದ ಚಟುವಟಿಕೆಗಳನ್ನು ನಿರೀಕ್ಷಿಸುವಾಗ ಶಿಕ್ಷಕರು ವೈಯಕ್ತಿಕ ರಾಗ-ದ್ವೇಷಗಳಿಗೆ ಎಳ್ಳಷ್ಟೂ ಎಡೆಕೊಡಬಾರದು. ನಿತ್ಯದ ಮತ್ತು ವಿಶೇಷ ಚಟುವಟಿಕೆಗಳನ್ನು ಕೆಳಗೆ ಕೊಟ್ಟಿದೆ.

ನಿತ್ಯದ ಚಟುವಟಿಕೆಗಳು:— ಶಾಲೆಯ ಸಭಾಯಿ, ವರ್ಗದ ಸಭಾಯಿ, ಪ್ರಾರ್ಥನೆ ಮೊದಲಾದ ಶಾಲೆಯಲ್ಲಿ ಪ್ರತಿದಿನ ನಡೆಯುವ ಚಟುವಟಿಕೆಗಳು. ವಿಶೇಷ ಚಟುವಟಿಕೆಗಳು:— (೧) ಶಾಲೆಯನ್ನು ಶೃಂಗರಿಸುವದು. (೨) ಬಾವಿ ಅಥವಾ ಕೆರೆಯ ಸ್ವಚ್ಛತೆ. (೩) ಶಾಲೆಯ ವಾಚನಾಲಯವನ್ನು ವ್ಯವಸ್ಥಿತವಾಗಿಡುವದು. (೪) ಪ್ರಭಾತ ಫೇರಿ ಮತ್ತು ನಾಡಗುಡಿಯನ್ನು ಏರಿಸುವಾಗ ವ್ಯವಸ್ಥೆ. (೫) ಶಾರೀರಿಕ ಆಟಗಳ ಸಂಘಟನೆ. (೬) ತಮ್ಮ ಗ್ರಾಮದಲ್ಲಿ ಮನೋರಂಜನ ಕಾರ್ಯಕ್ರಮಗಳ ಸಂಘಟನೆ. (೭) ಶಾಲೆಗಳಲ್ಲಿ ಸಾಂಸ್ಕೃತಿಕ ಚಟುವಟಿಕೆಗಳು ಮೊದಲಾದವುಗಳು.

ಮೇಲೆ ಹೇಳಿದ ಚಟುವಟಿಕೆಗಳಲ್ಲಿ ಬಾಲಕರು ತಾವು ವಹಿಸಿದ ಪಾತ್ರವನ್ನು ತಮ್ಮ ದಿನಚರಿಯಲ್ಲಿ ಬರೆದಿಡಬೇಕು. ಈ ದಿನಚರಿಯನ್ನು ನೋಡಿ ಶಿಕ್ಷಕರು ಗುಣಗಳನ್ನು ಕೊಡಬಹುದು. ದಿನಚರಿಯನ್ನು ನೋಡಿ ಗುಣಗಳನ್ನು ಕೊಡುವಾಗ ಕೆಳಗಿನ ಸಂಗತಿಗಳ ಸಹಾಯವನ್ನು ಪಡೆಯಬಹುದು.

(೧) ರಿಕಾರ್ಡುಗಳು ಪೂರ್ಣಗೊಳಿಸಲ್ಪಟ್ಟಿರುವವೋ ಹೇಗೆ? (೨) ಅವು ಸರಿ ಇರುವವೋ? (೩) ಕಾಲ ಕಾಲಕ್ಕೆ ಅವು ಬರೆಯಲ್ಪಟ್ಟಿರುವವೋ? (೪) ಬೇರೆ ಬೇರೆ ಕಾರ್ಯಕ್ರಮಗಳನ್ನು ಬರೆಯುವ ರೀತಿ. (೫) ಕೊನೆಯದಾಗಿ ಅವುಗಳಲ್ಲಿ ಭಾಗವಹಿಸಿದ ರೀತಿ.

ಈ ಪ್ರಕಾರ ಪ್ರತಿಯೊಂದು ಮಗುವಿನ ಪ್ರಗತಿಯನ್ನು ಅಳೆದರೆ ಮಗುವಿನ ಸರ್ವಾಂಗೀಣ ಪ್ರಗತಿಯನ್ನು

ಅಳೆದಂತಾಯಿತು. ಕೇವಲ ವಿಷಯಗಳ ಪರೀಕ್ಷೆಗಳನ್ನು ತೆಗೆದುಕೊಂಡರೆ ಮಗುವಿನ ಬೌದ್ಧಿಕ ಮಟ್ಟವನ್ನು ಪರೀಕ್ಷಿಸಿದಂತಾಗುತ್ತದೆ. ಶಿಕ್ಷಣವೆಂದರೆ ಕೇವಲ ಪಠ್ಯ ಪುಸ್ತಕಗಳ ಜ್ಞಾನವಲ್ಲ; ಶಿಕ್ಷಣವೆಂದರೆ ಮಗುವಿನಲ್ಲಿರುವ ಸುಪ್ತ ಶಕ್ತಿಯನ್ನು ಹೊರಗೆಡುವುದು. ಈ ಸುಪ್ತ ಶಕ್ತಿಯನ್ನು ಅಳೆದಾಗ ಮಗುವಿನ ಶಿಕ್ಷಣವನ್ನು ಅಳೆದಂತಾದೀತು. ಆದುದರಿಂದ ಈ ಲೇಖನದ ತಲೆಬರಹವನ್ನು ಶಿಕ್ಷಣಮಾಪನವೆಂದು ಇಟ್ಟಿದ್ದೇನೆ. ಈ ಪ್ರಕಾರ ಮಗುವಿನ ಎಲ್ಲ ಶಕ್ತಿಗಳನ್ನು ಅಳೆದಾಗಲೇ ನಿಜವಾದ ಶಿಕ್ಷಣ ಪ್ರಗತಿಯನ್ನು ಅಳೆದಂತಾದೀತು!

ಗಾಂಧೀಜಿ ಜೀವನದ ಕೆಲವು ಘಟನೆಗಳು

ಲೇ:— **ಶ್ರೀ ಎಸ್. ಎಸ್. ಭೂಸರಡ್ಡಿ**, S.T.C. ಬೇಸಿಕ್ ಟ್ರೇಡ್, ಶಾಲಾ ಗುರುಗಳು ಅಸೂಟಿ (ರೋಣ)

[ಹಿಂದಿನ ಸಂಚಿಕೆಯಿಂದ ಬಂದುದು]

ಗಾಂಧೀಜಿಯವರ ಹೃದಯ ಉಕ್ಕಿಬಂತು. ಕಣ್ಣುಗಳಿಂದ ನೀರು ಬಳಬಳ ಮುತ್ತುಗಳಂತೆ ಉದುರಿದವು. ಬಾಗಿಲ ಮುಚ್ಚಿ ಕಸ್ತೂರಬಾರನ್ನು ಅಪ್ಪಿ ಮುಕ್ಕಳಂತೆ ಅತ್ತರು. ಭಾರತ ನಾರಿಯ ನಿಷ್ಕಲ್ಮಷ ಪ್ರೇಮದ ಹೃದಯ ಕಂಡು ಮಂತ್ರಮುಗ್ಧರಾದರು. ಕಸ್ತೂರಬಾ ಅವರು ಗಾಂಧೀಜಿಯವರ ಬಾಳಿನ ಒಂದು ಆಶಾಜ್ಯೋತಿಯಾಗಿ ಜೀವನಪರಿಯಂತದ ವರೆಗೂ ನಿದರ್ಶಕರಾಗಿ ಉಳಿದರು.

(೩)

ಯಾವಾಗಲೂ ಜನತೆಯ ಕೂಗಿನಲ್ಲಿ ಸತ್ಯಾಂಶ ವಿರುತ್ತದೆಂದು ಹೇಳಲು ಬರುವಂತಿಲ್ಲ. ಅವರು ನಾಯಕನ ನಡೆ–ನುಡಿಗಳನ್ನು ಅನುಸರಿಸಿ ಅವ ಹೇಳಿದಂತೆ ಕೇಳಿ ಕೂಗಾಡುವ ಜನರ ಮಾತು ಸತ್ಯಕ್ಕೆ ದೂರವೆನಿಸುತ್ತದೆ. ನಿಜಶಕ್ತಿಯ ಸಾತ್ವಿಕತೆಯ ಅರಿವಾದಾಗ ನ್ಯಾಯ–ಅನ್ಯಾಯ, ಧರ್ಮ–ಅಧರ್ಮಗಳ, ನೀತಿ–ಅನೀತಿಗಳ ಸ್ಪಷ್ಟ ಕಲ್ಪನೆ ಬರುವದುಂಟು.

ಗಾಂಧೀಜಿಯವರು ತಾವರೆ ಲತೆ ಇದ್ದಂತೆ. ನೀರಲ್ಲಿದ್ದರೂ ನೀರನ್ನು ಗ್ರಹಿಸದ ಅದರ ಗುಣದಂತೆ. ಅನೇಕ ಜನ ಕೂಡಿ ನಗೆಯಾಡುತ್ತಿದ್ದರೂ ದುಷ್ಟ ಭಾವನೆಗಳಿಗೆ ಅವರಲ್ಲಿ ಅವಕಾಶವೇ ಇರಲಿಲ್ಲ. ಹೆಣ್ಣು ಮಕ್ಕಳನ್ನು ಪ್ರತ್ಯಕ್ಷ ಶಕ್ತಿಯೆಂದೇ ತಿಳಿದಿದ್ದರು. ರಾಮನ ರಾಜ್ಯದಲ್ಲಿ ನಿಂವಕರಿದ್ದಂತೆ ಹೀಗೂ ಇಲ್ಲದೆ ಇರಲಿಲ್ಲ. ಗಾಂಧೀಜಿಗೆ ವಯಸ್ಸಾಗುತ್ತ ಬಂದಿದ್ದರೂ ಅವರಲ್ಲಿ ಇಂದ್ರಿಯ ಚಾಪಲ್ಯಯಿದೆ. ಉಳಿದ ಹೆಣ್ಣುಮಕ್ಕಳೊಡನೆ ಆದೆಂಥ ಚೇಷ್ಟೆ ಎಂದು ಗಾಂಧೀಜಿಗೆ ಆಗದವರು ಆಡಿಕೊಳ್ಳುತ್ತಿದ್ದರು. ಅದನ್ನು ಕೇಳಿದ ಅವರ ಒಬ್ಬ ಎದುರಾಳಿ ಗೃಹಸ್ಥ ಅವರಲ್ಲಿ ಬಂದನು. ಆಗ ಗಾಂಧೀಜಿ ಹೆಣ್ಣು ಮಕ್ಕಳೊಡನೆ ಆಲದಮರದ ನೆರಳಲ್ಲಿ ಕುಳಿತು ವಿನೋದಮಾಡುತ್ತಿದ್ದರು. ಬಂದವರಿಗೆ ಕೂಡಲು ಹೇಳಿ ಕುಶಲ ಸಮಾಚಾರವನ್ನು ನಡೆಯಿಸಿದರು. ವಿದೇಶಿ ಸಭ್ಯಗೃಹಸ್ಥ ಮಾತಿನ ಸುಳಿಯನ್ನು ಹೊರಳಿಸುತ್ತ ತನ್ನ ಸಂಶಯನಿವಾರಣೆಯ ಉದ್ದೇಶದತ್ತ ತಿರುವಿದನು. "ಸತ್ಯ ಸಾಧನೆಯ ಮಾರ್ಗದಲ್ಲಿ ಸ್ತ್ರೀಯೊಬ್ಬಳು ದೊಡ್ಡ ಆತಂಕ ಎಂದು ಹೇಳುತ್ತಾರಲ್ಲ ಗಾಂಧೀಜಿಯವರೇ?" "ಅದು ಸರಿಯಲ್ಲ ಅವರವರ ಮನಸ್ಸಿನ ಆಶೆಗಳು ಆತಂಕವೆನಿಸುವವಲ್ಲದೇ ಸ್ತ್ರೀಯಲ್ಲ; ಸಾಧನೆಯ ಸಿದ್ಧಿಗಾಗಿ ಅವಳು ಪೋಷಕಳು, ಅವಳು ಪ್ರತ್ಯಕ್ಷಮಹಾಶಕ್ತಿ, ಮಹಾಮಾರಿಯಲ್ಲ, ಮಹಾದೇವಿ."

ಸಲೀಲವಾಗಿ ನುಡಿದರು ಗಾಂಧೀಜಿ.

"ನಿಮ್ಮ ದೃಷ್ಟಿಯಲ್ಲಿ ಹಾಗೆ ಕಾಣುತ್ತಿರಬಹುದು. ಬಹಳ ಜನರ ದೃಷ್ಟಿಯಲ್ಲಿ ಹೆಣ್ಣಿನ ಸಾನಿಧ್ಯ ಅಂದರೆ, ಉಡಿಯಲ್ಲಿ ಬೆಂಕಿ ಹಾಕಿಕೊಂಡು ಜೀವಿಸುತ್ತೇನೆ ಎಂದು" ಮತ್ತೆ ಪ್ರಶ್ನಿಸಿದನು ಆ ಗೃಹಸ್ಥ. "ರಾಯರೇ–ವಿನಾಶದ ದಾರಿ ಯಾವಾಗಲೂ ಅಗಲವಿರುವಂತೆ ಅಲ್ಲಿ ಹೋಗುವವರ ಸಂಖ್ಯೆಯು ಬಹಳ. ಜ್ಞಾನಿಗಳ ದೃಷ್ಟಿಯಲ್ಲಿ ಕಂಡ ಸತ್ಯ ಸಿದ್ಧಾಂತವನ್ನು ನಾನು ನಿಮಗೆ ತಿಳಿಸುವೆ."

ಇದೋ ನೋಡಿ ಇವರೆಲ್ಲಾ ನನ್ನ ಭೆಟ್ಟಿಗಾಗಿ ಬಂದಿದ್ದಾರೆ. ನಾನಿನಕೊಡನೆ ಹರಟೆ ಹೊಡೆಯುವೆ, ಆದರೆ ತಂದೆ ಮಕ್ಕಳೊಡನೆ ಆಡುವ ರೀತಿಯಲ್ಲಿ. ಇವರಲ್ಲಿ ಆದಿಶಕ್ತಿಯ ರೂಪವನ್ನು ನಾನು ಕಂಡುಕೊಳ್ಳುತ್ತಿರುವೆ. ಭಾರತ ಸಂಸ್ಕೃತಿಯು ಅಷ್ಟು ಕೀಳುಮಟ್ಟದ್ದಲ್ಲ." ಎಂದರು.

ಗೃಹಸ್ಥನಿಗೆ ಸಾಕುಬೇಕಾಯಿತು. ಜನತೆಯ ಕೆಲವು ಜೊಳ್ಳು ಮಾತುಗಳು ವಿನಾಶಮಾರ್ಗದತ್ತ ಎಳೆಯುವಂಥವು ಇರುತ್ತವೆ. "ನೋಡುವ ಕಣ್ಣಿಗೆ ಕಾಮಣಿ ರೋಗ ಆದರೆ ಜಗತ್ತು ತಾನೇ ತಾನಾಗಿ ಹಳದಿ ಕಾಣುತ್ತದೆ" ಎಂಬ ಮಾತನ್ನು ಅಲ್ಲಿ ಪ್ರತ್ಯಕ್ಷ ಕಂಡರು.

ಶಿಶು ಶಿಕ್ಷಣ

ಬರೆದವರು: **ಕು. ವನಿತಾ ಪ. ಪಾಟೀಲ,** ಪೂರ್ವ ಪ್ರಾಥಮಿಕ ತರಬೇತಿ ವರ್ಗ.

ಸ್ವತಂತ್ರ ಭಾರತದ ಉನ್ನತಿಯಾಗಬೇಕಾದರೆ, ಅದು ಜಗತ್ತಿನಲ್ಲಿ ಶಾಂತ, ಸುಶಿಕ್ಷಿತ, ಸಮೃದ್ಧ ರಾಷ್ಟ್ರ ವಾಗಬೇಕಾದರೆ ಶಿಶು ಶಿಕ್ಷಣದ ಕಡೆಗೆ ಸರಕಾರ ಹೆಚ್ಚು ಗಮನ ಕೊಡಬೇಕು. ಶಿಶು ಶಿಕ್ಷಣ ಹಾಗು ಅದನ್ನೀವ ಶಿಶು ವಿಹಾರದ ಬಗ್ಗೆ ಹೇಳುವ ಮೊದಲು ನಾನು ಶಿಶು ವಿಹಾರ ಅಂದರೇನು? ಎಂಬುದರ ಬಗ್ಗೆ ಹೇಳುವದು ಅಗತ್ಯವಿದೆ. ಉತ್ತಮವಾದ ಸನ್ನಿವೇಶಗಳಿಂದ ಮಕ್ಕಳ ಬೆಳವಣಿಗೆಗೆ ಸಹಕಾರಿಯಾಗಲು ಸ್ಥಾಪಿತವಾಗಿರುವ ಸಂಸ್ಥೆಗಳೇ ಶಿಶುವಿಹಾರಗಳು. ಇಂಥ ಶಿಶುವಿಹಾರದಲ್ಲಿ "A child of to day is the citizen of tomorrow" ಎಂಬುದನ್ನು ಲಕ್ಷ್ಯದಲ್ಲಿ ಇಟ್ಟುಕೊಂಡು ಮಗುವಿನ ಸರ್ವತೋಮುಖವಾಗಿ ಉನ್ನತಿಯಾಗುವಂತೆ ಶಿಕ್ಷಣ ಕೊಡುವರು. ಶಿಕ್ಷಣವೆಂದರೆ ಕೇವಲ ಓದುವದು, ಬರೆಯುವದು ಮತ್ತು ಲೆಕ್ಕ ಬಿಡಿಸುವದು ಇಷ್ಟೇ ಅಲ್ಲ. ಶಾರೀರಿಕ ಬೆಳವಣಿಗೆ, ನೀತಿ ನಡತೆಗಳ ಬೆಳವಣಿಗೆ ಮತ್ತು ಮಾನಸಿಕ ಬೆಳವಣಿಗೆ ಇವುಗಳಿಂದ ಯುಕ್ತವಾಗಿರುವದು. ಒಟ್ಟಿನಲ್ಲಿ ಹೇಳುವದೆಂದರೆ, ಮಕ್ಕಳಲ್ಲಿ ಅಡಗಿರುವ ದೈಹಿಕ, ಮಾನಸಿಕ ನೀತಿ ಶಕ್ತಿಗಳು ಬೆಳೆದು ಅಭಿವೃದ್ಧಿ ಹೊಂದಲು ಸರಿಯಾದ ಸನ್ನಿವೇಶಗಳನ್ನು ಕಲ್ಪಿಸುವದೇ ಶಿಶು ಶಿಕ್ಷಣದ ಗುರಿ.

"ಮೂರು ವರ್ಷದ ಬುದ್ಧಿ ನೂರು ವರ್ಷಗಳ ವರೆಗೆ" ಎಂಬುದು ದಿಟ. ೩ ರಿಂದ ೬ ವರ್ಷದ ವರೆಗಿನ ಅವಧಿ ಮನುಷ್ಯನ ಜೀವಮಾನದಲ್ಲೆಲ್ಲಾ ಅತ್ಯಮೂಲ್ಯ ವಾದದ್ದು. ಹದೇ ಹರಗಿದ ಹೊಲದಲ್ಲಿ ಅದನ್ನು ಅರ ಗೊಡದೆ ಅದರಲ್ಲಿ ಉತ್ತಮ ಬೀಜ ಬಿತ್ತಿದರೆ ಯಾವ ರೀತಿ ಉತ್ತಮ ಹಾಗು ಸಮೃದ್ಧ ಬೆಳೆ ಬರುವದೋ, ಅದೇ ರೀತಿ ಮಕ್ಕಳು ಎಳೆಯವರಿದ್ದಾಗ ಅವರಲ್ಲಿ ಉತ್ತಮ ಗುಣ ಬೇರೂರುವಂತೆ ಯತ್ನಿಸಬೇಕು, ಆಗ ಅವರ ಎಳೆ ಮನ ತತ್‌ಕ್ಷಣ ವಿಷಯ ಗ್ರಹಣ ಮಾಡುವದು. ಆಗ ಮಕ್ಕಳು ತಮಗೆ ಬೇಕಾದ ಮುಂದಿನ ವಿದ್ಯಾ ಸಲಕರಣೆ ಸುತ್ತಲಿನ ಸನ್ನಿವೇಶದಿಂದ ಹಾಗು ತನ್ನ ಚಟುವಟಿಕೆ ಗಳಿಂದ ಗ್ರಹಿಸುತ್ತದೆ. ಶಿಕ್ಷಣತಜ್ಞ ಮೇರಿಯ ಮೊಂಟೇಸರಿ ಯವರು ಮಕ್ಕಳ ಮೊದಲಿನ ೬ ವರ್ಷಗಳ ಕಾಲವನ್ನು 'ಸೂಕ್ಷ್ಮ ಗ್ರಹಣ ಶಕ್ತಿ ಕಾಲ' ಎಂದು ಕರೆದಿದ್ದಾರೆ. ಪ್ರಸಿದ್ಧ ಮನಃಶಾಸ್ತ್ರಜ್ಞ ಗೆಸೆಲ್ "ಮಕ್ಕಳ ಶೈಶವಾವಸ್ಥೆ ಯಲ್ಲಿ ಅವರ ಮನಸ್ಸು ಶೀಲಗಳು ಬೆಳೆಯುವಷ್ಟು ತೀವ್ರ ವಾಗಿ ಇನ್ನೆಂದಿಗೂ ಬೆಳೆಯಲಾರವು" ಎಂದು ನುಡಿದಿ ದ್ದಾರೆ. ಹಸಿ ಗೋಡೆಯಲ್ಲಿ ಹರಳು ಇಟ್ಟಂತೆ ನಾವಿಟ್ಟ ಜ್ಞಾನದ ಹರಳು ಶಾಶ್ವತವಾಗುತ್ತದೆ. ಈ ಕಾಲದಲ್ಲಿ ಹೇಳಿದ ವಿಷಯ ಅವರ ಮನಃಪಟಲದ ಮೇಲೆ ಬೇಗನೆ ಮೂಡುತ್ತದೆ. ಆಗ ಸರಿಯಾದ ಚಿತ್ರ ಮೂಡಿಸಲು ಜಾಗ್ರತೆ ವಹಿಸಬೇಕು. ಮಕ್ಕಳ ದೇಹ, ಬಲ, ಬೆಳವಣಿಗೆ ಈ ದೃಷ್ಟಿಯಿಂದ ಮಾತ್ರ ಶೈಶವ ಮುಖ್ಯವಲ್ಲ. ಅವರ ಮಾನಸಿಕ ಮತ್ತು ನಡತೆಯ ಬೆಳವಣಿಗೆಯ ಈ ದೃಷ್ಟಿ ಯಿಂದಲೂ ಬಹಳ ಮಹತ್ವವಾದದು. ೩ ರಿಂದ ೬ ವರ್ಷದ ಕಾಲದಲ್ಲಿ ಉತ್ತಮ ರೀತಿ ನೀತಿ ಕಲಿಯಬೇಕಾದರೆ ಮಕ್ಕಳನ್ನು ಶಿಶುವಿಹಾರಕ್ಕೆ ಕಳುಹಿಸಬೇಕು.

ಶಿಶು ವಿಹಾರದಲ್ಲಿ ೩ ರಿಂದ ೬ ವರ್ಷದ ವರೆಗಿನ ಮಕ್ಕಳಿಗೆ ಪ್ರವೇಶವಿದೆ. ಶಿಶುವಿಹಾರದ ಸಮಯ ಸುಮಾರು ೩ ತಾಸುಗಳ ವರೆಗೆ. ೮–೧೧ ಘಂ., ೧೧–೨ ಘಂ., ೨–೫ ಘಂ. ಈ ವೇಳೆಗಳಲ್ಲಿ, ಪರಿಸ್ಥಿತಿಗೆ ಅನುಸರಿಸಿ ಶಿಶು ವಿಹಾರಗಳು ನಡೆಯುವವು. ಅಲ್ಲಿ ನಿರ್ದಿಷ್ಟವಾದ ವೇಳಾ ಪತ್ರಿಕೆ ಇಲ್ಲ. ಮಕ್ಕಳ ಅಭಿರುಚಿಗನುಸರಿಸಿ ಮಾನಸಿಕ ಹಾಗು ಬೌದ್ಧಿಕ ವಿಕಾಸವಾಗುವ ಯೋಜನೆಯಿಂದ ಶಿಕ್ಷಣ ಕೊಡಲ್ಪಡುವದು. ಅಲ್ಲಿ ತರತರದ ಆಟ ಆಡಿಸುವ ದರಿಂದ ಮಕ್ಕಳ ಶರೀರದ ಬೆಳವಣಿಗೆ ಆಗುವದು. ಆ ವಿದ್ಯಾಮಂದಿರದಲ್ಲಿ ಅವರಿಗೆ ಕಲೆ, ಹಾಡು, ನೃತ್ಯ ಇತ್ಯಾದಿ ಹೇಳುವದರಿಂದ ಮನರಂಜನೆ ಆಗುವದು. ಅವರ ಮನಸ್ಸು ಸೂರ್ಯ ಬಂದಾಗ ಕಮಲಗಳು ಅರಳು ವಂತೆ ಪ್ರಫುಲ್ಲಿತವಾಗುವದು. ಅಲ್ಲದೆ ಬುದ್ಧಿಯಲ್ಲಿ ಮತ್ತು ಸ್ಮರಣ ಶಕ್ತಿಯಲ್ಲಿ ಹೆಚ್ಚಳವಾಗುವದು. ಈ ಪ್ರಕಾರ ಮಾನಸಿಕ ವಿಕಾಸವಾಗುವದು. ಈ ಸರಸ್ವತೀ ಸದನದಲ್ಲಿ ಅವರಿಗೆ ಆಡಲು ಕೊಡುವ ಆಟಿಗೆಯ ಸಾಧನ ಗಳು ಬೌದ್ಧಿಕ ಬೆಳವಣಿಗೆಗೆ ಉತ್ತೇಜಕವಾಗಿರುತ್ತವೆ. ಅಲ್ಲದೆ ಬುದ್ಧಿ ವಿಕಾಸವಾಗಲು ಸಹಾಯ ಸಲ್ಲಿಸುತ್ತವೆ. ಅವು ತರಹತರಹದ ಬಣ್ಣವಿರುವದರಿಂದ ಅತ್ಯಂತ

ಆಕರ್ಷಕವಾಗಿರುತ್ತವೆ. ಪ್ರತಿಯೊಂದು ಸಾಧನ ಮುಂದಿನ ವ್ಯಾಧಮಿಕ ಶಾಲೆಗೆ ಹೋಗಲು ಬೇಕಾಗುವ ಉಪಯುಕ್ತ ಸಂಗತಿ ತಿಳಿಸುವ ಯೋಜನೆಯಿಂದ ಮಾಡಲ್ಪಟ್ಟಿರುತ್ತವೆ.

ಶಿಶುವಿಹಾರದ ಬಳಿ ತೋಟವಿರುವದು ಅತ್ಯವಶ್ಯ. ಮಕ್ಕಳಲ್ಲಿ ಸ್ವಾಭಾನಿಕವಾಗಿ ಸೃಷ್ಟಿಯ ಬಗ್ಗೆ ಪ್ರೇಮವಿರುವದು. ತೋಟಕ್ಕೆ ಮಕ್ಕಳನ್ನು ಸಂದರ್ಶಿಸಲು ಕರೆದುಕೊಂಡು ಹೋದಾಗ ಅಲ್ಲಿಯ ಬೇರೆ ಬೇರೆ ತರಹದ ಹೂ, ಎಲೆ, ಹಣ್ಣು, ಕಾಯಿ ಇತ್ಯಾದಿ ನೋಡುವದರಿಂದ ಅವರ ದರ್ಶನೇಂದ್ರಿಯ ವಿಕಾಸವಾಗುವದು. ಅಲ್ಲಿ ಗಿಡಗಳಲ್ಲಿದ್ದ ಬೇರೆ ಬೇರೆ ತರಹದ ಹಣ್ಣು, ಕಾಯಿಗಳ ಸ್ವಾದ ನೋಡುವದರಿಂದ ರಸನೇಂದ್ರಿಯ ವಿಕಾಸವಾಗುವದು. ಅಲ್ಲದೆ ಸೃಷ್ಟಿಯ ಬಗ್ಗೆ ಪ್ರೇಮಾದರ, ಗೌರವ, ನಿರೀಕ್ಷಣ ಮಾಡುವ ಪ್ರವೃತ್ತಿ ಉಂಟಾಗುವವು. ಹೀಗೆ ಶಿಶು ವಿಹಾರದಲ್ಲಿ ಆಟ, ಆಟಿಗೆ, ಹಾಡು, ನೃತ್ಯ, ಕೈದೋಟ ದಲ್ಲಿಯ ವಿವಿಧ ಹೂ, ಪ್ರಾಣಿ, ಪಕ್ಷಿ, ಕೀಟಕ ಇವುಗಳಿಂದ ಪಂಚ ಇಂದ್ರಿಯಗಳ ವಿಕಾಸವಾಗುವದು. ಮತ್ತು ಮಾರ್ಗ ದರ್ಶನ ಸಿಗುವದು.

ಮನೆಯಲ್ಲಿ ಹಿರಿಯರು ಜೀವನ ವ್ಯವಹಾರದ ಕೆಲಸ ಮಾಡಲು ಮಕ್ಕಳ ಮೇಲಿನ ಮಮತೆಯಿಂದಲೂ ಏನೋ ಅವಕಾಶ ಕೊಡುವದಿಲ್ಲ. ಆದರೆ ಶಿಶುವಿಹಾರದಲ್ಲಿ ಅತ್ಯಂತ ಉಪಯುಕ್ತ ಎಷ್ಟೋ ಸಂಗತಿಗಳನ್ನು ಮಕ್ಕಳು ಪ್ರಯಾಸವಿಲ್ಲದೆ ಸುಲಭವಾಗಿ ಕಲಿಯುವರು. ಉದಾ: ಬಟನ್ ಹಾಕುವದು, ಮಡಿಕೆ ಹಾಕುವದು. ಇಂಥ ಸಂಗತಿ ಮಕ್ಕಳು ಅಲ್ಲಿ ಕಲಿಯುವದರಿಂದ ಸ್ವಾವಲಂಬಿ ಯಾಗುವರು. ತಮ್ಮ ನಿತ್ಯದ ಕೆಲಸಕ್ಕಾಗಿ ಪರರನ್ನು ಅವಲಂಬಿಸುವದಿಲ್ಲ. ಶಿಶುವಿಹಾರದಲ್ಲಿ ಮಕ್ಕಳ ಆರೋಗ್ಯದ ಬಗ್ಗೆ ಹೆಚ್ಚು ದಕ್ಷತೆ ವಹಿಸಲಾಗುವದು. ಮಕ್ಕಳು ಸಶಕ್ತರಿದ್ದರೆ ಅಲ್ಲಿ ನಡೆಯುವ ಚಟುವಟಿಕೆ ಮಾಡಲು ಸಮರ್ಥರಾಗುವರು. ಮೇಲಿಂದ ಮೇಲೆ ಮಕ್ಕಳ ತೂಕ, ಎತ್ತರ ನೋಡಲಾಗುವದು. ಆರೋಗ್ಯವೇ ಸಂಪತ್ತು. ಚಿಕ್ಕ ಮಕ್ಕಳು ಕಾಯಿಲೆ ಕಸಾಲೆಗಳಿಗೆ, ಸಾಂಕ್ರಾಮಿಕ ರೋಗಗಳಿಗೆ ಸುಲಭವಾಗಿ ತುತ್ತಾಗುವರು. ಏಕೆಂದರೆ ಪ್ರತಿಭಟನಾ ಶಕ್ತಿ ಕಡಿಮೆ ಇರುವದು. ಕಾರಣ ವೈದ್ಯರಿಂದ ಆಗಾಗ್ಗೆ ಮಕ್ಕಳನ್ನು ಪರೀಕ್ಷಿಸಿ ಅವರಲ್ಲಿ ಶಾರೀರಿಕ ಮಾನಸಿಕ ದೋಷಗಳು ಏನಾದರು ಇದ್ದರೆ ಅವುಗಳನ್ನು ದೂರು ಮಾಡಲು ಇಲ್ಲಿ ಯತ್ನಿಸುವರು. ಅಲ್ಲದೆ ಬಲ ಸಂವರ್ಧನೆಗಾಗಿ ವ್ಯಾಯಾಮ ಮಾಡಿಸುವರು.

ಶಿಶುವಿಹಾರದಲ್ಲಿ ಎಲ್ಲ ಮಕ್ಕಳು ಸೇರಿ ಶಿಕ್ಷಣ ಪಡೆಯುವದರಿಂದ ಅವರಲ್ಲಿ ಸಂಘ ಪ್ರವೃತ್ತಿ ಬೆಳೆಯುವದು. ಮಕ್ಕಳಲ್ಲಿ ಸಹಕಾರ, ಸ್ನೇಹ, ಸಹನೆ, ತಾಳ್ಮೆ, ಪರಸ್ಪರ ಪ್ರೇಮ, ಶಿಸ್ತು, ಸಂಯಮ, ಚಪಲತನ ಮತ್ತು ಆಜ್ಞಾಪಾಲನ ಈ ಎಲ್ಲ ಸದ್ಗುಣಗಳು ಅವರಿಗರಿಯದಂತೆ ಸಮಾವೇಶವಾಗುವವು. ಅವರ ಪ್ರವೃತ್ತಿಗಳ ಉಜ್ವಲೀಕರಣವಾಗುವದು. ಹೀಗೆ ಶಿಶುವಿಹಾರ ಎಲ್ಲ ವಿಧದಿಂದ ಮಕ್ಕಳ ಬೆಳವಣಿಗೆಗೆ ಅನುಕೂಲವಾಗಿದೆ. ಅದರಲ್ಲೂ ಕೂಲಿಕಾರರ ಮಕ್ಕಳಿಗೆ ಹೆಚ್ಚು ಉಪಕಾರಿ. ಹೊಟ್ಟೆಯ ಪಾಡಿಗಾಗಿ ತಂದೆ ತಾಯಿಗಳಿಬ್ಬರೂ ಕಾರಖಾನೆ ಅಥವಾ ಬೇರೆ ವ್ಯವಸಾಯಕ್ಕೆ ಹೋದಾಗ ಅವರ ಮಕ್ಕಳ ಪಾಡೇನು? ಅವರು ಅತ್ತಿತ್ತ ತಿರುಗಾಡಿ ಶಿಕ್ಷಣವಿಲ್ಲದೆ ಅಧೋಗತಿ ಪಡೆಯಬಹುದು. ಆದರೆ ಆ ಮಕ್ಕಳನ್ನು ಶಿಶುವಿಹಾರಕ್ಕೆ ಕಳಿಸಿದರೆ ಇನ್ನಿತರ ಬೇರೆ ಮಕ್ಕಳೊಡನೆ ಬೆರೆತು ಸಾಮಾಜಿಕ ಉನ್ನತಿಯನ್ನು ಪಡೆಯಲು ತಕ್ಕ ಸಂದರ್ಭ ಕಲ್ಪಿಸಿಕೊಟ್ಟಂತೆ ಆಗುವದು. ಆ ಮಕ್ಕಳ ನಿಜವಾದ ಅವಶ್ಯಕತೆಗಳನ್ನನುಸರಿಸಿ ಸಂಸ್ಕೃತಿಯ ಬೆಳವಣಿಗೆಗೆ ಅವಕಾಶ ಏರ್ಪಡಿಸಿದಂತಾಗುವದು ಮತ್ತು ಅವರ ಯೋಗಕ್ಷೇಮ ನೋಡಿದಂತಾಗುವದು.

ಇನ್ನು ಶಿಶುವಿಹಾರದ ಇನ್ನೊಂದು ವಿಶೇಷವಾಗಿ ಜ್ಞಾನ ನೀಡುವ ಅಂಶವೆಂದರೆ ಚಿಕ್ಕ ಚಿಕ್ಕ ಪ್ರವಾಸ. ಮಕ್ಕಳನ್ನು ಬೇರೆ ಬೇರೆ ಕಡೆಗೆ ಕರೆದುಕೊಂಡು ಹೋಗುವದರಿಂದ ಬೇರೆ ಬೇರೆ ಸುಂದರ ಕಟ್ಟಡಗಳನ್ನು ನೋಡುವರು. ಬೀದಿಯಲ್ಲಿ ಹೋಗುವಾಗ ಶಾಲೆಯಲ್ಲಿ ಚಿತ್ರಗಳ ಮೂಲಕ ಪರಿಚಯ ಮಾಡಿ ಕೊಟ್ಟುದನ್ನು ಪ್ರತ್ಯಕ್ಷವಾಗಿ ನೋಡಿ ಮೋಜು, ಆನಂದ, ಜ್ಞಾನ ಪಡೆಯುವರು. ಅವರಿಗೆ ಬೀದಿಯ ನಿಯಮಗಳು ಗೊತ್ತಾಗುವವು. ಹಬ್ಬದ ನಿಮಿತ್ತ ಸೂಟಿ ಬಿಡುವದರಿಂದ ಅವರಿಗೆ ಅವರ ಬುದ್ಧಿಮಟ್ಟಕ್ಕೆ ಒಗ್ಗುವಂತೆ ಅದರ ಕಾರಣ ತಿಳಿಸುವದರಿಂದ ಧಾರ್ಮಿಕ ಭಾವನೆ ಅವರಿಗೆ ಸ್ಥೂಲವಾಗಿ ಬರುವದು. ಮುಂದಿನ ಶಿಕ್ಷಣಕ್ಕೆ ಅನುಕೂಲವಾಗುವದು. ಮುಂದಿನ ವ್ಯಾಧಮಿಕ ಶಿಕ್ಷಣ ಪಡೆಯಲು ಅರ್ಹರಾಗುವರು. ಹೀಗೆ ಶಿಶುವಿಹಾರ ವಿದ್ಯೆ ಎಂಬ

ಭವ್ಯ ಕಟ್ಟಡ ನಿರ್ಮಿಸುವದಕ್ಕಾಗಿ ತಳಹದಿಯಾಗಿದೆ. ೬ ವರ್ಷಗಳಾದ ನಂತರ ಒಮ್ಮೆಲೆ ಪ್ರಥಮ ವರ್ಗಕ್ಕೆ ಬಂದ ಮಗು ಮತ್ತು ಶಿಶುವಿಹಾರದಲ್ಲಿ ಶಿಕ್ಷಣ ಪಡೆದು ಪ್ರಥಮ ವರ್ಗಕ್ಕೆ ಬಂದ ಮಗು ಇವರಿಬ್ಬರಲ್ಲಿ ಸಾಕಷ್ಟು ವೈಷಮ್ಯ ಕಂಡು ಬರುವದು. ಒಮ್ಮೆಲೆ ಪ್ರಥಮ ವರ್ಗಕ್ಕೆ ಬಂದ ಮಗುವಿಗೆ ಇತರ ಏರಿಳಿತ ಮತ್ತು ತನ್ನ ಇಚ್ಛೆ ಹತ್ತಿಕ್ಕಿಕೊಳ್ಳುವ ತಾಳ್ಮೆ ಇರುವದಿಲ್ಲ.

ಇಂಥ ಸುಸಂಬದ್ಧವಾದ ಶಿಕ್ಷಣ ಪದ್ಧತಿಯನ್ನು ಸ್ಥಾಪಿಸಿದ ಶಿಕ್ಷಣ ಕ್ರಮದಲ್ಲಿ ಮಕ್ಕಳಿಗಾಗಿ ಹೊಸ ಹಾದಿ ತೋರಿಸಿದ ದಿವ್ಯರತ್ನ ಮೇರಿಯ ಮೊಂಟೇಸರಿಯವರು ತಮ್ಮ ಆಯುಷ್ಯವನ್ನು ಶಿಕ್ಷಣ ಪದ್ಧತಿ ಜಾರಿಗೆ ತರುವದರಲ್ಲಿ ಕಳೆದರು. ಮೊಂಟೇಸರಿಯವರ ಪ್ರಯತ್ನದಿಂದ ಜ್ಞಾನಗಂಗೆ ಕೂಲಿಕಾರರ ಮನೆಯವರೆಗೆ ಹರಿದಳು. ಇವರ ಮೊದಲನೆ ಶಿಶುವಿಹಾರ ೧೯೦೬ ಜನೆವರಿಯಲ್ಲಿ ಸ್ಥಾಪಿಸಲ್ಪಟ್ಟಿತು. ಈ ಶಾಲೆಯ ಕೀರ್ತಿ ಎಲ್ಲೆಡೆ ಹಬ್ಬ ತೊಡಗಿತು. ವಿದ್ವಾಂಸರ ಲಕ್ಷ ಈ ಕಡೆಗೆ ಸೆಳೆಯಲ್ಪಟ್ಟಿತು. ಬೇರೆ ಬೇರೆ ದೇಶಗಳಲ್ಲಿ ಹಾಗು ಪರದೇಶಗಳಲ್ಲಿ ಸುವಾಸನೆಯುಳ್ಳ ಸುಮನದಂತೆ ಈ ಶಾಲೆಯ ತತ್ವಗಳು ಹರಡಲ್ಪಟ್ಟವು. ಮನಶ್ಶಾಸ್ತ್ರದ ಶೋಧನೆಗಳ ಪರಿಣಾಮವಾಗಿ ಬಡವರ ಮಕ್ಕಳಿಗೆಂದು ಸ್ಥಾಪಿತವಾದ ಶಿಶುವಿಹಾರಗಳು ದೇಶದ ಎಲ್ಲ ಮಕ್ಕಳಿಗೂ ಅಗತ್ಯ ಎಂಬ ಅಭಿಪ್ರಾಯ ಇಂಗ್ಲಂಡ, ಅಮೇರಿಕೆ ದೇಶಗಳಲ್ಲಿಯೇ ಅಲ್ಲದೆ ಇತರ ಮುಂದುವರಿದ ದೇಶಗಳಲ್ಲಿಯೂ ಬಹು ಬೇಗ ಹರಡಿತು. ಇದರ ಪರಿಣಾಮವಾಗಿ ೨೦ನೇ ಶತಮಾನದಲ್ಲಿ ಅದರಲ್ಲೂ ೧೯೧೪ರಿಂದ ಈಚೆಗೆ ಶಿಶುವಿಹಾರಗಳ ಸಂಖ್ಯೆ ಹೆಚ್ಚಾಗುತ್ತಲಿದೆ.

ನಮ್ಮ ರಾಜ್ಯದಲ್ಲಿ ಶಿಶುವಿಹಾರಗಳು ಪ್ರಥಮತಃ ಮೈಸೂರು ನಗರದಲ್ಲಿ ಆರಂಭವಾದವು. ಮೈಸೂರ ಮಹಾರಾಜಾ ಕಾಲೇಜದ ಮನಶ್ಶಾಸ್ತ್ರದ ಅಧ್ಯಾಪಕ ಡಾ. ಎಂ. ಬಿ. ಗೋಪಾಲಸ್ವಾಮಿಯವರು ೧೯೩೮ರಲ್ಲಿ ಮೊದಲನೆ ಶಿಶುವಿಹಾರ ಸ್ಥಾಪಿಸಿದರು. ನಂತರ ಇಲ್ಲಿಯವರೆಗೆ ಅಂದರೆ ಮೊದಲನೆ ಶಿಶುವಿಹಾರ ಸ್ಥಾಪಿತವಾಗಿ ೩೨ ವರ್ಷಗಳಾದರೂ ಆಮ್ಮೊಂದು ವಿಶೇಷ ಪ್ರಗತಿಯಾಗಿಲ್ಲ. ಹೆಚ್ಚು ಶಿಶುವಿಹಾರಗಳು ಸ್ಥಾಪಿತವಾಗಿಲ್ಲ. ಇದಕ್ಕೆ ಸರಕಾರ ಸಹಾಯವಿತ್ತಿಲ್ಲವೆಂದೊ ಅಥವಾ ಜನರು ಆಸಕ್ತಿ ವಹಿಸಿ ಮುಂದಾಗಿಲ್ಲವೋ ಎಂಬುದು ತಿಳಿಯದು. ನಮ್ಮ ಶಿಶುವಿಹಾರಗಳಲ್ಲಿ ಆಟದ ಸಾಮಾನುಗಳು ಇತರ ಸಲಕರಣೆಗಳು ಸಾಕಷ್ಟು ಇಲ್ಲ. ಮಕ್ಕಳಿಗೆ ಮಧ್ಯಾಹ್ನದ ಊಟ ಮತ್ತು ವಿಶ್ರಾಂತಿಗೆ ಆವಶ್ಯಕ ಏರ್ಪಾಡುಗಳಿಲ್ಲ. ಸರಕಾರವು ಈ ಬಗ್ಗೆ ಹೆಚ್ಚು ಲಕ್ಷ್ಯ ವಹಿಸಬೇಕು. ಗ್ರಾಮ ಮತ್ತು ನಗರ ಎಲ್ಲೆಡೆ ಶಿಶುವಿಹಾರ ಸ್ಥಾಪಿಸಲ್ಪಡಬೇಕು. ಅದಕ್ಕಾಗಿ ಸುಂದರ ಮತ್ತು ಆಕರ್ಷಕ ಕಟ್ಟಡವನ್ನು ಕಟ್ಟಿಸಿಕೊಡಬೇಕು. ಹೆಚ್ಚಿನ ಜ್ಞಾನವನ್ನೀವ ಮಕ್ಕಳ ತೋಟ ಮತ್ತು ವಾಚನಾಲಯ ಇವುಗಳನ್ನು ಸರಕಾರ ಒದಗಿಸಬೇಕು. ಶಿಶುವಿಹಾರಕ್ಕೆ ತರಬೇತು ಹೊಂದಿದ ಮಹಿಳೆಯರನ್ನು ಕಳುಹಿಸಬೇಕು. ಪ್ರೀತಿ, ವಿಶ್ವಾಸ, ಸಹನೆ, ತಾಳ್ಮೆ, ಸಹಾನುಭೂತಿಗಳು ಚಿಕ್ಕ ಮಕ್ಕಳ ಉಪಾಧ್ಯಾಯರ ಜೀವನದ ತಿರುಳಾಗಿರಬೇಕು. ಸ್ತ್ರೀಯರೇ ಇಂಥ ಶಾಲೆಗಳಿಗೆ ಸರಿಯಾದ ಉಪಾಧ್ಯಾಯರು. ಮೇಲಿನ ಗುಣಗಳು ಸ್ವಾಭಾವಿಕವಾಗಿ ಅವರಲ್ಲಿರುತ್ತವೆ. ೩ರಿಂದ ೬ ವರ್ಷದ ಅವಧಿಯಲ್ಲಿ ಮಕ್ಕಳು ಹೆಚ್ಚಾಗಿ ತಾಯಿಯ ಜೊತೆಯಲ್ಲಿರುವದರಿಂದ ಶಿಶುವಿಹಾರದಲ್ಲಿ ಬೋಧಕರು ಮಹಿಳೆಯರಿರಬೇಕು. ಅಂದರೆ ಅವರಿಗೆ ಮನೆಯ ವಾತಾವರಣ ಎನಿಸುವದು. ಶಿಶುವಿಹಾರದ ಅನಾನುಕೂಲತೆಗಳನ್ನು ಹೋಗಲಾಡಿಸಿ ಸರಕಾರ ಎಲ್ಲೆಡೆ ಶಿಶುವಿಹಾರ ಪ್ರಸಾರ ಮಾಡಬೇಕು. ಅಲ್ಲದೆ ಖಾಸಗಿ ಸಂಸ್ಥೆಗಳಿಗೆ ಸಹಾಯಧನ ಸಲ್ಲಿಸಬೇಕು.

ರಾಷ್ಟ್ರಪಿತ ಗಾಂಧೀಜಿ

ಲೇಖಕರು:— ಶ್ರೀ ಕೆ. ಆರ್. ಆಶ್ರಿತ, ಉಪಗುರು ಕ. ಗಂ. ಶಾಲಾ, ಬಾಗೇವಾಡಿ

"ಗಾಂಧೀ ವಿಚಾರ" ಎಂಬ ಪುಸ್ತಕದಲ್ಲಿಯ ಆಯ್ಕೆಯಿಂದ ಸಂಗ್ರಹ

ಉದ್ಯೋಗವಿಲ್ಲದವನ ಮನಸ್ಸು, ಕುವಿಚಾರದ ಆಗರ,
ಸಂಕಟಸಮಯದಲ್ಲಿ "ಗೀತಾಮಾತೆ"ಯ ಹೃತ್ಕಮಲದಲ್ಲಿ ಆಶ್ರಯ ಪಡೆದೆ.
ಶಿಕ್ಷಣಕ್ಕೆ ಶೀಲಸಂವರ್ಧನೆಯೇ ತಳಹದಿ,
ಖಾದಿಯ ಉತ್ಪತ್ತಿ, ಹಾಗು ಧಾರಣ, ಸರಳ ಜೀವನದ ಪ್ರತೀಕ.
ಪ್ರಾರ್ಥನೆ ಎಂದರೆ ಹೃದಯದ ಕೂಗು.
ಮಾನವ ಕುಲಕ್ಕೆ ಬಾಪೂ ಕೊಟ್ಟ ಜೀವಿತದ ಕೊಡುಗೆಗಳಿವು.

ಅಕ್ಟೋಬರ ದಿನಾಂಕ ೨.

ಇಂದು ಅಮರ ಬಾಪುವಿನ ಜನ್ಮ ದಿನಾಚರಣೆ, ಭಾರತದಲ್ಲಿ ಹಳ್ಳಿ-ಹಳ್ಳಿಯಲ್ಲಿಯೂ ಜರುಗಲಿದೆ. ಭಾರತದ ಭಾಗ್ಯವಿಧಾತ ಬಾಪೂಜಿಯನ್ನು ಸ್ಮರಿಸಿ ಕೊಂಡಾಗ ಒಬ್ಬ ಕಾರಣಿಕ ಪುರುಷನ ದಿವ್ಯ ವ್ಯಕ್ತಿತ್ವದ ವಿರಾಟ ವಿಶ್ವರೂಪದರ್ಶನವಾಗುತ್ತದೆ. "ನೀಲ ಗಗನ ವನ್ನೇ ಹಿನ್ನೆಲೆಯಾಗಿರಿಸಿ ಧವಳಗಿರಿಯ ಮುಕುಟ ಮಣಿಯಂತೆ ಮೆರೆಯುವ ಗೌರೀಶಂಕರದಂತೆ" ಗಾಂಧೀ ಜಿಯ ಆತ್ಮಜ್ಯೋತಿಯು ಉನ್ನತವಾಗಿ ಭಾರತದ ಹೃನ್ಮಂದಿರದಲ್ಲಿ ವಿಧವಿಧವಾಗಿ ರಂಜಿಸುತ್ತ ಹರ್ಷ ಪುಲಕಿತರನ್ನಾಗಿ ಮಾಡುತ್ತಿದೆ.

ಬಾಪೂಜಿಯ ಬಾಳು ಭಾರತಕ್ಕೊಂದು ವರವಾಗಿ ಅರಳಿದೆ. ತನ್ನ ದೇಹವನ್ನೇ ದೀಪವನ್ನಾಗಿರಿಸಿ, ಅದಕ್ಕೆ ತನ್ನದೆಂಬುವದೆಲ್ಲವನ್ನೂ ತ್ಯಾಗದ ತೈಲವನ್ನಾಗಿ ಎರೆದು, ತನ್ನ ಜೀವನದ ದೀಪ್ತಿಯನ್ನು ದಿಗಂತದಲ್ಲಿ ಬೆಳಗಿ, ಹೋದ, ಆ ವ್ಯಕ್ತಿಯ ಶಕ್ತಿಯ ಪ್ರಭೆಗೆ ವಿಶ್ವವೇ ಇಂದು ಶಿರಬಾಗುತ್ತಿದೆ.

ಬಾಪೂಜಿಯ ಜೀವನದಲ್ಲಿ ಆದರ್ಶತೆಯ ಅದೆಷ್ಟೋ ಪುಷ್ಪಗಳು ಪಲ್ಲವಿಸಿ ಪರಿಮಳ ಬೀರಿವೆ. ಆದರೆ ಅಕ್ಟೋಬರ ದಿನಾಂಕ ಎರಡು ಅವರ ಆದರ್ಶತೆಯ ಕೆಲ ಪುಷ್ಪಗಳನ್ನು "ಸಂದರ್ಶನ"ಕ್ಕೆ ತಲುಪಿಸಿದೆ.

ಬಾಪೂಜಿಯ ಕೌಟುಂಬಿಕ ಜೀವನ:

ತಾಯಿಯು ಮಗನ ಭವಿತವ್ಯವನ್ನು ರೂಪು ಗೊಳಿಸುವ ಒಂದು ಶಕ್ತಿಯು. ತಾಯಿಯಂತೆ ಮಗ, ತಂದೆಯ ಗುಣಗಳು ಅಲ್ಲೊಂದು, ಇಲ್ಲೊಂದು ಕಂಡು ಬಂದರೂ ತಾಯಿಯ ವರ್ಚಸ್ಸೇ ಮಗನ ಮೇಲೆ ಹೆಚ್ಚು ಎಂದೇ ತಾಯಿಗೆ ಪ್ರಾಧಾನ್ಯ. ಗಾಂಧೀಜಿಯವರ ತಾಯಿ, ಸಾಧ್ವಿ, ದೇಶಭಕ್ತಳು, ಅಂತೆಯೇ ಮಗನೂ ಸಹ ದೇವರಲ್ಲಿ ನಂಬಿಗೆಯುಳ್ಳವನಾದನು. ವೈಷ್ಣವ ಭಜನೆಯೇ ವಿಶ್ವಭಜನೆಯಾಯಿತು. ತಾಯಿಯ ವ್ಯವಹಾರಚಾತುರ್ಯ ಇವರ ರಾಜಕಾರಣ ಚಾತುರ್ಯವಾಯಿತು. ತಾಯಿಯ ದೇವರ ಪೂಜೆ, ಇವರದು ದರಿದ್ರನಾರಾಯಣನ ಪೂಜೆಯಾಯಿತು. ಎಲ್ಲ ಸದ್ಗುಣಗಳಲ್ಲಿ ತಾಯಿಯನ್ನು ಮೀರಿದರು. ತಾಯಿಗೆ ಕೊಟ್ಟ ವಚನವನ್ನು ತಪ್ಪದೇ ಪಾಲಿಸುತ್ತಿದ್ದರು. ಗಾಂಧೀಜಿಯವರಿಗೆ ತಾಯಿಯ ವಾತ್ಸಲ್ಯಪೂರಿತವಾದ ಆಶೀರ್ವಾದವು ರಕ್ಷಾಕವಚವಾಯಿತು.

ತಾಯಿಯ ತರುವಾಯ ತಂದೆ. ತಂದೆಯೂ ಸಹ ಧರ್ಮಿಷ್ಠರು, ಸತ್ಯಸಂಧರು, ಸ್ವಾಭಿಮಾನಿಗಳು, ಉದಾರ ಹೃದಯದವರೂ ಹೌದು. ಈ ಗುಣಗಳೂ ಗಾಂಧೀಜಿಯವರಲ್ಲಿ ಒಡಮೂಡಿದವು.

ಗಾಂಧೀಜಿಯ ಶೈಲಿ:

ಮಾಡು ಅಥವಾ ಮಡಿ. ಈಗ ಇಲ್ಲವಾದರೆ ಇನ್ನಿಲ್ಲ, ಎಂಬ ಜೋಡು ನುಡಿಗಳಲ್ಲಿ ಬ್ರಹ್ಮಾಂಡದಷ್ಟು ಅರ್ಥವಿರಬಹುದೇ? ಅನ್ನಿಸುತ್ತದೆ. "ಪುಣ್ಯವು ಬಸವನ ಹುಳ ಪಾಪವು ಹಾರುವಹಕ್ಕಿ" ಎಂದು ಪಾಪಪುಣ್ಯಗಳ ಸೂತ್ರವನ್ನು ಮಾರ್ಮಿಕವಾಗಿ ಹೇಳಿದ್ದಾರೆ. "ಗೀತೆ" ನನ್ನ ತಾಯಿ. ನನ್ನ ಹೆತ್ತ ತಾಯಿಯನ್ನು ಎಂದೋ

ಕಳೆದುಕೊಂಡೆ. ಆ ತಾಯಿ ಹೋದಂದಿನಿಂದ ಈ ಅಮರ ತಾಯಿ ನನ್ನನ್ನು ಎತ್ತಿಕೊಂಡಿದ್ದಾಳೆ. ಈಕೆ ನನ್ನ ಕೈ ಬಿಡಲಿಲ್ಲ. ಸಂಕಟದಲ್ಲಿದ್ದಾಗ ಅವಳ ಹೃತ್ಕಮಲದಲ್ಲಿ ಆಶ್ರಯ ಪಡೆದಿರುವೆನೆಂದರು.

ಶಿಕ್ಷಕ ಗಾಂಧೀಜಿ :

ಗಾಂಧೀಜಿಯು ಜೀವನ ಸತ್ಯಸಂಶೋಧಕನ ಜೀವನ. ಸತ್ಯಮಯವಾದ ಅಹಿಂಸಾಯುತ ರೀತಿಯಲ್ಲಿ ಜನತಾ, ಜನಾರ್ದನನ, ದೀನ, ದಲಿತರ ಸೇವೆಗೈಯುವದು ಅವರ ಜೀವನದ ಧ್ಯೇಯವಾಗಿತ್ತು. ಶಿಕ್ಷಕರಿಗೆ ಆದರ್ಶ ಶಿಕ್ಷಕರಾಗಿ ಕಂಡರು.

ಶಿಸ್ತು, ಸಂಯಮ, ಸುವಿಚಾರ, ಪ್ರೇಮ, ವಿಶ್ವಾಸ ಗಳೇ ಮೊದಲಾದ, ಸದ್ಗುಣಗಳಿಂದ ಕೂಡಿದ ತಾಯಿ ತಂದೆಗಳು ತಮ್ಮ ಮಕ್ಕಳ ಆದರ್ಶ ಶಿಕ್ಷಕರಾಗುವರು. ಇದು ಮನೆಯಲ್ಲಿ ಗಾಂಧೀಜಿ ವಹಿಸಿದ ಶಿಕ್ಷಕನ ಪಾತ್ರದ ಚಿತ್ರ.

ಶಿಕ್ಷಣಕ್ಕೆ ಶೀಲಸಂವರ್ಧನೆಯೇ ತಳಹದಿ, ಈ ತಳಹದಿಯು ಭದ್ರವಾಗಿ ಹಾಕಲ್ಪಟ್ಟರೆ ವಿದ್ಯಾರ್ಥಿಗಳು ಉಳಿದ ಸಂಗತಿಗಳನ್ನು ತಾವೇ ತಮ್ಮ ಗೆಳೆಯರ ಸಂಗಡ ಕಲಿತುಕೊಳ್ಳಬಲ್ಲರು.

ಹೃದಯವಿಕಾಸವಿಲ್ಲದ ಶಿಕ್ಷಣವು ನಿರುಪಯುಕ್ತವೂ, ಅಪಾಯಕರವೂ ಎಂದು ಅವರ ವಿಶ್ವಾಸ. ಇಂಥ ಶಿಕ್ಷಣ ಕೊಡಬಲ್ಲ ಶಿಕ್ಷಕನಿಗೆ ಪದವಿಗಳು ಪಾತ್ರತೆಯನ್ನು ತರಲಾರವು. ಶಿಕ್ಷಕನು ತನ್ನ ಶೀಲದ ಬಗ್ಗೆ ಬಹಳ ಜಾಗರೂಕನಾಗಿರಬೇಕಾಗುವದು. ಶಿಕ್ಷಕನು ತಾನು ಬೋಧಿಸುವ ಸದ್ಗುಣಗಳ ಮೂರ್ತಿಮಂತ ಮಾದರಿಯಾಗಿರಬೇಕು.

ಶಿಕ್ಷಣವು ಸಾಮಾಜಿಕ ಜೀವನಕ್ಕಾಗಿದ್ದು, ಜೀವನದುದ್ದಕ್ಕೂ ಜೀವನದ ಮುಖಾಂತರ ಸಾಗಬೇಕು. ಜೀವನವೇ ಶಿಕ್ಷಣ, ಶಿಕ್ಷಣವೇ ಜೀವನ. ಜ್ಞಾನವು ಅನುಭವದ ಜೊತೆಗೆ ಬೆರೆತುಕೊಂಡಾಗಲೇ ಜೀವನಕ್ಕೆ ಉಪಯುಕ್ತವಾಗಿ ಜೀವನವನ್ನು ವಿಧವಿಧವಾಗಿ ಕುಸುರಿಸಬಲ್ಲದು. ಜೀವನಾವಶ್ಯಕವಾದ ವಸ್ತುಗಳ ವಿಷಯದಲ್ಲಿ ಮನುಷ್ಯನು ಸ್ವಾವಲಂಬಿ ಆಗಬೇಕು. ಅಂದರೇನೇ ಅವನಲ್ಲಿ ಸ್ವಾಭಿಮಾನವು ಅಂಕುರಿಸುವದು. ಅವನು ಯಾರ ಹಂಗೂ ಇಲ್ಲದೆ, ಮರ್ಯಾದೆಯಿಂದ ಬಾಳುವನು ಎಂಬ ಉದಾತ್ತವಾದ ತತ್ವವೇ ಜೀವನ ಶಿಕ್ಷಣದ ಅಡಿಗಲ್ಲು.

ಜೀವಿತ ಮಾರ್ಗ ಖಾದಿ :

ಖಾದಿ ಎಂದರೆ ಗಾಂಧೀಜಿಯ ಜೀವಾಳ. ಹಿಂಸೆಯನ್ನೆದುರಿಸಿ, ಅದನ್ನು ದೂರ ಮಾಡುವ ನಿಲುಮೆಯೇ ರಾಟೆಯ ಬಲವಾದ ತಳಹದಿ.

ಖಾದಿಯ ಉತ್ಪತ್ತಿ, ಶುದ್ಧ ಖಾದಿಯ ಧಾರಣ, ಇವು ಸರಳ ಜೀವನದ ಪ್ರತೀಕ. ತನಗೆ ಬೇಕಾದ ವಸ್ತುಗಳನ್ನು ತಾನೇ ಕೈಮುಟ್ಟಿ ಮಾಡಿಕೊಳ್ಳದೇ ಅವುಗಳ ಉಪಭೋಗ ಮಾಡಿದರೆ ಅದು ಕಳವು ಎನಿಸುವದು. ಎಂದು ಗಾಂಧೀಜಿ ಹೇಳಿದ್ದಾರೆ. "ಉದ್ಯೋಗವಿಲ್ಲದವನ ಮನಸ್ಸು ಕುವಿಚಾರದ ಆಗರ; ಕಾಯಕದಿಂದ ಮನಸ್ಸು ಸುವಿಚಾರಗಳಲ್ಲಿ ತೊಡಗುವದು. ಕಾಯಕದ ಮೂಲಕ ಕೈಯು ಸದಾ ನಿರತವಾಗಿರಬೇಕು.

ಗಾಂಧೀಜಿಯ ಪ್ರಾರ್ಥನೆ :

ಕೇವಲ ತುಟಿಯಿಂದ ಮಾಡುವ ಪ್ರಾರ್ಥನೆ ಪ್ರಾರ್ಥನೆಯಲ್ಲ. ಸೊಗಸಾದ ಪದ್ಯಗಳನ್ನು ಸರಾಗವಾಗಿ ಅನ್ನುತ್ತ ಮನಸ್ಸನ್ನು ಬೇಕಾದತ್ತ ಹರಿಬಿಡುವದು ಪ್ರಾರ್ಥನೆಯಲ್ಲ. ಚಂಚಲವಾದ ಚಿತ್ತವನ್ನು ನಿಗ್ರಹಿಸಿ, ಅದನ್ನು ಪರಿಶುದ್ಧಗೊಳಿಸಿ ದೇವರ ಪಾದ ತಲದಲ್ಲಿ ಅದನ್ನು ಕೇಂದ್ರೀಕರಿಸಿ ನಲ್ಲಿಸಿದ ಪ್ರಾರ್ಥನೆ, ನಿಜವಾದ ಪ್ರಾರ್ಥನೆ. ಭಕ್ತಶಿರೋಮಣಿ ಎಂದೆನಿಸಿಕೊಂಡ ಹನುಮಂತನ ನಾಲಿಗೆಯಮೇಲಷ್ಟೇ ರಾಮನಾಮವು ನಲಿಯುತ್ತಿರಲಿಲ್ಲ. ಅವನ ಹೃತ್‌ಪೀಠದಲ್ಲಿ ಅವನ ರೋಮ ರೋಮಗಳಲ್ಲಿ, ರಾಮನ ಮೂರ್ತಿಯು ಸದಾ ವಿರಾಜಮಾನವಾಗಿತ್ತು.

ಹೃದಯಾಂತರಾಳದಿಂದ ಹೊರಹೊಮ್ಮುವ ಪ್ರಾರ್ಥನೆಯ ಬಲದಿಂದ ನಾವು ನಮ್ಮ ಯಾವದೇ ಬಗೆಯ ದುರ್ಬಲತೆಗಳನ್ನು ತೆಗೆದು ಹಾಕುವದು ಸಾಧ್ಯ. "ನಂಬಿ ಕರೆದರೆ ಓ ಎನ್ನನೆ ಶಿವನು? ಎಂದು ಭಕ್ತಿ ಭಾಂಡಾರಿ ಬಸವಣ್ಣನವರು ನುಡಿದಿಲ್ಲವೆ? ಆದ್ದರಿಂದ ಪ್ರಾರ್ಥನೆಯಲ್ಲಿ ನಂಬಿಕೆ, ಶ್ರದ್ಧೆ ಮುಖ್ಯವಾತು. ಪ್ರಾರ್ಥನೆ ಎಂದರೆ ಹೃದಯದ ಕೂಗು; ನುಡಿಯು ಅರ್ಥವಲ್ಲ, ಸಂಗೀತದ ಸೊಂಪಲ್ಲಿ, ಪ್ರಾರ್ಥನೆಯನ್ನು ಆಶ್ರಯಿಸದೇ ನಾನು ಹೋಗಿದ್ದರೆ ನನಗೆ ಎಂದೋ ಹುಚ್ಚು ಹಿಡಿಯುತ್ತಿತ್ತೆಂದು ನುಡಿದಿದ್ದರು ಗಾಂಧಿಜಿ.

ಹಳ್ಳಿಯ ಉದ್ಯೋಗಗಳು ಮತ್ತು ಜೀವನ ಶಿಕ್ಷಣ

ಲೇಖಕರು :— **ಶ್ರೀ ಬಿ. ಬಿ. ಗಿಡ್ನಂದಿ,** S.S.C. ಬೇಸಿಕ್ ಟ್ರೇಂಡ್ ಜೀ.ಶಿ.ಕ.ಗಂ. ಶಾಲಾ, ಹುಲಕೋಟೆ (ಗದಗ)

ಭಾರತ ದೇಶವು ಹಳ್ಳಿಗಳ ಸಂಪತ್ತಿನ ಆಗರವಾಗಿದೆ. ಹಳ್ಳಿಗಳ ಮುಖ್ಯ ಉದ್ಯೋಗ ಕೃಷಿಪ್ರಧಾನವಾಗಿದೆ ಅಲ್ಲದೆ ಇತರ ಗ್ರಾಮೋದ್ಯೋಗಗಳುಂಟು. ಮಾನವನು ಜೀವಿಸಲು ಅವಶ್ಯವಿರುವದು ಮುಖ್ಯವಾಗಿ ಆಹಾರ–ಆಶ್ರಯ–ಆಚ್ಛಾನದವಲ್ಲವೆ? ಇವೆಲ್ಲವುಗಳನ್ನು ಪೂರೈಸಲು ಮುಖ್ಯವಾಗಿರುವದು "ಒಕ್ಕಲತನ"ವೆಂಬುದು ಬೇರೆ ಹೇಳಬೇಕಾಗಿಲ್ಲ. ಕೃಷಿ ಪ್ರಧಾನವಾದ ನಮ್ಮ ರಾಷ್ಟ್ರದ ಹಿರಿಮೆಯನ್ನು ಎಷ್ಟು ಬಣ್ಣಿಸಿದರೂ ಕಡಿಮೆಯಲ್ಲವೆ? ಹೌದು! ಆದರೆ! ನಮ್ಮ ದೇಶದ ಮುಖ್ಯ ಉದ್ಯೋಗಕ್ಕೂ ಇತರ ಚಿಕ್ಕ ಉದ್ದಿಮೆಗಳಿಗೂ ಯೋಗ್ಯ ಶಿಕ್ಷಣ ದೊರೆಯದೆ ಆ ಉದ್ಯೋಗಗಳು ಕುಂಠಿತವಾಗುತ್ತಲಿವೆ. ಇದರಿಂದ ಜನರು ನಿರುದ್ಯೋಗಿಗಳಾಗುವ ಸಂಭವವುಂಟು ಅದಕ್ಕೆ ಯೋಗ್ಯ ಶಿಕ್ಷಣವು ಅವಶ್ಯವಾಗಿದೆ. "ಶಿಕ್ಷಣವು ರಾಷ್ಟ್ರದ ತಳಹದಿಯಾಗಿದೆ" ಶಿಕ್ಷಣದಿಂದಲೇ ರಾಷ್ಟ್ರದ ಪ್ರಗತಿಯು.

ರಾಷ್ಟ್ರದ ಬೀಜವು ಅಂಕುರಿಸುವದು ಶಾಲೆಯಲ್ಲಿಯೇ. ಹಳ್ಳಿಗಳ ಆರ್ಥಿಕ ಮುಗ್ಗಟ್ಟನ್ನು ಸುಧಾರಿಸಲು ಮುಖ್ಯ ಉದ್ಯೋಗ ಹಾಗೂ ಚಿಕ್ಕ ಉದ್ದಿಮೆಗಳು ಬೆಳವಣಿಗೆಯಾಗುವದು ಅವಶ್ಯವಿದೆ. ಅಂತೆಯೇ ಮಹಾತ್ಮಾ ಗಾಂಧಿಯವರು ಪ್ರತಿಮನೆಯೂ ಕಾರಖಾನೆಯಾಗಲಿ ಎಂಬ ದುಡಿಮೆಯ ಪರಾಕಾಷ್ಠತೆಯನ್ನು ತಮ್ಮ ಜೀವನದುದ್ದಕ್ಕೂ ಸಾರುತ್ತಲೇ ಇದ್ದರು. ಅಂದರೆ ಹಳ್ಳಿಗರ ಆರ್ಥಿಕ ಮಟ್ಟ ಸುಧಾರಿಸುವದು. ಗ್ರಾಮೋದ್ಯೋಗಗಳಿಂದ ಉತ್ಪಾದಿಸಲ್ಪಟ್ಟ ಮಾಲಿಗೆ ಬೇಡಿಕೆಯು ಅವಶ್ಯವಾಗಿದೆ. ಮಾಲಿನ ಉಪಯೋಗದ ಬಗ್ಗೆ ಜನರಲ್ಲಿ ಅಭಿರುಚಿ, ಆಸಕ್ತಿ ಮೂಡಿಬರಬೇಕು. ಜನರಲ್ಲಿ ಈ ಅಭಿರುಚಿ ಹುಟ್ಟಿಸುವದೆಂತು? ಎಂಬ ಈ ವಿಚಾರ ಕ್ರಾಂತಿಗೆ ಪೂಜ್ಯ ಬಾಪೂಜಿಯವರು ವಿಚಾರಿಸಿ ಇಂದಿನ ಶಾಲಾ ವಯಸ್ಸಿನಲ್ಲಿಯ ಪೀಳಿಗೆಯಿಂದಲೇ ಸಾಧ್ಯವೆಂದು ಕಂಡು ಹಿಡಿದು, ಕೃತಿಮೂಲ ಶಿಕ್ಷಣವನ್ನು ಶಾಲೆಯಲ್ಲಿ ಪ್ರಾರಂಭಿಸಬೇಕೆಂದು ಯೋಚಿಸಿದರು. ಜೀವನಾವಶ್ಯಕವಾದ ವಸ್ತುಗಳನ್ನು ಕೈಯಿಂದಲೇ ಉತ್ಪಾದಿಸುವಂತಾಗ ಬೇಕೆಂದು, ಎಲ್ಲ ಪ್ರಾಥಮಿಕ ಶಾಲೆಗಳನ್ನು ಜೀವನ ಶಿಕ್ಷಣ ಶಾಲೆಗಳನ್ನಾಗಿ ಪರಿವರ್ತಿಸಬೇಕೆಂದು ಘೋಷಿಸಿ, ತಾವೇ ಸ್ವತಃ ವರ್ಧಾ ಎಂಬಲ್ಲಿ ಈ ಶಿಕ್ಷಣವನ್ನು ಪ್ರಾರಂಭಿಸಿ ಪ್ರಯೋಗ ಮಾಡಿ ಜಯಶೀಲರಾದರು. ಸರಕಾರಕ್ಕೆ ಈ ಶಿಕ್ಷಣ ವಿಚಾರವನ್ನು ತಿಳಿಸಿದರು. ಸರಕಾರದವರು ನಿಚಾರವನ್ನು ಪರಿಶೀಲಿಸಿ, ಮಾನ್ಯ ಮಾಡಿ ಜೀವನ ಶಿಕ್ಷಣದ ಪ್ರಾಥಮಿಕ ಹಂತವನ್ನು ಭಾರತಾದ್ಯಂತವಾಗಿ ಪರಿವರ್ತಿಸುವ ಕಾರ್ಯವನ್ನು ಕೈಕೊಳ್ಳುತ್ತಲಿದ್ದಾರೆ. ಇಂಥ ಶಾಲೆಗಳಲ್ಲಿ ಮಕ್ಕಳು ಮೂಲೋದ್ಯೋಗಗಳನ್ನು ಮಾಡುವಲ್ಲಿ ಅನುಭವಗಳನ್ನು ಪಡೆಯುವರು. ರೂಢಿಯಿಂದ ನೈಪುಣ್ಯವನ್ನು ಪಡೆಯುವರು. ಬಾಲ್ಯದಲ್ಲಿ ಚಿಕ್ಕ ಉದ್ದಿಮೆಗಳ ಬಗ್ಗೆ ಜೀವನ ಶಿಕ್ಷಣ ಶಾಲೆಗಳಲ್ಲಿ ಕಲಿತ ಮಕ್ಕಳು ಹಳ್ಳಿಯ ಉದ್ಯೋಗಗಳಲ್ಲಿ ಹೆಚ್ಚಾಗಿ ತರಬೇತಿಯನ್ನು ಪಡೆಯಲಿಕ್ಕೂ ಮತ್ತು ಹಳ್ಳಿಯ ಉದ್ಯೋಗಗಳ ಬಗ್ಗೆ ಪ್ರಸಾರ ಕಾರ್ಯ ಮಾಡಲಿಕ್ಕೂ ಸಾಮಾನ್ಯ ಪ್ರೌಢರಿಗಿಂತ ಹೆಚ್ಚು ಉಪಯುಕ್ತರಾಗುವರೆಂದು ಬೇರೆ ಹೇಳಬೇಕಿಲ್ಲ.

ಜೀವನ ಶಿಕ್ಷಣ ಶಾಲೆಗಳಲ್ಲಿ ಕೃತಿಮೂಲ ಶಿಕ್ಷಣ ಸಾಗುವದರಿಂದ ಇಲ್ಲಿ ಬಾಲಕನು ಸ್ವತಃ ಕೃತಿಯನ್ನು ಮಾಡಿ ಅದರ ಜ್ಞಾನವನ್ನು ಪಡಕೊಳ್ಳುವನು. ಇದರಿಂದ ಬಾಲಕನು ಸ್ವಾವಲಂಬಿ ಹೊಣೆಗಾರ ನಾಗರಿಕನಾಗುವದರಲ್ಲಿ ಸಂದೇಹವಿಲ್ಲ. ಎಲ್ಲ ಮಕ್ಕಳೂ ಕೂಡಿಯೇ ಶಾಲೆಯಲ್ಲಿ ನಡೆಯುವ ಸಾಂಸ್ಕೃತಿಕ, ಆರ್ಥಿಕ, ನೈಸರ್ಗಿಕ ಚಟುವಟಿಕೆಗಳಲ್ಲಿ ಭಾಗವಹಿಸುವದರಿಂದ ಸಂಘ ಜೀವನವನ್ನು ಕಲಿಯುವರು. ತ್ಯಾಗ ಬುದ್ಧಿ, ಸಮಭಾವನಾವೃತ್ತಿ ಮುಂತಾದವುಗಳನ್ನೆಲ್ಲ ಕಲಿಯುವರು. ಸಂಘಟನಾ ಚಾತುರ್ಯ ಬರುವದು. ಮುಂದಾಳುವಿನ ಯೋಗ್ಯ ತರಬೇತಿ ದೊರೆಯುವದು. ಶ್ರಮಗೌರವ ಭಾವನೆಯು ಬೆಳೆಯುವದು. ಯೋಗ್ಯ ಹೊಣೆಗಾರಿಕೆಯಿಂದ ಕರ್ತವ್ಯ ಪರಿಪಾಲನೆಯಲ್ಲಿ ರೂಢಿ, ಸ್ವಯಂಶಾಸಿತ ಸಂಘ ಸಂಸ್ಥೆಗಳಲ್ಲಿ ಕಾರ್ಯ ನಿರ್ವಹಿಸಲು ಅರ್ಹತೆ ಉಂಟಾಗುವದು. ಬಾಲಕರಲ್ಲಿ ಮಾನವೀಯತೆಯ ಭಾವನೆಯು ಒಡಮೂಡುವದು. ಇಂಥ ಶಿಕ್ಷಣವನ್ನು ಬಾಲಕನು ಪಡೆಯುವ

ದರಿಂದ ನಾಳಿನ ನಾಗರಿಕನಾಗುವ ಮಗು ಸುಸಂಸ್ಕೃತನಾಗಿ ಬಾಳಲು ತನ್ನ ಶಾಲೆ, ತನ್ನ ಊರು, ಸಮಾಜ, ದೇಶಗಳ ಸಲುವಾಗಿ ಮನಃಪೂರ್ವಕವಾಗಿ ಶ್ರಮಿಸಿ ಸೇವೆ ಸಲ್ಲಿಸಲು ಸಮರ್ಥನಾಗುವನು. ಒಟ್ಟಾರೆ ಬಾಲಕನ ಸರ್ವಾಂಗೀಣ ಅಂದರೆ ದೈಹಿಕ, ಬೌದ್ಧಿಕ, ಮಾನಸಿಕ ಹಾಗೂ ನೈತಿಕ ಬೆಳವಣಿಗೆಗೆ ಅವಕಾಶ ಕಲ್ಪಿಸಿ ಸಚ್ಛೀಲರಾದ ಬಂಧು ಭಾವವುಳ್ಳ, ದೇಶಾಭಿಮಾನಿಗಳ ನೂತನ ಸಮಾಜದ ಘಟಕಗಳನ್ನು ತಯಾರಿಸುವದು ಜೀವನ ಶಿಕ್ಷಣದಿಂದಲೇ ಸಾಧ್ಯ.

ಜೀವನ ಶಿಕ್ಷಣ ಹೊಂದಿದ ಮಕ್ಕಳು ಮೊದಲು ಶಾಲಾ ವಯಸ್ಸಿನಲ್ಲಿಯ ತಯಾರಿಸಿದ ವಸ್ತುಗಳನ್ನು ಉಪಯೋಗಿಸಬೇಕೆಂಬ ಹಂಬಲವು, ದೊಡ್ಡವರಾದ ಮೇಲೆ ಸ್ವದೇಶಾಭಿಮಾನದಲ್ಲಿ ರೂಪಗೊಳ್ಳುವದು. ಇದರಿಂದ ಹಳ್ಳಿಗಳ ಉದ್ಯೋಗಗಳ ಬೆಳವಣಿಗೆಗೆ ಅನುಕೂಲವಾಗುವದು. ಗ್ರಾಮೋದ್ಯೋಗಗಳಿಂದ ಹಳ್ಳಿಯ ಆರ್ಥಿಕ ಸ್ಥಿತಿಯು ಸುಧಾರಿಸುವದು, ಜೀವನ ಶಿಕ್ಷಣ ಶಾಲೆಗಳಿಗೂ ಗ್ರಾಮೋದ್ಯೋಗಗಳಿಗೂ ಹಳ್ಳಿಯ ಆರ್ಥಿಕ ಸುಧಾರಣೆಗಳಿಗೂ ಒಳ್ಳೇ ನಿಕಟ ಸಂಬಂಧ ಬೆಳೆಯುವದರಿಂದ ಇಡೀ ರಾಷ್ಟ್ರದ ಏಳಿಗೆಯಾಗುವದರಲ್ಲಿ ಯಾವ ಅಭ್ಯಂತರವಿಲ್ಲ.

ಗ್ರಾಮೋದ್ಯೋಗ ಬೆಳೆಯುವದರಿಂದ, ಹಳ್ಳಿಗರು ಒಳ್ಳೇ ಸುಶಿಕ್ಷಿತರಾಗುವದರಿಂದ ಹಳ್ಳಿಗಳು ಸ್ವಾವಲಂಬಿ ಮತ್ತು ಸ್ವಯಂಪೂರ್ಣವಾಗುವವು. ಆದ್ದರಿಂದ ಹಳ್ಳಿಗಳ ಉದ್ಧಾರಕ್ಕೆ ಅನುಕೂಲವಾದ ಜೀವನ ಶಿಕ್ಷಣವನ್ನು ಪ್ರಗತಿ ಮಾರ್ಗದಲ್ಲಿ ಸರಿಯಾದ ರೀತಿಯಲ್ಲಿ ತೀವ್ರಗತಿಯಿಂದ ಮುಂದುವರಿಸಲು ಸರಕಾರವು ಪ್ರಯತ್ನಿಸುತ್ತಿದೆ. ಭಾರತದ ಪ್ರತಿಯೊಂದು ಹಳ್ಳಿಯ ಶಾಲೆಯನ್ನು ಮತ್ತು ಮಾಧ್ಯಮಿಕ ಶಾಲೆಗಳನ್ನು ಜೀವನ ಶಿಕ್ಷಣ ಶಾಲೆಯನ್ನಾಗಿ ಮಾರ್ಪಡಿಸಲು ಸರಕಾರವು ಶ್ರಮಿಸುತ್ತದೆ. ಅದಕ್ಕೆ ಬೇಕಾಗುವ ಸಹಾಯ ಧನವನ್ನು ಒದಗಿಸಿ ಕೊಡುತ್ತಲಿದೆ.

"ಹಳ್ಳಿಗಳು ಭಾರತದ ಹೃದಯವಿದ್ದಂತೆ" ಹಳ್ಳಿಗಳ ಉದ್ಧಾರವೇ ರಾಷ್ಟ್ರೋದ್ಧಾರ ಎಂಬ ಪೂಜ್ಯ ಬಾಪೂಜಿಯವರ ಮಾತು, ನಿಜವಾಗಿಯೂ ಈ ಜೀವನ ಶಿಕ್ಷಣದಿಂದಲೇ ಸಾಧ್ಯ. ಪ್ರತಿ ಹಳ್ಳಿಗೂ ಈ ಜೀವನ ಶಿಕ್ಷಣದ ಮಹತ್ವವನ್ನರಿತಾಗ ಹಳ್ಳಿಯ ಗ್ರಾಮೋದ್ಯೋಗಗಳೆಲ್ಲವೂ ಬಲಗೊಳ್ಳುವವು. ಎಲ್ಲರೂ ಉದ್ಯೋಗಶೀಲ, ಸ್ವಾವಲಂಬಿ, ಸ್ವದೇಶಾಭಿಮಾನಿಗಳಾಗುವರು. ಸಮಾಜದ ಉನ್ನತಿಯಾಗುವದು. ಜನತೆಯ ಜೀವನಾವಶ್ಯಕತೆಗಳು ಪೂರೈಸುವವು. ಅಂದರೆ ಭಾರತವು ಸುಖಸಂಪತ್ತಿನ ಆಗರವಾಗಿ, ವಿದ್ಯಾಸಂಪತ್ತಿನ ಆದರ್ಶ ರಾಷ್ಟ್ರವಾಗಿ ಬೆಳಗುವದು. ದೇವರು ದಯಪಾಲಿಸಲಿ.

—: ಜೈ ಹಿಂದ್ :—

ಗ್ರಾಮೀಣ ಜೀವನದಲ್ಲಿ ಶಾಲಾ ಗುರು

ಲೇಖಕರು :— ಶ್ರೀ ಮು. ಗು. ಘಿವಾರಿ, ಕ. ಗಂ. ಶಾ. ನಂ. ೧ ಬೆಳಗಾವಿ

ಪ್ರಜಾಪ್ರಭುತ್ವದ ಯಶಸ್ಸಿಗೆ ಶಿಕ್ಷಣ ಪ್ರಸಾರ ಅತ್ಯವಶ್ಯ. ಶಿಕ್ಷಣ ಪ್ರಸಾರವಾಗಬೇಕಾದರೆ ಗ್ರಾಮಾಂತರ ಪ್ರದೇಶದಲ್ಲಿ ಸಾಕಷ್ಟು ಶಾಲೆಗಳಿರಬೇಕಾಗುತ್ತದೆ. ಆದ್ದರಿಂದ ಹತ್ತೆಂಟು ಗುಡಿಸಲುಗಳಿರುವ ಹಳ್ಳಿಗೂ ಶಾಲೆ ತೆರೆಯುವ ಎತ್ತುಗಡೆ ಸರಕಾರ ಮಾಡುತ್ತಲಿದೆ. ಹಳ್ಳಿಯ ಜೀವನ ಹಸನಾಗಿ, ಹಳ್ಳಿಗರು ಸಾಕ್ಷರರಾಗಿ, ಜ್ಞಾನವಂತರಾಗಿ, ರಾಜ್ಯ ಮತ್ತು ರಾಷ್ಟ್ರ ಇವುಗಳ ಪರಿಜ್ಞಾನವುಳ್ಳವರಾಗಿ ಮಾರ್ಪಟ್ಟಾಗಲೇ ನಮ್ಮ ಪ್ರಜಾಪ್ರಭುತ್ವವು ಪೂರ್ಣ ವಿಕಸಿತವಾಗುತ್ತದಲ್ಲವೆ? ಶಿಕ್ಷಣದ ಪ್ರಸಾರ ಕಾರ್ಯವನ್ನು ಸರಕಾರ ಯೋಜಿಸುವದಾದರೂ ಅದನ್ನು ಕಾರ್ಯಕಾರೀ ಮಾಡುವವರು ಗ್ರಾಮಾಂತರ ಪ್ರದೇಶದ ಶಾಲಾ ಗುರುಗಳಲ್ಲವೆ? ಆದುಕಾರಣ ಗ್ರಾಮೀಣ ಜೀವನದಲ್ಲಿ ಶಾಲಾ ಗುರುವಿನ ಪಾತ್ರ ಬಲು ಹಿರಿದಾಗಿದೆ.

ಪ್ರತಿಯೊಂದು ಗ್ರಾಮವು ಅದು ಎಷ್ಟೇ ಚಿಕ್ಕದಿರಲಿ, ರಾಷ್ಟ್ರದ ಮೂಲಘಟಕವಾಗಿರುತ್ತದೆ. ರಾಷ್ಟ್ರದ ಸರ್ವಾಂಗೀಣ ಪ್ರಗತಿಯಾಗಬೇಕಾದರೆ ಅದು ಮೂಲ ಘಟಕಗಳಾದ ಗ್ರಾಮಗಳ ಸರ್ವತೋಮುಖ ಏಳ್ಗೆಯಾಗುವದು

ಅತ್ಯವಶ್ಯ. ಈ ಗ್ರಾಮಾಭಿವೃದ್ಧಿ ಕಾರ್ಯ ಕೈಗೂಡ ಬೇಕಾದರೆ ಗ್ರಾಮೀಣ ಜನತೆಯ ಸಲಹೆ, ಸಹಕಾರಗಳು ಸರಕಾರಕ್ಕೆ ದೊರೆಯಬೇಕಾಗುತ್ತದೆ. ಈ ದಿಶೆಯಲ್ಲಿ ಸರಕಾರ ಮತ್ತು ಗ್ರಾಮೀಣ ಜನತೆಯನ್ನು ಒಂದುಗೂಡಿ ಸಲು 'ಗ್ರಾಮ ಸೇವಕ'ರಂತೆ ಶಾಲಾಗುರುಗಳೂ ಕಾರಣ ಕರ್ತರಾಗುವರು. ಅಜ್ಞಾ ಹಾಗೂ ಅಂಧ ಶ್ರದ್ಧೆಯ ಗ್ರಾಮೀಣ ಜನತೆಯ ಮಧ್ಯದಲ್ಲಿದ್ದುಕೊಂಡು, ಅವರ ಮಕ್ಕಳ ಶಿಕ್ಷಣ ಕಾರ್ಯ ನೆರವೇರಿಸುತ್ತ, ಶಾಲೆಯ ಬಿಡುವಿನ ವೇಳೆಯಲ್ಲಿ ಸಮಾಜ ಶಿಕ್ಷಣ ವರ್ಗವನ್ನು ತೆರೆದು, ಗ್ರಾಮದ ಬಹುಜನ ಪ್ರೌಢರಿಗೆ ಪಾಠ ಹೇಳಿಕೊಟ್ಟು, ತನ್ಮೂಲಕ ಅವರಿಗೆ ಸಾಮಾಜಿಕ ಪರಿಜ್ಞಾನವನ್ನುಂಟು ಮಾಡಿ ಕೊಡುವ ಹೊಣೆಯಿಂದು ಹೆಚ್ಚಾಗಿ ಶಾಲಾ ಗುರುವಿನ ಮೇಲೆಯೇ ಹೊರಿಸಲ್ಪಟ್ಟಿದೆಯಲ್ಲವೆ?

ಪ್ರತಿಯೊಂದು ಗ್ರಾಮದಲ್ಲಿ ಸಾಮಾನ್ಯವಾಗಿ ಬೇರೆ ಬೇರೆ ಮತದ ಹಾಗೂ ಬೇರೆ ಬೇರೆ ಧರ್ಮದ ಅನುಯಾಯಿ ಗಳು ಇದ್ದೇ ಇರುತ್ತಾರೆ. ಅವರ ಆಚಾರ-ವಿಚಾರಗಳಲ್ಲಿ, ನಡೆ-ನುಡಿಗಳಲ್ಲಿ ಭಿನ್ನತೆಯು ಕಂಡು ಬರುತ್ತದೆ. ಆದರೂ ಅವರೆಲ್ಲರು ಕೂಡಿಯೇ ಬಾಳುತ್ತ ಬಂದಿರುವದರಿಂದ ಅವರ ಜೀವನ ಪ್ರವಾಹವು ಒಂದೇ ಬುಡಕಟ್ಟಿನ ಮೇಲೆ ಸಾಗಿ ದ್ದುದು ಸೂಕ್ಷ್ಮ ಮತೀಯರಿಗೆ ಕಂಡು ಬಾರದಿರದು. ಇತ್ತಿತ್ತಲಾಗಿ ಈ ಬುಡಕಟ್ಟು ಅದರತೊಡಗಿದೆ. ಏಕೆಂದರೆ ಇಂದಿನ ಗ್ರಾಮೀಣ ಜನತೆಗೆ ಮೊದಲಿನವರಂತೆ ಮನೋ ವೈಶಾಲ್ಯತೆಯಿಲ್ಲದಾಗಿದೆ, ಇದಕ್ಕೆ ಕಾರಣ ಅವ್ಯಾಹತ ವಾಗಿ ಹರಿಯುತ್ತ ಬಂದ ನಮ್ಮ ಪ್ರಾಚೀನ ಸಂಸ್ಕೃತಿಯ ಪ್ರವಾಹವು, ಒಮ್ಮೆಲೆ ಹರಿಗಡಿದು ನಿಂತುದಾಗಿದೆ. ಮೊದಲಿನವರು ನಿರಕ್ಷರರಾಗಿದ್ದರೂ ಸಂಸ್ಕೃತಿ ಸಂಪನ್ನ ರಾಗಿದ್ದರು. ಕೀರ್ತನ, ಪುರಾಣ, ಪ್ರವಚನಾದಿಗಳಿಂದ ಅವರಿಗೆ ಸಂಸ್ಕೃತಿಯ ಲಾಭ ದೊರೆಯುತ್ತಿತ್ತು. ಈಗ ಇವೆಲ್ಲ ಕ್ರಮೇಣ ನಿಂತು ಬಿಡುವ ಸ್ಥಿತಿಯಲ್ಲಿವೆ. 'ಟಾಕೀಯುಗ' ಅಂದರೆ, ಸಿನೇಮಾ ಯುಗ ಬಂದಂದಿನಿಂದ ನಮ್ಮ ಗ್ರಾಮೀಣ ಜನತೆಗೂ ಪಾಶ್ಚಿಮಾತ್ಯರ ಬಿಸಿಗಾಳಿ ತಟ್ಟ ಹತ್ತಿತು. ಪ್ರಾಚೀನ ಸಂಸ್ಕೃತಿಯ ಪ್ರಭಾವ ಕಡಿಮೆ ಯಾಗುತ್ತ ನಡೆಯಿತು. ಮೊದಲೇ ನಿರಕ್ಷರರಾಗಿದ್ದ ಹಾಗೂ ಇತ್ತಿತ್ತಲಾಗಿ ಹಲಕೆಲವರು ಅಲ್ಪ ಸ್ವಲ್ಪ ಸಾಕ್ಷರ ರೆನಿಸಿಕೊಂಡವರಲ್ಲಿ ಹಠತ್ತಾಗಿ ಪಾಶವಿ ಪ್ರವೃತ್ತಿಗಳು ಪುನಃ ಅವತಾರ ತಾಳಹತ್ತಿದವು. ಅವುಗಳ ಪರಿಣಾಮ ವಾಗಿ ನಮ್ಮ ಬಹುಸಂಖ್ಯ ಗ್ರಾಮಗಳು ಜಾತಿಮಾತ್ಸರ್ಯದ ಆಗರಗಳಾಗಿ, ನೀತಿಗೇಡಿಗಳ ನೆಲೆಯಾಗಿ ಬಣ-ಗುಂಪುಗಳ ತವರಾಗಿ, ಕೊಲೆ-ಸುಲಿಗೆಗಳಿಗೆ ಹೆಸರಾಗಿ ನಿಂತಿವೆ. ಇಂಥ ಪರಿಸರದ ಮಧ್ಯದಲ್ಲಿರುವ ಶಾಲಾ ಗುರುವಿನ ಪಾತ್ರ ಗುರುತರವಾಗಿದೆಯಲ್ಲವೇ?

ಅದೊಂದು ಕಾಲವಾಗಿತ್ತು. ನಮ್ಮ ಗ್ರಾಮಗಳು ನಮ್ಮ ಸಂಸ್ಕೃತಿಯ ಕೇಂದ್ರಗಳಾಗಿದ್ದವು. ಗ್ರಾಮದ ಸಮಸ್ತ ಜನರು ಅನ್ಯೋನ್ಯವಾಗಿ ನೆಮ್ಮದಿಯಿಂದ ಬಾಳು ತ್ತಿದ್ದರಲ್ಲದೆ ಜಾತಿ, ಮತ, ಪಂಗಡಗಳನ್ನೆಣಿಸದೆ ಒಬ್ಬರಿ ಗೊಬ್ಬರು ಸಹಕರಿಸಿ ನಡೆಯುತ್ತಿದ್ದರು. ಆವರಲ್ಲಿ ಜಾತೀಯ ಐಕ್ಯ ಕಂಡು ಬರುತ್ತಿತ್ತಲ್ಲದೆ ಧಾರ್ಮಿಕ ಸಹಿಷ್ಣುತೆಯೂ ಮೂಡಿ ನಿಂತಿತ್ತು. ಆಗ ಧಾರ್ಮಿಕ ವಿಧಿ-ವಿಧಾನಗಳನ್ನು ಹೆಚ್ಚಾಗಿ ಶಾಲಾ ಗುರುಗಳೇ ನಿರ್ವ ಹಿಸುತ್ತಿದ್ದರು. ಆದ್ದರಿಂದ ಶಾಲಾ ಗುರುಗಳು ಗ್ರಾಮೀಣ ಜನತೆಯ ಕಣ್ಮಣಿಗಳಾಗಿದ್ದರಲ್ಲದೆ ತಮ್ಮ ನೀತಿ ನಡತೆ ಗಳಿಂದ ಆವರ ಪ್ರೀತಿ ವಿಶ್ವಾಸಗಳನ್ನು ಪಡೆದವರಾಗಿದ್ದರು. ಕೆಲವು ಶಾಲಾ ಗುರುಗಳು ಗಿಡಮೂಲಿಕೆಯ ಔಷಧೀ ವಿಚಾರವನ್ನು ತಿಳಿದವರಾಗಿದ್ದರಲ್ಲದೆ ಗ್ರಾಮದ ಜನತೆಗೆ ತಜ್ಞನೈದ್ಯರಾಗಿ ಹೆಚ್ಚಿನ ಫಲಾಪೇಕ್ಷೆಯಿಲ್ಲದೆ ಸೇವೆ ಸಲ್ಲಿಸುತ್ತಿದ್ದರು. ಮತ್ತೆ ಕೆಲವರು ಜ್ಯೋತಿಷ್ಯ, ಪಂಚಾಂಗ ತಿಳಿದವರಾಗಿ ಜನರಿಗೆ ಸಹಾಯ ನೀಡುತ್ತಿದ್ದರು. ಬೇರೆ ಕೆಲವರು ಪೂಜೆ-ಪುರಸ್ಕಾರಗಳನ್ನು ನೆರವೇರಿಸುವ ಪೌರೋಹಿತ್ಯವನ್ನು ಕೈಕೊಂಡವರಾಗಿದ್ದರು. ಇನ್ನು ಕೆಲವರು ಸಂಗೀತಗಾರರಾಗಿಯೂ ಹಾಡುಗಾರ ರಾಗಿಯೂ ವಿನೋದಪ್ರಿಯರಾಗಿಯೂ ಇದ್ದು ಗ್ರಾಮೀಣ ಜನತೆಯ ಮನಸ್ಸನ್ನು ರಂಜಿಸುತ್ತಿದ್ದರು. ಕೆಲವು ಹಿರಿಯ ಗುರುಗಳು ತಮ್ಮ ಯೋಗ್ಯತೆಯ ಬಲ ದಿಂದ ಗ್ರಾಮದ ನ್ಯಾಯಪಂಚಾಯತಿಯ ಪ್ರಮುಖರಾಗಿ ದ್ದುಕೊಂಡು ಗ್ರಾಮೀಣ ಜನತೆಗೆ ನ್ಯಾಯದಾನ ಮಾಡು ತ್ತಿದ್ದರು. ಈ ರೀತಿಯಾಗಿ ಜನತೆಗೆ ಅಂದಿನ ಶಾಲಾ ಗುರುಗಳು ಧಾರ್ಮಿಕವಾಗಿಯೂ ಸಾಮಾಜಿಕವಾಗಿಯೂ ನೆರವು ನೀಡುವವರಾಗಿದ್ದರು. ಆದ್ದರಿಂದ ಅಂದಿನ ಗ್ರಾಮೀಣ ಜೀವನದಲ್ಲಿ ಶಾಲಾ ಗುರುವಿನ ಪಾತ್ರ ಬಹು ಮುಖವಾಗಿತ್ತು.

[ಮುಂದುವರಿಯುವದು]

ಇಂತಹದು ಇನ್ನೊಂದಿಲ್ಲ

ಆದರ್ಶ ಹಿಂದಿ-ಕನ್ನಡ ವ್ಯಾಕರಣ 1 ಬೆಲೆ: ೧ ರೂಪಾಯಿ.

ಲೇ.: ಎ. ಎಚ್. ಹುಂಡೇಕಾರ ಮತ್ತು ಎಮ್. ಎಚ್. ಬೆಳಲದವರ

ಪ್ರಾಥಮಿಕ ಶಾಲೆಗಳ ೫, ೬ ಮತ್ತು ೭ನೆಯ ಇಯತ್ತೆಗಳ ಹಿಂದಿ ಅಭ್ಯಾಸ ಪತ್ರಿಕೆಗನುಸಾರವಾಗಿ ಬರೆಯಲ್ಪಟ್ಟ ಪ್ರಥಮ ಹಿಂದಿ-ಕನ್ನಡ ವ್ಯಾಕರಣ ಪುಸ್ತಕ!

ಶಿಕ್ಷಕರಿಗೂ ಹಾಗು ವಿದ್ಯಾರ್ಥಿಗಳಿಗೂ ಸುಗಮವಾಗಿ ತಿಳಿಯುವಂತೆ ವ್ಯಾಕರಣದ ವಿವಿಧ ಅಂಗಗಳನ್ನು ಯೋಗ್ಯ ಉದಾಹರಣೆಗಳೊಂದಿಗೆ ವಿವೇಚಿಸಲಾಗಿದೆ. ಇದರ ಬಗ್ಗೆ ಕೆಳಗಿನ ಮಹನೀಯರು ಈ ರೀತಿ ಅಭಿಪ್ರಾಯಪಟ್ಟಿದ್ದಾರೆ:—

೧) ವಿದ್ಯಾರ್ಥಿಗಳಿಗೆ ಹಾಗು ಶಿಕ್ಷಕರಿಗೆ ಸಮರ್ಪಕವಾದ ರೀತಿಯಲ್ಲಿ ಮಾರ್ಗದರ್ಶನ ಮಾಡಬಲ್ಲದು.
ಶ್ರೀ ಆರ್. ಸಿ. ಭೂಸನೂರಮಠ, ಎಂ.ಎ., ರಾ. ಭಾ. ವಿಶಾರದ.

೨) ಹಿಂದಿ ಕಲಿಯಲೆತ್ನಿಸುವ ಸಣ್ಣವರಿಗೂ ದೊಡ್ಡವರಿಗೂ ಈ ಪುಸ್ತಕವು ತುಂಬ ಉಪಯುಕ್ತವಾಗಿದೆ.
ಪ್ರೊ. ಸರೋಜಿನಿ ಮಹಿಷಿ, ಎಂ.ಎ., ಎಲ್ಎಲ್. ಬಿ., ರಾ. ಭಾ. ರತ್ನ ಜನತಾ ಕಾಲೇಜ, ಧಾರವಾಡ.

೩) ಪ್ರಾಥಮಿಕ ಶಾಲೆಗಳ ವಿದ್ಯಾರ್ಥಿ ಮತ್ತು ಶಿಕ್ಷಕರಿಗೆ ಉಪಯುಕ್ತವಾಗುವ ರೀತಿಯಲ್ಲಿ ಬರೆದಿದ್ದಾರೆ.
ಶ್ರೀ ಎ. ವ್ಹಿ. ಕೌದಿ, ಬಿ. ಎ., ಕಾರ್ಯಾಧ್ಯಕ್ಷ, ಕರ್ನಾಟಕ ಪ್ರಾಂತೀಯ ಹಿಂದಿ ಪ್ರಚಾರ ಸಭಾ, ಧಾರವಾಡ.

೪) ಮಕ್ಕಳ ಮಾತೃಭಾಷೆಯ ವ್ಯಾಕರಣ ಭಾಗಕ್ಕೆ ಹೊಂದಿಕೆಯಾಗಿ ಇದನ್ನು ಸಾಗಿಸಿದ್ದು, ಈ ಹೊತ್ತಿಗೆಯ ವೈಶಿಷ್ಟ್ಯವಾಗಿದೆ. ಶ್ರೀ ಎಸ್. ಎಮ್. ನೇಗೂರ, ಬಿ.ಎ., ಬಿ.ಟಿ., ಡಿ.ಪಿ.ಈಡಿ., ಡಿ.ಬಿ.ಈ., ಎ.ಓ., ಮು. ಸ್ಕೂಲ ಬೋರ್ಡ, ಧಾರವಾಡ.

೫) ಹಿಂದಿ ಕಲಿಯುವವರಿಗೆ ಕೈ ದೀವಿಗೆಯಾಗಿದೆ! ಶ್ರೀ ಎಸ್. ವಾಯ್. ಶೀಲವಂತ, ಬಿ.ಎ., ಎಂ.ಈಡಿ., ಡಿ.ಪಿ.ಈಡಿ.,ಡಿ.ಬಿ.ಈ.. ರಾ. ಭಾ. ವಿಶಾರದ, ಎ.ಡಿ.ಇ.ಆಯ್., ಧಾರವಾಡ.

ಮೊದಲನೆಯ ಮುದ್ರಣದ ಪ್ರತಿಗಳು ಬಹಳೇ ಕಡಿಮೆ ಉಳಿದಿವೆ. ತಡಮಾಡುವವರು ಎರಡನೆಯ ಮುದ್ರಣದ ಹಾದಿ ಕಾಯುವ ಪ್ರಸಂಗ ಬರುವದು. ಕೂಡಲೇ ಬರೆಯಿರಿ. ಯೋಗ್ಯ ಕಮೀಶನ್ ಕೊಡಲಾಗುವದು.

ಅಧಿಕೃತ ಮಾರಾಟಗಾರರು:— **ಗಿರಿಜಾಧವ ಬೆಳಲದವರ ವಿರಕ್ತಮಠಗಲ್ಲಿ, ಧಾರವಾಡ**
ಇಲ್ಲಿಯೂ ವಿಚಾರಿಸಿರಿ: (೧) **ಭಾರತ ಬುಕ್ ಡಿಪೋ, ಧಾರವಾಡ** (೨) **ಜೇಕಿನಕಟ್ಟಿ ಬುಕ್ ಡಿಪೋ, ಹಾವೇರಿ**

Regd. No. B. 5375

ಭಾಗ ೧ ಕವಿತಾ ಸಂಕಲನ ೧೫೦ **ನಾವು ನಮ್ಮವರು** ಭಾಗ ೨ ಕಥಾ ಸಂಕಲನ ೧೫೦

(ಪ್ರಾಥಮಿಕ ಶಿಕ್ಷಕ ಸಾಹಿತಿಗಳ ಫೋಟೊ ಪರಿಚಯ ಕಥೆ ಕವನಗಳು)

ಮಾನ್ಯ ಎ. ಸಿ. ದೇವೇಗೌಡರು ಶಿಕ್ಷಣಾಧಿಕಾರಿಗಳು [D. P. I.] ಮೈಸೂರು ರಾಜ್ಯ ಅವರ ಮುನ್ನುಡಿ.

ಮಾನ್ಯ ಸಿದ್ಧಯ್ಯ ಪುರಾಣಿಕ 'ಕಾವ್ಯಾನಂದ'ರು ಡಿ. ಸೆಕ್ರೆಟರಿ ಶಿಕ್ಷಣ ವಿಭಾಗ ಇವರ ಹಿನ್ನುಡಿಗಳು.

- ಕೇವಲ ೩ ರೂಪಾಯಿ [ಅಂಚೆಸೇರಿ] ವಾರ್ಷಿಕ ಚಂದಾ ಹಣದಲ್ಲಿ ೩ನೆಯ ಮಾಲೆಯ ೧–೩ನೆಯ ಕುಸುಮ ಪಡೆಯಿರಿ.
- ಪ್ರಾಥಮಿಕ ಶಿಕ್ಷಕರ ಕಥೆ, ಕಾದಂಬರಿ, ಕವನ, ನಾಟಕಾದಿ ಕೃತಿಗಳು ಅಂದ ಪುಟಗಳಲ್ಲಿ.
- ಅಗಷ್ಟ ದಿಂದ ಅಗಷ್ಟಕ್ಕೆ ಒಂದು ವರುಷ. ● ಬಿಡಿ ಕುಸುಮ ಚಂದಾದರಿಗೆ ೪ ಜೆಲಿಯಲ್ಲಿ [ಅಂಚೆಯೇ]
- ವರ್ಷದ ಮಧ್ಯದಲ್ಲಿ ಚಂದಾದಾರರಾದರೂ ಆ ವರ್ಷದ ಎಲ್ಲ ಪುಸ್ತಕಗಳು ದೊರೆಯುವವು.
- ಇಂದೇ ಚಂದಾಹಣ ಕಳಿಸಿ ತಮ್ಮವೇ ಆದ ಶಿಕ್ಷಕರ ಬಳಗವು ಬೆಳೆಯಂತೆ ನೆರವಾಗಿರಿ. ಈ ಅಲ್ಪ ಹಣ ತಮ್ಮ ಶಿಕ್ಷಕ ಮಿತ್ರ ಎಲ್ಲಿಗೆ ಮೀಸಲು. ಗೆಳೆಯರನ್ನು, ವಾಚನಾಲಯಗಳನ್ನು ಚಂದಾದಾರರನ್ನು ಮಾಡಿ ನೆರವಾಗಿರಿ.

ವಿವರಗಳಿಗೆ: **ಭಾರತೀ ಸಾಹಿತ್ಯ ಭಂಡಾರ** ಊರು: **ಯರನಾಳ** ಜಿಲ್ಲೆ: **ಬಿಜಾಪುರ**

ಕಲ್ಯಾಣ ಕನ್ನಡ ಗುಡಿಯ ಕಾಣಿಕೆ

ಸುವರ್ಣ ಸಂಧಿ! ಸಚಿತ್ರ ಗ್ರಂಥ!! ಸುಂದರ ಮುದ್ರಣ!!!

"ಶಿಕ್ಷಣ–ಶಿಕ್ಷಕ–ದರ್ಶನ"

ಶಿಕ್ಷಕರಿಗೂ, ಶಿಕ್ಷಕ ವಿದ್ಯಾರ್ಥಿಗಳಿಗೂ, ಶಿಕ್ಷಣಾಭಿಮಾನಿಗಳಿಗೂ, ಉಪಯುಕ್ತವಾಗುವಂಥ, ತನು–ಮನ ತಣಿಸುವಂಥ, ಶಿಕ್ಷಣ ತಜ್ಞರಿಂದ ಪರಿಶೀಲಿಸಲ್ಪಟ್ಟಿಂಥ, ಭಾರತದಲ್ಲಿಯ ಮಾನ್ಯ ಮಂತ್ರಿವರ್ಯರಿಂದ, ರಾಜ್ಯಪಾಲರಿಂದ, ಶಿಕ್ಷಣಾಧಿಕಾರಿಗಳಿಂದ, ಪ್ರಿನ್ಸಿಪಾಲರಿಂದ, ಸಾಹಿತಿಗಳಿಂದ ಪ್ರಶಂಸೆ ಪಡೆದ ಅಭಿಪ್ರಾಯಗಳುಳ್ಳಂಥ, ಕರ್ನಾಟಕ ವಿಶ್ವವಿದ್ಯಾಲಯದ ಉಪ ಕುಲಪತಿಗಳಾದ ರ್ಯಾಂಗ್ಲರ್ ಶ್ರೀ ಡಿ. ಸಿ ಪಾವಟೆಯವರು ಮುನ್ನುಡಿ ಬರೆದಂಥ, ಅಮೋಘ ಗ್ರಂಥ.

ಶ್ರೀ ನಿಂಬಾಳ ಶಿಕ್ಷಕ ದಂಪತಿಗಳಿಂದ ಸಂಗ್ರಹಿಸಲ್ಪಟ್ಟಿದೆ ಅಖಿಲ ಕರ್ನಾಟಕದ ಗಣ್ಯ ಶಿಕ್ಷಕ–ಶಿಕ್ಷಕಿಯರ ಬಣ್ಣ ಬಣ್ಣಗಳಲ್ಲಿ ಳಗ ಫೋಟೊ ಬ್ಲಾಕ್, ಲೇಖನ, ಪರಿಚಯಗಳುಳ್ಳಂಥ ಎಲ್ಲ ಪುಟಗಳ ಅಮರ ಸಾಹಿತ್ಯ ಗ್ರಂಥ ಕನ್ನಡದಲ್ಲಿ ಒಂದು ಉತ್ತಮ ಮಾದರಿಯ ಶೈಕ್ಷಣಿಕ ಉದ್ಗ್ರಂಥ.

ದಿ. ೧೫ ಅಗಸ್ಟ ಸ್ವಾತಂತ್ರ್ಯ ದಿನದಂದು ಮಾನ್ಯ ಶ್ರೀ ಎ. ಎಚ್. ದಲವಾಯಿ, ಎ. ಓ. ನಾಯೇಬರ ಅಧ್ಯಕ್ಷತೆಯಲ್ಲಿ ಪ್ರೊ. ಬಿ. ಟಿ. ಸಾಸನೂರ ಇವರ ಅಮೃತಹಸ್ತದಿಂದ ಈ ಗ್ರಂಥ ಪ್ರಕಾಶನಗೊಂಡಿದೆ

ವಿವರಗಳಿಗೆ ಇಂದೇ ಈಗಲೇ ಬರೆಯಿರಿ.

ಸಾದಾ ಪ್ರತಿ ೩ ರೂ.] ವ್ಯಾಪಾರಸ್ಥರಿಗೆ ಧಾರಾಳವಾದ ಕಮೀಷನ್. **[ಸುಂದರ ಪ್ರತಿ ೪ ರೂ**

ವಿಳಾಸ :– **ಶ್ರೀ ನಿಂಬಾಳ ಕಲ್ಯಾಣಪ್ಪ, ಪೋಸ್ಟ:— ತಾಂಬಿ, ಜಿಲ್ಲಾ:— ಬಿಜಾಪುರ.**

Printed by Shri S. F. Kattimani, at Mandal Power Printing Press, Hubli.
Edited & Published by Sits. G. M. Josh B. M. S[illegible] & R. Lam & Smt. P. A. Bhaskar at the Kannada Jeevan Shikshan Office Govt. Training College for Men, Dharwar

ಪ್ರಜಾವಾಣಿ ಚಿತ್ರಮಾಲೆ

ಪ್ರಧಾನ ಸಂಪಾದಕರು : ಕೆ. ಎಸ್. ಶಿವರಾಮು



ಭಾಗ್ಯಶಿಲ್ಪಿ ಶತಾಯುಷಿ ಭಾರತರತ್ನ ಡಾ. ಎಮ್. ವಿಶ್ವೇಶ್ವರಯ್ಯನವರು

ಬಿಡಿ ಪ್ರತಿ : ೬ ಆಣೆ

ಪ್ರಕಟಣೆ ಗೆಟ್ಟಿದ್ದು

ಪ್ರಾ. ಚ. : ೪ ರೂ.

ಜೀವನ ಶಿಕ್ಷಣ

— ಸಂಪಾದಕ ಮಂಡಲ —

ಸಂಚಾಲಕರು : ಶ್ರೀ ಎಮ್. ಜಿ. ಹಂದ್ರಾಳ, ಬಿ.ಎ. (ಆನರ್ಸ), ಎಮ್.ಈಡಿ.,ಡಿ.ಬಿ.ಈಡಿ.,
ಎಜ್ಯುಕೇಶನಲ್ ಇನಸ್ಪೆಕ್ಟರ, ಧಾರವಾಡ.

ಪ್ರಧಾನ ಸಂಪಾದಕರು : ಶ್ರೀ ಜಿ. ಎಮ್. ಜೋಶಿ,
ಪ್ರಿನ್ಸಿಪಾಲ, ಗಂಡು ಮಕ್ಕಳ ಸರಕಾರಿ ಟ್ರೇನಿಂಗ ಕಾಲೇಜ, ಧಾರವಾಡ.

—: ಸದಸ್ಯರು :—

ಶ್ರೀಮತಿ ಪಿ. ಎ. ಭಾಸ್ಕರ, ಲೇಡಿ ಸುಪರಿಂಟೆಂಡೆಂಟ, ಹೆಣ್ಣು ಮಕ್ಕಳ ಸರಕಾರ ಟ್ರೇನಿಂಗ ಕಾಲೇಜ. ಧಾರವಾಡ.

ಶ್ರೀ ಬಿ. ಎಂ. ಶಿಂತ್ರಿ, ಬಿ.ಎ.,ಬಿ.ಟಿ., ನಿವೃತ್ತ ಅಸಿಸ್ಟಂಟ ಎಜ್ಯುಕೇಶನಲ್ ಇನಸ್ಪೆಕ್ಟರ ದಕ್ಷಿಣ ಭಾಗ,
(ಮುಂಬಯಿ ಕರ್ನಾಟಕ) ಹಾಗು ಗೌ. ಕಾರ್ಯದರ್ಶಿ ಮತ್ತು ಲಾಯಬ್ರೇರಿಯನ್.
ಸಾಹಿತ್ಯ ಸಮಿತಿ ಲಿಂಗಾಯತ ವಿದ್ಯಾಭಿವೃದ್ಧಿ ಸಂಸ್ಥೆ, ಧಾರವಾಡ

ಶ್ರೀ ಎಸ್. ಆರ್. ತಟ್ಟಿ, ರಿಟಾಯರ್ಡ ಪ್ರಿನ್ಸಿಪಾಲ, ಪ್ರಾಥಮಿಕ ಶಿಕ್ಷಕರ ಟ್ರೇನಿಂಗ ಕಾಲೇಜ. ನವಲಗುಂದ.

ಸಂಪುಟ ೯೬ ಸಪ್ಟಂಬರ ೧೯೬೦ ಸಂಚಿಕೆ ೪

— ಪರಿವಿಡಿ —

೧	ಸಂಪಾದಕೀಯ	....	....	೧
೨	ಸ್ವಾಸತ್ಯ ಶಿಲ್ಪಿ ವಿಶ್ವೇಶ್ವರಯ್ಯನವರು	....	ಶ್ರೀ ಹ. ಗ. ಜೋಶಿ	೨
೩	ಜೀವನ ಶಿಕ್ಷಣವೂ ಆಡಳಿತದ ಸಮಸ್ಯೆಗಳೂ	....	ಶ್ರೀ 'ಬಮಶಿಂ'	೫
೪	ಜೀವನ ಶಿಕ್ಷಣದಲ್ಲಿ ಚಟುವಟಿಕೆ ಮತ್ತು ಸಮವಾಯ ಜ್ಞಾನ	....	ಶ್ರೀ ಗು. ಶಂ. ಗೋಕರ್ಣ	೯
೫	ಗಾಂಧೀಜಿ ಜೀವನದ ಕೆಲವು ಘಟನೆಗಳು	....	ಶ್ರೀ ಎಸ್. ಎಸ್. ಭೂಸರಡ್ಡಿ	೧೨
೬	ಭಾರತರತ್ನ ಸರ್ ವಿಶ್ವೇಶ್ವರಯ್ಯ	....	ಶ್ರೀ ಎಸ್. ಎಸ್. ನಾಡಕರ್ಣಿ	೧೪
೭	ಸಮವಾಯ ಪಾಠ		,, ,, ,,	೧೭
೮	I ಹಾಗೂ II ವರ್ಗದ ಮಕ್ಕಳಿಗೆ ಭಾಷೆಯನ್ನು ಕಲಿಸುವದು	....	ಶ್ರೀ ಪದ್ಮನಾಭ ಶಿ. ಧರಣೆಪ್ಪನವರ	೨೩
೯	ಜೀವನ ಶಿಕ್ಷಣದಲ್ಲಿ ಚಟುವಟಿಕೆಗಳು	....	ಶ್ರೀ ಎಸ್. ಎಸ್. ಭೂಸರಡ್ಡಿ	೨೫
೧೦	ಡಾ. ವಿಶ್ವೇಶ್ವರಯ್ಯ		ಕವರು	೩

ಮುಖಪುಟ ಚಿತ್ರ ಸಂಯುಕ್ತ ಕರ್ನಾಟಕ ಕೃಪೆಯಿಂದ

ಸಂಪಾದಕೀಯ

ಶತಾಯುಷಿ ಭಾರತರತ್ನ ಡಾ. ಎಮ್. ವಿಶ್ವೇಶ್ವರಯ್ಯನವರು:

ಭಾರತದ ಯಂತ್ರದೃಷ್ಟಾರರೂ, ಶ್ರೇಷ್ಠ ಇಂಜಿನೀಯರರೂ, ನಿಪುಣ ಆಡಳಿತಗಾರರೂ, ಇದೇ ದಿನಾಂಕ ೧೫-೯-೧೮೬೦ನೇ ದಿನ ಶತಾಯುಷಿಗಳಾಗುವ ಭಾರತರತ್ನ ಡಾ.ಮೋಕ್ಷಗುಂಡಮ್ ವಿಶ್ವೇಶ್ವರಯ್ಯನವರು ಯೌವ್ವನದ ಹುಮ್ಮಸ್ಸನ್ನು ತಮ್ಮೊಳಗೆ ತುಂಬಿಕೊಂಡು, ಇಂದಿಗೂ ಚೇತನದ ಅದ್ಭುತ ಶಕ್ತಿಯೆನಿಸಿದ್ದಾರೆ.

ನಸುಕು ಹರಿಯುವ ಮೊದಲೇ ವಿಶ್ವೇಶ್ವರಯ್ಯನವರ ದಿನ ಆರಂಭವಾಗುತ್ತದೆ. ಈಗಲೂ ಅವರಿಗೆ ನಿಬಿಡವಾದ ಕಾರ್ಯಕ್ರಮ ಕಾದುಕುಳಿತಿರುತ್ತದೆ. ಸಂದರ್ಶಕರೊಂದಿಗೆ ಮಾತನಾಡುತ್ತಾರೆ. ಅನೇಕ ರಾಜ್ಯಸರಕಾರಗಳ ಔದ್ಯೋಗಿಕ ಸಮಸ್ಯೆಗಳನ್ನು ಬಿಡಿಸುತ್ತಾರೆ. ಅನೇಕ ಸಮಸ್ಯೆಗಳನ್ನು ವಿವೇಚಿಸಿ, ಮಾರ್ಗದರ್ಶನ ನೀಡುತ್ತಾರೆ. ಯೋಜನೆಗಳನ್ನು ರೇಖಿಸುವದೆಂದರೆ ಅವರ ಪ್ರತಿಭೆಗೆ ಮಹಾಪೂರ ಬಂದಂತಾಗುತ್ತದೆ. ವಿಶ್ವೇಶ್ವರಯ್ಯನವರು ಮುಂದಿನ ಪೀಳಿಗೆಯ ಯೋಗಕ್ಷೇಮದ ವಿಚಾರವನ್ನು ತಲೆಯಲ್ಲಿ ತುಂಬಿಕೊಂಡಿದ್ದಾರೆ.

ಕೋಲಾರ ಚಿನ್ನದ ಜಿಲ್ಲೆಯಲ್ಲಿಯ ಚಿಕ್ಕಬಳ್ಳಾಪುರ ಎಂಬ ಗ್ರಾಮದಲ್ಲಿ ದಿ. ೧೫ ಸಪ್ಟಂಬರ ೧೮೬೧ನೆಯ ದಿನ ವಿಶ್ವೇಶ್ವರಯ್ಯನವರು ಹುಟ್ಟಿದರು. ತಮ್ಮ ೧೫ನೆಯ ವಯಸ್ಸಿನಲ್ಲಿಯೇ ಅವರು ಮ್ಯಾಟ್ರಿಕ್ ಪಾಸಾಗಿ ಕಾಲೇಜ ಶಿಕ್ಷಣಕ್ಕಾಗಿ ಬೆಂಗಳೂರಿಗೆ ಬಂದರು. ೧೮೮೦ರ ಸಾಲಿನಲ್ಲಿ ಬಿ.ಎ. ಪದವಿಯನ್ನು ಪಡೆದನಂತರ ಎಂಜನಿಯರಿಂಗ ಶಿಕ್ಷಣ ಪಡೆಯಲು ಪುಣೆಗೆ ಹೋದರು. ಪರೀಕ್ಷೆಯಾದ ನಂತರ ೧೮೮೩ರ ಸಾಲಿನಲ್ಲಿ ಅಸಿಸ್ಟಂಟ ಎಂಜಿನಿಯರ್ ಎಂದು ಮುಂಬಯಿ ಸರಕಾರದ ಪಿ. ಡಬ್ಲ್ಯೂ. ಖಾತೆಯಲ್ಲಿ ನೇಮಿಸಿಕೊಂಡರು. ಸುಪರಿಂಟೆಂಡಿಂಗ ಇಂಜಿನಿಯರಾಗಿ, ವಿಶ್ವೇಶ್ವರಯ್ಯನವರು ನಿವೃತ್ತರಾದರು. ನಿವೃತ್ತಿಪಡೆದು ಮೈಸೂರಿಗೆ ಮರಳಿ ಬಂದ ಮೇಲೆ ಅವರು ಮೈಸೂರು ಸರಕಾರದ ಶ್ರೇಷ್ಠ ಇಂಜನೀಯರರಾಗಿ ನೇಮಕ ಹೊಂದಿದರು. ಒಂದಾದ ಮೇಲೆ ಒಂದರಂತೆ ಹೆಚ್ಚಿನ ಹೊಣೆಗಾರ ಸ್ಥಾನಗಳನ್ನು ಅವರು ಅಲಂಕರಿಸುತ್ತ ನಡೆದರು. ೫೫ನೆಯ ವಯಸ್ಸಿನಲ್ಲಿಯೇ ಅವರಿಗೆ ರಾಜ್ಯದ ಅತ್ಯುಚ್ಚ ಪದವಿ ಲಭಿಸಿತು. ಮೈಸೂರಿನ ದಿವಾಣರಾಗಿ ಅವರು ಸಲ್ಲಿಸಿದ ಸೇವೆ ಚರಿತ್ರಾರ್ಹವಾಗಿದೆ. ಮೈಸೂರು ಭಾರತದಲ್ಲಿಯ ಮುಂದುವರಿದ ಸಂಸ್ಥಾನವೆಂದು ನಾಲ್ಕು ಕಡೆಯಿಂದ ಕರೆಯಿಸಿಕೊಳ್ಳತೊಡಗಿತು. ವಿಶ್ವೇಶ್ವರಯ್ಯನವರು ಮೈಸೂರ ಯುನಿವ್ಹರ್ಸಿಟಿ ಸ್ಥಾಪಿಸಿದರು. ಭದ್ರಾವತಿಯ ಕಬ್ಬಿಣ-ಉಕ್ಕಿನ ಕಾರಖಾನೆಯನ್ನೂ ಪ್ರಾರಂಭಿಸಿದರು. ಒಂದರಹಿಂದೊಂದು ತಾಂತ್ರಿಕ ಸಂಸ್ಥೆಗಳು ಪ್ರಾರಂಭವಾಗತೊಡಗಿದವು. ಗ್ರಾಮಾಂತರಗಳ ಸರ್ವಾಂಗೀಣ ಸುಧಾರಣೆಯ ಬಗೆಗೆ ಅವರು ಹೆಚ್ಚಿನ ಆಸ್ಥೆ ವಹಿಸಿದ್ದರು. ಎಲ್ಲೆಡೆಗಳಲ್ಲಿ ಉದ್ಯಾನವನಗಳು, ಸುಂದರವಾದ ಮಾರ್ಗಗಳು, ಮತ್ತು ಅಗ್ಗದರದಲ್ಲಿ ವಿದ್ಯುತ್ತಿನ ಉಪಯೋಗದ ವೈಶಿಷ್ಟ್ಯವು ಯಾರಗಮನಕ್ಕೂ ಬರುವಂತಹದಾಗಿದೆ. ಮೈಸೂರ ಸಂಸ್ಥಾನವು ಭಾರತಕ್ಕೆಲ್ಲ ಆದರ್ಶಪ್ರಾಯವಾಗಿ ಮಾಡುವ ಕಾರ್ಯವನ್ನು ಮಾಡಿ ಈ ಮೈಸೂರ ಸಂಸ್ಥಾನದ ಶಿಲ್ಪಕಾರರು ೧೯೧೯ರಲ್ಲಿ ಸೇವಾ ನಿವೃತ್ತರಾದರು. ಲೋಕವಿಖ್ಯಾತ ಕೃಷ್ಣರಾಜಸಾಗರ (ಕನ್ನಂಬಾಡಿ ಅಣೆಕಟ್ಟು) ನಿರ್ಮಿಸಿದ ಶ್ರೇಯಸ್ಸು ವಿಶ್ವೇಶ್ವರಯ್ಯನವರಿಗೆ ಸಲ್ಲುತ್ತದೆ. ೧೯೨೦ರಲ್ಲಿ ಅವರು ತಮ್ಮ ಪ್ರಪಂಚ ಪ್ರದಕ್ಷಿಣೆಯನ್ನು ಹಾಕಿಕೊಂಡು ಬಂದ ಮೇಲೆ ಹೊಸ ಹುರುಪಿನಿಂದ ಮತ್ತು ತಾರುಣ್ಯದ ಉತ್ಸಾಹದಿಂದ ಹೊಸ ಹೊಸ ಕಾರ್ಯಕ್ಷೇತ್ರಗಳಲ್ಲಿ ಇಳಿಯತೊಡಗಿದರು. ಹೊಸ ದಿಲ್ಲಿಯ ವ್ಯವಸ್ಥಿತ ಬೆಳವಣಿಗೆ, ಸಕ್ಕರದ ಅಣೆಕಟ್ಟು, ಮುಂಬಯಿಯ ಬ್ಯಾಕಬೇಯ ರಚನೆ ಇತ್ಯಾದಿ ಅನೇಕ ಕಾಮಗಿರಿಗಳಲ್ಲಿ ವಿಶ್ವೇಶ್ವರಯ್ಯನವರು ಸಲಹೆಯಿತ್ತರು. 'Reconstructing India' ಎಂಬ ಅವರ ಪುಸ್ತಕವು ೧೯೨೦ರಲ್ಲಿ ಲಂಡನ್ನಿನಲ್ಲಿ ಪ್ರಕಾಶಗೊಂಡಿತು. ಒಬ್ಬ ಸಂದರ್ಶಕರು ಇಂದಿನ ತಲೆಮಾರಿನವರಿಗೆ ಸಂದೇಶ ಕೊಡಲು ಕೇಳಿದಾಗ, ವಿಶ್ವೇಶ್ವರಯ್ಯನವರು, "ನಿಮ್ಮ ಧ್ಯೇಯೋದ್ದೇಶಗಳನ್ನು ಉದಾತ್ತವಾಗಿಟ್ಟುಕೊಳ್ಳಿರಿ. ಏನೇ ಆದರೂ ನಿಮ್ಮ ಇಚ್ಛಾಶಕ್ತಿಯನ್ನು ಭದ್ರವಾಗಿಟ್ಟುಕೊಳ್ಳಿರಿ. ಇದೇ ತಳಹದಿಯ ಮೇಲೆ ನೀವು ನಿಮ್ಮ ಜೀವನವನ್ನು ಕಟ್ಟಬೇಕು" ಎಂದು ಕೊಟ್ಟ ಸಂದೇಶವನ್ನು ನಾವೆಲ್ಲರೂ ಕಾರ್ಯರೂಪಕ್ಕೆ ತಂದರೆ, ನಮಗೂ ಹಾಗೂ ನಮ್ಮ ದೇಶಕ್ಕೂ ಉಜ್ವಲ ಭವಿಷ್ಯತ್ತು ಕಾದುನಿಂತಿದೆ ಎಂದು ಹೇಳಲು ಏನೂ ಅಭ್ಯಂತರವಿಲ್ಲ.

ನಮ್ಮ ಕಂಬನಿಗಳು :

ಸಂಸತ್ ಸದಸ್ಯರೂ, ಸಂ. ಜವಾಹರಲಾಲ ನೆಹರೂ ಅವರ ಅಳಿಯಂದಿರೂ, ಶ್ರೀಮತಿ ಇಂದಿರಾಗಾಂಧಿಯವರ ಪತಿದೇವರೂ ಆದ ಶ್ರೀ ಫಿರೋಜ ಗಾಂಧಿಯವರು ದಿನಾಂಕ ೮–೯–೧೯೬೦ನೇ ದಿನ ಮುಂಜಾನೆ ದಿಲ್ಲಿಯಲ್ಲಿ ಹೃದಯವಿಕಾರದಿಂದ ನಿಧನ ಹೊಂದಿದರೆಂದು ಬರೆಯಲು ಅತೀವ ವಿಷಾದವಾಗುತ್ತದೆ. ಪಾರ್ಲಿಮೆಂಟಿನ ಪ್ರತಿಭಾಸ್ಪಿತ ಸದಸ್ಯರಾದ ಅವರ ನಿಧನದಿಂದ, ಆ ಸಭೆಗೆ ಮಾತ್ರವಲ್ಲ, ಇಡೀ ರಾಷ್ಟ್ರಕ್ಕೇನೆ ತುಂಬಿಬಾರದ ಹಾನಿಯಾಗಿರುತ್ತದೆ. ಕೇವಲ ನಾಲ್ವತ್ತೈಂಟು ವರುಷದವರಾಗಿದ್ದ ಅವರಿಗಾಗಿ ಉಜ್ವಲ ಭವಿಷ್ಯ ಕಾದಿದ್ದಿತು. ಸ್ಪಪ್ರಯತ್ನ, ಸತ್ಯಸಂಧತೆ, ಸತತಾಭ್ಯಾಸ, ಅವಿಶ್ರಾಂತ ಪರಿಶ್ರಮ ಮೊದಲಾದ ಅಲೌಕಿಕ ಗುಣಗಳ ಮೂಲಕ ಅವರು ಪಾರ್ಲಿಮೆಂಟಿನಲ್ಲಿ ಹಾಗೂ ನಾಡಿನ ರಾಜಕೀಯದಲ್ಲಿ ತಮ್ಮದೇ ಆದ ಸ್ಥಾನವನ್ನು ಸಂಪಾದಿಸಿಕೊಂಡಿದ್ದರು. ಅವರ ಆಕಸ್ಮಿಕ ನಿಧನದಿಂದ ಪ್ರಧಾನ ಮಂತ್ರಿಗಳಿಗೂ, ಶ್ರೀಮತಿ ಇಂದಿರಾ ಗಾಂಧಿಯವರಿಗೂ ಅವರ ಇಬ್ಬರು ಸುಪುತ್ರರಾದ ರಾಜೀವ, ಸಂಜೀವರಿಗೂ ಉಂಟಾದ ಅಪಾರ ದುಃಖದಲ್ಲಿ ರಾಷ್ಟ್ರವೇ ಸಹಭಾಗಿಯಾಗಿರುತ್ತದೆ. ಈ ವಿರಹತಾಪ ಸಹಿಸಿಕೊಳ್ಳುವ ಶಕ್ತಿಯನ್ನು ಅವರಿಗೆ ಕರುಣಿಸಲಿ, ದಿವಂಗತರ ಆತ್ಮಕ್ಕೆ ಶಾಂತಿಯನ್ನೀಯಲಿ ಎಂದು ನಾವು ಆ ದಯಾಘನನಲ್ಲಿ ಪ್ರಾರ್ಥಿಸುತ್ತೇವೆ.

ಸ್ಥಾಪತ್ಯ ಶಿಲ್ಪಿ ವಿಶ್ವೇಶ್ವರಯ್ಯನವರು

ಲೇಖಕರು :— ಶ್ರೀ ಹ. ಗೋ. ಜೋಶಿ, ಬಿ. ಎ. (ಆನರ್ಸ್). ಡಿ.ಇಡಿ., ಸರಕಾರಿ ಗಂ. ಮು. ಟ್ರೇ. ಕಾ. ಧಾರವಾಡ

[ಸೂಚನೆ:— ಈ ಲೇಖನವನ್ನು ಭಾರತವಾಣಿ (ಹಿಂದಿ) ಹಾಗು ' ಸಂಡೇಸ್ಟ್ಯಾಂಡರ್ಡ್ ' ಎಂಬ ಪತ್ರಿಕೆಗಳನ್ನು ಅಧರಿಸಿ ಬರೆಯಲಾಗಿದೆ. ಲೇಖಕನು ಆ ಪತ್ರಿಕೆಗಳಿಗೆ ಉಪಕೃತನು.]

" ಚಿನ್ನದ ನಾಡದು ಮೈಸೂರು
ಗಂಧದ ಗುಡಿಯದು ಮೈಸೂರು " ಎಂದು ಕನ್ನಡದ ಕಣ್ಮಣಿಸಿಕೊಂಡ ಶ್ರೀಮಾನ್ ಬಿ. ಎಂ. ಶ್ರೀಕಂಠಯ್ಯನವರು ಹಾಡಿರುವರು. ಈ ಗಂಧದ ಗುಡಿಗೆ ಹೊನ್ನ ಕಶಲವಿಟ್ಟ ಹಾಗೆ ಮೈಸೂರಿನ ' ವೃಂದಾವನವಿದೆ '. ಸ್ವರ್ಗದ ಕಲ್ಪನೆಯನ್ನು ತಂದುಕೊಳ್ಳಬಯಸುವವರು ಕೆಲ ಹೊತ್ತು ಕೃಷ್ಣರಾಜಸಾಗರದ ಆ ವೃಂದಾವನದಲ್ಲಿ ಕುಳಿತುಕೊಳ್ಳಬೇಕು ! ರಂಗು ರಂಗಿನ ವಿದ್ಯುದ್ದೀಪಗಳ ಬೆಳಕಿನಲ್ಲಿ ಜೆಂಗನೆ ಆಕಾಶಕ್ಕೆ ನೆಗೆಯುತ್ತಿರುವ ಕಾರಂಜಿಗಳು ಎಂಥವರ ಮೈ–ಮನಗಳನ್ನೂ ತಣಿಸಿ ತೃಪ್ತಿಪಡಿಸಬಲ್ಲವು ! ಕಲ್ಪನೆಯ ಕನಸಿನಲ್ಲಿ ಕಾಣುವ ವೈಕುಂಠದ ವೃಂದಾವನವನ್ನು ಸತ್ಯ ಸೃಷ್ಟಿಗಿಳಿಸಿದ ಈ ಮುಕುಂದ ನಾರು ? ಎಂಬ ವಿಚಾರವು ಅಲ್ಲಿ ಸುತ್ತಾಡುವ ರಸಕರಿಗೆ ಸುಳಿಯದೆ ಇರದು.

ಆ ಭೂಲೋಕದ ನಂದನವನ್ನು ಸೃಜಿಸಿದವರೇ ಭಾರತರತ್ನ ಡಾ. ಎಂ. ವಿಶ್ವೇಶ್ವರಯ್ಯನವರು. ಇಂದು ಅವರು ಶತಾಯುಷಿಗಳು. ಅವರ ಈ ಶತಾಬ್ದಿ ಮಹೋತ್ಸವದ ಮೈಸೂರಿನ ರಾಜಧಾನಿಯಾದ ಬೆಂಗಳೂರ ನಗರದಲ್ಲಿ ೧೫ನೇ ಸಪ್ಟಂಬರದಂದು ಇನ್ನೋರ್ವ ಭಾರತ ರತ್ನ ಜವಾಹರರಿಂದ ಉದ್ಘಾಟನೆ ಜರುಗಲಿರುವ ಈ ಶುಭ ಪ್ರಸಂಗವು ಕನ್ನಡಿಗರಿಗೆ ಹೆಮ್ಮೆಯ ವಿಷಯವಾಗಿದೆ.

ಜನ್ಮ ಹಾಗು ಬಾಲ್ಯ :— ಕ್ರಿ. ಶ. ೧೮೬೧ನೆಯ ಸಪ್ಟಂಬರ ತಿಂಗಳ ೧೫ನೆಯ ತಾರೀಖಿನ ದಿವಸ ವಿಶ್ವೇಶ್ವರಯ್ಯನವರ ಜನ್ಮವಾಯಿತು. ಕೋಲಾರ ಜಿಲ್ಲೆಯ ಮುದ್ದೇನಹಳ್ಳಿಯು ಇವರ ಜನ್ಮ ಭೂಮಿಯು. ಇವರ ಪೂರ್ವಜರು ಈಗಿನ ಆಂಧ್ರ ಪ್ರಾಂತದ ಮೋಕ್ಷಗುಂಡಂ ಎಂಬ ಹಳ್ಳಿಯಿಂದ ಮುದ್ದೇನಹಳ್ಳಿಗೆ ಬಂದು ನೆಲಸಿದರೆಂದು ಹೇಳುವರು. ಕಟ್ಟಾವೈದಿಕ ಸಂಪ್ರದಾಯದ ಶ್ರೀನಿವಾಸ ಶಾಸ್ತ್ರಿಗಳು ವಿಶ್ವೇಶ್ವರಯ್ಯನವರ ತಂದೆಯವರು. ಶ್ರೀನಿವಾಸ ಶಾಸ್ತ್ರಿಗಳು ಕಾಶಿಯಲ್ಲಿ ಹತ್ತು ವರುಷ ಯೋಗಾಭ್ಯಾಸವನ್ನೂ ದರ್ಶನ ಶಾಸ್ತ್ರವನ್ನೂ ಅಧ್ಯಯನ ಮಾಡಿಬಂದ ಪಂಡಿತರಾಗಿದ್ದರು. ಶ್ರೀನಿವಾಸ ಶಾಸ್ತ್ರಿಗಳು ಒಕ್ಕಲುತನ ಹಾಗು ವೈದ್ಯಕೀಯ ವ್ಯವಸಾಯದಿಂದ ಜೀವನ ಸಾಗಿಸುವವರಾಗಿದ್ದರು. ಶ್ರೀನಿವಾಸ

ಶಾಸ್ತ್ರಿಗಳಿಗೆ ನಾಲ್ಕು ಜನ ಮಕ್ಕಳು. ಅವರಲ್ಲಿ ವಿಶ್ವೇಶ್ವರಯ್ಯನವರು ಎರಡನೆಯವರು. ವಿಶ್ವೇಶ್ವರಯ್ಯನವರು ಚಿಕ್ಕಬಳ್ಳಾಪುರದಲ್ಲಿ ಪ್ರಾಥಮಿಕ ವಿದ್ಯಾಭ್ಯಾಸವನ್ನು ಮುಗಿಸಿ ಬೆಂಗಳೂರ ನಗರವನ್ನು ಮುಂದಿನ ಅಧ್ಯಯನಕ್ಕಾಗಿ ಸೇರಿದರು. ಸೆಂಟ್ರಲ್ ಕಾಲೇಜದಿಂದ ಕ್ರಿ. ಶ. ೧೮೮೧ರಲ್ಲಿ ಬಿ. ಎ. ಪದವೀಧರರಾದರು. ಇವರ ಒಲವು ಸ್ಥಾಪತ್ಯ ಶಾಸ್ತ್ರದೆಡೆಗೆ ಸ್ವಾಭಾವಿಕವಾಗಿಯೇ ಇದ್ದಿತು. ಇವರ ಕುಶಾಗ್ರಮತಿಯನ್ನು ಒಲವನ್ನು ಗುರುತಿಸಿದ ಆಗಿನ ದಿವಾಣರಾದ ರಂಗಾಚಾರ್ಲುರವರು ಶಿಷ್ಯವೃತ್ತಿಯನ್ನು ಕೊಟ್ಟು ಪುಣೆಯ ಇಂಜನಿಯರಿಂಗ ಕಾಲೇಜಿಗೆ ಕಳುಹಿಸಿದರು. ವಿಶ್ವೇಶ್ವರಯ್ಯನವರು ತಮಗೆ ದೊರೆತ ಈ ಸಂಧಿಯ ಲಾಭವನ್ನು ಪಡೆದು ಎರಡು ವರುಷ ಅಲ್ಲಿ ಅಧ್ಯಯನ ಮಾಡಿ ಈಗಿನ ಬಿ. ಈ. ಪದವಿಗೆ ತತ್ಸಮಾನವಾದ ಎಲ್.ಸಿ.ಈ., ಎಫ್. ಸಿ. ಈ. ಪರೀಕ್ಷೆಯಲ್ಲಿ ಪ್ರಥಮ ಶ್ರೇಣಿಯಲ್ಲಿ ತೇರ್ಗಡೆ ಹೊಂದಿದರು. ಅಲ್ಲಿಂದಲೇ ಮುಂದೆ ಅವರ ದಿಶೆಯು ಛಾತ್ರವೃತ್ತಿಯಿಂದ ಕರ್ಮಮಾರ್ಗದತ್ತ ಬದಲಾಯಿಸಿತೆಂದು ಹೇಳಬಹುದಾಗಿದೆ.

ಆಗಿನ ಮುಂಬೈ ಸರಕಾರವು ಇವರನ್ನು ನಾಶಿಕ ಜಿಲ್ಲೆಯಲ್ಲಿ ಅಸಿಸ್ಟಂಟ ಇಂಜನಿಯರೆಂದು ಪಬ್ಲಿಕ್ ವರ್ಕ್ಸ ಖಾತೆಯಲ್ಲಿ ಸೇರ್ಪಡಿಸಿಕೊಂಡು ನಿಯಮಿಸಿತು. ಆಗ ಅವರ ವಯಸ್ಸು ಕೇವಲ ೨೧ ಇದ್ದಿತು. ನಾಶಿಕದಿಂದ ಖಾನದೇಶಕ್ಕೆ ಹೋದರು. ಅಲ್ಲಿ ಅವರು 'ಸೈಫನ್' ದಿಂದ ನೀರಿದ ಪುರವತೆಯ ಯೋಜನೆಯನ್ನು ಹಮ್ಮಿಕೊಟ್ಟರು. ಅಲ್ಲಿಂದಲೇ ಅವರ ಯೋಜನಾ ಚಾತುರ್ಯದ ಬೆಳಕು ಎಲ್ಲೆಡೆಗೂ ಪಸರಿಸಹತ್ತಿತು. ಶೋಭಕಸ್ತತ್ರತ್ರ ಲಭ್ಯತೇ ಎಂಬಂತೆ ಯೋಜಕರು ದೊರಕುವದು ಬಹಳ ಅಪರೂಪವಾದುದು. ಆಗಿನ ಕಾಲದಲ್ಲಿ ಮುಂಬೈ ರಾಜ್ಯದಲ್ಲಿ ಸಮಾವೇಶಗೊಂಡ ಸಿಂಧದಲ್ಲಿ ಇವರ ಈ ಯೋಜಕ ಸಾಮರ್ಥ್ಯದ ಪ್ರಭಾವವು ತೋರಿಬಂದಿತು. ಪುಣೆ, ಸುರತ ಮುಂತಾದ ಅನೇಕ ಸ್ಥಳಗಳಲ್ಲಿ ಜಲಪುರವತೆಯ ಕಾರ್ಯಗಳು ವಿಶ್ವೇಶ್ವರಯ್ಯನವರಿಗಾಗಿ ಕಾದಿದ್ದವು. ಹೋದಲ್ಲೆಲ್ಲ ತಮ್ಮ ಕರ್ಮ ಕುಶಲತೆಯಿಂದ ಎಂದೂ ದಣಿಯದ ಕಾರ್ಯ ಕ್ಷಮತೆಯಿಂದ ಸರಕಾರದಲ್ಲಿ ಸುಪ್ರಸಿದ್ಧ ಇಂಜನೀಯರೆಂಬ ಹೆಸರು ಗಳಿಸಿ, ಮೇಲಿನ ದರ್ಜೆಯನ್ನೂ ಪಡೆದುಕೊಂಡರು. ತಮ್ಮ ಕಾರ್ಯವು ಕೆಲವೊಂದು ವಿಶಿಷ್ಟ ಪ್ರದೇಶಕ್ಕೆ ಸೀಮಿತವಾಗಿರುವುದು ಅವರಿಗೆ ರುಚಿಸಿರಲಿಲ್ಲ. ಮುಂಬೈ ಸರಕಾರದಲ್ಲಿಯ ಆ ಹುದ್ದೆಯನ್ನು ತಾವಾಗಿಯೇ ಬಿಟ್ಟುಕೊಟ್ಟು ಹೈದ್ರಾಬಾದಕ್ಕೆ ಬಂದರು. ಅಲ್ಲಿ ಮೂಸಾ ನದಿಯ ಯೋಜನೆಯನ್ನು ಕೈಕೊಂಡು ಆರು ತಿಂಗಳಲ್ಲಿ 'ಕುಂಭೀಪಾಕ' ದಂತಿರುವ ನಗರವನ್ನು ಸ್ವರ್ಗ ಸದೃಶವನ್ನಾಗಿ ಪರಿವರ್ತಿಸಿದರು. ಈ ಪೂರ್ವದಲ್ಲಿ 'ಏಡನ್' ಪಟ್ಟಣಕ್ಕೂ ಹೋಗಿ ಅಲ್ಲಿ ಗಟಾರ ಪದ್ಧತಿಯನ್ನು ನಿರ್ಮಿಸಿಕೊಟ್ಟು ನೀರಿನ ಯೋಜನೆಯನ್ನೂ ಪೂರೈಸಿದರು. ಏಡನ್ ಸರಕಾರವು ಇವರಿಗೆ 'ಕೈ ಸರ–ಏ–ಹಿಂದ' ಎಂಬ ಪದವಿಯನ್ನು ದಯಪಾಲಿಸಿ ತನ್ನ ಕೃತಜ್ಞತೆಯನ್ನು ಈ ಸ್ಥಾಪತ್ಯ ಶಿಲ್ಪಿಗೆ ಸಲ್ಲಿಸಿತು. ಮುಂಬೈ ಸರಕಾರದಲ್ಲಿರುವಾಗಲೇ ಕರಾಚಿ, ಅಹಮ್ಮದಾಬಾದ, ಧಾರವಾಡ ಮೊದಲಾದ ಪಟ್ಟಣಗಳಿಗೆ ಸಂದರ್ಶನವಿತ್ತು ಅಲ್ಲಿ ಶುದ್ಧ ಕುಡಿಯುವ ನೀರಿನ ವ್ಯವಸ್ಥೆಯನ್ನು ಕಲ್ಪಿಸಿಕೊಟ್ಟರು.

ಮಾದರಿಯ ಮೈಸೂರಿನ ನಿರ್ಮಾತೃ :— 'ಜನನೀ ಜನ್ಮಭೂಮಿಶ್ಚ ಸ್ವರ್ಗಾದಪಿ ಗರೀಯಸಿ' ಎಂಬ ಉಕ್ತಿಯಂತೆ ಮಾತೃಭೂಮಿಯಾದ ಮೈಸೂರಿನ ಸುಧಾರಣೆಗಾಗಿ ಏನಾದರೂ ಮಾಡಬೇಕೆಂದು ಅವರ ಅಂತರ್ವಾಣಿ ಕರೆಯುತ್ತಿದ್ದಿತೇನೋ! ಹೈದ್ರಾಬಾದಿನಿಂದ ಮುಖ್ಯ ಇಂಜನಿಯರೆಂದು ನೇಮಕಗೊಂಡು ಮೈಸೂರಿಗೆ ಬಂದರು. ಮೂರು ವರ್ಷಗಳ ಪರ್ಯಂತ ಮುಖ್ಯ ಇಂಜನಿಯರೆಂದು ಕೆಲಸಮಾಡಿ ಅನೇಕ ಬೃಹದ್ ಯೋಜನೆಗಳನ್ನು ರೂಪಿಸಿದರು. ಅವರ ಈ ಬೃಹದ್ ಯೋಜನೆಗಳಿಗೆ ಕಿರೀಟಪ್ರಾಯವಾಗಿ ಕನ್ನಂಬಾಡಿಯ ಅಣೆಕಟ್ಟು ಮೇಲೆದ್ದು ಮೈಸೂರಿನ ಕಣಜವನ್ನು ತುಂಬಲಣಿಯಾಯಿತು. ಇಂದು ಕನ್ನಂಬಾಡಿಯು ಸೌಂದರ್ಯಾಕಾಂಕ್ಷಿಗಳ ಆಡುಂಬೊಲವೆನಿಸಿದ್ದರೂ; ಅದರ ಪ್ರಯೋಜನವು ಮುಖ್ಯವಾಗಿ ಇರುವುದು ಮೈಸೂರಿಗರಿಗೆ ಅನ್ನದೇವನ ದರ್ಶನಮಾಡಿಸುವದಾಗಿದೆ. ರಾಜ್ಯವು ಪ್ರಗತಿಯನ್ನು ಹೊಂದಬೇಕಿದ್ದರೆ ಮುಖ್ಯವಾಗಿ ಆ ರಾಜ್ಯದ ಆರ್ಥಿಕಾಭಿವೃದ್ಧಿಯಾಗಬೇಕು. ಆರ್ಥಿಕ ಅಭಿವೃದ್ಧಿಯು ಉದ್ಯೋಗಗಳ ಉತ್ಕರ್ಷವನ್ನವಲಂಬಿಸಿದೆ ಎಂಬ ಮಾತನ್ನು ವಿಶ್ವೇಶ್ವರಯ್ಯನವರು ನುನದಂದರು. ಮೂರು ವರ್ಷಗಳಲ್ಲಿ ಅವರು ಮೈಸೂರಿನ ದಿವಾನರೇ ಆದರು. ತಮ್ಮ ಆರು ವರ್ಷಗಳ ದಿವಾನಪದವಿಯ ಅಧಿಕಾರಾವಧಿಯಲ್ಲಿ

ಮೈಸೂರಿನ ಸ್ಥಿತಿಯನ್ನೇ ಬದಲಿಸಿ ದರ್ಶನೀಯ ರಾಜ್ಯವನ್ನಾಗಿ ಮಾಡಿದರು. ಇಂದು ಕಮ್ಮೆನ್ನೆಯಂತೆ ಸುವಾಸನೆಯನ್ನು ನೀಡುವ ಗಂಧದ ಮೈಸೂರಿನ ಸಾಬೂನು ವಿಶ್ವೇಶ್ವರಯ್ಯನವರ ಯೋಜನೆಯಿಂದ ಹುಟ್ಟಿ ಬಂದುದಾಗಿದೆ; ಕಬ್ಬಿಣ ಕಾರಖಾನೆ, ಇಂಧನೋತ್ಪಾದನ ಉದ್ಯಮ, ಸ್ಥಾಪತ್ಯ ಶಿಕ್ಷಣಾಲಯ, ಸೇವಿಂಗ್ಸ್‌ಬ್ಯಾಂಕ ಮುಂತಾದ ಅನೇಕ ಕಾರಖಾನೆಗಳನ್ನು, ಶಿಕ್ಷಣಾಲಯಗಳನ್ನು ಸ್ಥಾಪಿಸುವಲ್ಲಿ ಅವಿರತ ಪರಿಶ್ರಮ ಮಾಡಿದರು. ಸ್ತ್ರೀ ಶಿಕ್ಷಣದ ಬಗೆಗೂ ಅನುಕೂಲತೆಗಳನ್ನು ಒದವಿಸಿ ಕೊಟ್ಟರು. ದೊಡ್ಡ ದೊಡ್ಡ ಭವನಗಳನ್ನು, ರಾಜ ಮಾರ್ಗಗಳನ್ನು, ವಿಶ್ರಾಮಧಾಮಗಳನ್ನು, ಸೌಂದರ್ಯ ಸ್ಥಲಗಳನ್ನು ನಿರ್ಮಿಸಿ, ಅಭಿವೃದ್ಧಿಗೊಳಿಸಿ ಪ್ರವಾಸಿಕರನ್ನು ಆಕರ್ಷಿಸುವಂತೆ ಅನುಕೂಲತೆಗಳ ನಿರ್ಮಾಣ ಮಾಡಿದರು. ಮೈಸೂರು ವಿಶ್ವವಿದ್ಯಾನಿಲಯ ಸ್ಥಾಪನೆಗೂ ಕಾರಣೀಭೂತರವರು. ಮೈಸೂರು ರಾಜ್ಯದಲ್ಲಿಯ ಅಂದಿನ ಯಾವ ಯೋಜನೆಯನ್ನೇ ತೆಗೆದುಕೊಂಡು ನೋಡಲಿ ಅದರಲ್ಲಿ ಮೋಕ್ಷಗುಂಡಂ ವಿಶ್ವೇಶ್ವರಯ್ಯನವರ ಕೈವಾಡವಿಲ್ಲದೇ ಇಲ್ಲ. ಇವೆಲ್ಲವುಗಳಿಗೆ ಶ್ರೇಷ್ಠವೆನಿಸಿ ಕೃಷ್ಣರಾಜ ಸಾಗರವು ನಿಂತಿದೆ. ಒಮ್ಮೆ ಗಾಂಧೀಜಿಯವರು ಕೃಷ್ಣರಾಜ ಸಾಗರವನ್ನು ಸಂದರ್ಶಿಸಿ ಹೀಗೆ ಉದ್ಗಾರ ತೆಗೆದಿದ್ದರಂತೆ.

"ವಿಶ್ವೇಶ್ವರಯ್ಯನವರ ಹೆಸರನ್ನು ಅಜರಾಮರವನ್ನಾಗಿ ಇಡಲು ಕೃಷ್ಣರಾಜಸಾಗರವು ಮೈಚಾಚಿ ನಿಂತಿದೆ" ಎಂದು.

ಅವರ ದೀರ್ಘಾಯುಷ್ಯದ ಗುಟ್ಟು— ಒಮ್ಮೆ ಯಾರೋ ವಿಶ್ವೇಶ್ವರಯ್ಯನವರನ್ನು ಪ್ರಶ್ನಿಸಿದರಂತೆ "ನಿಮಗೆ ಮುಪ್ಪು ಬಂದಿಲ್ಲವೇ?" ಆಗ ವಿಶ್ವೇಶ್ವರಯ್ಯನವರು ಅವರಿಗೆ ಉತ್ತರಿಸಿದರಂತೆ. "ಈಗ ಕೆಲದಿನಗಳ ಹಿಂದೆ ಮುಪ್ಪು ನನ್ನ ಮನೆಯಬಾಗಿಲಿಗೆ ಬಂದಿತ್ತು. ಆಗ ನಾನು ವಿಶ್ವೇಶ್ವರಯ್ಯನವರು ಮನೆಯಲ್ಲಿ ಇರುವದಿಲ್ಲ. ಮತ್ತೆ ಯಾವಾಗಲಾದರೂ ಬರಬಹುದು ಎಂದು." ಅವರ ಮಾತಿನಲ್ಲಿ ಹಾಸ್ಯದ ಹೊನಲಿದ್ದರೂ ಸತ್ಯದ ತಿರುಳಿದೆ. ಮುಪ್ಪುದೇಹಕ್ಕೆ ಬರುತ್ತಿದೆ. ಮನಕ್ಕಲ್ಲ. ಅವರ ಚೈತನ್ಯವು ಇನ್ನೂ ತರುಣರದೇ ಆಗಿದೆ. ಅವರ ಈ ಬಾಳಿಗೆ ಮಿತಜೀವನವೇ ಕಾರಣವು. ಎಲ್ಲ ವಿಷಯಗಳಲ್ಲಿಯೂ ಅವರು ಮಿತವ್ಯಯಿ. ತಿನ್ನುವದರಲ್ಲಿ, ಉಣ್ಣುವದರಲ್ಲಿ, ನಡೆಯುವದರಲ್ಲಿ, ನಿದ್ರಿಸುವಲ್ಲಿ, ಎಲ್ಲದರಲ್ಲಿಯೂ ಹಿಡಿತ ಉಳ್ಳವರು. ಗೃಹಸ್ಥಾಶ್ರಮಿಗಳಾಗಿದ್ದರೂ ಅವರು ಬ್ರಹ್ಮಚಾರಿಗಳು. "ಹಸಿವಿಲ್ಲದುಣಬೇಡ, ಹಸಿದು ಮತ್ತಿರಬೇಡ, ಬಿಸಿಗೂಡಿತಂಗಳುಣಬೇಡ" ಎಂದು ನಮ್ಮ ಸರ್ವಜ್ಞಕವಿಯು ಹೇಳಿದಂತೆ ನಡೆದುಕೊಳ್ಳುವರು. ಅದರಂತೆ ಮಿತಭಾಷಿಗಳೂ ಕೂಡಾ. ಮಾಡುವದು ಹತ್ತು ಪಾಲಾದರೆ ಆಡುವುದು ಒಂದು ಪಾಲು ಮಾತ್ರ.

ಎಲ್ಲಕ್ಕೂ ಮಿಗಿಲಾಗಿ ಕರ್ಮಯೋಗಿಗಳವರು. ಶತಾಯುಷಿಗಳಾಗಿದ್ದರೂ ಇಂದು ಅವರಿಗೆ ಕೆಲಸವಿಲ್ಲದಲೆ ಕುಳಿತುಕೊಳ್ಳುವದು ಸೇರುವದಿಲ್ಲ. ಅವರ ಉತ್ಸಾಹ ಕಾರ್ಯಶಕ್ತಿಗಳು ತರುಣರಿಗೆ ಸ್ಫೂರ್ತಿಯನ್ನೀಯುವಂತಿವೆ. **ಒಂದು ಸುನಿಯಂತ್ರಿತ ಕ್ರಮಬದ್ಧ ಜೀವನವೇ ಅವರ ದೀರ್ಘಬಾಳಿನ ಗುಟ್ಟು; ಕರ್ಮಯೋಗವೇ ಅವರ ಗೆಲುವಿನ ಅಂತರಂಗವು.**

ಸಮಾಜ ಸುಧಾರಕ:— ವಿಶ್ವೇಶ್ವರಯ್ಯನವರು ಕೇವಲ ಸ್ಥಾಪತ್ಯಶಿಲ್ಪಿಗಳಾಗಿ ಯೋಜನೆಗಳ ಗುಟ್ಟನ್ನು ಹೇಳಿಕೊಡುತ್ತ ಕೂಡ್ರಲಿಲ್ಲ; ಸಮಾಜ ಸುಧಾರಣೆಯಲ್ಲಿಯೂ, ಶಿಕ್ಷಣ ಸುಧಾರಣೆಯಲ್ಲಿಯೂ ಮನಸ್ಸು ಹಾಕಿದರು. ಭಾರತ ಸ್ವಾತಂತ್ರ್ಯಕ್ಕೇನಾದರೂ ಬೆಲೆ ಬರಬೇಕಾದರೆ ಜನರ ರೂಢಿಗಳಲ್ಲಿ, ಶಿಕ್ಷಣದಲ್ಲಿ, ಜಾಗತಿಕ ಆದ್ಯಾವತ್ ವಿದ್ಯಮಾನಗಳ ತಿಳುವಳಿಕೆಯಲ್ಲಿ, ಜನತೆಯ ಕಾರ್ಯಶಕ್ತಿಯಲ್ಲಿ ಆಮೂಲಾಗ್ರವಾದ ತೀವ್ರಗತಿಯ ಬದಲಾವಣೆಯಾಗಬೇಕೆಂದು ಹೇಳುವರು. ಅವರು ಜನತೆಗೊಂದು ಘೋಷಣೆಯನ್ನು ನೀಡಿದ್ದಾರೆ. "ಔದ್ಯೋಗಿಕರಣ ಇಲ್ಲವೆ ನಾಶ" (Industrialise or Perish.) ಎಂದು. ಭಾರತವು ತ್ವರಿತಗತಿಯಿಂದ ಔದ್ಯೋಗಿಕರಣವನ್ನು ಸಾಧಿಸಬೇಕೆಂಬುದು ಅವರ ಬಯಕೆ. ಅವರು ಒಂದು ಶತಮಾನ ಹಿಂದಿನವರಾದರೂ ಪುರೋಗಾಮಿ ದೃಷ್ಟಿಯುಳ್ಳವರು. ಅಸ್ಪೃಶ್ಯರ ನೆರಳು ಕೂಡಾ ಬೀಳಬಾರದೆಂದು ಹೇಳುವ, ಸಮುದ್ರಪರ್ಯಟನವನ್ನು ಬಹಿಷ್ಕರಿಸುವ, ಸ್ತ್ರೀಯರಿಗೆ ಶಿಕ್ಷಣವನ್ನು ಕೊಡುವುದು ಅಪರಾಧವೆಂದು ಗಣಿಸುವ ಕಾಲದಲ್ಲಿ ಹುಟ್ಟಿ ಬೆಳೆದುಬಂದಿದ್ದರೂ, ಅಸ್ಪೃಶ್ಯತಾ ನಿವಾರಣೆಗಾಗಿ, ಸಮುದ್ರಪರ್ಯಟನ ಮಾಡಿ, ಸ್ತ್ರೀಯರಿಗೆ ಶಿಕ್ಷಣದ ಅನುಕೂಲತೆಗಳನ್ನು ಕಲ್ಪಿಸಿಕೊಟ್ಟು ಪ್ರಗತಿಯಶೀಲರೆಂದು ಹೆಸರಾಗಿದ್ದಾರೆ. ಬಾಲವಿವಾಹವನ್ನು ನಿಷೇಧಿಸಿ,

(೧೩ನೆಯ ಪುಟ ನೋಡಿರಿ)

ಜೀವನ ಶಿಕ್ಷಣವೂ ಆಡಳಿತದ ಸಮಸ್ಯೆಗಳೂ

(ಹಿಂದಿನಿಂದ ಸಾಗಿ ಬಂದದ್ದು)

ಲೇ :— ಬಮಶಿಂ

[ಶ್ರೀ ಶಿಂತ್ರಿಯವರು ಈ ವರ್ಷಾರಂಭದಿಂದ ತಮ್ಮ ಲೇಖಗಳನ್ನು "ಬಮಶಿಂ" ಎಂಬ ಹೆಸರಿನಿಂದ ಪ್ರಕಟಿಸಲಿರುವರು. ಅದು ಅವರ ಸಂಪೂರ್ಣ ಹೆಸರಿನ ಮೊದಲಿನ ಅಕ್ಷರಗಳಿಂದ ಕೂಡಿದ್ದಾಗಿದೆ. ಕನ್ನಡದಲ್ಲಿ ಅದು ಅವರ ಚಿಕ್ಕ ಸಹಿಯು (initials). —ಪ್ರಧಾನ ಸಂಪಾದಕರು.]

ಪರಿವರ್ತನೆ:

ಹೊಸ ಶಿಕ್ಷಣವು ಬೇಗನೆ ಸಾರ್ವತ್ರಿಕವಾಗಬೇಕಾದುದರಿಂದ ಸಾದಾ ಸಾಲೆಗಳನ್ನು ಬೇಸಿಕ್ ಸಾಲೆಗಳನ್ನಾಗಿ ಬೇಗನೆ ಪರಿವರ್ತಿಸಲು ನಮ್ಮ ರಾಷ್ಟ್ರವು ಈಗ ಬಯಸುತ್ತಿದೆ. ಹಾಗೆ ಮಾಡುವದಾದರೆ, ನಾವು ಹಲವು ಸಮಸ್ಯೆಗಳನ್ನೆದುರಿಸಬೇಕಾಗುವದು. ಇಲ್ಲಿಯ ವರೆಗಿದ್ದ ರೂಢಿಯೆಂದರೆ, ಪರಿವರ್ತಿಸತಕ್ಕ ಸಾಲೆಗಳ ನಿರ್ದಿಷ್ಟ ಸಂಖ್ಯೆಯನ್ನು ಗೊತ್ತುಪಡಿಸುವದು ಮತ್ತು ಬದಲಾವಣೆಯು ಕೂಡಲೆ ಆಗಬೇಕೆಂದು ಆಜ್ಞೆಯನ್ನು ಹೊರಡಿಸುವದು. ಹುಕುಮುಗಳು ಹೊರಟ ನಂತರ ಆಯಾ ಸಾಲೆಗಳಲ್ಲಿಯ ಶಿಕ್ಷಕ-ಶಿಕ್ಷಕಿಯರನ್ನು ಅನುಕೂಲತೆಗಳಿಗನುಸರಿಸಿದ ತಂಡಗಳಲ್ಲಿ ಹೊಸ ಶಿಕ್ಷಣದಲ್ಲಿ ತರಬೇತನ್ನು ಹೊಂದಲು ಕಳಿಸುವದು. ಈ ಪ್ರಕಾರ ಪ್ರತಿಯೊಂದು ಸಾಲೆಯಲ್ಲಿಯ ಶಿಕ್ಷಕ-ಶಿಕ್ಷಕಿಯರನ್ನು ತರಬೇತುಗೊಳಿಸಲು ವಾಡಿಕೆಯಾಗಿ ಇಡಿಯ ಒಂದು ವರುಷ ಹಿಡಿಯಬಹುದು. ಈ ಅವಧಿಯಲ್ಲಿ ಸಂಭವಿಸಬಹುದಾದ ಪರಿಣಾಮಗಳನ್ನು ಲಕ್ಷಿಸಿ ಅಧಿಕಾರಸ್ಥರು ಹುಕುಮುಗಳನ್ನು ಹೊರಡಿಸಬೇಕು. ಕೂಡಲೆ ಪರಿವರ್ತನವಾಗಬೇಕೆಂಬ ಹುಕುಮನ್ನು ಹೊರಡಿಸುವದರಿಂದ ಸಾಲೆಗಳು ಸಾದಾ ಸಾಲೆಯ ಕೆಲಸವನ್ನು ಪೂರಾ ನಿಲ್ಲಿಸಿ ಬಿಡುವದುಂಟು. ಹಾಗಾಗಲು ಕೊಡದೆ ಶಿಕ್ಷಕ-ಶಿಕ್ಷಕಿಯರು ಟ್ರೇನಿಂಗ ಪಡೆದು ಬರುವ ವರೆಗೆ ಹಳೆಯ ಶಿಕ್ಷಣವನ್ನು ಮುಂದುವರಿಸಲು ಸ್ಪಷ್ಟವಾದ ಆದೇಶವನ್ನಿಯಬೇಕು. ಈ ಪ್ರಕಾರ ಆದೇಶವನ್ನಿಯದಿದ್ದರೆ, ಸಾಲೆಗಳ ಕೆಲಸವು ಕುಂಠಿತವಾಗಿ ಅವುಗಳ ಪ್ರಗತಿ, ಮಟ್ಟ ಮತ್ತು ಶಿಸ್ತು ಕಳೆಗುಂದುವ ಸಂಭವವಿದೆ. ಅವುಗಳನ್ನು ಸುಧಾರಿಸಿ ಪುನಃ ಮೊದಲಿನ ಸ್ಥಿತಿಗೆ ತರಬೇಕಾದರೆ ಹಲವು ವರ್ಷಗಳಾದರೂ ಹಿಡಿಯಬಹುದು. ಆದುದರಿಂದ, ಇಂತಹ ಅನರ್ಥವು ಒದಗದಂತೆ ಹುಕುಮುಗಳನ್ನು ಹೊರಡಿಸುವ ಮುನ್ನ ಈ ಎಚ್ಚರಿಕೆಯನ್ನು ವಹಿಸುವದು ಲೇಸು. ಉಪಕರಣಗಳನ್ನು ಪೂರೈಸುವ ಹಂಚಿಕೆಯು ಸಹ ಸಯುಕ್ತಿಕವಿರಬೇಕು. ಬದಲಾವಣೆಯ ಹುಕುಮು ಹೊರಟ ನಂತರ ಉಪಕರಣಗಳನ್ನು ತಯಾರಿಸಲು ಅಪ್ಪಣೆ ಕೊಡಬಾರದು. ಹೀಗೆ ಮಾಡಿದರೆ, ಶೈಕ್ಷಣಿಕ ವರ್ಷಾರಂಭದಲ್ಲಿ ಪರಿವರ್ತನ ಹೊಂದಿದ ಸಾಲೆಗಳು ಉಪಕರಣಗಳನ್ನು ಹೊಂದಿ,ಕೆಲಸವನ್ನು ಪ್ರಾರಂಭಿಸಬೇಕಾದರೆ ಆ ವರ್ಷದ ಕೊನೆಯ ವರೆಗೆ ತಾಳ್ಮೆಯಿಂದ ದಾರೀ ಕಾಯುತ್ತ ಕೂಡ್ರಬೇಕಾಗುವದು. ಇದರಿಂದ ಸಾಲೆಗಳ ಪ್ರಗತಿಯು ಕೆಳಗಿಳಿಯುವದು ನಿಶ್ಚಿತ. ಮಾರ್ಪಡಿಸತಕ್ಕ ಸಾಲೆಗಳ ಸಂಖ್ಯೆಯನ್ನೂ ಅವುಗಳ ಹೆಸರುಗಳನ್ನೂ ಒಂದು ವರ್ಷ ಮುಂಚಿತವಾಗಿ ನಿರ್ಧರಿಸಿಕೊಂಡು ಅಷ್ಟರೊಳಗೆ ಆ ಸಾಲೆಯಲ್ಲಿಯ ಎಲ್ಲ ಶಿಕ್ಷಕ-ಶಿಕ್ಷಕಿಯರನ್ನು ತರಬೇತುಗೊಳಿಸಿ ಅವಶ್ಯವಾಗಿ ಬೇಕಾಗುವ ಉಪಕರಣ-ಸಾಮಗ್ರಿಗಳನ್ನು ತಯಾರು ಮಾಡಿಸಿಟ್ಟುಕೊಳ್ಳುವದು ವಿಹಿತವು. ಇಂತಹ ಯೋಜನಾಪೂರ್ವಕವಾದ ಹಂಚಿಕೆಯ ಬದಲಾವಣೆಯು ಹೆಚ್ಚು ಉದ್ದೇಶಪೂರಿತವೂ ದಕ್ಷವೂ ಪರಿಣಾಮಕಾರಿಯೂ ಆಗುವದು ಖಂಡಿತ. ಜೀವನ ಶಿಕ್ಷಣವನ್ನು ಆದಷ್ಟು ಬೇಗನೆ ಸಾರ್ವತ್ರಿಕವಾಗಿ ಮಾಡಬೇಕೆನ್ನುವ ಧೋರಣವನ್ನು ನಮ್ಮ ಕೇಂದ್ರ ಸರಕಾರವು ತಳೆದಿರುವದರಿಂದ ಈ ಸಮಸ್ಯವನ್ನು ಇಲ್ಲಿ ವಿವೇಚಿಸಬೇಕಾಯಿತು.

ಅಧಿಕಾರಿಗಳು :

ನಮ್ಮ ಪ್ರತಿನಿತ್ಯದ ಕೆಲಸಗಳಲ್ಲಿ ಕಾಲ ಕಾಲಕ್ಕೆ ಸಲಹೆ-ಸೂಚನೆಗಳನ್ನು ಹೊಂದುವದರ ಅವಶ್ಯಕತೆಯು ಬಹುತರವಾಗಿ ಎಲ್ಲ ಶಿಕ್ಷಕ-ಶಿಕ್ಷಕಿಯರಿಗಿರುವದೆಂಬುದನ್ನು ನಾವು ಪ್ರಾಂಜಲ ಮನಸ್ಸಿನಿಂದ ಒಪ್ಪಿಕೊಳ್ಳಲೇಬೇಕು.

ಶಿಕ್ಷಕ–ಶಿಕ್ಷಕಿಯರು ಎಷ್ಟೇ ಬುದ್ಧಿವಂತರೂ ಚಾಣಾಕ್ಷರೂ ಇದ್ದರೂ ಸಹ ಅವರಿಗಿಂತ ಹೆಚ್ಚಿನ ಯೋಗ್ಯತೆಯುಳ್ಳವರಿಂದ ಮಾರ್ಗದರ್ಶನ–ಉಪದೇಶಗಳ ಅವಶ್ಯಕತೆಯು ಅವರಿಗಿದೆ. ಈ ಮಾತು ಶಿಕ್ಷಣದ ಎಲ್ಲ ನಮೂನೆಗಳಿಗೂ ಮಟ್ಟಗಳಿಗೂ ಅನ್ವಯಿಸುತ್ತದೆ. ಜೀವನ ಶಿಕ್ಷಣದಂತಹ ಹೊಸ ಶಿಕ್ಷಣಕ್ಕಂತೂ ಅದು ಹೆಚ್ಚಾಗಿ ಅನ್ವಯಿಸುತ್ತದೆ. ಅದರಲ್ಲಿ ಅವರ ಅನುಭವವು ಮರ್ಯಾದಿತವಿದ್ದು–ಅಲ್ಪ ಅವಧಿಯದಿರುತ್ತದೆ. ಇಂತಹ ಸಲಹೆ–ಸೂಚನೆಗಳನ್ನು ಅವರು ತಮ್ಮ ಮೇಲಿನ ಅಧಿಕಾರಿಗಳಿಂದ ಪಡೆಯಬೇಕು. ಈ ಅಧಿಕಾರಿಗಳು ತೀರ್ಪನ್ನು ಕೊಡುವ ನ್ಯಾಯಾಧೀಶರಂತೆಯೂ ಪರಿಣಾಮಗಳ ಬೆಲೆ ಕಟ್ಟುವ ನ್ಯಾಯದರ್ಶಿಗಳಂತೆಯೂ ಹೊಸ ಕ್ಷೇತ್ರದತ್ತ ಕರೆದೊಯ್ಯುವ ಮಾರ್ಗದರ್ಶಕರಂತೆಯೂ ಕೆಲಸ ಮಾಡಬೇಕಾಗುವದು. ಒಂದಿಲ್ಲೊಂದು ಪ್ರಸಂಗದಲ್ಲಿ ಅವರು ಪ್ರತಿಯೊಂದು ಪಾತ್ರವನ್ನು ಆಡದ ಹೊರತು ಗತ್ಯಂತರವಿಲ್ಲ. ಶಿಕ್ಷಣದಲ್ಲಿ ಶಕ್ಯವಿದ್ದಷ್ಟು ಅತ್ಯುತ್ತಮ ಪರಿಣಾಮಗಳನ್ನು ದೊರಕಿಸಲು ಅವರು ಮೊದಲಿನವೆರಡು ಪಾತ್ರಗಳನ್ನು ಅದಷ್ಟು ಕಡಿಮೆ ಪ್ರಮಾಣದಲ್ಲಿ ಆಡಿ ಕೊನೆಯ ಪಾತ್ರಕ್ಕೆ ಹೆಚ್ಚು ಮನಸ್ಸನ್ನು ಹಾಕುವದವಶ್ಯವಿದೆಯೆಂಬ ಮಾತು ಅನುಭವದಿಂದ ಕಂಡು ಬಂದಿದೆ. ಅಧಿಕಾರಿಯು ಅಧಿಕಾರಪ್ರಿಯನಾಗಿರದೆ ಸಹಕಾರಪ್ರಿಯನಾಗಿರಬೇಕು, ಮಾತೃಹೃದಯವುಳ್ಳವನಿರಬೇಕು, ಮನೋಭಾವವು ವಿಶಾಲವಾದದ್ದಿರಬೇಕು. ಜಾತೀಯತೆ, ಪ್ರಾಂತೀಯತೆ, ಪಕ್ಷಪಾತತನ, ಸ್ವಜನಪ್ರಿಯತೆ ಮುಂತಾದ ಕ್ಷುದ್ರ ಭಾವನೆಗಳಿಗೆ ಆತನು ಎಡೆಗೊಡಬಾರದು. ಅಧಿಕಾರಿಯು ಜನತೆಯ ಸೇವಕನೆಂಬುದನ್ನು ತನ್ನ ಕೃತಿಗಳಿಂದ ತೋರಿಸಬೇಕೇ ಹೊರತು ಮಾತಿನಿಂದಲ್ಲ. ಸೇವಾಭಾವನೆಯು ಆತನಲ್ಲಿ ಮನೆ ಮಾಡಿಕೊಂಡಿರಬೇಕು. "ಎನಗಿಂತ ಕಿರಿಯರಿಲ್ಲ, ಶಿವ ಭಕ್ತರಿಗಿಂತ ಹಿರಿಯರಿಲ್ಲ" ಎಂಬ ಆ ಮಹಾನುಭಾವಿ ಬಸವಣ್ಣನವರ ದಿವ್ಯ ವಚನವನ್ನೂ ಪ್ರತಿಯೊಬ್ಬ ಅಧಿಕಾರಿಯು ತನ್ನ ಹೃದಯದ ಮೇಲೆ ಬರೆದಿಟ್ಟುಕೊಳ್ಳಬೇಕು. ವೈಕ್ತಿಕ ಲಾಭಗಳಿಂದ ಸಮೃದ್ಧವಾಗಿರುವ ಈ ಜೀವನ ಶಿಕ್ಷಣ ಕ್ಷೇತ್ರದಲ್ಲಿ ಶಿಕ್ಷಕ-ಶಿಕ್ಷಕಿಯರ ಕೂಡ ಸಹಕಾರದಿಂದ ಕೆಲಸ ಮಾಡುವ ಸಂಶೋಧಕನಂತಿರಬೇಕು. ಜನತೆಯ ಕೂಡ ಸಂಪರ್ಕವನ್ನಿಟ್ಟುಕೊಂಡು ಜನತೆಯ ಬೇಡಿಕೆಗಳಿಗೆ ತಕ್ಕಂತೆ ಈ ಶಿಕ್ಷಣದಲ್ಲಿ ಮಾರ್ಪಾಟುಗಳನ್ನು ಮಾಡುವಂತೆ ಸರಕಾರಕ್ಕೆ ಸೂಚಿಸಲು ಆತನು ಸಮರ್ಥನಿರಬೇಕು. ಆದರೆ, ಸೂಚಿಸತಕ್ಕ ಮಾರ್ಪಾಟುಗಳು ಈ ಹೊಸ ಶಿಕ್ಷಣದ ಮೂಲಭೂತ ವಿಚಾರ ಪ್ರಣಾಲಿಗೆ ಧಕ್ಕೆ ತಟ್ಟದಂತಹವುಗಳು ಮಾತ್ರ ಇರಬೇಕು. ಆತನು ಜೇನ್ನೊಣದಂತೆ ಬೇರೆ ಬೇರೆ ಕಡೆಗಳಿಂದ ಶಕ್ತಿವರ್ಧಕವಾದ ಜೇನುತುಪ್ಪವನ್ನು ಶೇಖರಿಸಿ ಅದನ್ನು ಅದರ ಅಗತ್ಯವಿದ್ದವರಿಗೆ ಕೊಟ್ಟು ಅವರನ್ನು ಪೋಷಿಸಬೇಕು. ಧಷ್ಟಪುಷ್ಟರನ್ನಾಗಿ ಮಾಡಬೇಕು. ಹೊಸ ವಾತಾವರಣಕ್ಕೆ ಹೊಂದಿಕೊಂಡು ಹೋಗಲು ಶಿಕ್ಷಣಾಧಿಕಾರಿಯ ಮನೋಭಾವದಲ್ಲಿ ಇಷ್ಟೊಂದು ಬದಲಾವಣೆಯಾಗುವದವಶ್ಯವಿದೆ. ಇದನ್ನು ಹೇಗೆ ಸಾಧಿಸಿಕೊಳ್ಳಬೇಕೆಂಬುದು ಶೈಕ್ಷಣಿಕ ಅಡಳಿತಕ್ಕೆ ಸಮಸ್ಯವಾಗಿರಲು ಸಾಕು. ಶಿಕ್ಷಣಾಧಿಕಾರಿಯು ತನ್ನ ಮರ್ಯಾದಿತ ಕ್ಷೇತ್ರದಲ್ಲಿ ಹಳ್ಳಿಯಿಂದ ಹಳ್ಳಿಗೆ ಪ್ರವಾಸ ಮಾಡಬೇಕು, ಸಾಲೆಗಳನ್ನು ತಪಾಸ ಮಾಡಬೇಕು, ತಪಾಸ ಮಾಡಿದ ಬಗೆಗೆ ರಿಪೋರ್ಟ ಬರೆದು ಕಳಿಸಬೇಕು, ಕಾಲ ಕಾಲಕ್ಕೆ ವರದಿಗಳನ್ನು ತಯಾರಿಸಬೇಕು, ಹೊಸ ಶಿಕ್ಷಣದ ಪ್ರಗತಿಯ ಬಗೆಗೆ ಅಚ್ಚಾದ ನಮೂನೆಗಳಲ್ಲಿ ಮಾಹಿತಿಗಳನ್ನು ತುಂಬಿ ಕಳಿಸಬೇಕು, ಇವಲ್ಲದೆ ಅಡಳಿತದ ನಿತ್ಯದ ಪತ್ರವ್ಯವಹಾರಗಳನ್ನು ಸಾಗಿಸಬೇಕು. ಇಷ್ಟೆಲ್ಲ ಕೆಲಸಗಳನ್ನು ನಿರ್ವಹಿಸುವದರಲ್ಲಿ ಆತನ ವೇಳೆಯೆಲ್ಲ ವ್ಯಯವಾಗುವದುಂಟು. ಒಂದು ವೇಳೆ ಆತನು ಮೇಲೆ ಹೇಳಿದಂತೆ ತಕ್ಕ ಮನೋಭೂಮಿಕೆಯುಳ್ಳವನಿದ್ದರೂ ಸಹ ಪರಿಣಾಮಕಾರಕವಾದ ಮಾರ್ಗದರ್ಶನವನ್ನು ಮಾಡುವದು ಆತನಿಗೆ ಶಕ್ಯವಾಗಲಾರದು. ಮೇಲೆ ಹೇಳಿದ ಅಡಳಿತದ ಕೆಲಸಗಳನ್ನು ನಿರ್ವಹಿಸಿಕೊಂಡು ಈ ಹೆಚ್ಚಿನ ಕೆಲಸಕ್ಕೋಸ್ಕರ ಸಾಕಷ್ಟು ವೇಳೆಯನ್ನು ಉಳಿಸಿಕೊಳ್ಳಲು ಶಕ್ಯವಾಗುವಷ್ಟು ಆತನ ಕ್ಷೇತ್ರವು ಚಿಕ್ಕದಾಗಿಯೂ ಆತನ ನೇತೃತ್ವದಲ್ಲಿರುವ ಸಾಲೆಗಳ ಸಂಖ್ಯೆಯು ಮರ್ಯಾದಿತವಾಗಿಯೂ ಇರುವದೊಳಿತು. ಶಿಕ್ಷಣ ಇಲಾಖೆಯು ತನ್ನ ಅಧಿಕಾರಸ್ಥರಲ್ಲಿ ಮೇಲೆ ಹೇಳಿದ ಮನೋಭೂಮಿಕೆಯನ್ನುಂಟು ಮಾಡಲು ಹೊಸ ಶಿಕ್ಷಣದಲ್ಲಿ ಅವರಿಗೆ ಯೋಗ್ಯ ತರಬೇತನ್ನು ಕೊಟ್ಟು ಅವರನ್ನು ಸಜ್ಜುಗೊಳಿಸಿದೆ, ಈಗಲೂ ಸಜ್ಜುಗೊಳಿಸುತ್ತಲಿದೆ.

ಅಧಿಕಾರದ ವಿಕೇಂದ್ರೀಕರಣ:

ಕೇಂದ್ರೀಕೃತ ಅಧಿಕಾರವು ಪ್ರಜಾಸ್ವಭುತ್ವಕ್ಕೆ ಒಗ್ಗುವದಿಲ್ಲ. ಪರಕೀಯರ ಆಡಳಿತದ ಕಾಲದಲ್ಲಿ

ಚನ್ನಾಗಿದ್ದ ಅಧಿಕಾರದ ಹುದ್ದೆಗಳ ಹಂಚಿಕೆಗಳೂ ಕಾರ್ಯ ವಿಧಾನಗಳೂ ಈಗ ಪರಿಣಾಮಕಾರಕವಾಗಿಲ್ಲ. ಆಗಿನ ಕಾಲದ ಪರಿಸ್ಥಿತಿಗನುಸರಿಸಿ ಸಾವಕಾಶವಾಗಿ ಕೆಲಸ ಮಾಡುತ್ತಿದ್ದ ಆಡಳಿತದ ಯಂತ್ರವು ಈಗಿನ ಅತುರದ ನಿರ್ಣಯಗಳು ಶೀಘ್ರ ಕಾರ್ಯಾಚರಣೆಯ ಮತ್ತು ಒತ್ತರದ ನಿರ್ವಹಣದ ಯುಗದ ಬೇಡಿಕೆಗಳನ್ನು ಸಮಾಧಾನಕರವಾಗಿ ಪೂರೈಸಲು ಅಸಮರ್ಥವಾಯಿತು. ಆರ್ಥಿಕ ಶಾಖೆಗಳನ್ನೊಳಗೊಂಡು ಎಲ್ಲ ಶಾಖೆಗಳಲ್ಲಿಯ ಅಧಿಕಾರದ ಹುದ್ದೆಗಳ ವಿಕೇಂದ್ರೀಕರಣವು ದೊಡ್ಡ ಪ್ರಮಾಣದಲ್ಲಾಗುವ ಶಕ್ತಿಯುಳ್ಳ ಆಡಳಿತದ ಯಂತ್ರವು ಈಗ ಅಗತ್ಯವಾಗಿ ಬೇಕಾಗಿದೆ. ವಿಕೇಂದ್ರೀಕರಣವಾಗದ ಹೊರತು ಪ್ರಜಾ ಪ್ರಭುತ್ವವು ಸರಿಯಾಗಿ ಕೆಲಸ ಮಾಡಲಾರದು. ಉನ್ನತ ಅಧಿಕಾರಿಯು ತನ್ನ ಬಹಳಷ್ಟು ವೇಳೆಯನ್ನೂ ವಿಚಾರವನ್ನೂ ಶ್ರಮವನ್ನೂ ಪ್ರತಿನಿತ್ಯದ ವ್ಯವಹಾರಗಳಲ್ಲಿ ಸಹವ್ಯಯ ಮಾಡಲು ಒತ್ತಾಯಿಸಲ್ಪಡುವದು ಈಗ ಕಂಡು ಬರುತ್ತಿದೆ. ತತ್ಪರಿಣಾಮವಾಗಿ, ಕಾರ್ಯಾಚರಣೆಯಲ್ಲಿ ತೊಡಗಿದ ದೊಡ್ಡ ಅಧಿಕಾರಸ್ಥರ ಶ್ರಮವು ವ್ಯರ್ಥ ಹಾಳಾಗಿ ಅವರ ಕೆಲಸವು ನಿಷ್ಕಾರಣವಾಗಿ ತಡವಾಗುತ್ತಿದೆ. ದೊಡ್ಡ ಹುದ್ದೆಗಳಲ್ಲಿ ಕೆಲಸ ಮಾಡುವವರು ವಾಡಿಕೆಯಾಗಿ ಅನುಭವಿಕರಿರುವದುಂಟು. ಮಹತ್ವ ಪೂರ್ಣವಾದ ಧೋರಣವನ್ನು ರೂಪಿಸಲು ಇಲ್ಲವೆ ರಾಷ್ಟ್ರೀಯ ಪುನರ್ನಿರ್ಮಾಣದಂತಹ ಜೀವಾಳದ ವಿಷಯಗಳನ್ನು ಪರ್ಯಾಲೋಚಿಸಲು ಅವರನ್ನು ಮೀಸಲಾಗಿಡಬೇಕು. ಹೀಗೆ ಮಾಡುವದಾದರೆ, ಆಡಳಿತದ ಯಂತ್ರದಲ್ಲಿಯ ಪ್ರತಿಯೊಂದು ದೊಡ್ಡ ಹುದ್ದೆಯ ಅತ್ಯಂತ ಜವಾಬದಾರಿಯ ಅಧಿಕಾರಗಳನ್ನಷ್ಟು ಬಿಟ್ಟು ಉಳಿದವುಗಳನ್ನು ಅದರ ಕೆಳಗಿನ ಅಧಿಕಾರಿಗಳಿಗೆ ಇಲ್ಲವೆ ಅಧಿಕಾರಿಗಳಿಗೆ ಕೊಡಬೇಕಾಗುವದು. ಜೀವನ ಶಿಕ್ಷಣ ಸಾಲೆಯಲ್ಲಿಯ ಚಟುವಟಿಕೆಗಳ ಸ್ಥಿತಿಗತಿಗೆ ಅವುದೇ ತರಹದ ವಿಲಂಬವನ್ನುಂಟು ಮಾಡಿದರೆ ನಡೆಯಲಾರದು. ಅದರಿಂದ ಏನೂ ಫಲಪ್ರಾಪ್ತಿಯಾಗುವದಿಲ್ಲೆಂಬ ಅರ್ಥವಲ್ಲ; ಬದಲಿ, ಪರಿಣಾಮಗಳು ಮಾತ್ರ ಕುಂಠಿತವಾಗುವವು. ಉದಾಹರಣಾರ್ಥವಾಗಿ, ಬೇಸಿಕ್ ಸಾಲೆಯ ಹೊಲದಲ್ಲಿ ಇಲ್ಲವೆ ನೂಲುವ ಕೆಲಸದಲ್ಲಿ ತಾತ್ಕಾಲಿಕವಾಗಿ ವೆಚ್ಚವನ್ನು ಮಾಡುವ ಪ್ರಸಂಗವು ಉದ್ಭವಿತವಾಗಬಹುದು. ಎಲ್ಲಿಯೋ ದೂರವಲ್ಲಿದ್ದ ಅಧಿಕಾರಿಯ ಹುಕುಮುಗಳ ದಾರಿಯನ್ನು ಕಾಯದೆ ಸಮೀಪದಲ್ಲಿಯೇ ಇದ್ದ ಬೇಟಿ ಅಫೀಸರರಿಗೆ ಮಂಜೂರಿಯನ್ನು ಕೊಡುವ ಅಧಿಕಾರವು ಸ್ವಲ್ಪು ಮಟ್ಟಿಗಾದರೂ ಇರಬೇಕು. ಬೇಕಾದರೆ ಅವ ಹಾನಿಯೂ ಒದಗದಂತೆ ರಕ್ಷಣೋಪಾಯಗಳ ನಿರ್ಬಂಧವನ್ನು ಹೇರಲಡ್ಡಿಯಿಲ್ಲ. ತಡಮಾಡಿ ಕೊಟ್ಟ ತೀರ್ಪು ತೀರ್ಪನ್ನು ಕೊಟ್ಟಂತೆಯೇ ಅಲ್ಲ. ಅದರಂತೆ ಸಮಯಕ್ಕೊದಗದ ಮಂಜೂರಿಯು ಮಂಜೂರಿಯೇ ಅಲ್ಲವೆಂಬುದರ ಉದಾಹರಣೆಗಳಿಗೆ ಕೊರತೆಯಿಲ್ಲ. ಜೀವನ ಶಿಕ್ಷಣ ಸಾಲೆಯಲ್ಲಿಯ ಒಕ್ಕಲತನದ ಕೆಲಸಗಳಿಗೆ ತಗಲುವ ಖರ್ಚಿನ ಮಂಜೂರಿಯು ಹಂಗಾಮು ಮುಗಿದ ಎಷ್ಟೋ ದಿನಗಳ ತರುವಾಯ ತಲುಪಿದರೇನು ಫಲ? ಈ ಪ್ರಕಾರದ ಮಂಜೂರಿಗೆ ಮಂಜೂರಿಯೆಂದು ಹೇಗೆ ಕರೆಯಬೇಕು? ಇದಕ್ಕೆ ಉಪಾಯವು ಸುಸ್ಪಷ್ಟವೇ ಇದೆ. ಅದು ಅಗತ್ಯವಿದ್ದುದರಿಂದ ಅದಕ್ಕೆ ವಿಲಂಬ ಮಾಡಿದರೆ ಸಾಲದು. ಇಂತಹ ಜರೂರಿಯ ಪ್ರಸಂಗಗಳಲ್ಲಿ ಮೇಲಿನ ಅಧಿಕಾರಿಯು ಸಮಯೋಚಿತ ಬುದ್ಧಿಯನ್ನು ತೋರ್ಪಡಿಸಬೇಕು. ಬೇಟಿ ಆಫೀಸರರಿಗಾಗಲಿ ಇಲ್ಲವೆ ಆ ಸಾಲೆಯ ಹೆಡ್ ಮಾಸ್ತರರಿಗಾಗಲಿ ಇಂತಹ ಖರ್ಚನ್ನು ಮಾಡಿ ಕೆಲಸವನ್ನು ಸಾಗಿಸಲು ಅಧಿಕಾರವನ್ನು ಕೊಡಬೇಕು. ಖರ್ಚು ಮಾಡಿದ್ದು ಯೋಗ್ಯವಿದ್ದುದರ ಬಗೆಗೆ ಹಿಂದುಗಡೆ ವಿಚಾರಿಸಿಕೊಳ್ಳಬೇಕು. ಒಂದು ವೇಳೆ ಅದು ಅಯೋಗ್ಯವಿದ್ದುದು ಕಂಡು ಬಂದರೆ, ಅದಕ್ಕೆ ತಕ್ಕ ಶಾಸನವೂ ಆಗಬೇಕು.

ವರ್ಗಾವರ್ಗಿಗಳು:

ಜೀವನ ಶಿಕ್ಷಣ ಸಾಲೆಗಳಲ್ಲಿ ವರ್ಗಾವರ್ಗಿಗಳು ಆದಷ್ಟು ಕಡಿಮೆ ಪ್ರಮಾಣದಲ್ಲಿ ಆಗಬೇಕು; ವಿಶಿಷ್ಟ ಪ್ರಸಂಗಗಳಲ್ಲಿ ಮಾತ್ರ ಅವು ಆಗಲಡ್ಡಿಯಿಲ್ಲ. ಜೀವನ ಶಿಕ್ಷಣದಲ್ಲಿ ತರಬೇತನ್ನು ಹೊಂದಿದ ಶಿಕ್ಷಕ-ಶಿಕ್ಷಕಿಯರಿಗೆ ಆದಷ್ಟು ಮಟ್ಟಿಗೆ ಅವರವರ ಹಳ್ಳಿಯನ್ನು ಇಲ್ಲವೆ ಅವರಿಗೆ ಅನುಕೂಲವಾಗುವ ಹಾಗೆ ಅವರ ಹಳ್ಳಿಗೆ ಸಮೀಪವಿರುವ ಗ್ರಾಮವನ್ನು ಅಥವಾ ಅವರು ಇಚ್ಛಿಸಿದ ಬೇರೆ ಹಳ್ಳಿಯನ್ನು ಕೊಡುವದು ವಿಹಿತ. ಹೀಗೆ ಮಾಡಿದರೆ, ಅವರು ಒಮ್ಮನದಿಂದ ಕೆಲಸ ಮಾಡಬಲ್ಲರು. ಅವರಿಗೆ ಅನುಕೂಲ ಸ್ಥಳಗಳನ್ನು ಕೊಟ್ಟರೆ, ತಮ್ಮ ತಮ್ಮ ಪ್ರಪಂಚಕ್ಕೆ ಅವಶ್ಯವಿದ್ದ ಸೌಕರ್ಯಗಳನ್ನು ಮಾಡಿಟ್ಟುಕೊಳ್ಳಲು ಅವರಿಗೆ ಎಲ್ಲ ತರಹದಿಂದ ಅನುಕೂಲವಾಗುವದು. ಅವರ ಸಂಬಳವ ಪ್ರಮಾಣವು ಕಡಿಮೆ ಇರುವದರಿಂದ ಈಗಿನಂತಹ ತುಟಾ

ಗ್ರತೆಯ ಕಾಲದಲ್ಲಿ ಅವರಿಗೆ ತಮ್ಮ ತಮ್ಮ ಪ್ರಪಂಚವನ್ನು ಸಾಗಿಸುವದು ಬಹಳ ದುಸ್ತರವಿರುತ್ತದೆ. ಪ್ರಪಂಚದ ಅಡಚಣೆಗಳು ಅವರನ್ನು ಬಾಧಿಸದಂತಾದರೆ, ಅವರು ಆಸ್ಥೆವಹಿಸಿ ಕೆಲಸ ಮಾಡಬಲ್ಲರು. ಸ್ವಂತ ಊರನ್ನು ಪಡೆದ ಹಲವು ಶಿಕ್ಷಕ–ಶಿಕ್ಷಕಿಯರು ಊರೊಳಗಿನ ಪಕ್ಷ-ಪಂಗಡಗಳಲ್ಲಿ ಸೇರಿಕೊಂಡು ಇಲ್ಲದ ಗುದಮುರಿಗೆಯನ್ನು ಹಾಕುವ ಸಂಭವನಿದೆ. ಅಂತಹವರಿಗೆ ತಿಲ ಮಾತ್ರವೂ ದಯ ತೋರಿಸದೆ ಅವರನ್ನು ಆದಷ್ಟು ದೂರಿನ ಗ್ರಾಮಕ್ಕೆ ವರ್ಗ ಮಾಡಬೇಕು. ಬೇರೆ ಹಲವರು ತಮ್ಮ ಹೊಲ-ಮನೆ ಕೆಲಸಗಳಲ್ಲಿ ವಿಶೇಷ ಮನಸ್ಸನ್ನು ಹಾಕಿ ಸಾಲೆಯ ಕೆಲಸವನ್ನು ದುರ್ಲಕ್ಷಿಸುವರು. ಅಂತಹವರನ್ನು ತತ್‌ಕ್ಷಣವೇ ದೂರಿನ ಹಳ್ಳಿಗೆ ವರ್ಗ ಮಾಡಬೇಕು. ಒಂದೇ ಸಾಲೆಯಲ್ಲಿಯ ಶಿಕ್ಷಕರು ಇಲ್ಲವೆ ಶಿಕ್ಷಕಿಯರು ತಮ್ಮ ತಮ್ಮೊಳಗೆ ಪಂಗಡಗಳನ್ನು ಮಾಡಿಕೊಂಡು ಗಲಾಟೆಯನ್ನು ಎಬ್ಬಿಸಿ ಸಾಲೆಯ ವಾತಾವರಣವನ್ನು ಕೆಡಿಸಿದ ಉದಾಹರಣೆಗಳಿಗೂ ಕೊರತೆಯಿಲ್ಲ. ಅಂತಹವರನ್ನು ಸಹ ಕೂಡಲೆ ನಿರ್ದಾಕ್ಷಿಣ್ಯನಾಗಿ ವರ್ಗ ಮಾಡಬೇಕು. ತಮ್ಮೂರ ಜೀವನ ಶಿಕ್ಷಣ ಸಾಲೆಯಲ್ಲಿ ಉತ್ತಮ ರೀತಿಯಿಂದ ಕೆಲಸ ಮಾಡುತ್ತಿರಬೇಕು, ಅವರ ಬಗೆಗೆ ಅರಿಂದಲೂ ಅವತರಹದ ತಕರಾರು ಇರಬಾರದು, ಅಂತಹವರಿಗೆ ಮಾತ್ರ ತಮ್ಮೂರಲ್ಲಿ ಇಲ್ಲವೆ ತಮಗೆ ಅನುಕೂಲವಿರುವ ಊರಲ್ಲಿ ಕೆಲಸ ಮಾಡುವ ಸೌಲಭ್ಯವನ್ನೊದಗಿಸಿ ಕೊಡುವದು ಲೇಸು. ಶಿಕ್ಷಣ ಖಾತೆಯವರಿಂದ ಈ ಪ್ರಕಾರ ಸೌಲಭ್ಯಗಳನ್ನು ಪೊಂದಿ ಉತ್ತಮ ರೀತಿಯಿಂದ ಕೆಲಸ ಮಾಡಿ ತೋರಿಸುತ್ತಿರುವ ಶಿಕ್ಷಕ–ಶಿಕ್ಷಕಿಯರ ಉದಾಹರಣೆಗಳು ಹೇರಳವಾಗಿದ್ದುದು ನಮ್ಮ ಅನುಭವಕ್ಕೆ ಬಂದಿದೆ. ತಮಗೆ ದಯಪಾಲಿಸಿದ ಸವಲತ್ತುಗಳ ಸದುಪಯೋಗವನ್ನು ಮಾಡಿಕೊಳ್ಳದೆ ದುರುಪಯೋಗವನ್ನು ಮಾಡಿಕೊಂಡರೆ ಮಾತ್ರ ಅವರು ಕಷ್ಟಪರಂಪರೆಗಳಿಗೆ ಗುರಿಯಾಗಬೇಕಾಗುವದು. ತಮ್ಮ ಕಾಲ ಮೇಲೆ ತಾವೇ ಕಲ್ಲು ಚಲ್ಲಿಕೊಂಡರೆ ಆರೇನು ಮಾಡುವರು? ಇದರ ಮರ್ಮವನ್ನು ಶಿಕ್ಷಕ–ಶಿಕ್ಷಕಿಯರು ಚನ್ನಾಗಿ ಅರಿತುಕೊಳ್ಳಬೇಕು. ಇದರಲ್ಲಿಯೇ ಅವರ ಕಲ್ಯಾಣವು ಅಡಗಿದೆ. ಮರ್ಮವನ್ನರಿತವರು ಸುಖದಿಂದ ಬಾಳುತ್ತಿದ್ದಾರೆ, ಮರ್ಮವನ್ನರಿಯದವರು ದುಃಖಪಡುತ್ತಿದ್ದಾರೆ.

—: ಜಯ ಹಿಂದ :—

ಪ್ರಾಥಮಿಕ ಶಾಲಾ ಪ್ರಮಾಣಪತ್ರ ಪರೀಕ್ಷೆ, ಟ್ರೇನಿಂಗ ಕಾಲೇಜ; ಎಲಿಮೆಂಟರಿ ಮತ್ತು ಇಂಟರಮೀಡಿಯೆಟ್ ಗ್ರೇಡ ಮುಂ. ಡ್ರಾಯಿಂಗ ಪರೀಕ್ಷೆಗಳಿಗೆ—

ಜನಪ್ರಿಯವಾದ ಮತ್ತು ಸರಕಾರದಿಂದ ಮಂಜೂರಾದ ಒಂದೇ ಒಂದು ಪುಸ್ತಕ

ಆದರ್ಶ ಚಿತ್ರಕಲಾ

(Ideal Drawing)

ಶ್ರೀ ಎಸ್. ಕೆ. ಜೋಶಿ, ಮತ್ತು ಶ್ರೀ ಜಿ. ಡಿ. ವಾಲಿ.

ಎಲ್ಲ ದೊಡ್ಡ ಪುಸ್ತಕ ವ್ಯಾಪಾರಸ್ಥರಲ್ಲಿ ದೊರೆಯುವದು.

ಬೆಲೆ ೧—೧೨—೯ ಅಂಚೆವೆಚ್ಚ ಪ್ರತ್ಯೇಕ.

ಐದು ಮತ್ತು ಐದಕ್ಕಿಂತ ಹೆಚ್ಚು ಪ್ರತಿ ತರಿಸಿಕೊಳ್ಳುವವರಿಗೆ ಅಂಚೆ ವೆಚ್ಚವಿಲ್ಲ. ಇದು ಕನ್ನಡದಲ್ಲಿಯೂ ಸಿಗುತ್ತದೆ.

ಜಿ. ವಾಯ್. ರಾಣೆ

ಪ್ರಕಾಶಕರು, ಖಳಿ, ಕಸಬಾ ಪೇಟೆ ಪುಣೆ.

೧೯೫೬ನೆಯ ಇಸವಿಯಿಂದ ಪ್ರಾರಂಭವಾಗುವ ಸಾಮಾನ್ಯ ಪ್ರಾ. ಶಾ. ಪ್ರ. ಪರೀಕ್ಷೆಯ ಅಭ್ಯಾಸ ಕ್ರಮವನ್ನು ಅನುಸರಿಸಿ ಬರೆದ

ಶೇಲಾರ ಕೃತ

ಪ್ರಾಥಮಿಕ ಭೂಮಿತಿ

[ಕ್ಷೇತ್ರಫಲ ಘನಫಲ ಸಹಿತ]

೪ ರಿಂದ ೭ ನೇಯ ವರ್ಗದ ವರೆಗಿನ ವಿಷಯವನ್ನೆಲ್ಲ ಒಳಗೊಂಡಿದೆ.

ಬೆಲೆ: ೧ರೂ. ೮ಆಣೆ ಮಾತ್ರ

ದೊರೆಯುವ ಸ್ಥಳ:—

ಸಾಯಿ ಪಬ್ಲಿಶಿಂಗ್ ಹಾವುಸ್
ವಿಜಯ ರೋಡ, ಧಾರವಾಡ.

ಜೀವನ ಶಿಕ್ಷಣದಲ್ಲಿ ಚಟುವಟಿಕೆ ಮತ್ತು ಸಮವಾಯ ಜ್ಞಾನ

ಲೇಖಕರು :— ಶ್ರೀ ಗು. ಶಂ. ಗೋಕರ್ಣ, ಮೂಲೋದ್ಯೋಗ ಸಂಘಟಕರು, ಧಾರವಾಡ ವಿಭಾಗ.

ಜೀವನ ಶಿಕ್ಷಣದಲ್ಲಿ ಚಟುವಟಿಕೆಗಳ ಮುಖಾಂತರ ಬಾಲಕ ಬಾಲಿಕೆಯರಿಗೆ ಸಮವಾಯ ಜ್ಞಾನವನ್ನು ಕೊಟ್ಟು ಅವರಿಗೆ ಸಮಾಜೋಪಯೋಗಿ ಉತ್ತಮ ನಾಗರಿಕರನ್ನು ಮಾಡುವದೇ ನಮ್ಮ ಧ್ಯೇಯವಾಗಿದೆ. ಪುಸ್ತಕಗಳನ್ನು ಶಿಕ್ಷಕರ ಮಾರ್ಗದರ್ಶನಕ್ಕಾಗಿ ಹಾಗು ಬಾಲಕ ಬಾಲಿಕೆಯರಿಗೆ ಸಹಾಯವಾಗಬೇಕೆಂದು ಉಪಯೋಗಿಸ ಬಹುದು. ಇದನ್ನು ನಾವು ಮರೆತುಬಿಟ್ಟಿದ್ದೇವೆ. ಪುಸ್ತಕಗಳನ್ನು ಓದುವದರಿಂದ ಅಷ್ಟೇ ನಮಗೆ ಜ್ಞಾನವಾಗುವದು ಎಂಬುವ ತಿಳುವಳಿಕೆಯನ್ನು ನಾವು ಬಾಲಕ ಬಾಲಿಕೆಯರಿಗೆ ಮಾಡಿಕೊಡಬಾರದು. ಕೃತಿಯ ಮೂಲಕ ಪಡೆದ ಜ್ಞಾನವು ಒಳ್ಳೆಯದಿರುವದು. ನಾವು ಪಡೆದ ಅನುಭವಗಳು ನಮ್ಮ ಜ್ಞಾನಕ್ಕೆ ಆಧಾರವಾಗಿರಬೇಕು. ಈ ವಿಶಾಲ ದೃಷ್ಟಿಯಿಂದಲೇ ಜೀವನ ಶಿಕ್ಷಣದಲ್ಲಿ ಬೇರೆ ಬೇರೆ ಚಟುವಟಿಕೆಗಳಿಗೆ ಪ್ರಾಧಾನ್ಯವನ್ನು ಕೊಡಲಾಗಿದೆ. ಶಿಕ್ಷಣದ ಮೊದಲನೆಯ ಉದ್ದೇಶ ಜ್ಞಾನ ಮತ್ತು ಎರಡನೆಯ ಉದ್ದೇಶವು ಕೃತಿ. ಕೃತಿಯ ಮೂಲಕ ಜ್ಞಾನ, ಇದೇ ಜೀವನ ಶಿಕ್ಷಣದ ಉದ್ದೇಶ.

ದೈಹಿಕ ಶ್ರಮ ಮತ್ತು ಬೌದ್ಧಿಕ ಶಿಕ್ಷಣ ಇವುಗಳ ನಡುವೆ ನಿಕಟವಾದ ಸಂಬಂಧ ಇರುತ್ತದೆ. ನಮ್ಮ ಶಾಲೆಗಳಲ್ಲಿ ಚಟುವಟಿಕೆ ಬೇರೆ ಮತ್ತು ಬೌದ್ಧಿಕ ಶಿಕ್ಷಣ ಬೇರೆ ಎಂದು ನಡೆದರೆ ಯಾವದೇ ಕೆಲಸವು ಪೂರ್ಣ ವಸ್ಥೆಗೆ ಹೋಗುವದಿಲ್ಲ. ನಮ್ಮ ಶಾಲೆಗಳಲ್ಲಿ ಎಷ್ಟೋ ಬಾಲಕ ಬಾಲಿಕೆಯರು ಉದಾಸೀನರಾಗಿದ್ದುದು ನಮಗೆ ಕಂಡು ಬರುತ್ತದೆ. ಕರ್ಮ, ಭಕ್ತಿ ಮತ್ತು ಜ್ಞಾನ ಇವುಗಳ ಸಮನ್ವಯ ಆಗದೆ ಇರುವದು ಇದೇ ಈ ಪರಿಸ್ಥಿತಿಗೆ ಕಾರಣವಾಗಿದೆ. ದೈಹಿಕ ಕೆಲಸದ ಶಿಕ್ಷಣದ ಜೊಡ ಮಾನಸಿಕ ಶಿಕ್ಷಣ ಮತ್ತು ನೈತಿಕ ಬಲವರ್ಧನೆಯ ಶಿಕ್ಷಣ ಇವುಗಳ ಮೇಳವಿರಬೇಕೆಂದು ನನ್ನ ದೃಢ ವಿಶ್ವಾಸ. ಶಿಕ್ಷಣವೆಂದರೆ ಬಾಲಕ ಬಾಲಿಕೆಯರ ದೈಹಿಕ, ಮಾನಸಿಕ ಮತ್ತು ಆತ್ಮಿಕ ಶಕ್ತಿಗಳ ಸಮಗ್ರ ವಿಕಾಸ ಬಾಲಕ ಬಾಲಿಕೆಯರಿಗೆ ಬೇರೆ ಬೇರೆ ಉದ್ದೇಶಪೂರ್ಣ ಚಟುವಟಿಕೆಗಳನ್ನು ಮಾಡಲಿಕ್ಕೆ ಅನುವು ಕೊಟ್ಟು ಅವುಗಳ ಸಮವಾಯ ಜೀವನಕ್ಕೆ ಸಂಬಂಧ ಬರುವಂತೆ ಸಾಧಿಸಿ ಅವರಿಗೆ ಸಮಾಜಜೀವಿ, ಸ್ವಾವಲಂಬಿ ಉತ್ತಮ ನಾಗರಿಕರನ್ನು ಮಾಡುವದೇ ಜೀವನ ಶಿಕ್ಷಣದ ಗುರಿ.

ಜೀವನ ಶಿಕ್ಷಣ ಶಾಲೆಯಲ್ಲಿ ಕೆಲವು ಚಟುವಟಿಕೆಗಳನ್ನು ಮುಖ್ಯ ಉದ್ಯೋಗವೆಂದು ಮಾಡುತ್ತೇವೆ. ನೆಯ್ಗೆ ಒಕ್ಕಲುತನ ಮತ್ತು ಬಡಿಗತನ ಇವು ಮುಖ್ಯ ಮೂಲೋದ್ಯೋಗಗಳೆಂದು ಪ್ರಾರಂಭಿಸಿದ್ದೇವೆ. ನೂಲುವದು ಕಾಗದ ಕೆಲಸ, ರಟ್ಟಿನ ಕೆಲಸ ಮತ್ತು ಕೈತೋಟ ಇವು ಉಪ ಮೂಲೋದ್ಯೋಗವೆಂದು ಮಾಡುವ ರೂಢಿಯಿರುತ್ತದೆ. ಪ್ರತಿಯೊಂದು ಜೀವನ ಶಿಕ್ಷಣ ಶಾಲೆಯಲ್ಲಿ ಯಾವದಾದರೊಂದು ಅಂದರೆ (ಒಕ್ಕಲತನ, ನೆಯ್ಗೆ, ಬಡಿಗತನ) ಮುಖ್ಯ ಮೂಲೋದ್ಯೋಗ ಮತ್ತು ಮೂರು ಉಪ ಮೂಲೋದ್ಯೋಗಗಳನ್ನು ಮಾಡತಕ್ಕದ್ದು. ನಮ್ಮ ಜೀವನ ಶಿಕ್ಷಣ ಶಾಲೆಗಳಲ್ಲಿ ಮೂರು ಪ್ರಕಾರಗಳು ಆಗುವವು. (೧) ನೂಲುವದು ಮತ್ತು ನೆಯ್ಗೆ ಮುಖ್ಯ ಮತ್ತು ಕೈತೋಟ ಮತ್ತು ಕಾಗದದ ಮತ್ತು ರಟ್ಟಿನ ಕೆಲಸ ಇವು ಉಪ ಮೂಲೋದ್ಯೋಗಗಳು. (೨) ಒಕ್ಕಲುತನ ಇದು ಮುಖ್ಯ ಮತ್ತು ನೂಲುವದು ಕಾಗದದ ಮತ್ತು ರಟ್ಟಿನ ಕೆಲಸ ಮತ್ತು ಕೈತೋಟ ಉಪ ಮೂಲೋದ್ಯೋಗಗಳು. (೩) ಬಡಿಗತನ ಇದು ಮುಖ್ಯ ಮತ್ತು ನೂಲುವದು, ಕೈತೋಟ ಮತ್ತು ಕಾಗದದ ರಟ್ಟಿನ ಕೆಲಸ ಇವು ಉಪ ಮೂಲೋದ್ಯೋಗಗಳು. ನಮ್ಮ ಜೀವನ ಶಿಕ್ಷಣ ಶಾಲೆಗಳಲ್ಲಿ ಕೆಲವು ಶಿಕ್ಷಕರು ಉಪ ಮೂಲೋದ್ಯೋಗಗಳ ಕಡೆಗೆ ಸಾಕಷ್ಟು ಲಕ್ಷ್ಯವನ್ನು ಪೂರೈಸುವದಿಲ್ಲ. ಮುಖ್ಯ ಮೂಲೋದ್ಯೋಗವನ್ನು ಸಹಿತ ತಾಂತ್ರಿಕ ನಡೆಸುತ್ತಾರೆ ಎಂದು ಕಂಡು ಬರುತ್ತದೆ. ಬಾಲಕ ಬಾಲಿಕೆಯರಿಗೆ ಯಾವದೇ ಚಟುವಟಿಕೆ ಮಾಡುವ ಪೂರ್ವದಲ್ಲಿ ತಾತ್ವಿಕ ಮಾಹಿತಿ ತಪ್ಪದೆ ಮಾಡಿ ಕೊಡತಕ್ಕದ್ದು. ಆ ಚಟುವಟಿಕೆಯಲ್ಲಿ ಇರುವ ಉಪಕ್ರಿಯೆಗಳು, ಉಪಯೋಗಿಸತಕ್ಕ ಸಾಧನಗಳು, ಉಪಯೋಗಿಸುವ ಕಚ್ಚಾ ಮಾಲು, ಆಗ ಬಹುದಾದ ಕಾರ್ಮಿಕ ತಪ್ಪುಗಳು, ಅವರ ಮೂಲಕ ಬರ ಬಹುದಾದ ಹಾನಿ ಇವುಗಳ ಬಗ್ಗೆ ಸಾಕಷ್ಟು ಜ್ಞಾನವನ್ನು

ಮಾಡಿಕೊಟ್ಟು ಆ ಮೇಲೆ ಚಟುವಟಿಕೆ ಮಾಡಿ ತೋರಿಸಿ ತಮ್ಮ ಮಾರ್ಗದರ್ಶನದಲ್ಲಿ ಕೆಲಸ ಪ್ರಾರಂಭವಾಗತಕ್ಕದ್ದು. ಚಟುವಟಿಕೆಗಳಲ್ಲಿ ಆಗುವ ತಪ್ಪುಗಳನ್ನು ಸಕಾಲಕ್ಕೆ ತಿದ್ದುವ ರೂಢಿ ಇಡತಕ್ಕದ್ದು. ಅಂದರೆ ಉತ್ತಮ ಫಲ ನಿಷ್ಪತ್ತಿಯಾಗುವದು. ಕೊನೆಗೆ ತಯಾರಾದ ಪಕ್ಕಾ ಮಾಲಿನ ಮಾರಾಟಕ್ಕೆ ತೊಂದರೆ ಬರಲಿಕ್ಕಿಲ್ಲ ಮತ್ತು ಬಾಲಕ ಬಾಲಿಕೆಯರ ಮೇಲೆ ಒಳ್ಳೆಯ ಸಂಸ್ಕಾರಗಳು ಆಗುವವು. ಇಲ್ಲದಿದ್ದರೆ ಅವರಿಗೆ ಉದ್ಯಮ ಕಲಿಸಿ ಏನೂ ಉಪಯೋಗವಾಗುವದಿಲ್ಲ. ಪ್ರತಿಯೊಂದು ಸಾಲೆಯಲ್ಲಿ ಎಲ್ಲ ಉಪ ಮೂಲೋದ್ಯೋಗಗಳನ್ನು ಲಕ್ಷ್ಯಕೊಟ್ಟು ಶಾಲೆಯಲ್ಲಿ ನಡೆಯಿಸತಕ್ಕದ್ದು. ಇದರ ಹೊರತು ಎಲ್ಲ ಜೀವನ ಶಿಕ್ಷಣ ಸಾಲೆಗಳಲ್ಲಿ ಕೆಲವು ಉದ್ದೇಶ ಪೂರ್ಣ ಚಟುವಟಿಕೆಗಳನ್ನು ಮಾಡತಕ್ಕದ್ದು. ದಿನಾಲು ಸಾಲೆಯ ಸಫಾಯಿ, ಪ್ರಾರ್ಥನೆ, ಸಂಚಾಂಗ ಪಠಣ, ಅಮರವಾಣಿ, ಸುದ್ದಿಗಳ ವಿತರಣೆ ನಿಯಮಿತವಾಗಿ ಮಾಡತಕ್ಕದ್ದು. ಪ್ರತಿಯೊಂದು ವರ್ಗದಲ್ಲಿ ಒಂದು ಹೂಜಿಯನ್ನು ಇಟ್ಟು ಕುಡಿಯುವ ನೀರಿನ ಪೂರೈಕೆ ಮಾಡಬೇಕು. ಈ ಎಲ್ಲ ಕೆಲಸಗಳು ಬಾಲಕ ಬಾಲಿಕೆಯರಿಗೆ ಆರೋಗ್ಯದ ಸಮುವಾಯವನ್ನು ಸಾಧಿಸಿ ಅರ್ಥಪೂರ್ಣವಾಗುವಂತೆ ಮಾಡತಕ್ಕದ್ದು. ಬಾಲಕ ಬಾಲಿಕೆಯರು ಹಲ್ಲು, ಕಿವಿ, ಕಣ್ಣು ಇವುಗಳ ಸ್ವಚ್ಛತೆ ಮಾಡಿಕೊಂಡಿದ್ದಾರೋ ಇಲ್ಲವೋ ಎಂಬುದನ್ನು ನೋಡಿಕೊಳ್ಳತಕ್ಕದ್ದು. ಸ್ವಯಂಶಾಸನ ಪದ್ಧತಿಯಿಂದ ಈ ಕೆಲಸಗಳನ್ನು ನಡೆಯಿಸಿ ಶಿಕ್ಷಕರು ಬಾಲಕರಿಂದ ಕಾರ್ಯದ ನಿರ್ವಹಣೆ ಮಾಡಿಸತಕ್ಕದ್ದು. ಶಿಕ್ಷಕರು ಮಾರ್ಗದರ್ಶನ ಮಾಡಿ ಬಾಲಕ ಬಾಲಿಕೆಯರಿಗೆ ಸಮುವಾಯ ಜ್ಞಾನವನ್ನು ಕೊಡಬೇಕು. ದಿನಾಚರಣೆ ಮಾಡುವಾಗ ಸಹಿತ ಆಯಾ ಸಾಲೆಯ ಸಫಾಯಿ ತಳಿರು ತೋರಣಗಳಿಂದ ಶೃಂಗಾರ, ಸ್ವಾಗತಪರ ಭಾಷಣ, ಆಭಾರ ಮನ್ನಣೆ, ಅಧ್ಯಕ್ಷರಿಗಾಗಿ ಹೂ ಮಾಲೆ ತಯಾರಿಸುವದು, ಇತರ ಅತಿಥಿಗಳಿಗಾಗಿ ಪುಷ್ಪಗುಚ್ಛಗಳನ್ನು ತಯಾರಿಸುವ ಕೆಲಸ ಮೊದಲಾದ ಚಟುವಟಿಕೆಗಳನ್ನು ಬೇರೆ ಬೇರೆ ವರ್ಗಗಳಿಗೆ ಹಂಚಿಕೊಡತಕ್ಕದ್ದು ಮತ್ತು ಶಿಕ್ಷಕರ ಮಾರ್ಗದರ್ಶನದಲ್ಲಿ ಮಾಡಿಸತಕ್ಕದ್ದು. ಆ ಚಟುವಟಿಕೆಗಳ ಸಮುವಾಯ ಜ್ಞಾನವನ್ನು ಮಾಡಿಕೊಡತಕ್ಕದ್ದು. ಸಾಲೆಯಲ್ಲಿ ಒಂದು ಮಂತ್ರಿ ಮಂಡಳವನ್ನು ರಚಿಸತಕ್ಕದ್ದು. ಮಂತ್ರಿಮಂಡಳ ಚುನಾವಣೆಯನ್ನು ಪದ್ಧತಿಯಿಂದ ಮಾಡಿಸಿ ಬಾಲಕ ಬಾಲಿಕೆಯರಿಗೆ ಸ್ವಯಂಶಾಸನದ ಸಂಸ್ಥೆಗಳು ಮತ್ತು ಅವುಗಳ ಕೆಲಸ ಇದರ ಜ್ಞಾನವನ್ನು ಮಾಡಿಕೊಡತಕ್ಕದ್ದು. ಸಹಕಾರಿ ಸಂಸ್ಥೆಗಳ ಮತ್ತು ಗ್ರಾಮಪಂಚಾಯತಿಗಳ ಕೆಲಸದ ಮಾಹಿತಿ ಮಾಡಿಕೊಡತಕ್ಕದ್ದು. ಮೇಲಿನ ವರ್ಗದ ಬಾಲಕ ಬಾಲಿಕೆಯರಿಗೆ ರಾಜ್ಯ ಸರಕಾರ ಮತ್ತು ಕೇಂದ್ರ ಸರಕಾರದ ಶಾಸನ ಪದ್ಧತಿಯ ಮಾಹಿತಿ ಮಾಡಿಕೊಡತಕ್ಕದ್ದು. ಸಹಕಾರಿ ಸಂಘಗಳ ಉದ್ದೇಶ ಎಷ್ಟೋ ಜನರಿಗೆ ಗೊತ್ತಿಲ್ಲ. ಸಂಘದ ಪತ್ತು ಹೇಗೆ ಬೆಳೆಯಿಸತಕ್ಕದ್ದು, ಈ ತತ್ವ ಗೊತ್ತಿರದೇ ಬ್ಯಾಂಕಿನ ಸಾಲ ತಂದ, ಸದಸ್ಯರಿಗೆ ಸಾಲವನ್ನು ಹಂಚುವದು, ಇದೇ ಪ್ರಕಾರ ಎಷ್ಟೋ ಸಂಘಗಳು ನಡೆದಿವೆ. ಸಹಕಾರಿ ಸಂಘವೆಂದರೆ ಸಾಲವನ್ನು ತೆಗೆದುಕೊಳ್ಳುವದಕ್ಕಾಗಿ ಒಂದು ಸಂಸ್ಥೆಯೆಂದು ಅವರ ಕಲ್ಪನೆ ಇರುತ್ತದೆ. ನನಗಾಗಿ ಎಲ್ಲರೂ, ಎಲ್ಲರಿಗಾಗಿ ನಾನು ಎಂಬ ಕಲ್ಪನೆ ಮಾಡಿಕೊಟ್ಟು ಸಂಘದ ಸಾಮೂಹಿಕ ಪತ್ತನ್ನು ಬೆಳೆಯಿಸದೆ ನಡೆಸಿದ ಸಂಘಗಳು ತಮ್ಮ ಕೆಲಸ ಸರಿಯಾಗಿ ಮಾಡಿದಂತೆ ಆಗುವದಿಲ್ಲ. ಈ ತತ್ವಗಳ ಸಮುವಾಯ ಜ್ಞಾನವನ್ನು ಬಾಲಕ ಬಾಲಿಕೆಯರಿಗೆ ಮಾಡಿಕೊಡುವದು ಅತ್ಯಾವಶ್ಯಕ. ಆದುದರಿಂದ ಬಾಲವೀರರ ಸಂಘ ಮತ್ತು ಮಾರ್ಗದರ್ಶಿಕೆಗಳ ಸಂಘ, ಸ್ವಯಂಸೇವಕ ದಲಗಳನ್ನು ರಚಿಸತಕ್ಕದ್ದು. ಬಾಲಕ ಬಾಲಿಕೆಯರಿಗೆ ಸಹಕಾರದಿಂದ ಸಮಾಜಸೇವೆ ಮಾಡುವ ತರಬೇತಿ ಕೊಡತಕ್ಕದ್ದು. ಹಳ್ಳಿಯಲ್ಲಿ ಏರ್ಪಡಿಸಿದ ಸಾಮೂಹಿಕ ಕಾರ್ಯಕ್ರಮಗಳಲ್ಲಿ ಬಾಲಕ ಬಾಲಿಕೆಯರು ಶಿಕ್ಷಕರ ಮಾರ್ಗದರ್ಶನೆಯಲ್ಲಿ ಊರವರಿಗೆ ಸಹಾಯ ಮಾಡಿ ಸಮಾಜ ಮತ್ತು ಶಾಲೆ ಇವುಗಳಲ್ಲಿ ನಿಕಟ ಸಂಬಂಧ ಬರುವಂತೆ ನೋಡಿಕೊಳ್ಳಬೇಕು. ಬಾಲಕ ಬಾಲಿಕೆಯರಿಗೆ ಸದರ ಸಮಾರಂಭ ಮತ್ತು ಜಾತ್ರೆ ಇವುಗಳ ಸಾಮಾಜಿಕ ಮಹತ್ವದ ಬಗ್ಗೆ ಸಮುವಾಯ ಜ್ಞಾನವನ್ನು ಕೊಡಬೇಕು. ಶಾಲೆಯಲ್ಲಿ ಸಹಕಾರಿ ಪುಸ್ತಕ ಅಂಗಡಿ, ಹಳೆ ವಿದ್ಯಾರ್ಥಿಗಳ ಸಂಘ ಮತ್ತು ವಸ್ತ್ರ, ಸ್ವಾವಲಂಬನ ಸಂಘ, ಸಂಸ್ಕೃತಿ ವಿನಿಮಯ ಕೇಂದ್ರ, ಸಮಾಜ ಶಿಕ್ಷಣ ವರ್ಗ ಮೊದಲಾದವುಗಳನ್ನು ಸ್ಥಾಪಿಸಿಕೊಂಡು ಶಾಲೆಯ ಮತ್ತು ಪಾಲಕರ ನಡುವೆ ನಿಕಟವಾದ ಸಂಬಂಧ ಬರುವಂತೆ ಪ್ರಯತ್ನಿಸತಕ್ಕದ್ದು. ಶಾಲೆಯ ಮಕ್ಕಳ ಪ್ರವಾಸ, ವನಭೋಜನ ಮೊದಲಾದ ಕಾರ್ಯಕ್ರಮಗಳನ್ನು ಏರ್ಪಡಿಸತಕ್ಕದ್ದು. ಹೆಣ್ಣು ಮಕ್ಕಳ ಶಾಲೆಗಳಲ್ಲಿ ಗೃಹವಿಜ್ಞಾನದ ಪ್ರಾತ್ಯಕ್ಷಿಕ ಪ್ರಯೋಗಗಳು ಚಟುವಟಿಕೆಯೆಂದು ತಿಳಿದುಕೊಂಡು ಅವುಗಳನ್ನು

ಮತೂಕ ಜ್ಞಾನದ ಬಗ್ಗೆ ಮತ್ತು ಜೀವನ ಸತ್ವಗಳ ಜ್ಞಾನವನ್ನು ಕೊಡುವದಕ್ಕೆ ಉಪಯೋಗಿಸಿಕೊಳ್ಳ ಬಹುದು. ಶಾಲೆಯ ಶೃಂಗಾರ ಮಾಡುವಾಗ ರಂಗವಲ್ಲಿ ಳನ್ನು ಹಾಕುವ ಚಟುವಟಿಕೆಯನ್ನು ಭೂಮಿತಿ ವಿಷ ಯದ ಜ್ಞಾನವನ್ನು ಮಾಡಿಕೊಡುವದಕ್ಕೆ ಉಪಯೋಗಿಸ ಬಹುದು. ಶಿಕ್ಷಕಿಯರು ಚಟುವಟಿಕೆಯ ಯೋಜನೆ ಮಾಡುವಾಗ ಅದರಿಂದ ಬರಬಹುದಾದ ಸಮವಾಯ ಜ್ಞಾನದ ಬಗ್ಗೆ ವಿಚಾರ ಮಾಡಿಕೊಂಡು ಕಾರ್ಯವನ್ನು ಏರ್ಪಡಿಸತಕ್ಕದ್ದು.

ಸಮಯ ತಂತ್ರದ ಬಗ್ಗೆ ಹೇಳಬೇಕಾದರೆ ವಿನೋ ಬಾಜಿಯವರು ಹೇಳಿದ ಒಂದು ಉದಾಹರಣೆ ನನ್ನ ಲಕ್ಷ್ಯಕ್ಕೆ ಬರುತ್ತದೆ. ಕುಂಬಾರನು ಮಣ್ಣಿನಿಂದ ಒಂದು ಗಡಿಗೆಯನ್ನು ತಯಾರಿಸುವನು. ಇದು ಒಂದು ಚಟುವಟಿಕೆಯೆಂದು ತೆಗೆದುಕೊಂಡರೆ ಮಾಡಬಹುದಾದ ಸಮವಾಯ ವಿಷಯಗಳು ಕೆಳಗಿನಂತೆ ಇವೆ:—



(೧) ಮಣ್ಣಿನ ಪ್ರಕಾರಗಳು.
(೨) ಮಣ್ಣಿನ ಉಪಯೋಗ.
(೩) ಕುಂಬಾರನು ಮಣ್ಣು ತರುವ ಪದ್ಧತಿ.
(೪) ಕತ್ತೆ—ಜೀವನ ಚರಿತ್ರೆ (ಭಾಷಾ).
(೫) ಕತ್ತೆ—ಶರೀರ ರಚನೆ (ಸಾ. ಶಾಸ್ತ್ರ). ಆಹಾರ, ಗುಣ–ಅವಗುಣ
(೬) ಕುಂಬಾರ ಮತ್ತು ಕತ್ತೆ ಇವರ ನಡುವಿನ ಸಂಭಾಷಣೆ (ಭಾಷಾ).

೨. (೧) ಕುಂಬಾರನ ಉದ್ಯೋಗದ ಬಗ್ಗೆ ಮಾಹಿತಿ.
(೨) ಕುಂಬಾರನು ಗಡಿಗೆಯನ್ನು ಮಾಡುವ ವಿಧಾನ.
(೩) ಉಪಯೋಗಿಸುವ ಸಾಧನ ಸಾಮಗ್ರಿ.
(೪) ಕಪ್ಪು, ಬಸಿ ಮಾಡುವ ಕಾರಖಾನೆಗಳು.
(೫) ಇಟ್ಟಂಗಿ ಮತ್ತು ಹಂಚುಗಳನ್ನು ಮಾಡುವ ವಿಧಾನ, ಮತ್ತು ಮನೆಕಟ್ಟುವದರಲ್ಲಿ ಅವುಗಳ ಉಪಯೋಗ.

೩. (೧) ಗಡಿಗೆಯ ಪ್ರಕಾರಗಳು ಮತ್ತು ಉಪಯೋಗ.
(೨) ಭಾಂಡೆಗಳನ್ನು ಮಾಡುವ ಬೇರೆ ಧಾತುಗಳು.
(೧) ತಾಮ್ರ (೨) ಹಿತ್ತಾಳಿ (೩) ಬೆಳ್ಳಿ (೪) ಸ್ಟೇನಲೆಸ್‌ಸ್ಟೀಲ.

೪. (೧) ಜೀವನ: (೧) ಮಾನವ ಜೀವನದಲ್ಲಿಯ ಉತ್ಕ್ರಾಂತಿ (೨) ಗಡಿಗೆಯ ಉಪಯೋಗ (೩) ಇತರ ಭಾಂಡೆಗಳನ್ನು ಹುಡುಕಿ ತೆಗೆದುದು (೪) ಮಾನವ ಸುಧಾರಣೆ (೫) ಗಣಿತ (೬) ತಿಗರಿಯ ಮೇಲಿಂದ ಪರ್ತುಲದ ಮಾಹಿತಿ.

ಇದೇ ಪ್ರಕಾರ ಬೇರೆ ಬೇರೆ ಚಟುವಟಿಕೆಗಳ ಬಗ್ಗೆ ವಿಚಾರಿಸಿದರೆ ಸಮವಾಯ ಜ್ಞಾನದ ವಿಷಯಗಳನ್ನು ಗುರುತಿಸಿ ಅವುಗಳ ಮಾಹಿತಿ ಹೇಳಿ ಬಾಲಕ ಬಾಲಿಕೆಯರ ಜ್ಞಾನವನ್ನು ಬೆಳೆಯಿಸಬಹುದು. ವರ್ಷದ ಪ್ರಾರಂಭದಲ್ಲಿ ಶಿಕ್ಷಕ ಶಿಕ್ಷಕಿಯರು ಇಡೀ ವರುಷದಲ್ಲಿ ಮಾಡಿಸುವ ಚಟುವಟಿಕೆಗಳ ಯಾದಿ, ಬಾಲಕರಿಂದ ಅಭ್ಯಾಸಕ್ರಮದಂತೆ ಮಾಡಿಸಬೇಕಾದ ವಿಷಯಗಳ ಯಾದಿ ಮತ್ತು ಸಮವಾಯ ಮಾಡಬಹುದಾದ ವಿಷಯಗಳನ್ನು ಗುರುತಿಸತಕ್ಕದ್ದು. ಸಮವಾಯ ಮಾತಲಿಕ್ಕೆ ಬಾರದಂತೆ ಇದ್ದ ವಿಷಯಗಳನ್ನು, ಸಾದಾ ಪಾಠಗಳೆಂದು ತೆಗೆದುಕೊಂಡು ಕಲಿಸತಕ್ಕದ್ದು. ಅದೇ ಚಟುವಟಿಕೆಯಿಂದ ಬೇರೆ ಬೇರೆ ವರ್ಗಗಳಿಗೆ ಬೇರೆ ಬೇರೆ ಜ್ಞಾನವನ್ನು ಕೊಡಬಹುದು. ಈ ಸಂಗತಿ ನಾವು ಮರೆಯಬಾರದು. ಸಮವಾಯ ಪದ್ಧತಿಯ ಪಾಠಗಳು ಮತ್ತು ಸಾದಾ ಪಾಠಗಳ ಎಲ್ಲ ವಿಷಯಗಳ ಸಮನ್ವಯ ರೂಢಿ ಪಾಠಗಳನ್ನು ತೆಗೆದುಕೊಂಡು ಮಾಡತಕ್ಕದ್ದು. ಎಲ್ಲ ಶಾಲೆಗಳಲ್ಲಿ ವರ್ಗ ಶಿಕ್ಷಕರು ತಮ್ಮ ತಮ್ಮ ವರ್ಗದ ಚಟುವಟಿಕೆಗಳ ಬಗ್ಗೆ ಒಂದು ಯೋಜನೆ, ಅದೇ ಪ್ರಕಾರ ಸಮವಾಯ ಪಾಠಗಳ ಯೋಜನೆ, ಮತ್ತು ರೂಢಿ ಪಾಠಗಳ ಯೋಜನೆಯನ್ನು ಮಾಡಿ ಪ್ರಧಾನ ಗುರೂಜಿಯವರಿಗೆ ಒಪ್ಪಿಸತಕ್ಕದ್ದು. ಶಾಲೆ ಪ್ರಾರಂಭವಾದ ನಂತರ ಒಂದು ವಾರದಲ್ಲಿ ಎಲ್ಲ ಯೋಜನೆ ಪತ್ರಿಕೆಗಳು ಪ್ರಧಾನ ಗುರೂಜಿಯವರ ಕಡೆಗೆ ಬಂದ ನಂತರ ಅವರು ಎಲ್ಲ ಶಿಕ್ಷಕರ ಒಂದು ಸಭೆಯನ್ನು ಕರೆದು ಚರ್ಚೆ

ಮಾಡತಕ್ಕದ್ದು. ಆ ಮೇಲೆ ಎಲ್ಲ ಪತ್ರಿಕೆಗಳನ್ನು ಓದಿ ಸಾಲೆಯ ಬಗ್ಗೆ ಒಂದು ಸಂಕಲಿತ ಯೋಜನೆಯ ಪತ್ರಿಕೆಯನ್ನು ತಯಾರಿಸತಕ್ಕದ್ದು. ಆ ಮೇಲೆ ಆಡಮ್ಟು ತೀವ್ರವಾಗಿ ಆ ಯೋಜನೆಯನ್ನು ಭಾಗ ಶಿಕ್ಷಣಾಧಿಕಾರಿಯವರಿಗೆ ತೋರಿಸಿ ಅವರ ಗೂಡ ಚರ್ಚೆ ಮಾಡಿಕೊಂಡು ಅವರ ಸಲಹೆ ಸೂಚನೆಗಳನ್ನು ಪಡೆಯಬೇಕು. ಗುಂಪಿನ ಸಮ್ಮೇಲನದಲ್ಲಿ ಯೋಜನೆಯ ಬಗ್ಗೆ ಚರ್ಚೆಯನ್ನೂ ಮಾಡಿ ಎಲ್ಲ ಸಾಲೆಯ ಶಿಕ್ಷಕರು ವಿಚಾರ ವಿನಿಮಯವನ್ನು ಮಾಡಬೇಕು. ಈ ಪ್ರಕಾರ ವಿಚಾರಪೂರ್ವಕ ಕೆಲಸವು ಯೋಜನಾಬದ್ಧ ರೀತಿಯಿಂದ ಮಾಡದಿದ್ದರೆ ಮಕ್ಕಳಿಗೆ ಲಾಭಕರವಾಗಲಾರದು. ಎಲ್ಲ ವರ್ಗಗಳಲ್ಲಿ ಒಂದೇ ಚಟುವಟಿಕೆಗಳ ಬಗ್ಗೆ ಅದೇ ಮಾಹಿತಿ ಸಮವಾಯ ಜ್ಞಾನವೆಂದು ಕೊಡುವದು ಲಾಭಕರವಾಗಲಾರದು. ಅದಕ್ಕೆ ಚಟುವಟಿಕೆಯ ಯಾದಿ ಮತ್ತು ವರ್ಗವಾರ ಕೊಡಬಹುದಾದ ಸಮವಾಯ ಜ್ಞಾನದ ಟಿಪ್ಪಣಿ ತೋರಿಸುವ ಒಂದು ಪತ್ರಿಕೆಯನ್ನು ತಯಾರಿಸಿಕೊಳ್ಳುವದು ವಿಹಿತ.

ಕ್ರಮಾಂಕ	ಚಟುವಟಿಕೆ	ವರ್ಗಗಳಲ್ಲಿ ಕೊಡಬಹುದಾದ ಸಮವಾಯ ಜ್ಞಾನ
೧	೨	೩ ೪ ೫ ೬ ೭

ಈ ಪ್ರಕಾರ ಒಂದು ಕೋಷ್ಟಕವನ್ನು ತಯಾರಿಸತಕ್ಕದ್ದು. ಚಟುವಟಿಕೆಯ ಸಮವಾಯ ಜೀವನಕ್ಕೆ ಮಾಡತಕ್ಕದ್ದು. (೧) ಕ್ರಿಯಾತ್ಮಕ (೨) ಆರ್ಥಿಕ (೩) ನೈಸರ್ಗಿಕ. ಬೇರೆ ಬೇರೆ ಚಟುವಟಿಕೆಗಳ ಹುಡುಕಾಂತರ ಬಾಲಕ ಬಾಲಿಕೆಯರಿಗೆ ರೋಗಗಳ ಬಗ್ಗೆ, ಆರೋಗ್ಯಕರ ಜೀವನದ ಬಗ್ಗೆ ಮಾಹಿತಿಯನ್ನು ಕೊಟ್ಟು ಅವರಿಗೆ ಉತ್ತಮ ನಾಗರಿಕರನ್ನಾಗಿ ಪರಿವರ್ತನೆಯಾಗುವಂತೆ ಪ್ರಯತ್ನಿಸತಕ್ಕದ್ದು. ಇದರಿಂದ ಜೀವನ ಶಿಕ್ಷಣದ ಪ್ರವರ್ತಕರು ಯೋಚಿಸಿದ ಧ್ಯೇಯವು ಸಾಧ್ಯವಾಗುವದು.

—: ಜಯ ಜಗತ್ :—

ಗಾಂಧೀಜಿ ಜೀವನದ ಕೆಲವು ಘಟನೆಗಳು

ಲೇಖಕರು:— ಶ್ರೀ ಎಸ್. ಎಸ್. ಭೂಸರಡ್ಡಿ, S.T.C. ಬೇಸಿಕ್ ಟ್ರೇಡ್, ಶಾಲಾ ಗುರುಗಳು ಅಸೂಟಿ (ಲೋಣ)

೧

ಗಾಳಿಯು ಮೆಲ್ಲನೆ ಸುಳಿಯುತ್ತಿತ್ತು. ಅಸ್ತಂಗತ ಸೂರ್ಯನ ಕೆಂಗದಿರುಳು ಗಿಡ-ಮರಗಳ ಮೇಲೆ ಸೂಸಿದ್ದವು. ಪಡುವಣ ದಿಗಂಗನೆಯ ಕೆನ್ನೆ ಲಜ್ಜೆಯಿಂದ ಕೆಂಪಾದಂತಿತ್ತು. ಸಂಧ್ಯಾಸಮಯ ಬಹು ಮನೋಹರವಾಗೂ ಉಲ್ಲಾಸದಾಯಕವಾಗಿತ್ತು. ನಿತ್ಯದಂತೆ ಗಾಂಧೀಜಿ ವಿಹಾರಕ್ಕೆಂದು ಹೊರಟಿದ್ದರು. ದೇಶಕಲ್ಯಾಣ ಸಾಧನೆ ಸಿದ್ಧಿಗಳ ವಿಚಾರ ತರಂಗಗಳಲ್ಲಿ ಆಸಕ್ತರಾಗಿ ಚಿಂತಿಸುತ್ತ ಸಾಗಿದ್ದರು. ನಾಡಿನ ದರಿದ್ರನಾರಾಯಣರ ಸೇವೆ ಎಷ್ಟು ಮಾಡಿದರೂ ಅವರಿಗೆ ಸಾಕೆನಿಸಲಿಲ್ಲ. ಮೇರು ಗಿರಿಯ ಏರು ಹಣೆಯಲ್ಲಿ ನಾಡಿನ ಸಮಸ್ತ ಕುಲದ ಕಲ್ಯಾಣದ ದಿವ್ಯ ಪ್ರಕಾಶ ತುಂಬಿತ್ತು. ವಿಶ್ವಜಗಲದ ನಗೆಯಲ್ಲಿ ಕರುಣಾಗಂಗೆ ಹರಿಯುತ್ತಿದ್ದಳು. ಬಾನಿನಗಲದ ಎದೆಯಲ್ಲಿ ಶಾಂತಿ-ಸತ್ಯ-ಅಹಿಂಸೆಗಳ ಗಂಭೀರ ಸಾಗರವಿತ್ತು. ವಾಣಿಯು ವಿಶ್ವವಾಣಿಯಾಗಿತ್ತು; ಮಾನವ ಕುಲದ ಮಿತ್ರತೆ ಸುತ್ತೂ ಬಳಸಿಕೊಂಡಿತ್ತು.

ಸಾಯಂಕಾಲದ ವಿಹಾರ ಸಾವಧಾನವಾಗಿ ಸಾಗಿತ್ತು. ಮೂರ್ತಿ ಮತ್ತು ಪುಣ್ಯತೇಜದ ರಥವೇ ಸಾಗಿ ಬರುವಂತಿತ್ತು, ಗಾಂಧೀಜಿಯವರ ವಿಹಾರಗಮನ! ದಾರಿಯಲ್ಲಿ ಸಾಗಿದ ಗಾಂಧೀಜಿಯವರು ಅತ್ತಿತ್ತ ನೋಡಿ ತಡೆದರು. ಅವರ ದೃಷ್ಟಿ ಒಂದು ಗುಡಿಸಲಿನ ಕಡೆಗೆ ಹರಿಯಿತು. ಅದು ಬಡತನ, ದೈನ್ಯಗಳ ಬೀಡಾಗಿತ್ತು. ಮನೆಯೊಳಗೆ ಮನೆಯೊಡಯನಿದ್ದಾನೋ ಇಲ್ಲವೋ ಎಂದು ಭಾಸವಾಗುತಿತ್ತು. ಈ ಮುರುಕ ಗುಡಿಸಲಿನ ಮುಂದೆ ಬಡಕಲು ದೇಹದ ಮುದಕಿಯೊಂದು ಕುಳಿತಿತ್ತು. ಜೀವ ಕಣ್ಣಲ್ಲಿ ದ್ದಂತಿತ್ತು. ಮೈ ನೀರಿಗೆ ಕಟ್ಟಿದಂತಿತ್ತು; ತೇಜೋಹೀನವಾಗಿತ್ತು. ನಾಡಿನ ಸಮಸ್ತ ದೈನ್ಯವೆ ಒಟ್ಟುಗೂಡಿ ಅವಳ ಕಣ್ಣಲ್ಲಿ ಮೂಡಿ ನಿಂತಿತ್ತು. ಭಾರತಮಾತೆಯ ಆ ದರಿದ್ರ ಪುತ್ರಿಯು ಕರುಣೆಯ ಪ್ರತಿಮೂರ್ತಿಯಾಗಿದ್ದಳು. ಗಾಂಧೀಜಿ ಗುಡಿಸಲಿನ ಕಡೆಗೆ ಬಂದಾಗ ಮುದಿಕಿ ಮುಖವೆತ್ತಿ ಅನಿರೀಕ್ಷಿತವನ್ನು ನೋಡಿದಳು. ಶಬರಿಯ ಮನೆಗೆ ಶ್ರೀ ರಾಮಚಂದ್ರನು ಬಂದಂತೆ ಗಾಂಧೀಜಿ ಬಂದಿ

ದ್ದರು. ಆದರೆ ಅವರಿಗೆ ಕೊಡಲಿಕ್ಕೆ "ಬೋಣಿ" ಹಣ್ಣು ಗಳಿರಲಿಲ್ಲ. ಸುದಾಮನು ಶ್ರೀ ಕೃಷ್ಣನಿಗಿತ್ತ ಅವಲಕ್ಕಿ ಗಳೂ ಇರಲಿಲ್ಲ. ಮೈದು ಮಾತು ಮಾತ್ರ ಅವಳ ಸರ್ವಸ್ವ ವಾಗಿತ್ತು. "ಬಾ ಅಪ್ಪ ತಾವು ಯಾರು?" "ನಾನೊಬ್ಬ ನಿನ್ನ ಮಗ ಅಮ್ಮ" ತುಂಬಿದ ಹೃದಯದಿಂದ ಗಾಂಧೀಜಿ ನುಡಿದರು.

ಮುದುಕಿ ಅವಕ್ಕಾಯಿತು. ಬಡನೆತ್ತಿ ಮಸಗಲ್ಲ ಮೇಲೆ ಐಸಿರಿಗತ್ತಿ ಮಸೆದಾಡಿ ಸ್ವಾರ್ಥವನ್ನೇ ಮೊನೆಗೊಳಿ ಸಿದ ಅನೇಕ ದುರಂತ ಘಟನೆಗಳನ್ನು ನೋಡಿದ ಅವಳಿಗೆ 'ಅಮ್ಮ' ಶಬ್ದವು ಅಮೃತಪಾನ ಮಾಡಿದಷ್ಟು ಸಂತಸ ತಂದಿತ್ತು.

"ನಿನಮ್ಮ ಹೀಗೆ ಕೂತಿದ್ದೀಯಾ? ಮೈಯ ಈ ಅರಿವೆಗಳು ಎಷ್ಟು ಹೊಲಸಾಗಿವೆ?" ಗಾಂಧೀಜಿ ಸಹಜ ವಾಗಿ ಪ್ರಶ್ನಿಸಿದರು.

"ಏನಪ್ಪ, ಬಡವರ ಗತಿಯೇ ಇಷ್ಟು, ಉಣ್ಣುವ ಆಲೆ ಇದೆ; ತುತ್ತು ಅನ್ನವಿಲ್ಲ. ಉಡೆಬೇಕೆನ್ನುವೆ ಬಟ್ಟೆ ಗಳೆಲ್ಲ" ಒಳ್ಳೇ ಮಾರ್ಮಿಕವಾಗಿ ನುಡಿದಳು ಆ ಮುದುಕಿ. ಗಾಂಧೀಜಿಯವರ ಹೃದಯದಲ್ಲಿ ತಳಮಳವೆದ್ದಿತು. "ಹೊಸ ಬಟ್ಟೆಗಳಿಲ್ಲದಿದ್ದರೂ, ಇದ್ದ ಬಟ್ಟೆಗಳನ್ನೇ ತೊಳೆದು ಮಡಿಮಾಡಿಕೊಳ್ಳಬಹುದಿತ್ತಲ್ಲಮ್ಮ?" ಪುನಃ ಕೇಳಿದರು ಗಾಂಧೀಜಿ. "ಅಯ್ಯೋ ದರಿದ್ರತನವೇ.... ನನ್ನ ಲರಿವೆ ಮಾಸಿದ್ದು ಗೊತ್ತಿದೆಯಪ್ಪ. ಈ ಉಟ್ಟ ಬಟ್ಟೆ ಬಿಟ್ಟು ಬೇರೆ ಬಟ್ಟೆಗಳೇ ಇಲ್ಲದಾಗ ಹೇಗೆ ತೊಳೆದು ಕೊಳ್ಳಬೇಕಪ್ಪ" ಎಂದಳು ಆ ಮುದುಕಿ.

ಗಾಂಧೀಜಿಯವರ ಕರಳು ಚುರ್ ಅಂದಿತು. ತುತ್ತು ಕೂಳು, ತುಂಡು ಅರಿವೆಗೆ ಗೋಳಿಡುವ ಭಾರತದ ದೀನ ಜನತೆಯ ಸಮಗ್ರದರ್ಶನ ಅವರಿಗೆ ಕಂಡುಬಂತು.

"ಬರಿದೋ ಬರಿದೋ ಬಡವರ ಬಗ್ಗರ ತುತ್ತಿನ ಚೀಲ, ತೆರದೋ ತೆರದೋ ದೀನರ ಒಡಲು" ಎಂದು ಕೊಂಡರು.

ಹೃದಯದಾಳದಿಂದ ಜ್ಞಾನದ ಕಿಡಿಯೊಂದು ತೂರಿಬಂತು. "ಭಾರತದ ಸಾಮಾನ್ಯ ಪ್ರಜೆಗೂ ಉಡಲು ಮೈತುಂಬ ಬಟ್ಟೆ ಸಿಗುವ ವರೆಗೆ ನಾನು ಅರೆನಗ್ನ ನಾಗಿರುವೆ" ಎಂದು ಪ್ರತಿಜ್ಞೆಮಾಡಿದರು. ಮೈತುಂಬ ಬಟ್ಟೆ ತೊಡಲಿಲ್ಲ. ಲಂಡನ್ನಂಜೆ, ಜೊಕ್ಕತಲೆ, ಬರಿ ಮೈಯಿಂದ ಇರುವದು ಅವರ ನಿತ್ಯಜೀವನದ ಇರುವಿಕೆ ಯಾಯ್ತು. ಬಡವರ ಭಾಗ್ಯವಿಧಾತನೆಂಬ ಬಿರುದು ಸಾರ್ಥಕವೆನಿಸಿತು.

(೨೭ನೆಯ ಪುಟ ನೋಡಿರಿ)

ಸ್ಥಾಪತ್ಯ ಶಿಲ್ಪಿ ವಿಶ್ವೇಶ್ವರಯ್ಯನವರು

(೪ನೆಯ ಪುಟದಿಂದ ಬಂದುದು)

ವಿಧವಾ ವಿವಾಹವನ್ನು ಪ್ರೋತ್ಸಾಹಿಸಿ ಸಮಾಜ ಸುಧಾರಕರೆನಿಸಿಕೊಂಡಿದ್ದಾರೆ.

ಕರ್ನಾಟಕವು ಕಾಲಕಾಲಕ್ಕೆ ಅನೇಕ ಪಂಡಿತರನ್ನು, ಕವಿಗಳನ್ನು, ಧರ್ಮಸಂಸ್ಥಾಪಕರನ್ನು ಹೆತ್ತಿದೆ. ಭಾರತದ ಸಂಸ್ಕೃತಿಯ ಸಮುದ್ರವನ್ನು ಕರ್ನಾಟಕದ ಕಾವೇರಿಯು ತುಂಬಿದ್ದಾಳೆ. ತನ್ನ ಗರ್ಭದಲ್ಲಿ ಸಾಹಿತ್ಯ ಮೌಕ್ತಿಕ ಗಳನ್ನು ತುಂಬಿಕೊಂಡಿದ್ದಾಳೆ. ಇಂದಿನ ವೈಜ್ಞಾನಿಕ ಯುಗದಲ್ಲಿಯೂ ಕರ್ನಾಟಕವು ತನ್ನ ಪಾಲಿನ ಕಾಣಿಕೆ ಯನ್ನು ಸಲ್ಲಿಸುತ್ತಲಿದೆ. ಈ ಶ್ರೇಷ್ಠ ಕಾಣಿಕೆಗಳನ್ನು ಕರ್ನಾಟಕಾಂಬೆಗೆ ಸಲ್ಲಿಸಿದವರಲ್ಲಿ ಸರ್ ಸಿ. ವ್ಹಿ. ರಾಮನ್ ಹಾಗು ಡಾ. ಎಂ. ವಿಶ್ವೇಶ್ವರಯ್ಯನವರು ಅದ್ವಿತೀಯ ರೆನಿಸಿದ್ದಾರೆ. ಪಂಚವಾರ್ಷಿಕ ಯೋಜನೆಗಳನ್ನು ಕೈಕೊಂಡು ಭಾರತದ ಉದ್ಧಾರಕ್ಕೆ ಹೆಣಗುತ್ತಲಿರುವ ನನ್ನ ಇಂದಿನ ಸರಕಾರಕ್ಕೆ ವಿಶ್ವೇಶ್ವರಯ್ಯನವರಂಥ ಯೋಜಕರ ಮಾಗಿದ ಬುದ್ಧಿಯ ಮಾರ್ಗದರ್ಶನವು ಅಗತ್ಯವಿದೆ.

"ಕುರ್ವನ್ನೇವ ಹಿ ಕರ್ಮಾಣಿ ಜಿಜೀ ವಿಷೇತ್ ಶಂತ ಸಮಾಃ" ಎಂಬ ಉಕ್ತಿಯು ವಿಶ್ವೇಶ್ವರಯ್ಯನವರ ಬದುಕಿಗೆ ತುಂಬಾ ಅನ್ವಯವಾಗುತ್ತಿದೆ. ಇಂಥ ಸ್ಥಾಪತ್ಯ ಶಿಲ್ಪಿಯನ್ನು ಪಡೆದ ಕರ್ನಾಟಕಾಂಬೆಯು ಧನ್ಯಳು. ಶತಾಯುಷಿಗಳಾದ ಅವರು ಚಿರಂಜೀವಿಗಳಾಗಲಿ ಎಂದು ಭಗವಂತನಲ್ಲಿ ಬೇಡಿಕೊಳ್ಳುವೆ.

——o——

ಭಾರತರತ್ನ ಸರ್ ವಿಶ್ವೇಶ್ವರಯ್ಯ

(ವ್ಯಕ್ತಿತ್ವದ ಸಮುಷ್ಟಿ ವಿಕಾಸದ ಒಂದು ದಿವ್ಯ ಉದಾಹರಣೆ)

ಬರೆದವರು :— **ಶ್ರೀ ಎಸ್. ಎಸ್. ನಾಡಕರ್ಣಿ,** ಬಿ.ಎಸ್ಸಿ., (ಆನರ್ಸ್). ಡಿ.ಇಡಿ., ಆರ್.ಬಿ. ವಿಶಾರದ.

ವ್ಯಕ್ತಿತ್ವದ ಸಂಪೂರ್ಣ ವಿಕಾಸ ಸಾಧ್ಯವೇ? ಕಷ್ಟ ಸಾಧ್ಯ. ಒಬ್ಬನ ವ್ಯಕ್ತಿತ್ವವು ದೈಹಿಕ ವಿಕಾಸ ಹೊಂದಿರಬಹುದು. ಮತ್ತೊಬ್ಬನದು ಬೌದ್ಧಿಕ ವಿಕಾಸ ಹೊಂದಿರಬಹುದು. ಇನ್ನೊಬ್ಬನದು ಆಧ್ಯಾತ್ಮಿಕ ವಿಕಾಸವನ್ನು ಹೊಂದಿರಬಹುದು. ಮಗುದೊಬ್ಬನದು ನೈತಿಕ ವಿಕಾಸ ಹೊಂದಿರಬಹುದು. ಒಬ್ಬನು ವಿಜ್ಞಾನಿಯಿರಬಹುದು. ಮತ್ತೊಬ್ಬನು ಶಿಕ್ಷಣಪ್ರೇಮಿ ಇರಬಹುದು. ಇನ್ನೊಬ್ಬನು ಸಮಾಜೋದ್ಧಾರಕನಾಗಿರಬಹುದು. ಇಲ್ಲವೆ ಉತ್ತಮ ರಾಜಕಾರಣಿ ಇರಬಹುದು. ಅಥವಾ ಉತ್ತಮ ಶರೀರ ಸಂಪತ್ತನ್ನು ಗಳಿಸಿಕೊಂಡಿರಬಹುದು. ಈ ರೀತಿ ಯಾವುದೊಂದು ದಿಶೆಯಲ್ಲಿ ಸಂಪೂರ್ಣ ವಿಕಾಸಹೊಂದುವದೇ ದುಸ್ತರವಾದಾಗ ಸರ್ವಾಂಗೀಣ ವಿಕಾಸದ ಮಾತಂತೂ ದೂರವೇ ಉಳಿಯಿತು ಎನ್ನುವವರಿಗೆ ಇಲ್ಲಿದೆ ಒಂದು ಉದಾಹರಣೆ. ಅದೇ ಭಾರತದ ಗೌರವ ಡಾ. ಎಮ್. ವಿಶ್ವೇಶ್ವರಯ್ಯನವರ ವ್ಯಕ್ತಿತ್ವ. ಇದೇ ದಿನಾಂಕ ೧೫ರಂದು ಅವರ ಶತಾಬ್ದಿಯನ್ನು ಜರುಗಿಸಲಿರುವ ನಾವು ಡಾ. ವಿಶ್ವೇಶ್ವರಯ್ಯನವರನ್ನು ಯಾವ ದೃಷ್ಟಿಯಿಂದ ಅಭಿನಂದಿಸಬೇಕೋ ತಿಳಿಯದು. ಒಬ್ಬ ವಿಖ್ಯಾತ ಇಂಜನಿಯರನೆಂದೋ? ಒಬ್ಬ ಆದರ್ಶ ಸಮಾಜ ಸುಧಾರಕನೆಂದೋ? ಒಬ್ಬ ಉತ್ತಮ ಶಿಕ್ಷಣಪ್ರೇಮಿಯೆಂದೋ? ಆದರ್ಶ ವ್ಯಕ್ತಿತ್ವದ ಯಾವುದೇ ದೃಷ್ಟಿಕೋನದಿಂದ ಡಾ. ವಿಶ್ವೇಶ್ವರಯ್ಯನವರನ್ನು ಅಳೆದರೂ ವಿಶಾಲಕೋನವನ್ನೇ ನಾವು ಕಾಣುತ್ತೇವೆ. ಒಬ್ಬ ವ್ಯಕ್ತಿಯು ಜೀವನದ ಎಲ್ಲ ರಂಗಗಳಲ್ಲಿಯೂ ಎಷ್ಟೊಂದು ಉನ್ನತಿಯನ್ನು ಗಳಿಸಬಲ್ಲನು ಎಂದು ಲೆಕ್ಕಾಚಾರಕುತ್ತ ವಿಶ್ವೇಶ್ವರಯ್ಯನವರ ಜೀವನ ಚರಿತ್ರೆಯನ್ನು ಅಭ್ಯಸಿಸಿದರೆ ಕೊನೆಗೆ ಈ ವ್ಯಕ್ತಿಯ ಗುಟ್ಟೇನು? ಎಂಬ ಸಮಸ್ಯೆ ನಮಗೆ ಉಳಿಯದಿರಲಾರದು. ಮಗುವಿನ ಸರ್ವಾಂಗೀಣ ಉನ್ನತಿಯನ್ನು ಬಯಸುವ ಶಿಕ್ಷಣ ಕ್ಷೇತ್ರದಲ್ಲಿ ದುಡಿಯುತ್ತಿರುವ ನಾವು ನಮ್ಮ ಮಕ್ಕಳ ಎದುರಿಗೆ ಆದರ್ಶವಾಗಿಡುವ ಕೆಲವೇ ವ್ಯಕ್ತಿಗಳ ಮಾಲಿಕೆಯಲ್ಲಿ ಡಾ. ವಿಶ್ವೇಶ್ವರಯ್ಯನವರು ಅಗ್ರಗಣ್ಯರು.

ತೇಜಸ್ಸುಂಜ ಕಣ್ಣುಗಳು, ಉತ್ಸಾಹಭರಿತ ಮುಖ, ವೈಶಿಷ್ಟ್ಯಪೂರ್ಣ ಉಡುಪುಗಳಿಂದಲಂಕೃತವಾದ ಅವರ ಭಾವಚಿತ್ರವು ಪ್ರಥಮ ಬಾರಿಗೇ ನಮ್ಮ ಅವಧಾನವನ್ನು ತನ್ನೆಡೆಗೆ ಆಕರ್ಷಿಸುತ್ತದೆ. ಈ ವ್ಯಕ್ತಿಗೆ ನೂರು ವರುಷಗಳು ತುಂಬಿದವೇ ಎಂದು ನಮ್ಮನ್ನು ನಾವೇ ಕೇಳಿಕೊಂಡರೆ ಪ್ರಥಮಬಾರಿಗೆ ಸ್ವಲ್ಪ ಸಂಶಯವೇ ಬರುತ್ತದೆ. ಹೌದು. ಈ ವ್ಯಕ್ತಿಗೆ ನೂರು ವರ್ಷ ತುಂಬಿದವು ಅವರಿಗರಿವಿಲ್ಲದೆ. ವೃದ್ಧಾಪ್ಯಕ್ಕೆ "ವಿಶ್ವೇಶ್ವರಯ್ಯ ಇಲ್ಲ ಇಲ್ಲ" ಎಂದು ಹೇಳಿಕಳಿಸಿದ ವ್ಯಕ್ತಿಗೆ ನೂರು ವರ್ಷಗಳೆಂದರೆ ಏನು ಮಹಾ? "ನನ್ನ ಬಾಲ್ಯ ಕಾಲದಲ್ಲಿದ್ದ ಎಲ್ಲ ಆಶೆ-ಆಕಾಂಕ್ಷೆಗಳು ಈಡೇರಿಸಲ್ಪಟ್ಟಿವೆ" ಎನ್ನುತ್ತಾರೆ ಅವರು. ಬಾಲ್ಯ ಕಾಲದಲ್ಲಿಯೇ ಉಚ್ಚ ಧ್ಯೇಯಧೋರಣೆಗಳನ್ನಿಟ್ಟುಕೊಂಡು ಅವುಗಳನ್ನು ಈಡೇರಿಸುವದರ ಸಲುವಾಗಿ ದೀರ್ಘಪ್ರಯತ್ನ ಮಾಡಿ ಯಶಸ್ಸನ್ನು ಸಂಪಾದಿಸಿದ ಧೀರವ್ಯಕ್ತಿ ಮೋಕ್ಷಗುಂಡಂ. ೧೮೬೧ನೇ ಸಪ್ಟಂಬರ ೧೫ರಂದು ಕೋಲಾರ ಜಿಲ್ಲೆಯಲ್ಲಿಯ ಮುದ್ದೇನಹಳ್ಳಿಯಲ್ಲಿ ಇವರು ಜನಿಸಿದರು. ಪ್ರಾಥಮಿಕ ಶಿಕ್ಷಣವನ್ನು ಚಿಕ್ಕಬಳ್ಳಾಪುರದಲ್ಲಿ ಮುಗಿಸಿ ಉಚ್ಚ ಶಿಕ್ಷಣ ಪಡೆಯುವ ಉದ್ದೇಶದಿಂದ ಬೆಂಗಳೂರಿಗೆ ತೆರಳಿದರು. ತಾವು ವಿದ್ಯಾರ್ಥಿಯಾಗಿ ಕೆಲವರಿಗೆ ಶಿಕ್ಷಕರಾಗಿ ಶಿಕ್ಷಣವನ್ನು ನಾಗಿಸುತ್ತ ಬಿ. ಎ. ಪರೀಕ್ಷೆಯಲ್ಲಿ ತೇರ್ಗಡೆಯಾದರು. ವಿದ್ಯಾರ್ಥಿದೆಸೆಯಲ್ಲಿಯ ಅವರ ಪ್ರತಿಭೆಯ ಪ್ರಕಾಶದಿಂದ ಪ್ರಭಾವಿತರಾದ ಅಲ್ಲಿಯ ದಿವಾನರ ಸಹಾಯದಿಂದ ಪುಣೆಗೆ ಹೋಗಿ ಇಂಜನಿಯರಿಂಗ ಪರೀಕ್ಷೆಯಲ್ಲಿ ಉಚ್ಚ ಶ್ರೇಣಿಯಲ್ಲಿ ಯಶಸ್ಸನ್ನು ಸಂಪಾದಿಸಿದರು. ಅಲ್ಲಿಂದ ಅವರ ಜೀವನವು ಕರ್ಮಪಥದ ಕಡೆಗೆ ಸಾಗಿತು.

ನಾಸಿಕ ಜಿಲ್ಲೆಯಲ್ಲಿ ಅಸಿಸ್ಟಂಟ ಇಂಜಿನೀಯರೆಂದು ನೇಮಕಗೊಂಡ ಅವರು ತಮ್ಮ ವಿಚಿತ್ರ ಲೀಲೆಗಳನ್ನು ಪ್ರದರ್ಶಿಸತೊಡಗಿದರು. ಸಿಂಧದಲ್ಲಿ ನಗರಕ್ಕೆ ನೀರಿನ ಪೂರೈಕೆ ಮಾಡುವ ಅದ್ಭುತ ಯೋಜನೆಯನ್ನು ಸಫಲಗೊಳಿಸಿದ ಇವರ ಕೀರ್ತಿ ನಾಲ್ಕೂ ದಿಕ್ಕುಗಳಲ್ಲಿ ಪಸರಿಸಿತು.

ಅಲ್ಲಿಂದೀಚೆಗೆ ಅವರು ಮಾಡಿದ ಪ್ರತಿ ಯೋಜನೆಗೂ ಸಾಫಲ್ಯ ಸಿಕ್ಕಿತು. ಈ ಸಾಫಲ್ಯದ ಮುಖ್ಯ ಕಾರಣ ವೆಂದರೆ ಆಯಾ ಯೋಜನೆಗೆ ಬೇಕಾದ ಅಂಕೆ ಸಂಖ್ಯೆಗಳನ್ನು ಕೂಡಿಹಾಕಿ ಅವುಗಳನ್ನು ಜನತೆಯ ಹಿತದೃಷ್ಟಿಯಿಂದ ಪರಿಶೀಲಿಸಿ ಕಾರ್ಯಾರಂಭ ಮಾಡಲು ಅವರ ಕ್ರಮ. ಯಾವುದೇ ಕೆಲಸಕ್ಕೆ ಉತ್ತಮವಾದ ಯೋಜನೆಯು ಅವಶ್ಯವೆಂದು ಅವರ ಮತ. ಪುಣೆಯಲ್ಲಿ ಒಕ್ಕಲುತನ ಕೆಲಸಕ್ಕೆ ನೀರನ್ನು ಪೂರೈಸುವ ಸಮಸ್ಯೆಯನ್ನು ಅವರು ಒಳ್ಳೆಯ ಜಾಣ್ಮೆಯಿಂದ ಬಿಡಿಸಿಕೊಟ್ಟರು. ಅವರ ಕೆಲಸಗಳಲ್ಲಿ ಎಷ್ಟೋ ಸಾರೆ ಅವರು ಜನಸಿಂದೆಗೆ ಗುರಿಯಾಗುವ ಪ್ರಸಂಗಗಳೂ ಬಾರದಿರಲಿಲ್ಲ. ಆದರೆ ಅಪೂರ್ವ ಬುದ್ಧಿಮತ್ತೆ, ಆವಶ್ಯಕ ಮುನ್ನೋಟಗಳಿಂದ ಕೂಡಿದ ಅವರ ವಿಚಾರಗಳು ಕೊನೆಗೆ ಜನತೆಯ ಮನ್ನಣೆಗೆ ಪಾತ್ರ ವಾಗುತ್ತಿದ್ದವು. ಅವರ ಕಾರ್ಯಗಳ ಅನುಭವಾಮೃತದ ಅಂಬುಧಿಯಲ್ಲಿ ಪ್ರಕಟವಾದ ರತ್ನವೆಂದರೆ ಭಾರತದ ನೀರಾವರಿ ಯೋಜನೆಯಲ್ಲಿಯ "ಬ್ಲಾಕ್ ಸಿಸ್ಟೆಮ್". ಅದೇ ರೀತಿ ಭಾರತದಲ್ಲಿಯ ಅನೇಕ ಆಣೆಕಟ್ಟುಗಳಲ್ಲಿ ಉಪಯೋಗಿಸಲ್ಪಟ್ಟ ತಂತಾನೇ ಮುಚ್ಚಿಕೊಳ್ಳುವ ಬಾಗಿಲುಗಳ ಶೋಧಕರು ಅವರೇ. ಈ ಶೋಧನೆಗಳು ಡಾ. ವಿಶ್ವೇಶ್ವರಯ್ಯನವರನ್ನು ಉಚ್ಚ ಸ್ಥಾನಕ್ಕೇರಿಸಿದವು. ಏಡನ್ನ ದಲ್ಲಿಯ ನೀರಿನ ಪೂರೈಕೆಯ ಅತ್ಯದ್ಭುತ ಯೋಜನೆ ಯನ್ನು ಕಾರ್ಯಕಾರಿಗೊಳಿಸಿ ಅವರು "ಕೈ ಸರ-ಈ-ಹಿಂದ" ಪದವಿಯನ್ನು ಸಂಪಾದಿಸಿದರು. ಸಂಪಾದಿಸಿದರು ಎನ್ನುವದಕ್ಕಿಂತ ಅವರಿಗೆ ಆ ಪದವಿಯನ್ನು ದಯಪಾಲಿಸ ಲಾಯಿತು ಎನ್ನುವದೇ ಯೋಗ್ಯ. ಯಾಕೆಂದರೆ ಅವರು ಕರ್ಮಯೋಗಿಗಳು. ಜೀವನದ ಕೊನೆಯ ಉಸಿರು ಇರುವ ವರೆಗೆ ಜನಹಿತದ ಸಲುವಾಗಿ ದುಡಿಯಬೇಕು ಎನ್ನುವ ಅವರಿಗೆ ಉಚ್ಚ ಪದವಿಗಳ ಹಂಬಲವಿಲ್ಲ. ಅಂತೆಯೇ ಅವರು ಯಾವಾಗಲೂ ಇದ್ದುದನ್ನು ಇದ್ದಕ್ಕಿದ್ದಂತೆ ಮಾತನಾಡುವವರು. ಸತ್ಯವನ್ನು ಅದು ಎಷ್ಟೇ ಕಹಿ ಇದ್ದರೂ ಪ್ರಕಟ ಮಾಡಿಯೇ ತೀರುವವರು. ಈ ಗುಣವೇ ಅವರನ್ನು ಸರಕಾರಿ ಸೇವೆಗೆ ಶರಣು ಹೊಡೆಯಲು ಪಚ್ಚಿತೆಂದರೆ ತಪ್ಪಾಗಲಿಕ್ಕಿಲ್ಲ.

ಸರಕಾರಿ ಸೇವಾ ನಿವೃತ್ತಿಯ ನಂತರವೂ ಸಹ ಸಾರ್ವಜನಿಕ ಸೇವೆಯನ್ನೇ ತಮ್ಮ ಜೀವನದ ಧ್ಯೇಯ ವಾಗಿಟ್ಟುಕೊಂಡು ಕೊಲ್ಹಾಪುರ ನಗರದ ನೀರಿನ ಪೂರೈಕೆ, ಮುಂಬಯಿ ವಿಶ್ವವಿದ್ಯಾಲಯದ ಸಿನೇಟ ಮೆಂಬರರಾಗಿ ಹೈದರಾಬಾದದ ಪುನರ್ರಚನೆ ಮಾಡಿದರಲ್ಲದೆ ೧೯೬೯ರಲ್ಲಿ ಮೈಸೂರಿನ ಚೀಫ ಎಂಜಿನಿಯರರಾಗಿಯೂ ರೇಲ್ವೆ ಮಂತ್ರಿಗಳಾಗಿಯೂ ನಾಡಿನ ಸೇವೆಯನ್ನು ಮಾಡಿದರು. ಮೈಸೂರಿನಲ್ಲಿ ಅವರು ಏನೇನು ಮಾಡಬೇಕೋ ಅದನ್ನು ಮಾಡಿಯೇ ಬಿಟ್ಟಿದ್ದಾರೆ. ಕನ್ನಂಬಾಡಿ ಆಣೆಕಟ್ಟಿನ ರಚನೆ ಅವರ ಬ್ರಹ್ಮ ಸೃಷ್ಟಿ. ಅದು ಅವರ ಹೆಸರನ್ನು ಚಿರಸ್ಮರಣೀಯವನ್ನಾಗಿ ಮಾಡುವ ಮುಖ್ಯ ಸ್ಮಾರಕ. ವೃಂದಾವನದ ಸೌಂದರ್ಯವನ್ನು ಸ್ವತಃ ಅನುಭವಿಸಿದವ ನಿಗೇ ಗೊತ್ತು ಅದರ ಸ್ವಾದ. ಸಂಜೆಯ ತಂಗಾಳಿ ಬೀಸುತ್ತಿರಬೇಕು, ಬಣ್ಣ ಬಣ್ಣದ ಕಾರಂಜಿಗಳು ಪುಟಿ ಯುತ್ತಿರಬೇಕು, ಸುಂದರ ಪುಷ್ಪವೃಕ್ಷಗಳ ನಡುವೆ ನಿಂತು ವೃಂದಾವನದ ಸೊಬಗನ್ನು ನೋಡಬೇಕು. ನೋಡುತ್ತಲೇ ಇರಬೇಕು ಅನ್ನಿಸುತ್ತದೆ. ಸೌಂದರ್ಯವೇ ಈ ರೀತಿ ರೂಪುಗೊಂಡು ನಿಂತಿರುವದೋ ಅಥವಾ ಇದು ವಸಂತಋತುವು ತನ್ನ ಮಗನಾದ ಕಾಮದೇವನನ್ನು ಆಟವಾಡಿಸುವ ಕ್ರೀಡಾಂಗಣವೋ, ಅಥವಾ ಇದೊಂದು ಇಂದ್ರಲೋಕದ ಪ್ರತಿಬಿಂಬವೋ ಎಂಬ ನಾನಾ ಪ್ರಕಾರದ ಸಂದೇಹದ ಸುಳಿಯಲ್ಲಿ ಮಾನವನ ಮನಸ್ಸು ಲೀನವಾಗಿ ಹೋಗುತ್ತದೆ. 'ಕುಮಾರವ್ಯಾಸನು ಹಾಡಿದನೆಂದರೆ ಕಲಿಯುಗ ದ್ವಾಪರನಾಗುವದು' ಎಂದು ಕವಿಗಳು ಹೇಳಿದರೆ ನಾವು ವೃಂದಾವನದಲ್ಲಿ ನಿಂತು "ವಿಶ್ವೇಶ್ವರಯ್ಯನು ಇಚ್ಛಿಸಿದನೆಂದರೆ ಸ್ವರ್ಗವೇ ಭೂಮಿಗೆ ಇಳೆಯುವದು, ಇಂದ್ರನ ಗರ್ವವು ಹಿಂಗುವದು" ಅನ್ನುವಂತಾಗುತ್ತದೆ. "ಸೌಂದರ್ಯವೇ, ನಿನ್ನ ಹೆಸರು ವೃಂದಾವನ" 'Beauty thy name is Vrindawan' ಎನ್ನದೆ ಯಾವ ವೀಕ್ಷಕನೂ ಅಲ್ಲಿಂದ ಹಿಂತಿರುಗಲಾರ. ಈ ಅದ್ಭುತರಮ್ಯ ಸೃಷ್ಟಿ ಡಾ. ವಿಶ್ವೇಶ್ವರಯ್ಯನವರ ಕೃತಿ. ಇಂಥ ಪ್ರಚಂಡ ಯೋಜನೆಗಳನ್ನು ಕಾರ್ಯರೂಪಕ್ಕಿಳಿಸಿ ದ್ದಲ್ಲದೆ ಅವರ ವಿಚಾರ ಶಕ್ತಿ ಜೀವನ ರಂಗದಲ್ಲಿಯ ಯಾವುದೇ ಸಣ್ಣ ವಿಷಯವನ್ನು ಸಹ ದುರ್ಲಕ್ಷಿಸಿಲ್ಲ.

ಒಕ್ಕಲಿಗರ ಜೀವನ ಮಟ್ಟವನ್ನು ಏರಿಸಲು ಅವರು ಹೆಣಗಿದ್ದಾರೆ. ಒಕ್ಕಲುತನ ಪದ್ಧತಿಯಲ್ಲಿ ಕ್ರಾಂತಿಕಾರಿ ಸುಧಾರಣೆಗಳನ್ನು ಮಾಡಲು ಪ್ರಯತ್ನಪಟ್ಟಿದ್ದಾರೆ. ಮಾನವೋಪಯೋಗಿ ಪಶುಗಳ ಸಂತತಿಯನ್ನು ಸುಧಾರಣೆ ಗೊಳಿಸುವ ಕುರಿತು ವಿಚಾರಿಸಿದ್ದಾರೆ. ಅಂತೆಯೇ ಎಲ್ಲ

ಕಡೆಗಳಲ್ಲಿ ಪ್ರದರ್ಶನ, ಜಾತ್ರೆಗಳು, ವಿಚಾರ ಸಂಕಿರಣ ಮುಂತಾದವುಗಳನ್ನು ನೆರವೇರಿಸಿದ್ದಾರೆ. ರೈತನಿಗೆ ಉತ್ತಮ ರಂಟೆಗಳನ್ನು ಪೂರೈಸುವ ಸಲುವಾಗಿ ಕೋಲಾರದಲ್ಲಿ ರಂಟೆಗಳನ್ನು ತಯಾರಿಸುವ ಕಾರಖಾನೆಯನ್ನು ಸ್ಥಾಪಿಸಿದ್ದಾರೆ. ಭದ್ರಾವತಿಯಲ್ಲಿಯ ಕಬ್ಬಿಣ ಕಾರಖಾನೆ ಅವರ ಅವಿರತ ಪ್ರಯತ್ನಗಳ ಪ್ರತೀಕ. ಜಗತ್ತಿನ ಎಲ್ಲ ಕಡೆಗಳಿಂದಲೂ ಉತ್ತಮ ವಿಚಾರಗಳನ್ನು ಕೂಡಿಹಾಕಿ ತಾಯಿನಾಡಿನಲ್ಲಿ ಅವುಗಳನ್ನು ಪ್ರಕಟವಡಿಸಬೇಕೆಂಬ ಆಕಾಂಕ್ಷೆಯಿಂದ ಎಷ್ಟೋ ಸಾರೆ ಜಲಪರ್ಯಟನ ಮಾಡಿದ್ದಾರೆ. ಎಷ್ಟೋ ಜನರನ್ನು ಬೇರೆ ಬೇರೆ ದೇಶಗಳಿಗೆ ತಾಂತ್ರಿಕ ಶಿಕ್ಷಣವನ್ನು ಪಡೆಯುವದಕ್ಕಾಗಿ ಕಳಿಸಿದ್ದಾರೆ. ಮೈಸೂರಿನಲ್ಲಿಯ ಪ್ರಸಿದ್ಧ ಮೈಸೂರ ಬ್ಯಾಂಕಿನ ಸ್ಥಾಪನೆ ಮಾಡಿ ಅನೇಕ ಯೋಜನೆಗಳನ್ನು ಸಫಲಗೊಳಿಸುವದರಲ್ಲಿ ಮುಖ್ಯ ಸಾಧನವಾದ ಆರ್ಥಿಕ ವ್ಯವಸ್ಥೆಯನ್ನು ಮಾಡಿಕೊಂಡರು. ಗ್ರಾಮೋದ್ಧಾರದಲ್ಲಿ ಶಿಕ್ಷಣ ಪಾತ್ರದ ಮಹತಿಯನ್ನು ಕಂಡು ಅವರು ಗ್ರಾಮಾಂತರ ಪ್ರದೇಶಗಳಲ್ಲಿ ಶಿಕ್ಷಣ ಪ್ರಚಾರ ಕೈಕೊಂಡರು. ಎಷ್ಟೋ ಕಡೆಗೆ ಪ್ರೌಢ ಶಿಕ್ಷಣ ಶಾಲೆಗಳನ್ನು ಸ್ಥಾಪಿಸಿದ್ದಾರೆ. ಮೈಸೂರು ವಿಶ್ವವಿದ್ಯಾಲಯದ ಮೂಲಕ ಉಚ್ಚ ಶಿಕ್ಷಣದ ಅಭಿವೃದ್ಧಿಗೆ ಪ್ರೋತ್ಸಾಹವಿತ್ತಿದ್ದಾರೆ. ೧೯೧೭ರಲ್ಲಿ ಒತ್ತಾಯದ ಪ್ರಾಥಮಿಕ ಶಿಕ್ಷಣದ ಕಾಯಿದೆಯನ್ನು ಜಾರಿಗೊಳಿಸಿದರು. ಮೈಸೂರಿನಲ್ಲಿ ಅನೇಕ ಗ್ರಾಮಗಳಲ್ಲಿ ಗ್ರಾಮ ಪಂಚಾಯತಿಗಳನ್ನು ಸ್ಥಾಪಿಸಿದರು. ಅಸ್ಪೃಶ್ಯರ ಸಲುವಾಗಿ ಎಷ್ಟೋ ಕಡೆಗೆ ಶಾಲೆಗಳನ್ನು ಸ್ಥಾಪಿಸಿ ಹರಿಜನೋದ್ಧಾರದ ಮಹಾನ್ ಕಾರ್ಯದಲ್ಲಿ ತಮ್ಮ ಪೊಣೆಯನ್ನು ನಿರ್ವಹಿಸಿದ್ದಾರೆ. ಮೈಸೂರಲ್ಲಿ ಅನೇಕ ಕಡೆಗಳಲ್ಲಿ ಕಂಡು ಬರುವ ಸುಂದರ ಯಾತ್ರಿಕರ ತಂಗು ಮನೆಗಳು ಇವರಿಂದಲೇ ಸ್ಥಾಪಿಸಲ್ಪಟ್ಟವು. ಇಷ್ಟೇ ಅಲ್ಲ, ಭದ್ರಾವತಿಯಲ್ಲಿಯ ಕಾಗದ ಕಾರಖಾನೆ, ಬೆಂಗಳೂರಿನ ಹಿಂದುಸ್ತಾನ ವಿಮಾನ ಕಾರಖಾನೆ, ಮುಂಬಯಿಯಲ್ಲಿಯ ಪ್ರೀಮಿಯರ್ ಆಟೋಮೊಬಾಯಿಲ್ ಕಂಪನಿ, ದೇವದಲ್ಲಿಯ ಎಷ್ಟೋ ವಿದ್ಯುತ್ ಗೃಹಗಳು, ಹಿರಾಕುಡ ಅಣೆಕಟ್ಟು ಇವೆಲ್ಲವೂ ಡಾ. ವಿಶ್ವೇಶ್ವರಯ್ಯನವರ ಮಹತಿಯನ್ನು ಜನತ್ರಿಗೆ ಸಾರಿ ಹೇಳುತ್ತಲಿವೆ.

ಅವರು ಉಚ್ಚಮಟ್ಟದ ಸಮಾಜ ಸುಧಾರಕರೂ ಆಹುದು, ಧಾರ್ಮಿಕ ಅಂಧವಿಶ್ವಾಸಗಳನ್ನು ಹಿಂಗಿಸುವ ಸಾಹಸ ಮಾಡಿದ್ದಾರೆ. ಹಿಂದುಳಿದ ಜಾತಿಗಳ ಅಭ್ಯುದಯ, ಸ್ತ್ರೀ-ಶಿಕ್ಷಣ, ಬಾಲವಿವಾಹ ಪ್ರತಿಬಂಧ ಮುಂತಾದ ಎಷ್ಟೋ ಕೆಲಸಗಳಿಂದ ಸಮಾಜವನ್ನು ಪ್ರಗತಿ ಪಥದಲ್ಲಿ ಸಾಗಿಸುವ ಸಾಹಸ ಮಾಡಿದ್ದಾರೆ. ಜಾತಿಭೂತವೇ ಭಾರತದ ಪ್ರಗತಿಗೆ ೧೦೦ದು ದೊಡ್ಡ ಅಡ್ಡಿ ಎಂದು ಘಂಟಾಘೋಷವಾಗಿ ಸಾರಿದ್ದಾರೆ. ಅಲ್ಲದೆ ರಾಜನೈತಿಕ ಕ್ಷೇತ್ರದಲ್ಲಿಯೂ ಕೂಡ ಅವರು ಹಿಂದೆ ಬಿದ್ದಿಲ್ಲ. ಅನೇಕ ರಾಜನೀತಿಯ ಕಾರ್ಯಗಳಿಂದ ತಾಯಿನಾಡನ್ನು ಅಭ್ಯುದಯಗೊಳಿಸಿದ್ದಾರೆ.

ಡಾಕ್ಟರ್ ವಿಶ್ವೇಶ್ವರಯ್ಯನವರೆಂದರೆ ಅದೊಂದು ಕಾರ್ಯಮಾಡುವ ಮಹಾಶಕ್ತಿಯೇ ಸರಿ. ಇಂದಿಗೂ ಅವರು ಕಾರ್ಯಮಾಡುತ್ತಲಿದ್ದಾರೆ. ದೇಶದ ಎದುರಿಗಿರುವ ನಾನಾ ಸಮಸ್ಯೆಗಳನ್ನು ಬಗೆಹರಿಸುವ ವಿಚಾರ ಮಾಡುತ್ತಲಿದ್ದಾರೆ. ವೇಗದಿಂದ ಬೆಳೆಯುತ್ತಿರುವ ಜನಸಂಖ್ಯೆಯ ಸಮುದ್ರಕ್ಕೆ ಒಂದು ಒಡ್ಡನ್ನು ಹಾಕಬೇಕೆಂದು ಲೆಕ್ಕ ಹಾಕುತ್ತಿದ್ದಾರೆ. ಈ ಎಲ್ಲ ವಿಚಾರಗಳೂ ಈ ಕಾರ್ಯಶಕ್ತಿ ಅವರ ಜೀವನವನ್ನು ಚೇತನಾಮಯವನ್ನಾಗಿ ಮಾಡುತ್ತಲಿವೆ. ಜೀವನದಲ್ಲಿ ನನಗೆ ಬೇಸರವೆಂಬುದೇ ಇಲ್ಲ ಅನ್ನುತ್ತಾರೆ ಈ ನೂರು ವರ್ಷದ ತರುಣ.

ಇಂತು ಮೋಕ್ಷಗುಂದಂರವರ ವ್ಯಕ್ತಿತ್ವವು ಸರ್ವತೋಮುಖ ವಿಕಾಸಗೊಂಡಿದೆ. ಈ ಎಲ್ಲ ಸಂಗತಿಗಳು ಅವರ ವ್ಯಕ್ತಿತ್ವದ ಅಲ್ಪಪರಿಚಯವನ್ನಷ್ಟೇ ಮಾಡಿಕೊಡುತ್ತವೆ. ಈ ವ್ಯಕ್ತಿಯನ್ನು ಕೇವಲ ಭಾರತವಷ್ಟೇ ಏಕೆ ಎಷ್ಟೋ ವರದೇಶಗಳೂ ಸಹ ಮುಕ್ತಕಂಠದಿಂದ ಪೊಗಳುತ್ತಲಿವೆ. ಇಂಥ ಮಹಾನ್ ವ್ಯಕ್ತಿ ಸರ್ ಮೋಕ್ಷಗುಂಡಂ ವಿಶ್ವೇಶ್ವರಯ್ಯನವರನ್ನು ಪಡೆದ ಭಾರತಮಾತೆ ಧನ್ಯಳು. ಈ ವ್ಯಕ್ತಿಯನ್ನು ಪ್ರತ್ಯಕ್ಷ ನೋಡುತ್ತಿರುವ ನಾವೆಲ್ಲರೂ ಧನ್ಯರೇ. ಇಂದಿನ ಈ ಶುಭ ಅವಸರದಲ್ಲಿ "ಈ ಶತಾಯುವನ್ನು ದೀರ್ಘಾಯುವನ್ನಾಗಿ ಮಾಡು" ಎಂದು ಪರಮಾತ್ಮನಲ್ಲಿ ಭಕ್ತಿಪೂರ್ವಕ ಮೊರೆಯಿಟ್ಟರೆ ಅದೇ ಭಾರತರತ್ನ ವಿಶ್ವೇಶ್ವರಯ್ಯನವರಿಗೆ ನಾವು ಸಲ್ಲಿಸುವ ಅಭಿನಂದನೆಗಳಾಗಲಿಕ್ಕಿಲ್ಲವೇ?

ಬೇಕು. ಆ ವಾಕ್ಯಗಳ ಬಗ್ಗೆ ಪ್ರಶ್ನೆಗಳನ್ನು ಕೇಳಿ ಆತನಿಗೆ ವಿಷಯವು ಮನದಟ್ಟಾಗುವಂತೆ ಮಾಡಬೇಕು. ಅವರಿಗೆ ತಿಳಿದ ಶಬ್ದಗಳ ಅರ್ಥವನ್ನು ಎದುರು ಅರ್ಥವನ್ನು ತಿಳಿಸಲು ಸಮರ್ಥರಾಗುವಂತೆ ಅವರಿಗೆ ತಿಳಿಸಬೇಕು.

ಬರೆಹವು ಮಾತ್ರ ಅವರಿಗೆ ಈಗಾಗಲೇ ರೂಢಿಯಾಗಿರುತ್ತದೆ. ಸಣ್ಣ ಸಣ್ಣ ಶಬ್ದಗಳನ್ನು ಸ್ವತಃ ಬರೆಯುವಂತೆ ಸಂದರ್ಭ ಒದಗಿಸಿಕೊಡಬೇಕು. ಪುಸ್ತಕ ನೋಡಿ ಬರೆಯಲು ತಿಳಿಸಬೇಕು. ತಾನು-ನೋಡಿದ ಸಂಗತಿಯನ್ನು ಸುಲಭ ಶಬ್ದಗಳಲ್ಲಿ ಬರೆಯಲು ತಿಳಿಸಬೇಕು.

ಕವಿತೆಯು ಈ ಮಕ್ಕಳಿಗೆ ಸುಲಭವಾಗಿ ರಂಜಿಸುತ್ತದೆ. ಅದರಂತೆ ಶಿಕ್ಷಕರು ಸುಲಭ ದಾಟಿಯನ್ನು ಹೊಂದಿಸಿ ಮಕ್ಕಳಿಗೆ ಮನರಂಜಿಸುವಂತೆ ಭಾವಭಾವದಿಂದ ಒಂದೊಂದೇ ಚರಣವನ್ನು ಕಲಿಸುತ್ತಾ ಸಾಗಬೇಕು.

ಜೀವನ ಶಿಕ್ಷಣದಲ್ಲಿ ಚಟುವಟಿಕೆಗಳು

ಲೇಖಕರು:— ಶ್ರೀ ಎಸ್. ಎಸ್. ಭೂಸರಡ್ಡಿ, ಎಸ್.ಟಿ.ಸಿ. ಅಧ್ಯಾಪಕರು, ಕೊಣ್ಣೂರ (ನರಗುಂದ)

[ಕಳೆದ ಸಂಚಿಕೆಯಿಂದ ಬಂದುದು]

ಚಟುವಟಿಕೆಗಳನ್ನು ನಾವು ಸಾಮಾನ್ಯವಾಗಿ ನಾಲ್ಕು ಪ್ರಕಾರಗಳನ್ನು ಮಾಡಬಹುದು. (೧) ದೈನಂದಿನ (೨) ಆರ್ಥಿಕ (೩) ಸಾಂಸ್ಕೃತಿಕ (೪) ನೈಸರ್ಗಿಕ. ದೈನಂದಿನ ಚಟುವಟಿಕೆಗಳಲ್ಲಿ ಸಫಾಯಿ, ಪ್ರಾರ್ಥನೆ, ಅಮೃತವಾಣಿ ಪಠಣ, ಸುದ್ದಿ ಬಿತ್ತರಣೆ, ಮುಂತಾದವುಗಳು ಬರುತ್ತವೆ. ಈ ಚಟುವಟಿಕೆಗಳನ್ನು ಶಿಕ್ಷಕರಾದ ನಾವು ಶಾಲೆಗಳಲ್ಲಿ ನಿತ್ಯ ಕೈಕೊಳ್ಳುವದರಿಂದ ಮಗುವಿನ ವೈಯಕ್ತಿಕ ಸ್ವಚ್ಛತೆ ಮತ್ತು ಶಾಲೆಯ ಸ್ವಚ್ಛತೆಯ ಕಾರ್ಯಕ್ರಮಗಳು ಅನಾಯಾಸವಾಗಿ ಜರಗುತ್ತವೆ. "ಸ್ವಚ್ಛತೆಯಿದ್ದಲ್ಲಿ ದೇವರ ಸಾನಿಧ್ಯವುಂಟು" ಆದುದರಿಂದಲೇ ಮಹಾತ್ಮಾಜಿಯವರೂ ಕೂಡ ನನ್ನ ಶಿಕ್ಷಣವು ಸ್ವಚ್ಛತೆಯಿಂದ ಪ್ರಾರಂಭವಾಗುತ್ತದೆ ಎಂದು ಹೇಳಿದ್ದಾರೆ. ನಿರ್ಮಲವಾದ ದೇಹದಲ್ಲಿ ನಿರ್ಮಲವಾದ ಮನಸ್ಸು ಇರುತ್ತದೆ. ವಿಶಾಲವಾದ ಉದ್ಯಾನದಲ್ಲಿ ಕುಸುಮವೊಂದು ವಿಕಸಿತವಾಗುವಂತೆ ಶುದ್ಧ, ನಿರ್ಮಲ, ಪವಿತ್ರವಾದ ಪ್ರಾಂಗಣದಲ್ಲಿ ಜೀವನ ಕುಸುಮ ಅರಳುವಂತಾಗ ಬೇಕು. ಹೀಗೆ ನಿರ್ಮಲವಾದ ಮಗುವಿನ ಮನಸ್ಸು ಮುಂದಿನ ವಿಷಯಾನುಗ್ರಹಣತೆಗೆ ತಯಾರಾಗುತ್ತದೆ. ಪ್ರಾರ್ಥನೆಯಿಂದ ಆತ್ಮಶುದ್ಧಿ, ಮನಸ್ಸಿನ ಏಕಾಗ್ರತೆ, ದೇವರಲ್ಲಿ ಭಕ್ತಿ ಮೊದಲಾದ ಉತ್ತಮ ಗುಣಗಳು ಮಗುವಿನಲ್ಲಿ ಸ್ವಾಭಾವಿಕವಾಗಿ ಸಹಜವಾಗಿ ಬೆಳೆದು ಬರುತ್ತವೆ. ಇನ್ನು ಅಮೃತವಾಣಿ ಪಠಣದಿಂದ ಮಗುವಿನ ನೈತಿಕಮಟ್ಟ ವಿಕಾಸಗೊಳ್ಳುವದು. ಸುದ್ದಿ ಬಿತ್ತರಣೆಯಿಂದ ಜಗತ್ತಿನಲ್ಲಿ ದೇಶದಲ್ಲಿ ರಾಜ್ಯದಲ್ಲಿ ನಡೆಯುವ ಪ್ರಚಲಿತ ವಾರ್ತೆಗಳ ಕಲ್ಪನೆಗಳನ್ನು ಎಲ್ಲ ಮಕ್ಕಳಿಗೂ ಮಾಡಿ ಕೊಟ್ಟಂತಾಗುವದು.

ಎರಡನೆಯದಾಗಿ ಆರ್ಥಿಕ ಚಟುವಟಿಕೆಗಳಲ್ಲಿ ನೂಲುವ, ನೆಯ್ಯುವ, ಒಕ್ಕಲುತನ, ಬಡಿಗತನ, ಚಾಪಿ ತಯಾರಿಸುವದು ಮುಂತಾದ ಕೆಲಸಗಳು ಬರುತ್ತವೆ. ಈ ಚಟುವಟಿಕೆಗಳಿಂದ ಉತ್ಪಾದನೆಯು ಹೆಚ್ಚಿ ಶಿಕ್ಷಣವು ಸ್ವಾವಲಂಬಿಯಾಗುವದು, ಮಗುವಿನ ಹಸ್ತ ಕೌಶಲ್ಯ ಹಾಗೂ ಸೌಂದರ್ಯೋಪಾಸಕ ದೃಷ್ಟಿ ವಿಕಾಸಗೊಳ್ಳುತ್ತದೆ. ಮಗು ಸ್ವಾವಲಂಬಿಯಾಗಿ ಸುಖೀ ಜೀವನವನ್ನು ಕಳೆಯಲು ಸಮರ್ಥನಾಗುತ್ತಾನೆ.

ಇನ್ನು ಮೂರನೆಯದಾಗಿ ಸಾಂಸ್ಕೃತಿಕ ಚಟುವಟಿಕೆಗಳು. ಇವುಗಳಲ್ಲಿ ಪುಣ್ಯತಿಥಿ, ಜಯಂತಿ, ಹಬ್ಬ ಹುಣ್ಣಿಮೆಗಳು, ಮನರಂಜನೆಯ ಚಟುವಟಿಕೆಗಳು, ಸಾಹಿತ್ಯ ವಿಷಯಕ ಅಂದರೆ ಚರ್ಚಾಕೂಟ, ಕೈಬರೆಹ ವತ್ರಿಕೆ, ಮುಂತಾದವುಗಳು ಹಾಗೂ ಪ್ರದರ್ಶನಗಳು ಬರುತ್ತವೆ. ಇಂಥ ಚಟುವಟಿಕೆಗಳನ್ನು ಸಂಘಟಿಸುವದರಿಂದ ಮಕ್ಕಳ ಒಲವು, ನಿಲವು, ಅಭಿರುಚಿಗಳಿಗೆ ಅವಕಾಶ ದೊರೆತು ಮಕ್ಕಳ ಮನದಲ್ಲಿ ಹುದುಗಿರುವ ಅನೇಕ ಕಲೆಗಳು ಸ್ವಾಭಾವಿಕವಾಗಿ ವಿಕಾಸಗೊಳ್ಳುತ್ತವೆ. ರಾಷ್ಟ್ರೀಯ ಮಹಾಪುರುಷರ ಚರಿತ್ರೆ ಮತ್ತು ಭಾರತದ ಸಂಸ್ಕೃತಿಯ ಅರಿವು ಮಕ್ಕಳಿಗುಂಟಾಗುವುದು. ಮನರಂಜನೆಯ ಚಟುವಟಿಕೆಗಳಲ್ಲಿ

ನಿರಕ್ಷರತೆಯನ್ನು ಹೊಡೆದೋಡಿಸುವ, ಮಧ್ಯಪಾನ ನಿರೋಧಕ್ಕೆ ಸಹಾಯವಾಗುವ ಮನರಂಜನೆಗಳನ್ನು ಹಳ್ಳಿಗರ ಮುಂದೆ ಮಾಡಿ ತೋರಿಸುವದರಿಂದ ಹಳ್ಳಿಗರಿಗೆ ಬೋಧೆಯೂ ಮನರಂಜನೆಯೂ ಕೂಡಿಯೇ ಸಾಗುವದು. ಅಂದರೆ ಹಳ್ಳಿಯು ಶಾಲೆಯ ಸಮಾಜ ಕೇಂದ್ರವಾಗ ಬಲ್ಲದು. (Communitive Centre)

ಚರ್ಚಾಕೂಟವನ್ನು ಏರ್ಪಡಿಸುವದರಿಂದ ಮಕ್ಕಳಲ್ಲಿ ಭಾಷಣ ಕಲೆಯು ವಿಕಾಸಗೊಳ್ಳುವದು. ಭಾಷಣವೂ ಒಂದು ಕಲೆಯಾದುದರಿಂದ ಮಗುವು ಅದನ್ನು ವಿದ್ಯಾರ್ಥಿದೆಶೆಯಲ್ಲಿಯೇ ಸಾಧಿಸಿಕೊಳ್ಳಲು ಅನುವು ದೊರೆಯುವದು. ಮಕ್ಕಳು ಕೈಬರಹದ ಪತ್ರಿಕೆಗಳನ್ನು ಹೊರಡಿಸುವದರಿಂದ, ಮಕ್ಕಳಲ್ಲಿ ಲೇಖನ ಕಲೆ ಚಿಕ್ಕಂದಿನಲ್ಲಿಯೇ ಅಭಿವೃದ್ಧಿಗೊಳ್ಳುವದು. ಅಲ್ಲದೆ, ಶಾಲೆಯ ಪ್ರಗತಿಯ ಕಲ್ಪನೆ ಪಾಲಕರಿಗುಂಟಾಗಿ ಅವರಲ್ಲಿ ಶಾಲೆಯ ಬಗ್ಗೆ ಹೆಮ್ಮೆ, ಅಭಿಮಾನ, ಪ್ರೀತಿಯುಂಟಾಗುವದು. ಇದರಿಂದ ಗುರುಗಳಿಗೆ ಪಾಲಕರ ಸಹಕಾರ ಸಹಜವಾಗಿ ದೊರೆಯುವದು. ಪ್ರದರ್ಶನಗಳನ್ನು ಏರ್ಪಡಿಸುವದರಿಂದ ಮಕ್ಕಳಲ್ಲಿ ಉತ್ತಮ ಕೆಲಸ ಮಾಡಬೇಕೆಂಬ ಹಾಗೂ ಸಂಗ್ರಹ ಪ್ರವೃತ್ತಿಗಳು ಜಾಗ್ರತಗೊಳ್ಳುವವು. ಅಲ್ಲದೆ ಪಾಲಕ ಶಿಕ್ಷಕರಲ್ಲಿ ನಿಕಟ ಸಂಬಂಧ ಸಂಪರ್ಕ ಬೆಳೆಯುವ ಸದಾವಕಾಶ ದೊರೆಯುವದು. ಇಂಥಹ ಚಟುವಟಿಕೆಗಳನ್ನು ಮಕ್ಕಳೇ ಮುಂದುವರಿದು ಸಂಘಟಿಸುವದರಿಂದ ಅವರಲ್ಲಿ ಹೊಣೆಗಾರಿಕೆಯಿಂದ ಕಾರ್ಯ ನಿರ್ವಹಿಸುವ ಶಕ್ತಿ, ಸಾಮರ್ಥ್ಯ ಬರುವದು. ಅವರು ಸಂಘ ಜೀವಿಗಳಾಗಿ ಬೆಳೆದು, ಪರೋಪಕಾರ ಬುದ್ಧಿಯುಳ್ಳವರಾಗಿ ಸಮಾಜ ಸೇವೆ ಮಾಡುವ ಉತ್ತಮ ನಾಗರಿಕರಾಗುವರು.

ಇನ್ನೂ ನೈಸರ್ಗಿಕ ಚಟುವಟಿಕೆಗಳಾದ ಹಳ್ಳ, ಹೊಳ್ಳೆ, ಗುಡ್ಡ, ಐತಿಹಾಸಿಕ ಸ್ಥಳಗಳಿಗೆ ವ್ರವಾಸವನ್ನಿಟ್ಟುಕೊಳ್ಳುವದರಿಂದ ಮಕ್ಕಳಿಗೆ ಸೃಷ್ಟಿಯ ನಿರೀಕ್ಷಣೆ ಪ್ರಕೃತಿಯ ಸೌಂದರ್ಯ, ಸವಿಯುವ ಸೌಭಾಗ್ಯ ದೊರೆಯುವದು, ಇತಿಹಾಸ, ಭೂಗೋಲ, ಸಾಮಾನ್ಯಜ್ಞಾನ ಮೊದಲಾದ ವಿಷಯಗಳ ಸಮುದಾಯಜ್ಞಾನ ಪಾಠ ಕೊಡಲು ಬಹಳ ಸುಲಭವಾಗುವದಲ್ಲದೆ, ಅದು ಮಕ್ಕಳ ಮನಸ್ಸಿನ ಮೇಲೆ ಪರಿಣಾಮವಾಗಿ ಅವರಲ್ಲಿ ವಿಷಯ ಜ್ಞಾನವು ಸರಿಯಾಗಿ ಆಗುವದಲ್ಲದೆ, ವರ್ಗದ ಕೋಣೆಯಲ್ಲಿ ಕುಳಿತು ಬೇಸತ್ತ ಮಕ್ಕಳಿಗೆ ವಿಹಾರ ವಿನೋದ ದೊರೆತು ಶಾಲೆಯಲ್ಲಿ ಕಲಿತ ವಿವಿಧ ವಿಷಯಗಳ ಉದಾತ್ತೀಕರಣವಾಗುವದು.

ಈ ಎಲ್ಲ ಚಟುವಟಿಕೆಗಳನ್ನು ಸುಸಂಬದ್ಧವಾಗಿ ಸುಸಂಘಟಿತವಾಗಿ, ಸುವ್ಯವಸ್ಥೆಯಿಂದ ಯೋಜಿಸಿ ಆಯಾ ವರ್ಗಕ್ಕೆ ತಕ್ಕಂತೆ ಹಾಗೂ ಸ್ಥಳೀಯ ವಾತಾವರಣಕ್ಕೆ ಹೊಂದಿಕೆಯಾಗುವಂತೆ ಚಟುವಟಿಕೆಗಳ ವಾರ್ಷಿಕ ಅಂದಾಜ ಪತ್ರಿಕೆಯನ್ನು ಎಲ್ಲ ಗುರುಗಳು ಪರಸ್ಪರ ವಿಚಾರ ವಿನಿಮಯ ಮಾಡಿ ರಚಿಸಿ ಮುಖ್ಯ ಗುರುಗಳ ಕೋಣೆಯಲ್ಲಿ ತೂಗು ಹಾಕಬೇಕು. ಹಾಗೂ ಆಯಾ ಚಟುವಟಿಕೆಗಳಿಗೆ ಸಮನ್ವಯ ಮಾಡಬಹುದಾದ ವಿಷಯಗಳನ್ನೂ ಹೊಂದಿಸಿ ಪ್ರತಿ ವರ್ಗದವರು ಒಂದು ಮಾಸಿಕ ಯೋಜನೆಯನ್ನು ಮಾಡಿಕೊಳ್ಳಬೇಕು. ಶಿಕ್ಷಕರು ಬಹು ಜಾಣ್ಮೆಯಿಂದ, ಪಂಚಾಂಗ, ಕ್ಯಾಲೆಂಡರ, ಡೈರಿ ಮುಂತಾದವುಗಳ ಸಹಾಯದಿಂದ ಆಯಾ ತಿಂಗಳಿಗೆ ಯೋಗ್ಯವಾದ ಚಟುವಟಿಕೆಗಳನ್ನು ಮಕ್ಕಳಿಂದ ಮಾಡಿಸಬೇಕು. ಈ ಪ್ರಕಾರ ಚಟುವಟಿಕೆಗಳ ಮುಖಾಂತರ ಶಿಕ್ಷಣ ಸಾಗಿಸಿದಲ್ಲಿ ಮಕ್ಕಳ ಸರ್ವತೋಮುಖ ಬೆಳವಣಿಗೆಯಾಗಿ, ಅವರು ಹೊಣೆಯರಿತ ಉದಾತ್ತ ಸೇವಾ ಬುದ್ಧಿಯ ಉತ್ತಮ ನಾಗರಿಕರಾಗಿ ಶಾಲೆಯಿಂದ ಹೊರಬಿದ್ದು ಸ್ವಾವಲಂಬೀ ಪರೋಪಕಾರಿ ಜೀವನವನ್ನು ಯಶಸ್ವಿಯಾಗಿ ಸಾಗಿಸುವರೆಂಬುದರಲ್ಲಿ ಎಳ್ಳಿನಿತೂ ಸಂಶಯವಿಲ್ಲ. ರಾಷ್ಟ್ರ ನಿರ್ಮಾತೃಗಳೆಂದು ಕರೆಯಿಸಿಕೊಳ್ಳುವ ಶಿಕ್ಷಕರಾದ ನಾವೆಲ್ಲರೂ ನಮ್ಮ ನಮ್ಮ ಕರ್ತವ್ಯವನ್ನು ಸರಿಯಾಗಿ ಮಾಡಿದಲ್ಲಿ ಬಾಪೂಜಿಯವರ ಕನಸಿನ ಭಾರತ ಬೇಗನೇ ನನಸಾಗುವದರಲ್ಲಿ ಸಂದೇಹವಿಲ್ಲ.

—: ಜಯ ಹಿಂದ :—

ಶ್ರೀ ಶಿಂತ್ರಿಬಸಪ್ಪ ಹಾಗು ಲಿಂ. ಶ್ರೀಮತಿ ಬಸಮ್ಮ ಅವರ ಪಾರಿತೋಷಕಗಳ

ವಿತರಣ ಸಮಾರಂಭ

ಮಿಶ್ರಿಕೋಟಿ— ದಿ. ೧೫ ಮುಂಜಾನೆ ಸ್ವಾತಂತ್ರ್ಯ ಉತ್ಸವದ ನಿಮಿತ್ತವಾಗಿ ನಗರ ಸಂಕೀರ್ತನ ನಡೆದು ಶ್ರೀ ಸಂಗಯ್ಯನವರು ಶಂಕರದೇವರಮಠ ಅವರಿಂದ ಧ್ವಜಾರೋಹಣ ಜರುಗಿ ಭಾಷಣಗಳಾದವು. ಅನಂತರ ಮಧ್ಯಾಹ್ನದಲ್ಲಿ ಇ. ಆಯ್. ಅವರಾದ ಶ್ರೀ ಎಂ. ಜಿ. ಹುಂದ್ರಾಳರವರ ಅಧ್ಯಕ್ಷತೆಯಲ್ಲಿ ಶ್ರೀ ಶಿಂತ್ರಿ ಬಸಪ್ಪನವರು ಮತ್ತು ಶ್ರೀಮತಿ ಶಿಂತ್ರಿ ಬಸಮ್ಮನವರ ಪಾರಿತೋಷಕ ವಿತರಣ ಕಾರ್ಯಕ್ರಮ ನಡೆಯಿತು. ಶ್ರೀ ಎಸ್. ಜಿ. ಗವಿಮಠ, ಏ. ಓ., ಡಿ. ಎಸ್. ಬಿ. ಅವರು ಲಿಂಗೈಕ್ಯ ಶ್ರೀಮತಿ ಶಿಂತ್ರಿ ಬಸಮ್ಮನವರ ಭಾವಚಿತ್ರವನ್ನು ಅನಾವರಣ ಮಾಡಿ ಅವರ ಔದಾರ್ಯದ ಅನೇಕ ಉದಾಹರಣೆಗಳನ್ನು ಹೇಳಿ ಅವರ ಹೆಸರು ಅಜರಾಮರ ವಾಗಿ ಉಳಿಯುವಂತೆ ಅವರ ಪುತ್ರರಾದ ಶ್ರೀ ಶಿಂತ್ರಿ ಬಸಪ್ಪನವರು ಅವರ ಹೆಸರಿನಿಂದ ಬಾಲಿಕೆಯರ ಏಳಿಗೆಗಾಗಿ ಕೆಲ ಧನವನ್ನು ಇಟ್ಟದ್ದು ಸ್ತುತ್ಯ ಕಾರ್ಯವೆಂದರು. ಅನಂತರ ಶ್ರೀ ಎಫ್. ಸಿ. ಉಣಕಲ್ಲ, ಡಿ. ಆಯ್. ಅವರು ವಸ್ತು ಪ್ರದರ್ಶನವನ್ನು ಉದ್ಘಾಟಿಸಿ ಪ್ರದರ್ಶನದ ಮಹತ್ವವನ್ನು ತಿಳಿಸಿ ಹೇಳಿ ಹಿರಿಯ ಪ್ರದರ್ಶನದಲ್ಲಿರ ಬೇಕಾದ ಎಲ್ಲ ಅಂಶಗಳೂ ಈ ಚಿಕ್ಕ ಹಾಗೂ ಜೊಕ್ಕಟವಾದ ಪ್ರದರ್ಶನದಲ್ಲಿ ಇರುವದಾಗಿ ಮೆಚ್ಚುಗೆ ವ್ಯಕ್ತಮಾಡಿದರು. ತರುವಾಯ ಶ್ರೀ ಮಲ್ಲಾಬಾದಿ ವೀರಭದ್ರಪ್ಪನವರು, ಎನ್. ಇ. ಎಸ್. ದವರ ಧನ ಸಹಾಯದಿಂದ ಕ. ಗಂ. ಶಾಲೆಗಾಗಿ ಕೊಂಡ ಬ್ಯಾಂಡ ಸೆಟ್ಟನ್ನೂ ಮತ್ತು ಶ್ರೀ ಭುಜ್ಜಪ್ಪ ರಾಜಮನಿ ಗ್ರಾ. ಪಂ. ಸದಸ್ಯ ಇವರು ಕ. ಹೆ. ಶಾಲೆಗೆ ಕೊಟ್ಟ ನೀರಿನ ಟಾಕಿಯನ್ನೂ ಉದ್ಘಾಟಿಸಿ ಅವುಗಳ ಮಹತ್ವ ತಿಳಿಸಿ ಕೊಟ್ಟರು. ಶ್ರೀ ಶಿಂತ್ರಿ ಬಸಪ್ಪನವರು ಬಹುಮಾನಿತ ವಿದ್ಯಾರ್ಥಿ ವಿದ್ಯಾರ್ಥಿನಿಯರಿಗೆ ಆಶೀರ್ವದಿಸುತ್ತ ತಮ್ಮ ತಾಯಿಯವರ ಹೆಸರಿನಿಂದಿಟ್ಟ ಪಾರಿತೋಷಕಗಳ ಮಹತ್ವವನ್ನು ತಿಳಿಸಿದರು.

ಇನ್ನಿತರ ಭಾಷಣಗಳ ನಂತರ ಅಧ್ಯಕ್ಷರು ಶ್ರೀ ಶಿಂತ್ರಿ ಬಸಪ್ಪನವರ ಪ್ರಥಮ ಬಹುಮಾನದ ೧೫ ರೂಪಾಯಿ ಗಳನ್ನು ಕುಮಾರಿ ಜಯಮ್ಮ ಅಧ್ಯಾಪಕ ಇವಳಿಗೂ ದ್ವಿತೀಯ ಬಹುಮಾನದ ೧೦ ರೂ. ಗಳನ್ನು, ಕುಮಾರ ಕೃಷ್ಣಾಜಿ ಸುರೇಗಾಂವಕರನಿಗೂ ಮತ್ತು ಲಿಂ. ಶ್ರೀ ಶಿಂತ್ರಿ ಬಸಮ್ಮನವರ ಪ್ರಥಮ ಬಹುಮಾನದ ೧೫ ರೂ. ಗಳನ್ನು, ಕುಮಾರಿ ಗಂಗೂಬಾಯಿ ಗುಡಿಹಾಳ ಹಾಗು ದ್ವಿತೀಯ ಬಹುಮಾನದ ೧೦ ರೂ. ಗಳನ್ನು ಕುಮಾರಿ ರೇಣುಕಾ ಜೋಶಿ ಇವಳಿಗೂ ಹಂಚಿ ಇಂಥ ಬಹುಮಾನಗಳಿಂದ ಉಂಟಾಗುವ ಶೈಕ್ಷಣಿಕ ಪ್ರಗತಿ ತಿಳಿಸಿಕೊಟ್ಟು ಜೀವನ ಶಿಕ್ಷಣದ ಮಹತ್ವವನ್ನು ವಿವರಿಸಿ ಬಹುಮಾನಗಳನ್ನಿಟ್ಟ ಶ್ರೀ ಶಿಂತ್ರಿ ಬಸಪ್ಪನವರ ಕಾರ್ಯವನ್ನು ಹೊಗಳಿದರು. ಮಕ್ಕಳಿಗೆ ಮಿಠಾಯಿ ವಿತರಣವಾಗಿ ಸಮಾರಂಭ ಮುಗಿಯಿತು.

—೦—

ಗಾಂ. ಜೀವನದ ಕೆಲವು ಘಟನೆಗಳು

ಗಿಣಿಯ ಪುಟದಿಂದ ಬಂದುದು.

(೨)

ಆಗ ಗಾಂಧೀಜಿಯವರು ದಕ್ಷಿಣ ಆಫ್ರಿಕೆಯಲ್ಲಿ ದ್ದರು. ಬಿಳಿಯರ ವಿರುದ್ಧ ನಡೆದ ಗಲಾಟೆಗಳು ನಾಗರಿ ಕತೆಯ ರಕ್ಷಣೆಗಾಗಿ ನಡೆದ ನ್ಯಾಯವಾದ ಹೋರಾಟಗಳು ನಿರಂತರ ಸಾಗಿದ್ದವು. ಬಿಳಿಯರ ವರ್ಣೀಯದ್ವೇಷದ ಕಪಿಮುಷ್ಟಿಯಲ್ಲಿ ಅಜ್ಞಾಜನತೆ ರೋಸಿಹೋಗಿತ್ತು. ಮನುಷ್ಯ ಮನುಷ್ಯನನ್ನು ನಡೆಯಿಸಿಕೊಳ್ಳುವ ರೀತಿ ಯನ್ನು ನೋಡಿದರೆ, ಸೃಷ್ಟಿವಿಧಾತನಿಗೂ ಕೂಡ ಎರಡು ಬಗೆಯದೆ ಬಿಡಲಿಕ್ಕಿಲ್ಲ ಮಾನವಜಾತಿ ಎಂದು ಅನಿಸು ತ್ತದೆ. ದ್ವಿಮುಖ ಪ್ರವಾಹದ ಅನಿಷ್ಟ ಪ್ರವಾಹದಲ್ಲಿ ಜನಕಲ್ಯಾಣ ರಸಾತಳಕ್ಕೆ ಬಿದ್ದುಹೋಗಿತ್ತು. ಸಮುದ್ರದ ಗರ್ಭದಿಂದ ವಡವಾಗ್ನಿ ತೂರಿಬಂದಂತೆ, ಕಾಲನ ಗರ್ಭ ದಿಂದ ಜನತೆಯ ರೋಷಾಗ್ನಿ ಸಿಡಿದುಬಂದಿತ್ತು. ಕೆಡಿ ಹೊತ್ತಿಸಿದ ಚೇತನಶಕ್ತಿ ಗಾಂಧೀಜಿಯಾಗಿದ್ದರು. ಆಫ್ರಿ ಕೆಯ ಹಿಂದಿಯರಿಗೆ ಕರಿಯರಿಗೆ ಇವರು ಕತ್ತಲೆಯ ದಾರಿ ದೀಪವಾಗಿದ್ದರು.

ಗಾಂಧೀಜಿಯವರ ಸೇವಾ ಕ್ಷೇತ್ರ ಬೆಳೆಯುತ್ತ ನಡೆದಿತ್ತು. ಟಾಲಸ್ಟಾಯ, ಗೋಖಲೆ, ಲೋಕಮಾನ್ಯ ಟಿಳಕ ಮುಂತಾದ ಪ್ರತಿಭಾನ್ವಿತ ಉಜ್ವಲ ರಾಷ್ಟ್ರಪ್ರೇಮಿ ವ್ಯಕ್ತಿಗಳ ಅಮೂಲ್ಯ ಅನುಭವದ ದರ್ಶನ ಅವರ

ಕಣ್ಣೆದುರು ಇತ್ತು. ಆತ್ಮಶಕ್ತಿಯ ಅತುಲ ಬಲ ಅವರಿಗೆ ಬೆಂಗಾವಲಾಗಿತ್ತು, ಗಾಂಧೀಜಿಯವರನ್ನು ಪೂಜ್ಯರಾಗಿ ಕಂಡು, ಅನೇಕ ಜನ ಅವರ ಭೆಟ್ಟಿಗಾಗಿ ಬಂದು ಹೋಗುತ್ತಿದ್ದರು. ಬಂದ ಅಥಿತಿಗಳಿಗೆ ಯೋಗ್ಯ ಸತ್ಕಾರ ಮಾಡದೆ ಹಾಗೆಯೇ ಕಳಿಸುತ್ತಲೇ ಇರಲಿಲ್ಲ. ಗಾಂಧೀಜಿಯವರ ಚಟುವಟಿಕೆಗಳಿಗೆ "ಕಸ್ತೂರಬಾ" ಆಪ್ತ ಕಾರ್ಯದರ್ಶಿಯಂತಿದ್ದಳು. ಮನೆಯ ಎಲ್ಲ ಯಜಮಾನಿಕೆ ಅವಳದು. ಅಡಿಗೆ, ಊಟ, ತಾಟು, ಕಸಕಡ್ಡಿ ಬಳಿಯುವ ವರೆಗೂ ಅವರ ಪಾಲಿಗೆ ಸ್ವಾವಲಂಬನದ ಮೊದಲನೇ ಪ್ರಯೋಗವನ್ನು ಗಾಂಧೀಜಿ ತಮ್ಮಲ್ಲಿಯೇ ಮಾಡಿಕೊಂಡಿದ್ದರು. ಮನೆಗೆದ್ದು ಮಾರು ಗೆದಿಯ ಬೇಕಲ್ಲವೆ? ದಿನ ದಿನವು ಅತಿಥಿಗಳು ಗಾಂಧೀಜಿಯವರಿದ್ದೆಡೆಗೆ ಬರುವವರೆ!

ಒಂದು ದಿನ ಒಬ್ಬ ಕ್ರೈಸ್ತ ಸಭ್ಯಗೃಹಸ್ಥ ಗಾಂಧೀಜಿಯವರ ಭೆಟ್ಟಿಗೆ ಬಂದನು. ಆಗ ಊಟದ ಸಮಯ. ಗಾಂಧೀಜಿ ಅವರನ್ನು ಬಿಡಲಿಲ್ಲ. ಊಟಕ್ಕೂ ಕೂಡಿಸಿದರು. ಊಟ ಮುಗಿಸಿ ಹೊರಬಂದು, ಮಾತುಕತೆಯಾಡಿ ಅವರನ್ನು ಕಳಿಸಿ "ಕಸ್ತೂರಬಾ"ಳಿಗೆ ಮೇಲಿನ ಕೋಣೆಯಲ್ಲಿಯ ಟೇಬಲ್ ಮೇಲಿನ ತಾಟು ತೆಗೆದು ಸ್ವಚ್ಛ ಮಾಡು ಎಂದು ಹೇಳಿದರು. "ನಿನ್ನೊಡನೆ ಊಟ ಮಾಡಿದ ಅವರಾರು?" ಸಹಜ ಪ್ರಶ್ನಿಸಿದರು ಕಸ್ತೂರಬಾ. "ಅವರೊಬ್ಬ ಕ್ರೈಸ್ತ ಸಭ್ಯಗೃಹಸ್ಥ" ಎಂದರು ಗಾಂಧೀಜಿ. ಕಸ್ತೂರಬಾ ಅವರು ಹುಬ್ಬು ಗಂಟಿಕ್ಕಿದರು. "ಅವರನ್ನು ಮೇಲ್ವಾವಣಿಗೆ ಕರೆದೊಯ್ದು ಒಂದೇ ಟೇಬಲ್ಲಿನ ಮೇಲೆ ಊಟ ಮಾಡಿದಿರಾ?" ಕೋಪ ತುಂಬಿದನುಡಿಯಲ್ಲಿ ಕೇಳಿದರು ಕಸ್ತೂರಬಾ. "ಮಾಡಬಾರದೆಂದು ನಿಯಮವಿದೆಯೇ"? ಪ್ರಶ್ನಿಸಿದರು ಗಾಂಧೀಜಿ.

"ಮ್ಲೇಂಛನೊಡನೆ ಬಳಿಸುವದು ನನಗೆ ಸರಿ ಎನಿಸಲಾರದು" ಕಸ್ತೂರಬಾ ನುಡಿದರು. "ನಿನಗನಿಸಿದ್ದಲ್ಲಿ ನೀನು ಬಿಡಬಹುದು. ನನಗೆ ಎಲ್ಲರೂ ಒಂದೇ. ಕ್ರೈಸ್ತ–ಮುಸ್ಲಿಂ–ಹಿಂದೂ ಎಂಬ ಭೇದಭಾವನೆಗಳಿಲ್ಲ" ಗಂಭೀರವಾಗಿ ನುಡಿದನು ಗಾಂಧೀಜಿ. "ಹೊರಗೆ ನೀವು ಏನೂ ಮಾಡಿಕೊಳ್ಳಿ, ಮನೆಯಲ್ಲಿಯೂ ಹೀಗೆ ಅಂದರೆ....." ಆರ್ಧಕ್ಕೆ ತಡೆದರು ಕಸ್ತೂರಬಾ.

ಗಾಂಧೀಜಿಯವರು ಸರ್ವಧರ್ಮ ಸಮಾನ ತತ್ವದ ಸತ್ವ ಪರೀಕ್ಷೆ ಇಲ್ಲಿಂದಲೇ ಎದುರಿಸಬೇಕಾಯ್ತು. ಮನೆಗೆದ್ದು ಮಾರು ಗೆದಿಯಬೇಕಲ್ಲವೆ? "ನಿನಗೊಂದು ಹುಚ್ಚು. ಈ ಜಗತ್ತೆ ಒಂದು ದೊಡ್ಡ ಮನೆ ಇರುವಾಗ ನಿನ್ನ ಮನೆ ನನ್ನ ಮನೆ ಎಂದರೆ ಹೇಗಾದೀತು. ಮಾನವ ಕೋಟಿಯೇ ಒಂದು ಕುಟುಂಬದವರಿರುವಾಗ ಹೆಚ್ಚು ಕಡಿಮೆ ಎಲ್ಲಿಂದ ಬಂತು? .....ಸ್ವಚ್ಛ ಮಾಡಿಬಾ ಎಂದರು ಗಾಂಧೀಜಿ.

"ಮ್ಲೇಂಛನ ತಾಟನ್ನು ನಾನು ಮುಟ್ಟಲಾರೆ, ಬಳಿಯಲಾರೆ" ಖಂಡಿತವಾಗಿ ಉತ್ತರಿಸಿದಳು ಕಸ್ತೂರಬಾ. ಗಾಂಧೀಜಿಯವರ ಒಡಲು ಕಂಪಿಸಿತು. ಸತ್ಯದಸಾಧನೆಯ ಹಟಯೋಗಿಗಳು ಅವರಾಗಿದ್ದರು. ರೋಷದಿಂದ ಅಷ್ಟೇ ಖಂಡಿತವಾಗಿ ಕೂಗಿದರು.

"ನೀನು ತಾಟುಗಳನ್ನು ತೊಳೆಯಲೇಬೇಕು, ಹಾಗಿಲ್ಲದೆ ನಾನು ಬಿಡುವದಿಲ್ಲ" ಕಸ್ತೂಬಾರವರೂ ಬಿಟ್ಟಬಾಣದಂತೆ.

"ನನ್ನಿಂದ ಸರ್ವಥಾ ಶಕ್ಯವಿಲ್ಲ" "ನೀವೇನಾದರೂ ಮಾಡಿಕೊಳ್ಳಿ" ಎಂದು ನೆಲಕ್ಕೆ ಕುಸಿದರು. ಗಾಂಧೀಜಿಗೆ ಕೋಪ ಬಂತು.

"ನೀನು ನನ್ನ ಬಳಿ ಇರುವದೇ ಬೇಡ" ನಿನ್ನ ತವರಿಗೆ ಹೊರಟು ಹೋಗು" ಎಂದು ಆರ್ಭಟಿಸಿದರು. ಕೈಹಿಡಿದು ದರದರ ಎಳೆಯುತ್ತ ಬಾಗಿಲಕಡೆಗೆ ನಡೆದರು. ಮುಚ್ಚಿದ ಬಾಗಿಲು ತೆಗೆದು ಹೊರದೂಡಲು ಯತ್ನಿಸಿದರು. ಆಗ ಕಸ್ತೂರಬಾರವರ ಹೃದಯ ಕಂಪಿಸಿತು. ಕಣ್ಣಲ್ಲಿ ನೀರು ಓಕಳಿಯಾಡಿದವು, ಗಾಂಧೀಜಿಯವರನ್ನು ದೈನ್ಯ ದೃಷ್ಟಿಯಿಂದ ನೋಡಿ "ನನ್ನ ಒಂದು ಮಾತು ಕೇಳಿ. ನಿಮ್ಮ ಬಳಿ ಬಿಟ್ಟು ಹೊರಟ ನನನ್ನು ತವರವರು ಕರೆದು ಕೊಳ್ಳುವರೇ? ಹುಟ್ಟಿದ ಮನೆ, ಜನ್ಮವೆತ್ತ ಭೂಮಿ, ಉಣಿಸಿ ತಿನಿಸಿದ ಕೈಗಳನ್ನು ಮರೆತು ನಿಮ್ಮ ಸೇವೆಗಾಗಿ ಬಂದ ನನ್ನನ್ನು ಹೊರಗೆ ದೂಡಿದರೆ, ಈ ಅಪರಿಚಿತ ನಾಡಿನಲ್ಲಿ ನಿಮ್ಮೊಬ್ಬರನ್ನುಳಿದು ನನ್ನವರೆನ್ನುವ ಯಾರೂ ಇಲ್ಲದ ಸ್ಥಳದಲ್ಲಿ ನಾನು ಹೋಗುವದಾದರೂ ಎಲ್ಲಿಗೆ? ನನಗಾರು ಆಶ್ರಯ! ನಮ್ಮ ಈ 'ರಂಭಾಟ' ನೋಡಿ ಜನರು ಏನೆಂದಾರು? ತಾಟು ತೊಳೆಯುವೆ ಕೈಬಿಡಿರಿ....." ಎಂದು ಅಂಗಲಾಚಿದರು.

(ಮುಂದುವರೆಯುವದು)

ಡಾ. ವಿಶ್ವೇಶ್ವರಯ್ಯ

೧

ಕೆಲಗೇರಿ ಕೆರಿ ಕಟ್ಟಿದವರ್‍ಯಾರು? ವಿಶ್ವೇಶ್ವರಯ್ಯಾ
ಬೆಂಗಳೂರ ಪಟ್ಟಣ ಬೆಳಿಸಿದವರ್‍ಯಾರು? ವಿಶ್ವೇಶ್ವರಯ್ಯಾ
ಕಬ್ಬಿಣ ಕಾರ್ಖಾನೆ ನಿಲಿಸಿದರ್‍ಯಾರು? ವಿಶ್ವೇಶ್ವರಯ್ಯಾ
ಕಬ್ಬಿಗೆ ನೀರು ಸಲಿಸಿದರ್‍ಯಾರು? ವಿಶ್ವೇಶ್ವರಯ್ಯಾ
ಜೋಗದ ಮಿಂಚು ಕಂಡವರ್‍ಯಾರು? ವಿಶ್ವೇಶ್ವರಯ್ಯಾ
ಸಾರ್ಥಕ ಜೀವನ ಉಂಡವರ್‍ಯಾರು? ವಿಶ್ವೇಶ್ವರಯ್ಯಾ

೨

ವಿಶ್ವೇಶ್ವರಯ್ಯಾ ಶತಾಯುಷಿ
ಬಡತನ ಕಳೆದರೆ ಭಾಳ ಖುಷಿ
ದುಡಿತವ ಕಲಿತರೆ ಭಾಳ ಖುಷಿ
ಸ್ವಾವಲಂಬನದ ಸುಖ ಗಳಿಸಿ
ಎಲ್ಲರು ಉದ್ಯೋಗವ ಬೆಳಿಸಿ
ಭಿಕ್ಷೆಯ ಬೇಡುವದನು ನಿಲಿಸಿ
ಭಾಗ್ಯದ ಹಾದಿಯ ಕಂಡ ಖುಷಿ.....ವಿ

೩

ಬದುಕುವ ಯೋಗ — ಉದ್ಯೋಗ
ವಶೀಲೆ ಅಲ್ಲಾ — ಬದುಕುವ ಶೀಲಾ
ಗುಣ ಕೌಶಲ್ಯಾ — ಬಾಳಿನ ಕೀಲಾ

ಇಂತಹದು ಇನ್ನೊಂದಿಲ್ಲ

ಆದರ್ಶ ಹಿಂದಿ-ಕನ್ನಡ ವ್ಯಾಕರಣ 1 ಬೆಲೆ: ೧ ರೂಪಾಯಿ.

ಲೇ.: ಎ. ಎಚ್. ಹುಂಡೇಕಾರ ಮತ್ತು ಎಮ್. ಎಚ್. ಬಿಳಲದವರ

ಪ್ರಾಥಮಿಕ ಶಾಲೆಗಳ ೫, ೬ ಮತ್ತು ೭ನೆಯ ಇಯತ್ತೆಗಳ ಹಿಂದಿ ಅಭ್ಯಾಸ ಪತ್ರಿಕೆಗನುಸಾರವಾಗಿ ಬರೆಯಲ್ಪಟ್ಟ ಪ್ರಥಮ ಹಿಂದಿ-ಕನ್ನಡ ವ್ಯಾಕರಣ ಪುಸ್ತಕ!

ಶಿಕ್ಷಕರಿಗೂ ಹಾಗು ವಿದ್ಯಾರ್ಥಿಗಳಿಗೂ ಸುಗಮವಾಗಿ ತಿಳಿಯುವಂತೆ ವ್ಯಾಕರಣದ ವಿವಿಧ ಅಂಗಗಳನ್ನು ಯೋಗ್ಯ ಉದಾಹರಣೆಗಳೊಂದಿಗೆ ವಿವೇಚಿಸಲಾಗಿದೆ. ಇದರ ಬಗ್ಗೆ ಕೆಳಗಿನ ಮಹನೀಯರು ಈ ರೀತಿ ಅಭಿಪ್ರಾಯಪಟ್ಟಿದ್ದಾರೆ:—

೧) ವಿದ್ಯಾರ್ಥಿಗಳಿಗೆ ಹಾಗು ಶಿಕ್ಷಕರಿಗೆ ಸಮರ್ಪಕವಾದ ರೀತಿಯಲ್ಲಿ ಮಾರ್ಗದರ್ಶನ ಮಾಡಬಲ್ಲದು.
ಶ್ರೀ ಆರ್. ಸಿ. ಭೂಸನೂರಮಠ, ಎಂ.ಎ., ರಾ. ಭಾ. ವಿಶಾರದ.

೨) ಹಿಂದಿ ಕಲಿಯಲೆತ್ನಿಸುವ ಸಣ್ಣವರಿಗೂ ದೊಡ್ಡವರಿಗೂ ಈ ಪುಸ್ತಕವು ತುಂಬ ಉಪಯುಕ್ತವಾಗಿದೆ.
ಪ್ರೊ. ಸರೋಜಿನಿ ಮಹಿಷಿ, ಎಂ.ಎ., ಎಲ್‌ಎಲ್. ಬಿ., ರಾ. ಭಾ. ಕತ್ನ ಜನತಾ ಕಾಲೇಜ, ಧಾರವಾಡ.

೩) ಪ್ರಾಥಮಿಕ ಶಾಲೆಗಳ ವಿದ್ಯಾರ್ಥಿ ಮತ್ತು ಶಿಕ್ಷಕರಿಗೆ ಉಪಯುಕ್ತವಾಗುವ ರೀತಿಯಲ್ಲಿ ಬರೆದಿದ್ದಾರೆ.
ಶ್ರೀ ಎ. ಫ್ಹಿ. ಕೌದಿ, ಬಿ. ಎ., ಕಾರ್ಯಾಧ್ಯಕ್ಷ, ಕರ್ನಾಟಕ ಪ್ರಾಂತೀಯ ಹಿಂದಿ ಪ್ರಚಾರ ಸಭಾ, ಧಾರವಾಡ.

೪) ಮಕ್ಕಳ ಮಾತೃಭಾಷೆಯ ವ್ಯಾಕರಣ ಭಾಗಕ್ಕೆ ಹೊಂದಿಕೆಯಾಗಿ ಇದನ್ನು ಸಾಗಿಸಿದ್ದು, ಈ ಹೊತ್ತಿಗೆಯ ವೈಶಿಷ್ಟ್ಯವಾಗಿದೆ. ಶ್ರೀ ಎಸ್. ಎಮ್. ಮೇಗೂರ, ಬಿ.ಎ., ಬಿ.ಟಿ., ಡಿ.ಪಿ.ಈಡಿ., ಡಿ.ಬಿ.ಈ., ಎ.ಓ., ಮು. ಸ್ಕೂಲ ಬೋರ್ಡ, ಧಾರವಾಡ.

೫) ಹಿಂದಿ ಕಲಿಯುವವರಿಗೆ ಕೈ ದೀವಿಗೆಯಾಗಿದೆ! ಶ್ರೀ ಎಸ್. ವಾಯ್. ಶೀಲವಂತ, ಬಿ ಎ., ಎಂ.ಈಡಿ., ಡಿ.ಪಿ.ಈಡಿ.,ಡಿ.ಬಿ.ಈ., ರಾ. ಭಾ. ವಿಶಾರದ, ಎ.ಡಿ.ಇ.ಆಯ್., ಧಾರವಾಡ.

ಮೊದಲನೆಯ ಮುದ್ರಣದ ಪ್ರತಿಗಳು ಬಹಳೇ ಕಡಿಮೆ ಉಳಿದಿವೆ. ತಡಮಾಡುವವರು ಎರಡನೆಯ ಮುದ್ರಣದ ಹಾದಿ ನೋಡುವ ಪ್ರಸಂಗ ಬರುವದು. ಕೂಡಲೇ ಬರೆಯಿರಿ. ಯೋಗ್ಯ ಕಮೀಶನ್ ಕೊಡಲಾಗುವದು.

ಅಧಿಕೃತ ಮಾರಾಟಗಾರರು:— ಗಿರಿಜಾಧವ ಬಿಳಲದವರ ವಿರಕ್ತಮಠಗಲ್ಲಿ, ಧಾರವಾಡ

ಇಲ್ಲಿಯೂ ವಿಚಾರಿಸಿರಿ: (೧) **ಭಾರತ ಬುಕ್ ಡಿಪೋ, ಧಾರವಾಡ** (೨) **ಜೇಕಿನಕಟ್ಟಿ ಬುಕ್ ಡಿಪೋ, ಹಾವೇರಿ**

Regd. No. B.

ಭಾಗ೧ ಕವಿತಾ ಸಂಕಲನ ೧೫೦ **ನಾವು ನಮ್ಮವರು** ಭಾಗ ೨ ಕಥಾ ಸಂಕಲ

(ಪ್ರಾಥಮಿಕ ಶಿಕ್ಷಕ ಸಾಹಿತಿಗಳ ಫೋಟೊ ಪರಿಚಯ ಕಥೆ ಕವನಗಳು)

ಮಾನ್ಯ ಎ. ಸಿ. ದೇವೇಗೌಡರು ಶಿಕ್ಷಣಾಧಿಕಾರಿಗಳು [D. P. I.] ಮೈಸೂರು ರಾಜ್ಯ ಅವರ ಮುನ್ನುಡಿ.

ಮಾನ್ಯ ಸಿದ್ಧಯ್ಯ ಪುರಾಣಿಕ 'ಕಾವ್ಯಾನಂದ'ರು ಡೆ. ಸೆಕ್ರೆಟರಿ ಶಿಕ್ಷಣ ವಿಭಾಗ ಇವರ ಹಿನ್ನುಡಿಗಳು.

- ಕೇವಲ ೩ ರೂಪಾಯಿ [ಅಂಚೆಸೇರಿ] ವಾರ್ಷಿಕ ಚಂದಾ ಹಣದಲ್ಲಿ ೩ನೆಯ ಮಾಲೆಯ ೧–೩ನೆಯ ಕುಸುಮ ಪಡೆಂ
- ಪ್ರಾಥಮಿಕ ಶಿಕ್ಷಕರ ಕಥೆ, ಕಾದಂಬರಿ, ಕವನ, ನಾಟಕಾದಿ ಕೃತಿಗಳು ೪೦೦ ಪುಟಗಳಲ್ಲಿ.
- ಅಗಸ್ಟ ದಿಂದ ಅಗಷ್ಟಕ್ಕೆ ಒಂದು ವರುಷ
- ಬಿಡಿ ಕುಸುಮ ಚಂದಾದಾರರಿಗೆ ೪ ಜೆಲಿಯಲ್ಲಿ [ಅಂ
- ವರ್ಷದ ಮಧ್ಯದಲ್ಲಿ ಚಂದಾದಾರರಾದರೂ ಆ ವರ್ಷದ ಎಲ್ಲ ಪುಸ್ತಕಗಳು ದೊರೆಯುವವು.
- ಇಂದೇ ಚಂದಾಹಣ ಕಳಿಸಿ ತಮ್ಮದೇ ಆದ ಶಿಕ್ಷಕರ ಬಳಗವು ಬೆಳೆವಂತೆ ನೆರವಾಗಿರಿ. ಈ ಅಲ್ಪ ಹಣ ತಮ್ಮ ಶಿಕ್ಷಕ ಏಳ್ಗೆಗೆ ಮೀಸಲು. ಗೆಳೆಯರನ್ನು. ವಾಚನಾಲಯಗಳನ್ನು ಚಂದಾದಾರರನ್ನು ಮಾಡಿ ನೆರವಾಗಿರಿ.

ವಿವರಗಳಿಗೆ: **ಭೂಪತೀ ಸಾಹಿತ್ಯ ಭಂಡಾರ** ಅಂಚೆ: **ಯರಸಾಳ** ಜಿಲ್ಲೆ: **ಬಿಜಾಪುರ**

ಕಲ್ಯಾಣ ಕನ್ನಡ ಗುಡಿಯ ಕಾಣಿಕೆ

ಸುವರ್ಣ ಸಂಧಿ! ಸಚಿತ್ರ ಗ್ರಂಥ!! ಸುಂದರ ಮುದ್ರ

"ಶಿಕ್ಷಣ-ಶಿಕ್ಷಕ-ದರ್ಶನ"

ಶಿಕ್ಷಕರಿಗೂ, ಶಿಕ್ಷಕ ವಿದ್ಯಾರ್ಥಿಗಳಿಗೂ, ಶಿಕ್ಷಣಾಭಿಮಾನಿಗಳಿಗೂ, ಉಪಯುಕ್ತವಾಗುವಂಥ, ತನ ತಣಿಸುವಂಥ, ಶಿಕ್ಷಣ ತಜ್ಞರಿಂದ ಪರಿಶೀಲಿಸಲ್ಪಟ್ಟಂಥ, ಭಾರತದಲ್ಲಿಯ ಮಾನ್ಯ ಮಂತ್ರಿವರ್ಯರಿಂದ, ರಾಜ್ಯಪಾಲ ಶಿಕ್ಷಣಾಧಿಕಾರಿಗಳಿಂದ, ಪ್ರಿನ್ಸಿಪಾಲರಿಂದ, ಸಾಹಿತಿಗಳಿಂದ ಪ್ರಶಂಸೆ ಪಡೆದ ಅಭಿಪ್ರಾಯಗಳುಳ್ಳಂಥ, ಕನ ವಿಶ್ವವಿದ್ಯಾಲಯದ ಉಪ ಕುಲಪತಿಗಳಾದ ರ್ಯಾಂಗ್ಲರ್ ಶ್ರೀ ಡಿ. ಸಿ. ಪಾವಟಿಯವರು ಮುನ್ನುಡಿ ಬರೆ ಅಮೋಘ ಗ್ರಂಥ.

ಶ್ರೀ ನಿಂಬಾಳ ಶಿಕ್ಷಕ ದಂಪತಿಗಳಿಂದ ಸಂಗ್ರಹಿಸಲ್ಪಟ್ಟಿದೆ. ಅಖಿಲ ಕರ್ನಾಟಕದ ಗಣ್ಯ ಶಿಕ್ಷಕ–ಶಿಕ್ಷ ಬಣ್ಣ ಬಣ್ಣಗಳಲ್ಲಿ ೪೧ ಫೋಟೊ ಬ್ಲಾಕ್, ಲೇಖನ, ಪರಿಚಯಗಳುಳ್ಳಂಥ ೪೭೫ ಪುಟಗಳ ಅಮರ ಸಾಹಿತ್ಯ **ಕನ್ನಡದಲ್ಲಿ ಒಂದು ಉತ್ತಮ ಮಾದರಿಯ ಶೈಕ್ಷಣಿಕ ಉದ್ಗ್ರಂಥ.**

ದಿ. ೧೫ ಆಗಸ್ಟ ಸ್ವಾತಂತ್ರ್ಯ ದಿನದಂದು ಮಾನ್ಯ ಶ್ರೀ ಎ. ಎಚ್. ದಳವಾಯಿ, ಎ. ಓ. ಸಾಹೇಬರ ಅ ಯಲ್ಲಿ ಪ್ರೊ. ಬಿ. ಟಿ. ಸಾಸನೂರ ಅವರ ಅಮೃತಹಸ್ತದಿಂದ ಈ ಗ್ರಂಥ ಪ್ರಕಾಶನಗೊಂಡಿದೆ.

ವಿವರಗಳಿಗೆ ಇಂದೇ ಈಗಲೇ ಬರೆಯಿರಿ.

ಸಾದಾ ಪ್ರತಿ ೩ ರೂ.] ವ್ಯಾಪಾರಸ್ಥರಿಗೆ ಧಾರಾಳವಾದ ಕಮೀಷನ್. [ಸುಂದರ ಪ್ರತಿ ೪

ವಿಳಾಸ :– ಶ್ರೀ ನಿಂಬಾಳ ಕಲ್ಯಾಣಪ್ಪ, ಪೋಸ್ಟ:— ತಾಂಬಿ, ಜಿಲ್ಲಾ:— ವಿಜಾಪುರ.

Printed by Shri S. F. Kattimani, at Manohar Power Printing Press, Hubli.
Edited & Published by Sjts. G. M. Joshi, B. M. Shintri, S. R. Tatti & Smt. P. A. Bhas at the Kannada Jeevan Shikshan Office, Govt. Training College for Men. Dhar

ಜೀವನ ಶಿಕ್ಷಣ

ಪ್ರಧಾನ ಸಂಪಾದಕರು : ಶ್ರೀ ಜಿ. ಎಂ. ಜೋಶಿ

ಅಗಸ್ಟ್ ೧೯೬೦

ಭಾಗ ೧ ಕವಿತಾ ಸಂಕಲನ ೧೫೦ **ನಾವು ನಮ್ಮವರು** ಭಾಗ ೨ ಕಥಾ ಸಂಕಲನ

(ಪ್ರಾಥಮಿಕ ಶಿಕ್ಷಕ ಸಾಹಿತಿಗಳ ಫೋಟೊ ಪರಿಚಯ ಕಥೆ ಕವನಗಳು)

ಮಾನ್ಯ ಎ. ಸಿ. ದೇವೇಗೌಡರು ಶಿಕ್ಷಣಾಧಿಕಾರಿಗಳು [D. P. I.] ಮೈಸೂರು ರಾಜ್ಯ ಅವರ ಮುನ್ನುಡಿ.

ಮಾನ್ಯ ಸಿದ್ಧಯ್ಯ ಪುರಾಣಿಕ 'ಕಾವ್ಯಾನಂದ'ರು ಡೆ. ಸೆಕ್ರೆಟರಿ ಶಿಕ್ಷಣ ವಿಭಾಗ ಇವರ ಹಿನ್ನುಡಿಗಳು.

- ಕೇವಲ ೩ರೂಪಾಯಿ [ಅಂಚೆಸೇರಿ] ವಾರ್ಷಿಕ ಚಂದಾ ಹಣದಲ್ಲಿ ೩ನೆಯ ಮಾಲೆಯ ೧-೨ನೆಯ ಕುಸುಮ ಪಡೆಯಿ
- ಪ್ರಾಥಮಿಕ ಶಿಕ್ಷಕರ ಕಥೆ, ಕಾದಂಬರಿ, ಕವನ, ನಾಟಕಾದಿ ಕೃತಿಗಳು ಳಂಂ ಪುಟಗಳಲ್ಲಿ.
- ಅಗಷ್ಟ ದಿಂದ ಅಗಷ್ಟಕ್ಕೆ ಒಂದು ವರುಷ
- ಬಿಡಿ ಕುಸುಮ ಚಂದಾದಾರರಿಗೆ ೫ ಬೆಲೆಯಲ್ಲಿ [ಅಂಚೆ
- ವರ್ಷದ ಮಧ್ಯದಲ್ಲಿ ಚಂದಾದಾರರಾದರೂ ಆ ವರ್ಷದ ಎಲ್ಲ ಪುಸ್ತಕಗಳು ದೊರೆಯುವವು.
- ಇಂದೇ ಚಂದಾಹಣ ಕಳಿಸಿ ತಮ್ಮದೇ ಆದ ಶಿಕ್ಷಕರ ಬಳಗವು ಬೆಳೆವಂತೆ ನೆರವಾಗಿರಿ. ಈ ಅಲ್ಪ ಹಣ ತಮ್ಮ ಶಿಕ್ಷಕ ಏಳ್ಗೆಗೆ ಮೀಸಲು. ಗೆಳೆಯರನ್ನು ವಾಚನಾಲಯಗಳನ್ನು ಚಂದಾದಾರರನ್ನು ಮಾಡಿ ನೆರವಾಗಿರಿ.

ವಿವರಗಳಿಗೆ: **ಭಾರತೀ ಸಾಹಿತ್ಯ ಭಂಡಾರ** ಅಂಚೆ: **ಯರನಾಳ** ಜಿಲ್ಲೆ: **ಬಿಜಾಪುರ**

ಕಲ್ಯಾಣ ಕನ್ನಡ ಗುಡಿಯ ಕಾಣಿಕೆ

ಸುವರ್ಣ ಸಂಧಿ! ಸಚಿತ್ರ ಗ್ರಂಥ!! ಸುಂದರ ಮುದ್ರಣ

"ಶಿಕ್ಷಣ-ಶಿಕ್ಷಕ-ದರ್ಶನ"

ಶಿಕ್ಷಕರಿಗೂ, ಶಿಕ್ಷಕ ವಿದ್ಯಾರ್ಥಿಗಳಿಗೂ, ಶಿಕ್ಷಣಾಭಿಮಾನಿಗಳಿಗೂ, ಉಪಯುಕ್ತವಾಗುವಂಥ, ತನು-ತನಿಸುವಂಥ, ಶಿಕ್ಷಣ ತಜ್ಞರಿಂದ ಪರಿಶೀಲಿಸಲ್ಪಟ್ಟಂಥ, ಭಾರತದಲ್ಲಿಯ ಮಾನ್ಯ ಮಂತ್ರಿವರ್ಯರಿಂದ, ರಾಜ್ಯಪಾಲರಿ ಶಿಕ್ಷಣಾಧಿಕಾರಿಗಳಿಂದ, ಪ್ರಿನ್ಸಿಪಾಲರಿಂದ, ಸಾಹಿತಿಗಳಿಂದ ಪ್ರಶಂಸೆ ಪಡೆದ ಅಭಿಪ್ರಾಯಗಳುಳ್ಳಂಥ, ಕರ್ನಾ ವಿಶ್ವವಿದ್ಯಾಲಯದ ಉಪ ಕುಲಪತಿಗಳಾದ ರ್ಯಾಂಗ್ಲರ್ ಶ್ರೀ ಡಿ. ಸಿ. ಪಾವಟೆಯವರು ಮುನ್ನುಡಿ ಬರೆದ ಅಮೋಘ ಗ್ರಂಥ.

ಶ್ರೀ ನಿಂಬಾಳ ಶಿಕ್ಷಕ ದಂಪತಿಗಳಿಂದ ಸಂಗ್ರಹಿಸಲ್ಪಟ್ಟಿದೆ. ಅಖಿಲ ಕರ್ನಾಟಕದ ಗಣ್ಯ ಶಿಕ್ಷಕ-ಶಿಕ್ಷಕಿ ಬಣ್ಣ ಬಣ್ಣಗಳಲ್ಲಿ ಳಗ ಫೋಟೊ ಬ್ಲಾಕ್, ಲೇಖನ, ಪರಿಚಯಗಳುಳ್ಳಂಥ ೪೭೫ ಪುಟಗಳ ಅಮರ ಸಾಹಿತ್ಯ ಗ್ರ **ಕನ್ನಡದಲ್ಲಿ ಒಂದು ಉತ್ತಮ ಮಾದರಿಯ ಶೈಕ್ಷಣಿಕ ಉದ್ಗ್ರಂಥ.**

ದಿ. ೧೫ ಅಗಸ್ಟ ಸ್ವಾತಂತ್ರ್ಯ ದಿನದಂದು ಮಾನ್ಯ ಶ್ರೀ ಎ. ಎಚ್. ದಳವಾಯಿ, ಎ. ಓ. ನಾಸೇಬರ ಅ ಯಲ್ಲಿ ಪ್ರೊ. ಬಿ. ಟಿ. ಸಾಸನೂರ ಅವರ ಅಮೃತಹಸ್ತದಿಂದ ಈ ಗ್ರಂಥ ಪ್ರಕಾಶನಗೊಂಡಿದೆ.

ವಿವರಗಳಿಗೆ ಇಂದೇ ಈಗಲೇ ಬರೆಯಿರಿ.

ಸಾದಾ ಪ್ರತಿ ೩ ರೂ.] ವ್ಯಾಪಾರಸ್ಥರಿಗೆ ಧಾರಾಳವಾದ ಕಮೀಷನ್. [ಸುಂದರ ಪ್ರತಿ ೪

ವಿಳಾಸ :- ಶ್ರೀ ನಿಂಬಾಳ ಕಲ್ಯಾಣಪ್ಪ, ಹೋಸ್ಟ:— ತಾಂಬಿ, ಜಿಲ್ಲಾ:— ವಿಜಾಪುರ.

Printed by Shri S. F. Kattimani, at Manohar Power Printing Press, Hubli.
Edited & Published by Sjts. G. M. Joshi, B. M. Shintri, S. R. Tatti & Smt. P. A. Bhas at the Kannada Jeevan Shikshan Office, Govt. Training College for Men, Dha

ಜೀವನ ಶಿಕ್ಷಣ

ಪ್ರಧಾನ ಸಂಪಾದಕರು : ಶ್ರೀ ಜಿ. ಎಂ. ಜೋಶಿ

ಆಗಸ್ಟ್ ೧೯೬೦

ಭಾಗ ೧ ಕವಿತಾ ಸಂಕಲನ ೧೫೦ **ನಾವು ನಮ್ಮವರು** ಭಾಗ ೨ ಕಥಾ ಸಂಕಲನ

(ಪ್ರಾಥಮಿಕ ಶಿಕ್ಷಕ ಸಾಹಿತಿಗಳ ಫೋಟೊ ಪರಿಚಯ ಕಥೆ ಕವನಗಳು)

ಮಾನ್ಯ ಎ. ಸಿ. ದೇವೇಗೌಡರು ಶಿಕ್ಷಣಾಧಿಕಾರಿಗಳು [D. P. I.] ಮೈಸೂರು ರಾಜ್ಯ ಅವರ ಮುನ್ನುಡಿ.

ಮಾನ್ಯ ಸಿದ್ಧಯ್ಯ ಪುರಾಣಿಕ 'ಕಾವ್ಯಾನಂದ'ರು ಡೆ. ಸೆಕ್ರೆಟರಿ ಶಿಕ್ಷಣ ವಿಭಾಗ ಇವರ ಹಿನ್ನುಡಿಗಳು.

- ಕೇವಲ ೩ ರೂಪಾಯಿ [ಅಂಚೆಸೇರಿ] ವಾರ್ಷಿಕ ಚಂದಾ ಹಣದಲ್ಲಿ ೩ನೆಯ ಮಾಲೆಯ ೧–೨ನೆಯ ಕುಸುಮ ಪಡೆಯಿ
- ಪ್ರಾಥಮಿಕ ಶಿಕ್ಷಕರ ಕಥೆ, ಕಾದಂಬರಿ, ಕವನ, ನಾಟಕಾದಿ ಕೃತಿಗಳು ೪೦೦ ಪುಟಗಳಲ್ಲಿ.
- ಅಗಷ್ಟ ದಿಂದ ಅಗಷ್ಟಕ್ಕೆ ಒಂದು ವರುಷ
- ಬಿಡಿ ಕುಸುಮ ಚಂದಾದಾರರಿಗೆ ೫ ಬೆಲೆಯಲ್ಲಿ [ಅಂಚೆ
- ವರ್ಷದ ಮಧ್ಯದಲ್ಲಿ ಚಂದಾದಾರರಾದರೂ ಆ ವರ್ಷದ ಎಲ್ಲ ಪುಸ್ತಕಗಳು ದೊರೆಯುವವು.
- ಇಂದೇ ಚಂದಾಹಣ ಕಳಿಸಿ ತಮ್ಮದೇ ಆದ ಶಿಕ್ಷಕರ ಬಳಗವು ಬೆಳೆವಂತೆ ನೆರವಾಗಿರಿ. ಈ ಅಲ್ಪ ಹಣ ತಮ್ಮ ಶಿಕ್ಷಕ ೫ ಏಳ್ಗೆಗೆ ಮೀಸಲು. ಗೆಳೆಯರನ್ನು ವಾಚನಾಲಯಗಳನ್ನು ಚಂದಾದಾರರನ್ನು ಮಾಡಿ ನೆರವಾಗಿರಿ.

ವಿವರಗಳಿಗೆ: **ಭಾರತೀ ಸಾಹಿತ್ಯ ಭಂಡಾರ** ಅಂಚೆ: **ಯರನಾಳ** ಜಿಲ್ಲೆ: **ಬಿಜಾಪುರ**

ಕಲ್ಯಾಣ ಕನ್ನಡ ಗುಡಿಯ ಕಾಣಿಕೆ

ಸುವರ್ಣ ಸಂಧಿ! ಸಚಿತ್ರ ಗ್ರಂಥ!! ಸುಂದರ ಮುದ್ರಣ

"ಶಿಕ್ಷಣ–ಶಿಕ್ಷಕ–ದರ್ಶನ"

ಶಿಕ್ಷಕರಿಗೂ, ಶಿಕ್ಷಕ ವಿದ್ಯಾರ್ಥಿಗಳಿಗೂ, ಶಿಕ್ಷಣಾಭಿಮಾನಿಗಳಿಗೂ, ಉಪಯುಕ್ತವಾಗುವಂಥ, ತಿಳಿಸುವಂಥ, ಶಿಕ್ಷಣ ತಜ್ಞರಿಂದ ಪರಿಶೀಲಿಸಲ್ಪಟ್ಟಂಥ, ಭಾರತದಲ್ಲಿಯ ಮಾನ್ಯ ಮಂತ್ರಿವರ್ಯರಿಂದ, ರಾಜ್ಯಪಾಲರಿ ಶಿಕ್ಷಣಾಧಿಕಾರಿಗಳಿಂದ, ಪ್ರಿನ್ಸಿಪಾಲರಿಂದ, ಸಾಹಿತಿಗಳಿಂದ ಪ್ರಶಂಸೆ ಪಡೆದ ಅಭಿಪ್ರಾಯಗಳುಳ್ಳಂಥ, ಕನಾ ವಿಶ್ವವಿದ್ಯಾಲಯದ ಉಪ ಕುಲಪತಿಗಳಾದ ರ್ಯಾಂಗ್ಲರ್ ಶ್ರೀ ಡಿ. ಸಿ. ಪಾವಟೆಯವರು ಮುನ್ನುಡಿ ಬರೆದ ಅಮೋಘ ಗ್ರಂಥ.

ಶ್ರೀ ನಿಂಬಾಳ ಶಿಕ್ಷಕ ದಂಪತಿಗಳಿಂದ ಸಂಗ್ರಹಿಸಲ್ಪಟ್ಟಿದೆ. ಅಖಿಲ ಕರ್ನಾಟಕದ ಗಣ್ಯ ಶಿಕ್ಷಕ–ಶಿಕ್ಷಕಿ ಬಣ್ಣ ಬಣ್ಣಗಳಲ್ಲಿ ೪೧ ಫೋಟೊ ಬ್ಲಾಕ್, ಲೇಖನ, ಪರಿಚಯಗಳುಳ್ಳಂಥ ೪೭೫ ಪುಟಗಳ ಅಮರ ಸಾಹಿತ್ಯ ಗ ಕನ್ನಡದಲ್ಲಿ ಒಂದು ಉತ್ತಮ ಮಾದರಿಯ ಶೈಕ್ಷಣಿಕ ಉದ್ಗ್ರಂಥ.

ದಿ. ೧೫ ಅಗಸ್ಟ ಸ್ವಾತಂತ್ರ್ಯ ದಿನದಂದು ಮಾನ್ಯ ಶ್ರೀ ಎ. ಎಚ್. ದಳವಾಯಿ, ಎ. ಓ. ಸಾಹೇಬರ ಅ ಯಲ್ಲಿ ಪ್ರೊ. ಬಿ. ಟಿ. ಸಾಸನೂರ ಅವರ ಅಮೃತಹಸ್ತದಿಂದ ಈ ಗ್ರಂಥ ಪ್ರಕಾಶನಗೊಂಡಿದೆ.

ವಿವರಗಳಿಗೆ ಇಂದೇ ಈಗಲೇ ಬರೆಯಿರಿ.

ಸಾದಾ ಪ್ರತಿ ೩ ರೂ.] ವ್ಯಾಪಾರಸ್ಥರಿಗೆ ಧಾರಾಳವಾದ ಕಮೀಷನ್. [ಸುಂದರ ಪ್ರತಿ ೪

ವಿಳಾಸ :– ಶ್ರೀ ನಿಂಬಾಳ ಕಲ್ಯಾಣಪ್ಪ, ಪೋಸ್ಟ:— ತಾಂಬಿ, ಜಿಲ್ಲಾ:— ವಿಜಾಪುರ.

Printed by Shri S. F. Kattimani, at Manohar Power Printing Press, Hubli.
Edited & Published by Sjts. G. M. Joshi, B. M. Shintri, S. R. Tatti & Smt. P. A. Bhas at the Kannada Jeevan Shikshan Office, Govt. Training College for Men, Dhar

ಜೀವನ ಶಿಕ್ಷಣ

ಪ್ರಧಾನ ಸಂಪಾದಕರು : ಶ್ರೀ ಜಿ. ಎಂ. ಜೋಶಿ

ಆಗಸ್ಟ್ ೧೯೬೦

ಜೀವನ ಶಿಕ್ಷಣ

— ಸಂಪಾದಕ ಮಂಡಲ —

ಸಂಚಾಲಕರು: ಶ್ರೀ ಎಸ್. ಜಿ. ಹಂದ್ರಾಳ, ಬಿ.ಎ. (ಆನರ್ಸ), ಎಮ್.ಈಡಿ.,ಡಿ.ಬಿ.ಈಡಿ.,
ಎಜ್ಯುಕೇಶನಲ್ ಇನಸ್ಪೆಕ್ಟರ, ಧಾರವಾಡ

ಪ್ರಧಾನ ಸಂಪಾದಕರು: ಶ್ರೀ ಜಿ. ಎಮ್. ಜೋಶಿ,
ಪ್ರಿನ್ಸಿಪಾಲ, ಗಂಡು ಮಕ್ಕಳ ಸರಕಾರಿ ಟ್ರೇನಿಂಗ ಕಾಲೇಜ, ಧಾರವಾಡ

—: ಸದಸ್ಯರು :—

ಶ್ರೀಮತಿ ಪಿ. ಎ. ಭಾಸ್ಕರ, ಲೇಡಿ ಸುಪರಿಂಟೆಂಡೆಂಟ, ಹೆಣ್ಣು ಮಕ್ಕಳ ಸರಕಾರ ಟ್ರೇನಿಂಗ ಕಾಲೇಜ, ಧಾರವಾಡ

ಶ್ರೀ ಬಿ. ಎಂ. ಶಿಂತ್ರಿ, ಬಿ.ಎ.,ಬಿ.ಟಿ., ನಿವೃತ್ತ ಅಸಿಸ್ಟಂಟ ಎಜ್ಯುಕೇಶನಲ್ ಇನಸ್ಪೆಕ್ಟರ ದಕ್ಷಿಣ ಭಾಗ
(ಮುಂಬಯಿ ಕರ್ನಾಟಕ) ಹಾಗು ಗೌ. ಕಾರ್ಯದರ್ಶಿ ಮತ್ತು ಲಾಯಬ್ರೇರಿಯನ
ಸಾಹಿತ್ಯ ಸಮಿತಿ ಲಿಂಗಾಯತ ವಿದ್ಯಾಭಿವೃದ್ಧಿ ಸಂಸ್ಥೆ, ಧಾರವಾಡ

ಶ್ರೀ ಎಸ್. ಆರ್. ತಟ್ಟಿ, ರಿಟಾಯರ್ಡ ಪ್ರಿನ್ಸಿಪಾಲ, ಪ್ರಾಥಮಿಕ ಶಿಕ್ಷಕರ ಟ್ರೇನಿಂಗ ಕಾಲೇಜ, ನವಲಗುಂದ

ಸಂಪುಟ ೯೬ ಆಗಷ್ಟ ೧೯೬೦ ಸಂಚಿಕೆ

— ಪರಿವಿಡಿ —

೧	ಸಂಪಾದಕೀಯ	....	....
೨	ಜೀವನ ಶಿಕ್ಷಣವೂ ಅಡಳಿತದ ಸಮಸ್ಯೆಗಳೂ	....	ಶ್ರೀ 'ಬಮಶಿಂ'
೩	ಳನೆಯ ವರ್ಗದ ಅಭ್ಯಾಸ ಪತ್ರಿಕೆ	....	....
೪	ಕನ್ನಡ ವರ್ಷ ಪ್ರಾಯೋಜ ಪರೀಕ್ಷೆ ೧೯೬೦	....	....
೫	ತೃತೀಯ ಪಂಚವಾರ್ಷಿಕ ಯೋಜನೆಯ ವಿಹಂಗಮನೋಟ	....	ಶ್ರೀ ತಟ್ಟಿ ಶಾಮರಾಯರು
೬	ಜೀವನ ಶಿಕ್ಷಣದಲ್ಲಿ ಚಟುವಟಿಕೆಗಳು	....	ಶ್ರೀ ಎಸ್. ಎಸ್. ಭೂಸರಡ್ಡಿ
	ಮುಖಪುಟದ ಚಿತ್ರ		ಸಂಯುಕ್ತ ಕರ್ನಾಟಕದ ಕ.ಪೆಯಿಂದ

ಸಂಪಾದಕೀಯ

ಲೇಖಕರಲ್ಲಿ ಭಿನ್ನಹ:

'ಜೀವನ ಶಿಕ್ಷಣ' ಮಾಸಿಕದಲ್ಲಿ ಇನ್ನು ಮುಂದೆ ಪ್ರಕಟವಾಗುವ ಎಲ್ಲ ಲೇಖಗಳಿಗೆ ಪ್ರತಿಫಲ ಕೊಡಬೇಕೆಂದು ಸಂಪಾದಕ ಮಂಡಳದವರು ನಿರ್ಧರಿಸಿರುವುದಾಗಿ ಪ್ರಕಟಿಸಲು ನಮಗೆ ಆನಂದವಾಗುತ್ತದೆ. ಅಚ್ಚಾದ ಪ್ರತಿಯೊಂದು ಪುಟಕ್ಕೆ ಎರಡು ರೂಪಾಯಿಯಂತೆ ಲೇಖಕರಿಗೆ ಪ್ರತಿಫಲ ಕೊಡಲಾಗುವದು. ಆದರೆ ಯಾವ ಒಂದು ಲೇಖಕ್ಕೂ ಐದು ರೂಪಾಯಿಗಿಂತ ಹೆಚ್ಚು ಪ್ರತಿಫಲ ಕೊಡಲಾಗುವದಿಲ್ಲ. ಲೇಖಕರು ತಮ್ಮ ಒಳ್ಳೆ ಲೇಖಗಳನ್ನು ಇನ್ನೂ ಹೆಚ್ಚಿಚ್ಚಾಗಿ ಇನ್ನು ಮುಂದೆ ಕಳಿಸುವರೆಂದು ನಾವು ಬಲವಾಗಿ ಆಶಿಸದೆ ಇರಲಾರೆವು.

ಲೋಕಮಾನ್ಯರ ಪುಣ್ಯತಿಥಿ:

"ಸ್ವರಾಜ್ಯವು ನನ್ನ ಜನ್ಮಸಿದ್ಧ ಹಕ್ಕು" ಮತ್ತು ಅದು ನನಗೆ ದೊರೆಯಲೇಬೇಕು ಎಂದು ಗರ್ಜಿಸಿ, ಅಂದಿನ ಆಳರಸರ ವಿರುದ್ಧ ಇಡೀ ಭಾರತದಾದ್ಯಂತ ಆಂದೋಲನವನ್ನೇ ಹೂಡಿದ ಈ ಶ್ರೇಷ್ಠ ರಾಷ್ಟ್ರಭಕ್ತರು ಅಗಸ್ಟ ದಿ. ೧ ರಂದು ತಮ್ಮ ಇಹಲೋಕಯಾತ್ರೆಯನ್ನು ಮುಗಿಸಿದರು. ಪ್ರತಿ ವರುಷ ಅಗಸ್ಟ ದಿ. ೧ ರಂದು ನಮ್ಮ ರಾಷ್ಟ್ರದ ಒಳಗೂ ಹೊರಗೂ ಲೋಕಮಾನ್ಯ ಟಿಳಕರ ಪುಣ್ಯತಿಥಿಯು ಆಚರಿಸಲ್ಪಡುತ್ತದೆ, ಜನತೆಯ ಉದ್ಧಾರಕ್ಕೂ, ರಾಷ್ಟ್ರದ ಸ್ವಾತಂತ್ರ್ಯಕ್ಕೂ, ತಮ್ಮ ಜೀವನವನ್ನೇ ಮೀಸಲು ಮಾಡಿದ ಮಹಾನುಭಾವರು ಲೋಕಮಾನ್ಯರು. ತಾವು ಪ್ರಾರಂಭಿಸಿದ "ಕೇಸರಿ", "ಮರಾಠಾ" ಪತ್ರಿಕೆಗಳ ಮುಖಾಂತರವೂ ಹಾಗೂ ಗಜಾನನೋತ್ಸವ ಹಾಗೂ ಶಿವಜಯಂತಿ ಮೊದಲಾದ ಹಬ್ಬಗಳ ಆಚರಣೆಯ ಮುಖಾಂತರ, ಮಬ್ಬಿನ ಮುಸುಕಿನಲ್ಲಿ ಮಲಗಿದ್ದ ಜನರನ್ನು ಬಡಿದೆಬ್ಬಿಸಿದರು. ಭಾರತೀಯರ ಹಕ್ಕು-ಬಾಧ್ಯತೆಗಳ ರಕ್ಷಣೆಗಾಗಿ ಆಳರಸರ ವಿರುದ್ಧ ನಿರ್ಭಯವಾಗಿಯೂ, ಬಹಿರಂಗವಾಗಿಯೂ ಆಂದೋಲನ ಹೂಡಿದರು. ಈ ಮಹಾಪುರುಷರಿಂದ ನಡೆದ ಸೇವೆ, ತ್ಯಾಗ, ಹೋರಾಟ, ಕಷ್ಟಸಹಿಷ್ಣುತೆ ಮೊದಲಾದವುಗಳನ್ನು ನೆನೆಯಬೇಕು. ಅವರ ಮಹೋಪಕಾರವನ್ನು ಸ್ಮರಿಸಿ ಅವರ ಬಾಳಿನ ಬೆಳಕನ್ನು ನಮ್ಮ ಬಾಳಿಗೂ ಕಾಣಿಸಿಕೊಳ್ಳಬೇಕು.

ಕವಿ-ರವೀಂದ್ರರ ಪುಣ್ಯತಿಥಿ:

ಈ ವರುಷವೂ ಅಗಸ್ಟ ದಿ. ೭ ರಂದು ಭಾರತೀಯರು ಮಹಾಕವಿ ರವೀಂದ್ರನಾಥ ಠಾಕೂರರ ಪುಣ್ಯತಿಥಿಯನ್ನು ಆಚರಿಸಿದರು. ೧೯೧೦ ರ ಸುಮಾರಕ್ಕೆ ಜಗತ್ ಪ್ರಸಿದ್ಧವಾದ "ಗೀತಾಂಜಲಿ" ಯನ್ನು ಬರೆದರು. ಇದರಲ್ಲಿಯ ಅನೇಕ ಕವನಗಳನ್ನೂ ತಮ್ಮ ಇನ್ನಿತರ ಕವನಗಳನ್ನೂ ಕೂಡಿಸಿ, ಅವರು ಮರು ವರುಷ ಇಂಗ್ಲಂಡಕ್ಕೆ ಹೋದಾಗ ಅಲ್ಲಿ ಅದನ್ನು ಇಂಗ್ಲೀಷ ಭಾಷೆಯಲ್ಲಿ ಪ್ರಸಿದ್ಧಿಸಿದರು. ಈ ಮುಕ್ತಕಾವ್ಯವು ಸಾಹಿತ್ಯಮಾತ್ಯ ಕವಿಗಳ ಲಕ್ಷ್ಯವನ್ನು ಎಳೆಯಿತಿಷ್ಟೇ ಅಲ್ಲದೆ, ಅವರೆಲ್ಲರೂ ಅದೊಂದು ಶ್ರೇಷ್ಠ ಸಾಹಿತ್ಯ ಕೃತಿಯೆಂದು ಬಾಯಿತುಂಬ ಹೊಗಳಿದರು. ೧೯೧೩ ರಲ್ಲಿ ಸಾಹಿತ್ಯಕ್ಕೆ ಕೊಡಬೇಕಾದ ನೊಬೆಲ್ ಪಾರಿತೋಷಕವು ಇವರಿಗೆ ಲಭಿಸಿತು. ರವೀಂದ್ರನಾಥರು ಕೇವಲ ಭಾರತದ ಕವಿಗಳಾಗಿರದೆ ವಿಶ್ವಕವಿಗಳೆಂದು ಮನ್ನಣೆ ಪಡೆದರು. ಅವರ ಮೂಲಕ ಭಾರತವು ವಿಶ್ವಕೀರ್ತಿ ಗಳಿಸಿತು. ಕವಿಗಳಾಗಿದ್ದಂತೆ ಠಾಕೂರರು ಶಿಕ್ಷಣ-ತಜ್ಞರೂ ಆಗಿದ್ದರು. ಶಾಂತಿನಿಕೇತನದಲ್ಲಿ ಸ್ಥಾಪಿಸಿದ ವಿಶ್ವಭಾರತಿಯು ಜಗತ್‌ಪ್ರಸಿದ್ಧವಾಗಿದೆ. ರವೀಂದ್ರರು ಶ್ರೇಷ್ಠ ಕಲೋಪಾಸಕರಿದ್ದರು. ಅವರಿಗೆ ಸಂಗೀತ, ನೃತ್ಯ, ಚಿತ್ರಕಲೆ ಮೊದಲಾದ ಲಲಿತಕಲೆಗಳಲ್ಲಿ ಅಪಾರವಾದ ಆಸ್ಥೆ ಇತ್ತು. ತಮ್ಮ ಕವನಗಳನ್ನು ಸರಾಗವಾಗಿ ತಾವೇ ಅನ್ನುತ್ತಿದ್ದರು. ತಾವು ಬರೆದ ನಾಟಕಗಳಲ್ಲಿ ಮುಖ್ಯ ಪಾತ್ರವನ್ನು ವಹಿಸುತ್ತಿದ್ದರು. ರವೀಂದ್ರರು ಉಜ್ವಲ ರಾಷ್ಟ್ರಭಕ್ತರೂ ಆಗಿದ್ದರು. ಮಹಾತ್ಮರು ಅವರನ್ನು ಯಾವಾಗಲೂ ಗುರುದೇವರೆಂದೇ ಸಂಬೋಧಿಸುತ್ತಿದ್ದರು. ರವೀಂದ್ರರು ವಿಶ್ವದ ಎಲ್ಲ ಭಾಗಗಳಿಗೆ ಪೆಟ್ಟಿಕೊಟ್ಟು ಭಾರತದ ಸಂಸ್ಕೃತಿಯ ಹಿರಿಮೆಯನ್ನು ಬಿತ್ತರಿಸಿದರು. ಹೀಗೆ, ಶ್ರೇಷ್ಠ ಕವಿಗಳಾಗಿಯೂ, ಶಿಕ್ಷಣ ತಜ್ಞರಾಗಿಯೂ, ಕಲಾಭಿಜ್ಞರಾಗಿಯೂ, ಉಜ್ವಲ ರಾಷ್ಟ್ರಭಕ್ತರಾಗಿಯೂ ಭಾರತಮಾತೆಗೆ ಅಪಾರ ಸೇವೆ ಸಲ್ಲಿಸಿದ ರವೀಂದ್ರರ ಪುಣ್ಯತಿಥಿಯನ್ನು ಆಚರಿಸುವದು ಅತ್ಯಂತ ಯೋಗ್ಯವೇ ಆಗಿದೆ.

ವನಮಹೋತ್ಸವ:

ಈ ಸಲವೂ ನಮ್ಮ ರಾಜ್ಯದಲ್ಲಿ ವನಮಹೋತ್ಸವವು ಎಂದಿನಂತೆ ನಡೆಯಿತು. ಅಗಸ್ಟ ಮೊದಲನೇ ಸಪ್ತಾಹವು

ಯನ್ನು ತೆಗೆದಿಡಿಸಲು ಶಿಕ್ಷಣದ ಬಗೆಗೆ ಕಳಕಳಿಯುಳ್ಳವರೆಲ್ಲರು ಹೆಣಗಾಡಬೇಕು.

ಉಪಕರಣ ಸಾಮಗ್ರಿಗಳ ಪೂರೈಕೆ

ಜೀವನ ಶಿಕ್ಷಣ ಸಾಲೆಯು ಶಿಕ್ಷಕ-ಶಿಕ್ಷಕಿಯರು ಈಗ ಉಪಯೋಗಿಸುವ ವಾಡಿಕೆಯ ಉಪಕರಣಗಳಿಂದರೆ ಮುಖ್ಯವಾಗಿ ತಕಲಿಗಳು ಮತ್ತು ಚರಖಾಗಳು. ಹತ್ತಿಯು ಅವರು ಉಪಯೋಗಿಸುವ ಕಚ್ಚಾ ಮಾಲು. ಬೇಸಿಕ್ ಸಾಲೆಯು ಇಡಿಯ ವರುಷ ಪರಿಣಾಮಕಾರಿಯಾಗಿ ಕೆಲಸ ಮಾಡಲು ಸಾಕಷ್ಟು ಪ್ರಮಾಣದಲ್ಲಿ ಇವುಗಳ ಪೂರೈಕೆಯಾಗುವ ಭರವಸೆ ಇರಬೇಕು. ವರ್ಷದ ಪ್ರಾರಂಭದಲ್ಲಿ ಸಾಲೆಯು ತನ್ನ ಕೆಲಸವನ್ನು ಸುರು ಮಾಡುವ ಮುನ್ನ ಇವು ಆ ಸಾಲೆಯ ಕೈಸೇರಬೇಕು. ಬೇಸಿಕ್ ಸಾಲೆಗಳ ಸಂಖ್ಯೆಯು ಚಿಕ್ಕದಿದ್ದರೆ ಮಾತ್ರ, ನಮ್ಮ ರಾಜ್ಯದಲ್ಲಿಯ ಕೇಂದ್ರೀಕೃತವಾದ ಕೊಂಡು ಕೊಳ್ಳುವ ಹಾಗೂ ಹಂಚುವ ಪದ್ಧತಿಯು ಯಶಸ್ವೀಯಾಗಿ ಕೆಲಸ ಮಾಡಬಲ್ಲದು. ಕಾರಣವೆಂದರೆ, ಬೇಡಿಕೆಗಳು ಮರ್ಯಾದಿತವಿರುವದರಿಂದ ಪೂರೈಕೆಗಾರರು ಸುಲಭವಾಗಿ ಪೂರೈಸಬಲ್ಲರು. ಆದರೆ, ಸಾದಾ ಸಾಲೆಗಳು ಅತಿ ದೊಡ್ಡ ಸುಖ್ಯೆಯಲ್ಲಿ ಬೇಸಿಕ್ ಸಾಲೆಗಳಾದರೆ, ಈ ಪದ್ಧತಿಯು ಹೇಗೆ ತಾನೆ ಪರಿಣಾಮಕಾರಿಯಾಗಿ ಕೆಲಸ ಮಾಡಬಲ್ಲದು ? ಅವುಗಳಿಗೆ ಬೇಕಾಗುವ ಕಚ್ಚಾ ಮಾಲು, ತಕಲಿಗಳು, ಚರಖಾಗಳು, ಅವುಗಳ ಸಲಕರಣೆಗಳು, ಇವೆಲ್ಲವುಗಳ ಪ್ರಮಾಣವು ಅತಿ ದೊಡ್ಡದಾಗುವದರಿಂದ ಮೊದಲಿದ್ದ ನಿರ್ದಿಷ್ಟ ಪೂರೈಕೆಯು ಸಾಕಷ್ಟಾಗಲಾರದೆಂದು ಅನುಭವಕ್ಕೆ ಬಾರದೆ ಇರದು. ಮತ್ತು ಕೇಂದ್ರೀಕೃತವಾದ ಕೊಂಡುಕೊಳ್ಳುವ ಮತ್ತು ಹಂಚುವ ಪದ್ಧತಿಯು ಸಮಾಧಾನಕರವಾಗಿ ಸಾಗಲಾರದು. ಇಂತಹ ಪರಿಸ್ಥಿತಿಯು ಉದ್ಭವಿತವಾಗುವ ಮುನ್ನವೇ ಶಿಕ್ಷಣ ಇಲಾಖೆಯು ತಯಾರಿಯಲ್ಲಿರುವದು ಲೇಸು. ನಮ್ಮ ರಾಜ್ಯದಲ್ಲಿಯ ಔದ್ಯೋಗಿಕ ಹಾಗೂ ತಾಂತ್ರಿಕ ಸಾಲೆಗಳು ಈ ಸಮಸ್ಯೆಯನ್ನು ಬಿಡಿಸುವಲ್ಲಿ ಎಷ್ಟರಮಟ್ಟಿಗೆ ಸಹಾಯಕವಾಗಬಲ್ಲವೆಂಬುದನ್ನು ಶೋಧಿಸಿ ನೋಡುವದು ತಪ್ಪಾಗಲಾರದು. ಗ್ರಾಮೋದ್ಯೋಗದ ಕೇಂದ್ರಗಳು ಈಗ ಪ್ರತಿಯೊಂದು ಜಿಲ್ಲೆಯಲ್ಲಿ ಕೆಲಸ ಮಾಡುತ್ತಿವೆಯೆಂಬಂತೆ ತೋರುತ್ತಿದೆ. ಅವು ಆಯಾ ಜಿಲ್ಲೆಗಳಲ್ಲಿಯ ಸಾಲೆಗಳಿಗೆ ಬೇಕಾಗುವ ಉಪಕರಣ–ಸಲಕರಣೆಗಳನ್ನು ಪೂರೈಸಲು ಏಕೆ ಮುಂದೆ ಬರಬಾರದು? ನಮ್ಮ ರಾಜ್ಯದಲ್ಲಿಯ ಚರಖಾ ಕೇಂದ್ರಗಳಿಗೂ ಇದು ಅವಶ್ಯಕವಾದ ಮಾತೇನಲ್ಲ. ಇನ್ನು ಹತ್ತಿಯಂತಹ ಕಚ್ಚಾ ಮಾಲಿನ ಪುರವಠೆಯ ಬಗೆಗೆ ವಿವೇಚಿಸೋಣ. ಹತ್ತಿಯನ್ನು ಕೊಂಡು ಪೂರೈಸುವ ಹೊಣೆಯನ್ನು ಹಲವು ಅಧಿಕೃತ ಸಂಸ್ಥೆಗಳಿಗೆ ಒಪ್ಪಿಸಿ ಕೊಟ್ಟರೆ, ಅದು ಹೆಚ್ಚು ಕಷ್ಟದ್ದೂ ಅನಿವಾರ್ಯವಾಗಿ ಬಹಳಷ್ಟು ತಡವಾಗುವಂತಹದೂ ಆಗುವದಲ್ಲದೆ ಹೆಚ್ಚಿನ ವೆಚ್ಚಕ್ಕೂ ಕಾರಣೀಭೂತವಾಗುವದು. ಯಾಕಂದರೆ ಬೇಸಿಕ್ ಸಾಲೆಗಳು ದೂರ ದೂರದ ಹಳ್ಳಿಗಳಲ್ಲಿರುವದುಂಟು. ಎಷ್ಟೋ ಹಳ್ಳಿಗಳಿಗೆ ರಸ್ತೆಗಳಿರುವದಿಲ್ಲ ಒಂದು ವೇಳೆ ಇದ್ದರೂ ಅವು ಕಚ್ಚಾ ರಸ್ತೆಗಳು; ಬೇಸಿಗೆಯಲ್ಲಿ ಮಾತ್ರ ಚಕ್ಕಡಿಗಳು ಓಡಾಡುವದುಂಟು. ಮಳೆಗಾಲದಲ್ಲಿ ಆ ಹಳ್ಳಿಗಳಿಗೆ ಹೊರಗಿನ ಸಂಪರ್ಕವಿರುವದೆ ಎರಳ; ಕಾಲು ನಡಿಗೆಯಿಂದಲೇ ಆ ಹಳ್ಳಿಗರು ಹೊರಗಿನ ಸಂಪರ್ಕವನ್ನಿಟ್ಟುಕೊಳ್ಳುವದುಂಟು. ಆದುದರಿಂದ ಹತ್ತಿಯಂತಹ ಕಚ್ಚಾ ಮಾಲಿನ ಪೂರೈಕೆಯಲ್ಲಿ ವಿಕೇಂದ್ರೀಕರಣ ಮಾಡಿ ಸ್ಥಾನಿಕವಾಗಿ ಕೊಂಡುಕೊಳ್ಳುವ ವ್ಯವಸ್ಥೆಯನ್ನು ಮಾಡಿಡುವದು ಲೇಸು. ಹೀಗೆ ಮಾಡಿದರೆ ಸಾಲೆಗಳು ತಮಗೆ ಇಡಿಯ ವರುಷ ಬೇಕಾಗುವಷ್ಟು ಹತ್ತಿಯನ್ನು ತಮ್ಮ ಹಳ್ಳಿಯಲ್ಲಿಯೇ ಕೊಂಡುಕೊಳ್ಳಬಹುದು. ಜಯಧರ ಮತ್ತು ಲಕ್ಷ್ಮೀ ಹತ್ತಿಗಳನ್ನೇ ನಮ್ಮಲ್ಲಿಯ ರೈತರು ಬೆಳೆಯುತ್ತಿರುವರು. ಜಯಧರ ಹತ್ತಿಯ ಬೀಜಗಳು ಲಕ್ಷ್ಮೀಹತ್ತಿಯ ಬೀಜಗಳಿಗಿಂತ ಬೇಗನೆ ಉಚ್ಚವದರಿಂದ ನಮ್ಮ ಬೇಸಿಕ್ ಸಾಲೆಗಳಲ್ಲಿ ಜಯಧರ ಹತ್ತಿಯನ್ನೇ ಉಪಯೋಗಿಸುವರೆಂಬುದು ಎಲ್ಲರ ಅನುಭವಕ್ಕೆ ಬಂದ ಮಾತು. ಆದುದರಿಂದ, ಜಯಧರ ಹತ್ತಿಯನ್ನು ಕೊಂಡುಕೊಳ್ಳಬೇಕೆಂಬ ನಿರ್ಬಂಧವನ್ನು ಎಲ್ಲ ಬೇಸಿಕ್ ಸಾಲೆಗಳ ಮೇಲೆ ಹೇರಿದರೆ ಲೇಸಾದೀತೆಂದು ತೋರುತ್ತದೆ. ಸ್ಥಳ–ಸ್ಥಳಗಳಿಂದ ಹತ್ತಿಯನ್ನು ಅರೆಯುವ ವಿಧಾನವೂ ಜಯಧರ ಹತ್ತಿಯು ಹೆಚ್ಚು ತಕ್ಕುದಾಗಿದೆ. ಸಾಲೆಗಳು ಹತ್ತಿಯನ್ನು ಕೊಂಡುಕೊಳ್ಳುವಾಗ ಒಂದು ಮುನ್ನೆಚ್ಚರಿಕೆಯನ್ನು ವಹಿಸುವದವಶ್ಯವಿದೆ. ವರ್ಷದ ಕೊನೆಗೆ ಸ್ವಲ್ಪ ಹತ್ತಿಯು ಉಳಿದರೂ ಚಿಂತೆಯಿಲ್ಲ, ಆದರೆ ಇಡಿಯ ವರುಷ ಅವ ಪ್ರಸಂಗದಲ್ಲಿಯೂ ಅದರ ಕೊರತೆಯಾಗದಷ್ಟು ಕೊಂಡಿಟ್ಟುಕೊಳ್ಳುವದು ಒಳಿತು. ಒಂದು ವೇಳೆ ಕೊರತೆಯಾದರೆ, ನೂಲುವ ಕಾರ್ಯಕ್ರಮವೇ

(೨೦ನೆಯ ಪುಟ ನೋಡಿರಿ)

೪ನೆಯ ವರ್ಗದ ಅಭ್ಯಾಸ ಪತ್ರಿಕೆ

(ಕಳೆದ ಸಂಚಿಕೆಯಿಂದ ಮುಂದುವರಿದುದು.)

ಮಾತೃಭಾಷೆ

೧) ಓದುವದು :—

ಹಿಂದಿನ ವರ್ಗದಲ್ಲಿ ಕಲಿತ ಕೆಲವು ಶಬ್ದಗಳ ಪುನರಾವೃತ್ತಿಯ ಜೊತೆಗೆ ೪ನೆಯ ವರ್ಗದ ಪಠ್ಯಪುಸ್ತಕದ ಪಾಠಗಳಲ್ಲಿ ಸುಮಾರು ೫೦೦ ಹೊಸ ಶಬ್ದಗಳ ಪರಿಚಯವಾಗಬೇಕು. ಉದಾಹರಣೆಗೆ–ಅಭ್ಯಸನಗಳನ್ನೊಳಗೊಂಡು ಪಠ್ಯಪುಸ್ತಕವು 'ಡಿಡೆಮಿ' ಆಕಾರದ ೧೨೮ ಪುಟಗಳನ್ನೊಳಗೊಂಡಿರಬೇಕು. ಕವಿತಾ ಪಾಠಗಳು ಸಹಿತವಾಗಿ ಸುಮಾರು ೪೦ ಪಾಠಗಳಿರಬೇಕು. ಹಿಂದಿನ ತರಗತಿಯಲ್ಲಿ ದೊರಕಿಸಿಕೊಂಡ ಜ್ಞಾನ ಹಾಗು ಕುಶಲತೆಗಳ ಹೆಚ್ಚಿನ ಬೆಳವಣಿಗೆಯು ಈ ವರ್ಗದಲ್ಲಾಗಬೇಕು. ಪಾಠದ ವಿಷಯಗಳಲ್ಲಿ ಬರುವ ಭಾವ ಮತ್ತು ವ್ಯಕ್ತಿಗಳ ಗುಣ ವೈಶಿಷ್ಟ್ಯಗಳು ಇವುಗಳನ್ನು ಮಕ್ಕಳು ಅರಿತು ಆನಂದಿಸುವಂತಾಗಬೇಕು.

೨) ಹೆಚ್ಚಿನ ಓದು :—

ಮೂರನೆಯ ವರ್ಗಕ್ಕಾಗಿ ಶಿಫಾರಸು ಮಾಡಿದ ಮೇಲ್ಕೋದಿನ ಪುಸ್ತಕಗಳಿಗಿಂತಲೂ ಹೆಚ್ಚಿನ ಮಟ್ಟದ ಪೂರಕ ವಾಚನದ ಸಹಾಯದಿಂದ ೩ನೆಯ ವರ್ಗದಲ್ಲಿಯೇ ಪ್ರಾರಂಭಿಸಿದ ಮೌನ ವಾಚನದ ರೂಢಿಯನ್ನು ಮುಂದುವರಿಸುವದು. ಓದುವ ವೇಗವು ತೀವ್ರವಾಗಬೇಕಲ್ಲದೆ, ವಿಚಾರ ಗ್ರಹಣವು ಸುಲಭತರವೂ ಹೆಚ್ಚು ವಿವರವಾಗಿಯೂ ಆಗಬೇಕು. ಮಕ್ಕಳು ತಾವು ಓದಿದ ವಿಷಯಕ್ಕೆ ಸಂಬಂಧಿಸಿ ಕೆಲ ಶಬ್ದಗಳನ್ನೂ ವಾಕ್ಯಗಳನ್ನೂ ಬರೆಯುವಂತೆ ಪ್ರೋತ್ಸಾಹಿಸಬೇಕು.

೩) ಪದ್ಯ :—

೪ನೆಯ ಪುಸ್ತಕದಲ್ಲಿ ೪೦ ಪಾಠಗಳಿರಬೇಕೆಂದು ಹೇಳಿದೆಯಷ್ಟೆ? ಆ ೪೦ ಪಾಠಗಳಲ್ಲಿ ಸುಮಾರು ೧೪೦ ಸಾಲುಗಳನ್ನೊಳಗೊಂಡ ೧೨ ಕವಿತಾ ಪಾಠಗಳಿರಬೇಕು. ಇವು ಸುಲಭ ಪದ್ಯಗಳಾಗಿರಬೇಕಲ್ಲದೆ, ಹೆಚ್ಚಾಗಿ ಕಥಾರೂಪವಾಗಿರಬೇಕು. (ಆಖ್ಯಾನರೂಪದವುಗಳಾಗಿರಬೇಕು) ಅವುಗಳ ಪೈಕಿ ಸುಮಾರು ೭೦ ಸಾಲುಗಳಷ್ಟು ಪದ್ಯಗಳನ್ನು ಮಕ್ಕಳು ಕಂಠಪಾಠ ಮಾಡಬೇಕು. ಮುಖೋದ್ಗತ ಮಾಡಬೇಕಾದ ಪದ್ಯಗಳ ಆಯ್ಕೆಯಲ್ಲಿ ಕೆಲಮಟ್ಟಿಗೆ ಮಕ್ಕಳಿಗೆ ಸ್ವಾತಂತ್ರ್ಯವಿರಬೇಕು. ಪದ್ಯಗಳಲ್ಲಿಯ ಸಮಸ್ತ ಪದಗಳನ್ನು ಅರ್ಥಗ್ರಹಣವು ಸುಲಭವಾಗುವಂತೆ ಬಿಡಿಸಲು ಬರಬೇಕು. ಪದ್ಯದ ಅರ್ಥವು ಸ್ಪಷ್ಟವಾಗುವಂತೆ ಪದ್ಯವನ್ನು ಸರಿಯಾಗಿ ಅನ್ನಲು (ಹಾಡಲು) ಬರಬೇಕು.

೪) ಬರೆಹ :—

ಅಚ್ಚುಕಟ್ಟುತನ, ಸುಸ್ಪಷ್ಟತೆ, ಸಾಲು ಹಾಗು ಶಬ್ದಗಳ ವ್ಯವಸ್ಥೆ ಮುಂತಾದವುಗಳೆಡೆಗೆ ಸಾಕಷ್ಟು ಲಕ್ಷ್ಯ ಪೂರೈಸುತ್ತ ಪಠ್ಯಪುಸ್ತಕದಲ್ಲಿಯ ಪಾಠಗಳನ್ನು ನೋಡಿ ಬರೆಯುವದು. ಬರೆಹದ ತೀವ್ರತೆಯನ್ನು ಮುಂದುವರಿಸುವದು. ಮಾಡುವ ಕೆಲಸವು ಸಾವಕಾಶವಾಗಿ ಬೆಳೆಯುತ್ತ ಹೋಗಬೇಕು. ಶುದ್ಧ ಬರೆಹದ ಕಾರ್ಯವು ಗುಣ ಹಾಗೂ ಪ್ರಮಾಣತೆಗಳೆರಡರಲ್ಲಿಯೂ ಬೆಳೆವಣಿಗೆಯಾಗಬೇಕು. ಚಂದ ಕಾಣುವಂತೆಯೂ ಎದ್ದು ಕಾಣುವಂತೆಯೂ ಬರೆಯುವ ರೂಢಿಯು ಮಕ್ಕಳಲ್ಲಿ ಬೇರೂರಬೇಕು. ಬರೆಹದ ವಾಕ್ಯರಚನೆಯು ಪೂರ್ವದಲ್ಲಿ ಮೌಖಿಕ ವಾಕ್ಯರಚನೆಯು ಆಗಬೇಕು. ಬರೆಹದ ವಿಷಯದ ಮಟ್ಟವು ೩ನೆಯ ವರ್ಗದಲ್ಲಿಯಕಿಂತಲೂ ಹೆಚ್ಚಿನದಾಗಿರಬೇಕಲ್ಲದೆ ಬರೆಹದ ಗಾತ್ರವು ಕ್ರಮದಿಂದ ದೊಡ್ಡದಾಗುತ್ತ ಹೋಗಬೇಕು. ಅಭ್ಯಸನಗಳು ಭೋಜನ ಸಮಾರಂಭಗಳ, ಉತ್ಸವಗಳ, ಜಾತ್ರೆಗಳ ವರ್ಣನೆಗಳಿರಬಹುದು. ಮತ್ತು, ಆರೋಗ್ಯ, ಕ್ಷೇಮ ಸಮಾಚಾರ ಹಾಗು ಶಾಲೆಯ ಚಟುವಟಿಕೆಗಳಿಗೆ ಸಂಬಂಧಿಸಿ ಪತ್ರಗಳಿರಬಹುದು.

ಯನ್ನು ತೆಗೆದಿಡಿಸಲು ಶಿಕ್ಷಣದ ಬಗೆಗೆ ಕಳಕಳಿಯುಳ್ಳವರೆಲ್ಲರು ಹೆಣಗಾಡಬೇಕು.

ಉಪಕರಣ ಸಾಮಗ್ರಿಗಳ ಪೂರೈಕೆ

ಜೀವನ ಶಿಕ್ಷಣ ಸಾಲೆಯ ಶಿಕ್ಷಕ-ಶಿಕ್ಷಕಿಯರು ಈಗ ಉಪಯೋಗಿಸುವ ಮಾಡಿಕೆಯ ಉಪಕರಣಗಳೆಂದರೆ ಮುಖ್ಯವಾಗಿ ತಕಲಿಗಳು ಮತ್ತು ಚರಖಾಗಳು. ಹತ್ತಿಯು ಅವರು ಉಪಯೋಗಿಸುವ ಕಚ್ಚಾ ಮಾಲು. ಬೇಸಿಕ್ ಸಾಲೆಯು ಇಡಿಯ ವರುಷ ಪರಿಣಾಮಕಾರಿಯಾಗಿ ಕೆಲಸ ಮಾಡಲು ಸಾಕಷ್ಟು ಪ್ರಮಾಣದಲ್ಲಿ ಇವುಗಳ ಪೂರೈಕೆಯಾಗುವ ಭರವಸೆ ಇರಬೇಕು. ವರ್ಷದ ಪ್ರಾರಂಭದಲ್ಲಿ ಸಾಲೆಯು ತನ್ನ ಕೆಲಸವನ್ನು ಸುರು ಮಾಡುವ ಮುನ್ನ ಇವು ಆ ಸಾಲೆಯ ಕೈಸೇರಬೇಕು. ಬೇಸಿಕ್ ಸಾಲೆಗಳ ಸಂಖ್ಯೆಯು ಚಿಕ್ಕದಿದ್ದರೆ ಮಾತ್ರ, ನಮ್ಮ ರಾಜ್ಯದಲ್ಲಿಯ ಕೇಂದ್ರೀಕೃತವಾದ ಕೊಂಡು ಕೊಳ್ಳುವ ಹಾಗೂ ಹಂಚುವ ಪದ್ಧತಿಯು ಯಶಸ್ವೀಯಾಗಿ ಕೆಲಸ ಮಾಡಬಲ್ಲದು. ಕಾರಣವೆಂದರೆ, ಬೇಡಿಕೆಗಳು ಮರ್ಯಾದಿತವಿರುವದರಿಂದ ಪೂರೈಕೆಗಾರರು ಸುಲಭವಾಗಿ ಪೂರೈಸಬಲ್ಲರು. ಆದರೆ, ಸಾದಾ ಸಾಲೆಗಳು ಅತಿ ದೊಡ್ಡ ಸಂಖ್ಯೆಯಲ್ಲಿ ಬೇಸಿಕ್ ಸಾಲೆಗಳಾದರೆ, ಈ ಪದ್ಧತಿಯು ಹೇಗೆ ತಾನೆ ಪರಿಣಾಮಕಾರಿಯಾಗಿ ಕೆಲಸ ಮಾಡಬಲ್ಲದು ? ಅವುಗಳಿಗೆ ಬೇಕಾಗುವ ಕಚ್ಚಾ ಮಾಲು, ತಕಲಿಗಳು, ಚರಖಾಗಳು, ಅವುಗಳ ಸಲಕರಣೆಗಳು, ಇವೆಲ್ಲವುಗಳ ಪ್ರಮಾಣವು ಅತಿ ದೊಡ್ಡದಾಗುವದರಿಂದ ಮೊದಲಿದ್ದ ನಿರ್ದಿಷ್ಟ ಪೂರೈಕೆಯು ಸಾಕಷ್ಟಾಗಲಾರದೆಂದು ಅನುಭವಕ್ಕೆ ಬಾರದೆ ಇರದು. ಮತ್ತು ಕೇಂದ್ರೀಕೃತವಾದ ಕೊಂಡುಕೊಳ್ಳುವ ಮತ್ತು ಹಂಚುವ ಪದ್ಧತಿಯು ಸಮಾಧಾನಕರವಾಗಿ ಸಾಗಲಾರದು. ಇಂತಹ ಪರಿಸ್ಥಿತಿಯು ಉದ್ಭವಿತವಾಗುವ ಮುನ್ನವೇ ಶಿಕ್ಷಣ ಇಲಾಖೆಯು ತಯಾರಿಯಲ್ಲಿರುವದು ಲೇಸು. ನಮ್ಮ ರಾಜ್ಯದಲ್ಲಿಯ ಔದ್ಯೋಗಿಕ ಹಾಗೂ ತಾಂತ್ರಿಕ ಸಾಲೆಗಳು ಈ ಸಮಸ್ಯೆಯನ್ನು ಬಿಡಿಸುವಲ್ಲಿ ಎಷ್ಟರಮಟ್ಟಿಗೆ ಸಹಾಯಕವಾಗಬಲ್ಲವೆಂಬುದನ್ನು ಶೋಧಿಸಿ ನೋಡುವದು ತಪ್ಪಾಗಲಾರದು. ಗ್ರಾಮೋದ್ಯೋಗದ ಕೇಂದ್ರಗಳು ಈಗ ಪ್ರತಿಯೊಂದು ಜಿಲ್ಲೆಯಲ್ಲಿ ಕೆಲಸ ಮಾಡುತ್ತಿವೆಯೆಂಬಂತೆ ತೋರುತ್ತಿದೆ. ಅವು ಆಯಾ ಜಿಲ್ಲೆಗಳಲ್ಲಿಯ ಸಾಲೆಗಳಿಗೆ ಬೇಕಾಗುವ ಉಪಕರಣ–ಸಲಕರಣೆಗಳನ್ನು ಪೂರೈಸಲು ಏಕೆ ಮುಂದೆ ಬರಬಾರದು? ನಮ್ಮ ರಾಜ್ಯದಲ್ಲಿಯ ಚರಖಾ ಕೇಂದ್ರಗಳಿಗೂ ಇದು ಅವಶ್ಯಕವಾದ ಮಾತೇನಲ್ಲ. ಇನ್ನು ಹತ್ತಿಯಂತಹ ಕಚ್ಚಾ ಮಾಲಿನ ಪುರವಠೆಯ ಬಗೆಗೆ ವಿವೇಚಿಸೋಣ. ಹತ್ತಿಯನ್ನು ಕೊಂಡು ಪೂರೈಸುವ ಹೊಣೆಯನ್ನು ಹಲವು ಅಧಿಕೃತ ಸಂಸ್ಥೆಗಳಿಗೆ ಒಪ್ಪಿಸಿ ಕೊಟ್ಟರೆ, ಅದು ಹೆಚ್ಚು ಕಷ್ಟದ್ದೂ ಅನಿವಾರ್ಯವಾಗಿ ಬಹಳಷ್ಟು ತಡವಾಗುವಂತಹದೂ ಆಗುವದಲ್ಲದೆ ಹೆಚ್ಚಿನ ವೆಚ್ಚಕ್ಕೂ ಕಾರಣೀಭೂತವಾಗುವದು. ಯಾಕೆಂದರೆ ಬೇಸಿಕ್ ಸಾಲೆಗಳು ದೂರ ದೂರದ ಹಳ್ಳಿಗಳಲ್ಲಿರುವದುಂಟು. ಎಷ್ಟೋ ಹಳ್ಳಿಗಳಿಗೆ ರಸ್ತೆಗಳಿರುವದಿಲ್ಲ ಒಂದು ವೇಳೆ ಇದ್ದರೂ ಅವು ಕಚ್ಚಾ ರಸ್ತೆಗಳು; ಬೇಸಿಗೆಯಲ್ಲಿ ಮಾತ್ರ ಚಕ್ಕಡಿಗಳು ಓಡಾಡುವದುಂಟು. ಮಳೆಗಾಲದಲ್ಲಿ ಆ ಹಳ್ಳಿಗಳಿಗೆ ಹೊರಗಿನ ಸಂಪರ್ಕವಿರುವದೆ ವಿರಳ; ಕಾಲು ನಡಿಗೆಯಿಂದಲೇ ಆ ಹಳ್ಳಿಗರು ಹೊರಗಿನ ಸಂಪರ್ಕವನ್ನಿಟ್ಟುಕೊಳ್ಳುವದುಂಟು. ಆದುದರಿಂದ ಹತ್ತಿಯಂತಹ ಕಚ್ಚಾ ಮಾಲಿನ ಪೂರೈಕೆಯಲ್ಲಿ ವಿಕೇಂದ್ರೀಕರಣ ಮಾಡಿ ಸ್ಥಾನಿಕವಾಗಿ ಕೊಂಡುಕೊಳ್ಳುವ ವ್ಯವಸ್ಥೆಯನ್ನು ಮಾಡಿಡುವದು ಲೇಸು. ಹೀಗೆ ಮಾಡಿದರೆ ಸಾಲೆಗಳು ತಮಗೆ ಇಡಿಯ ವರುಷ ಬೇಕಾಗುವಷ್ಟು ಹತ್ತಿಯನ್ನು ತಮ್ಮ ಹಳ್ಳಿಯಲ್ಲಿಯೇ ಕೊಂಡುಕೊಳ್ಳಬಹುದು. ಜಯಧರ ಮತ್ತು ಲಕ್ಷ್ಮೀ ಹತ್ತಿಗಳನ್ನೇ ನಮ್ಮಲ್ಲಿಯ ರೈತರು ಬೆಳೆಯುತ್ತಿರುವರು. ಜಯಧರ ಹತ್ತಿಯ ಬೀಜಗಳು ಲಕ್ಷ್ಮೀಹತ್ತಿಯ ಬೀಜಗಳಿಗಿಂತ ಬೇಗನೆ ಉಚ್ಚವದರಿಂದ ನಮ್ಮ ಬೇಸಿಕ್ ಸಾಲೆಗಳಲ್ಲಿ ಜಯಧರ ಹತ್ತಿಯನ್ನೇ ಉಪಯೋಗಿಸುವರೆಂಬುದು ಎಲ್ಲರ ಅನುಭವಕ್ಕೆ ಬಂದ ಮಾತು. ಆದುದರಿಂದ, ಜಯಧರ ಹತ್ತಿಯನ್ನು ಕೊಂಡುಕೊಳ್ಳಬೇಕೆಂಬ ನಿರ್ಬಂಧವನ್ನು ಎಲ್ಲ ಬೇಸಿಕ್ ಸಾಲೆಗಳ ಮೇಲೆ ಹೇರಿದರೆ ಲೇಸಾದೀತೆಂದು ತೋರುತ್ತದೆ. ಸಳಿ–ಫಳಿಗಳಿಂದ ಹತ್ತಿಯನ್ನು ಅರೆಯುವ ವಿಧಾನದಲ್ಲಿ ಜಯಧರ ಹತ್ತಿಯು ಹೆಚ್ಚು; ತಕ್ಕುದಾಗಿದೆ. ಸಾಲೆಗಳು ಹತ್ತಿಯನ್ನು ಕೊಂಡುಕೊಳ್ಳುವಾಗ ಒಂದು ಮುನ್ನೆಚ್ಚರಿಕೆಯನ್ನು ವಹಿಸುವದವಶ್ಯವಿದೆ. ವರ್ಷದ ಕೊನೆಗೆ ಸ್ವಲ್ಪ ಹತ್ತಿಯು ಉಳಿದರೂ ಚಿಂತೆಯಿಲ್ಲ, ಆದರೆ ಇಡಿಯ ವರುಷ ಅವ ಪ್ರಸಂಗದಲ್ಲಿಯೂ ಅದರ ಕೊರತೆಯಾಗದಷ್ಟು ಕೊಂಡಿಟ್ಟುಕೊಳ್ಳುವದು ಒಳಿತು. ಒಂದು ವೇಳೆ ಕೊರತೆಯಾದರೆ, ನೂಲುವ ಕಾರ್ಯಕ್ರಮವೆ

(೨೦ನೆಯ ಪುಟ ನೋಡಿರಿ)

೪ನೆಯ ವರ್ಗದ ಅಭ್ಯಾಸ ಪತ್ರಿಕೆ

(ಕಳೆದ ಸಂಚಿಕೆಯಿಂದ ಮುಂದುವರಿದುದು.)

ಮಾತೃಭಾಷೆ

೧) ಓದುವದು :—

ಹಿಂದಿನ ವರ್ಗದಲ್ಲಿ ಕಲಿತ ಕೆಲವು ಶಬ್ದಗಳ ಪುನರಾವೃತ್ತಿಯ ಜೊತೆಗೆ ೪ನೆಯ ವರ್ಗದ ಪಠ್ಯಪುಸ್ತಕದ ಪಾಠಗಳಲ್ಲಿ ಸುಮಾರು ೫೦೦ ಹೊಸ ಶಬ್ದಗಳ ಪರಿಚಯವಾಗಬೇಕು. ಉದಾಹರಣೆಗೆ–ಅಭ್ಯಸನಗಳನ್ನೊಳಗೊಂಡು ಪಠ್ಯಪುಸ್ತಕವು 'ಡಿಮಿ' ಆಕಾರದ ೧೫೮ ಪುಟಗಳನ್ನೊಳಗೊಂಡಿರಬೇಕು. ಕವಿತಾ ಪಾಠಗಳು ಸಹಿತವಾಗಿ ಸುಮಾರು ೪೦ ಪಾಠಗಳಿರಬೇಕು. ಹಿಂದಿನ ತರಗತಿಯಲ್ಲಿ ದೊರಕಿಸಿಕೊಂಡ ಜ್ಞಾನ ಹಾಗು ಕುಶಲತೆಗಳ ಹೆಚ್ಚಿನ ಬೆಳವಣಿಗೆಯು ಈ ವರ್ಗದಲ್ಲಾಗಬೇಕು. ಪಾಠದ ವಿಷಯಗಳಲ್ಲಿ ಬರುವ ಭಾವ ಮತ್ತು ವ್ಯಕ್ತಿಗಳ ಗುಣ ವೈಶಿಷ್ಟ್ಯಗಳು ಇವುಗಳನ್ನು ಮಕ್ಕಳು ಅರಿತು ಆನಂದಿಸುವಂತಾಗಬೇಕು.

೨) ಹೆಚ್ಚಿನ ಓದು :—

ಮೂರನೆಯ ವರ್ಗಕ್ಕಾಗಿ ಶಿಫಾರಸು ಮಾಡಿದ ಮೇಲೋದಿನ ಪುಸ್ತಕಗಳಿಗಿಂತಲೂ ಹೆಚ್ಚಿನ ಮಟ್ಟಿದ ಪೂರಕ ವಾಚನದ ಸಹಾಯದಿಂದ ೩ನೆಯ ವರ್ಗದಲ್ಲಿಯೇ ಪ್ರಾರಂಭಿಸಿದ ಮೌನ ವಾಚನದ ರೂಢಿಯನ್ನು ಮುಂದುವರಿಸುವದು. ಓದುವ ವೇಗವು ತೀವ್ರವಾಗಬೇಕಲ್ಲದೆ, ವಿಚಾರ ಗ್ರಹಣವು ಸುಲಭತರವೂ ಹೆಚ್ಚು ವಿವರ ವಾಗಿಯೂ ಆಗಬೇಕು. ಮಕ್ಕಳು ತಾವು ಓದಿದ ವಿಷಯಕ್ಕೆ ಸಂಬಂಧಿಸಿ ಕೆಲ ಶಬ್ದಗಳನ್ನೂ ವಾಕ್ಯಗಳನ್ನೂ ಬರೆಯುವಂತೆ ಪ್ರೋತ್ಸಾಹಿಸಬೇಕು.

೩) ಪದ್ಯ :—

೪ನೆಯ ಪುಸ್ತಕದಲ್ಲಿ ೪೦ ಪಾಠಗಳಿರಬೇಕೆಂದು ಹೇಳಿದೆಯಷ್ಟೆ? ಆ ೪೦ ಪಾಠಗಳಲ್ಲಿ ಸುಮಾರು ೧೪೦ ಸಾಲುಗಳನ್ನೊಳಗೊಂಡ ೧೨ ಕವಿತಾ ಪಾಠಗಳಿರಬೇಕು. ಇವು ಸುಲಭ ಪದ್ಯಗಳಾಗಿರಬೇಕಲ್ಲದೆ, ಹೆಚ್ಚಾಗಿ ಕಥಾರೂಪ ವಾಗಿರಬೇಕು. (ಆಖ್ಯಾನರೂಪದವುಗಳಾಗಿರಬೇಕು) ಅವುಗಳ ಪೈಕಿ ಸುಮಾರು ೭೦ ಸಾಲುಗಳಷ್ಟು ಪದ್ಯಗಳನ್ನು ಮಕ್ಕಳು ಕಂಠಪಾಠ ಮಾಡಬೇಕು. ಮುಖೋದ್ಗತ ಮಾಡಬೇಕಾದ ಪದ್ಯಗಳ ಆಯ್ಕೆಯಲ್ಲಿ ಕೆಲಮಟ್ಟಿಗೆ ಮಕ್ಕಳಿಗೆ ಸ್ವಾತಂತ್ರ್ಯವಿರಬೇಕು. ಪದ್ಯಗಳಲ್ಲಿಯ ಸಮಸ್ತ ಪದಗಳನ್ನು ಅರ್ಥಗ್ರಹಣವು ಸುಲಭವಾಗುವಂತೆ ಬಿಡಿಸಲು ಬರಬೇಕು. ಪದ್ಯದ ಅರ್ಥವು ಸ್ಪಷ್ಟವಾಗುವಂತೆ ಪದ್ಯವನ್ನು ಸರಿಯಾಗಿ ಅನ್ನಲು (ಹಾಡಲು) ಬರಬೇಕು.

೪) ಬರೆಹ :—

ಅಚ್ಚುಕಟ್ಟುತನ, ಸುಸ್ಪಷ್ಟತೆ, ಸಾಲು ಹಾಗು ಶಬ್ದಗಳ ನ್ಯವಸ್ಥೆ ಮುಂತಾದವುಗಳೆಡೆಗೆ ಸಾಕಷ್ಟು ಲಕ್ಷ್ಯ ಪೂರೈಸುತ್ತ ಪಠ್ಯಪುಸ್ತಕದಲ್ಲಿಯ ಪಾಠಗಳನ್ನು ನೋಡಿ ಬರೆಯುವದು. ಬರೆಹದ ತೀವ್ರತೆಯನ್ನು ಮುಂದು ವರಿಸುವದು. ಮಾಡುವ ಕೆಲಸವು ಸಾವಕಾಶವಾಗಿ ಬೆಳೆಯುತ್ತ ಹೋಗಬೇಕು. ಶುದ್ಧ ಬರೆಹದ ಕಾರ್ಯವು ಗುಣ ಹಾಗೂ ಪ್ರಮಾಣತೆಗಳಿರಡರಲ್ಲಿಯೂ ಬೆಳೆವಣಿಗೆಯಾಗಬೇಕು. ಚಂದ ಕಾಣುವಂತೆಯೂ ಎದ್ದು ಕಾಣುವಂತೆಯೂ ಬರೆಯುವ ರೂಢಿಯು ಮಕ್ಕಳಲ್ಲಿ ಬೇರೂರಬೇಕು. ಬರೆಹದ ವಾಕ್ಯರಚನೆಯ ಪೂರ್ವದಲ್ಲಿ ಮೌಖಿಕ ವಾಕ್ಯರಚನೆಯು ಆಗಬೇಕು. ಬರೆಹದ ವಿಷಯದ ಮಟ್ಟವು ೩ನೆಯ ವರ್ಗದಲ್ಲಿಯಕಿಂತಲೂ ಹೆಚ್ಚಿನದಾಗಿರಬೇಕಲ್ಲದೆ ಬರೆಹದ ಗಾತ್ರವು ಕ್ರಮದಿಂದ ದೊಡ್ಡದಾಗುತ್ತ ಹೋಗಬೇಕು. ಅಭ್ಯಸನಗಳು ಭೋಜನ ಸಮಾರಂಭಗಳ, ಉತ್ಸವಗಳ, ಜಾತ್ರೆಗಳ ವರ್ಣನೆಗಳಿರಬಹುದು. ಮತ್ತು, ಆರೋಗ್ಯ, ಕ್ಷೇಮ ಸಮಾಚಾರ ಹಾಗು ಶಾಲೆಯ ಚಟುವಟಿಕೆಗಳಿಗೆ ಸಂಬಂಧಿಸಿ ಪತ್ರಗಳಿರಬಹುದು.

೫) **ವ್ಯಾಕರಣ:**—

ವಿಧ್ಯುಕ್ತವಾದ (ಸಾಂಪ್ರದಾಯಿಕ ರೀತಿಯಲ್ಲಿ) ವ್ಯಾಕರಣವನ್ನು ಕಲಿಸುವ ಅವಶ್ಯಕತೆ ಇರದು. ಪಠ್ಯ ಪುಸ್ತಕದಲ್ಲಿಯ ಪಾಠಗಳನ್ನು ಕಲಿಸುವ ಮುಂಪೆ ಸಂದರ್ಭಾನುಸಾರವಾಗಿ ಬರುವ ವ್ಯಾಕರಣಾಂಶಗಳನ್ನು ಔಪಚಾರಿಕವಾಗಿ ಕಲಿಸಬಹುದು. (Functional aspects should be stressed) ಪಠ್ಯದಲ್ಲಿಯ ಪಾಠಗಳ ಕೊನೆಗೆ ಕೊಟ್ಟ ಅಭ್ಯಸನಗಳಲ್ಲಿ ವ್ಯಾಕರಣಾಂಶಗಳು ಪದ್ಧತಿಗನುಸಾರವಾಗಿಯೇ ಇರಬಹುದು

ಕನ್ನಡೇತರ ವಿದ್ಯಾರ್ಥಿಗಳಿಗಾಗಿ ಕನ್ನಡ
೪ ನೆಯ ವರ್ಗ

ಪಚ್ಚಿದ ವಾಚನದ ಸಹಾಯದಿಂದ ೩ ನೆಯ ವರ್ಗದಲ್ಲಿ ಸೂಚಿಸಿದಂತೆ ಜಂಣ್ಮೆ ಹಾಗು ರೀತಿಗಳನ್ನು ಮುಂದುವರಿಸಿಕೊಂಡು ಹೋಗಿ ಬೆಳೆಸಬೇಕು. ಕನ್ನಡವೇ ಮಾತೃಭಾಷೆಯಾಗಿ ಉಳ್ಳ ಮಕ್ಕಳು ೨ ನೆಯ ವರ್ಗದ ಕೊನೆಯಲ್ಲಿ ಯಾವ ಒಂದು ಮಟ್ಟವನ್ನು ಮಾತೃಭಾಷೆಯಲ್ಲಿ ಮುಟ್ಟುವರೋ ಅದೇ ಮಟ್ಟವನ್ನು ಕನ್ನಡೇತರ ವಿದ್ಯಾರ್ಥಿಗಳು ೪ ನೆಯ ವರ್ಗದ ಕೊನೆಗೆ ಕನ್ನಡದಲ್ಲಿ ಗಳಿಸುವಂತಾಗಬೇಕು. ಕನ್ನಡದಲ್ಲಿ ಓದಲು, ನಿರರ್ಗಳವಾಗಿ ಮಾತನಾಡಲು ಸಮರ್ಥರಾಗಬೇಕಲ್ಲದೆ, ತಮ್ಮವೇ ಆದ ನಾಲ್ಕು ಚಿಕ್ಕ ಮಾತುಗಳನ್ನು ತಪ್ಪುಗಳಾಗದಂತೆ ಬರೆಯಲು ಬರಬೇಕು.

ಸಾಮಾನ್ಯ ಗಣಿತ
೪ ನೆಯ ವರ್ಗ

ವಿಷಯ	ಪ್ರಾಯೋಗಿಕ ಚಟುವಟಿಕೆಗಳು ಮತ್ತು ಸೂಚನೆಗಳು
೧) ಸಂಖ್ಯಾಪಠಣ ಮತ್ತು ಅಂಕಕರಣ: ೧ ರಿಂದ ೧,೦೦,೦೦೦ ವರೆಗಿನ ಸಂಖ್ಯೆಗಳು.	ಜನಸಂಖ್ಯೆಯ ಕೋಷ್ಟಕಗಳು. ಲಾಭ ಹಾನಿ ಹೇಳಿಕೆಗಳು, ಆಯವ್ಯಯದ ಪಟ್ಟಿಗಳು ಮುಂತಾದವುಗಳಿಗೆ ಸಂಬಂಧಿಸಿ ಭೌಗೋಲಿಕ ಅಂಶಗಳು, ವ್ಯಾಪಾರದ ಅಂಕಿ ಅಂಶಗಳು, ಇವುಗಳಿಗೆ ಸಂಬಂಧಿಸಿ ಪರಿಚಯ ಮಾಡಿ ಕೊಡುವದು. ದೇಶದ ಕುರಿತು ಸಾಮಾನ್ಯ ವಿಷಯಗಳನ್ನು ಸ್ಥೂಲವಾಗಿ ತಿಳಿಸುವದು. ವೃತ್ತಪತ್ರಿಕೆಗಳಲ್ಲಿ ಬರುವ ವಿಷಯ ಪಟ್ಟಿಗಳನ್ನು ಉಪಯೋಗಿಸುವದು.
೨) ಬೇರೀಜ ವಜಾಬಾಕಿ: ೩ ಅಂಕೆಗಳ ವರೆಗಿನ.	ದೊಡ್ಡ ಅಂಕೆಗಳ ಸಂಬಂಧ ಬಂದಾಗ ಅಕಲನೆಗಾಗಿ (ಧಾರಣಕ್ಕಾಗಿ) ಕೇವಲ ಲಕ್ಷದ ಹಾಗು ಒಂದು ಸಾವಿರವನ್ನು ಉಪಯೋಗಿಸಬಹುದು.
೩) ಗುಣಾಕಾರ: ೨೦×೧೦ ರ ವರೆಗಿನ ಕೋಷ್ಟಕದ ಉಜಳಣಿ. ಮೂರು ಅಂಕಗಳುಳ್ಳ ಸಂಖ್ಯೆಯನ್ನು ಎರಡು ಅಂಕಗಳುಳ್ಳ ಸಂಖ್ಯೆಯಿಂದ ಗುಣಿಸುವದು.	ಶಾಲೆಯಲ್ಲಿ ಸಹಕಾರಿ ಭಾಂಡಾರ ಮತ್ತು ಕೈತೋಟ ಇವುಗಳಿಗೆ ಸಂಬಂಧಿಸಿದ ಸಮಸ್ಯೆಗಳು.

೪) ಭಾಗಾಕಾರ:

೨ ಅಂಕಗಳುಳ್ಳ ಸಂಖ್ಯೆಗಳಿಂದ ಭಾಗಿಸುವದು.

೧) ನಿಶ್ಶೇಷವಾಗಿ ಭಾಗಿಸುವದು.

೨) ಶೇಷ ಉಳಿಯುವದು.

ನಿಶ್ಶೇಷವಾಗಿ (೧) ಭಾಗಿಸುವ ಉದಾಹರಣೆಯನ್ನು ಗುಣಾಕಾರದಿಂದ ಸರಿಹೊಂದಿಸಿ ನೋಡುವದು. (ಪಡತಾಳಿಸಿ ನೋಡುವದು.)

೫) ಹಣ:

ರೂಪಾಂತರ ಕರಣ.

"ಅಂಗಡಿ ಆಟ" ಆಡಿಸುವದು. ಒಂದು ವಸ್ತುವಿನ ಬೆಲೆ ಕೊಟ್ಟು ಅನೇಕ ವಸ್ತುಗಳನ್ನು ಮಾರಿದ ಇಲ್ಲವೆ ಕೊಂಡ ಬೆಲೆಯನ್ನು ತೆಗೆಯುವದು. ರಟ್ಟಿನಿಂದ ಮಾಡಿದ ನಾಣ್ಯಗಳನ್ನು ಉಪಯೋಗಿಸಬಹುದು.

೬) ಉದ್ದಳತೆ:

೧) ಯಾರ್ಡು, ಫರ್ಲಾಂಗು, ಮತ್ತು ಮೈಲು ಮೀಟರ, ಕಿಲೋಮೀಟರ ಇವುಗಳ ನಡುವಿನ ಸಂಬಂಧ.

೨) ಫರ್ಲಾಂಗುಗಳನ್ನು ಮೈಲುಗಳಲ್ಲಿ; ಮೈಲುಗಳನ್ನು ಫರ್ಲಾಂಗುಗಳಲ್ಲಿ ರೂಪಾಂತರಿಸುವದು. ಅದರಂತೆ ಮೀಟರುಗಳನ್ನು ಕಿಲೋಮೀಟರುಗಳಲ್ಲಿ, ಕಿಲೋಮೀಟರುಗಳನ್ನು ಮೀಟರುಗಳಲ್ಲಿ ಬದಲಿಸುವದು.

ಓಡುವ ಶರ್ಯತ್ತಿಗಾಗಿ, ೧೦೦ ಇಲ್ಲವೆ ೨೦೦ ಯಾರ್ಡುಗಳ ಪ್ರದೇಶ ರಚನೆ. ರಸ್ತೆಗಳ ನಡುವಿನ ಅಂತರ ಅಳೆಯುವದು.

ಎರಡು ಫರ್ಲಾಂಗಲ್ಲುಗಳ ನಡುವಿನ ಅಂತರವನ್ನು ಅಳೆಯುವದು. ಫರ್ಲಾಂಗಲ್ಲುಗಳ ಮೇಲಿನ ಅಂಕೆಗಳನ್ನು ಓದಿ ತಿಳಿದುಕೊಳ್ಳುವದು. ಒಂದು ಮೈಲು ನಡೆದು ಮಾರ್ಗಕ್ರಮಣ ಮಾಡುವಾಗ ದಾರಿಯಲ್ಲಿ ಹತ್ತುವ ಫರ್ಲಾಂಗಲ್ಲುಗಳನ್ನು ಎಣಿಕೆ ಮಾಡುವದು. ಒಂದು ರೇಲ್ವೆ ಗಾಯಿಡಿನಿಂದ ಮತ್ತು ಒಂದು ರಸ್ತೆಯ ಭೂಪಟದಿಂದ ಎರಡು ಪ್ರದೇಶಗಳಿಗಿರುವ ಅಂತರವನ್ನು ಹೇಳುವದು.

೭) ತೂಕ:

ಪೌಂಡು, ಮಣ ಮತ್ತು ಟನ್ ಇವುಗಳ ಸಂಬಂಧ. ಸ್ಥಾನಿಕ ಪ್ರಮಾಣಿತ ತೂಕಗಳ ಪರಿಚಯವನ್ನು ಮುಂದುವರಿಸುವದು.

ಒಂದು ಪೌಂಡು ತೂಕವನ್ನು ಸಿದ್ಧಪಡಿಸುವದು. ಒಂದು ಪೌಂಡಿನ ಬೇರೆ ಬೇರೆ ವಸ್ತುಗಳನ್ನು ತೂಗಲು ಅದನ್ನು ಉಪಯೋಗಿಸುವದು. ಟನ್ನನ್ನು ಉಪಯೋಗಿಸುವ ಸಾಮಾನ್ಯ ಸನ್ನಿವೇಶಗಳು: ಉದಾ:– ಉರುವಲ ಕಟ್ಟಿಗೆ ಕೊಳ್ಳುವದು ಇತ್ಯಾದಿ. ಕಟ್ಟಿಗೆಯ ಅಡ್ಡಿಗಳ ನಿರೀಕ್ಷಣೆ.

೮) ಗಾತ್ರ: (ಪಾತ್ರ)

ಪ್ರವಾಹಿ ಪದಾರ್ಥಗಳನ್ನು ಅಳೆಯುವದು. ೩ನೆಯ ವರ್ಗದಲ್ಲಿ ಕಲಿಸಿದ ಸ್ಥಾನಿಕ ಅಳತೆಗಳ ಪರಿಚಯವನ್ನು ಮುಂದುವರಿಸುವದು.

ಈ ಮಾನಗಳನ್ನು (ಅಳತೆಗಳನ್ನು) ಉಪಯೋಗಿಸುವ ಸನ್ನಿವೇಶಗಳು, ಔಷಧಗಳ ಅಳತೆಗಳು (Doses). ಒಂದು ಔಂಸು ಗ್ಲಾಸಿನಿಂದ ಅಳೆಯುವದು.

೯) ವೇಳೆ:

ಸೇಕಂದು, ಮಿನೀಟು, ತಾಸು.

೬೦ ಸೇ = ೧ ಮಿನೀಟು.

೬೦ ಮಿ = ೧ ತಾಸು.

ಶೀಲ್ಪಿ ವೇಳಾ ಪತ್ರಿಕೆಯನ್ನು ಓದುವದು. ಆಟಗಳಲ್ಲಿ ಆಟದ ಬೈಲಿನಲ್ಲಿಯ ಸಂಗತಿಗಳನ್ನು ತಿಳಿದುಕೊಳ್ಳುವಂಥ ಸನ್ನಿವೇಶಗಳಲ್ಲಿ-ಒಂದು ಸೇಕಂದಿನವರೆಗೆ ಸರಿಯಾಗಿ ಗಡಿಯಾರವನ್ನು ಓದುವದು.

ಇಂಗ್ಲೀಷ ಹಾಗು ಭಾರತೀಯ ಪಂಚಾಂಗ. ಒಂದು ತಾರೀಖಿನಿಂದ ಇನ್ನೊಂದು ತಾರೀಖಿನ ವರೆಗಾಗುವ ದಿನಗಳ ಎಣಿಕೆ. ಒಂದು ಅವಧಿಯ ನಂತರ ತಾರೀಖನ್ನು ಕಂಡುಹಿಡಿಯವದು.

ಪಂಚಾಂಗ ಅಭ್ಯಾಸ. ಸೂಟಿಗಾಗಿ ಶಾಲೆ ಮುಚ್ಚುವ ದಿನಾಂಕ, ಸೂಟಿಯಾದ ನಂತರ ಶಾಲೆ ಪ್ರಾರಂಭವಾಗುವ ತಾರೀಖು, ಹಾಗು ಅವುಗಳ ನಡುವಿನ ಅಂತರ. ನಿರ್ದಿಷ್ಟ ದಿನಗಳ ಒಂದು ಪ್ರವಾಸದ ಕಾರ್ಯಕ್ರಮವನ್ನು ತಯಾರಿಸುವದು.

೧೦) ಮಿಶ್ರ ಬೇರೀಜು-ವಚಾಬಾಕಿ :

೧) ಹಣ :-ರೂಪಾಯಿ, ನಯೆ ಪೈಸೆ.

೨) ಉದ್ದಳತೆ.

೩) ತೂಕ.

ನಿತ್ಯಜೀವನದಲ್ಲಿ ಒದಗಿಬರುವ ಸನ್ನಿವೇಶಗಳನ್ನು ಬಳಸಿಕೊಂಡು ಆದಷ್ಟು ವ್ಯಾವಹಾರಿಕ ಉದಾಹರಣೆಗಳನ್ನು ತೆಗೆದುಕೊಳ್ಳುವದು. ಮೂಲೋದ್ಯೋಕ್ಕೆ ಸಂಬಂಧಿಸಿದ ಸಾದಾ ಲೆಕ್ಕಗಳನ್ನು ಬರೆದಿಡುವದು. ಶಾಲೆ ಹಾಗು ಗೃಹಜೀವನಕ್ಕೆ ಸಂಬಂಧಿಸಿದ ಮಕ್ಕಳ ಚಟುವಟಿಕೆಗಳ ಲೆಕ್ಕವನ್ನು ಇಡುವದು.

೧೧) ಮಿಶ್ರ ಗುಣಾಕಾರ ಮತ್ತು ಭಾಗಾಕಾರ : ಒಂದು ಅಂಕದ ಸಂಖ್ಯೆಯಿಂದ.

೧) ಹಣ :–ಹಳೆಯ ನಾಣ್ಯಗಳು.
ಹೊಸ ನಾಣ್ಯಗಳು.

೨) ಉದ್ದಳತೆ.

೩) ತೂಕ.

ನಿತ್ಯಜೀವನದಲ್ಲಿ ಬರುವ ವ್ಯಾವಹಾರಿಕ ಉದಾಹರಣೆಗಳು.

೧೨) ಅಪೂರ್ಣಾಂಕಗಳು :

½, ⅓, ¼, ⅕, ⅙ ಮತ್ತು ⅛ ವರೆಗೆ.

೧) ಅಪೂರ್ಣಾಂಕಗಳ ಕಲ್ಪನೆ.

೨) ಅವುಗಳನ್ನು ಓದುವದು–ಬರೆಯುವದು.

೩) ಅಪೂರ್ಣಾಂಕಗಳ ಗುಣಾಕಾರ–ಕಡಿತ ಹೋಗುವಂಥವು ಪೂರ್ಣಾಂಕಗಳಿಂದ.

ಚಿತ್ರಗಳಿಗೆ ಬಣ್ಣ ಕೊಡುವದು ಇತ್ಯಾದಿ ಚಿತ್ರ ನಿರೂಪಣೆಯಿಂದ ಅಪೂರ್ಣಾಂಕಗಳ ಅರ್ಥಮಾಡಿಕೊಡುವುದು. ಒಂದು ಕ್ಷೇತ್ರವನ್ನು (Area) ಭಿನ್ನ ಭಿನ್ನ ಸಮನಾದ ವಿಭಾಗಗಳಲ್ಲಿ ವಿಭಾಗಿಸುವದು. ಅಪೂರ್ಣಾಂಕಗಳ ಕಲ್ಪನೆ ಮಾಡಿಕೊಡಲು ರಟ್ಟಿನ ಮೇಲೆ ಗುರ್ತಿಸಿದಂತೆ ಕತ್ತರಿಸುವದು.

ಕೈತೋಟದ ಕಾರ್ಯ.

½, ¼, ಮತ್ತು ⅛ ಈ ಅಪೂರ್ಣಾಂಕೆಗಳ ಮಗ್ಗಿ ಕೋಷ್ಟಕ ತಯಾರಿಸುವದು.

೧೩) ಘನಾಕೃತಿಗಳು :

ವಕ್ರ ಮತ್ತು ಸಮತಲ ಕ್ಷೇತ್ರಗಳು. ತುದಿಗಳು ಮತ್ತು ಮೂಲೆಗಳು.

ಕಾಗದ ಮತ್ತು ಕಟ್ಟಿಗೆಯ ಮಾದರಿಗಳನ್ನು ಉಪಯೋಗಿಸುವದು. ಕಾಗದದಿಂದ ಶಂಖು ಮತ್ತು ಸ್ಥಂಭಾಕೃತಿಗಳನ್ನು ತಯಾರಿಸಲು ಕಾಗದವನ್ನು ಕತ್ತರಿಸುವದು.

ಆಂಗಡಿಕಾರರು ತಯಾರಿಸಿದ ಶಂಖಾಕೃತಿಯ ಕಾಗದದ ಪುಡಿಕೆಗಳು, ಮಣ್ಣಿನಿಂದ ಮಾದರಿಗಳನ್ನು ತಯಾರಿಸುವದು.

೧೪) ಭೂಮಿತಿ (ರೇಖಾಗಣಿತ):

೧) ಸರಳರೇಖೆ:—ಎರಡು ಬಿಂದುಗಳ ನಡುವಿರುವ ಕನಿಷ್ಠ ದೂರ.

೨) ಮೂಲ ದಿಕ್ಕುಗಳು:
ಪೂರ್ವ, ಪಶ್ಚಿಮ, ಉತ್ತರ, ದಕ್ಷಿಣ.

೩) ಫೂಟು ಪಟ್ಟಿಯ ಅಭ್ಯಾಸ:
ಕೊಟ್ಟ ಉದ್ದಳತೆಗಳ ಸರಳರೇಖೆ ಎಳೆಯುವದು. ಉದ್ದಳತೆಗಳ ತುಲನೆ.

ಉದ್ದಗಳನ್ನು ಅಳೆಯಲು ದಾರದ ಉಪಯೋಗ.

ನೇರವಾದ ರಸ್ತೆಗಳು, ಟೆಲೆಗ್ರಾಫ್ ತಂತಿಗಳು, ಬೆಳಕಿನ ಕಿರಣಗಳು.

ರೇಖೆಗಳ ನೇರವನ್ನು ಪರೀಕ್ಷಿಸುವದು. ನೇರವಾದ ತುದಿ, ಮತ್ತು ಎಳೆದು ಜಗ್ಗಿದ ದಾರವನ್ನು ಉಪಯೋಗಿಸುವದು.

ಸ್ಕೌಟ ಆಟಗಳಿಂದ ದಿಕ್ಕುಗಳ ಪರಿಚಯ ಮಾಡಿಸುವದು. ಆಜ್ಞಾನುಸಾರವಾಗಿ ಹೆಜ್ಜೆ ಹಾಕುತ್ತ ಕೆಲವು ಹೆಜ್ಜೆ ನಡೆಯುವದು.

ಸಾಮಾನ್ಯ-ವಿಜ್ಞಾನ
೪ನೆಯ ವರ್ಗ

ಅಭ್ಯಾಸದ ವಿಷಯಗಳು

೧) ಚೆನ್ನಾಗಿ ಜೀವಿಸುವ ಬಗೆ:
ದೇಹಾರೋಗ್ಯಕ್ಕೆ ದೈಹಿಕಶ್ರಮ, ವ್ಯಾಯಾಮ, ಯೋಗ್ಯ ವಿಶ್ರಾಂತಿ, ನಿದ್ರೆ, ಒಳ್ಳೆಯ ಆಹಾರ, ಶುದ್ಧ ಹವೆ, ಇವುಗಳ ಅವಶ್ಯಕತೆ.
ಉಡುಪು:— ಬೇರೆ ಬೇರೆ ಪ್ರಕಾರಗಳು.
ಹತ್ತಿ, ರೇಶ್ಮೆ, ಉಣ್ಣೆ ಮೊದಲಾದವುಗಳು.
ಕಾಲಕ್ಕೆ ತಕ್ಕಂತೆ ಉಡುಪಿನಲ್ಲಿ ಬದಲಾವಣೆ.
ತಂಬಾಕು, ಮದ್ಯ, ಕಾಫಿ, ಚಹಾ, ಇವುಗಳ ಪರಿಣಾಮಗಳು.
ಸಾಮಾನ್ಯ ಅಂಟುರೋಗಗಳು:
ಮಲೇರಿಯಾ, 'ಫ್ಲ್ಯೂ' ಕಾಲರಾ, ಮೈಲಿಬೇನೆ ಮುಂತಾದವುಗಳೂ ಅವುಗಳನ್ನು ಪ್ರತಿಬಂಧಿಸುವದು.
ಸೊಳ್ಳೆ, ನೊಣ ಇವುಗಳ ಮೂಲಕ ರೋಗ ಪ್ರಸಾರವಾಗುವದು. ರೋಗಗಳನ್ನು ಒಯ್ಯುವ ಸೊಳ್ಳೆಗಳು; ಯಾವ ರೋಗವನ್ನೂ ಒಯ್ಯದ ಸೊಳ್ಳೆಗಳು.
ಪ್ರಥಮ ಚಿಕಿತ್ಸೆ:
ಕಣ್ಣು ಬೇನೆ, ಗಾಯ, ಸುಟ್ಟಗಾಯ, ಬೆಂಕಿಯ ಅಪಘಾತಗಳು.
ಎಲ್ಲಿಬೇಕಲ್ಲಿ ಉಗಳುವದರಿಂದಾಗುವ ಅಪಾಯಗಳು.

ಚಟುವಟಿಕೆಗಳು

೧) ಸೇವಾ ಕಾರ್ಯದಲ್ಲಿ ಕೂಡಿಕೊಳ್ಳುವದು.

೨) ಸೊಳ್ಳೆ, ನೊಣ ಮೊದಲಾದವುಗಳ ಉತ್ಪತ್ತಿ ಸ್ಥಳಗಳಿಗೆ ಹೋಗಿ ಭೆಟ್ಟಿ ಕೊಡುವುದು.

೩) ಡಿ. ಡಿ. ಟಿ. ಸಿಂಪಡಿಸುವದು.

೪) ಕಾಂಪೋಸ್ಟ ಗೊಬ್ಬರ ಕುಣಿಯನ್ನು ತುಂಬಲು ನೆರವಾಗುವದು.

೫) ಇಂಗು ಬಚ್ಚಲ, ಸಾಯಖಾನೆ ಹಾಗು ಮೂತ್ರಾಶಯಗಳನ್ನು ರಚಿಸುವದು.

೬) ರಸ್ತೆಯ ನಿಯಮಗಳನ್ನು ತಿಳಿದು ಅನುಸರಿಸುವದು. (ಸುರಕ್ಷಿತತೆಗಾಗಿ)

೭) ಶಕ್ಯವಿದ್ದಷ್ಟಿಗೆ ಉಗುಳಲು ಮಾಡಿದ ಡಬ್ಬಿಗಳಲ್ಲಿಯೇ ಉಗುಳುವ ಚಟವನ್ನು ರೂಢಿಮಾಡುವದು.

೨) **ಆಹಾರ:**

ಬೇಯಿಸದೆ (ಹಸಿ) ತಿನ್ನಬಹುದಾದ ಕೆಲವು ಆಹಾರ ಪದಾರ್ಥಗಳು– ತೆಂಗಿನಕಾಯಿ, ಸವತೆ, ಟೊಮ್ಯಾಟೊ, ಲಿಂಬೆ, ಮೂಲಂಗಿ ಮುಂತಾದ ವುಗಳು.

ಮಾಂಸ ಹಾಗು ಮೀನುಗಳು ಆಹಾರವೆಂದು.

ಸಮತೋಲ ಆಹಾರ ಹಾಗು ಅದರ ಘಟಕಗಳು.

ಕೊಬ್ಬು, ಕಾಯಿಪಲ್ಲೆಗಳು, ಹಣ್ಣು, ಸಕ್ಕರೆ, ಹಾಲು ಹಾಗು ಹಾಲಿನಿಂದಾದ ಪದಾರ್ಥಗಳು– ಇವುಗಳ ಗುಣ ವಿಶೇಷ ದೃಷ್ಟಿಯಿಂದ ತಿಳಿದು ಕೊಳ್ಳುವದು.

೧) ಕೈ ತೋಟವನ್ನು ನಡೆಯಿಸುವದು.

೨) ಪರಿಸರದಲ್ಲಿ ಉಪಯೋಗಿಸಲ್ಪಡುವ ಆಹಾರ ಪದಾರ್ಥಗಳ ಚಾರ್ಟನ್ ತಯಾರಿಸುವದು. ಹಾಗು ಅವುಗಳ ಪರಸ್ಪರ ಸಂಬಂಧಿ ಗುಣಗಳನ್ನು ಚರ್ಚಿಸುವದು.

೩) ಆಹಾರ ಪದಾರ್ಥಗಳ ಚಿತ್ರಗಳ ಒಂದು ಚಿತ್ರದ ಪುಸ್ತಕವನ್ನು (Album) ತಯಾರಿಸುವದು.

೩) ನಮ್ಮ ಸುತ್ತಲಿನ ಪ್ರಪಂಚ:

ಕಾಡು ಪ್ರಾಣಿಗಳು:

ಯಾವುವಾದರೂ ನಾಲ್ಕು:

ಚಿರ್ಕು, ತೋಳ, ಕಾಡುಹಂದಿ, ನರಿ, ಆನೆ ಮೊದಲಾದವು.

ಮನುಷ್ಯನಿಗೆ ಉಪಯುಕ್ತವಾದವುಗಳು ಮತ್ತು ಅಪಾಯಕರವಾದವುಗಳು.

ಕೀಟಕಗಳು. ಜೇನುನೊಣ, ರೇಶ್ಮೆಹುಳ ಅಥವಾ ಅವುಗಳ ಜೀವನ ಚರಿತ್ರೆ.

ಸೊಳ್ಳೆ, ನೊಣ, ಜೊಂಡಿಗ, ತಗಣಿ ಅವುಗಳ ಬಾಹ್ಯ ಲಕ್ಷಣಗಳು. ಉಪಯುಕ್ತವಾದವುಗಳು ಅಥವಾ ಅಪಾಯಕಾರಕವಾದವುಗಳು.

ಸಸ್ಯಗಳು:– ದಾಸಾಳ, ದತ್ತೂರ, ಅಥವಾ ನೆರೆಯಲ್ಲಿರುವ ಯಾವುದಾದರೂ ದೊಡ್ಡ ಹೂವಿನ ವಿಷಯ ತಿಳಿದುಕೊಳ್ಳುವದು.

ಆಕಾಶ:—

ಗ್ರಹಗಳು.

ಶುಕ್ರ ಮತ್ತು ಮಂಗಳ.

೧) ಪ್ರಾಣಿಗಳ ಪಕ್ಷಿಗಳ ಹಾಗು ಕೀಟಕಗಳ ಚಿತ್ರಗಳನ್ನು ಸಂಗ್ರಹಿಸುವದು.

೨) ಸರ್ಕಸ್ ಇಲ್ಲವೆ ಪ್ರಾಣಿ ಸಂಗ್ರಹಾಲಯವನ್ನು ಸಂದರ್ಶಿಸುವದು.

೩) ಹೂವಿಗೆ ಬಂದು ಕೂಡುವ ಕೀಟಗಳನ್ನು ನಿರೀಕ್ಷಿಸುವದು.

೪) ಶಾಲೆಯಲ್ಲೊಂದು ವಸ್ತು ಸಂಗ್ರಹಾಲಯವನ್ನು ಪ್ರಾರಂಭಿಸುವುದು.

೫) ಶಕ್ಯವಿದ್ದಾಗ ಶುಕ್ರ, ಮಂಗಳ, ಗ್ರಹಗಳನ್ನು ನಿರೀಕ್ಷಿಸುವದು.

ಸಮಾಜಾಭ್ಯಾಸ

(**ಸೂಚನೆ:—** ಕೆಳಗಿನ ವಿಷಯಗಳ ಸ್ಥೂಲಮಾನದ ಪರಿಚಯವು ಸಾಕು.)

೧) ಭಾರತಕ್ಕೂ ಜಗತ್ತಿಗೂ ಸಂಬಂಧಿಸಿ ಮೈಸೂರ ರಾಜ್ಯದ ಸನ್ನಿವೇಶದ ಸಾಮಾನ್ಯ ಪರಿಚಯ.

೨) ಮೈಸೂರು ರಾಜ್ಯದ ಸಾಮಾನ್ಯ ಭೂಗೋಲ. (ವಿವರಣೆ).

ಅ) ಸನ್ನಿವೇಶ (ಬ) ಪ್ರಾಕೃತಿಕ ಸ್ವರೂಪ (ಕ) ಹವಾಗುಣ (ಡ) ಸಹಜಸಸ್ಯ (ಇ) ಮುಖ್ಯ ಬೆಳೆಗಳು ಈ) ಖನಿಜಗಳು (ಕ) ಕೈಗಾರಿಕೆಗಳು ಖ) ಪಾಪನ ಹಾಗು ಸಂಚಾರ ಸಾಧನಗಳು (ಗ) ಆಯಾತ ನಿರ್ಯಾತಗಳು (ಘ) ಮುಖ್ಯ ಪಟ್ಟಣಗಳು.

೩) ಮೈಸೂರು ರಾಜ್ಯದ ವಿವಿಧ ಭಾಗಗಳಲ್ಲಿರುವ ಮಕ್ಕಳ ಜೀವನದಿಂದ ಜನರ ಜೀವನ ಪರಿಚಯ. (ಮಲೆನಾಡ ಮತ್ತು ಮೈದಾನ ಮುಂತಾದ ಭಾಗಗಳಂಥ)

೪) ಈ ಕೆಳಗೆ ಕಾಣಿಸಿದ ಜನರ ಜೀವನ ಚರಿತ್ರೆಯ ಅಭ್ಯಾಸ.

೧) ಮಹಾವೀರ, ಬುದ್ಧ, ಜೀಸಸ್ ಕ್ರೈಸ್ತ, ಮಹಮ್ಮದ ಪೈಗಂಬರ, ಶಂಕರಾಚಾರ್ಯ, ರಾಮಾನುಜಾಚಾರ್ಯ, ಬಸವೇಶ್ವರ, ಮಧ್ವಾಚಾರ್ಯ, ಗುರುನಾನಕ, ರಾಮಕೃಷ್ಣ ಪರಮಹಂಸ ಇವರ ಜೀವನ ಹಾಗು ಸಂದೇಶ.

೨) ಪ್ರಸಿದ್ಧ ರಾಜರು:— ಅಶೋಕ, ಹರ್ಷ, ೨ನೆಯ ಪುಲಿಕೇಶಿ, ರಾಜೇಂದ್ರ ಚೋಳ, ವಿಷ್ಣುವರ್ಧನ, ಕೃಷ್ಣದೇವರಾಯ, ಅಕಬರ, ರಾಣಾಪ್ರತಾಪ, ಶಿವಾಜಿ, ಟೀಪುಸುಲ್ತಾನ ೪ನೆಯ ಕೃಷ್ಣರಾಜ ಒಡೆಯರು.

೩) ಭಾರತದ ಸ್ವಾತಂತ್ರ್ಯಕ್ಕಾಗಿ ಹೋರಾಡಿದ ಕೆಲವು ವೀರರು:— ಕಿತ್ತೂರ ಚೆನ್ನಮ್ಮ, ಝಾಂಸಿ ಲಕ್ಷ್ಮೀಬಾಯಿ, ತಾತ್ಯಾಟೋಪಿ, ದಾದಾಭಾಯಿ ನವರೋಜಿ, ಲೋಕಮಾನ್ಯ ತಿಲಕ, ಮಹತ್ಮಾ ಗಾಂಧಿ, ಸರೋಜನಿ ನಾಯಡು, ವಲ್ಲಭಭಾಯಿ ಪಟೇಲ, ಸುಭಾಸಚಂದ್ರ ಬೋಸ, ಮೌಲಾನಾ ಅಝಾದ, ಪಂಡಿತ ನೆಹರು.

೪) ಆ ಭಾಗದ (ಕರ್ನಾಟಕದ) ಕೆಲವು ಮುಖಂಡರ ಜೀವನ.

ಸೂಚನೆ:— ಯಾವುದೇ ಗುಂಪನ್ನೂ ಅಲಕ್ಷಿಸದೆ ೨೦ ಜೀವನ ಚರಿತ್ರೆ ಅರಿಸಿಕೊಳ್ಳಬೇಕು.

೫) ಮೈಸೂರು ರಾಜ್ಯದ ಆಡಳಿತೆಯು ಹೇಗೆ ನಡೆಯುವದು.

ಅ) ರಾಜ್ಯಪಾಲರು
ಬ) ರಾಜ್ಯದ ವಿಧಾನ ಸಭೆ
ಕ) ರಾಜ್ಯದ ಮಂತ್ರಿ ಮಂಡಲ

ಚಟುವಟಿಕೆಗಳು

೧) ನಕಾಶವನ್ನು ತುಂಬುವದು–ಓದುವದು.
೨) ಬೆಳೆಗಳ, ಖನಿಜಗಳ, ಮಣ್ಣುಗಳ, ಕಲ್ಲುಗಳ, ಹಾಗು ಗೊಬ್ಬರ ಮುಂತಾದವುಗಳ ಮಾದರಿಗಳನ್ನು ಸಂಗ್ರಹಿಸುವದು.
೩) ಪಟಗಳನ್ನು ತಯಾರಿಸುವದು.
೪) ಕೈಗಾರಿಕೆಯ ಹಾಗು ವಾಣಿಜ್ಯ ಕೇಂದ್ರಗಳ ಸಂದರ್ಶನ.
೫) ಐತಿಹಾಸಿಕ ಸ್ಥಳಗಳಿಗೆ ಹಾಗು ಸ್ಮಾರಕ ಸ್ಥಳಗಳಿಗೆ ಪ್ರವಾಸ ಕೈಕೊಳ್ಳುವದು.
೬) ಮೈಸೂರು ರಾಜ್ಯದಲ್ಲಿಯ ಬೇರೆ ಬೇರೆ ಭಾಗಗಳಲ್ಲಿಯ ಮಕ್ಕಳ ಚಿತ್ರಗಳನ್ನು ಹಾಗು ೪ನೆಯ ಸದನಿನಲ್ಲಿ ಅಭ್ಯಸಿಸಿದ ವ್ಯಕ್ತಿಗಳ ಚಿತ್ರಗಳನ್ನು ಸಂಗ್ರಹಿಸುವದು.
೭) ಅಭ್ಯಾಸ ಮಾಡಿದ ವಿಷಯಗಳಿಗೆ ಅನ್ವಯಿಸುವಂಥ ಚಿತ್ರಗಳ ಸಂಗ್ರಹಕ್ಕಾಗಿ ಒಂದು ಚಿತ್ರ ಸಂಗ್ರಹ ಪುಸ್ತಕವನ್ನು (Album) ತಯಾರಿಸುವದು.
೮) ಜಯಂತಿ ಹಾಗು ರಾಷ್ಟ್ರೀಯ ಉತ್ಸವಗಳ ಆಚರಣೆ.
೯) ಶಾಲೆಗಳಲ್ಲಿ ಸ್ವ–ಆಡಳಿತೆಯ ಸಂಘಟನೆ. (ಮಂತ್ರಿ ಮಂಡಲ ರಚನೆ)
೧೦) ವರ್ಗದ (ಮಂತ್ರಿಗಳ) ನಾಯಕರ ಆಯ್ಕೆ.
೧೧) ರಾಷ್ಟ್ರ ಧ್ವಜವನ್ನು ಏರಿಸುವದು ಮತ್ತು ರಾಷ್ಟ್ರ ಗೀತೆಯನ್ನು ಹಾಡುವದು.

ಮೂಲೋದ್ಯೋಗ
ಕಾಗದ ಮತ್ತು ರಟ್ಟಿನ ಕೆಲಸ

(ಟಿಪ್ಪಣಿ :— ಈ ವರ್ಗದಲ್ಲಿ (೪) ಮಕ್ಕಳು ದಪ್ಪವಾದ ರಟ್ಟನ್ನು ೧, ೨ನೆಯ ಸದರಿನಲ್ಲಿಯ ಯಾವ ದಾದರೂ ೨ ವಸ್ತುಗಳನ್ನು ಆರಿಸಿಕೊಂಡು ತಯಾರಿಸಬಹುದು.)

ಪ್ರಾಯೋಗಿಕ	ತಾತ್ವಿಕ
೧) ಪತ್ರಕೋಶದ (File) ರಕ್ಷಾಕವಚ (Cover), ಆದರ (File) ರಟ್ಟುಕಾಗದ (Board), ಖಾತೆಯ ಪತ್ರಸಂಪುಟ, (ಒಂಟಿ ಮತ್ತು ಜೋಡಿ) ಬರವಣಿಗೆಯಲ್ಲಿ ತಳದಲ್ಲಿ ಹಿಡಿಯಲು ರಟ್ಟು, (Writing Pads) (ಇವುಗಳಲ್ಲಿ ಯಾವುದಾದರೂ ಎರಡು ಮಾತ್ರ.)	ಖಾತೆಯ ಪತ್ರಸಂಪುಟದ ಉಪಯೋಗ. ೨ ಪೌಂಡು, ೧೪ ಪೌಂಡು ೧ ಪೌಂಡು, ತೂಕದ ರಟ್ಟುಗಳ ಎಂಬ ಪದದ ಸರಿಯಾದ ತಿಳುವಳಿಕೆ (ಕಲ್ಪನೆ). ಬೇರೆ ಬೇರೆ ವಸ್ತುಗಳಿಗಾಗಿ ಬೇರೆಬೇರೆ ಪ್ರಕಾರದ ರಟ್ಟುಗಳ ಉಪಯೋಗ.
೨) ಸರಿದಾಡುವ ಪೆಟ್ಟಿಗೆ, ಹಂಜಿ ತಕಲಿಗಳ ಪೆಟ್ಟಿಗೆ ವೋಟಿನ ಪೆಟ್ಟಿಗೆ, (ಇವುಗಳಲ್ಲಿ ಯಾವುದಾದರೂ ಎರಡು.)	ರಟ್ಟು ತಯಾರಿಸಲು ಬೇಕಾಗುವ ಕಚ್ಚಾ ಮಾಲು
೩) ಕೇಲು ಉಳ್ಳ ಪೆಟ್ಟಿಗೆಗಳನ್ನು ತಯಾರಿಸುವದು.	ಮೈಸೂರು ರಾಜ್ಯದಲ್ಲಿ ರಟ್ಟು ಹಾಗು ಕಾಗದವ ತಯಾರಾಗುವ ಸ್ಥಳಗಳು.
೪) ತ್ರಿಕೋಣಾಕಾರದ ಮತ್ತು ಚತುಷ್ಕೋಣಾಕಾರದ ತಾಟುಗಳನ್ನು (ಟ್ರೇ) ತಯಾರಿಸುವದು.	ಪುಸ್ತಕಕ್ಕೆ ಹೊದಿಕೆ ಕಟ್ಟುವಲ್ಲಿ ಕ್ಯಾಲಿಕೋ ಉಪಯೋಗ. (ಅಂಟು) ಸರಿಯ ಉಪಯೋಗ ಹಾಗ ತಯಾರಿಸುವ ವಿಧಾನ.
೫) ಪ್ರಾಣಿಗಳ ಆಕೃತಿ ಮತ್ತು ಭೂಮಿತಿಗೆ ಬೇಕಾಗುವ ಪೂಟುಪಟ್ಟಿ, ಮೂರು ಮೂಲೆಯ ಆಕೃತಿಯ ಸಾಧನ ಮುಂತಾದವುಗಳನ್ನು ರಟ್ಟಿನಿಂದ ತಯಾರಿಸುವದು.	ತಾಟುಗಳಿಗೆ (ಟ್ರೇ) ಪಂಚರಂಗಿ ಬಣ್ಣ ಹಾಕ ನಲ್ಲಿ ' ಟರ್ಪೆಂಟಾಯಿಲ್ ' (ಕರ್ಪೂರ ಎಣ್ಣೆ) ಮತ್ತು ಸರಿ ಇವುಗಳ ಅವಶ್ಯಕತೆ. ಪುಸ್ತಕ, ಚಿತ್ರಸಂಪುಟ (Album) ಹಾಗು ಹೊದಿಕೆ ಇವುಗಳನ್ನು ಸುಂದ ಗೊಳಿಸುವ ಅವಶ್ಯಕತೆ. ಅಂಟಿನ ಸರಿಯನ್ನು ತಯಾರಿಸುವಲ್ಲಿ ಸೊಂಕ ನಿವಾರಕ ವಸ್ತುಗಳ ಉಪಯೋಗ.
೬) ಚಿತ್ರ ಸಂಪುಟ, ದೀಪಕ್ಕೆ ಹಾಕಲು ಮುಚ್ಚಳ (ಮರೆ) ಗಳನ್ನು ತಯಾರಿಸುವದು.	ಮಾಡುವ ವಸ್ತುಗಳ ಬೆಲೆಯ ಅಂದಾಜು ಕಟ್ಟ ವದು. ಅಥವಾ ಸಿದ್ಧವಸ್ತುವಿಗೆ ತಗಲಿದ ವೆಚ್ಚವನ್ನ ಕಂಡುಹಿಡಿಯುವದು.
೭) ತಟ್ಟೆಗೆ (ತಾಟು–ಟ್ರೇ) ಪುಚರಂಗಿ ಬಣ್ಣ ಹಾಕುವದು. ಮತ್ತು ಕತ್ತರಿಸಿದ ಚಿತ್ರ ಮತ್ತು ಆಕೃತಿಗಳ ಸಹಾಯದಿಂದ ಸಿಂಚನ ಮಾಡುವದು.	ಪೇಟೆಯಿಂದ ಕೊಂಡುಕೊಳ್ಳುವದಕ್ಕಿಂತಲೂ ತಮ್ಮ ವಸ್ತುಗಳನ್ನು ತಾವೇ ಸ್ವತಃ ಸ್ವಂತ ಉಪಯೋಗಕ್ಕಾ ತಯಾರು ಮಾಡಿಕೊಳ್ಳುವದರ ಮಹತ್ವ.

೮) ಸಾದಾ ರೀತಿಯಲ್ಲಿ ಪುಸ್ತಕಕ್ಕೆ ಹೊದಿಕೆ ಹಾಕುವದು. (ಪುಸ್ತಕ ಬಾಯಿಂಡಿಂಗ). ....

೯) ಸೊಂಕು ನಿವಾರಕ ವಸ್ತುಗಳನ್ನು ಉಪಯೋಗಿಸಿ ಅಂಟು-ಸರಿಯನ್ನು ತಯಾರಿಸುವದು. ....

೧೦) ಬಣ್ಣದ ಕಾಗದದಿಂದ ದೃಶ್ಯಗಳನ್ನು (Scenes) ತಯಾರಿಸುವದು. ....

೧೧) ರುಬ್ಬಿದ ತಿರುಳಿನಿಂದ (Pulp) ವಸ್ತುಗಳನ್ನು ತಯಾರಿಸುವದು. ....

ಕೈತೋಟದ ಕೆಲಸ

ಸೂಚನೆ: ಈ ವರ್ಗಕ್ಕೆ ತೋಟದ ಕೆಲಸಗಳಿಗಾಗಿ ಒಂದು ಗುಂಟೆ ವಿಸ್ತೀರ್ಣವಾದ ಜಮೀನು ಇದೆ ಎಂದು ಪರಿಗಣಿಸಲಾಗಿದೆ. ಈ ವರ್ಗದ ವಿದ್ಯಾರ್ಥಿಗಳು ೨ನೆಯ ವರ್ಗದವರಿಗಾಗಿ ಮಡಿಗಳನ್ನು ಮಾಡುವರು. ಮಳೆಗಾಲದಲ್ಲಿ ಬೆಳೆಯಬಹುದಾದ ಒಂದು ತೊಪ್ಪಲ ಪಲ್ಲೆ ಹಾಗು ಇನ್ನೊಂದು ಪಲ್ಲೆ–ಹೀಗೆ ಕನಿಷ್ಠ ಎರಡು ಸ್ಥಾನಿಕ ಪಲ್ಲೆಗಳನ್ನು ಬೆಳೆಯಬೇಕು. ನೀರಿನ ಅನುಕೂಲತೆ ಇದ್ದಲ್ಲಿ ಚಳಿಗಾಲದಲ್ಲಿಯೂ ಕೂಡ ಕ್ಯಾಬೀಜ, ನವಲಕೋಲ, ಕಾಲಿಫ್ಲಾವರ ಮುಂತಾದ ಪಲ್ಲೆಗಳನ್ನು ಬೆಳೆಯಬೇಕು. ಬಟಾಟೆ, ಗೆಣಸು, ಉಳ್ಳೇಗಡ್ಡಿ ಹಾಗು ಬಳ್ಳೊಳ್ಳಿಗಳನ್ನೂ ಬೆಳೆಯಬೇಕು. ಸಾಧ್ಯವಿದ್ದರೆ ಹತ್ತಿಯನ್ನೂ ಬೆಳೆಯ ಬಹುದು. ಒಕ್ಕಲಿಗನ ಬೆಳೆಯ ಪಂಚಾಂಗವನ್ನು ತಯಾರಿಸಬೇಕು. ವೈಯಕ್ತಿಕ ಹಾಗು ಸಾಮೂಹಿಕ ಮಡಿಗಳಲ್ಲಿ ಮಾಡಿದ ಕೆಲಸದ ವಿವರವನ್ನು ವಿದ್ಯಾರ್ಥಿಗಳು ಬರೆದಿಡಬೇಕು.

ಪ್ರಾಯೋಗಿಕ (ಚಟುವಟಿಕೆಗಳು)

೧) ೫′×೪′ ವಿಸ್ತಾರದ ವೈಯಕ್ತಿಕ ಮಡಿಗಳು ಹಾಗು ೧೦′×೧೦′ ರ ಎರಡು ಸಾಮೂಹಿಕ ಮಡಿಗಳನ್ನು ತಯಾರಿಸುವದು. ಈ ಎರಡು ಸಾಮೂಹಿಕ ಮಡಿಗಳಲ್ಲಿ ಒಂದು ಅಗಿಗಳನ್ನು ತಯಾರಿಸುವದರ ಸಲುವಾಗಿ ಇಡಬೇಕು.

ಅ) ಅಗೆಯುವದು.

ಬ) ಮಡಿಗಳನ್ನು ರಚಿಸುವದು.

ಕ) ಮಡಿಯನ್ನು ಸಿದ್ಧಗೊಳಿಸುವದು.

ಡ) ಗೊಬ್ಬರ ಹಾಕುವದು.

ತಾತ್ವಿಕ

ಮಡಿಗಳನ್ನು ಅಳೆಯುವದು. ಅವಶ್ಯವಾದ ಗೊಬ್ಬರದ ಪ್ರಮಾಣವನ್ನು ಕಂಡು ಹಿಡಿಯುವದು.

ಎರಡು ಮಡಿಗಳ ನಡುವೆ ಪಾಯ್ದಾಡಲು ಇರಬೇಕಾದ ಸ್ಥಳದ ಅವಶ್ಯಕತೆ.

ಅಗೆಯುವದಕ್ಕಾಗಿ ಉಪಯೋಗಿಸುವ ಬೇರೆ ಬೇರೆ ಪ್ರಕಾರದ ಉಪಕರಣಗಳು.

ಹೆಂಟೆಗಳನ್ನು ಒಡೆಯುವದರ ಅವಶ್ಯಕತೆ.

೧. ಮಣ್ಣಿನ ಅಭ್ಯಾಸ

ಮಣ್ಣು ಆಗುವ ರೀತಿಯ ಪ್ರಾಥಮಿಕ ಅಭ್ಯಾಸ.

ಬೇರೆ ಬೇರೆ ಪ್ರಕಾರದ ಮಣ್ಣುಗಳ ಪ್ರಾಥಮಿಕ-ಅಭ್ಯಾಸ– ಉಸುಕು, ಜೇಡಿ ಮಣ್ಣು ಮೊದಲಾದ ಗೊಬ್ಬರ ಹಾಕಿ ಮಣ್ಣನ್ನು ಫಲವತ್ತಾಗಿ ಮಾಡುವಿಕೆ.

೨) ಮಡಿಗಳಲ್ಲಿ ಮತ್ತು ಅಗಿಗಳಿಗಾಗಿ ಸಿದ್ಧವಾದ ಮಡಿಯಲ್ಲಿ ಬೀಜ ಬಿತ್ತುವದು.

ಉತ್ತಮ ಬೀಜದ ಲಕ್ಷಣಗಳು :

ಉತ್ತಮ ಬೀಜಗಳನ್ನು ಆರಿಸುವದು. ಅಗಿಗಳಿಗಾಗಿ ಸಿದ್ಧಗೊಳಿಸಿದ ಮಡಿಗಳ ಹಾಗು ಸಸಿಗಳ ರಕ್ಷಣೆ.

ಬಿತ್ತುವ ಬೇರೆ ಬೇರೆ ಪ್ರಕಾರಗಳು :

೧) ಜೆಲ್ಲಿ ಬಿತ್ತುವದು.

೨) ಸಾಲುಗಳಲ್ಲಿ ಬಿತ್ತುವದು.

೩) ಮಡಿಗಳಲ್ಲಿ ಬಿತ್ತುವದು.

೪) ಎರಡು ಅಥವಾ ಮೂರು ಸಾಲುಗಳಲ್ಲಿ ಬಿತ್ತುವದು.

೩) ನಾಟಿ ಹಚ್ಚುವದು :

೧) ಕೈಯಿಂದ ಸಸಿಗಳನ್ನು ತೆಗೆದು (ಎಚ್ಚರಿಕೆಯಿಂದ) ಹಚ್ಚುವದು.

೨) ಅಂತರ ಬಿಟ್ಟು ನೆಡುವುದು.

೩) (ದಟ್ಟವಾದುದನ್ನು ತೆಗೆದು) ವಿರಳವಾಗಿ ಹಚ್ಚುವದು.

೪) ಸೂರ್ಯನ ಬಿಸಿಲಿನಿಂದ ರಕ್ಷಿಸುವದು.

ನಾಟಿ ಹಚ್ಚಲು ಯೋಗ್ಯ ಸಮಯ. ಸೂರ್ಯನ ಬಿಸಿಲಿನಿಂದ ಅಗಿಗಳನ್ನು ಸಂರಕ್ಷಿಸುವ ಅವಶ್ಯಕತೆ.

ಅಂತರ ಬಿಡುವದರ ಅವಶ್ಯಕತೆ

೪) ಕಳೆ ತೆಗೆಯುವದು ಮತ್ತು ಮಡಿಗಳನ್ನು ಪೊಳ್ಳು ಮಾಡುವದು.

ಕಳೆಗಳ ಅಭ್ಯಾಸ :

ಅ) ಅವುಗಳಿಂದ ಬೆಳೆಗಳಿಗಾಗುವ ಅಪಾಯ.

ಬ) ಕಳೆ ತೆಗೆಯಲು ಯೋಗ್ಯವಾದ ಸಮಯ.

ಕ) ಮೇವು ಎಂದು, ಗೊಬ್ಬರವೆಂದು ಕಳೆಯನ್ನು ತೆಗೆದು ಉಪಯೋಗಿಸುವದು.

೫) ನೀರು (ಹಾಯಿಸುವದು) ಹಾಕುವದು.

ನೀರಾವರಿಯ ಪದ್ಧತಿಗಳು

೬) ಬೆಳೆಗೆ ಅದು ಬೆಳೆಯುತ್ತಿರುವ ಕಾಲದಲ್ಲಿ ಗೊಬ್ಬರ ಹಾಕುವದು ಮತ್ತು ಪೊಳ್ಳುಮಾಡಿ ಮಣ್ಣು ಏರಿಸುವದು.

ಬೆಳೆಯುತ್ತಿರುವ ಕಾಲದಲ್ಲಿ ಗೊಬ್ಬರ ಹಾಕುವುದರ, ಪೊಳ್ಳು ಮಾಡಿ ಮಣ್ಣು ಏರಿಸುವದರ ಅವಶ್ಯಕತೆ. ಪೊಳ್ಳು ಮಾಡಿ ಮಣ್ಣು ಏರಿಸುವ ಪದ್ಧತಿ.

೭) ಬೆಳೆಗೆ ತಗಲುವ ಕ್ರಿಮಿಕೀಟಗಳ ನಿಯಂತ್ರಣ.

ಕೈತೋಟದಲ್ಲಿ ಬರುವ ಹುಳಗಳು ಯಾವವು? ಎಂಬುದನ್ನು ತಿಳಿಯುವದು. ತೋಟದ ಕೆಲಸವನ್ನು ಸರಿಯಾಗಿ ಸ್ವಚ್ಛವಾಗಿ ಮಾಡುವದರಿಂದ ಈ ಹುಳಗಳು ಬೆಳೆಯನ್ನು ಹಾಳುಮಾಡದಂತೆ ನೋಡಿಕೊಳ್ಳುವದು.

ಹುಳಗಳ ಜೀವನ ಕ್ರಮ. ಕ್ರಿಮಿನಾಶಕಗಳು.

೮) ಸುಗ್ಗಿಮಾಡುವದು- ಮಾರಾಟ ಮಾಡುವದು. ದೇಟುಗಳು ಮತ್ತು ಬೇರುಗಳು ಅವುಗಳ ಬದಲಾವಣೆ ಮತ್ತು ಅವುಗಳ ಉಪಯೋಗ. ಪ್ರತಿಯೊಂದು ಮಡಿಯ ಬೆಳೆಯ ಲೆಕ್ಕ ಉತ್ಪನ್ನವನ್ನು ಇನ್ನೊಂದು ಮಡಿಯ ಉತ್ಪನ್ನದ ಜೊತೆಗೆ ತುಲನೆ ಮಾಡುವದು. ಹುಟ್ಟುವಳಿಯ ಬೆಲೆಯನ್ನು ಕಂಡುಹಿಡಿಯುವದು ಮತ್ತು ಆ ಬೆಲೆಯನ್ನು ಪೇಟೆಯ ಬೆಲೆಯೊಡನೆ ಹೋಲಿಸುವದು.

೯) ಮುಂದಿನ ಬೆಳೆಗಾಗಿ ಬೀಜಗಳನ್ನು ಆರಿಸಿ ಜತನದಿಂದ ಇಡುವದು. ಉತ್ತಮ ಬೀಜಗಳನ್ನು ಆರಿಸುವದರ ಆವಶ್ಯಕತೆ. (ಸಂಗ್ರಹಿಸುವ) ಜತನದಿಂದ ಇಡುವ ವಿಧಾನಗಳು.

ನೂಲು-ನೆಯ್ಗೆ

ಚಟುವಟಿಕೆಗಳು

೧) ನೂಲುವದು ಹಾಗು ನೂಲುವ ಪೂರ್ವದಲ್ಲಿಯ ಎಲ್ಲ ಕ್ರಿಯೆಗಳನ್ನು ಮುಂದುವರಿಸುವದು.
೨) ಹೆಚ್ಚಾಗಿ ರಾಟೆಯ ಮೇಲೆ ನೂಲುವದು.
೩) ಗಿಂಟು ತಯಾರಿಸುವದು, ತೊಡುವದು ಮತ್ತು ಲಡೀ ಮಾಡುವದು.
೪) ಆಸನಗಳನ್ನು (ಸಣ್ಣ ಜಮಖಾನೆ) ಇಲ್ಲವೆ ಗುಡಾರಪಟ್ಟಿಗಳನ್ನು ನೇಯುವದು.
೫) ಗಂಟುಹಾಕುವದು, ಕೆಚ್ಚುವದು ಮೊದಲಾದ ನೆಯ್ಗೆಯ ಪೂರ್ವಕ್ರಿಯೆಗಳು.

ಮುಟ್ಟಬೇಕಾದ ಮಟ್ಟ:—

೧) ಉತ್ಪಾದನೆ:— (ಅ) ೧೦, ೧೨ ನಂಬರಿನ ೬೦% ಶಕ್ತಿ ಹಾಗು ಸಮಾನತೆಯುಳ್ಳ ೮ ಗುಂಡಿಗಳನ್ನು (ಲಡಿ) ನೂಲುವದು. (ಪ್ರತಿಯೊಬ್ಬ ಮಗು)

ಬ) ೧೮ ಇಂಚು ಉದ್ದ ೧೮ ಇಂಚು ಅಗಲವುಳ್ಳ (ಅಳತೆಯ) ಕನಿಷ್ಠ ಎರಡು ಆಸನಗಳನ್ನಾಗಲಿ ಇಲ್ಲವೆ ೯ ಇಂಚು × ೬ ಫೂಟು ಅಳತೆಯ ಗುಡಾರಪಟ್ಟಿಯನ್ನಾಗಲಿ ನೇಯುವದು.

೨) ರಾಟೆಯ ಮೇಲೆ ನೂಲುವ ವೇಗ:— ಒಂದು ತಾಸಿಗೆ ೬೫ ಸುತ್ತುಗಳು.

ಸೂಚನೆ:— ಹಿಂದಿನ ವರ್ಗಗಳಲ್ಲಿ ತಯಾರಿಸಿದ ಎಲ್ಲ ನೂಲನ್ನು ಈ ವರ್ಗದಲ್ಲಿ ನೆಯ್ಗೆಗಾಗಿ ಸಂಪೂರ್ಣ ಉಪಯೋಗಿಸಲು ಯತ್ನಿಸಬೇಕು.

ತಾತ್ವಿಕ

೧) ಮೈಸೂರು ರಾಜ್ಯದಲ್ಲಿ ಹತ್ತಿ ಬೆಳೆಯುವ ಪ್ರದೇಶಗಳು ಮತ್ತು ಹುಟ್ಟುವಳಿ.
೨) ಮೈಸೂರು ರಾಜ್ಯದಲ್ಲಿ ಬೆಳೆಯುವ ಹತ್ತಿಯ ವಿವಿಧ ಪ್ರಕಾರಗಳು.
೩) ನಂಬರು, ತಂತುವಿನ ಉದ್ದಳತೆ ಇವುಗಳ ದೃಷ್ಟಿಯಿಂದ ಬೇರೆ ಬೇರೆ ಪ್ರಕಾರದ ಹತ್ತಿಯ ತುಲನಾತ್ಮಕ ಅಭ್ಯಾಸ.
೪) ವಿವಿಧ ಪ್ರಕಾರದ ಹತ್ತಿಯ ಕಾಳುಗಳ ಆಕಾರ, ಆಕೃತಿ ಹಾಗು ಬಣ್ಣ.
೫) ಹತ್ತಿಕಾಳಿಗೆ ಅಂಟಿಕೊಂಡಿರುವ ತಂತುಗಳ ಹರಹುವಿಕೆ.
೬) ಆರೆಯುವ ಬೇರೆ ಬೇರೆ ಪದ್ಧತಿಗಳು ಮತ್ತು ಅವುಗಳ ಗುಣಾವಗುಣಗಳು.

೬) ಭೂಮಾಪಿ ಸೂಚಿಯಾದಲ್ಲಿ ಭೂಕಂಪ ಹೊಂದಿದ ಭಾಗಗಳು, ಅವುಗಳನ್ನು ದುರಸ್ತಿ (ರಿಪೇರಿ) ಮಾಡುವ ಪದ್ಧತಿ.

೯) ಏಣಿಯ ಮೆಟ್ಟಿಲ ಮೇಲೆ ನಿಂತಾಗ ಸೊಂಟಕ್ಕಿನ ಸೇಲೆ ತೆಳ್ಳನ ಅರಿವೆ ಹಾಕಿಕೊಳ್ಳುವದು.

೯) ಬಾಟಿಯ ಪ್ರಕಾರಗಳು:

ಅ) ಏಕಚಕ್ರ ಬ) ಸ್ಪೈ-ಚಕ್ರ

ಕ) ಕಮಾನು ಬಾಟಿ ಜ) ನೆಟ್ಟಗೆ ಬಾಟಿ (ಯರವಡಾ ಬಾಟಿ)

೧೦) ಬಾಟಿಯ ಭಾಗಗಳು.

೧೧) ನೆರಳು ಮೈಕ್ಷಿಯಿಂದ ಬಾಟಿಯಲ್ಲಿ ಎರಡು ಗಾಲಿಗಳನ್ನು ಉಪಯೋಗಿಸುವದರ ಮಹತ್ವ.

೧೨) ಸೂಚಿಕ ಮಾರ್ಗಕರಣ.

೧೩) ಸೂಚಿಯ ಸೀಮರೆ ತೆಗೆಯುವದು.

೧೪) ಸೈಯಟ್ಟಿಕವಾಗಿ ಜಾಗಾ ಮಾರ್ಪಡ ಸೈಸುವಿನ ಮತ್ತು ಮಾಸಿಕ ಕೆಲಸದ ವರದಿ ಬರೆದಿಡುವದು.

೧೫) ಅವಘಾತಸ್ಥಾನಗಳಲ್ಲಿ ಇಟ್ಟಿಗೆ ನಿರ್ಮಾಣಪದ್ಧತಿಯನ್ನಾಗಲಿ ನೆಯ್ಯುವ ಸರಿಯಾದ ಪದ್ಧತಿ ಮತ್ತು ನೆಯ್ಗೆಯಲ್ಲಿ ಆ ಭೂಮಿಕ ಚಲನೆಗಳು.

೧೬) ಬಾಟಿಗಾರ ಹೂಕ ಮತ್ತು ತೋಡುವದರ ಮೇಲೆ ಅದರಿಂದಾಗುವ ಪರಿಣಾಮ.

೧೭) ಬಾಟಿಗೆ ಇಟ್ಟಿಗೆ ಹಲ್ಲಿ (Swift) ಯ ವ್ಯಾಪ ಮತ್ತು ಅದರಿಂದ ತೋಡುವದರ ನೀಗದ ಮೇಲೆ ಆಗುವ ಪರಿಣಾಮ.

೧೮) ತೋಡುವ ಪದ್ಧತಿ.

೧೯) ಬಾಟಿಗೆ ಹಿಂಬದಿಯ ಭಾಗಗಳು ಮತ್ತು ಕಾರ್ಯ.

೨೦) ಕೊಬ್ಬಿ ಅಳತೆಯುಳ್ಳ ಒಂದು ಅವಘಾತವನ್ನು ನೀಯುವದಕ್ಕೆ ಬೇಕಾಗುವ ಸೂಚಿಯ ಪ್ರಮಾಣ ಕಂಡು ಹಿಡಿಯುವದು. (ಏಷ್ಟು ಸೂಲು ಬೇಕೆಂಬುವದನ್ನು ಕಂಡು ಹಿಡಿಯುವದು.)

೨೧) ಅವಘಾತದ ಬೆಲೆಯನ್ನು (ಮೂಲಬೆಲೆ ಕಂಡು ಹಿಡಿಯುವದು.)

ಸಂಗೀತ

ಏಂಟಿನ ವರ್ಗಕ್ಕೆ ಅಭ್ಯಸಿಸಿದ ಪಾಠಗಳಲ್ಲದೆ ಸ್ವಲ್ಪ ಕಠಿಣವಾದ ಹೆಚ್ಚಿನ ೬ ಪಾಠಗಳನ್ನು ಈ ವರ್ಗ (೪) ನಲ್ಲಿ ಕಲಿಸಬೇಕು. ಅವು ಭಕ್ತಿ ಪಾಗು ಸಂತೋಷ ಭಾವನೆಯನ್ನು ಪ್ರಕಟಿಸುವಂಥವಾಗಿರಬೇಕು. ಶಾಲೆಯ ಹೊರಗಿನ ಸಂಗತಿಗಳು ಕೇಳಿಬರುವುದು. ಪಾಠಗಳನ್ನಾಗಲಿ, ಕವಿತೆಗಳನ್ನಾಗಲಿ ಮಕ್ಕಳು ಅಂದು ಹೇಳಿಸುವಂತೆ ಸಮಯಗಳು ವಿದ್ಯಾರ್ಥಿಗಳನ್ನು ಪ್ರೋತ್ಸಾಹಿಸಬೇಕು.

೫ ನಾಗಾ ೬ನೆಯ ವರ್ಗಗಳಿಗೆಯಲ್ಲಿಯೂ ಕಲಿಸಬಹುದಾದಂಥ ಕೆಲವು ಪಾಠಗಳು ಕವಿತೆಗಳು ಇಪ್ಪುಗಳು ಕೆಳಗೆ ಸೂಚಿತವಾಗಿವೆ.

೧) ಜನಪದ ರಾಗ.

೨) ಕೊಳಲಾಟದ ಪಾಠಗಳು.

೩) ವಿವಿಧರಾಗದ ಪಟಿಸಗಳು ಮತ್ತು ಪಾಠಗಳು.

೪) ಹಬ್ಬದಾದರ ಪಾಠಗಳು.

೫) ಸ್ತೋತ್ರ ಮತ್ತು ಭೇದಾದಲಿನ ಪಾಠಗಳು.

೬) ಕಟ್ಟಿನ ಮತ್ತು ಬೀಸುವ ಪಾಠಗಳು.

೭) ನಾಸಿಕ್ಯ ಪಾಠಗಳು.

೮) ಮದುವೆ ಸಿಬ್ಬಣದ ಹಾಡುಗಳು.
೯) ಒಕ್ಕಲುತನದ ಚಟುವಟಿಕೆಗಳಿಗೆ ಸಂಬಂಧಿಸಿದ ಹಾಡುಗಳು.
೧೦) ರಾಷ್ಟ್ರೀಯ ಗೀತೆಗಳು.
೧೧) ಆಧುನಿಕ ಕವಿಗಳ ಗೀತೆಗಳು.
೧೨) ೩. ಹಾಗು ೪ನೆಯ ವರ್ಗಗಳ ಪಠ್ಯಪುಸ್ತಕದಲ್ಲಿಯ ಹಾಡುಗಳು.

ಶಾರೀರಿಕ ಶಿಕ್ಷಣ

(ಹೆಣ್ಣು ಹಾಗು ಗಂಡು ಮಕ್ಕಳಿಗೆ(ವರ್ಗಗಳಿಗೂ)

ಪ್ರಕಾರ ೧. ಅಂಗಾಂಗ ವರ್ಧಕ ಚಟುವಟಿಕೆಗಳು.

ಆ)

ವ್ಯಾಯಾಮ ೧.

೧) ಪ್ರಾರಂಭಿಕ ಚಟುವಟಿಕೆ:— ಹಳೆಯ ಟಿಸಿಸ ಚೆಂಡನ್ನು ಸ್ವೀಕರಿಸುವದು.
೨) (ಕೈ) ಕೊಡುವಿಕೆ:— (ಕಾಲು-ಕೈಗಳ ಜೋಡಿ) ಮಗ್ಗುಲಿಗಾಗಿ ಚೆಂಡನ್ನು ಎಸೆಯುವುದು.
೩) ಧಮ:— (ಜೋಡಿಕಾಲಿಗಾಗಿ ಜೋಡಿ ಭಾರ ಬಾಕಿ) ಒಂದಾದನಂತರ ಇನ್ನೊಂದು ಕಾಲನ್ನು ಮುಂದಕ್ಕೆ ಚಾಚುವದು.
೪) ಧಮ:— (ಜೋಡಿಕಾಲಿಗಾಗಿ ಜೋಡಿ ಭಾರ ಬಾಕಿ) ತಲೆ ಮತ್ತು ಬೆನ್ನನ್ನು ತಿರುಗಿಸುತ್ತ ಒಂದಾದನಂತರ ಇನ್ನೊಂದು ಕೈಯನ್ನು ಮುಗ್ಗಲು ಮತ್ತು ಬದಿಕ್ಕೆ ಚಾಚುವುದು.
೫) ಕಾಲು:— ನಿಂತು ಬಲ್ಲೆ ಹಾಯುವದು.
೬) ಜೋಡಿ ವಿಹಂಗಮ. — ಒಂದು ಕಾಲಿನಿಂದ ಕಲ್ಲಿನ ಚೆಂಡನ್ನು ಸೆಳೆಯುವದು.

ವ್ಯಾಯಾಮ ೨.

೧) ಪ್ರಾರಂಭಿಕ ಚಟುವಟಿಕೆ:— ನಿರ್ದಿಷ್ಟವಾದ ಕೂಡಲೇ ಚಟುವಟಿಕೆಗಾಗಿ ಒಂದಿಷ್ಟು ಸಾಮಾನನ್ನು ಹಿಂಪಡೆಯುವದು.
೨) (ಕೈ) ಕೊಡುವಿಕೆ:— (ಸಾಮಾನುಗಳನ್ನು) ತೊಳೆಯುವುದನ್ನು ಮುಂದೆ ಸುತ್ತಲು ನಿಂತವರಿಗೆ ಎಸೆಯುವುದು. ಜೋಡಿ ಬಿಡುವುದಕ್ಕಿಂತ ಮುಂಚೆ ಎಸೆಯುವದು.
೩) ಧಮ:— (ಕೈ ಭಾರ ಕೊಡುವುದು) ಜೋಡಿಕೈ ಭಾರ ತೆಗೆದುಕೊಳ್ಳುವುದಕ್ಕಾಗಿ ಜೋಡಿ ಚಾಚುವುದು. ತೊಳೆಯುವ ಸಾಮಾನನ್ನು ಒಬ್ಬರಿಂದ ಒಬ್ಬರಿಗೆ ಎಸೆಯುವುದು. ಮತ್ತೆ ಬಿಡುವುದಕ್ಕಾಗಿ ಜೋಡಿ ಚಾಚುವುದು. ಜೋಡಿ ಕೈಭಾರ ಬಿಡುವುದು ಜೋಡಿ.
೪) ಧಮ:— (ಕೈ ಭಾರ ಕೊಡುವುದು) ಜೋಡಿ ಮೊಣಕೈ ಭಾರ ತೆಗೆದುಕೊಳ್ಳುವುದಕ್ಕಾಗಿ ಜೋಡಿ ಚಾಚುವುದು.
೫) ಕಾಲು:— (ನಿಲ್ಲುವ ಸ್ಥಿತಿ) ಪುಟಿದು ಜೋಡಿ ಬಿಡು. ಕಾಲುಗಳನ್ನು ಬಿಂಡಿ ಮುಂದೆ ಒದೆಯುವದು.
೬) ಜೋಡಿವಿಹಂಗಮ. — (ಒಂದು ಕಾಲು ಜೋಡಿ ಬಾಕಿ) ಕಾಲಿನಿಂದ ಸ್ಪಂಜಿನ ಕಲ್ಲು ಮುಂದೆ ಬಿಡುವದು.

ವ್ಯಾಯಾಮ ೩.

೧) ಪ್ರಾರಂಭಿಕ ಚಟುವಟಿಕೆ:— ಕಾಲಿನಿಂದ ಮೃದು ಚೆಂಡು ಮುಂದೆ ಸರಿಸುವದು.
೨) ಕೊಡುವ. — (ಜೋಡಿಯ ಮುಂದೆ ಕೊಡುವ ಮಗ್ಗುಲು) ಕೊಡುವವನನ್ನು ಮುಂದೆ ಸುತ್ತಿ ಕೂಡಿ ಬಾಗುವದು. ಮೊದಲಿನ ಸ್ಥಿತಿಗೆ ತರುವದು.

೩) ಧಡ:— (ಮೊಣಕಾಲು ಮಣಿಸಿ ಕೂತು, ಆಸರಕ್ಕಾಗಿ ಕೈಗಳನ್ನು ಹಿಂದೆ ನೆಲಕ್ಕೆ ಊರಿ, ಕಾಲುಗಳನ್ನು ಸ್ವಲ್ಪು ಅಗಲವಿರಿಸಿ) ತಲೆಯನ್ನು ಹಿಂದಕ್ಕೆ ದೂಡಿ, ನಡವನ್ನು ಎತ್ತುವದು.

೪) ಧಡ:— ರಬ್ಬರ ಚಂಡನ್ನು ಮಗ್ಗುಲಿನಿಂದ ಮಗ್ಗುಲಿಗೆ ಪುಟಿಸುವದು.

೫) ಕಾಲು:— (ಕೈ ಊರಿ) ಒಂದಾದನಂತರ ಮತ್ತೊಂದು ಕಾಲನ್ನು ಮಗ್ಗುಲಿಗೆ ಚಾಚುವದು.

೬) ಜೋಲಿ ಹಿಡಿಯುವದು:— ತಾಳಬದ್ಧವಾಗಿ ಒಂದಾದನಂತರ ಮತ್ತೊಂದು ಕಾಲಿನಿಂದ ಕುಂಟುವದು.

೮) **ಅನುಕರಣ ಮತ್ತು ಕಥೆಯ ಆಟಗಳು :—** ಇಲ್ಲಾ.

೯) **ಸ್ಟಂಟ್ ಮತ್ತು ಉರಳುವದು :—**

೧) ಇಬ್ಬಿಬ್ಬರಾಗಿ, ಮೂವರಾಗಿ, ನಾಲ್ವರಾಗಿ ಮುಂದಕ್ಕೆ ಉರಳುವದು.

೨) ಹಾವಿನ ಪರೆಯನ್ನು ತೆಗೆಯುವದು ಮತ್ತು ಮುಂದಕ್ಕೆ ಉರಳುವದು. (ಹುಡುಗರಿಗೆ)

೩) ಹಗ್ಗದ ಜಗಿತ :—ಇಬ್ಬಿಬ್ಬರು ಒಂದಾಗಿ, ಮತ್ತು ಬೇರೆ ಪ್ರಕಾರಗಳು. (ಹುಡಿಗೆಯರಿಗಾಗಿ)

ಪ್ರಕಾರ ೨. ತಾಳಬದ್ಧ ಚಟುವಟಿಕೆಗಳು :

೮) ಕೂಚು ಮಾಡುವದು.

೧) ಮೂಲಭೂತ ಠೀವಿ, ಬಲಕ್ಕೆ ನೋಡಿ ಸಾಲು ಸರಿಪಡಿಸುವದು. ನೇರದೃಷ್ಟಿ. ನಿಂತಲ್ಲಿ ಕಾಲು ಬಡಿಯುವದು ಘುವ್‌ಜಾವ್ ಮಾಡುವದು. (ವಿರುದ್ಧ ದಿಕ್ಕಿಗೆ ತಿರುಗುವದು). ಪೆಜ್ಜೆ ಹಾಕುತ್ತ ಕೂಚು ಮಾಡುವದು. ಕೂಚು ಮಾಡುವಾಗ, ಎಡಕ್ಕೆ, ಬಲಕ್ಕೆ, ಮತ್ತು ವಿರುದ್ಧ ದಿಕ್ಕಿಗೆ ತಿರಗುವದು.

೯) ಜನಪದ ನೃತ್ಯಗಳು.

ಆಯಾ ಸ್ಟಳಗಳಲ್ಲಿ ಪ್ರಚಲಿತವಿರುವ ಜನಪದ ನೃತ್ಯಗಳು. ೩ ನೆಯ ವರ್ಗಕ್ಕಿಂತ ಮುಂದುವರಿದ ಚಲನವಲನಗಳು.

೧೦) ಮನೋರಂಜಕ ಕವಾಯತುಗಳು :

ಡಂಬೆಲ್ಸ (ಬಡಿಯುವ ಪ್ರಕಾರಗಳು). ಓ. ಪಿ. ಎ. (ಮುಂಬೈ) ತೋಳುಗಳ ಸಾದಾ ಚಲನವಲನ ಸಹಿತ.

ಪ್ರಕಾರ ೩. ಆಟಗಳು :—

೮) ಸುಲಭ ಆಟಗಳು :

೧) ಕಡೆಯ ಜತೆ ಹೊರಗೆ.

೨) ತೋಳಿನಲ್ಲಿ ತೋಳು ಹಾಕಿ ಮುಟ್ಟಾಟ.

೩) ವರ್ತುಳ ಓಟ (ಬೆನ್ನು ಹತ್ತುವದು).

೪) ಪಾದಗಳನ್ನು ವಿಸ್ತರಿಸಿ ಆಡುವ ಜಿಂಡಾಟ.

೫) ಕ್ರಸ್ಟ್ಸ ಮತ್ತು ಕ್ರಂಬ್ಸ (Crusts and Crumbs)

೬) ಕಣ್ಣುಮುಚ್ಚಾಲೆಯ ಆಟ. (ಕಣ್ಣು ಕಟ್ಟಿಕೊಂಡು ಆಟ)

೭) ಕತ್ತರಿ ಮುಟ್ಟಾಟ.

೮) ಅನುಕರಣ ಮುಟ್ಟಾಟ.

೮) ಮಜಲು ಪಂದ್ಯಗಳು (Relay Games)

೧) ಪಾರುಮಾಡುವ ಪಂದ್ಯ.
೨) ಕುದುರೆ ಓಟ ಪಂದ್ಯ.
೩) ಕಾಂಗ್ರು ಓಟ ಪಂದ್ಯ.
೪) ಬಾತುಕೋಳಿ ನಡೆಯ ಪಂದ್ಯ.
೫) ಕಪ್ಪೆಜಿಗಿತ ಪಂದ್ಯ.
೬) ಓಡುವ ಪಂದ್ಯ.

ಪ್ರಕಾರ ೪. **ಮೇಲಾಟಗಳು:—**

೧) ೫೦ ಮೀಟರ ಓಟ.
೨) ಉದ್ದಜಿಗಿತ (ನಿಂತಲ್ಲಿ ಓಡುತ್ತ).
೩) ಚಂಡಿನ ಒಗೆತ (ದೂರ).

ಪ್ರಕಾರ ೫. **ಕಾದಾಟ ಚಟುವಟಿಕೆಗಳು:—**

೧) ಕಾಲು ಕುಸ್ತಿ.
೨) ಕೋಲು ಕುಸ್ತಿ.
೩) ವರ್ತುಳದಲ್ಲಿ ಜಗ್ಗುವದು (ಎಳೆಯುವದು).
೪) ವರ್ತುಳದ ಹೊರಗೆ ದೂಡು.

ಸೂಚನೆ:— ಕಳೆದ [ಜುಲೈ] ಸಂಚಿಕೆಯಲ್ಲಿ ಪ್ರಕಟಿಸಿದಂತೆ ಈ ಸಲದ [ಅಗಸ್ಟ] ಸಂಚಿಕೆಯಲ್ಲಿ ೪ನೆಯ ವರ್ಗದ ಮೈಸೂರ ರಾಜ್ಯದ ಹೊಸ ಅಭ್ಯಾಸ ಪತ್ರಿಕೆಯನ್ನು ಕೊಡಲಾಗಿದೆ. ದೋಷಗಳೇನಾದರೂ ಕಂಡುಬಂದಲ್ಲಿ ನಮಗೆ ಸೂಚಿಸಬೇಕಾಗಿ ಬಿನ್ನವಿಸಿಕೊಳ್ಳುತ್ತೇವೆ. ಅವುಗಳನ್ನು ಕೃತಜ್ಞತೆಗಳೊಡನೆ ತಿದ್ದುಪಡೆ ಮಾಡಿ ಮುಂದಿನ ಸಂಚಿಕೆಯಲ್ಲಿ ಕೊಡಲಾಗುವದು. ಈ ಎರಡೂ ವರ್ಗಗಳ ಅಭ್ಯಾಸ ಪತ್ರಿಕೆಯು ಎಲ್ಲ ಪ್ರಾಥಮಿಕ ಶಿಕ್ಷಕರಿಗೂ ಸಹಾಯಕಾರಿಯಾದೀತೆಂದು ನಂಬಲಾಗಿದೆ. ಇದಕ್ಕೆ ಪ್ರೇರಣೆಕೊಟ್ಟ ನಮ್ಮ ಭಾಗದ ಎಜ್ಯುಕೇಶನಲ್ ಇನಸ್ಪೆಕ್ಟರರಾದ ಶ್ರೀಮಾನ್ ಹಂದ್ರಾಳರವರಿಗೆ ನಮ್ಮ ಕೃತಜ್ಞತೆಗಳನ್ನು ಮತ್ತೊಮ್ಮೆ ಸಲ್ಲಿಸುತ್ತೇವೆ.

ಸಂ. ಜೀ. ಶಿ., ಧಾರವಾಡ

೩) ಧಡ:— (ಮೊಣಕಾಲು ಮಣಿಸಿ ಕೂತು, ಆಸರಕ್ಕಾಗಿ ಕೈಗಳನ್ನು ಹಿಂದೆ ನೆಲಕ್ಕೆ ಊ ಕಾಲುಗಳನ್ನು ಸ್ವಲ್ಪು ಅಗಲವಿರಿಸಿ) ತಲೆಯನ್ನು ಹಿಂದಕ್ಕೆ ದೂಡಿ, ನಡವನ್ ಎತ್ತುವದು.

೪) ಧಡ:— ರಬ್ಬರ ಚಂಡನ್ನು ಮಗ್ಗುಲಿನಿಂದ ಮಗ್ಗಲಿಗೆ ಪುಟಿಸುವದು.

೫) ಕಾಲು:— (ಕೈ ಊರಿ) ಒಂದಾದನಂತರ ಮತ್ತೊಂದು ಕಾಲನ್ನು ಮಗ್ಗಲಿಗೆ ಜಾಚುವದ

೬) ಜೋಲಿ ಹಿಡಿಯುವದು:— ತಾಳಬದ್ಧವಾಗಿ ಒಂದಾದನಂತರ ಮತ್ತೊಂದು ಕಾಲಿನಿಂ ಕುಂಟುವದು.

೮) **ಅನುಕರಣ ಮತ್ತು ಕಥೆಯ ಆಟಗಳು**:— ಇಲ್ಲಾ.

೯) **ಸ್ಟಂಟ್ ಮತ್ತು ಉರಳುವದು**:—

೧) ಇಬ್ಬಿಬ್ಬರಾಗಿ, ಮೂವರಾಗಿ, ನಾಲ್ವರಾಗಿ ಮುಂದಕ್ಕೆ ಉರಳುವದು.

೨) ಹಾವಿನ ಪರೆಯನ್ನು ತೆಗೆಯುವದು ಮತ್ತು ಮುಂದಕ್ಕೆ ಉರಳುವದು. (ಹುಡುಗರಿಗೆ)

೩) ಹಗ್ಗದ ಜಿಗಿತ:—ಇಬ್ಬಿಬ್ಬರು ಒಂದಾಗಿ, ಮತ್ತು ಬೇರೆ ಪ್ರಕಾರಗಳು. (ಹುಡಿಗೆಯರಿಗಾ

ಪ್ರಕಾರ ೨. **ತಾಳಬದ್ಧ ಚಟುವಟಿಕೆಗಳು**:

೮) ಕೂಚು ಮಾಡುವದು.

೧) ಮೂಲಭೂತ ಠೀವಿ, ಬಲಕ್ಕೆ ನೋಡಿ ಸಾಲು ಸರಿಪಡಿಸುವದು. ನೇರದೃಷ್ಟಿ. ನಿಂತ ಕಾಲು ಬಡಿಯುವದು ಘುಮ್‌ಜಾವ್ ಮಾಡುವದು. (ವಿರುದ್ಧ ದಿಕ್ಕಿಗೆ ತಿರುಗುವದು ಹೆಜ್ಜೆ ಹಾಕುತ್ತ ಕೂಚು ಮಾಡುವದು. ಕೂಚು ಮಾಡುವಾಗ, ಎಡಕ್ಕೆ, ಬಲಕ ಮತ್ತು ವಿರುದ್ಧ ದಿಕ್ಕಿಗೆ ತಿರಗುವದು.

೯) ಜನಪದ ನೃತ್ಯಗಳು.

ಆಯಾ ಸ್ಥಳಗಳಲ್ಲಿ ಪ್ರಚಲಿತವಿರುವ ಜನಪದ ನೃತ್ಯಗಳು. ೩ ನೆಯ ವರ್ಗಕ್ಕಿಂತ ಮುಂದುವರಿ ಚಲನವಲನಗಳು.

೧೦) ಮನೋರಂಜಕ ಕವಾಯತುಗಳು:

ಡಂಬೆಲ್ಸ (ಬಡಿಯುವ ಪ್ರಕಾರಗಳು). ಓ. ಪಿ. ಎ. (ಮುಂಬೈ) ತೋಳುಗಳ ಸಾದಾ ಚಲ ವಲನ ಸಹಿತ.

ಪ್ರಕಾರ ೩. **ಆಟಗಳು**:—

೮) ಸುಲಭ ಆಟಗಳು:

೧) ಕಡೆಯ ಜತೆ ಹೊರಗೆ.

೨) ತೋಳಿನಲ್ಲಿ ತೋಳು ಹಾಕಿ ಮುಟ್ಟಾಟ.

೩) ವರ್ತುಳ ಓಟ (ಬೆನ್ನು ಹತ್ತುವದು).

೪) ಪಾದಗಳನ್ನು ವಿಸ್ತರಿಸಿ ಆಡುವ ಚೆಂಡಾಟ.

೫) ಕ್ರಸ್ಟ್ಸ ಮತ್ತು ಕ್ರಂಬ್ಸ (Crusts and Crumbs)

೬) ಕಣ್ಣುಮುಚ್ಚಾಲೆಯ ಆಟ. (ಕಣ್ಣು ಕಟ್ಟಿಕೊಂಡು ಆಟ)

೭) ಕತ್ತರಿ ಮುಟ್ಟಾಟ.

೮) ಅನುಕರಣ ಮುಟ್ಟಾಟ.

೮) ಮಜಲು ಪಂದ್ಯಗಳು (Relay Games)

೧) ಪಾರುಮಾಡುವ ಪಂದ್ಯ.
೨) ಕುದುರೆ ಓಟ ಪಂದ್ಯ.
೩) ಕಾಂಗ್ರು ಓಟ ಪಂದ್ಯ.
೪) ಬಾತುಕೋಳಿ ನಡೆಯ ಪಂದ್ಯ.
೫) ಕಪ್ಪೆಜಿಗಿತ ಪಂದ್ಯ.
೬) ಓಡುವ ಪಂದ್ಯ.

ಪ್ರಕಾರ ೪. **ಮೇಲಾಟಗಳು:—**

೧) ೫೦ ಮೀಟರ ಓಟ.
೨) ಉದ್ದಜಿಗಿತ (ನಿಂತಲ್ಲಿ ಓಡುತ್ತ).
೩) ಚಂಡಿನ ಒಗೆತ (ದೂರ).

ಪ್ರಕಾರ ೫. **ಕಾದಾಟ ಚಟುವಟಿಕೆಗಳು:—**

೧) ಕಾಲು ಕುಸ್ತಿ.
೨) ಕೋಲು ಕುಸ್ತಿ.
೩) ವರ್ತುಳದಲ್ಲಿ ಜಗ್ಗುವದು (ಎಳೆಯುವದು).
೪) ವರ್ತುಳದ ಹೊರಗೆ ದೂಡು.

ಸೂಚನೆ:— ಕಳೆದ [ಜುಲೈ] ಸಂಚಿಕೆಯಲ್ಲಿ ಪ್ರಕಟಿಸಿದಂತೆ ಈ ಸಲದ [ಅಗಸ್ಟ] ಸಂಚಿಕೆಯಲ್ಲಿ ೪ನೆಯ ವರ್ಗದ ಮೈಸೂರ ರಾಜ್ಯದ ಹೊಸ ಅಭ್ಯಾಸ ಪತ್ರಿಕೆಯನ್ನು ಕೊಡಲಾಗಿದೆ. ದೋಷಗಳೇನಾದರೂ ಕಂಡುಬಂದಲ್ಲಿ ನಮಗೆ ಸೂಚಿಸಬೇಕಾಗಿ ಬಿನ್ನವಿಸಿಕೊಳ್ಳುತ್ತೇವೆ. ಅವುಗಳನ್ನು ಕೃತಜ್ಞತೆಗಳೊಡನೆ ತಿದ್ದುಪಡೆ ಮಾಡಿ ಮುಂದಿನ ಸಂಚಿಕೆಯಲ್ಲಿ ಕೊಡಲಾಗುವದು. ಈ ಎರಡೂ ವರ್ಗಗಳ ಅಭ್ಯಾಸ ಪತ್ರಿಕೆಯು ಎಲ್ಲ ಪ್ರಾಥಮಿಕ ಶಿಕ್ಷಕರಿಗೂ ಸಹಾಯಕಾರಿಯಾದೀತೆಂದು ನಂಬಲಾಗಿದೆ. ಇದಕ್ಕೆ ಪ್ರೇರಣೆಕೊಟ್ಟ ನಮ್ಮ ಭಾಗದ ಎಜ್ಯುಕೇಶನಲ್ ಇನಸ್ಪೆಕ್ಟರರಾದ ಶ್ರೀಮಾನ್ ಹಂದ್ರಾಳರವರಿಗೆ ನಮ್ಮ ಕೃತಜ್ಞತೆಗಳನ್ನು ಮತ್ತೊಮ್ಮೆ ಸಲ್ಲಿಸುತ್ತೇವೆ.

ಸಂ. ಜೀ. ಶಿ., ಧಾರವಾಡ

(ಳನೆಯ ಪುಟದಿಂದ ಬಂದದ್ದು)

ಬಂದಾಗುವ ಭೀತಿಯಿದೆ. ಒಂದು ವೇಳೆ ಅಲ್ಪ ಸ್ವಲ್ಪ ಉಳಿದರೆ, ಅದನ್ನು ಮುಂದಿನ ವರುಷ ಉಪಯೋಗಿಸಿಕೊಳ್ಳಲು ಬರುವದು.

ಹುಟ್ಟುವಳಿಯ ವಿಕ್ರಯ

ಜೀವನ ಶಿಕ್ಷಣ ಸಾಲೆಗಳಲ್ಲಿಯ ಮೂಲ ಕಾಯಕದ ಉತ್ಪತ್ತಿಯನ್ನು ನಿರ್ವಹಿಸುವದು ಶಿಕ್ಷಕ–ಶಿಕ್ಷಕಿಯರಿಗೂ ಆಡಳಿತ ವರ್ಗಕ್ಕೂ ಅದೊಂದು ಪೆಡಂಭೂತವಾಗಿದೆ. ಒಕ್ಕಲುತನದ ಹುಟ್ಟುವಳಿಯನ್ನು ಕುರಿತು ಈ ಸಮಸ್ಯವೇ ಏಳುವದಿಲ್ಲ. ಹುಟ್ಟುವಳಿಯು ಎಂತಹ ತರಹದಿದ್ದರೂ ಅದು ಸ್ಥಾನಿಕ ಪೇಟೆಯಲ್ಲಿ ಬೇಗನೇ ಮಾರಾಟವಾಗುತ್ತಿದೆ. ಆದರೆ, ತಕಲಿಯಿಂದ ನೂತ ನೂಲಿನ ವಿಷಯವು ಮಾತ್ರ ಕಷ್ಟದಾಯಕವಿದೆ. ಚಿಕ್ಕ ಮಕ್ಕಳು ನೂತ ನೂಲಿನ ಪ್ರಶ್ನವಂತೂ ಮತ್ತಷ್ಟು ಗಡಚಾದದ್ದು. ನೂಲಿನ ಮಾರಾಟವು ಅದರ ಗಟ್ಟಿಗತನ, ಸಮಾನತೆ, ನಂಬರು, ಮುಂತಾದವುಗಳನ್ನವಲಂಬಿಸಿದೆ. ಚಿಕ್ಕ ಮಗುವು ಪ್ರಾರಂಭದಲ್ಲಿ ನೂತ ನೂಲಿನ ಗುಣವು ಅತಿ ಕೆಳ ತರಗತಿಯದಿರಲೇಬೇಕು. ಮಗುವು ಇಯತ್ತೆಯಿಂದ ಇಯತ್ತೆಗೆ ಮೇಲಕ್ಕೆ ಸಾಗಿದಂತೆ ಅದು ಸ್ವಾಭಾವಿಕವಾಗಿ ಸುಧಾರಿಸುವದುಂಟು. ಹಲವು ಉಪಯುಕ್ತವಾದ ಸಾಮಾನುಗಳನ್ನು ತಯಾರಿಸಲು ಕನಿಷ್ಠ ತರಗತಿಯ ನೂಲನ್ನು ಸಹ ಉಪಯೋಗಿಸಿಕೊಳ್ಳುವ ಹಂಚಿಕೆಗಳನ್ನು ನಾವು ಶೋಧಿಸಲೇಬೇಕು. ನಮ್ಮ ವಿಭಾಗದಲ್ಲಿ ಆವ ಕೆಲಸಕ್ಕೂ ಬಾರದ ನೂಲನ್ನು ನವಾರ ಪಟ್ಟಾ, ಜಮಖಾನೆ, ಗುಡಾರದ ಹಾಳೆ, ಇವುಗಳಿಗೆ ಹೊಕ್ಕೆ (ಕಂಡಿಕೆಗೆ ಸುತ್ತಿರುವ ನೂಲು) ನಂತೆ ಉಪಯೋಗಿಸುತ್ತಿರುವದು ನಮ್ಮ ಅನುಭವಕ್ಕೆ ಬಂದಿದೆ. ಮೇಲಿನ ಇಯತ್ತೆಗಳ ಮಕ್ಕಳು ನೂತ ನೂಲನ್ನು ನಿಡಿದಿಗೆ (ಉಂಕಿಗೆ) ಉಪಯೋಗಿಸಿಕೊಂಡು ಈ ಕನಿಷ್ಠ ತರಗತಿಯ ನೂಲನ್ನು ಹೊಕ್ಕಿಗೆ ಉಪಯೋಗಿಸಿಕೊಳ್ಳುತ್ತಿರುವರು. ಹೀಗಾಗಿ ನಮ್ಮ ವಿಭಾಗದ ಬೇಸಿಕ್ ಸಾಲೆಗಳು ತಮ್ಮಲ್ಲಿಯ ಎಲ್ಲ ತರಹದ ನೂಲನ್ನು ಉಪಯೋಗಿಸಿಕೊಳ್ಳಲು ಹೆಣಗಾಡುತ್ತಲಿವೆ. ಇದು ನಿಜಕ್ಕೂ ಸ್ತುತ್ಯವಾದದ್ದು. ಈ ಮಾತು ಸಂಪೂರ್ಣ ಜೀವನ ಶಿಕ್ಷಣ ಸಾಲೆಗಳಿಗೆ ಮಾತ್ರ ಅನ್ವಯಿಸುತ್ತಿದೆ. ಒಂದರಿಂದ ನಾಲ್ಕನೆಯ ಇಯತ್ತೆಯ ವರೆಗಿದ್ದ ಸಾಲೆಗಳಿಗೆ ಅಲ್ಲ. ಜೀವನ ಶಿಕ್ಷಣವು ಪ್ರಯೋಗಾವಸ್ಥೆಯಲ್ಲಿದ್ದಾಗ ಅಧಿಕಾರಿಗಳ ಹಾಗೂ ಶಿಕ್ಷಕ-ಶಿಕ್ಷಕಿಯರ ತಲೆತಿನ್ನುತ್ತಿದ್ದ ಈ ಪ್ರಶ್ನವು ಈಗ ಸ್ವಲ್ಪ ಪ್ರಮಾಣದಲ್ಲಿ ಕಡಿಮೆಯಾಗಿರಲು ಸಾಕು. ತಕಲಿಯಿಂದ ನೂತ ನೂಲಿನಲ್ಲಿ ಸಮಾನತೆಯೂ ಹುರಿಕಟ್ಟೂ ಒಂದೇ ಅಳತೆಯದಿರದ್ದರಿಂದ ಬೆಜಗಳು ಬೇಗನೆ ಕೆಟ್ಟು ಹಾಳಾಗುವದೆಂದೂ ನೇಯಿಗೆಯ ಕೆಲಸವು ಅತಿ ಮಂದಗತಿಯಿಂದ ಸಾಗುವದೆಂದೂ ಕೂಗು ಮಾತ್ರ ಎಲ್ಲ ಕಡೆಗಳಿಂದ ಕೇಳಬರುತ್ತಿದೆ. ಹೀಗಾಗಿ ಗಿರಣಿಯ ಅರಿವೆಗಿಂತ ಖಾದಿ ಅರಿವೆಯು ಹೆಚ್ಚು ತುಟ್ಟಿಯಾಗುತ್ತಿದೆ, ಮತ್ತು ಅದು ಗಿರಣಿಯ ಅರಿವೆಯಷ್ಟು ಚಂದ ಮತ್ತು ಮನೋಹರವಾಗಿ ಕಾಣುವದಿಲ್ಲ. ಇಲ್ಲಿ ನಾವೊಂದು ಮಾತನ್ನು ನೆನಪಿನಲ್ಲಿಟ್ಟುಕೊಳ್ಳಬೇಕು. ನಾವು ಮಕ್ಕಳಿಗೆ ಕಾಯಕವನ್ನು ಲಾಭದಾಶೆಗೋಸ್ಕರ ಕಲಿಸುತ್ತಿರುವದಿಲ್ಲ, ಶೈಕ್ಷಣಿಕ ಲಾಭಗಳಿಗೋಸ್ಕರ ಕಲಿಸುತ್ತಿದ್ದೇವೆ. ಒಂದು ವೇಳೆ ಅದರಿಂದ ಹಾನಿಯಾದರೂ ಅದನ್ನು ನಾವು ಗಣನೆಗೆ ತಂದುಕೊಳ್ಳಬಾರದು. ಆ ಅರಿವೆಯ ಇಲ್ಲವೆ ನೂಲಿನ ಉಪಯೋಗವಾದಷ್ಟೇ ನಮ್ಮ ಗಳಿಕೆ ಇಲ್ಲವೆ ಲಾಭವೆಂದು ನಾವೇಕೆ ತಿಳಿದುಕೊಳ್ಳಬಾರದು? ಕನಿಷ್ಠ ಪಕ್ಷಕ್ಕೆ ಹತ್ತಿಗೋಸ್ಕರ ಖರ್ಚು ಮಾಡಿದಷ್ಟು ಹಣವು ಸರಕಾರದ ಕೈಸೇರಿದರೆ ಸಾಕು. ಅಷ್ಟಕ್ಕೇ ನಾವು ತೃಪ್ತಿಯನ್ನು ಹೊಂದಬೇಕು. ಶಿಕ್ಷಣಕ್ಕೋಸ್ಕರ ನಮ್ಮ ರಾಷ್ಟ್ರವು ಎಷ್ಟು ಖರ್ಚು ಮಾಡಿದರೂ ಎಷ್ಟು ನಷ್ಟವನ್ನು ಹೊಂದಿದರೂ ಅದು ಕ್ಷಮ್ಯವಿದೆ. ಮೇಲೆ ಹೇಳಿದ ನವಾರ ಪಟ್ಟಾ ಮಕ್ಕಳ ನಡಪಟ್ಟಿಗೆ ಉಪಯೋಗವಾಗುತ್ತಿದೆ. ಜಮಖಾನೆಗಳನ್ನು ಮಕ್ಕಳ ಆಸನಗೋಸ್ಕರ ಸಾಲೆಯಲ್ಲಿ ಉಪಯೋಗಿಸಬೇಕು. ಗುಡಾರಗಳನ್ನು ಪಾಲಕರ ದಿನ, ಮಕ್ಕಳ ದಿನ, ಮುಂತಾದವುಗಳ ಆಚರಣೆಯ ಕಾಲಕ್ಕೆ ಉಪಯೋಗಿಸಬೇಕು. ಹೆಚ್ಚಾಗಿ ಉಳಿದ ಮಾಲನ್ನು ಸರಕಾರವು ತನ್ನ ಉಪಯೋಗಕ್ಕೋಸ್ಕರ ಏಕೆ ಕೊಳ್ಳಬಾರದು? ಕಚೇರಿ ಕಟ್ಟಿಗಳಲ್ಲಿ ವಿಪರೀತ ಬೆಲೆ ಕೊಟ್ಟು ತಂದ ಅಂದಚಂದವಾದ ರತ್ನಗಂಬಳಿಗಳೂ ಜಮಖಾನೆಗಳೂ ಏಕೆ ಬೇಕು? ಜೀವನ ಶಿಕ್ಷಣ ಸಾಲೆಗಳಲ್ಲಿ ನಮ್ಮ ಚಿಕ್ಕ ಮಕ್ಕಳು ತಯಾರಿಸಿದ ಗುಡಾರ ಜಮಖಾನೆಗಳನ್ನೇಕೆ ಕೊಳ್ಳಬಾರದು? ಸಾಲೆಯಲ್ಲಿ ತಮ್ಮ ಮಕ್ಕಳು ತಯಾರಿಸಿದ ಮಾಲುಗಳನ್ನು ಸರಕಾರದ ಅಧಿಕಾರಿಗಳೂ, ಸಿಬ್ಬಂದಿಯವರೂ, ಸಾರ್ವಜನಿಕರೂ ಪ್ರೇಮದಿಂದಲೂ ಅಭಿಮಾನದಿಂದಲೂ ಮುಂದೆ ಬಂದು ಕೊಂಡುಕೊಳ್ಳ

ಬೇಕಲ್ಲವೇ ? ಇರಲಿ, ಎಲ್ಲ ಇಯತ್ತೆಗಳಲ್ಲಿ ನೂಲಿನ ಗುಣವನ್ನು ಸುಧಾರಿಸಲಿಕ್ಕೆ ಪ್ರೋತ್ಸಾಹ ಕೊಡಲು ಹಂಚಿಕೆಗಳನ್ನೇಕೆ ಶೋಧಿಸಬಾರದು ? ನೂಲುವ ಮಕ್ಕಳಿಗೆ ಒಂದು ವೇಳೆ ನೇರವಾದ ಲಾಭವನ್ನು ಕೊಡಮಾಡಿದರೆ, ಅವರು ಪ್ರೇರಣೆ ಹೊಂದಿ ಚಲೋ ನೂಲನ್ನು ಹೊರಡಿಸಲು ಆಸ್ಥೆ ವಹಿಸಿ ಪ್ರಯತ್ನಿಸ ಬಹುದಲ್ಲವೇ ? ಬೇಸಿಕ್ ಸಾಲೆಯಲ್ಲಿ ಕಾಯಕದಿಂದುಂಟಾದ ಹುಟ್ಟುವಳಿಯನ್ನು ಮಕ್ಕಳ ಬಳಕೆಗೆ ಲಭ್ಯವಾಗಬೇಕೆನ್ನುವ ಸಿಫಾರಸನ್ನು ಕೇಂದ್ರ ಶಿಕ್ಷಣಿಕ ಸಲಹಾ ಮಂಡಳದವರಿಂದ ನೇಮಿಸಲ್ಪಟ್ಟ ಒಂದು ಸ್ಥಾಯಿಸಮಿತಿಯು ಮಾಡಿದ್ದುದು ನಮ್ಮ ಜ್ಞಾಪಕದಲ್ಲಿದೆ. ಸರಕಾರದವರಿಂದ ಈ ಸಿಫಾರಸು ಒಂದು ವೇಳೆ ಮನ್ನಣೆಯನ್ನು ಹೊಂದಿದರೆ, ಕಾಯಕದ ಕೆಲಸದಲ್ಲಿ ಅದು ಮಕ್ಕಳ ಅಭಿರುಚಿಯನ್ನೂ ಶ್ರದ್ಧೆಯನ್ನೂ ಹೆಚ್ಚಿಸುವದರಲ್ಲಿ ಸಂದೇಹವೇನಿದೆ? ಜೀವನ ಶಿಕ್ಷಣ ಸಾಲೆಗಳಲ್ಲಿ ತಯಾರಾದ ಖಾದಿಯನ್ನು ಕೊಳ್ಳುವವರಿಗೆ ೧೦೦ಕ್ಕೆ ೨೫ರಂತೆ ರಿಬೇಟನ್ನು ಕೊಡುವರೆಂದು ನಮ್ಮ ಕೇಳಿಕೆಯಲ್ಲಿದೆ. ಈ ರಿಬೇಟನ್ನು ಇನ್ನೂ ಹೆಚ್ಚಿಸಿ ಅಗ್ಗದರದಿಂದ ಮಾರಲು ಬಯಸಿದರೆ, ಮಕ್ಕಳು ತಮ್ಮ ತಮ್ಮ ಕಾಯಕದ ಹುಟ್ಟುವಳಿಯನ್ನು ತಾವೇ ಕೊಂಡುಕೊಳ್ಳಲು ಮುಂದೆ ಬರಬಹುದೇ ? ಪ್ರಾಯೋಗಿಕವಾಗಿಯಾದರೂ ಚಿಂತೆ ಇಲ್ಲ. ಮೇಲೆ ಹೇಳಿದ ಸೂಚನೆಗಳನ್ನು ಪರಿಕಿಸಿ ನೋಡಬೇಕು. ಇದರಿಂದ ಮಕ್ಕಳಲ್ಲಿ ನೇರವಾದ ವೈಯಕ್ತಿಕ, ಮಾನಸಿಕ ಹಾಗೂ ಸಾಮೂಹಿಕ ಉದ್ದೇಶವು ರೂಪುಗೊಂಡು ಅವರು ತಮ್ಮ ಕಾಯಕದ ಉತ್ಪಾದನದಿಂದ ವೈಯಕ್ತಿಕವಾಗಿಯೂ ಸಾಮೂಹಿಕವಾಗಿಯೂ ಇಡಿಯ ಸಾಲೆಯ ಆರ್ಥಿಕ ಪರಿಸ್ಥಿತಿಯನ್ನು ಸುಧಾರಿಸಲು ಸಮರ್ಥರಾಗಬಲ್ಲರು. ಜೀವನ ಶಿಕ್ಷಣ ಕ್ಷೇತ್ರವು ವಿಸ್ತಾರಗೊಳ್ಳುತ್ತ ಸಾಗಿದಂತೆ ಇಂತಹ ಹುಟ್ಟುವಳಿಯ ಪ್ರಮಾಣವು ವಿಪರೀತವಾಗಿ ಬೆಳೆಯುವದರಿಂದ ಮೇಲೆ ಹೇಳಿದ ಸೂಚನೆಗಳು ಫಲಕಾರಿಯಾಗುವ ಲಕ್ಷಣಗಳಿವೆ, ಪ್ರಯೋಗ ಮಾಡಿ ನೋಡಲು ತಕ್ಕವುಗಳಾಗಿವೆ.

(ಮುಂದುವರಿಯುವದು)

ಪ್ರಾಥಮಿಕ ಶಾಲಾ ಪ್ರಮಾಣಪತ್ರ ಪರೀಕ್ಷೆ, ಟ್ರೇನಿಂಗ ಕಾಲೇಜ; ಎಲಿಮೆಂಟರಿ ಮತ್ತು ಇಂಟರಮೀಡಿಯೆಟ್ ಗ್ರೇಡ ಮುಂ. ಡ್ರಾಯಿಂಗ ಪರೀಕ್ಷಗಳಿಗೆ—

ಜನಪ್ರಿಯವಾದ ಮತ್ತು ಸರಕಾರದಿಂದ ಮಂಜೂರಾದ ಒಂದೇ ಒಂದು ಪುಸ್ತಕ

ಆದರ್ಶ ಚಿತ್ರಕಲಾ

(Ideal Drawing)

ಶ್ರೀ ಎಸ್. ಕೆ. ಜೋಶಿ, ಮತ್ತು ಶ್ರೀ ಜಿ. ಡಿ. ವಾಲಿ.

ಎಲ್ಲ ದೊಡ್ಡ ಪುಸ್ತಕ ವ್ಯಾಪಾರಸ್ಥರಲ್ಲಿ ದೊರೆಯುವದು.

ಬೆಲೆ ೧—೧೨—೯ ಅಂಚೆವೆಚ್ಚ ಪ್ರತ್ಯೇಕ.

ಐದು ಮತ್ತು ಐದಕ್ಕಿಂತ ಹೆಚ್ಚು ಪ್ರತಿ ತರಿಸಿಕೊಳ್ಳುವವರಿಗೆ ಅಂಚೆ ವೆಚ್ಚವಿಲ್ಲ. ಇದು ಕನ್ನಡದಲ್ಲಿಯೂ ಸಿಗುತ್ತದೆ.

ಜಿ. ವಾಯ್. ರಾಣೆ

ಪ್ರಕಾಶಕರು, ೩೪೩, ಕಸಬಾ ಪೇಟ ಪುಣೆ.

೧೯೫೬ನೆಯ ಇಸವಿಯಿಂದ ಪ್ರಾರಂಭವಾಗುವ

ಸಾಮಾನ್ಯ ಪ್ರಾ. ಶಾ. ಪ್ರ. ಪರೀಕ್ಷೆಯ

ಅಭ್ಯಾಸ ಕ್ರಮವನ್ನು ಅನುಸರಿಸಿ ಬರೆದ

ಶೇಲಾರ ಕೃತ

ಪ್ರಾಥಮಿಕ ಭೂಮಿತಿ

[ಕ್ಷೇತ್ರಫಲ ಘನಫಲ ಸಹಿತ]

೪ ರಿಂದ ೭ ನೇಯ ವರ್ಗದ ವರೆಗಿನ

ವಿಷಯವನ್ನೆಲ್ಲ ಒಳಗೊಂಡಿದೆ.

ಬೆಲೆ: ೧ರೂ. ೮ಆಣೆ ಮಾತ್ರ

ದೊರೆಯುವ ಸ್ಥಳ:—

ಸಾಯಿ ಪಬ್ಲಿಶಿಂಗ್ ಹಾವುಸ್

ವಿಜಯ ರೋಡ, ಧಾರವಾಡ.

(ಸಂಪಾದಕೀಯ ೨ನೆಯ ಪುಟದಿಂದ ಬಂದುದು)

ದಿ. ಗಂಗಾಧರರಾವ ದೇಶಪಾಂಡೆಯವರಿಗೆ ಶ್ರದ್ಧಾಂಜಲಿ:

" ಕರ್ನಾಟಕದ ಕೇಸರಿ " ಎಂದು ಸುಪ್ರಸಿದ್ಧರಾಗಿದ್ದ ಶ್ರೀ ಗಂಗಾಧರರಾವ ದೇಶಪಾಂಡೆಯವರು ಬೆಳಗಾಂವಿಯಲ್ಲಿ ದಿನಾಂಕ ೩೦—೬—೬೦ಕ್ಕೆ ವೈಕುಂಠವಾಸಿಗಳಾದರೆಂದು ಬರೆಯಲು ನಮಗೆ ಅತೀವ ದುಃಖವಾಗುತ್ತದೆ. ಗಂಗಾಧರರಾಯರು ಲೋಕಮಾನ್ಯ ಬಾಳ ಗಂಗಾಧರ ಟಿಳಕ ಹಾಗು ಮಹಾತ್ಮಾ ಗಾಂಧೀಜಿಯವರ ಅತ್ಯಂತ ನಂಬುಗೆಯ ಶಿಷ್ಯರಾಗಿದ್ದರು. ಅವರು ಸ್ವಾತಂತ್ರ್ಯ ಆಂದೋಲನದಲ್ಲಿ ಭಾಗವಹಿಸಿ, ಅನೇಕ ಸಲ ಸೆರೆಮನೆವಾಸ ಅನುಭವಿಸಿದವರಾಗಿದ್ದರು. ಕರ್ನಾಟಕವನ್ನು ಮೊಟ್ಟಮೊದಲಿಗೆ ಭಾರತದ ಭೂಪಟದ ಮೇಲೆ ಎತ್ತಿ, ನಿಲ್ಲಿಸಿದ ಕರ್ನಾಟಕದ ಸಿಂಹ ಗಂಗಾಧರರಾವ ದೇಶಪಾಂಡೆಯವರನ್ನು ಕಳೆದುಕೊಂಡುದುದರಿಂದ ಕನ್ನಡ ಜನರು ತಮ್ಮ ರಾಷ್ಟ್ರೀಯತೆಗೆ ಸ್ಥಿರತೆಯನ್ನು ತಂದು ಕೊಟ್ಟ ಒಂದು ಹಳೆಯ ಭವ್ಯ ಹಾಗು ಸತ್ವಶಾಲೀ ಸಂಬಂಧವನ್ನು ಕಡಿದುಕೊಂಡಂತಾಯಿತು. ಕನ್ನಡ, ಮರಾಠಿ ಭಾಷೆಗಳೆರಡರಲ್ಲಿಯೂ ಪ್ರಾವೀಣ್ಯವನ್ನು ಸಂಪಾದಿಸಿದ್ದ ಗಂಗಾಧರರಾಯರು ಕರ್ನಾಟಕ, ಮಹಾರಾಷ್ಟ್ರ ಪ್ರದೇಶಗಳಲ್ಲಿಯೂ ಪ್ರಭಾವಶಾಲಿಗಳೆನಿಸಿದ್ದರು. ದೇಶಪಾಂಡೆಯವರು ಕರ್ನಾಟಕ ಏಕೀಕರಣಕ್ಕಾಗಿ ಮನಸಾ ದುಡಿದರು. ಬೆಳಗಾವಿಯು ಕರ್ನಾಟಕದ್ದು ಎಂದು ಸಾಧಿಸುವಾಗ ಅವರ ಮಾತುಗಳಿಗೆ ಬಹು ಬೆಲೆ ಬಂದಿತು.

ದಿ. ಮೊಹರೆ ಹಣಮಂತರಾಯರಿಗೆ ಶ್ರದ್ಧಾಂಜಲಿ:

ಸುಮಾರು ಇಪ್ಪತ್ತೈರಡು ವರುಷ ಅಖಂಡವಾಗಿ " ಸಂಯುಕ್ತ ಕರ್ನಾಟಕ " ಪತ್ರಿಕೆಯ ಸಂಪಾದಕರಾಗಿದ್ದುಕೊಂಡು ಕನ್ನಡ ಪತ್ರಿಕೋದ್ಯಮದ ಕ್ಷೇತ್ರದಲ್ಲಿ ಮಹತ್ ಸಾಧನೆಯನ್ನು ಗಳಿಸಿ ಯಶಸ್ವಿಯಾಗಿದ್ದ ಹಾಗು ಸಾರ್ವಜನಿಕ ಜೀವನದಲ್ಲಿ ಪ್ರಮುಖ ಪಾತ್ರವನ್ನು ವಹಿಸಿ ರಾಷ್ಟ್ರದ ಸ್ವಾತಂತ್ರ್ಯ ಹೋರಾಟದಲ್ಲಿ ವೀರರಾಗಿ ದುಡಿದ ದಿ. ಮೊಹರೆ ಹಣಮಂತರಾಯರು ದಿನಾಂಕ ೨೭—೬—೬೦ನೇ ದಿನ ಬೆಂಗಳೂರಿನಲ್ಲಿ ನಿಧನರಾದರೆಂದು ಬರೆಯಲು ನಮಗೆ ಅತೀವ ದುಃಖವಾಗುತ್ತದೆ. ದಿವಂಗತರು ಕಟ್ಟಾ ರಾಷ್ಟ್ರೀಯ ವೃತ್ತಿಯವರಾಗಿದ್ದು, ರಾಷ್ಟ್ರೀಯ ಧ್ಯೇಯ ಸಾಧನೆಗಾಗಿ ಅವಿಶ್ರಾಂತವಾಗಿ ತ್ಯಾಗಮಾಡಿದರು. ಮೊಹರೆಯವರ ಅಗಲುವಿಕೆಯಿಂದ ಕನ್ನಡ ಪತ್ರಿಕೋದ್ಯಮಕ್ಕೆ ತುಂಬಿಬರಲಾರದಂತಹ ಹಾನಿಯಾಗಿದೆ.

ಮಹಾ ವ್ಯಕ್ತಿಗಳಾದ ಗಂಗಾಧರರಾವ ದೇಶಪಾಂಡೆ ಮತ್ತು ಮೊಹರೆ ಹಣಮಂತರಾಯರ ನಿಧನದಿಂದ ತುಂಬಿ ಬರಲಾರದ ಹಾನಿಯಾಗಿದೆ. ಪರಮಾತ್ಮನು ಅವರ ಆತ್ಮಕ್ಕೆ ಶಾಂತಿಯನ್ನೀಯಲಿ. ಅವರ ಅಪಾರ ಬಂಧು-ಮಿತ್ರರಿಗೆ ಅವರ ಅಗಲಿಕೆಯಿಂದುಂಟಾದ ದುಃಖವನ್ನು ಸಹಿಸುವ ಶಕ್ತಿಯನ್ನೀಯಲಿ ಎಂದು ಪರಮಾತ್ಮನನ್ನು ಪ್ರಾರ್ಥಿಸುವೆವು.

ಶ್ರೀ ಜೇವೂರ ಸಾಹೇಬರಿಗೆ ವರ್ಗ:

ಧಾರವಾಡ ವಿಭಾಗದ ಡೆಪ್ಯುಟಿ ಡಿ. ಸಿ. ಆಯ್. ಎಂದು ಕೆಲಸ ಮಾಡಿ ಜನಪ್ರಿಯರಾದ ಶ್ರೀ ಎಸ್. ವ್ಹಿ. ಜೇವೂರ, B. A. (Hons.), M. Ed. ಇವರಿಗೆ ಗುಲಬುರ್ಗಾ ವಿಭಾಗಕ್ಕೆ ಡಿ. ಡಿ. ಪಿ. ಆಯ್. ಎಂದು ವರ್ಗವಾದ ಮೂಲಕ, ಧಾರವಾಡ ವಿಭಾಗದ ಎಷ್ಟೋ ಸಂಘ ಸಂಸ್ಥೆಗಳಿಂದ ಅವರಿಗೆ ಬೀಳ್ಕೊಡುವ ಸಮಾರಂಭಗಳನ್ನು ಏರ್ಪಡಿಸಲಾಗಿದ್ದಿತು. ಶ್ರೀ ಜೇವೂರರ ಕಾರ್ಯಶಕ್ತಿ, ದಕ್ಷತೆ, ತಾಳ್ಮೆ, ರಸಿಕತನ ಮೊದಲಾದ ಗುಣಗಳನ್ನು ಕುರಿತು ಹಲವು ಕಡೆಗೆ ಅವರ ಗುಣಗಾನ ಮಾಡಲಾಯಿತು. ಇಲ್ಲಿಂದ ವರ್ಗವಾಗಿ ಹೋದ ಶ್ರೀ ಜೇವೂರ ಸಾಹೇಬರಿಗೆ ನಾವು ಶುಭಾಶಯಗಳನ್ನು ಸಲ್ಲಿಸುತ್ತೇವೆ.

ಕನ್ನಡ "ವರ್ಷ ಪ್ರಾಯಿಜ" ಪರೀಕ್ಷೆ ೧೯೬೦

[ಮುಂಬಯಿ ಸರಕಾರದ ವಿದ್ಯಾಖಾತೆಯ ತಾ. ೪–೩–೧೯೫೪ರ ಗೊತ್ತುವಳಿ ನಂ. C E F 1054 ಮತ್ತು ಪ್ರಕಟನೆಯ ಪೇರಿಗೆ]

೧. ಪರೀಕ್ಷೆಯ ವಿಷಯಗಳು:— (೧) ವ್ಯಾಕರಣ ಮತ್ತು ಛಂದಸ್ಸು (೨) ಹಳಗನ್ನಡ ನಿಬಂಧ (೩) 'ಕನ್ನಡ ಬಾವುಟ'ದಿಂದ ಕವಿತೆಗಳು (೪) ಹಳಗನ್ನಡದ ಗೊತ್ತಿದ್ದ ಗದ್ಯ ಸಂಗ್ರಹ (೫) ಹೊಸಗನ್ನಡ ನಿಬಂಧ (೬) ಹನ್ನೆರಡನೆಯ ಶತಮಾನದ ಕನ್ನಡ ಸಾಹಿತ್ಯ.

೨. ಬಹುಮಾನ:— ಈ ಮೊದಲು ಇದ್ದ ೮೦ ರೂಪಾಯಿಗಳ ಒಂದೇ ಬಹುಮಾನದ ಬದಲಾಗಿ ೫೦ ಹಾಗು ೩೦ ರೂ. ಗಳ ಎರಡು ಬಹುಮಾನಗಳು ಕೊಡಲ್ಪಡುವವು. ಮೊದಲನೆಯ ಬಹುಮಾನ ಪಡೆಯುವ ಉಮೇದವಾರನು ಒಟ್ಟಿನಲ್ಲಿ ಕನಿಷ್ಠ ೧೦೦ಕ್ಕೆ ೭೫, ಎರಡನೆಯ ಬಹುಮಾನ ಪಡೆಯುವ ಉಮೇದವಾರನು ಒಟ್ಟಿನಲ್ಲಿ ಕನಿಷ್ಠ ೧೦೦ಕ್ಕೆ ೫೦ ಗುಣಗಳನ್ನು ದೊರಕಿಸಲೇಬೇಕು. ಈ ಉಮೇದವಾರರು ಯಾವ ವಿಷಯದಲ್ಲಿಯೂ ಅಸಮಾಧಾನಕರವಾಗಿ ಕಡಿಮೆ ಗುಣಗಳನ್ನು ಪಡೆದು ನಪಾಸಾಗಿರಕೂಡದು. ಒಂದು ವೇಳೆ ಒಬ್ಬನಿಗಿಂತ ಹೆಚ್ಚು ಉಮೇದವಾರರು ಸಮಾನ ಗುಣಗಳನ್ನು ಪಡೆದು ಸಮಾಧಾನಕರವಾಗಿ ಪಾಸಾಗಿದ್ದರೆ ಬಹುಮಾನಗಳನ್ನು ಸರಿಯಾಗಿ ವಿಭಜಿಸಿ ಹಂಚಲಾಗುವದು.

೩. ಅರ್ಜಿ ಮಾಡತಕ್ಕ ಅವಧಿ:— ಪರೀಕ್ಷೆಗೆ ಕೂಡ್ರಲಿಚ್ಛಿಸುವವರು ೧೯೬೦ ಅಗಸ್ಟ ೩೧ನೆಯ ತಾರೀಖಿನ ಒಳಗಾಗಿ ನಮ್ಮ ಕಚೇರಿಗೆ ಮುಟ್ಟುವಂತೆ ಅಪೇಕ್ಷಾ ಪತ್ರವನ್ನು ಕಳುಹಿಸತಕ್ಕದ್ದು. [ಗುಂಡು ಮಕ್ಕಳ ಸರಕಾರಿ ಟ್ರೇನಿಂಗ ಕಾಲೇಜ, ಧಾರವಾಡ.]

೪. ಪರೀಕ್ಷೆಯ ಸ್ಥಳ, ದಿವಸ ಹಾಗು ವೇಳೆ:— ಧಾರವಾಡ ಗಂಡು ಮಕ್ಕಳ ಸರಕಾರಿ ಟ್ರೇನಿಂಗ ಕಾಲೇಜದಲ್ಲಿ ಈ ಪರೀಕ್ಷೆಯು ೧೯೬೦ನೆಯ ಇಸವಿ ಸಪ್ಟಂಬರ ತಿಂಗಳ ೧೨, ೧೩, ಮತ್ತು ೧೪ ಈ ಮೂರು ದಿನ ಜರುಗುವದು.

೫. ಪ್ರಶ್ನೆ ಕಾಗದಗಳು:— ಪ್ರತಿಯೊಂದು ಕಾಗದಕ್ಕೆ ೩ ಘಂಟೆ ಅವಧಿಯೂ ೧೦೦ ಗುಣಗಳೂ ಉಂಟು.

ಮೊದಲನೆಯ ಕಾಗದ:— ಹಳಗನ್ನಡ ನಿಬಂಧ ೪೦ ಗುಣಗಳು, ಹೊಸಗನ್ನಡದ ನಿಬಂಧ ೬೦ ಗುಣಗಳು.

ಎರಡನೆಯ ಕಾಗದ:— ಕನ್ನಡ ಬಾವುಟದ ಕವಿತಾ ಭಾಗ ೫೦ ಗುಣಗಳು. ಹಳಗನ್ನಡದ ಗೊತ್ತಿದ್ದ ಗದ್ಯ ಸಂಗ್ರಹ ೫೦ ಗುಣಗಳು.

ಮೂರನೆಯ ಕಾಗದ:— ವ್ಯಾಕರಣ ಮತ್ತು ಛಂಧಸ್ಸು ೫೦ ಗುಣಗಳು. ಹನ್ನೆರಡನೆಯ ಶತಮಾನದ ಕನ್ನಡ ಸಾಹಿತ್ಯ ೫೦ ಗುಣಗಳು.

ಕನ್ನಡ ಬಾವುಟದಲ್ಲಿಯ ಕವಿತಾ ವಿವರಣೆ:— [೧] ರಾಷ್ಟ್ರಕೂಟ ರಾಜನ ಶಾಸನ (ಪುಟ ೫) [೨] ಕನ್ನಡ ನಾಡಿನ ಜೆಲುವು (ಪುಟ ೧೭ ರಿಂದ ೨೦ ಪೂರ್ಣ) [೩] ಬಸವಣ್ಣನವರ ಗುಣ (ಪುಟ ೪೫) [೪] ಮಹಾದೇವಿಯಕ್ಕ (ಪುಟ ೪೬–೪೯ ಪೂರ್ಣ) [೫] ಕನಕದಾಸರು (ಪುಟ ೫೯–೬೧ ಪೂರ್ಣ) [೬] ಅರುಣೋದಯ (ಪುಟ ೯೭) [೭] ಕರ್ಣಾಲದ ವೈಭವ (ಪುಟ ೧೦೦) [೮] ಕೊಡಗು (ಪುಟ ೧೦೨) [೯] ತೆಂಕಣ ಗಾಳಿಯಾಟ (ಪುಟ ೧೦೬) [೧೦] ಕುಮಾರವ್ಯಾಸ (ಪುಟ ೧೨೧) [೧೧] ಬೇಲೂರಿನ ಶಿಲಾಬಾಲಿಕೆಯರು (ಪುಟ ೧೨೬).

ಹಳಗನ್ನಡದ ಗೊತ್ತಿದ್ದ ಗದ್ಯ:— ಪಂಡಿತ ಮ. ಪ್ರ. ಪೂಜಾರರಿಂದ ಸಂಪಾದಿತ ದುರ್ಗಸಿಂಹನ **ಪಂಚತಂತ್ರ ಸಾರಮ್.**

೧೨ನೆಯ ಶತಮಾನದ ಸಾಹಿತ್ಯ:— ಕನ್ನಡ ಕವಿ ಚರಿತೆಯ ೧ನೆಯ ಭಾಗ ಮತ್ತು ಇದು ವರೆಗೆ ಅಚ್ಚಾದ ಕನ್ನಡ ಸಾಹಿತ್ಯ ಇತಿಹಾಸದ ಗ್ರಂಥಗಳು.

ಧಾರವಾಡ
ತಾ. ೧–೪–೧೯೬೦

ಗುಂಡೇರಾವ ಜೋಶಿ
ಪ್ರಿನ್ಸಿಪಾಲ, ಗಂಡು ಮಕ್ಕಳ ಸರಕಾರಿ ಟ್ರೇನಿಂಗ ಕಾಲೇಜ, ಧಾರವಾಡ

ಮುಂದಿನ ವರ್ಷ ಎಪ್ರಿಲ್‌ದಲ್ಲಿ ಅಮಲಿನಲ್ಲಿ ಬರಲಿರುವ ತೃತೀಯ ಪಂಚವಾರ್ಷಿಕ ಯೋಜನೆಯ ವಿಹಂಗಮನೋಟ

[ದಿ ಮಾರ್ಚ್ ಆಫ್ ಇಂಡಿಯಾ – ಎಂಬ ಸರಕಾರೀ ಪ್ರಕಟನೆಯ ಆಧಾರದಿಂದ]

ಲೇಖಕರು :— **ಟಿ. ತಟ್ಟೆ ರಾಮರಾಯರು,** ಎಮ್.ಎ.

ಭಾರತದ ಮೂರನೆಯ ಪಂಚವಾರ್ಷಿಕ ಯೋಜನೆಯು ಮುಂದಿನ ಏಪ್ರಿಲ್‌ದಲ್ಲಿ ಆರಂಭವಾಗುವದು.

ಈ ಯೋಜನೆಯು ಸುಮಾರು ೯೯೫೦ ಕೋಟಿ ರೂಪಾಯಿ ಬಂಡವಾಳವನ್ನು ತೊಡಗಿಸುವ ವಿಚಾರವನ್ನಿಟ್ಟುಕೊಂಡಿದೆ. ಯೋಜನೆಯ ಬಗ್ಗೆ ಉಚ್ಚ ಮಟ್ಟದ ನಿರ್ಣಯ ಮಾಡಲು ಅಧಿಕಾರವುಳ್ಳ ರಾಷ್ಟ್ರೀಯ ವಿಕಾಸ ಸಂಸತ್ತು (ನ್ಯಾಶನಲ್ ಡೆವಲಪ್‌ಮೆಂಟ್ ಕೌನ್ಸಿಲ್) ಈ ಅಂದಾಜನ್ನು ಇಟ್ಟುಕೊಂಡಿದೆ.

ಈ ಸಂಸತ್ತಿನಲ್ಲಿ ರಾಷ್ಟ್ರದ ಮುಖ್ಯ ಮಂತ್ರಿಗಳೇ ಆದ ಕಾರ್ಯಾಧ್ಯಕ್ಷರನ್ನೊಳಗೊಂಡು ಯೋಜನಾ ಆಯೋಗದ ಸದಸ್ಯರೂ, ಕೇಂದ್ರ ಮಂತ್ರಿ ಮಂಡಲವೂ ಹಾಗು ರಾಜ್ಯಗಳ ಮುಖ್ಯ ಮಂತ್ರಿಗಳೂ ಇರುವರು.

ಯೋಜನಾ ಆಯೋಗವು ತನ್ನ ವರದಿಯಲ್ಲಿ ಯಾವುದರಲ್ಲಿ ಎಷ್ಟೆಷ್ಟು ಬಂಡವಲವನ್ನು ತೊಡಗಿಸಬೇಕು ಆರ್ಥಿಕ ಉತ್ಪನ್ನದ ಬಾಬುಗಳು ಯಾವವು, ಪ್ರಥಮ ಪ್ರಾಶಸ್ತ್ಯದ ವಿಷಯಗಳಾವವು, ಆರಂಭದ ಪರಿಸ್ಥಿತಿಯ ಅನಿವಾರ್ಯ ಅಂಶಗಳು—ಇವೆಲ್ಲವುಗಳ ರೂಪರೇಷೆಯನ್ನು ಮಂಡಿಸಿದ್ದನ್ನು ರಾಷ್ಟ್ರೀಯ ವಿಕಾಸ ಸಂಸತ್ತು ಕಳೆದ ಮಾರ್ಚದಲ್ಲಿ ನಡೆದ ಸಭೆಯಲ್ಲಿ ಒಪ್ಪಿಕೊಂಡಿದೆ. ಸಂಸತ್ತಿನ ಅಭಿಪ್ರಾಯದಂತೆ, ಭಾರತದ ಮೂರನೆಯ ಯೋಜನೆಯ ಯಶಸ್ಸಿಗೆ ಬೇಕಾಗಿರುವ ಅತಿ ಮಹತ್ವದ ಅಗತ್ಯಗಳಲ್ಲಿ ವಸ್ತುಗಳ ಕ್ರಯದ ಮಟ್ಟವನ್ನು ಸ್ಥಿರವಾಗಿರಿಸುವದೂ ಒಂದಾಗಿದೆ.

ಮೂರನೆಯ ಯೋಜನೆಯಲ್ಲಿ ಕೈಕೊಳ್ಳಬೇಕಾದ ಮುಖ್ಯ ಕಾರ್ಯಗಳಾವವೆಂದರೆ: ಪ್ರತಿವರ್ಷ ಕನಿಷ್ಠ ಪ್ರತಿಶತ ೫ ರಷ್ಟು ರಾಷ್ಟ್ರದ ಉತ್ಪನ್ನದಲ್ಲಿ ಹೆಚ್ಚಳವನ್ನು ಸಾಧಿಸುವದು; ಈ ಯೋಜನೆಗಿಂತ ಇನ್ನು ಮುಂದೆ ಬರಬಹುದಾದ ಯೋಜನೆಯ ಅವಧಿಗಳಲ್ಲಿ ಈ ಹೆಚ್ಚಳದ ಪ್ರತಿಶತವನ್ನು ಕಾಯ್ದುಕೊಂಡು ಬರುವಂತೆ ಬಂಡವಾಳ ಹಂಚಿಕೆಯ ರೀತಿಯನ್ನೂ ಇಟ್ಟುಕೊಳ್ಳಲಾಗಿದೆ.

ಆಹಾರ ಧಾನ್ಯಗಳಲ್ಲಿ ಸ್ವಾವಲಂಬಿತ್ವವನ್ನು ಮುಟ್ಟುವದು; ಉದ್ಯಮಗಳಿಗೆ ಹಾಗು ನಿರ್ಯಾತಗಳಿಗೆ ಸಾಕಾಗುವಷ್ಟು ಕೃಷಿಯ ಉತ್ಪಾದನೆಯನ್ನು ಹೆಚ್ಚಿಸುವದು.

ಉಕ್ಕು, ಉಶವಲು, ಶಕ್ತಿ ಉತ್ಪಾದನೆಯಂತಹ ವಿಶೇಷವಾಗಿ ಯಂತ್ರನಿರ್ಮಿತಿಯ ಮೂಲಭೂತ ಉದ್ಯೋಗಗಳನ್ನು ಸ್ಥಾಪಿಸುವದು; ಇದರಿಂದ ಮುಂದಿನ ಹತ್ತಾರು ವರ್ಷಗಳಲ್ಲಿ ಉದ್ಯೋಗೀಕರಣದ ಮುನ್ನಡೆಯಾದಂತೆ ಹತ್ತುವ ಸಾಧನಗಳನ್ನು ದೇಶದಲ್ಲಿರುವ ವಸ್ತುಗಳಿಂದಲೇ ಪಡೆಯಬಹುದು. ಕೆಲಸದ ಅವಕಾಶಗಳು ಹೇಳಿಕೊಳ್ಳುವಷ್ಟು ಹೆಚ್ಚಾಗುವಂತೆ ನೋಡಿಕೊಳ್ಳುವದು.

ಆದಾಯ ಮತ್ತು ಸಂಪತ್ತಿನ ವಿಷಮತೆಯನ್ನು ಕಡಿಮೆ ಮಾಡುವದು; ಆರ್ಥಿಕ ಬಲದ ಹಂಚಿಕೆಯನ್ನು ಆದಷ್ಟು ಸರಿಮಾಡುವದು.

ಸಂಸತ್ತು ಭಾರತದ ಜನಸಂಖ್ಯೆಯು ಯಾವ ಮಾನದಲ್ಲಿ ಹೆಚ್ಚಾಗಬಹುದೆಂಬುದರ ಅಂದಾಜನ್ನು ಮಾಡಿಕೊಂಡಿದೆ. ಮೂರನೆಯ, ನಾಲ್ಕನೆಯ, ಐದನೆಯ ಯೋಜನೆಗಳ ಕಾಲಕ್ಕೆ ಜನಸಂಖ್ಯೆಯ ಹೆಚ್ಚಳದ ವಾರ್ಷಿಕ ಪ್ರಮಾಣವು ೨.೧೪ ಪ್ರತಿಶತ, ೧.೯ ಪ್ರತಿಶತ ಮತ್ತು ೧.೪೭ ಪ್ರತಿಶತ ಆಗುವದನ್ನು ನುಂಜೆಯೇ ಕಂಡು ಹಿಡಿಯಲಾಗಿದೆ. ಜೀವನ ಮಟ್ಟಗಳ ಏರಿಕೆ ಮತ್ತು ಉದ್ಯಮೀಕರಣದಿಂದಾಗುವ ಬದಲಾವಣೆಗಳು ಜನನದ ಪ್ರಮಾಣವನ್ನು ಕಡಿಮೆ ಮಾಡುವದಲ್ಲದೆ ಕೌಟುಂಬಿಕ ಯೋಜನೆಯ ಕಾರ್ಯಕ್ರಮಗಳಿಗೂ ವಿಶೇಷ ಗಮನವನ್ನೀಯಲಾಗುವದು.

ಇನ್ನು ಪ್ರಥಮ ಪ್ರಾಶಸ್ತ್ಯದ ಮಾತನ್ನು ಹೇಳುವುದಾದರೆ ಕೃಷಿಗೆ ಪ್ರಥಮ ಸ್ಥಾನವನ್ನು ಕೊಡಲಾಗುವದು,

ಜೊತೆಜೊತೆಯಾಗಿ ಮೌಲಿಕ ಉದ್ಯಮಗಳ ವಿಕಾಸಕ್ಕೆ ಹೆಚ್ಚಿಗೆ ಮಹತ್ವವನ್ನು ಕೊಡಲಾಗುವದು; ಇವು ಯಾವ ವೆಂದರೆ, ಉಕ್ಕು, ಯಂತ್ರಗಳ ನಿರ್ಮಿತಿ, ಉರವಲ ಸಾಮಗ್ರಿ ಮತ್ತು ವಿದ್ಯುತ್ತೇಮುಖ್ಯವಾದ ಶಕ್ತಿಗಳ ಉತ್ಪಾದನೆ, ಇವುಗಳನ್ನೇ ನಮ್ಮ ಆರ್ಥಿಕ ಪ್ರಗತಿಯು ಆಶ್ರಯಿಸಿರುವದು.

ಎಲ್ಲಾ ಮಟ್ಟಗಳಲ್ಲಿಯೂ ತಾಂತ್ರಿಕ ಶಿಕ್ಷಣಕ್ಕೆ ಹೆಚ್ಚು ಪ್ರಾಶಸ್ತ್ಯವನ್ನು ಕೊಡಲಾಗುವದು. ಸಂಸತ್ತಿನ ಉದ್ಘಾಟನ ಭಾಷಣದಲ್ಲಿ ಪ್ರಧಾನ ಮಂತ್ರಿಗಳು ಭಾರತದ ಯೋಜನೆಯ ಧೋರಣದ ಬಗೆಗೆ ಈ ರೀತಿ ಹೇಳಿದರು:

ಯೋಜನೆಯು ಸಂತತವಾಗಿ ನಡೆದಿರುವ ಕ್ರಮ ವಾಗಿದ್ದು ಭಾರತದ ಪಂಚವಾರ್ಷಿಕ ಯೋಜನೆಗಳು ಒಂದಕ್ಕೊಂದು ನಿಕಟವಾದ ಸಂಬಂಧವುಳ್ಳವಾಗಿವೆ. ಎರಡನೆಯ ಯೋಜನೆಯಲ್ಲಿ ಉತ್ತರೋತ್ತರ ಯೋಜನೆ ಗಳ ಮುನ್ನೋಟವು ಅಡಕವಾಗಿತ್ತು; ಮತ್ತು ಮೂರ ನೆಯ ಯೋಜನೆಗೆ ನಿಶ್ಚಿತ ಸ್ವರೂಪವನ್ನು ಕೊಡುವ ಕಾಲಕ್ಕೆ ಭಾರತವು ನಾಲ್ಕನೆಯ ಮತ್ತು ಐದನೆಯ ಯೋಜನೆಗಳನ್ನು ಸಹ ಲಕ್ಷದಲ್ಲಿಟ್ಟುಕೊಳ್ಳಬೇಕಾಗುವದು. ಯೋಜನೆಯ ಕಾರ್ಯದಲ್ಲಿ ದೊರೆತ ಅನುಭವ ಹಾಗು ಅಂಕಿಸಂಖ್ಯೆಗಳ ಮಾಹಿತಿಯಿಂದ ಯೋಜನೆಯಲ್ಲಿ ಅಡಕ ವಾಗಿರುವ ವಿವಿಧವಾದ ಅಂಶಗಳನ್ನು ಆಲೋಚಿಸುವದು ಈಗ ಭಾರತಕ್ಕೆ ಸುಸಾಧ್ಯವಾಗಿದೆ. ಯಾವುದರ ಪ್ರಮಾಣ ವನ್ನು ನಿರ್ಣಯಿಸುವದು ಅತ್ಯಂತ ಕಠಿಣವಾದುದೋ ಅಂತಹ ಎಲ್ಲಕ್ಕೂ ಮಹತ್ವದ ಅಂಶವೆಂದರೆ–ದುಡಿತ ಪರಿ ಶ್ರಮಗಳ ಅಂಶ–ದುಡಿತದಲ್ಲಿ ಜನರು ಎಷ್ಟು ಕಷ್ಟ ಪಡಲಿಕ್ಕೆ ಸಿದ್ಧರಿರುವರು ಎಂಬುದು.

ಯೋಜನೆ ಎನ್ನುವದು ಆಗಬೇಕಾಗಿರುವ ಬೇರೆ ಬೇರೆ ಕೆಲಸಗಳ ಬರಿಯ ಒಂದು ಪಟ್ಟಿಯಲ್ಲ ಅಥವಾ ರಾಜಕೀಯ ವಿಚಾರಪ್ರಣಾಲಿ ಮಾತ್ರವಲ್ಲ. ಕೆಲವೊಂದು ಸ್ಪಷ್ಟವಾದ ಗುರಿಗಳನ್ನು ಹಾಕಿಕೊಳ್ಳುವದರಲ್ಲಿಯೂ ಅವು ಗಳನ್ನು ಸಾಧಿಸಲು ಉಪಾಯಗಳನ್ನು ಸೂಚಿಸುವದ ರಲ್ಲಿಯೂ ಅದು ಇಟ್ಟುಕೊಳ್ಳಬೇಕಾದ ವಿವೇಕಪೂರ್ಣ ವಾದ, ಸಯುಕ್ತಕವಾದ ಹಾಗು ಶಾಸ್ತ್ರೀಯವಾದ ದೃಷ್ಟಿ ಯಾಗಿರುತ್ತದೆ.

ಇಂದಿನ ಪರಿಸ್ಥಿತಿಯಲ್ಲಿ ಜೀವನ ಮಟ್ಟಗಳನ್ನು ಎತ್ತರಿಸುವದು ಹೆಚ್ಚು ಉತ್ಪಾದನೆ ಮತ್ತು ಹೆಚ್ಚು ಸೂಕ್ತವಾದ ವಿತರಣೆಗಳನ್ನು ಅವಲಂಬಿಸಿರುತ್ತದೆ. ವಿಜ್ಞಾನವು ನಮಗೆ ಇಂದು ನೀಡಿದ ಆಧುನಿಕ ತಂತ್ರ ಗಳನ್ನು ಸಂಪೂರ್ಣವಾಗಿ ಉಪಯೋಗಿಸಿಕೊಳ್ಳುವದನ್ನು ಬಿಟ್ಟರೆ ಸ್ವಾವಲಂಬಿಯಾದ ಹಾಗು ಸ್ವಾಭಾವಿಕವಾಗಿ ತಂತಾನೇ ಮುಂದುವರಿಯುವ ಆರ್ಥಿಕ ಪದ್ಧತಿಯ ಒಂದು ಗಟ್ಟಿಯಾದ ತಳಪಾಯವನ್ನು ಹಾಕುವದು ಸಾಧ್ಯವಿಲ್ಲ.

ಕಳೆದ ಹಲವಾರು ವರ್ಷಗಳಲ್ಲಿ ಭಾರತವು ಸ್ತುತ್ಯ ವಾದ, ಅದೇಕೆ ಹೇಳಿಕೊಳ್ಳುವಂಥ ಪ್ರಗತಿಯನ್ನು ಎಲ್ಲ ಬಾಬತಿನಲ್ಲಿಯೂ ಸಾಧಿಸಿದೆ. ಇದರ ಅರ್ಥ ಯಾವುದರ ಲ್ಲಿಯೂ ಅಯಶಸ್ಸು ಉಂಟಾಗಿಯೆ ಇಲ್ಲವೆಂದು ಅಥವಾ ಸಮತೂಕ ತಪ್ಪಿಲ್ಲವೆಂಡಾಗಲಿ ಅಲ್ಲ. ಯಾವ ಕೆಲಸಕ್ಕೆ ದೀರ್ಘಾವಧಿಯು ಹಿಡಿಯಬಹುದಾಗಿತ್ತೋ ಅಂಥದನ್ನು ಅಲ್ಪಾವಧಿಯಲ್ಲಿಯೇ ಮಾಡಲು ಪ್ರಯತ್ನಿಸಿದ್ದರಿಂದ ಉಂಟಾದ ಪರಿಣಾಮಗಳು ಅವು ಎಂದು ಹೇಳಬೇಕು.

ಕೃಷಿಗೂ ಉದ್ಯಮಗಳಿಗೂ ವಿರೋಧವೇನೂ ಇಲ್ಲ. ಅವೆರಡೂ ನಿಕಟವಾಗಿ ಪರಸ್ಪರ ಸಂಬದ್ಧವಾಗಿವೆ. ಒಕ್ಕಲತನದಲ್ಲಿ ಪ್ರಗತಿಯಾಗದಿದ್ದ ಪಕ್ಷಕ್ಕೆ ಔದ್ಯಮಿಕ ಪ್ರಗತಿಯು ಆಗದು. ಮತ್ತು ಹಾಗೆಯೇ ಕೃಷಿಗೆ ಬೇಕಾದ ಅಗತ್ಯಗಳನ್ನು ಪೂರೈಸುವದಕ್ಕೂ ಅನೇಕ ವರ್ಷಗಳಿಂದ ಬಿದ್ದಲ್ಲಿಯೇ ಬಿದ್ದ ಸ್ಥಿತಿಯಿಂದ ಹೊರಗೆ ಬರುವದಕ್ಕೆ ಮತ್ತು ಯೋಜಿತ ಪ್ರಗತಿಗೆ ಅವಶ್ಯವಿದ್ದ ಪರಿಸ್ಥಿತಿಯನ್ನು ನಿರ್ಮಾಣ ಮಾಡುವದಕ್ಕೂ ಒಂದು ಶಕ್ತಿಯುತ ಚಾಲನೆಯನ್ನು ಕೊಡುವದಕ್ಕೂ ಔದ್ಯಮಿಕ ಮುನ್ನಡೆಯು ಅವಶ್ಯವಿದೆ.

ಉಕ್ಕು, ಯಂತ್ರರಚನೆಯಂತಹ ಮೌಲಿಕ ಉದ್ಯೋಗಗಳಲ್ಲಿ ಭಾರತವು ಮುಂದಾಗದಿದ್ದರೆ ಅದು ಯಾವಾಗಲೂ ಪರದೇಶಗಳನ್ನು ಅವಲಂಬಿಸಿ ಕೂಡ ಬೇಕಾಗುವದು: ಇದಲ್ಲದೆ ಪರದೇಶದ ಹಣಕಾಸಿಗಾಗಿ ಮಿತಿಮೀರಿ ವೆಚ್ಚವನ್ನು ತೆರಬೇಕಾಗುವದು. ಮೌಲಿಕ ಉದ್ಯೋಗಗಳ ಯೋಜನೆಯು ದೀರ್ಘಾವಧಿಯನ್ನು ಲಕ್ಷದಲ್ಲಿಟ್ಟುಕೊಳ್ಳಬೇಕಾಗುವದು, ಏಕೆಂದರೆ ಉಕ್ಕಿನ ಉತ್ಪಾದನೆಯ ಕಾರ್ಖಾನೆಗಳನ್ನು ಸ್ಥಾಪಿಸುವದಕ್ಕೆ ಬಹು ಕಾಲ ಹಿಡಿಯುವದು. ಈ ಉದ್ಯೋಗಗಳು ವಿಸ್ತಾರ ವಾಗುವಾಗ ಕಲ್ಲಿದ್ದಲಿಯಂತಹ ಕಚ್ಚಾಮೂಲ ದ್ರವ್ಯಗಳಿ ಗಾಗಿ ಬೇಡಿಕೆಯು ತೀವ್ರಗೊಳ್ಳುವದು. ಈ ಕಚ್ಚಾ ದ್ರವ್ಯಗಳ ಕೊರತೆಯಿಂದಲೇ ಭಾರತದ ಪ್ರಗತಿಗೆ ಅಡ್ಡಿ

ಯಾಗುವದು. ಆ ಪ್ರಗತಿಗೆ ಹೆಚ್ಚು ಕಚ್ಚಾ ಮಾಲು ಬೇಕೆಂದು ತಿಳಿಯಬರುವದು.

ಖಾಸಗಿ ಜನರ ಹಾಗೂ ಸಾರ್ವಜನಿಕ ಔದ್ಯೋಗಿಕ ಕಾರ್ಯಕ್ಷೇತ್ರಗಳ ಹಕ್ಕುಬಾಧ್ಯತೆಗಳಲ್ಲಿ ಭಾರತ ಸರಕಾರದ ಧೋರಣವು ಹಲವೇ ಸಿರಿವಂತರ ಕೈಯಲ್ಲಿ ಆರ್ಥಿಕ ಸಾಮರ್ಥ್ಯವು ಕೇಂದ್ರೀಕೃತವಾಗಕೂಡದು ಎಂದು ಘಟನೆಯಲ್ಲಿ ಸ್ಪಷ್ಟವಾಗಿ ಕೇಳಿದ ಮಾತನ್ನು ಮಾನ್ಯ ಮಾಡುವದು. ಈ ಧೋರಣೆಯಲ್ಲಿ ತಾತ್ಕಾಲಿಕ ವಿಧಾಯಕ ದೃಷ್ಟಿಯಿದೆ; ಅದರ ಉದ್ದೇಶವು ಉತ್ಪಾದನೆಯನ್ನು ಹೆಚ್ಚಿಸುವದೇ ಆಗಿದೆ. ಯಂತ್ರಗಳಿಗಿಂತ ಹೆಚ್ಚಾಗಿ ಜನರ ಬುದ್ಧಿವಂತಿಕೆ ಮತ್ತು ದೇಹದ ಬಲವೇ ಭಾರತವು ಪ್ರಗತಿಪಥದಲ್ಲಿ ಮುಂದಡಿಯಿಡುವದರಲ್ಲಿ ಅತಿ ಮುಖ್ಯವಾಗಿದೆ. ಹೊಸ ಯಂತ್ರತಂತ್ರಗಳನ್ನು ಇಟ್ಟುಕೊಳ್ಳಬಹುದಾದರೂ ಭಾರತದ ಗ್ರಾಮಾಂತರಗಳ ಪ್ರಗತಿಯು ಕೊನೆಗೆ ಒಕ್ಕಲಿಗನನ್ನೇ ಅವಲಂಬಿಸಿದೆ. ಆತನಿಗೆ ಹೆಚ್ಚು ಪ್ರಯತ್ನ ಮಾಡುವದರಲ್ಲಿ ಸ್ಫೂರ್ತಿಯನ್ನು ಯಾವ ವಿಷಯವು ಕೊಟ್ಟೀತು ಎಂಬುದನ್ನೇ ನಾವು ಮುಖ್ಯವಾಗಿ ವಿಚಾರಿಸಬೇಕು. ಇದರಿಂದ ನಮಗೆ ಸಾಂಘಿಕ ವಿಕಾಸ ಕಾರ್ಯಕ್ರಮ (ಕಮ್ಯೂನಿಟಿ ಡೆವಲಪ್‌ಮೆಂಟ್ ಪ್ರೋಗ್ರಾಮ್), ಸಹಕಾರ ಚಳವಳಿ, ಪಂಚಾಯತ ಪದ್ಧತಿಯ ಪುನರುಜ್ಜೀವನ, ಪಂಚಾಯತ ಸಮಿತಿಗಳ ಸ್ಥಾಪನೆ ಇತ್ಯಾದಿ ಸಂಸ್ಥೆಗಳ ನೂತನ ಪರಿವರ್ತನ ಇವುಗಳ ಪ್ರಯೋಜನದ ಮನವರಿಕೆಯಾಗದೇ ಇರದು.

ಸ್ವಾತಂತ್ರ್ಯಕ್ಕಾಗಿ ಹೋರಾಡಿದ ದಿನಗಳಲ್ಲಿ ಈ ದೇಶದ ಜನರು ಕಲಿತ ಪಾಠವನ್ನು ಎಂದೂ ಮರೆಯಬಾರದು; ಅದರ ಪುನಃ ಸ್ಮರಣೆ ಮಾಡಿಕೊಳ್ಳಬೇಕು— ಸ್ವಾವಲಂಬನದ ಪಾಠವನ್ನು.

ಒಟ್ಟು ಹಣದ ವಿನಿಯೋಗ— ೯೯೫೦ ಕೋಟಿ ರೂ. ಗಳಲ್ಲಿ ಸಾರ್ವಜನಿಕ ಕ್ಷೇತ್ರ ಭಾಗದಲ್ಲಿ ೫೯೫೦ ಕೋಟಿ ರೂ. ನ್ನೂ ೪೦೦೦ ರೂ. ಕೋಟಿಯನ್ನು ಖಾಸಗಿ ಕ್ಷೇತ್ರ ಭಾಗದಲ್ಲಿಯೂ ವಿನಿಯೋಗಿಸಲಾಗುವದು. ಈ ಒಟ್ಟು ಹಾಕಿದ ಬಂಡವಾಳವಲ್ಲದೆ ಸಾರ್ವಜನಿಕ ಭಾಗದಲ್ಲಿ (ಪಬ್ಲಿಕ್ ಸೆಕ್ಟರ್) ೧೦೫೦ ಕೋಟಿ ರೂ. ಹೆಚ್ಚಿಗೆ ಈಗ ಹಾಕಿದ್ದೊಂದು ಇರುವದರಿಂದ ಒಟ್ಟು ಸಾರ್ವಜನಿಕ ಭಾಗದಲ್ಲಿ ೬೦೦೦ ಕೋಟಿ ರೂ. ಆಯಿತು. ಇನ್ನು ಇದರಲ್ಲಿ ರಾಜ್ಯ ಸರಕಾರಗಳು ೧೧೫೦ ಕೋಟಿ ರೂ. ಕೂಡಿಸಿಕೊಡಬೇಕು, ಕೇಂದ್ರ ಸರಕಾರವು ೫೬೫೦ ಕೋಟಿ ರೂ. ಕೂಡಿಸುವದು.

ಖಾಸಗಿ ಭಾಗದಲ್ಲಿ ಮೂರನೆಯ ಯೋಜನೆಯಲ್ಲಿ ತೊಡಗಿಸುವ ಹಣವು ಒಟ್ಟು ೪೦೦೦ ಕೋಟಿ ರೂ. ಗಳೆಂದು ಅಂದಾಜು ಮಾಡಲ್ಪಟ್ಟಿದೆ. ಇದು ಬೇರೆ ಬೇರೆ ಖಾತೆಗಳಲ್ಲಿ ಹೀಗೆ ಹಂಚಲ್ಪಟ್ಟಿದೆ: ಉದ್ಯಮ ಮತ್ತು ಖನಿಜಗಳಿಗೆ ೧೦೦೦ ಕೋಟಿ ರೂ.; ಸಾರಿಗೆ ಸಂಪರ್ಕ, ವಿದ್ಯುದಾದಿ ಶಕ್ತಿಗೆ ೨೫೦ ಕೋಟಿ ರೂ.; ಕೃಷಿಗೆ ೮೦೦ ಕೋಟಿರೂ.; ಹಳ್ಳಿ ಮತ್ತು ಸಣ್ಣ ಉದ್ಯೋಗಗಳಿಗೆ ೨೬೫ ಕೋಟಿ ರೂ.; ನಗರ ಮತ್ತು ಹಳ್ಳಿಗಳಲ್ಲಿ ಮನೆ ಮೊದಲಾದ ಕಟ್ಟಡ ಕೆಲಸಕ್ಕೆ ೧೦೭೫ ಕೋಟಿ ರೂ.; ಒಟ್ಟು ಕಲಮುಗಳ ಮಾಹಿತಿ ಸಂಗ್ರಹಕ್ಕೆ (ಇನ್‌ವೆಂಟರೀಜ್) ೬೦ ಕೋಟಿ ರೂ.

ಸಾರ್ವಜನಿಕ ವಿಭಾಗದಲ್ಲಿಯ ಒಟ್ಟು ವಿನಿಯೋಗದ ೬೦೦೦ ಕೋಟಿ ರೂ. ಯನ್ನು ೨ನೆಯ ಯೋಜನೆಯಲ್ಲಿ ಸುಂಸೂಚಿತವಾದ ರಕಮುಗಳಿಗೆ ಹೋಲಿಸಿನೋಡಿರಿ:

ಖಾತೆ		೨ನೇ ಯೋಜನೆಯ ಸೂಚಿತರಕಮು		೩ನೇ ಯೋಜನೆ ರಕಮು	
ಕೃಷಿ ಮತ್ತು ಸಾಂಘಿಕ ವಿಕಾಸ	....	೫೬೦	(ಕೋಟಿ) ರೂ.	೧೦೦೦	(ಕೋಟಿ) ರೂ.
ನೀರಾವರಿ	....	೪೦೦	,,	೬೫೦	,,
ಶಕ್ತಿ ಉತ್ಪಾದನ	....	೪೧೦	,,	೯೦೦	,,
ಗ್ರಾಮಾಂತರ ಸಣ್ಣ ಉದ್ಯೋಗಗಳು	....	೧೪೦	,,	೨೫೦	,,
ಉದ್ಯಮ ಮತ್ತು ಖನಿಜ	....	೪೨೦	,,	೧೩೦೦	,,
ಸಾರಿಗೆ ಸಂಪರ್ಕ	....	೧೩೫೦	,,	೧೬೫೦	,,
ಸಾರ್ವಜನಿಕ ಜೀವನ ಸೌಕರ್ಯದ ಖಾತೆಗಳು	....	೪೪೦	,,	೧೨೫೦	,,
ಬೇರೆ ಬೇರೆ ಕಲಮುಗಳ ಮಾಹಿತಿ ಸಂಗ್ರಹ	....	—		೨೦೦	,,
		೪೫೫೦	(ಕೋಟಿ) ರೂ.	೬೦೦೦	(ಕೋಟಿ) ರೂ.

ಆದಾಯದ ಬಾಬುಗಳನ್ನು ವಿಚಾರಿಸಿದ ಸಮಿತಿಯು ಸಾರ್ವಜನಿಕ ವಿಭಾಗದಲ್ಲಿ ಮೂರನೆಯ ಯೋಜನೆಯಲ್ಲಿ ಒಟ್ಟು ತೊಡಗಿಸಬೇಕಾದ ೭೦೦೦ಕೋಟಿ ರೂ.ಯಲ್ಲಿ ಕರ ಗಳನ್ನು ಹೆಚ್ಚಿಸಿ ೧೬೫೦ ಕೋಟಿ ರೂ. ಯನ್ನು ತುಂಬ ಬೇಕು. ಇದರಲ್ಲಿ ಕೇಂದ್ರ ಸರಕಾರವು ೧೧೫೦ ಕೋಟಿ ರೂ. ಕರ ಕೂಡಿಸಬೇಕು; ರಾಜ್ಯ ಸರಕಾರಗಳು ೫೦೦ ಕೋಟಿ ರೂ. ಯನ್ನು ಕೂಡಿಸಬೇಕು.

ಜೀವನ ವಸ್ತುಗಳ ಮೌಲ್ಯದ ವಿಷಯದಲ್ಲಿ ಸಂಸತ್ತು ವಿಚಾರ ನಾಡಿ ಸರ್ವಾನುಮತದಿಂದ ಬಂದ ನಿರ್ಣಯವೇನೆಂದರೆ ಜೀವನ ವಸ್ತುಗಳ ಕ್ರಮಗಳ ಮಟ್ಟವು ಸ್ಥಿರವಾಗಿ ನಿಲ್ಲುವಂತೆ ತಳಪಾಯವನ್ನು ಭದ್ರಪಡಿಸಿದ ರೇನೇ ಮೂರನೆಯ ಯೋಜನೆಯು ಅನುಷ್ಠಾನಕ್ಕೆ ಬರ ಬಹುದೆಂದು. ಧಾರಣೆಗಳ ಏರಿಳಿತದಿಂದ–ವಿಶೇಷತಃ ಆಹಾರ ಪದಾರ್ಥಗಳ ಮತ್ತು ಕೃಷಿ ವಸ್ತುಗಳ ಧಾರಣೆ ಗಳು ಪ್ರತಿವರ್ಷವೂ ಅಲ್ಲದೆ ನಡುನಡುವೆ ಅಲ್ಪಾವಧಿಯ ಲ್ಲಿಯೂ ಆಗುವ ಏರಿಳಿತದಿಂದ ಯೋಜನೆಯಲ್ಲಿ ಮುಟ್ಟ ಬೇಕಾದ ಗುರಿಗಳು ಕುಗ್ಗುವವು, ಅಲ್ಲದೆ ದೇಶಕ್ಕೆ ಬೇಕಾದ ಮೂಲದ್ರವ್ಯಗಳ ಕೊರತೆಯು ತಲೆದೋರುವದು.

ಈ ಸಂದರ್ಭದಲ್ಲಿ ಆಹಾರದ ಬೆಳೆಗಳಿಗೂ ಹೆಚ್ಚು ದುಡ್ಡು ತರುವ ಬೆಳೆಗಳಿಗೂ (ಕ್ಯಾಶ್ ಕ್ರಾಪ್) ಸೂಕ್ತ ವಾದ ಪರಸ್ಪರ ಸಂಬಂಧವಿರಬೇಕು; ಹಾಗು ಒಕ್ಕಲಿಗನು ತನಗೆ ಬೇಕಾದ ಉದ್ಯಮದ ವಸ್ತುಗಳನ್ನು ಯೋಗ್ಯ ಧಾರಣೆಯಿಂದ ಪಡೆಯುವಂತೆ ಅವುಗಳ ಪೂರೈಕೆಯಾಗ ಬೇಕು–ಎಂಬ ಮಾತುಗಳಿಗೆ ಮಹತ್ವವನ್ನು ಕೊಡಬೇ ಕೆಂದು ಹೇಳಲಾಗಿದೆ.

ಯೋಜನೆಯು ಯಶಸ್ವಿಯಾಗಿ ಕಾರ್ಯಗತವಾಗು ವದಕ್ಕೆ ಈ ಕೆಳಗಿನ ಸಂಗತಿಗಳು ಅಗತ್ಯವೆಂದು ಹೇಳಲಾ ಗಿದೆ: ಕೃಷಿಯ ಉತ್ಪಾದನೆಯು ತೀವ್ರವಾಗಿ ಹೆಚ್ಚಾಗು ವದು, ದೇಶದ ಜನಬಲದ ಸಂಪೂರ್ಣ ಉಪಯೋಗ, ಸಾರ್ವಜನಿಕ ಕಾರ್ಯಗಳು ಮಿತವ್ಯಯದಿಂದಲೂ ಸಮರ್ಥ ರೀತಿಯಿಂದಲೂ ಆಚರಣೆಗೆ ತರಲ್ಪಟ್ಟು ಪರ ಮಾವಧಿಯ ಪ್ರತಿಫಲವನ್ನು ಕೊಡುವದು, ಸುಸಂಬದ್ಧ ವಾದ ಏಕೀಕೃತವಾದ ಧಾರಣೆಗಳ ಧೋರಣವನ್ನು ಹಾಕಿ ಕೊಂಡು ಅದನ್ನು ಅಮಲಿನಲ್ಲಿ ತರುವದು, ಕಟ್ಟಡ ಮುಂತಾದವುಗಳನ್ನು ಕಟ್ಟುವ ಖರ್ಚು, ಒಟ್ಟು ಅದಕ್ಕೆ ಸಂಬಂಧಿಸಿದ ಇತರ ಎಲ್ಲ ಖರ್ಚನ್ನು ಕನಿಷ್ಠ ಮಟ್ಟ ದಲ್ಲಿಟ್ಟುಕೊಳ್ಳುವದು, ಅಡಚಿತದ ಉಚ್ಚ ಮಟ್ಟದ ಸಮರ್ಥರೀತಿ, ಸಾರ್ವಜನಿಕ ಹಾಗು ಖಾಸಗಿ ವಿಭಾಗಗಳ ಲ್ಲಿಯ ಯೋಜನೆಯಲ್ಲಿದ್ದ ಕೆಲಸದ ಅನಕಾಶಗಳ ಪರಮಾ ವಧಿಯ ಮಟ್ಟವನ್ನು ಮುಟ್ಟುವದು.

ಸಂಸತ್ತಿನ ಚರ್ಚೆಗಳಲ್ಲಿ ಎರಡು ದೀರ್ಘಾವಧಿಯ ಗುರಿಗಳಿಗೆ ವಿಶೇಷ ಬೆಲೆಯನ್ನು ಕೊಡಲಾಯಿತು. ಬೇರೆ ಬೇರೆ ಪ್ರದೇಶಗಳ ಸಮತೂಕದ ಮತ್ತು ಏಕೀಕೃತವಾದ ವಿಕಾಸ; ಯೋಜನೆಯ ಲಾಭಗಳ ಹೆಚ್ಚಿನ ಪ್ರಮಾಣವು ಹಳ್ಳಿಗಳಿಗೂ ಸಣ್ಣ ನಗರಗಳಿಗೂ ಲಭಿಸುವ ಅವಶ್ಯಕತೆ.

ಜೀವನ ಶಿಕ್ಷಣದಲ್ಲಿ ಚಟುವಟಿಕೆಗಳು

ಲೇಖಕರು :— ಶ್ರೀ ಎಸ್. ಎಸ್. ಭೂಸರಡ್ಡಿ, ಎಸ್.ಟಿ.ಸಿ. ಅಧ್ಯಾಪಕರು, ಕೊಣ್ಣೂರ (ನರಗುಂದ)

ಭಾರತ ಸ್ವಾತಂತ್ರ್ಯ ಸಂಗ್ರಾಮದ ರುದ್ರಭೂಮಿ ಯಲ್ಲಿ ಕೆಚ್ಚಿನಿಂದ ಕಾರ್ಯಮಾಡಿ ರಕ್ತರಹಿತ ಕ್ರಾಂತಿ ಯಿಂದ ಜಗದ ನಂಜನ್ನಿಂಟಿ ಸ್ವಾತಂತ್ರ್ಯಸುಧೆ ನೀಡಿದ ಪೂಜ್ಯ ಗಾಂಧೀಜಿಯವರು ಈ ಯುಗದ ಸೀಮಾ ಪುರು ಷರು. ರಾಷ್ಟ್ರ ಸೇವಾ ರಂಗದಲ್ಲಿ ಶ್ರೇಷ್ಠವಾದ ಸತ್ಪಯುತ ವಾದ ನಾಯಕ ಪಾತ್ರವನ್ನಾಡಿ ನಾಡಿಗೆ ಶುಭೋದಯ ತಂದುಕೊಟ್ಟ, ಅವರು ಭಾರತದ ಜನಮನದ ಸಂಜೀ ವಿನಿ! ತಮ್ಮ ಅನುಭವ, ರಾಷ್ಟ್ರೀಯ ದೃಷ್ಟಿ, ರಾಮ ರಾಜ್ಯದ ಸುಂದರ ಹಿನ್ನಲೆಯಲ್ಲಿ, ಸತ್ಯ ಅಹಿಂಸೆಯ ಅಡಿ ಪಾಯದ ಮೇಲೆ ನಾಗರಿಕತೆಯ ಮಹಾಮಂದಿರ ರಚಿಸಿ, ಮಾನವತೆಯ ಕಳಸ ಕೂಡಿಸಲೆತ್ನಿಸಿದ ಕಾರಣಿಕರು!! ವಿವಿಧೋನ್ಮುಖವಾಗಿ ಹರಿದ ಅವರ ವಿಧಾಯಕ ಕಾರ್ಯ ಕ್ರಮದ ಹೊನಲು ಶಿಕ್ಷಣ ರಂಗದಲ್ಲಿಯೂ ಹರಿಯಿತು. ಅದರ ಪರಿಣಾಮವಾಗಿ ರಾಷ್ಟ್ರೀಯ ಶಿಕ್ಷಣ ತಲೆಯೆತ್ತಿತು.

ಸಾಂಪ್ರದಾಯಿಕ ಶಿಕ್ಷಣವಲ್ಲದೆ, ಜೀವನ ಶಿಕ್ಷಣ ಬಳಕೆಯಲ್ಲಿ ಬಂದಿತು. ಯುಗಪ್ರವರ್ತಕ ಮಹಾತ್ಮಾ ಗಾಂಧೀಜಿಯವರು ಶೈಕ್ಷಣಿಕ ಕ್ಷೇತ್ರದಲ್ಲಿ ಆಮೂಲಾಗ್ರ ಬದಲಾವಣೆ ಮಾಡಿದರು. ಶಿಕ್ಷಣದಿಂದ ಮಗುವಿನ ಸರ್ವಾಂಗೀಣ ಹಾಗೂ ಸರ್ವತೋಮುಖ ಬೆಳವಣಿಗೆ ಆಗಬೇಕು. ಕೇವಲ ಸಾಕ್ಷರತೆಯು ಶಿಕ್ಷಣವಲ್ಲ. ಶಿಕ್ಷಣವು ಕೃತಿ ಮೂಲಕ ಚಟುವಟಿಕೆಗಳ ಮುಖಾಂತರ ಪ್ರಾರಂಭವಾಗಬೇಕು. ಎಂದು ತಮ್ಮ ಅಪಾರ ಅನುಭವದ ಹಿನ್ನೆಲೆಯಿಂದ ಕಂಡು ಹಿಡಿದು ಬಾಪೂಜಿಯವರು ಮೂಲ ಶಿಕ್ಷಣವನ್ನು ಭಾರತಾದ್ಯಂತ ಪ್ರಚಾರ ಮಾಡುವ ಕಾರ್ಯವನ್ನೂ ಕೈಕೊಂಡರು. ಒಂದೆಡೆ ಸ್ವಾಮಿ ವಿವೇಕಾನಂದರು ಕೂಡ "ನಿಷ್ಕ್ರಿಯ ಶಿಕ್ಷಣವು ಮರಣಕ್ಕಿಂತ ಕೀಳು" ಎಂದು ಹೇಳಿರುವರು. ಚಟುವಟಿಕೆಗಳು, ಜೀವನದ ಸ್ವರೂಪ. ಆದುದರಿಂದ ಮಗುವಿನ ಸಮನ್ವಿತ ವಿಕಾಸವಾಗಬೇಕಾದರೆ ಚಟುವಟಿಕೆಗಳು ಅತ್ಯವಶ್ಯವಾಗಿ ಬೇಕೇ ಬೇಕು. ಮಕ್ಕಳ ನಿತ್ಯದ ಚಟುವಟಿಕೆಗಳು ಶಿಕ್ಷಣದ ಸಾಧನಗಳಾಗಬೇಕು. ಅಂದರೆ ಶಿಕ್ಷಣವೂ, ಜೀವನವೂ ಕೂಡಿಯೇ ಸಾಗುವದು. ಅದಕ್ಕಾಗಿ ಜೀವನವೇ ಶಿಕ್ಷಣ, ಶಿಕ್ಷಣವೇ ಜೀವನವೆಂದು ಅಭಿದಾನ ಬಂದಿದೆ.

ಯಾವದೇ ಯುಗದಲ್ಲಿ ಶಿಕ್ಷಣದ ಕಾರ್ಯವು ಯಶಸ್ವಿಯಾಗಿ ಪರಿಪೂರ್ಣತೆ ಪಡೆಯಬೇಕಾದರೆ, ಅದಕ್ಕೆ ಒಂದು ಸುದೃಢವಾದ ಶೈಕ್ಷಣಿಕ ತತ್ವದ ಹಿನ್ನೆಲೆ, ಸುಸಮೃದ್ಧವಾದ ಮಾನಸ ಶಾಸ್ತ್ರದ ತಳಹದಿ, ಮತ್ತು ಜೈತನ್ಯಮಯ ಹಾಗೂ ಉತ್ಸಾಹ ಭರಿತ ಸಾಮಾಜಿಕ ಪರಿಸ್ಥಿತಿ ಈ ಮೂರು ಸಂಗತಿಗಳು ಅವಶ್ಯವಾಗಿ ಬೇಕು. ಚಿಕ್ಕ ಮಕ್ಕಳ ಸಹಜ ಪ್ರವೃತ್ತಿಗಳು, ಅಂತಃಶಕ್ತಿಗಳು, ಒಲವು ಅಭಿರುಚಿಗಳು ಬೆಳೆದು, ಶಾಲೆಗಳಲ್ಲಿ ಉತ್ಸಾಹದಿಂದ ಪಾಠಗಳಲ್ಲಿ ಆಸಕ್ತಿ ವಹಿಸುವಂತೆ ಪ್ರೇರೇಪಿಸುವದೇ ಚಟುವಟಿಕೆಗಳ ಮುಖ್ಯ ಉದ್ದೇಶ. ಮಗುವಿನಲ್ಲಿಯ ಸ್ವಾಭಾವಿಕವಾದ ಸಹಜ ಕಲಾಶಕ್ತಿಗಳನ್ನು ಅರಳಿಸಿ ಜೀವನೋಪಯುಕ್ತ ಕಾರ್ಯಗಳನ್ನು ಮಾಡುತ್ತ ಕಲಿಯುವದರಿಂದ ಆತನಲ್ಲಿ ಬುದ್ಧಿ, ಮನಸ್ಸು, ಹೃದಯಗಳ ಸಮನ್ವಯ ವಿಕಾಸ ಹೊಂದುತ್ತವೆ. ಆನಂದದಾಯಕ, ಉದ್ದೇಶಯುತ, ವ್ಯವಹಾರಯುಕ್ತ, ಚಟುವಟಿಕೆಗಳನ್ನು ಸಂಘಟಿಸುವದರಿಂದ ಮಕ್ಕಳಲ್ಲಿ ಕಲಿಯುವ ಪ್ರವೃತ್ತಿ ಬೆಳೆಯುತ್ತದೆ.

(ಮುಂದುವರಿಯುವದು)

ಪ್ರಾಥಮಿಕ ಶಿಕ್ಷಕರ ತರಬೇತಿ ಸಂಸ್ಥೆಗಳ ಹೊಸ ಅಭ್ಯಾಸ ಪತ್ರಿಕೆ

ಲೇ:— ಶ್ರೀ ಎಚ್. ಜಿ. ಜೋಶಿ

(ಕಳೆದ ಸಂಚಿಕೆಯಿಂದ ಬಂದುದು)

ವಿಷಯಗಳ ಅಭ್ಯಾಸದ ದೃಷ್ಟಿಯಿಂದ ಕೆಲವರಿಗೆ ಬಹು ವಿಚಿತ್ರವಾಗಿ ಕಾಣಬಹುದು. ಏಕೆಂದರೆ ಅಭ್ಯಾಸಕ್ಕಾಗಿಯಾಗಲೀ, ಪರೀಕ್ಷೆಗಾಗಲೀ ಭಾಷೆಯೊಂದನ್ನು ಬಿಟ್ಟು ಬೇರೆ ವಿಷಯಗಳೇ ಇರುವದಿಲ್ಲ. ಆದರೆ ಸೂಕ್ಷ್ಮ ದೃಷ್ಟಿಯಿಂದ ನೋಡಿದಲ್ಲಿ ಹಾಗೆ ಅಚ್ಚರಿಪಡುವ ಕಾರಣ ವಿಲ್ಲವೆಂದು ಅನಿಸುವದು. ತರಬೇತಿ ಸಂಸ್ಥೆಗಳಲ್ಲಿ ಶಿಕ್ಷಕ ವೃತ್ತಿಯನ್ನು ಯಶಸ್ವಿಯಾಗಿ ಹೇಗೆ ಸಾಗಿಸಿಕೊಂಡು ಹೋಗಬೇಕೆಂಬುದನ್ನು ಕಲಿಸುವುದು ಮಹತ್ವವೇ ವಿನಃ ಬರೀ ವಿಷಯಗಳ ಸಂಗ್ರಹ ಚೀಲವನ್ನು ತುಂಬಿಕೊಳ್ಳುವದಲ್ಲ. ಹಾಗು ಎಸ್. ಎಸ್. ಸಿ. ಮಟ್ಟವನ್ನು ಮುಟ್ಟಿದ ವರಾಗಿರುವದರಿಂದ ಅವರಿಗೆ ಹೆಚ್ಚಿನ ವಿಷಯಗಳ ಅಗತ್ಯವು ಅಷ್ಟೊಂದು ಅನಿಸಲಾರದು. ಆ ದೃಷ್ಟಿಯಿಂದ ವಿಷಯಗಳನ್ನು ಬಿಟ್ಟುಕೊಟ್ಟು ಭಾಷೆಯೊಂದನ್ನು ಮಾತ್ರ ಅಭ್ಯಾಸಕ್ಕೆ ಇಡಲಾಗಿದೆ. ಇಲ್ಲಿಯೂ ಕೂಡ ಕೆಳಗಿನಂತೆ ಐಚ್ಛಿಕವಾಗಿ ಆರಿಸಿಕೊಳ್ಳಲು ಅವಕಾಶವನ್ನು ಕಲ್ಪಿಸಲಾಗಿದೆ. ಯಾವುದಾದರೂ ಒಂದನ್ನು ಆರಿಸಿಕೊಳ್ಳಬಹುದಾಗಿದೆ. ಮಾತೃಭಾಷೆ ಇಲ್ಲವೆ ಪ್ರಾದೇಶಿಕ ಭಾಷೆ, ಇಲ್ಲವೆ ಹಿಂದಿ ಅಥವಾ ಇಂಗ್ಲೀಷ ಈ ನಾಲ್ಕರಲ್ಲಿ ಒಂದನ್ನು ಆಯ್ದುಕೊಳ್ಳಬಹುದಾಗಿದೆ.

ಐದನೆಯ ಗುಂಪಿನ ವಿಷಯವಾಗಿ ಈ ಮೊದಲೇ ಹೇಳಲಾಗಿದೆ.

ಇನ್ನು ಆ ಆ ಗುಂಪುಗಳಿಗೆ ವಾರಕ್ಕೆ ಕೊಟ್ಟ ಅವಧಿಗಳನ್ನಷ್ಟು ನೋಡುವಾ:—

	ತಾತ್ವಿಕ	ಪ್ರಾಯೋಗಿಕ	
೧) ಶಿಕ್ಷಣ ಗುಂಪು	೧೨ ಅವಧಿಗಳು	೯ ಅವಧಿಗಳು	= ೨೧
೨) ಮೂಲೋದ್ಯೋಗದ ಗುಂಪು			= ೧೬

ಈ ಹದಿನಾರು ಅವಧಿಗಳಲ್ಲಿ ೧೨ ಮುಖ್ಯ ಮೂಲೋದ್ಯೋಗಕ್ಕೂ ೪ ಉಪಮೂಲೋದ್ಯೋಗಕ್ಕೂ ಉಂಟು.

೩) ಭಾಷೆ	....		೪
೪) ಡ್ರಾಯಿಂಗ	೨ ಅವಧಿಗಳು		
ಸಂಗೀತ	೧ ಅವಧಿ		೫
ಶಾರೀರಿಕ ಶಿಕ್ಷಣ	೨ ಅವಧಿಗಳು		
			೫೬

ಈ ತೆರನಾಗಿ ವಾರದಲ್ಲಿ ಒಟ್ಟು ೪೫ ಅವಧಿಗಳು ನಡೆಯುವವು. ಈ ಅವಧಿಗಳಲ್ಲದೆ ನಿತ್ಯದಲ್ಲಿ **ಸಾಮೂಹಿಕ ಸೂತ್ರ ಯಜ್ಞ**, ಪ್ರಾರ್ಥನೆ, ಸಫಾಯಿ ಮೊದಲಾದ ಸಾಂಘಿಕ ಜೀವನದ ಚಟುವಟಿಕೆಗಳೂ ನಡೆಯುವವು. ಅವು ಪ್ರತ್ಯೇಕ (೪೬ ಅವಧಿ ಬಿಟ್ಟು) ಅವಧಿಗಳಲ್ಲಿಯೇ ನಡೆಯುವವು. ಒಂದು ವಾರದ ಹಳ್ಳಿಯ ವಾಸ್ತವ್ಯವೂ ಇರುವದು. ಈ ಹಳ್ಳಿಯ ವಾಸ್ತವ್ಯವಲ್ಲದೆ ಶಾರೀರಿಕ ಶಿಕ್ಷಣ ಕ್ರಮವನ್ನೂ ಮುಗಿಸಬೇಕಾದರೆ ಒಂದು ವಾರದ 'ಬೀಡು ಬಿಡುವುದ'ನ್ನೂ ಮಾಡಬೇಕಾಗುವದು.

ಈ ತೆರನಾಗಿ ಎಸ್. ಎಸ್. ಸಿ. ಇಲ್ಲವೆ ತತ್ಸಮಾನ ಪರೀಕ್ಷೆಗಳನ್ನೂ ಪಾಸಾದವರಿಗಾಗಿ ಒಂದು ವರುಷದ ಅಭ್ಯಾಸ ಕ್ರಮವಿದ್ದು ಇಲ್ಲಿ ಸ್ಥೂಲರೂಪದಲ್ಲಿ ಪರಿಚಯ ಮಾಡಿಕೊಡಲಾಗಿದೆ.

ಕೇವಲ ಪಿ. ಎಸ್. ಸಿ. ಆದವರಿಗೆ ೨ ವರುಷಗಳ ಅಭ್ಯಾಸಕ್ರಮ ಉಂಟು. ಆದರೆ ಅಭ್ಯಾಸ ಪತ್ರಿಕೆಯೂ ಕೂಡಾ ರಾಜ್ಯದ ತುಂಬೆಲ್ಲ ಒಂದೇ ಬಗೆಯದಾಗಿದ್ದು; ಹೊಸದೇ ಬಳಿಕೆಯಲ್ಲಿ ಶೀಘ್ರದಲ್ಲಿ ಬರಲಿದೆ. ಅದರ ಪರಿಚಯವನ್ನಾದರೂ ಕೂಡಾ ಕಾಲಾಂತರದಲ್ಲಿ ಮಾಡಿ ಕೊಡಲಾಗುವದು.

———

ಇಂತಹದು ಇನ್ನೊಂದಿಲ್ಲ

ಆದರ್ಶ ಹಿಂದಿ-ಕನ್ನಡ ವ್ಯಾಕರಣ I ಬೆಲೆ: ೧ ರೂಪಾಯಿ

ಲೇ.: ಎ. ಎಚ್. ಹುಂಡೇಕಾರ ಮತ್ತು ಎಮ್. ಎಚ್. ಬಿಳಲದವರ

ಪ್ರಾಥಮಿಕ ಶಾಲೆಗಳ ೫, ೬ ಮತ್ತು ೭ನೆಯ ಇಯತ್ತೆಗಳ ಹಿಂದಿ ಅಭ್ಯಾಸ ಪತ್ರಿಕೆಗಸುಸಾರವಾಗಿ ಬರೆಯಲ್ಪಟ್ಟ ಪ್ರಥನು ಹಿಂದಿ-ಕನ್ನಡ ವ್ಯಾಕರಣ ಪುಸ್ತಕ!

ಶಿಕ್ಷಕರಿಗೂ ಹಾಗು ವಿದ್ಯಾರ್ಥಿಗಳಿಗೂ ಸುಗಮವಾಗಿ ತಿಳಿಯುವಂತೆ ವ್ಯಾಕರಣದ ವಿವಿಧ ಅಂಗಗಳನ್ನು ಯೋಗ್ಯ ಉದಾಹರಣೆಗಳೊಂದಿಗೆ ವಿವೇಚಿಸಲಾಗಿದೆ. ಇದರ ಬಗ್ಗೆ ಕೆಳಗಿನ ಮಹನೀಯರು ಈ ರೀತಿ ಅಭಿಪ್ರಾಯಪಟ್ಟಿದ್ದಾರೆ:—

೧) ವಿದ್ಯಾರ್ಥಿಗಳಿಗೆ ಹಾಗು ಶಿಕ್ಷಕರಿಗೆ ಸಮರ್ಪಕವಾದ ರೀತಿಯಲ್ಲಿ ಸಾರ್ಗದರ್ಶನ ಮಾಡಬಲ್ಲದು.
ಶ್ರೀ ಆರ್. ಸಿ. ಭೂಸನೂರಮಠ, ಎಂ.ಎ., ರಾ. ಭಾ. ವಿಶಾರದ.

೨) ಹಿಂದಿ ಕಲಿಯಲೆತ್ನಿಸುವ ಸಣ್ಣವರಿಗೂ ದೊಡ್ಡವರಿಗೂ ಈ ಪುಸ್ತಕವು ತುಂಬ ಉಪಯುಕ್ತವಾಗಿದೆ.
ಪ್ರೊ. ಸರೋಜಿನಿ ಮಹಿಷಿ, ಎಂ.ಎ., ಎಲ್ಎಲ್. ಬಿ., ರಾ. ಭಾ. ರತ್ನ ಜನತಾ ಕಾಲೇಜ, ಧಾರವಾಡ.

೩) ಪ್ರಾಥಮಿಕ ಶಾಲೆಗಳ ವಿದ್ಯಾರ್ಥಿ ಮತ್ತು ಶಿಕ್ಷಕರಿಗೆ ಉಪಯುಕ್ತವಾಗುವ ರೀತಿಯಲ್ಲಿ ಬರೆದಿದ್ದಾರೆ.
ಶ್ರೀ ಎ. ವ್ಹಿ. ಕೌದಿ, ಬಿ. ಎ., ಕಾರ್ಯಾಧ್ಯಕ್ಷ, ಕರ್ನಾಟಕ ಪ್ರಾಂತೀಯ ಹಿಂದಿ ಪ್ರಚಾರ ಸಭಾ, ಧಾರವಾಡ.

೪) ಮಕ್ಕಳ ಮಾತೃಭಾಷೆಯ ವ್ಯಾಕರಣ ಭಾಗಕ್ಕೆ ಹೊಂದಿಕೆಯಾಗಿ ಇದನ್ನು ಸಾಗಿಸಿದ್ದು, ಈ ಹೊತ್ತಿಗೆಯ ವೈಶಿಷ್ಟ್ಯವಾಗಿದೆ. ಶ್ರೀ ಎಸ್. ಎಮ್. ಮೇಗೂರ, ಬಿ.ಎ., ಬಿ.ಟಿ., ಡಿ.ಪಿ.ಈಡಿ., ಡಿ.ಬಿ.ಈ., ಎ.ಓ., ಮು. ಸ್ಕೂಲ ಬೋರ್ಡ, ಧಾರವಾಡ.

೫) ಹಿಂದಿ ಕಲಿಯುವವರಿಗೆ ಕೈದೀವಿಗೆಯಾಗಿದೆ! ಶ್ರೀ ಎಸ್. ವಾಯ್. ಶೀಲವಂತ, ಬಿ.ಎ., ಎಂ.ಈಡಿ., ಡಿ.ಪಿ.ಈಡಿ.,ಡಿ.ಬಿ.ಈ., ರಾ. ಭಾ. ವಿಶಾರದ, ಎ.ಡಿ.ಇ.ಆಯ್., ಧಾರವಾಡ.

ಮೊದಲನೆಯ ಮುದ್ರಣದ ಪ್ರತಿಗಳು ಬಹಳೇ ಕಡಿಮೆ ಉಳಿದಿವೆ. ತಡಮಾಡುವವರು ಎರಡನೆಯ ಮುದ್ರಣದ ಹಾದಿಯುವ ಪ್ರಸಂಗ ಬಹುವ್ವದ್ದು. ಕೂಡಲೇ ಬರೆಯಿರಿ. ಯೋಗ್ಯ ಕವಿಶನ್ ಕೊಡಲಾಗುವದು.

ಅಧಿಕೃತ ಮಾರಾಟಗಾರರು:— ಗಿರಿಜಾಧವ ಬಿಳಲದವರ ವಿರಕ್ತಮಠಗಲ್ಲಿ, ಧಾರವಾಡ

ಇಲ್ಲಿಯೂ ವಿಚಾರಿಸಿರಿ: (೧) **ಭಾರತ ಬುಕ್ ಡಿಪೋ, ಧಾರವಾಡ** (೨) **ಜೇಕಿನಕಟ್ಟಿ ಬುಕ್ ಡಿಪೋ, ಹಾವೇರಿ**

Regd. No. B. 5375

ಎಗಿ ಕವಿತಾ ಸಂಕಲನ ೧೫ಂ **ನಾವು ನಮ್ಮವರು** ಭಾಗ ೨ ಕಥಾ ಸಂಕಲನ ೧೫ಂ

(ಪ್ರಾಥಮಿಕ ಶಿಕ್ಷಕ ಸಾಹಿತಿಗಳ ಫೋಟೊ ಪರಿಚಯ ಕಥೆ ಕವನಗಳು)

ಮಾನ್ಯ ಎ. ಸಿ. ದೇವೇಗೌಡರು ಶಿಕ್ಷಣಾಧಿಕಾರಿಗಳು [D. P. I.] ಮೈಸೂರು ರಾಜ್ಯ ಅವರ ಮುನ್ನುಡಿ.

ಮಾನ್ಯ ಸಿದ್ಧಯ್ಯ ಪುರಾಣಿಕ 'ಕಾವ್ಯಾನಂದ'ರು ಡಿ. ಸೆಕ್ರೆಟರಿ ಶಿಕ್ಷಣ ವಿಭಾಗ ಇವರ ಹಿನ್ನುಡಿಗಳು.

ಕೇವಲ ೩ರೂಪಾಯಿ [ಅಂಚೆಸೇರಿ] ವಾರ್ಷಿಕ ಚಂದಾ ಹಣದಲ್ಲಿ ೩ನೆಯ ಮಾಲೆಯ ೧-೩ನೆಯ ಕುಸುಮ ಪಡೆಯಿರಿ.

ಪ್ರಾಥಮಿಕ ಶಿಕ್ಷಕರ ಕಥೆ, ಕಾದಂಬರಿ, ಕವನ, ನಾಟಕಾದಿ ಕೃತಿಗಳು ೪೦೦ ಪುಟಗಳಲ್ಲಿ.

ಅಗಷ್ಟ ದಿಂದ ಅಗಷ್ಟಕ್ಕೆ ಒಂದು ವರುಷ ● ಬಿಡಿ ಕುಸುಮ ಚಂದಾದಾರರಿಗೆ ೩ ಬೆಲೆಯಲ್ಲಿ [ಅಂಚೆಬೇರೆ]

ವರ್ಷದ ಮಧ್ಯದಲ್ಲಿ ಚಂದಾದಾರರಾದರೂ ಆ ವರ್ಷದ ಎಲ್ಲ ಪುಸ್ತಕಗಳು ದೊರೆಯುವವು.

ಇಂದೇ ಚಂದಾಹಣ ಕಳಿಸಿ ತಮ್ಮದೇ ಆದ ಶಿಕ್ಷಕರ ಬಳಗವು ಬೆಳೆವಂತೆ ನೆರವಾಗಿರಿ. ಈ ಅಲ್ಪ ಹಣ ತಮ್ಮ ಶಿಕ್ಷಕ ಮಿತ್ರರ ಎಳ್ಗೆಗೆ ಮೀಸಲು. ಗೆಳೆಯರನ್ನು, ವಾಚನಾಲಯಗಳನ್ನು ಚಂದಾದಾರರನ್ನು ಮಾಡಿ ನೆರವಾಗಿರಿ.

ವಿವರಗಳಿಗೆ: **ಭಾರತೀ ಸಾಹಿತ್ಯ ಭಂಡಾರ** ಅಂಚೆ: **ಯರನಾಳ** ಜಿಲ್ಲೆ: **ವಿಜಾಪುರ**

ಕಲ್ಯಾಣ ಕನ್ನಡ ಗುಡಿಯ ಕಾಣಿಕೆ

ಸುವರ್ಣ ಸಂಧಿ! ಸಚಿತ್ರ ಗ್ರಂಥ!! ಸುಂದರ ಮುದ್ರಣ!!!

"ಶಿಕ್ಷಣ-ಶಿಕ್ಷಕ-ದರ್ಶನ"

ಶಿಕ್ಷಕರಿಗೂ, ಶಿಕ್ಷಕ ವಿದ್ಯಾರ್ಥಿಗಳಿಗೂ, ಶಿಕ್ಷಣಾಭಿಮಾನಿಗಳಿಗೂ, ಉಪಯುಕ್ತವಾಗುವಂಥ, ತನು-ಮನ ಣಿಸುವಂಥ, ಶಿಕ್ಷಣ ತಜ್ಞರಿಂದ ಪರಿಶೀಲಿಸಲ್ಪಟ್ಟಂಥ, ಭಾರತದಲ್ಲಿಯ ನೂನ್ಯ ಮಂತ್ರಿವರ್ಯರಿಂದ, ರಾಜ್ಯಪಾಲರಿಂದ, ಶಿಕ್ಷಣಾಧಿಕಾರಿಗಳಿಂದ, ಪ್ರಿನ್ಸಿಪಾಲರಿಂದ, ಸಾಹಿತಿಗಳಿಂದ ಪ್ರಶಂಸೆ ಪಡೆದ ಅಭಿಪ್ರಾಯಗಳುಳ್ಳಂಥ, ಕರ್ನಾಟಕ ವಿಶ್ವವಿದ್ಯಾಲಯದ ಉಪ ಕುಲಪತಿಗಳಾದ ರ್ಯಾಂಗ್ಲರ್ ಶ್ರೀ ಡಿ. ಸಿ. ಪಾವಟೆಯವರು ಮುನ್ನುಡಿ ಬರೆದಂಥ, ಅಮೋಘ ಗ್ರಂಥ.

ಶ್ರೀ ನಿಂಬಾಳ ಶಿಕ್ಷಕ ದಂಪತಿಗಳಿಂದ ಸಂಗ್ರಹಿಸಲ್ಪಟ್ಟಿದೆ ಅಖಿಲ ಕರ್ನಾಟಕದ ಗಣ್ಯ ಶಿಕ್ಷಕ-ಶಿಕ್ಷಕಿಯರ ಬಣ್ಣ ಬಣ್ಣಗಳಲ್ಲಿ ೪೧ ಫೋಟೊ ಬ್ಲಾಕ್, ಲೇಖನ, ಪರಿಚಯಗಳುಳ್ಳಂಥ ೪೭೫ ಪುಟಗಳ **ಅಮರ ಸಾಹಿತ್ಯ ಗ್ರಂಥ. ಕನ್ನಡದಲ್ಲಿ ಒಂದು ಉತ್ತಮ ಮಾದರಿಯ ಶೈಕ್ಷಣಿಕ ಉದ್ಗ್ರಂಥ.**

ದಿ. ೧೫ ಅಗಸ್ಟ ಸ್ವಾತಂತ್ರ್ಯ ದಿನದಂದು ಮಾನ್ಯ ಶ್ರೀ ಎ. ಎಚ್ ದಳವಾಯಿ, ಎ. ಓ ಸಾಹೇಬರ ಅಧ್ಯಕ್ಷತೆಯಲ್ಲಿ ಪ್ರೊ. ಬಿ. ಟಿ. ಸಾಸನೂರ ಇವರ ಅಮೃತಹಸ್ತದಿಂದ ಈ ಗ್ರಂಥ ಪ್ರಕಾಶನಗೊಂಡಿತು

ವಿವರಗಳಿಗೆ ಇಂದೇ ಈಗಲೇ ಬರೆಯಿರಿ.

ಸಾದಾ ಪ್ರತಿ ೩ ರೂ.] **ವ್ಯಾಪಾರಸ್ಥರಿಗೆ ಧಾರಾಳವಾದ ಕಮೀಷನ್.** [**ಸುಂದರ ಪ್ರತಿ ೪ ರೂ**

ವಿಳಾಸ :- ಶ್ರೀ ನಿಂಬಾಳ ಕಲ್ಯಾಣಪ್ಪ, ಪೋಸ್ಟ:— ತಾಂಬಿ, ಜಿಲ್ಲಾ:— ವಿಜಾಪುರ.

Printed by Shri S. F. Kattimani, at Manohar Power Printing Press, Hubli.
Edited & Published by Sjts. G. M. Joshi, B. M. Shintri, S. R. Tatti & Smt. P. A. Bhaskar at the Kannada Jeevan Shikshan Office, Govt Training College for Men, Dharwar

ಪುನರಾಯ್ಕೆಗೊಂಡ ವ್ಹಾಯಿಸ್ ಚಾನ್ಸ್‌ಲರ ರ್ಯಾಂಗ್ಲರ ಡಿ. ಸಿ. ಪಾವಟೆ ಅವರು

ಜೀವನ ಶಿಕ್ಷಣ

— ಸಂಪಾದಕ ಮಂಡಲ —

ಸಂಚಾಲಕರು: ಶ್ರೀ ಎಮ್. ಜಿ. ಹಂದ್ರಾಳ, ಬಿ.ಎ. (ಆನರ್ಸ), ಎಮ್.ಈಡಿ.,ಡಿ.ಬಿ.ಈಡಿ.,
ಎಜ್ಯುಕೇಶನಲ್ ಇನಸ್ಪೆಕ್ಟರ, ಧಾರವಾಡ.

ಪ್ರಧಾನ ಸಂಪಾದಕರು: ಶ್ರೀ ಜಿ. ಎಮ್. ಜೋಶಿ,
ಪ್ರಿನ್ಸಿಪಾಲ, ಗಂಡು ಮಕ್ಕಳ ಸರಕಾರಿ ಟ್ರೇನಿಂಗ ಕಾಲೇಜ, ಧಾರವಾಡ.

—: ಸದಸ್ಯರು :—

ಶ್ರೀಮತಿ ಪಿ. ಎ. ಭಾಸ್ಕರ, ಲೇಡಿ ಸುಪರಿಂಟೆಂಡೆಂಟ, ಹೆಣ್ಣು ಮಕ್ಕಳ ಸರಕಾರ ಟ್ರೇನಿಂಗ ಕಾಲೇಜ, ಧಾರವಾಡ.

ಶ್ರೀ ಬಿ. ಎಂ. ಶಿಂತ್ರಿ, ಬಿ.ಎ.,ಬಿ.ಟಿ., ನಿವೃತ್ತ ಅಸಿಸ್ಟಂಟ ಎಜ್ಯುಕೇಶನಲ್ ಇನಸ್ಪೆಕ್ಟರ ದಕ್ಷಿಣ ಭಾಗ,
(ಮುಂಬಯಿ ಕರ್ನಾಟಕ) ಹಾಗು ಗೌ. ಕಾರ್ಯದರ್ಶಿ ಮತ್ತು ಲಾಯಬ್ರೇರಿಯನ್,
ಸಾಹಿತ್ಯ ಸಮಿತಿ ಲಿಂಗಾಯತ ವಿದ್ಯಾಭಿವೃದ್ಧಿ ಸಂಸ್ಥೆ, ಧಾರವಾಡ

ಶ್ರೀ ಎಸ್. ಆರ್. ತಟ್ಟಿ, ರಿಟಾಯರ್ಡ ಪ್ರಿನ್ಸಿಪಾಲ, ಪ್ರಾಥಮಿಕ ಶಿಕ್ಷಕರ ಟ್ರೇನಿಂಗ ಕಾಲೇಜ, ನವಲಗುಂದ.

ಸಂಪುಟ ೧೬ ಜುಲೈ ೧೯೬೦ ಸಂಚಿಕೆ ೨

— ಪರಿವಿಡಿ —

೧	ಸಂಪಾದಕೀಯ	....	೧
೨	ಜೀವನ ಶಿಕ್ಷಣವೂ ಅಡಳಿತದ ಸಮಸ್ಯೆಗಳೂ	.... ಶ್ರೀ 'ಬಮಶಿಂ'	೩
೩	ಜೀವನ ಶಿಕ್ಷಣ ಶಾಲೆಗಳಲ್ಲಿ ಬೌದ್ಧಿಕ ಪ್ರಗತಿ	.... ಶ್ರೀ ಎಸ್. ಎಸ್. ನಾಡಕರ್ಣಿ	೬
೪	೩–೪ನೆಯ ವರ್ಗಗಳ ಹೊಸ ಅಭ್ಯಾಸ ಪತ್ರಿಕೆ —	....	೯
೫	ಪ್ರಾಥಮಿಕ ಶಿಕ್ಷಕರ ತರಬೇತಿ ಸಂಸ್ಥೆಗಳ ಹೊಸ ಅಭ್ಯಾಸ ಪತ್ರಿಕೆ	.... ಶ್ರೀ ಎಚ್. ಜಿ. ಜೋಶಿ	೨೮

ಸಂಪಾದಕೀಯ

ನಮ್ಮ ಹಾರ್ದಿಕ ಅಭಿವಂದನೆಗಳು :

ಜೂನ ೨೫ನೇ ತಾರೀಖಿಗೆ ನಡೆದ ಚುನಾವಣೆಯಲ್ಲಿ ರ್ಯಾಂಗ್ಲರ ಶ್ರೀ ಡಿ. ಸಿ. ಪಾವಟಿಯವರು ಕರ್ನಾಟಕ ವಿಶ್ವವಿದ್ಯಾಲಯದ ಉಪಕುಲಪತಿಗಳಾಗಿ ಮೂರನೆಯ ಬಾರಿ ಮತ್ತೆ ಚುನಾಯಿತರಾದರು. ಅವರಿಗೆ ನಮ್ಮ ಹಾರ್ದಿಕ ಅಭಿವಂದನೆಗಳು.

ಶ್ರೀ ಪಾವಟಿಯವರ ರಚನಾತ್ಮಕ ಪ್ರತಿಭೆಗೆ ಕರ್ನಾಟಕ ವಿಶ್ವವಿದ್ಯಾಲಯವು ಭವ್ಯ ಸಾಕ್ಷಿಯಾಗಿದೆ. ಶೈಕ್ಷಣಿಕ ಮುಖಂಡರಲ್ಲಿ ದೇಶಕ್ಕೇ ಮಾದರಿಯಾಗಿರುವ ಶ್ರೀ ಪಾವಟಿಯವರು ಕರ್ನಾಟಕ ವಿಶ್ವವಿದ್ಯಾಲಯವನ್ನೂ ತಮ್ಮ ಎತ್ತರಕ್ಕೆ ತಕ್ಕಂತೆಯೇ ಕರೆದೊಯ್ಯತೊಡಗಿದ್ದಾರೆ. ಇನ್ನುಳಿದ ವಿಶ್ವವಿದ್ಯಾನಿಲಯಗಳು ೧೦-೧೫ ವರ್ಷಗಳಲ್ಲಿ ಸಾಧಿಸಲಾಗದ ಪ್ರಗತಿಯನ್ನು ಕರ್ನಾಟಕ ವಿಶ್ವವಿದ್ಯಾನಿಲಯವು ಶ್ರೀ ಪಾವಟಿಯವರ ಆಡಳಿತದ ಆರು ವರ್ಷಗಳಲ್ಲಿ ಸಾಧಿಸುವದಕ್ಕೆ ಸಾಧ್ಯವಾಗಿದೆ. ಈ ಅವಧಿಯಲ್ಲಿ ವಿಶ್ವವಿದ್ಯಾಲಯವು ನಿಶ್ಚಿತ ಪ್ರಗತಿ ಸಾಧಿಸಿದ್ದು, ಅದರ ಮುಂಗಡಪತ್ರವು ಎಂಟು ಲಕ್ಷ ರೂಪಾಯಿಗಳಿಂದ ೪೦ ಲಕ್ಷ ರೂ. ಗಳಿಗೆ ಹೆಚ್ಚಿದೆ. ಅಲ್ಲದೆ ಅದು ಈ ಅವಧಿಯಲ್ಲಿ ಮಾಡಿರುವ ಸಾಧನೆಗಳಿಂದ ಅಂತರ ವಿಶ್ವವಿದ್ಯಾಲಯ ಮಂಡಲ ಹಾಗೂ ವಿಶ್ವವಿದ್ಯಾಲಯ ಧನ ಸಹಾಯ ಆಯೋಗಗಳ ಆದರಕ್ಕೆ ಪಾತ್ರವಾಗಿದೆ. ವಿಶ್ವವಿದ್ಯಾಲಯದ ಶಾಖೆಗಳು ಆರು ವರ್ಷಗಳ ಹಿಂದೆ ಕೇವಲ ೫ ಇದ್ದದ್ದು, ಇದೀಗ ೧೫ಕ್ಕೆ ಹೆಚ್ಚಿದೆ. ಕಳೆದ ಆರು ವರ್ಷಗಳಲ್ಲಿ ೬೦ ಲಕ್ಷ ರೂ. ಗಳ ಕಟ್ಟಡಗಳನ್ನು ಕಟ್ಟಿಸಲಾಗಿದ್ದು, ವಿಶ್ವವಿದ್ಯಾಲಯ ಪ್ರದೇಶದ ಅಭಿವೃದ್ಧಿಗೆ ೭೦ ಲಕ್ಷ ರೂ. ಗಳನ್ನು ಖರ್ಚು ಮಾಡಲಾಗಿದೆ. ನಿರ್ಜನ ಪ್ರದೇಶವಾದ ಘೋಟಾಮಹಾಬಳೇಶ್ವರವು ಈಗ ವಿದ್ಯಾರ್ಜನೆಯ ಪವಿತ್ರ ಕ್ಷೇತ್ರವಾಗಿ ಪರಿಣಮಿಸಿದೆ. ಶ್ರೀ ಪಾವಟಿಯವರು ತಮ್ಮ ನೇಳೆ,ಶಕ್ತಿ, ಸಾಹಸಗಳನ್ನೆಲ್ಲ ವಿಶ್ವವಿದ್ಯಾಲಯದ ಏಳಿಗೆಯ ಬಗೆಗೆ ಮುಡುಪಾಗಿರಿಸಿರುವದರಿಂದಲೇ ಇದೆಲ್ಲವೂ ಸಾಧ್ಯವಾಗಿದೆ; ಆದುದರಿಂದ ನಾವೆಲ್ಲರೂ ಶ್ರೀ ಪಾವಟಿಯವರಿಗೆ ಋಷಿಕೃತರು. ಅವರ ಘನವಾದ ಸೇವೆಯು ಮುಂದುವರೆಯುವಂತೆ ಅನುವು ಮಾಡಿಕೊಟ್ಟದ್ದಕ್ಕಾಗಿ ವಿಶ್ವವಿದ್ಯಾಲಯದ ಸಿನೇಟ ಸಿಂಡಿಕೇಟ ಸದಸ್ಯರು ನಮ್ಮೆಲ್ಲರ ಅಭಿನಂದನೆಗಳಿಗೆ ಪಾತ್ರರಾಗಿದ್ದಾರೆಂದು ನಾವು ಹೇಳಬಯಸುತ್ತೇವೆ.

ಲಲಿತಕಲಾ ಮಹಾವಿದ್ಯಾಲಯ :

ಭೌತಿಕ ಜೀವನಕ್ಕೆ ಮಿತಿಮೀರಿದ ಪ್ರಾಶಸ್ತ್ಯವನ್ನಿತ್ತು ಸಾಂಸ್ಕೃತಿಕ ಜೀವನವನ್ನು ಕಡೆಗಣಿಸಬಾರದೆಂದೂ ಸಾಂಸ್ಕೃತಿಕ ಜೀವನದ ಉನ್ನತಿಗೆ ಕಲೆಗಳು ಅಭಿವೃದ್ಧಿ ಹೊಂದುವದು ಅಗತ್ಯವೆಂದೂ ರಾಜ್ಯದ ಶಿಕ್ಷಣ ಮಂತ್ರಿ ಶ್ರೀ ಅಣ್ಣಾರಾವ ಗಣಮುಖಿಯವರು ಹುಬ್ಬಳ್ಳಿಯಲ್ಲಿಯ ಮೂರುಸಾವಿರಮಠದ ಶ್ರೀ ಮ. ನಿ. ಪ್ರ. ಜಗದ್ಗುರು ಗಂಗಾಧರ ರಾಜಯೋಗೀಂದ್ರ ಮಹಾಸ್ವಾಮಿಗಳ ಸನ್ನಿಧಿಯಲ್ಲಿ ಕರ್ನಾಟಕ ಲಲಿತಕಲಾ ಶಿಕ್ಷಣ ಸಮಿತಿಯವರು ನಡೆಸುತ್ತಿರುವ "ಕಲಾ ಮಂದಿರ"ಕ್ಕೆ "ಶ್ರೀ ವಿಜಯ ಮಹಾಂತೇಶ ಲಲಿತಕಲಾ ಮಹಾವಿದ್ಯಾಲಯ" ಎಂದು ನಾಮಕರಣ ಮಾಡುವ ಸಮಾರಂಭದಲ್ಲಿ ಮಾತನಾಡುತ್ತ ಮೇಲಿನಂತೆ ಹೇಳಿದರು. ಈ ಸಂದರ್ಭದಲ್ಲಿ ರಾಜ್ಯ ಸರಕಾರದಿಂದ ಮನ್ನಣೆ ಪಡೆದ ಡಿಪ್ಲೋಮಾ ವರ್ಗಗಳ ಪ್ರಾರಂಭೋತ್ಸವವನ್ನು ಅವರು ನೇರವೇರಿಸಿದರು. ಈ ಕಲಾ ಮಹಾವಿದ್ಯಾಲಯವನ್ನು ಆಶೀರ್ವದಿಸುತ್ತ ಇದರ ಕಟ್ಟಡಕ್ಕೆ ೨೫ ಸಾವಿರ ರೂ. ಗಳನ್ನು ಕೊಡುವದಕ್ಕಾಗಿ ಮೂರುಸಾವಿರಮಠದ ಮಹಾಸ್ವಾಮಿಗಳು ಹೇಳಿದ್ದು ಅತ್ಯಂತ ಅಭಿನಂದನೀಯವಾಗಿದೆ. ಶ್ರೀ ಜಗದ್ಗುರು ಮಹಾಸ್ವಾಮಿಗಳ ಉದಾರ ಆಶ್ರಯ, ಸರಕಾರದ ಪುರಸ್ಕಾರ, ಕರ್ನಾಟಕ ಲಲಿತಕಲಾ ಶಿಕ್ಷಣ ಸಮಿತಿಯ ಪರಿಶ್ರಮ, ಹಾಗೂ ಪ್ರಿನ್ಸಿಪಾಲ ಮಿಣಜಿಗಿಯವರ ಉತ್ಸುಕತೆ ಈ ಎಲ್ಲವುಗಳ ಸಹಾಯ ಸಹಕಾರದಿಂದ ಶ್ರೀ ವಿಜಯ ಮಹಾಂತೇಶ ಲಲಿತಕಲಾ ಮಹಾವಿದ್ಯಾಲಯವು ದೇಶದ ಪ್ರಮುಖ ಲಲಿತಕಲಾ ಮಹಾವಿದ್ಯಾಲಯಗಳಲ್ಲಿ ಒಂದಾಗುವದೆಂದು ಹಾರೈಸುವೆವು. ಮುಂಬಯಿಯಲ್ಲಿರುವ ಜೆ. ಜೆ. ಸ್ಕೂಲ ಆಫ್ ಆರ್ಟ್ಸ ಕಲಾ ಸಂಸ್ಥೆಯಂಥ ಒಂದು ಸಂಸ್ಥೆಯನ್ನು ನಮ್ಮ ರಾಜ್ಯದಲ್ಲಿಯೂ ಸ್ಥಾಪಿಸುವದು ಅಗತ್ಯವೆಂದು ಹೇಳದೆ ಇರಲಾರೆವು.

ತೃತೀಯ ಯೋಜನೆಯ ರೂಪರೇಷೆ :

ಮೊದಲಿನ ಎರಡು ಪಂಚವಾರ್ಷಿಕ ಯೋಜನೆಗಳ ಪ್ರಗತಿ ಪರಿಶೀಲನೆಯ ಬೆನ್ನಹಿಂದೆಯೇ ರಾಷ್ಟ್ರೀಯ ಯೋಜನಾ ಆಯೋಗವು ಸಾಹಸಮಯವಾದ ಮೂರನೇ ಪಂಚವಾರ್ಷಿಕ ಯೋಜನೆಯ ರೂಪರೇಷೆಗಳನ್ನು ಪ್ರಕಟಿ

ಸಿದ್ದನ್ನು ನಾವು ಸ್ವಾಗತಿಸುತ್ತೇವೆ. ತೃತೀಯ ಯೋಜನೆಯಲ್ಲಿ ಒಟ್ಟು ೧೦,೨೦೦ ಕೋಟಿ ರೂಪಾಯಿಗಳನ್ನು ವೆಚ್ಚ ಮಾಡಲಾಗುವದು. ಅದರಲ್ಲಿ ೬,೨೦೦ ಕೋಟಿ ರೂ. ಗಳನ್ನು ಸರಕಾರಿ ಕಾರ್ಯಕ್ಷೇತ್ರದಲ್ಲಿಯೂ, ೪,೦೦೦ ಕೋಟಿ ರೂ.ಗಳನ್ನು ಖಾಸಗೀ ಕಾರ್ಯಕ್ಷೇತ್ರದಲ್ಲಿಯೂ, ಖರ್ಚು ಮಾಡಲು ಉದ್ದೇಶಿಸಲಾಗಿದೆ. ಈ ಯೋಜನೆಯಂತೆ ರಾಷ್ಟ್ರೀಯ ಆದಾಯವನ್ನು ಪ್ರತಿವರ್ಷ ನೂರಕ್ಕೆ ೫ ರಂತೆ ಎತ್ತರಿಸುವದು, ಆಹಾರದಲ್ಲಿ ಸ್ವಾವಲಂಬನೆ, ಭಾರಿ ಉದ್ದಿಮೆಗಳ ವಿಸ್ತರಣೆ, ಮನುಷ್ಯ ಶಕ್ತಿಯ ಉಪಯೋಗ ಹಾಗೂ ಸಮಾಜವಾದದ ಧ್ಯೇಯದಂತೆ ಬಡವ ಬಲ್ಲಿದರ ಅಂತರವನ್ನು ಕಡಿಮೆ ಮಾಡುವದು ಮುಂತಾದ ಗುರಿಗಳನ್ನು ಇಟ್ಟುಕೊಳ್ಳಲಾಗಿದೆ. ತೃತೀಯ ಪಂಚವಾರ್ಷಿಕ ಯೋಜನೆಯ ಪ್ರಕಾರ ಆಹಾರ ಧಾನ್ಯಗಳ ಉತ್ಪಾದನೆಯನ್ನು ೧೦೦ ರಿಂದ ೧೦೫ ಕೋಟಿ ಟನ್ನುಗಳವರೆಗೆ ಹೆಚ್ಚಿಸಬೇಕೆಂದೂ, ಕಚ್ಚಾ ಉಕ್ಕಿನ ಉತ್ಪನ್ನ ಶಕ್ತಿಯನ್ನು ೧ ಕೋಟಿ ಟನ್ನುಗಳಿಗೇರಿಸಬೇಕೆಂದೂ, ವಿದ್ಯುಚ್ಛಕ್ತಿ ಉತ್ಪಾದನೆಯನ್ನು ೫೮ ಲಕ್ಷ ಕಿ. ವ್ಯಾಟುಗಳಿಂದ ೧೧೮ ಲಕ್ಷ ಕಿ. ವ್ಯಾ.ಗಳಿಗೆ ಏರಿಸಬೇಕೆಂದೂ ಯೋಚಿಸಲಾಗಿದೆ.ಇವಲ್ಲದೆ ೧.೩೫ ಕೋಟಿ ಜನರಿಗೆ ಉದ್ಯೋಗಾವಕಾಶಗಳನ್ನು ಕಲ್ಪಿಸುವದು, ಜನಪದ ಅಭಿವೃದ್ಧಿ ಮತ್ತು ಸಹಕಾರ ಚಟುವಟಿಕೆಗಳನ್ನು ದೇಶದ ಗ್ರಾಮಾಂತರ ಪ್ರದೇಶಗಳಲ್ಲಿ ಕುಡಿಯುವ ನೀರಿನ ವ್ಯವಸ್ಥೆ, ಗ್ರಾಮದಿಂದ ಹತ್ತಿರದ ಹೆದ್ದಾರಿಗೆ ಲೆಲು ನಿಲ್ದಾಣಕ್ಕೆ ರಸ್ತೆಯನ್ನು ನಿರ್ಮಿಸುವದು, ೬ ರಿಂದ ೧೧ ವರ್ಷ ವಯಸ್ಸಿನ ಮಕ್ಕಳೆಲ್ಲರಿಗೂ ಉಚಿತ ಹಾಗೂ ಒತ್ತಾಯ ಶಿಕ್ಷಣವನ್ನು ಒದಗಿಸುವದು, ಗ್ರಾಮದಲ್ಲಿ ಸಮುದಾಯ ಕೇಂದ್ರವಾಗುವ ಶಾಲೆಯ ಕಟ್ಟಡ ನಿರ್ಮಾಣ, ಪುಸ್ತಕ ಭಾಂಡಾರಗಳ ಸೌಲಭ್ಯ ಇವು ತೃತೀಯ ಯೋಜನೆಯ ಇತರ ಗುರಿಗಳಾಗಿವೆ. ತೃತೀಯ ಯೋಜನೆಯ ಕರಡು ಒಟ್ಟಿನಲ್ಲಿ ಸ್ಥೂಲ ದೃಷ್ಟಿಯಿಂದ ಸಮಾಧಾನಕರವಿದೆಯೆಂದು ಹೇಳಬಹುದು. ಪ್ರತಿಯೊಬ್ಬರೂ ಎಲ್ಲ ರೀತಿಯಿಂದಲೂ ಸರಕಾರದೊಂದಿಗೆ ಸಹಕರಿಸಿ ಯೋಜನೆಯನ್ನು ಯಶಸ್ವೀ ರೀತಿಯಲ್ಲಿ ಕಾರ್ಯ ಮಾಡಬೇಕಾಗಿ ಹೇಳದೆ ಇರಲಾರೆವು.

ಸ್ತುತ್ಯ ಕಾರ್ಯ :

ಶ್ರೀಮಾನ್ ಶಿಂತ್ರಿ ಬಸಪ್ಪನವರು ಕರ್ನಾಟಕ ಶಿಕ್ಷಣ ಕ್ಷೇತ್ರದಲ್ಲಿ ಒಳ್ಳೇ ಪರಿಚಿತರು. ದಕ್ಷಿಣ ಭಾಗದ ಅಸಿಸ್ಟೆಂಟ ಎಜ್ಯುಕೇಶನಲ್ ಇನಸ್ಪೆಕ್ಟರರ ಹುದ್ದೆಯಿಂದ ನಿವೃತ್ತರಾಗಿ ಧಾರವಾಡದಲ್ಲಿದ್ದು ತಮ್ಮ ಲೇಖನಗಳ ಮುಖಾಂತರ ಸಾಹಿತ್ಯ ಹಾಗೂ ಶಿಕ್ಷಣ ಸೇವೆಯನ್ನು ಮಾಡುತ್ತಿರುವದು ಎಲ್ಲರಿಗೂ ಗೊತ್ತಿದ್ದ ಸಂಗತಿ. ಅವರು ನಮ್ಮ ಸಂಪಾದಕ ಮಂಡಲದ ಸದಸ್ಯರು. ಶ್ರೀ ಶಿಂತ್ರಿಯವರು ತಮ್ಮ ಜನ್ಮಸ್ಥಳವಾದ ಮಿಶ್ರಿಕೋಟೆಯ ವಿವಿಧೋದ್ದೇಶಗಳ ಸಹಕಾರಿ ಸಂಘದಲ್ಲಿ ೬೫೫ ರೂಪಾಯಿಗಳ ಸ್ಮಾರಕ ನಿಧಿಯೊಂದನ್ನು ಕಾಯಂ ಠೇವಿನಂತೆ, ತಮ್ಮ ತಾಯಂದಿರಾದ "ಲಿಂಗೈಕ್ಯ ಶ್ರೀಮತಿ ಶಿಂತ್ರಿ ಬಸಮ್ಮನವರ ಪಾರಿತೋಷಕ ನಿಧಿ" ಎಂಬ ನಾಮಕರಣದಿಂದ ಇಟ್ಟಿದ್ದಾರೆ. ಈ ನಿಧಿಯಿಂದ ಬರುವ ವಾರ್ಷಿಕ ಬಡ್ಡಿಯ ಹಣವನ್ನು ಈ ಕೆಳಗೆ ಸೂಚಿಸಿದಂತೆ ವಿನಿಯೋಗಿಸಲು ಆ ಊರ ಹೆಣ್ಣುಮಕ್ಕಳ ಬೆಸಿಕ ಶಾಲೆಯ ಹೆಡ್ ಮಿಸ್ಟ್ರೆಸ್ ರವರಿಗೆ ಅಧಿಕಾರ ಕೊಟ್ಟಿದ್ದಾರೆ.

೧. ಮಿಶ್ರಿಕೋಟೆಯ ಬೇಸಿಕ್ ಹೆಣ್ಣುಮಕ್ಕಳ ಶಾಲೆಯಿಂದ ಪಿ. ಎಸ್. ಸಿ. ಪರೀಕ್ಷೆಯಲ್ಲಿ ಪಾಸಾಗಿ ಪ್ರಥಮ ಸ್ಥಾನ ಪಡೆದ ವಿದ್ಯಾರ್ಥಿನಿಗೆ ೧೫ ರೂಪಾಯಿ, ದ್ವಿತೀಯ ಸ್ಥಾನ ಪಡೆದವಳಿಗೆ ೧೦ ರೂಪಾಯಿ ನಗದು ಹಣದ ಬಹುಮಾನಗಳು.

೨. ಒಂದು ವೇಳೆ ಪಿ. ಎಸ್, ಸಿ. ವರ್ಗ ಇಲ್ಲದಿದ್ದರೆ, ಎಲ್ಲಕ್ಕೂ ಮೇಲಿನ ಇಯತ್ತೆಯ ವಾರ್ಷಿಕ ಪರೀಕ್ಷೆಯಲ್ಲಿ ಉತ್ತೀರ್ಣರಾದವರಲ್ಲಿ ಪ್ರಥಮ ಮತ್ತು ದ್ವಿತೀಯ ಸ್ಥಾನಗಳನ್ನು ದೊರಕಿಸಿದವರಿಗೆ ಮೇಲೆ ಹೇಳಿದಂತೆ ಇನಾಮುಗಳನ್ನು ಹಂಚಬೇಕು.

೩, ಈ ಮೊದಲು ತಮ್ಮ ಹೆಸರಿನಲ್ಲಿಟ್ಟ ಬಹುಮಾನಗಳನ್ನು ಮಿಶ್ರಿಕೋಟೆಯ ಕನ್ನಡ ಗಂ. ಮ. ಶಾಲೆಯಿಂದ ಪಿ. ಎಸ್. ಸಿ. ಪರೀಕ್ಷೆಯಲ್ಲಿ ಮೊದಲಿನ ಎರಡು ಸ್ಥಾನ ಪಡೆದ ವಿದ್ಯಾರ್ಥಿಗಳಿಗೆ ಬಹುಮಾನಗಳನ್ನು ಕೊಡುವ ದಿನವೇ ಅಂದರೆ ಪ್ರತಿ ವರ್ಷದ ಅಗಸ್ಟ ೧೫ ನೇ ತಾರೀಖಿನ ಸ್ವಾತಂತ್ರ್ಯ ಸಮಾರಂಭದ ದಿನವೇ ಈಗ ಕಾಣಿಸಿದ ಬಹುಮಾನಗಳನ್ನು ಹಂಚಬೇಕು.

ಈ ಯೋಜನೆಯು ಶ್ರೀ ಶಿಂತ್ರಿಯವರಲ್ಲಿರುವ ತಮ್ಮೂರಿನ ಅಭಿಮಾನ ಹಾಗೂ ತಮ್ಮೂರ ಶಾಲೆಯ ಮಕ್ಕಳ ಬಗೆಗೆ ಅವರಲ್ಲಿದ್ದ ಅಂತಃಕರಣಗಳ ದ್ಯೋತಕವಾಗಿದೆ. ಇದೆಲ್ಲಕ್ಕಾಗಿ ನಾವು ಶ್ರೀ ಶಿಂತ್ರಿಯವರನ್ನು ಹಾರ್ದಿಕವಾಗಿ ಅಭಿನಂದಿಸುತ್ತೇವೆ.

ಜೀವನ ಶಿಕ್ಷಣವೂ ಆಡಳಿತದ ಸಮಸ್ಯೆಗಳೂ

ಲೇ:— **' ಬಮಶಿಂ '**

[ಶ್ರೀ ಶಿಂತ್ರಿಯವರು ಈ ವರ್ಷಾರಂಭದಿಂದ ತಮ್ಮ ಲೇಖನಗಳನ್ನು " ಬಮಶಿಂ " ಎಂಬ ಹೆಸರಿನಿಂದ ಪ್ರಕಟಿಸಲಿರುವರು. ಅದು ಅವರ ಸಂಪೂರ್ಣ ಹೆಸರಿನ ಮೊದಲಿನ ಅಕ್ಷರಗಳಿಂದ ಕೂಡಿದ್ದಾಗಿದೆ. ಕನ್ನಡದಲ್ಲಿ ಅದು ಅವರ ಚಿಕ್ಕ ಸಹಿಯು (Initials). —ಪ್ರಧಾನ ಸಂಪಾದಕರು.]

ಬದಲಾಗುತ್ತಿರುವ ವಿಚಾರಸರಣಿ

ಸ್ವಾತಂತ್ರ್ಯ ಪ್ರಾಪ್ತಿಯ ನಂತರ ನಮಗೆ ಬೇಕಾದದ್ದು ಕಲ್ಯಾಣ ರಾಜ್ಯ (Welfare State). ಅದನ್ನು ಸಾಧಿಸಲೋಸುಗ ಸಮಾಜವಾದದ ಸಮಾಜವನ್ನು ಕಟ್ಟಲು ನಮ್ಮ ರಾಷ್ಟ್ರವು ಬಯಸುತ್ತಿದೆ. ಕಲ್ಯಾಣ ರಾಜ್ಯವನ್ನು ಕಟ್ಟಲು ಆಡಳಿತದ ಯಂತ್ರದಲ್ಲಿ ಅಸಂಖ್ಯ ಹೊಸ ಮಾರ್ಪಾಟುಗಳನ್ನೆಸಗಲು ನಮ್ಮ ರಾಷ್ಟ್ರವು ಹವಣಿಸುತ್ತಿದೆಯಲ್ಲದೆ ಅವುಗಳ ಕಾರ್ಯಾಚರಣೆಯು ಸಹ ತೀವ್ರ ಗತಿಯಿಂದ ಆಗಬೇಕೆಂದು ಬಯಸುತ್ತಿದೆ. ಹಳೆಯ ಆಡಳಿತದ ಯಂತ್ರವು ಎಷ್ಟೇ ದಕ್ಷವಾಗಿದ್ದರೂ ಸಹ ಹೊಸ ವಾತಾವರಣದ ಆಹ್ವಾನವನ್ನು ಯಶಸ್ವೀಯಾಗಿ ಎದುರಿಸಲು ಕಾಲ ಕಾಲಕ್ಕೆ ಅಸಮರ್ಥವಾದುದು ಸೋಜಿಗದ ಮಾತೇನಲ್ಲ. ದುಡುಕಿನಿಂದ ಮಾಡಿದ ಬದಲಾವಣೆಗಳಿಂದುಂಟಾಗಿದ್ದ ಅನಿಷ್ಟ ಪರಿಣಾಮಗಳನ್ನು ನಮ್ಮ ಜನತೆಯು ಈಗಾಗಲೆ ಸಾಕಷ್ಟು ಅನುಭೋಗಿಸಿದೆಯೆಂಬ ಸಂಗತಿಯೂ ನಿಜವಿದೆ. ದೃಷ್ಟಾಂತಕ್ಕೋಸ್ಕರ ಮಾಧ್ಯಮಿಕ ಶಾಲೆಗಳಲ್ಲಿಯ ಮೊದಲಿನ ಮೂರು ಇಯತ್ತೆಗಳ ಇಂಗ್ಲೀಷನ್ನು ತೆಗೆದೊಗೆದದ್ದು ಇದಕ್ಕೆ ಸಾಕ್ಷಿಯಾಗಿ ನಿಂತಿದೆ. ಹೊಸ ಬೇಡಿಕೆಗಳಿಗೆ ತಕ್ಕಂತೆ ಆಡಳಿತದ ಹಳೆಯ ಯಂತ್ರವನ್ನೂ ಪದ್ಧತಿಗಳನ್ನೂ ತಂತ್ರಗಳನ್ನೂ ಕಾರ್ಯಾಚರಣೆಯನ್ನೂ ಕ್ರಮಪಡಿಸಲು ದೀರ್ಘಾಲೋಚನೆಗಳ ಅವಶ್ಯಕತೆಯು ಬಹಳಷ್ಟಿದೆಯೆಂಬುದು ಇದರಿಂದ ಧ್ವನಿತವಾಗುತ್ತಿದೆ. ನಾವು ಕುಳಿತು ಮಲಗಬೇಕಲ್ಲದೆ ನಿಂತು ಮಲಗಲು ಹವಣಿಸಬಾರದು. " ರೋಮ ಪಟ್ಟಣವನ್ನು ಒಂದೇ ದಿನದಲ್ಲಿ ಕಟ್ಟಲಿಲ್ಲ " (Rome was not built in a day) ಎಂಬ ಆಂಗ್ಲ ನಾಣ್ನುಡಿಯ ಆಶಯವಾದರೂ ಇದೇ ಇರುತ್ತಿದೆ. ವಸ್ತುಸ್ಥಿತಿಯು ಹೀಗಿದ್ದರೂ ಸಹ, ಪ್ರಗತಿಯು ತೀವ್ರ ಗತಿಯಿಂದ ಆಗುವದು ಈಗ ನಮ್ಮ ರಾಷ್ಟ್ರಕ್ಕೆ ಬೇಕಾಗಿದೆಯಲ್ಲವೇ? ಜನತೆಯ ಬೇಡಿಕೆಗಳಿಗೆ ತುಂಬಾ ಸಹಾನುಭೂತಿ, ಚುರುಕಾದ ಮತ್ತು ತ್ವರಿತದ ನಿರ್ಣಯಗಳು, ಆರ್ಥಿಕ ಆಡಳಿತದ ಬಗೆಗೆ ಪೂರ್ಣ ಎಚ್ಚರಿಕೆಯನ್ನು ವಹಿಸಿ ಯೋಜನೆಗಳನ್ನು ಹೆಚ್ಚು ಬೇಗನೆ ಮತ್ತು ಹೆಚ್ಚು ಪರಿಣಾಮಕಾರಿಯಾಗುವಂತೆ ಕಾರ್ಯಗತಗೊಳಿಸುವದು, ಇವು ಈಗಿನ ಸರಕಾರದ ಆಡಳಿತದಲ್ಲಿರಬೇಕಾದ ಅತ್ಯಾವಶ್ಯಕವಾದ ಅರ್ಹತೆಗಳಾಗಿವೆ. ಸರಕಾರದ ಕರ್ತವ್ಯಗಳ ಬಗೆಗೆ ವಿಚಾರಸರಣಿಯು ಈ ಪ್ರಕಾರ ವಿಶಾಲಗೊಳ್ಳುತ್ತಿರುವದರ ಪರಿಣಾಮದಿಂದ ಸಾಂಪ್ರದಾಯಿಕವಾದ ಆಡಳಿತಕ್ಕೆ ಆಹ್ವಾನವು ಸಾರ್ವತ್ರಿಕವಾಗಿರುವಾಗ ಭರದಿಂದ ಸುಧಾರಿಸಬೇಕೆನ್ನುವ ನಮ್ಮ ಭಾರತದಂತಹ ರಾಷ್ಟ್ರಗಳಲ್ಲಿ ಅದರ ಕಟು ಅನುಭವವು ಉಗ್ರವಾಗಿಯೂ ಚುರುಕಾಗಿಯೂ ಆಗುತ್ತಿದೆ. ಮುಂದುವರಿದ ರಾಷ್ಟ್ರಗಳ ಸರಿಜೋಡಿಗೆ ನಾವು ಬರಬೇಕಾದರೆ ಜೀವನದ ಎಲ್ಲ ರಂಗಗಳಲ್ಲಿಯೂ ನಾವು ಮಿಂಚಿನ ವೇಗದಿಂದ ಪ್ರಗತಿಯನ್ನು ಸಾಧಿಸಬೇಕಾಗಿದೆ ಮತ್ತು ಹಾಗೆ ಮಾಡಲು ನಮ್ಮ ರಾಷ್ಟ್ರವು ನಿರ್ಧಾರವನ್ನು ಕೈಕೊಂಡಿದೆ. ತತ್ಪರಿಣಾಮವಾಗಿ, ನಾವು ಪ್ರತಿಯೊಬ್ಬರು ಹೆಚ್ಚಿನ ಪ್ರಯತ್ನಗಳನ್ನು ಸಲ್ಲಿಸಬೇಕಾಗಿದೆ. ಸರಕಾರದ ಆಡಳಿತವು ಈ ಮಾತಿಗೆ ಅಪವಾದವಾಗಿರದೆ ಅದು ಸಹ ತನ್ನ ಪಾಲಿನ ಹಿರಿದಾದ ಪ್ರಯತ್ನಗಳನ್ನು ಸಲ್ಲಿಸಿ ಹೆಚ್ಚು ಚಲೋ ಪರಿಣಾಮವನ್ನು ತೋರಿಸಬೇಕು.

ಹೊಸ ಶಿಕ್ಷಣದ ಆಹ್ವಾನ

ಹಳೆಯ ಶಿಕ್ಷಣದ ಯಂತ್ರವನ್ನು ತಯಾರಿಸಿದವರು ಈ ಹೊಸ ಆಹ್ವಾನವನ್ನು ಮೊದಲೇ ತಿಳಿದಿರಲಿಲ್ಲವಾದ್ದರಿಂದ ಅದಕ್ಕೆ ಒಗ್ಗುವದೊಂದು ರಚನೆಯನ್ನು ನಿರ್ಮಿಸಲಾರದವರಾದರು. ಜೀವನ ಶಿಕ್ಷಣವು ರಾಷ್ಟ್ರೀಯ ಶಿಕ್ಷಣವೆಂಬುದನ್ನು ಭಾರತ ಸರಕಾರವು ಸ್ವೀಕರಿಸಿದುದರ ಪರಿಣಾಮದಿಂದ ಈ ಆಹ್ವಾನವು ಉಪಸ್ಥಿತವಾಗಿದೆ. ಈ

ನಮೂನೆಯ ಶಿಕ್ಷಣದಲ್ಲಿ ಹೆಚ್ಚಿನ ಮುಂದಾಳ್ತನ, ಹೆಚ್ಚಿನ ಚುರುಕು ಬುದ್ಧಿ, ಹೆಚ್ಚಿನ ಯೋಜನಾ ಸಾಮರ್ಥ್ಯ, ಹೆಚ್ಚಿನ ದಕ್ಷ ಕಾರ್ಯಾಕ್ಷಮತೆ, ಇವು ಅವಶ್ಯವಾಗಿ ಬೇಕೆಂಬುದು ಸರ್ವಶ್ರುತವಿದೆ. ಶಿಕ್ಷಣ ಖಾತೆಯು ಈ ಬೇಡಿಕೆಗಳನ್ನು ಪೂರೈಸುವದೇ ಪ್ರಥಮತಃ ದುಸ್ತರವು. ಈ ಗುಣಗಳನ್ನು ಚಿಗುರಿಸಬೇಕಾದದ್ದು ಹೊಸದಾಗಿ ಶಿಕ್ಷಕರಾಗಬೇಕೆನ್ನುವವರಲ್ಲಿ ಅಲ್ಲ; ಆದರೆ, ಅವುಗಳ ಬಗೆಗೆ ಬಹುಶಃ ಉತ್ಸುಕರಾಗದಿದ್ದ ಮತ್ತು ಈಗಾಗಲೆ ಶಿಕ್ಷಕ ವೃತ್ತಿಯನ್ನು ಕೈಕೊಂಡ ಸಾವಿರಾರು ಶಿಕ್ಷಕ-ಶಿಕ್ಷಕಿಯರಲ್ಲಿ ಎಂಬ ಮಾತನ್ನು ನೆನೆಸಿಕೊಂಡರೆ, ಆಡಳಿತದ ಹೊಣೆಯು ಎಷ್ಟು ದೊಡ್ಡದೂ ಎಷ್ಟು ಕಷ್ಟಸಾಧ್ಯವಾದುದೂ ಆಗಿರುತ್ತದೆಂಬುದರ ಕಲ್ಪನೆಯು ಹೊಳೆಯದಿರದು. ಸುಧಾರಿಸಬೇಕೆಂಬ ಧ್ಯೇಯವನ್ನು ತೊಟ್ಟ ರಾಷ್ಟ್ರವು ಹೀಗೆ ಅಡರಿದ್ದ ಎಡರು-ತೊಡರುಗಳಿಗೆ ಸೊಪ್ಪು ಹಾಕಲಾರದು. ಇಂತಹ ತೊಂದರೆಗಳು ನಮ್ಮ ಧ್ಯೇಯ ಸಾಧನೆಗೆ ಅತಂಕವನ್ನೊಡ್ಡಲಾರವೆಂದೂ ಅವುಗಳನ್ನು ನಾವು ದಾಟಿ ಹೋಗಬಹುದೆಂದೂ ಅವುಗಳ ಅರ್ಥವನ್ನು ನಾವು ಮಾಡಿಕೊಂಡು ಸಾಧನ-ಸಲಕರಣೆಗಳಿಂದ ಸುಸಜ್ಜಿತರಾಗಿ ಹೊಸ ಶಿಕ್ಷಣದ ಕಾರ್ಯಾಚರಣೆಯತ್ತ ಒಮ್ಮನದಿಂದ ಸಾಗಬೇಕು. ಈಗಿನ ನಮ್ಮ ಹೊಸ ಮೈಸೂರ ರಾಜ್ಯದಲ್ಲಿ ಮುಂಬಯಿ ಕರ್ನಾಟಕವು ಈ ದಿಶೆಯಲ್ಲಿ ಹೆಚ್ಚಿನ ಪ್ರಗತಿಯನ್ನು ಮಾಡಿದ್ದುದು ಕಂಡು ಬರುತ್ತಿದೆ. ಮತ್ತು ಉಳಿದ ವಿಭಾಗದಲ್ಲಿ ಅಷ್ಟೊಂದು ಪ್ರಗತಿಯಾದದ್ದು ಕಂಡು ಬರುವದಿಲ್ಲ. ಮೊತ್ತ ಮೊದಲು ಇವುಗಳಲ್ಲಿ ಏಕರೂಪತೆಯನ್ನು ಸಾಧಿಸಲು ಪ್ರಯತ್ನಿಸಬೇಕು. ಅದನ್ನು ಸಾಧಿಸಲು ಶಿಕ್ಷಣ ಖಾತೆಯವರು ಉಳಿದ ವಿಭಾಗಗಳಲ್ಲಿಯ ಪದವೀಧರರನ್ನು ಧಾರವಾಡದಲ್ಲಿಯ ಪದವೀಧರರ ಜೀವನ ಶಿಕ್ಷಣ ತರಬೇತಿ ಕೇಂದ್ರಕ್ಕೆ ತರಬೇತಿಗಾಗಿ ಕಳುಹಿಸಿ ಕೊಟ್ಟಿದ್ದಾರೆ. ಆಗಾಗ ಧಾರವಾಡದಲ್ಲಾಗಲಿ ಬೇರೆ ಸ್ಥಳಗಳಲ್ಲಾಗಲಿ ಸೆಮಿನಾರುಗಳನ್ನೂ ವಿಚಾರಗೋಷ್ಠಿಗಳನ್ನೂ ಸಮ್ಮೇಲನಗಳನ್ನೂ ಏರ್ಪಡಿಸಲಿದ್ದಾರೆ. ಇವು ನಿಜಕ್ಕೂ ಸ್ತುತ್ಯ ಉಪಕ್ರಮಗಳು. ಇಂತಹ ಸಭೆ-ಸಮ್ಮೇಲಗಳಲ್ಲಿ ಬೇರೆ ಬೇರೆ ವಿಭಾಗಗಳಲ್ಲಿ ಅಲ್ಲಿಯ ಒರೆಗಾಗಿದ್ದ ಪ್ರಗತಿಯೂ ಕಾರ್ಯಾಚರಣೆಯಲ್ಲಿ ಉದ್ಭವಿತವಾಗಿದ್ದ ಅಡೆ-ತಡೆಗಳೂ ಮುಂದೆ ಕೈಕೊಳ್ಳಬೇಕಾದ ಕಾರ್ಯಗಳೂ ಕೂಲಂಕಷವಾಗಿ ಚರ್ಚಿಸಲ್ಪಡುವದರಿಂದ ನಮ್ಮ ರಾಜ್ಯದಲ್ಲಿ ಏಕರೂಪತೆಯು ಬೇಗನೆ ಲಭ್ಯವಾಗುವದರಲ್ಲಿ ಸಂದೇಹವಿಲ್ಲ. ಜೀವನ ಶಿಕ್ಷಣ ಮಾಡುವ ರಂಗದಲ್ಲಿ ಕೆಲಸ ಮಾಡುವ ಅಧಿಕಾರಿಗಳನ್ನೂ ಕಾರ್ಯಕರ್ತರನ್ನೂ (ಅವರು ಒಪ್ಪಿಗೆಯನ್ನಿತ್ತರೆ ಮಾತ್ರ) ವಿಭಾಗದಿಂದ ವಿಭಾಗಕ್ಕೆ ವರ್ಗಾಯಿಸುವ ಹಂಚಿಕೆಗಳನ್ನು ಹಮ್ಮಿಕೊಳ್ಳಬೇಕು. ಈ ಪ್ರಕಾರ ವರ್ಗ ಮಾಡಲ್ಪಡುವ ಅಧಿಕಾರಿಗಳಿಗೆ ಇಲ್ಲವೆ ಕಾರ್ಯಕರ್ತರಿಗೆ ಹೆಚ್ಚಿನ ಸಂಬಳ ಕೊಟ್ಟು ಅವರನ್ನು ಪ್ರೋತ್ಸಾಹಿಸಿದರೂ ಚಿಂತೆ ಇಲ್ಲ. ಹೀಗೆ ಮಾಡಿದರೆ, ಎಲ್ಲ ವಿಭಾಗಗಳಲ್ಲಿ ಏಕರೂಪತೆಯು ನಿರೀಕ್ಷಿಸಿದ್ದಕ್ಕಿಂತ ಹೆಚ್ಚು ಬೇಗನೆ ಉಂಟಾಗುವದರಲ್ಲಿ ಸಂಶಯವಿಲ್ಲ.

ಶಿಕ್ಷಕನ ಸಮಸ್ಯೆ

ಜೀವನ ಶಿಕ್ಷಣದಲ್ಲಿ ಶಿಕ್ಷಕ-ಶಿಕ್ಷಕಿಯರ ಸಮಸ್ಯೆಯು ಅತ್ಯಂತ ಮಹತ್ವವುಳ್ಳದ್ದಿದೆ. ಶಿಕ್ಷಣದಲ್ಲಿ ಮಾನವತೆಯ ಮಹತ್ವ ಬೆಲೆಗಳ ಬಗೆಗೆ ಎಷ್ಟು ಒತ್ತಿ ಹೇಳಿದರೂ ಕಡಿಮೆಯೇ ಸೈ. ಈ ಸಂದರ್ಭದಲ್ಲಿ ಶ್ರೀ ಕೆ. ಜಿ. ಸಾಯಿದಾಯಿನರವರು ಹೇಳಿದ ಮಾತೊಂದನ್ನು ಉದಹರಿಸಿದರೆ ತಪ್ಪಾಗಲಾರದೆಂದು ನಮಗನಿಸುತ್ತಿದೆ— "ನಾವು ಮನಸ್ಸಿನಲ್ಲಿಟ್ಟುಕೊಂಡಿರುವ ಸಾಮಾಜಿಕ ವ್ಯವಸ್ಥೆಯ ಭಾವನಾಶಾಸ್ತ್ರ ಮತ್ತು ಭಾವರೂಪಗಳಿಗನುಗುಣವಾಗುವಂತೆ ಬೇರೆ ಬೇರೆ ಯೋಜನೆಗಳನ್ನು ಕಾರ್ಯಗತಗೊಳಿಸುವ ಸಿಬ್ಬಂದಿಯವರ ಯೋಗ್ಯತೆಯಲ್ಲಿ ಆಮೂಲಾಗ್ರವಾದ ಸುಧಾರಣೆಯಾಗದ ಹೊರತು ಅವುದೇ ಸಾಮಾಜಿಕ, ಶೈಕ್ಷಣಿಕ, ಸಾಂಸ್ಕೃತಿಕ, ರಾಜ್ಯಕೀಯ ಇಲ್ಲವೆ ಆರ್ಥಿಕ ಪುನರುಜ್ಜೀವನವನ್ನು ಪ್ರಾರಂಭಿಸುವದು ನಮಗೆ ಶಕ್ಯವಾಗಲಾರದು". ಇದರ ಮೇಲಿಂದ ರಾಷ್ಟ್ರದ ಪುನರ್ನಿರ್ಮಾಣದ ಕಾರ್ಯಗಳಲ್ಲಿ ಮಾನವತೆಯ ಮಹತ್ವವು ಎಷ್ಟಿದೆಯೆಂಬುದು ಸ್ಪಷ್ಟವಾಗಿ ಕಂಡು ಬರುತ್ತಿದೆ. ಶಿಕ್ಷಕ-ಶಿಕ್ಷಕಿಯರ ಯೋಗ್ಯತೆಯಲ್ಲಿ ಆಮೂಲಾಗ್ರವಾದ ಬದಲಾವಣೆಯಾಗದ ಹೊರತು ಶೈಕ್ಷಣಿಕ ಸುಧಾರಣೆಯು ಶಕ್ಯವಾಗಲಾರದು. ಪುಸ್ತಕದ ಸಾಲೆಯನ್ನು ಕಾಯಕದ ಸಾಲೆಯನ್ನಾಗಿ ಮಾರ್ಪಡಿಸಬೇಕೆನ್ನುವ, ನಿಷ್ಕ್ರಿಯ ಜ್ಞಾನಾರ್ಜನೆಯನ್ನು ತಳ್ಳಿ ಹಾಕಿ ಕಾರ್ಯಾಸಕ್ತ ಜ್ಞಾನವನ್ನು ಕೊಡಲು ಹವಣಿಸುವ ಮತ್ತು ಕಾರ್ಯಾಚರಣೆಯಲ್ಲಿ ತರಲು ಕಠಿಣವೆನಿಸುವ ವಿಧಾನಗಳನ್ನೊಳಗೊಂಡ ಈ ಹೊಸ ಶಿಕ್ಷಣಕ್ಕಂತೂ ಮೇಲೆ ಹೇಳಿದ ಮಾತು ಹೆಚ್ಚಾಗಿ ಅನ್ವಯಿಸುತ್ತಿದೆ.

ನವಕರಿಯಲ್ಲಿದ್ದಾಗ ಹೊಂದತಕ್ಕ ಶಿಕ್ಷಣ

ಬೇಸಿಕ್ ಸಾಲೆಯಲ್ಲಿಯ ಶಿಕ್ಷಕ–ಶಿಕ್ಷಕಿಯರು ಮುಖ್ಯವಾಗಿ ಎರಡು ಅರ್ಹತೆಗಳನ್ನು ಹೊಂದಿರಬೇಕು—(೧) ಸಾಮಾನ್ಯ ಜ್ಞಾನದ ಶೈಕ್ಷಣಿಕ ಅರ್ಹತೆ, (೨) ವೃತ್ತಿಯ ಅರ್ಹತೆ. ಸಾಮಾನ್ಯ ಜ್ಞಾನದ ಶೈಕ್ಷಣಿಕ ಯೋಗ್ಯತೆಯೆಂದರೆ ಅವರಲ್ಲಿ ವಿಶಾಲವಾದ ಹೊರನೋಟವಿರಬೇಕು, ಸಮಾಜದ ಮತ್ತು ಜನತೆಯ ಬಗೆಗೆ ಸಾಕಷ್ಟು ಜ್ಞಾನವಿರಬೇಕು. ಮತ್ತು ಬೇರೆ ಬೇರೆ ಕ್ಷೇತ್ರಗಳಲ್ಲಿಯ ಹೊಸ ಜ್ಞಾನವನ್ನು ಪಡೆಯುವ ಆತುರತೆಯುಳ್ಳವರಿರಬೇಕು. ವಸ್ತುಸ್ಥಿತಿಯತ್ತ ಹೊರಳಿ ನೋಡಿದರೆ, ನಮ್ಮ ಮುಂಬಯಿ ಕರ್ನಾಟಕದಲ್ಲಿಯ ಶಿಕ್ಷಕ–ಶಿಕ್ಷಕಿಯರು ಏಳು ವರ್ಷಗಳ ವರೆಗೆ ಮಾತ್ರ ಸಾಲೆಯನ್ನು ಚನ್ನಾಗಿ ಕಲಿತವರಿರುವದು ನಮಗೆ ಕಂಡು ಬರುತ್ತಿದೆ (ಉಳಿದ ವಿಭಾಗಗಳ ಶಿಕ್ಷಕ-ಶಿಕ್ಷಕಿಯರು ಎಷ್ಟು ವರ್ಷಗಳ ಶಿಕ್ಷಣವನ್ನು ಪಡೆದಿರುವರೆಂಬುದು ನಮಗೆ ಗೊತ್ತಿಲ್ಲದ ವಿಷಯ). ಇಷ್ಟೊಂದು ಶೈಕ್ಷಣಿಕ ಯೋಗ್ಯತೆಯು ಹೆಚ್ಚು ಕಠಿಣವಾದ ಹೊಸ ಶಿಕ್ಷಣವನ್ನು ಕಲಿಸುವ ಹೊಣೆಯನ್ನು ಹೊರಲು ಬೇಕಾಗುವ ಜ್ಞಾನವಿಸ್ತಾರವನ್ನೂ ದೃಷ್ಟಿವೈಶಾಲ್ಯವನ್ನೂ ತಂದುಕೊಡಲು ಸಮರ್ಥವಾಗಲಾರದೆಂದು ಹೇಳಿದರೆ ಅದು ತಪ್ಪಾದೀತೆಂದು ನಮಗನಿಸುವದಿಲ್ಲ. ಈಗಾಗಲೇ ನವಕರಿಯಲ್ಲಿದ್ದ ಅಸಂಖ್ಯ ಶಿಕ್ಷಕ–ಶಿಕ್ಷಕಿಯರ ಸಾಮಾನ್ಯಜ್ಞಾನದ ಮಟ್ಟವನ್ನು ಎತ್ತರಿಸಲು ಹಂಚಿಕೆಗಳನ್ನು ಶೋಧಿಸಬೇಕು. ಹೊಸದಾಗಿ ಸೇರಬಯಸುವವರಿಗೋಸ್ಕರ ಕನಿಷ್ಠವಾಗಿ ಬೇಕಾಗುವ ಶೈಕ್ಷಣಿಕ ಯೋಗ್ಯತೆಯನ್ನು ಹೆಚ್ಚಿಸಿದರೆ, ಸಮಸ್ಯವು ತನ್ನಷ್ಟಕ್ಕೆ ತಾನೇ ಬಗೆಹರಿಯುವದು. ಆದರೆ, ಈಗ ನಮ್ಮ ಮುಂದೆ ಇರುವದು ಈಗಾಗಲೇ ನವಕರಿಯಲ್ಲಿದ್ದ ಶಿಕ್ಷಕ–ಶಿಕ್ಷಕಿಯರ ಸಮಸ್ಯವು. ಅವರ ಜ್ಞಾನದ ಮಟ್ಟವನ್ನು ಸುಧಾರಿಸಲು ಸಾಧನೋಪಾಯಗಳನ್ನು ಕಂಡು ಹಿಡಿಯಬೇಕಾಗಿದೆ. ಅವರಿಗೋಸ್ಕರ ಸೇವಾವಧಿಯಲ್ಲಿಯೇ ಶಿಕ್ಷಣವನ್ನು ಪೂರೈಸಲು ವ್ಯವಸ್ಥೆಗಳನ್ನು ಮಾಡಬೇಕು. ಮುಂಬಯಿ ಕರ್ನಾಟಕದಲ್ಲಿ ಈ ತರಹದ ವ್ಯವಸ್ಥೆಯು ಎಂದೋ ಆಗಿದೆ. ನಮ್ಮ ವಿಭಾಗದಲ್ಲಿ ಅಂತಹ ಶಿಕ್ಷಕ–ಶಿಕ್ಷಕಿಯರಿಗೋಸ್ಕರ ಅಲ್ಲಲ್ಲಿ ತರಬೇತಿ ಕೇಂದ್ರಗಳನ್ನು ತೆರೆದುದು ನಿಜ. ಅಲ್ಲಲ್ಲಿ ಚಿಕ್ಕ ಸಮ್ಮೇಲನಗಳನ್ನು ಜರುಗಿಸುತ್ತಿರುವದೂ ನಿಜ. ಅವುಗಳ ವರದಿಗಳು ಮೇಲಿಂದಮೇಲೆ ಈ ನಮ್ಮ ಮಾಸಿಕದ ಸಂಚಿಕೆಗಳಲ್ಲಿ ಪ್ರಕಟಗೊಂಡಿವೆ. ಈ ಸಂದರ್ಭದಲ್ಲಿ ಒಂದು ಮಹತ್ವದ ಸೂಚನೆಯನ್ನು ಮಾಡುವದು ಲೇಸೆಂದು ನಮಗನಿಸುತ್ತಿದೆ. ಪ್ರತಿಯೊಂದು ಬೇಸಿಕ್ ಸಾಲೆಯಲ್ಲಿ ಶಿಕ್ಷಕ–ಶಿಕ್ಷಕಿಯರಿಗೋಸ್ಕರ ಪ್ರತ್ಯೇಕವಾದೊಂದು ಪುಸ್ತಕಾಲಯವಿರಬೇಕು. ಅದರಲ್ಲಿ ಜೀವನ ಶಿಕ್ಷಣವನ್ನು ಕುರಿತು ಬರೆದ ಪುಸ್ತಕಗಳ ಸಂಗ್ರಹವಿರಬೇಕು. ಜೀವನ ಶಿಕ್ಷಣ ಮಾಸಿಕವನ್ನು ಪ್ರತಿಯೊಂದು ಬೇಸಿಕ್ ಸಾಲೆಯು ಪಡೆಯಬೇಕು. ಹೈದರಾಬಾದ ಕರ್ನಾಟಕದಲ್ಲಿ ಶೈಕ್ಷಣಿಕ ಮಾಸಿಕವಿಲ್ಲೆಂದು ನಮ್ಮ ಕೇಳಿಕೆಯಲ್ಲಿದೆ. ನಮ್ಮ ಜೀವನ ಶಿಕ್ಷಣ ಮಾಸಿಕವನ್ನು ಅಲ್ಲಿಯ ಸಾಲೆಗಳು ತರಿಸಿಕೊಳ್ಳುವ ವ್ಯವಸ್ಥೆಯನ್ನು ಸರಕಾರದವರು ಬೇಗನೆ ಮಾಡಬೇಕು. ಹಲವು ಹಳ್ಳಿಗಳ ಒಂದು ಗುಂಪನ್ನು ಮಾಡಿ ಆ ಗುಂಪಿನ ಮಧ್ಯದಲ್ಲಿರುವ ಸಾಲೆಯೊಂದರಲ್ಲಿ ಶಿಕ್ಷಕ–ಶಿಕ್ಷಕಿಯರ ಮಾಸಿಕ ಸಭೆಗಳನ್ನೇರ್ಪಡಿಸಬೇಕು. ಆ ಸಭೆಗಳಲ್ಲಿ ಮಾದರಿ ಪಾಠಗಳನ್ನೂ ಸಾಮಾನ್ಯಜ್ಞಾನದ ಉಪನ್ಯಾಸಗಳನ್ನೂ ಹೊಸ ಹೊಸ ವಿಚಾರಗಳನ್ನರುಹುವ ವ್ಯವಸ್ಥೆಯನ್ನೂ ಏರ್ಪಡಿಸಬೇಕು. ನವಕರಿಯ ಸಲುವಾಗಿ ಶಿಕ್ಷಕ-ಶಿಕ್ಷಕಿಯರು ಜ್ಞಾನ ಸಂಪರ್ಕದಿಂದಲ್ಲವಾದರೂ ಸುದ್ದಿ–ಸಮಾಚಾರಗಳ ಸಂಪರ್ಕದಿಂದ ಸಿಡಿದು ದೂರವಿರುವ ಹಳ್ಳಿಗಳಲ್ಲಿ ಅವಶ್ಯವಾಗಿರಬೇಕಾಗುತ್ತಿದೆ. ಅವರ ಜ್ಞಾನವು ಮುಲೆತ ನೀರಿನ ಸಣ್ಣ ಹೊಂಡದಂತಿರದೆ ಸ್ವಚ್ಛ ನೀರಿನ ಬುಗ್ಗೆಯಂತಿರಬೇಕೆಂದು ನಾವು ಬಯಸುತ್ತಿದ್ದರೆ, ಮಕ್ಕಳಿಗೆ ಉಪಯೋಗವಾಗುವ ಪುಸ್ತಕಗಳಲ್ಲದೆ ಶಿಕ್ಷಕ–ಶಿಕ್ಷಕಿಯರಿಗೆ ಕೆಲಸ ಮಾಡುತ್ತ ಮಾಡುತ್ತ ಹೊಸ ಜ್ಞಾನವನ್ನು ಪಡೆಯಲು ಉಪಯುಕ್ತವಾಗುವ ಪುಸ್ತಕಗಳ ಪುಸ್ತಕಾಲಯವೊಂದನ್ನೊದಗಿಸುವದು ಸರಕಾರದ ಕರ್ತವ್ಯವಾಗಿದೆ. ಸರಕಾರವು ಈಗ ಅಗ್ಗದರದ ರೇಡಿಯೋಗಳನ್ನು ತಯಾರಿಸಲು ಹವಣಿಸುತ್ತಿದೆ. ಇದು ಬೇಗನೆ ಫಲಕಾರಿಯಾಗಲೆಂದು ಹಾರೈಸುತ್ತೇವೆ. ಈ ಯೋಜನೆಯು ಫಲಕಾರಿಯಾದ ನಂತರ ಆ ರೇಡಿಯೋ ಸೆಟ್ಟುಗಳ ಉಪಯೋಗವು ಮೂಲೆ ಮೂಲೆಗಳಲ್ಲಿದ್ದ ಹಳ್ಳಿಗಳಿಗೆ ಬೇಗನೆ ತಟ್ಟಲೆಂದು ಆಶಿಸೋಣ. ರೇಡಿಯೋ, ಫಿಲ್ಮ, ಮೊದಲಾದ ಕಂಣಿನಿಂದ ನೋಡುವ, ಕವಿಯಿಂದ ಕೇಳುವ ಆಧುನಿಕ ಸಾಧನಗಳ ಉಪಯೋಗವು ದೂರ ದೂರಿನ ಹಳ್ಳಿಗಳಲ್ಲಿಯ ಸಾಲೆಗಳ ಮಕ್ಕಳಿಗೆ ಮತ್ತು ಶಿಕ್ಷಕ-ಶಿಕ್ಷಕಿಯರಿಗೆ ಬೇಗನೆ ಆಗುವಂತಾಗಬೇಕು. ಫಿಲ್ಮುಗಳು ಮತ್ತು ರೇಡಿಯೋ ಭಾಷಣಗಳ ಸುವ್ಯವಸ್ಥಿತ

ವಾದೊಂದು ಯೋಜನೆಯ ಮುಖಾಂತರ ಶಿಕ್ಷಕ ವೃತ್ತಿಗೆ ಅವಶ್ಯವಾಗಿ ಬೇಕಾಗುವ ಸಾಮಾನ್ಯಜ್ಞಾನದ ಬೌದ್ಧಿಕ ಸಂಪತ್ತನ್ನು ಹೆಚ್ಚಿಸುವಲ್ಲಿ ಒಂದು ಕ್ರಾಂತಿಯನ್ನೇ ಹುಟ್ಟಿಸಬಹುದು. ಈ ತರಹದ ಯೋಜನೆಯೊಂದನ್ನು ನಿರ್ಮಿಸಿದರೆ, ಸಾದಾ ಸಾಲೆಯ ಶಿಕ್ಷಕ–ಶಿಕ್ಷಕಿಯರು ಸಹ ಬೇಗನೆ ಬೇಸಿಕ್ ಸಾಲೆಯ ದಕ್ಷ ಶಿಕ್ಷಕ–ಶಿಕ್ಷಕಿಯರಾಗುವ ಸಂಬಂಧವೂ ಇದೆಯೆಂಬ ಸಂಗತಿಯನ್ನು ಶಿಕ್ಷಣ ಇಲಾಖೆಯವರ ಗಮನಕ್ಕೆ ತರಬಯಸುವೆ.

ವೃತ್ತಿಯಲ್ಲಿ ತರಬೇತು

ಸಾದಾ ಸಾಲೆಗಳಲ್ಲಿ ಶಿಕ್ಷಕ ವೃತ್ತಿಯ ಪ್ರಮಾಣ ಪತ್ರವು ಮಹತ್ವದ್ದಿದೆಯೆಂದ ಮೇಲೆ ಬೇಸಿಕ್ ಸಾಲೆಗಳಲ್ಲಿ ಅದಕ್ಕಿಂತಲೂ ಹೆಚ್ಚು ಮಹತ್ವದ್ದಿದೆ. ಮೂಲ ಕಾಯಕದ ಚಟುವಟಿಕೆಗಳಲ್ಲಿಯೂ ಸಂಬಂಧೀಕರಣದ ಮುಖಾಂತರ ಅವುಗಳನ್ನು ಶಿಕ್ಷಣದ ಮಾಧ್ಯಮವಾಗಿ ಉಪಯೋಗಿಸಿಕೊಳ್ಳುವ ತಂತ್ರಗಾರಿಕೆಯಲ್ಲಿಯೂ ಅವರು ಕುಶಲರಿಲ್ಲದಿದ್ದರೆ, ಆ ಕೊರತೆಯನ್ನು ಅವರಲ್ಲಿಯ ಅಗಾಧ ಪಾಂಡಿತ್ಯವೂ ಬುದ್ಧಿಮತ್ತೆಯೂ ಎಂದಿಗೂ ತುಂಬಿ ಕೊಡಲಾರವು. ಇವುಗಳಲ್ಲಿ ಸಾಕಷ್ಟು ನೈಪುಣ್ಯವನ್ನು ತಂದು ಕೊಡಲು ಶಕ್ಯವಾಗುವಷ್ಟು ತರಬೇತಿಯ ಕಾಲಾವಧಿಯು ಸುದೀರ್ಘವಾದದ್ದಿರಬೇಕು. ಮುಂಬಯಿ ಕರ್ನಾಟಕದಲ್ಲಿ ಶಿಕ್ಷಕ-ಶಿಕ್ಷಕಿಯರಿಗೋಸ್ಕರ ತರಬೇತಿಯು ಎರಡು ವರುಷಗಳ ಅವಧಿಯದಿರುತ್ತಿದೆ. ಮೂಲ ಕಾಯಕದಲ್ಲಿಯೂ ಉದ್ದೇಶಪೂರಿತ ಚಟುವಟಿಕೆಗಳ ಮುಖಾಂತರ ಕಲಿಸುವ ವಿಧಾನಗಳಲ್ಲಿಯೂ ಸಾಕಷ್ಟು ಪ್ರಭುತ್ವವನ್ನು ತಂದು ಕೊಡಲು ಹೊಸ ಶಿಕ್ಷಕ ವಿದ್ಯಾರ್ಥಿ-ವಿದ್ಯಾರ್ಥಿನಿಯರಿಗೋಸ್ಕರ ಈ ಅವಧಿಯು ಸಮುಂಜಸವೆನಿಸುತ್ತಿದೆ. ಆದರೆ, ಜೀವನ ಶಿಕ್ಷಣವನ್ನು ಬೇಗನೆ ಸಾರ್ವತ್ರಿಕವಾಗಿ ಮಾಡುವದು ನಮ್ಮ ರಾಷ್ಟ್ರದ ಹೆಗ್ಗುರಿಯಾಗಿರುವದರಿಂದ ಈಗ ನಮ್ಮೆದುರಿಗೆ ನಿಜವಾಗಿ ಧುತ್ತೆಂದು ಬಂದು ನಿಲ್ಲುವ ಸಮಸ್ಯವು ನವಕರಿಯಲ್ಲಿದ್ದ ಮತ್ತು ಇನ್ನೂ ಬಹಳಷ್ಟು ವರುಷಗಳ ವರೆಗೆ ಸೇವೆ ಸಲ್ಲಿಸಬೇಕಾಗಿದ್ದ ಶಿಕ್ಷಕ–ಶಿಕ್ಷಕಿಯರ ಬಗೆಗೆ ಮಾತ್ರ. ಹೊಸಬರನ್ನು ತರಬೇತುಗೊಳಿಸುವದಕ್ಕಿಂತ ಮುಂಚೆ ಈಗ ನವಕರಿಯಲ್ಲಿದ್ದವರಿಗೆ ಜೀವನ ಶಿಕ್ಷಣದ ವಿಧಾನಗಳಲ್ಲಿ ಪುನಃ ತರಬೇತನ್ನು ಕೊಡುವದಕ್ಕೆ ಸ್ವಾಭಾವಿಕವಾಗಿ ಹೆಚ್ಚು ಲಕ್ಷ್ಯವನ್ನು ಪೂರೈಸಬೇಕಾಗುವದು. ಇಂತಹ ಶಿಕ್ಷಕ–ಶಿಕ್ಷಕಿಯರು ತಾವು ಮೊದಲು ಕಲಿತ ಎಷ್ಟೋ ಸಂಗತಿಗಳನ್ನು ಮರೆಯಬೇಕಾಗುವದರಿಂದಲೂ ನಮ್ಮ ಮೊದಲಿನ ಚಟಗಳನ್ನು ಬಿಡಬೇಕಾಗುವದರಿಂದಲೂ ಇದು ಹೆಚ್ಚು ಕಾರಣವೆನಿಸುವದು ಸ್ವಾಭಾವಿಕ. ಹಳೆಯ ಚಟಗಳನ್ನು ಬಿಡಲಿಕ್ಕೂ ಹೊಸ ವಿಧಾನಗಳಲ್ಲಿ ಕೌಶಲ್ಯವನ್ನು ಪಡೆಯಲಿಕ್ಕೂ ಅವರಿಗೆ ಕೊಡತಕ್ಕ ತರಬೇತು ಅಳವಾದದ್ದೂ ಸುದೀರ್ಘಾವಧಿಯದೂ ಇರಬೇಕಾಗುವದು. ಮುಂಬಯಿ ಕರ್ನಾಟಕದಲ್ಲಿ ಕೈಕೊಂಡಿದ್ದ ಯೋಜನೆಯ ಅನುಭವದ ಮೇಲಿಂದ ಹೇಳುವದಾದರೆ, ಅದು ಅಜಮಾಸು ಒಂದು ಟರ್ಮ್ (Term) ನಷ್ಟು ಅಂದರೆ ನಾಲ್ಕೈದು ತಿಂಗಳುಗಳ ಅವಧಿಯಷ್ಟು ಇರುವದು ಲೇಸು. ಕಾರಣವೆಂದರೆ, ಈ ಶಿಕ್ಷಕ–ಶಿಕ್ಷಕಿಯರು ಹಳೆಯ ಶಿಕ್ಷಣದಲ್ಲಿ ಮೊದಲೇ ತರಬೇತನ್ನು ಹೊಂದಿದವರಿರುವದರಿಂದ ಹೊಸ ವಿಧಾನಗಳನ್ನೂ ಮೂಲ ಕಾಯಕದ ಚಟುವಟಿಕೆಗಳನ್ನೂ ಸಂಪೂರ್ಣವಾಗಿ ಗ್ರಹಿಸಲು ಇದಕ್ಕಿಂತಲೂ ಹೆಚ್ಚಿನ ಅವಧಿಯು ಬೇಕಾದೀತೆಂದು ಅನಿಸುವದಿಲ್ಲ. ಅದರೂ, ನಮ್ಮ ರಾಜ್ಯದ ಉಳಿದ ವಿಭಾಗಗಳಲ್ಲಿ ಈ ಪ್ರಯೋಗವನ್ನು ಮಾಡಿ ನೋಡಿ ಇಡಿಯ ರಾಜ್ಯಕ್ಕೆ ಅನ್ವಯಿಸುವದೊಂದು ಅವಧಿಯನ್ನು ಗೊತ್ತುಪಡಿಸುವದು ಒಳಿತು.

[ಮುಂದುವರಿಯುವದು]

ಜೀವನ ಶಿಕ್ಷಣ ಶಾಲೆಗಳಲ್ಲಿ ಬೌದ್ಧಿಕ ಪ್ರಗತಿ

ಬರೆದವರು :— **ಶ್ರೀ ಎಸ್. ಎಸ್. ನಾಡಕರ್ಣಿ,** ಬಿ. ಎಸ್ಸಿ. (ಆನರ್ಸ), ಡಿ. ಇಡಿ. ರಾ. ಭಾ. ವಿಶಾರದ
(ಸಾಧಾರ)

ನಮ್ಮ ದೇಶದ ಪರಿಸ್ಥಿತಿಗನುಸಾರವಾಗಿ ಪ್ರಾಥಮಿಕ ಶಿಕ್ಷಣವು ಜೀವನ ಶಿಕ್ಷಣವಾಗಿರಬೇಕು. ಎಂಬುದು ಈಗ ನಿರ್ವಿವಾದ ಸಂಗತಿಯಾಗಿದೆ ಎನ್ನಬಹುದು. ಜೀವನ ಶಿಕ್ಷಣವು ಪ್ರಚಾರದಲ್ಲಿ ಬಂದು ಸುಮಾರು ೫ ವರ್ಷಗಳಾಗುತ್ತ ಬಂದವು. ಈ ಕಾಲಾವಧಿಯಲ್ಲಿ ಅನೇಕ ಶಿಕ್ಷಣ ತಜ್ಞರು ಈ ಶಿಕ್ಷಣದ ಯೋಗ್ಯ

೩-೪ನೆಯ ವರ್ಗಗಳ ಹೊಸ ಅಭ್ಯಾಸ ಪತ್ರಿಕೆ

ವಿಭಾಗ ೨.

ವಿಷಯಗಳ ರೂಪದಲ್ಲಿ ಶೈಕ್ಷಣಿಕ ಅಂತರಂಶಗಳು

೧. ಮಾತೃಭಾಷೆ

(ಕನ್ನಡ, ಉರ್ದು, ತಮಿಳು, ತೆಲುಗು, ಮರಾಠಿ ಅಥವಾ ಹಿಂದಿ)

ಮಕ್ಕಳು ೨ನೆಯ ವರ್ಗವನ್ನು ಬಿಡುವದರೊಳಗಾಗಿ ಕಾಗುಣಿತಾಕ್ಷರಗಳು ಹಾಗು ಒತ್ತಕ್ಷರಗಳು ಸ
ಮೂಲಾಕ್ಷರಗಳೆಲ್ಲವುಗಳ ಪರಿಚಯ ಮಾಡಿಕೊಂಡವರಾಗುವರೆಂದು ನಿರೀಕ್ಷಿಸಲಾಗಿದೆ. ತಮ್ಮ ಮಾತೃ
ಕನಿಷ್ಠ ೫೫೦ ಮೂಲ ಶಬ್ದಗಳನ್ನು ಕಲಿತಿರಬೇಕೆಲ್ಲದೆ, ಅವುಗಳ ಅರ್ಥವನ್ನು ಜೆನ್ನಾಗಿ ಗ್ರಹಿಸಿ ತಮ್ಮ
ಮಾತುಗಳಲ್ಲಿ ಅವುಗಳನ್ನು ಮೌಖಿಕವಾಗಿ ಇಲ್ಲವೆ ಬರೆಹದಲ್ಲಿ ಉಪಯೋಗಿಸಲು ಬರಬೇಕು. ತಾವು ಓ
ಅರ್ಥವನ್ನು ತಿಳಿದುಕೊಳ್ಳಲು ಸಮರ್ಥರಾಗಿರಬೇಕು.

ಆದುದರಿಂದ ೩ ಹಾಗು ೪ನೆಯ ವರ್ಗಗಳಲ್ಲಿ ವಿಷಯದೆಡೆಗೆ ಲಕ್ಷ್ಯವನ್ನು ಹೆಚ್ಚಾಗಿ ಸ
ಸಮರ್ಥರಿರಬೇಕೆಂದು ನಿರೀಕ್ಷಿಸಲಾಗಿದೆ. ಓದಿದ ವಿಷಯವನ್ನು ಹೆಚ್ಚು ಗ್ರಹಣಮಾಡಿಕೊಳ್ಳಬೇಕಲ್ಲದೆ, ೨
ಎರಡು ವರ್ಗಗಳಿಗಿಂತಲೂ ಹೆಚ್ಚು ಶುದ್ಧವಾಗಿ ಸರಾಗವಾಗಿ ವ್ಯಕ್ತಪಡಿಸಲು ಬರಬೇಕು. ಪಾಠದಲ್ಲಿ
ಪಾತ್ರಗಳನ್ನು ಕುರಿತು ಸಂಭಾಷಿಸಲು ಬರುವಂತೆ ಮಕ್ಕಳಿಗೆ ಸದವಕಾಶಗಳನ್ನು ಕಲ್ಪಿಸಿಕೊಡಬೇಕು.
ನೈಸರ್ಗಿಕ ಅಭಿರುಚಿಗಳನ್ನು ಅವಲಂಬಿಸಿ ತಾವೇ ಚಿಕ್ಕ ನುಡಿಗಳನ್ನು ; ವರ್ಣನಾತ್ಮಕ ಚಿಕ್ಕ ಕಥೆಗಳನ್ನು
ಪ್ರೋತ್ಸಾಹಿಸಬೇಕು.

ಯಾವ ಭಾಷೆಯೇ ಇರಲಿ ; ಮಗುವಿನ ಮಾತೃಭಾಷೆಯನ್ನನುಸರಿಸಿ ಕೆಳಗಿನ ಅಭ್ಯಾಸ ಪ
೩ ಹಾಗು ೪ನೆಯ ವರ್ಗಗಳಲ್ಲಿ ಸ್ಥೂಲಮಾನವಾಗಿ ಮಾಡಬೇಕಾದ ಓದುಬರೆಹದ ಮೊತ್ತವನ್ನು ಸೂಚಿಸುತ್ತ

೩ನೆಯ ವರ್ಗ

೧. ಓದುವದು :

ಮೂರನೆಯ ವರ್ಗದ ವಾಚನದಲ್ಲಿ ಹಿಂದಿನ ಎರಡು ವರ್ಗಗಳಲ್ಲಿ ಕಲಿತ ಕೆಲವು ಶಬ್ದಗಳ ಪುನರಾ
ಜೊತೆಗೆ ಸುಮಾರು ೪೫೦ ಹೊಸಶಬ್ದಗಳ ಸಮಾವೇಶವಾಗುವಂತೆ ಪಾಠಗಳಿರಬೇಕು. ೩ನೆಯ ವರ್ಗದ ವ
ಡಬಲ್ ಡೆಮಿ ೪ ಆಕಾರದ ಸುಮಾರು ೧೧೨ ಪುಟಗಳಿದ್ದಿರಬೇಕಲ್ಲದೆ ಉದಾಹರಣೆಗಳನ್ನೂ ಅಭ್ಯಸನಗಳನ್ನೂ
ಒಳಗೊಂಡಿರಬೇಕು. ಮಕ್ಕಳು ಪಾಠಗಳನ್ನು ವಿರಾಮ ಚಿಹ್ನಗಳೆಡೆಗೆ ಯೋಗ್ಯಲಕ್ಷ್ಯ ಪೂರೈಸಿ ಓದಲು
ರಾಗಬೇಕು. ಹೊಸ ಪದಗಳ ಅರ್ಥವನ್ನು ಗ್ರಹಿಸಿ ಅವುಗಳನ್ನು ಸ್ವಂತ ಮಾತುಗಳಲ್ಲಿ ಬಳಸುವದು
ವಿಷಯಗಳ ಮುಖ್ಯಾಂಶಗಳನ್ನು ವ್ಯಕ್ತಪಡಿಸಲು ಬರಬೇಕು. ವೃತ್ತಪತ್ರಿಕೆಗಳ ಶೀರ್ಷಿಕೆಗಳನ್ನು ; ಸಂಕೇತ
ಗಳನ್ನು ಓದುವದನ್ನು ಪ್ರೋತ್ಸಾಹಿಸಬೇಕು.

೨. ಮೇಲೋದು :

(ಹೆಚ್ಚಿನ ಓದು) ವಿವಿಧ ವಿಷಯಗಳ ಮೇಲಿನ ಚಿಕ್ಕ ಚಿಕ್ಕ ಪುಸ್ತಕಗಳನ್ನು ಓದಲು ಪ್ರೋತ್ಸಾಹಿ
ಮನಸ್ಸಿನಲ್ಲಿ ಓದುವ ರೂಢಿ ಮಾಡಿಸಬೇಕು. ಆದು ಅವರ ಶಬ್ದಸಂಪತ್ತಿಯನ್ನು ಹೆಚ್ಚಿಸಬೇಕಲ್ಲದೆ, ಶ್ರ

ಸ್ಫೂರ್ತಿಯಿಂದ ಹೊಸ ಹೊಸ ಚಟುವಟಿಕೆಗಳನ್ನು ಯೋಚಿಸಿಕೊಂಡು ಮಕ್ಕಳಿಂದ ಮಾಡಿಸಿ ಈ ಪದ್ಧತಿಯ ಪ್ರಾಯೋಗಿಕ ಜ್ಞಾನವನ್ನು ಪಡೆದುಕೊಳ್ಳುತ್ತಾರೆ? ಈ ಎಲ್ಲ ಪ್ರಶ್ನೆಗಳಿಗೆ ಉತ್ತರಗಳನ್ನು ಹುಡುಕ ಹೋದರೆ ಸ್ವಲ್ಪ ನಿರಾಶೆಯೇ ಆದೀತು. ಯಾರೋ ಹಾಕಿದ ಯೋಜನೆಯ ಪ್ರಕಾರ ಯಾವದೋ ವರ್ಗಕ್ಕೆ ಪಾಠವನ್ನು ಕೊಟ್ಟು ತರಬೇತಿ ಅವಧಿಯ ಪಾಠದ ಸಂಖ್ಯೆಯನ್ನು ಮುಗಿಸಿದರೆ ನಿಜವಾದ ಜ್ಞಾನವು ಬರುವದಾದರೂ ಹೇಗೆ? ಮುಂದೆ ಶಾಲೆಗಳಿಗೆ ಹೋಗಿ ಅಸ್ತವ್ಯಸ್ತ ಪದ್ಧತಿಯಿಂದ ಕಲಿಸುವಿಕೆಯನ್ನು ಸಾಗಿಸಿದರೆ ಮಕ್ಕಳ ಬೌದ್ಧಿಕ ಪ್ರಗತಿಯು ಕುಂಠಿತವಾಗದೆ ಏನು ಮಾಡೀತು? ಅಂತೆಯೇ ಜೀ. ಶಿ. ತರಬೇತಿಯನ್ನು ಇನ್ನಷ್ಟು ಉತ್ತಮ ಮಟ್ಟಕ್ಕೆ ಏರಿಸುವದು ಅವಶ್ಯವೆನಿಸುವದು. ತರಬೇತಿ ಮಟ್ಟವು ಇನ್ನೂ ಉತ್ತಮಗೊಂಡಲ್ಲಿ ಹಾಗೂ ತರಬೇತಿಯ ಅವಧಿಯಲ್ಲಿ ಶಿಕ್ಷಕರು ಆ ತರಬೇತಿಯ ಪೂರ್ಣ ಉಪಯೋಗ ಮಾಡಿಕೊಂಡಲ್ಲಿ ಅವರು ತಮ್ಮ ಶಾಲೆಗಳಲ್ಲಿಯ ಮಕ್ಕಳ ಬೌದ್ಧಿಕ ಪ್ರಗತಿಯನ್ನು ಉಂಟು ಮಾಡಲು ಶಕ್ಯವಾಗುತ್ತದೆ. ತೀರ ಇತ್ತೀಚಿನ ತರಬೇತಿಯ ಅಭ್ಯಾಸ ಪತ್ರಿಕೆಯಾದರೂ ಇದನ್ನೇ ಹೇಳುತ್ತಿದೆ. ವಿಷಯ ಜ್ಞಾನಕ್ಕಿಂತ ಕಲಿಸುವಿಕೆಯ ಕಲೆಯ ಕಡೆಗೆ ಹೆಚ್ಚು ಲಕ್ಷ್ಯಪೂರ್ವಕ ಸ ಬೇಕೆಂದು ಅದು ಒತ್ತಿ ಹೇಳುತ್ತದೆ.

ಇನ್ನು ಶಿಕ್ಷಣದಲ್ಲಿ ಕಾಲ ಕಾಲಕ್ಕೆ ಹೊಸ ಹೊಸ ಪದ್ಧತಿಗಳು ಹಾಗೂ ಹೊಸ ಹೊಸ ಸಾಹಿತ್ಯ ಸಲಕರಣೆಗಳು ರೂಪುಗೊಳ್ಳುತ್ತಿರುವದರಿಂದ ಒಮ್ಮೆ ತರಬೇತಿ ಹೊಂದಿದ ಶಿಕ್ಷಕರಿಗೂ ಸಹಿತ ಕಾಲ ಕಾಲಕ್ಕೆ ಅಲ್ಪಾವಧಿಯ ತರಬೇತುಕೊಟ್ಟು ಹೊಸ ಸಂಗತಿಗಳ ಕಡೆಗೆ ಅವರ ದೃಷ್ಟಿಯನ್ನು ಹರಿಸಿದರೆ ಅದು ಯೋಗ್ಯವಾದೀತು. ಈ ತರಬೇತಿಗಳಿಂದ ಶಿಕ್ಷಕರಿಗೆ ತಮ್ಮ ಕಠಿಣತೆಗಳನ್ನು ಎಲ್ಲರೆದುರಿಗೆ ಇಟ್ಟು ಅವುಗಳ ನಿವಾರಣೆಯ ಉಪಾಯಗಳನ್ನು ತಿಳಿದುಕೊಳ್ಳಲು, ತಮ್ಮ ಶಾಲೆಯ ಪ್ರಗತಿಯನ್ನು ಇತರ ಶಾಲೆಗಳ ಪ್ರಗತಿಗೆ ಒರೆಹಚ್ಚಿ ನೋಡಲು ಹಾಗೂ ತಮ್ಮ ತಮ್ಮಲ್ಲಿ ವಿಚಾರ ವಿನಿಮಯ ಮಾಡಲು ಅನುಕೂಲವಾಗುವದು. ಸರಕಾರದವರು ನಡೆಸುತ್ತಲಿರುವ ಅಲ್ಪಾವಧಿ ತರಬೇತಿಗಳ ಉಪಯೋಗವನ್ನು ಶಿಕ್ಷಕರು ಪೂರ್ಣವಾಗಿ ತೆಗೆದುಕೊಳ್ಳಬೇಕು.

ಮೂರನೆಯ ಸಂಗತಿಯಂದರೆ ಮಕ್ಕಳ ವಾಚನಾಭಿರುಚಿ. ಬೇರೆ ಬೇರೆ ವಿಷಯಗಳ ಅನೇಕ ಪುಸ್ತಕಗಳನ್ನು ಓದುವದರಿಂದ ಮಕ್ಕಳಲ್ಲಿ ಜ್ಞಾನವು ಬೆಳೆದು ಅವರ ಬೌದ್ಧಿಕ ಪ್ರಗತಿಯು ತ್ವರಿತವಾಗುವದು. ಅಂತೆಯೇ ಶಾಲೆಯಲ್ಲಿ ವಾಚನಾಲಯಗಳನ್ನು ಸ್ಥಾಪಿಸಿ ಮಕ್ಕಳಿಗೆ ಯೋಗ್ಯವಾದ ಪುಸ್ತಕಗಳನ್ನು ಓದಗಿಸಿಕೊಡಬೇಕೆಂದು ಶಿಕ್ಷಣ ತಜ್ಞರು ಒತ್ತಿ ಹೇಳುತ್ತಾರೆ. ನಮ್ಮ ಜೀ. ಶಿ. ಶಾಲೆಗಳಲ್ಲಿ ಎಷ್ಟು ಶಾಲೆಗಳು ತಮ್ಮಲ್ಲಿ ವಾಚನಾಲಯಗಳನ್ನು ಸಂಘಟಿಸಿಕೊಂಡಿವೆ? ಎಷ್ಟು ಶಿಕ್ಷಕರು ತಮ್ಮ ವಿದ್ಯಾರ್ಥಿಗಳಲ್ಲಿ ಓದುವ ಅಭಿರುಚಿಯನ್ನು ಹುಟ್ಟಿಸುವ ಪ್ರಯತ್ನ ಮಾಡಿದ್ದಾರೆ? ಎಷ್ಟು ಜನ ಶಿಕ್ಷಕರಲ್ಲಿ ಓದುವ ಚಟವಿದೆ? ಈ ಪ್ರಶ್ನೆಗಳಿಗೆ ಕೂಡ ತೃಪ್ತಿಕರ ಉತ್ತರವು ಸಿಗಲಿಕ್ಕಿಲ್ಲ. ಆರ್ಥಿಕ ಅಡಚಣೆ, ಸ್ಥಳದ ಅಭಾವಗಳು ಇದ್ದರೂ ಶಿಕ್ಷಕರು ಪ್ರಯತ್ನಮಾಡಿ ಮಕ್ಕಳನ್ನು ಓದುವದರ ಕಡೆಗೆ ಒಲಿಸಬಹುದು.

ಇವೆಲ್ಲಕ್ಕೂ ಮಿಗಿಲಾಗಿ ನಮ್ಮ ಶಿಕ್ಷಕರಲ್ಲಿ ದೃಢವಾದ ಆತ್ಮವಿಶ್ವಾಸಬೇಕು. ತಮ್ಮ ಉದ್ಯೋಗದಲ್ಲಿ ಉತ್ಸಾಹ ಅಭಿರುಚಿಗಳು ಬೇಕು. ಸಾಧ್ಯವಾದಷ್ಟು ಅನುಕೂಲತೆಗಳನ್ನು ಮಾಡಿಕೊಂಡು ಮಕ್ಕಳ ಸರ್ವತೋಮುಖ ವಿಕಾಸದ ಕಡೆಗೆ ಲಕ್ಷ್ಯಕೊಟ್ಟಲ್ಲಿ ಜೀ. ಶಿ. ಶಾಲೆಗಳಲ್ಲಿಯ ಮಕ್ಕಳಲ್ಲಿ ಎಲ್ಲ ವಿಕಾಸಗಳ ಜೊತೆಗೆ ಬೌದ್ಧಿಕ ವಿಕಾಸವನ್ನು ಮಾಡಲು ಅನುಕೂಲವಾಗುವದು.

೩-೪ನೆಯ ವರ್ಗಗಳ ಹೊಸ ಅಭ್ಯಾಸ ಪತ್ರಿಕೆ

ವಿಭಾಗ ೨.

ವಿಷಯಗಳ ರೂಪದಲ್ಲಿ ಶೈಕ್ಷಣಿಕ ಅಂತರಂಶಗಳು

೧. ಮಾತೃಭಾಷೆ

(ಕನ್ನಡ, ಉರ್ದು, ತಮಿಳು, ತೆಲುಗು, ಮರಾಠಿ ಅಥವಾ ಹಿಂದಿ)

ಮಕ್ಕಳು ೨ನೆಯ ವರ್ಗವನ್ನು ಬಿಡುವಷ್ಟರೊಳಗಾಗಿ ಕಾಗುಣಿತಾಕ್ಷರಗಳು ಹಾಗು ಒತ್ತಕ್ಷರಗಳು ಸಹಿತವಾಗಿ ಮೂಲಾಕ್ಷರಗಳೆಲ್ಲವುಗಳ ಪರಿಚಯ ಮಾಡಿಕೊಂಡವರಾಗುವರೆಂದು ನಿರೀಕ್ಷಿಸಲಾಗಿದೆ. ತಮ್ಮ ಮಾತೃಭಾಷೆಯ ಕನಿಷ್ಠ ೫೫೦ ಮೂಲ ಶಬ್ದಗಳನ್ನು ಕಲಿತಿರಬೇಕೆಲ್ಲದೆ, ಅವುಗಳ ಅರ್ಥವನ್ನು ಚೆನ್ನಾಗಿ ಗ್ರಹಿಸಿ ತಮ್ಮವೇ ಆದ ಮಾತುಗಳಲ್ಲಿ ಅವುಗಳನ್ನು ಪೌಖಿಕವಾಗಿ ಇಲ್ಲವೆ ಬರಿಹದಲ್ಲಿ ಉಪಯೋಗಿಸಲು ಬರಬೇಕು. ತಾವು ಓದಿದುದರ ಅರ್ಥವನ್ನು ತಿಳಿದುಕೊಳ್ಳಲು ಸಮರ್ಥರಾಗಿರಬೇಕು.

ಆದುದರಿಂದ ೩ ಹಾಗು ೪ನೆಯ ವರ್ಗಗಳಲ್ಲಿ ವಿಷಯದೆಡೆಗೆ ಲಕ್ಷ್ಯವನ್ನು ಹೆಚ್ಚಾಗಿ ಪೂರೈಸಲು ಸಮರ್ಥರಿರಬೇಕೆಂದು ನಿರೀಕ್ಷಿಸಲಾಗಿದೆ. ಓದಿದ ವಿಷಯವನ್ನು ಹೆಚ್ಚು ಗ್ರಹಣಮಾಡಿಕೊಳ್ಳಬೇಕಲ್ಲದೆ, ಮೊದಲಿನ ಎರಡು ವರ್ಗಗಳಿಗಿಂತಲೂ ಹೆಚ್ಚು ಶುದ್ಧವಾಗಿ ಸರಾಗವಾಗಿ ವ್ಯಕ್ತಪಡಿಸಲು ಬರಬೇಕು. ಪಾಠದಲ್ಲಿ ಬರುವ ಪಾತ್ರಗಳನ್ನು ಕುರಿತು ಸಂಭಾಷಿಸಲು ಬರುವಂತೆ ಮಕ್ಕಳಿಗೆ ಸದವಕಾಶಗಳನ್ನು ಕಲ್ಪಿಸಿಕೊಡಬೇಕು. ತಮ್ಮ ನೈಸರ್ಗಿಕ ಅಭಿರುಚಿಗಳನ್ನು ಅವಲಂಬಿಸಿ ತಾವೇ ಚಿಕ್ಕ ನುಡಿಗಳನ್ನು; ವರ್ಣನಾತ್ಮಕ ಚಿಕ್ಕ ಕಥೆಗಳನ್ನು ರಚಿಸಲು ಪ್ರೋತ್ಸಾಹಿಸಬೇಕು.

ಯಾವ ಭಾಷೆಯೇ ಇರಲಿ; ಮಗುವಿನ ಮಾತೃಭಾಷೆಯನ್ನನುಸರಿಸಿ ಕೆಳಗಿನ ಅಭ್ಯಾಸ ಪತ್ರಿಕೆಯು ೩ ಹಾಗು ೪ನೆಯ ವರ್ಗಗಳಲ್ಲಿ ಸ್ಥೂಲಮಾನವಾಗಿ ಮಾಡಬೇಕಾದ ಓದುಬರೆಹದ ಪೊತ್ತವನ್ನು ಸೂಚಿಸುತ್ತದೆ.

೩ನೆಯ ವರ್ಗ

೧. ಓದುವದು:

ಮೂರನೆಯ ವರ್ಗದ ವಾಚನದಲ್ಲಿ ಹಿಂದಿನ ಎರಡು ವರ್ಗಗಳಲ್ಲಿ ಕಲಿತ ಕೆಲವು ಶಬ್ದಗಳ ಪುನರಾವೃತ್ತಿಯ ಜೊತೆಗೆ ಸುಮಾರು ೪೫೦ ಹೊಸಶಬ್ದಗಳ ಸಮಾವೇಶವಾಗುವಂತೆ ಪಾಠಗಳಿರಬೇಕು. ೩ನೆಯ ವರ್ಗದ ವಾಚನವು ಡಬಲ್ ಡೆಮಿ ೮ ಆಕಾರದ ಸುಮಾರು ೧೧೨ ಪುಟಗಳಿದ್ದಿರಬೇಕಲ್ಲದೆ ಉದಾಹರಣೆಗಳನ್ನೂ ಅಭ್ಯಸನಗಳನ್ನೂ ಅದು ಒಳಗೊಂಡಿರಬೇಕು. ಮಕ್ಕಳು ಪಾಠಗಳನ್ನು ವಿರಾಮ ಚಿಹ್ನಗಳೆಡೆಗೆ ಯೋಗ್ಯಲಕ್ಷ್ಯ ಪೂರೈಸಿ ಓದಲು ಸಮರ್ಥರಾಗಬೇಕು. ಹೊಸ ಪದಗಳ ಅರ್ಥವನ್ನು ಗ್ರಹಿಸಿ ಅವುಗಳನ್ನು ಸ್ವಂತ ಮಾತುಗಳಲ್ಲಿ ಬಳಸುವದು ಓದಿದ ವಿಷಯಗಳ ಮುಖ್ಯಾಂಶಗಳನ್ನು ವ್ಯಕ್ತಪಡಿಸಲು ಬರಬೇಕು. ವೃತ್ತಪತ್ರಿಕೆಗಳ ಶೀರ್ಷಿಕೆಗಳನ್ನು; ಸಂಕೇತ ಫಲಕಗಳನ್ನು ಓದುವದನ್ನು ಪ್ರೋತ್ಸಾಹಿಸಬೇಕು.

೨. ಮೇಲೋದು:

(ಹೆಚ್ಚಿನ ಓದು) ವಿವಿಧ ವಿಷಯಗಳ ಮೇಲಿನ ಚಿಕ್ಕ ಚಿಕ್ಕ ಪುಸ್ತಕಗಳನ್ನು ಓದಲು ಪ್ರೋತ್ಸಾಹಿಸಬೇಕು. ಮನಸ್ಸಿನಲ್ಲಿ ಓದುವ ರೂಢಿ ಮಾಡಿಸಬೇಕು. ಅದು ಅವರ ಶಬ್ದಸಂಪತ್ತಿಯನ್ನು ಹೆಚ್ಚಿಸಬೇಕಲ್ಲದೆ, ತ್ವರಿತವಾಗಿ

ಓದಲು, ವಿಚಾರ ದೊರಕಿಸಲು ಅವಕಾಶವೀಯಬೇಕು. ಖಾತೆಯವರು ಶಿಫಾರಸು ಮಾಡಿದವುಗಳಲ್ಲಿ ಕೆಲವನ್ನು ಶಿಕ್ಷಕರು ಆ ಆ ವರ್ಗಗಳಿಗೆ ಉಚಿತವಾಗುವಂತೆ ಆಯ್ಕೆ ಮಾಡಿಕೊಡಬೇಕು.

೩. ಪದ್ಯ :

ಸೂಚಿತ ಮೂರನೆಯ ಪುಸ್ತಕದಲ್ಲಿ ಸುಮಾರು ಹತ್ತಾದರೂ (೧೦) ಕವಿತೆಯ ಪಾಠಗಳಿರಬೇಕು. ಅವು ಸುಲಭವಾದ ಆಧುನಿಕ ಕವಿತೆಗಳ ೧೨೦ ಸಾಲುಗಳಾದರೂ ಆಗಬೇಕು. ಆರಿಸಿದ ಪದ್ಯಗಳನ್ನು ಸುಮಾರ ೬೦ ಸಾಲುಗಳಷ್ಟು ಕಂಠಪಾಠ ಮಾಡಿಸಬೇಕು. ಆಯ್ಕೆಯಲ್ಲಿ ಮಕ್ಕಳಿಗೂ ಸ್ವಾತಂತ್ರ್ಯವಿರಬೇಕು. ಆರಿಸಿದ ಕವಿತೆಗಳ ವಿಷಯವು ಈ ವಯೋಮಾನದ (೩ನೆಯ ವರ್ಗದ) ಮಕ್ಕಳ ಬುದ್ಧಿಮಟ್ಟಕ್ಕೂ ಅಭಿರುಚಿಗೂ ಉಚಿತವಾದವುಗಳಿರಬೇಕು. ಹಾಡುಗಳನ್ನು ಕವಿತೆಗಳನ್ನು ಮಕ್ಕಳು ವೈಯಕ್ತಿಕವಾಗಿಯೂ, ಸಾಮೂಹಿಕವಾಗಿಯೂ ಅನ್ನಬೇಕು.

೪. ಬರವಣಿಗೆ ಮತ್ತು ವಾಕ್ಯರಚನೆ :

ಪಠ್ಯಪುಸ್ತಕದಿಂದ ಓದಿದ ಪಾಠಗಳನ್ನು ನೋಡಿ ಬರೆಯಲು ಮಕ್ಕಳು ಸಮರ್ಥರಾಗಬೇಕು. ಹಾಗೆ ಬರೆಯುವಲ್ಲಿ ಬರವಣಿಗೆಯ ಅಂದ, ಸ್ಪುಟತೆ ಮತ್ತು ವೇಗಗಳಿಗೆ ಗಮನ ಕೊಡುವದು. ಪಠ್ಯಪುಸ್ತಕಗಳಲ್ಲಿಯ ಪಾಠಗಳನ್ನು ಹೇಳಿ ಬರೆಯಿಸಬೇಕು. ಮಕ್ಕಳು ವಿರಾಮಾದಿ ಚಿಹ್ನಗಳಿಡೆಗೆ ಸೂಕ್ತ ಗಮನವಿತ್ತು ಶುದ್ಧವಾಗಿ ಬರೆಯಲು (ಹೇಳಿ ಬರೆಯಿಸಿದ್ದನ್ನು) ಸಮರ್ಥರಾಗಬೇಕು. ಲೇಖನಪುಸ್ತಕವನ್ನು (ಕಾಪಿ ಬುಕ್) ಉಪಯೋಗಿಸಬಾರದು. ವಿದ್ಯಾರ್ಥಿಗಳು ಏನೇ ಬರೆಯಲಿ, ಸ್ಪುಟವಾಗಿಯೂ, ಎದ್ದು ಕಾಣುವಂತೆಯೂ ಬರೆಯುವ ಚಟವನ್ನು ಮಕ್ಕಳಲ್ಲಿ ಬೇರೂರಿಸಬೇಕು.

ಸ್ಥಳೀಯ ವಿದ್ಯಮಾನಗಳನ್ನು ಕುರಿತು ಶುದ್ಧವಾಗಿ ಮಾತನಾಡಲು ಬರಬೇಕು. ಹಮಾಮಾನ, ಬೆಳೆ, ಹಳ್ಳಿಯ ಆಯಗಾರರ ಉದ್ಯೋಗಗಳು, ಆಟಗಳು ಮತ್ತು ವಿನೋದಾವಳಿಗಳನ್ನು ಕುರಿತು ನಾಲ್ಕೈದು ಚಿಕ್ಕ ವಾಕ್ಯಗಳನ್ನು ಶುದ್ಧವಾಗಿ ಬರೆಯಲು ಬರಬೇಕು. ಸಂಭಾಷಣೆಗಳನ್ನೂ, ಚಿಕ್ಕ ಪಾತ್ರಗಳನ್ನೂ ಬರೆಯಲು ಮಕ್ಕಳನ್ನು ಪ್ರೋತ್ಸಾಹಿಸಬೇಕು.

೫. ವ್ಯಾಕರಣ :

ವಿದ್ಯುಕ್ತವಾಗಿ (ನಿಯಮನಿಷ್ಠವಾಗಿ) ವ್ಯಾಕರಣವನ್ನು (ಈ ವರ್ಗದಲ್ಲಿ) ಕಲಿಸುವ ಅವಶ್ಯಕತೆಯಿಲ್ಲ. ಪಾಠಗಳನ್ನು ಓದುತ್ತಿರುವ ಮುಂದೆ ಪ್ರಸಂಗ ಬಂದ ಹಾಗೆ ಸಂದರ್ಭಕ್ಕನುಗುಣವಾಗಿ ಬೇರೆ ಬೇರೆ ಪ್ರಕಾರದ ಶಬ್ದಗಳ ವ್ಯಾಕರಣಾವಲೋಕನವನ್ನು ಮಾಡಿಸಬಹುದು. ಪಠ್ಯದಲ್ಲಿಯ ಪಾಠಗಳ ಕೊನೆಗೆ ಕೊಟ್ಟ ಅಭ್ಯಸನಗಳೂ ಔಪಚಾರಿಕವಾಗಿ ವ್ಯಾಕರಣಾಂಶಗಳನ್ನೊಳಗೊಂಡಿರಬಹುದು.

೨. ಕನ್ನಡವು ಪ್ರಾದೇಶಿಕ ಭಾಷೆಯೆಂದು
(ಕನ್ನಡೇತರ ವಿದ್ಯಾರ್ಥಿಗಳಿಗಾಗಿ ಕನ್ನಡ)

ಕನ್ನಡೇತರ ಶಾಲೆಗಳಲ್ಲಿ ಕನ್ನಡವನ್ನು ಪ್ರಾದೇಶಿಕ ಭಾಷೆಯೆಂದು ಕಲಿಸಲು ೩ ಹಾಗು ೪ನೆಯ ವರ್ಗಗಳಲ್ಲಿ ವಾರಕ್ಕೆ ೩ ಅವಧಿಗಳನ್ನು ಮೀಸಲಾಗಿರಿಸಲಾಗಿದೆ. ಸಂಸ್ಥೆಯ ಮುಖ್ಯಾಧ್ಯಾಪಕರಿಗೆ ಅಗತ್ಯವೆನಿಸಿದರೆ ಮಾತೃ ಭಾಷೆಗಾಗಿ ಇರುವ ಅವಧಿಗಳನ್ನು ಕಡಿಮೆಮಾಡಿ ಈ ಅವಧಿಗಳನ್ನು ೩ರಿಂದ ೫ಕ್ಕೆ ಹೆಚ್ಚಿಸಬಹುದು.

೩ ಹಾಗು ೪ನೆಯ ವರ್ಗಗಳಲ್ಲಿ ವಿದ್ಯಾಖಾತೆಯ ೧ ಹಾಗು ೨ನೆಯ ವರ್ಗಗಳ ವಾಚನವನ್ನು ಉಪಯೋಗಿಸ ಬಹುದು. ಈ ಎರಡು ವರುಷಗಳ ಕಾಲಾವಧಿಯಲ್ಲಿ ಮಕ್ಕಳು (ಕನ್ನಡೇತರ) ಕನ್ನಡವನ್ನು ಓದಲು, ಬರೆಯಲು, ಸಮರ್ಥರಾಗಬೇಕಲ್ಲದೆ ಎರಡನೆಯವರ ಜೊತೆಗೆ ನಿರರ್ಗಳವಾಗಿ ಸಂಭಾಷಿಸಲು ಬರಬೇಕು. ಕನ್ನಡ ಮಕ್ಕಳ ಜೊತೆಗೆ

ಬರೆಯುವಂತೆ, ಅವರೊಡನೆ ಕನ್ನಡದಲ್ಲಿ ಮಾತನಾಡುವಂತೆ ಅವರಿಗೆ ಅವಕಾಶಗಳನ್ನು ಒದಗಿಸಿಕೊಡಬೇಕು. ಈ ಉದ್ದಿಶ್ಯಸಾಧನೆಗಾಗಿ ರಾಷ್ಟ್ರೀಯ ದಿನಾಚರಣೆಗಳನ್ನು, ಸಾಮಾಜಿಕ ಹಬ್ಬಹುಣ್ಣಿಮೆಗಳನ್ನು ಉಪಯೋಗಿಸಿಕೊಳ್ಳಬಹುದು.

೩ನೆಯ ವರ್ಗ

ವಾಕ್ಯಪದ್ಧತಿಯಿಂದ ಶಬ್ದಗಳನ್ನು ಅಕ್ಷರಗಳನ್ನು ಕಲಿಸಬೇಕಲ್ಲದೆ ಅವುಗಳ ರೂಢಿಮಾಡಿಸಬೇಕು. ಚಿತ್ರ ಸಾಗು ಚಮಕಿಸುವ ರಟ್ಟಿನಂಥ ಇನ್ನುಳಿದ ಕಲಿಸುವ ಸಾಧನಗಳನ್ನು ಸಾಕಷ್ಟು ಉಪಯೋಗಿಸಬೇಕು. ಶಬ್ದಗಳ ಪುನರುಚ್ಚಾರಕ್ಕಾಗಿ ಸಾಕಷ್ಟು ಅವಕಾಶವನ್ನು ಕಲ್ಪಿಸಿಕೊಡಬೇಕು. ಕ್ರಮಬದ್ಧ ರೀತಿಯಲ್ಲಿ (ಹಂತದಿಂದ ಹಂತಕ್ಕೆ) ಕಾಗುಣಿತಾಕ್ಷರ ಹಾಗು ಒತ್ತಕ್ಷರಗಳ ದೃಢೀಕರಣ ಮಾಡಬೇಕು. ಪಾಠಗಳಲ್ಲಿ ಬರುವ ಕಠಿನ ಶಬ್ದಗಳನ್ನು ಸುಲಭವಾಗಿ ಉಚ್ಚರಿಸಲು ಬರುವಂತೆ ಅಂಥ ಶಬ್ದಗಳನ್ನೂ, ವಾಕ್ಯಗಳನ್ನೂ ವಿದ್ಯಾರ್ಥಿಗಳಿಗೆ ತಮ್ಮ ಮಾತೃಭಾಷೆಯ ಕ್ಷಕ್ಷರಗಳಲ್ಲಿಯೇ ಬರೆದುಕೊಳ್ಳುವಂತೆ ಅಭ್ಯಸನಗಳನ್ನು ಕೊಡಬೇಕು, ಅಭ್ಯಸನಗಳಲ್ಲಿಯ ಕನ್ನಡ ಶಬ್ದಗಳ ಅರ್ಥವನ್ನು ಮಕ್ಕಳು ತಮ್ಮ ಮಾತೃಭಾಷೆಯಲ್ಲಿ ಬರೆದುಕೊಳ್ಳಲು ಹೇಳಬೇಕು.

ಒದರಿ ಓದುವದು ಸ್ಪಷ್ಟ ಉಚ್ಚಾರಗಳ ಬಗೆಗೆ ಜೋರು ಕೊಡಬೇಕು. ದೃಢೀಕರಣ ಮಾಡಬೇಕು. ಠಿಪ್ಪಣಪುಸ್ತಕಗಳಲ್ಲಿಯ ಪಾಠಗಳನ್ನು ಬರೆಯುವ ಅಭ್ಯಸನ ಕೊಡಬೇಕು. ಶುದ್ಧ ಬರಿಹ ಹೇಳಬೇಕು. ಕಾಪಿ ಪುಸ್ತಕಗಳ ಉಪಯೋಗ ಮಾಡಬಾರದು. ಯಾವುದನ್ನೇ ಬರೆಯಲಿ ಶಬ್ದಗಳ ನಡುವೆ, ಸಾಲುಗಳ ನಡುವೆ ಸಾಕಷ್ಟು ಸ್ಥಳಬಿಟ್ಟು ಸ್ವಚ್ಛವಾಗಿ ಎದ್ದುಕಾಣುವಂತೆ ಬರೆಯುವ ರೂಢಿಯನ್ನು ಬೇರೂರಿಸಬೇಕು.

ಸಾಮಾನ್ಯ ಗಣಿತ

ಸೂಚನೆ :—ಶಕ್ಯವಿದ್ದ ಮಟ್ಟಿಗೆ ಶಿಕ್ಷಣ ಶಾಖೆಯವರು ತಯಾರಿಸಿದ ಪಾರಿಭಾಷಿಕ ಶಬ್ದಗಳ ಪಟ್ಟಿಯೊಳಗಿನ ಸಂಜ್ಞೆ (ಶಬ್ದ)ಗಳನ್ನೇ ಏಕರೂಪತೆಯ ದೃಷ್ಟಿಯಿಂದ ಉಪಯೋಗಿಸಬೇಕು.]

ವಿಷಯಗಳು	ಪ್ರಾಯೋಗಿಕ ಚಟುವಟಿಕೆಗಳು ಹಾಗು ಸೂಚನೆಗಳು
೧) ಸಂಖ್ಯಾಪಠಣ ಮತ್ತು ಅಂಕಕರಣ. ೧ ರಿಂದ ೧೦,೦೦೦ ವರೆಗಿನ ಸಂಖ್ಯೆಗಳು.	ಸಂಖ್ಯಾಪಟಗಳು ಮತ್ತು ಚಮಕಿಸುವ ಕಾರ್ಡುಗಳನ್ನು ಉಪಯೋಗಿಸುವದು. ಮನೆಗಳ ಸಂಖ್ಯೆ, ಶಾಲೆಯ ಮಕ್ಕಳ ಸಂಖ್ಯೆ, ಎರಡು ಸ್ಥಳಗಳ ನಡುವಿರುವ ಅಂತರ, ಜನಸಂಖ್ಯೆ, ಧನಗಳ ಸಂಖ್ಯೆ ಮುಂತಾದವುಗಳಿಗೆ ಅನ್ವಯಿಸಿ ಸಂಖ್ಯೆಗಳ ಪರಿಚಯ ಮಾಡಿಕೊಡುವದು.
೨) ಮೂರು ಸಂಖ್ಯೆಗಳವರೆಗಿನ ಬೇರೀಜು–ವಜಾಬಾಕಿ.	ಬೇರಿಜನಿಂದ ವಜಾಬಾಕಿಯ ತಾಳೆನೋಡುವದು. ಬೇರೆ ಬೇರೆ ಮೂಲೋದ್ಯೋಗದ ಚಟುವಟಿಕೆಗಳಲ್ಲಿ ಇಡೀ ವರ್ಗವು ಮಾಡಿದ ಕೆಲಸವನ್ನೂ ಲೆಕ್ಕಮಾಡುವದು.
೩) ಗುಣಾಕಾರ. ಅ) ೨೦ × ೧೦ರ ವರೆಗೆ ಗುಣಾಕಾರದ ಕೋಷ್ಟಕ.	ಕೋಷ್ಟಕಗಳನ್ನು ರಚಿಸುವದು. ಮತ್ತು ಬಾಯಿಪಾಠ ಮಾಡುವದು.
ಬ) ಎರಡು ಅಂಕೆಗಳ ಸಂಖ್ಯೆಯಿಂದ ಎರಡು ಅಂಕೆಗಳ ಸಂಖ್ಯೆಗೆ ಗುಣಿಸುವದು.	ಗುಣಾಕಾರವು ಸಮನಾದ ಸಂಖ್ಯೆಗಳ ಬೇರೀಜಿನ ಸಂಕ್ಷಿಪ್ತ ಸ್ವರೂಪವು. ಮುಂದರಿಸಿದ ಬೇರಿಜು.

೪) ಭಾಗಾಕಾರ:

ಅ) ÷ ಚಿಹ್ನದ ಉಪಯೋಗ.

ಮಣಿ, ಗೋಲಿ ಇತ್ಯಾದಿಗಳನ್ನು ಗುಂಪು ಮಾಡುವದರಿಂದ ಭಾಗಾಕಾರದ ಜ್ಞಾನವನ್ನುಂಟುಮಾಡುವದು.

ಬ) ಎರಡು ಅಂಕೆಯ ಸಂಖ್ಯೆಯಿಂದ ಒಂದು ಅಂಕೆಯ ಸಂಖ್ಯೆಯಿಂದ ೨೦ ರ ವರೆಗೆ ಭಾಗಿಸುವದು.

೧) ಶೇಷ ಉಳಿಯುವಂತೆ.

೨) ಸಶೇಷವಾಗಿ.

ವಿದ್ಯಾರ್ಥಿಗಳನ್ನು "೫ರಂತೆ ೭ರಂತೆ ಗುಂಪು ಮಾಡಿರಿ" ಎಂದು ಹೇಳಿ ಭಾಗಾಕಾರದ ಪರಿಚಯ ಮಾಡಿಸುವದು.

೫) ಹಣ:

ಬಳಕೆಯಲ್ಲಿರುವ ಹೊಸನಾಣ್ಯಗಳಲ್ಲಿ ದೊಡ್ಡ ನಾಣ್ಯಗಳನ್ನು ಚಿಕ್ಕ ನಾಣ್ಯಗಳನ್ನಾಗಿಯೂ ಚಿಕ್ಕ ನಾಣ್ಯಗಳನ್ನು ದೊಡ್ಡ ನಾಣ್ಯಗಳನ್ನಾಗಿಯೂ ಪರಿವರ್ತಿಸುವದು.

ರೂಪಾಯಿ ಮತ್ತು ನಯೆ ಪೈಸೆಗಳನ್ನು ದಶಾಂಶ ರೂಪದಲ್ಲಿ ಬರೆಯುವದು, ಓದುವದು.

ಒಂದು ರೂಪಾಯಿಯಲ್ಲಿ ೫, ೧೦, ೨೫, ೫೦ ನಯೆ ಪೈಸೆಗಳಲ್ಲಿ ಚಿಲ್ಲರೆ ಪಡೆಯುವದು. ಬೇರೆ ಬೇರೆ ಮೊತ್ತದ ಪೋಸ್ಟಕಾರ್ಡ, ಪಾಕೀಟು ಹಾಗು ತಿಕೀಟುಗಳನ್ನು ಕೊಳ್ಳುವದು. ಒಂದು ಚೀಲದಲ್ಲಿರುವ ನಾಣ್ಯಗಳನ್ನು ಕೂಡಿಸಿ ನಿರ್ದಿಷ್ಟವಾದ ಮೊತ್ತಗಳನ್ನು ಮಾಡುವದು. ಮೂಲೋದ್ಯೋಗದ ಚಟುವಟಿಕೆಗಳು. ಪುಸ್ತಕಗಳ ಬೆಲೆಗಳನ್ನು ಓದುವದು.

೬) ಉದ್ದಳತೆ:

ಇಂಚು, ಫೂಟು, ಯಾರ್ಡು, ಸೆಂಟಿಮೀಟರ ಮತ್ತು ಮೀಟರ ಇವುಗಳ ಪರಿಚಯ.

ವರ್ಗದ ಕೋಣೆಗಳು, ಆಟದ ಬೈಲು ಮೊದಲಾದವುಗಳ ಉದ್ದಳತೆಯನ್ನು ಅಳೆಯುವದು. ದೇಹದ ಅಳತೆಗಳು. ಸಿಂಪಿಗಳ ಟೇಪು. ಅರಿವೆಯನ್ನು ಟೇಪಿನಿಂದ ಅಳೆಯುವದು.

೭) ತೂಕ:

ಮಣ, ಪಂಥೇರು, ಸೇರು ಮತ್ತು ತೊಲೆ ಅಥವಾ ಸ್ಥಾನಿಕವಾಗಿ ಬಳಕೆಯಲ್ಲಿರುವ ಮೊದಲಿನ ತೂಕಗಳಿಗೆ ಸಂಬಂಧಿಸಿದ ಪ್ರಮಾಣಿತ ತೂಕಗಳು.

ತೊಲೆ ಹಾಗು ಸ್ಥಾನಿಕ ತೂಕಗಳನ್ನು ರಚಿಸುವದು. ಮೂಲೋದ್ಯೋಗದ ಚಟುವಟಿಕೆಗಳಿಗೆ ಅನ್ವಯಿಸಿ ತೂಕ ಮಾಡುವದು. ಅಡೋಗ್ಯದ ಚಟುವಟಿಕೆಗಳು. ಪ್ರತಿಯೊಬ್ಬ ಮಗುವಿನ ತೂಕ.

೮) ಗಾತ್ರದ ಅಳತೆ:

ಚಟಾಕು, ಅರಪಾವು, ಪಾವು, ಸೇರು, ಪಲ್ಲ ಮತ್ತು ಖಂಡಗ ಇವುಗಳ ಪರಿಚಯ.

ಇಲ್ಲವೆ ಸ್ಥಾನಿಕವಾಗಿ ಪ್ರಚಾರದಲ್ಲಿದ್ದ ಪ್ರಮಾಣಿತ ಅಳತೆಗಳು ಅವುಗಳ ನಡುವಿನ ಸಂಬಂಧ.

ರಟ್ಟು, ಬಿದಿರು, ಇಲ್ಲವೆ ಸಿಲಿಂಡರಾಕಾರದ ತಗಡುಗಳನ್ನು ಉಪಯೋಗಿಸಿ ಒಂದೆರಡು ಸ್ಥಾನಿಕ ಅಳತೆಗಳನ್ನು ರಚಿಸುವದು. (ಅಳತೆಯ ಪಾತ್ರೆಗಳನ್ನೂ)

ಸಂತೆ, ಕಣ ಮುಂತಾದ ಧಾನ್ಯಗಳನ್ನು ಅಳೆಯುವ ಸ್ಥಳಗಳಿಗೆ ಸಂದರ್ಶನವೀಯುವದು. ಮನೆಯಲ್ಲಿಯ ಪಾತ್ರೆಗಳ ಗಾತ್ರಗಳನ್ನು ಕಂಡುಹಿಡಿಯುವದು.

೯) ಕಾಲ:

ಅ) ನಿಮಿಷ, ತಾಸು, ದಿವಸ, ವಾರ, ತಿಂಗಳು, ಹಾಗು ವರುಷ.

ಕೆಳಗೆ ಕೊಟ್ಟಿರುವ ಸಂಬಂಧಗಳು

೧ ದಿನ = ೨೪ ತಾಸು.

ಭಾರತದ ಹಾಗು ಇಂಗ್ಲೀಷ ಪಂಚಾಂಗ (ಕ್ಯಾಲೆಂಡರ) ದಲ್ಲಿಯ ತಿಂಗಳುಗಳನ್ನು, ಪಕ್ಷದಲ್ಲಿಯ ತಿಥಿಗಳನ್ನು ಕಂಠಪಾಠ ಮಾಡುವದು. ಇಂಗ್ಲೀಷ ಪಂಚಾಂಗದಲ್ಲಿಯ ದಿನಗಳನ್ನು ಎಣಿಸುವದು ಕೂಡಿಸುವದು.

೧ ವಾರ = ೭ ದಿವಸ.
೧ ವರುಷ = ೧೨ ತಿಂಗಳು = ೩೬೫ ದಿವಸಗಳು.

ಬ) ದಿನ, ಪಕ್ಷ, ಮಾಸ, ವರುಷ.
೧ ಪಕ್ಷ = ೧೫ ದಿನ.
೧ ಮಾಸ = ೨ ಪಕ್ಷ.
೧ ವರ್ಷ = ೧೨ ಮಾಸ.

ಒಂದು ದತ್ತ ತಾರೀಖಿಗೆ ಸರಿಯಾದ ವಾರ ತಿಥಿಗಳನ್ನು ಕಂಡುಹಿಡಿಯುವದು. ಮತ್ತು ಏಲೋಮು ಕಾರ್ಯವನ್ನು ಮಾಡಲು ಬರಬೀಕು. ವರ್ಗದ ಫಲಕದ ಮೇಲೆ ಪಂಚಾಂಗ ಬರೆಯುವದು.

ಕ) ಪಕ್ಷದ ತಿಥಿಗಳು:
ಹುಣ್ಣಿಮೆ, ಅಮಾವಾಸ್ಯೆ.

ಡ) ಗಡಿಯಾರವನ್ನು ನೋಡುವದು.

ಇ) ಇಂಗ್ಲೀಷ ಮತ್ತು ಭಾರತೀಯ ಪಂಚಾಂಗಗಳನ್ನು ಓದುವುದು.

೧೦) ಅಪೂರ್ಣಾಂಕಗಳು:
½, ¼ ಮತ್ತು ¾. ಇವುಗಳ ಪರಿಚಯ.

ಸಾಮಾನ್ಯ ಸನ್ನಿವೇಶಗಳಲ್ಲಿ ಒದಗುವ ಉದಾಹರಣೆಗಳನ್ನು ತೆಗೆದುಕೊಂಡು ಕಲ್ಪನೆ ಮಾಡಿಕೊಡುವದು. ರಟ್ಟಿನ ಕೆಲಸ:–ಒಂದು ಆಯಾಕೃತಿ ಮತ್ತು ಒಂದು ವರ್ತುಳಾಕೃತಿ ಇವುಗಳನ್ನು ಸಮಭಾಗದಲ್ಲಿ ಕತ್ತರಿಸಿ, ಆಯಾಕೃತಿ ಇಲ್ಲವೆ ವರ್ತುಲಾಕಾರದ ಕಾಗದದ ತುಂಡನ್ನು ಸಮಭಾಗದಲ್ಲಿ ಮಡಿಚುತ್ತ; ಅಥವಾ ಧಾನ್ಯದ ರಾಶಿಯನ್ನು ಸಮಭಾಗದಲ್ಲಿ ಗುಂಪುಮಾಡಿ, ಅಥವಾ ನೀರನ್ನು ಸಮಭಾಗಗಳಾಗಿ ಮಾಡಿ, ಇಲ್ಲವೆ ಒಂದು ರೂಪಾಯಿಯನ್ನು ೧೦ ಭಾಗಗಳಾಗಿ ಮಾಡಿ ಮತ್ತು ೧೦ ನಯೆ ಪೈಸೆಯನ್ನು ಐದು ಭಾಗ ಮಾಡಿ, ಕಲ್ಪನೆ ಮಾಡಿಕೊಡುವದು. (ಅಪೂರ್ಣಾಂಕಗಳ)

೧೧) ಮಿಶ್ರ (ಜಾತಿಯ) ಬೇರೀಜು ವಜಾಬಾಕೆಗಳು.
೧) ನಾಣ್ಯ- ದಶಾಂಶ ನಾಣ್ಯಗಳ ಬೇರೀಜು ವಜಾಬಾಕೆ. ಉತ್ತರಕ್ಕಾಗಿ ಮಾತ್ರ ದಶಾಂಶ ರೂಪಗಳನ್ನು ಪಯೋಗಿಸುವದು.

ಮಕ್ಕಳು ಕೊಂಡ ಪುಸ್ತಕಗಳ ಒಟ್ಟುಬೆಲೆಯ ಲೆಕ್ಕ ಮಾಡುವದು. ಮತ್ತು ಅಂಗಡಿಯ ಆಟವಾಡುವದು. ಮೂಲೋದ್ಯೋಗ, ಪ್ರವಾಸಗಳು ಮತ್ತು ಅಲ್ಲೀತೆರಿಗಾಗಿ ಸಂಬಂಧಿಸಿದ ಹಣದ ವ್ಯವಹಾರದ ಮುಖಾಂತರ ಪರಿಚಯ.

೨) ಉದ್ದಳತೆಗಳು:
ಅಂಗುಲ (ಇಂಚು), ಅಡಿ (ಫೂಟು), ಗಜ (ಯಾರ್ಡು) ಮತ್ತು ಸೆಂಟಿಮೀಟರ ಹಾಗು ಮೀಟರುಗಳಿಗೆ ಸಂಬಂಧಿಸಿದ ಉಡಾಹರಣೆಗಳು. (ಬೇರೀಜು, ವಜಾಬಾಕೆ)

ವರ್ಗದ ಕೋಣೆಯ ಉದ್ದಳತೆ, ಆಟದ ಬೈಲಿನ ಬಾಜೂಗಳು–ಮುಂತಾದವುಗಳಿಗೆ ಸಂಬಂಧಿಸಿದ ಉದಾಹರಣೆಗಳು.

೧೨) ಭೂಮಿತಿ :
(ರೇಖಾಗಣಿತ) ಸರಳ ವಃತ್ತು ವಕ್ರರೇಖೆಗಳು.

ಒಂದು ನೇರವಾದ ಮತ್ತು ಒಂದು ವಕ್ರವಾದ ದಾರಿಯಿಂದ ಸಂಬಂಧಿತವಾದ ಎರಡು ಬಿಂದುಗಳಿರುವ ದೂರಗಳನ್ನು ಅಳೆಯುವದು. ಸರಳರೇಖೆ ಮತ್ತು ವಕ್ರರೇಖೆಗಳನ್ನು ಗುರುತಿಸುವದು. ಉದಾ :–ಬಿಗಿಯಾಗಿ ಜಗ್ಗಿ ಹಿಡಿದ ಹಗ್ಗ. ಮತ್ತು ಜಗ್ಗದೆ ಸಡಿಲಾಗಿರುವ ಹಗ್ಗ; ಹಾವಿನ ಚಲನೆ ಇತ್ಯಾದಿ.

ಸಾಮಾನ್ಯ ವಿಜ್ಞಾನ

ವರ್ಗ ೩

ಸೂಚನೆ :– ೧) ಶಕ್ಯವಿದ್ದಮಟ್ಟಿಗೆ ಫಿಜಿಕ್ಸ್ :
ಇವುಗಳ ವಿಷಯದಲ್ಲಿ ಏಕರೂಪತೆಯ ದೃಷ್ಟಿಯಿಂದ ಶಿಕ್ಷಣ ಖಾತೆಯವರು ತಯಾರಿಸಿದ ಶಾಸ್ತ್ರೀಯ ಪಾರಿಭಾಷಿಕ ಶಬ್ದಗಳ ಪಟ್ಟಿಯೊಳಗಿನ ಶಬ್ದಗಳನ್ನೇ ಉಪಯೋಗಿಸಬೇಕು.

೨) ಸಸ್ಯಜೀವನಕ್ಕೆ ಸಂಬಂಧಿಸಿದ ವಿಷಯಗಳನ್ನು ಕೈತೋಟದ ಚಟುವಟಿಕೆಗಳಿಗೆ ಸಮನ್ವಯಗೊಳಿಸಿಯೇ ಬೋಧಿಸಬೇಕು.

೩) ಪ್ರಸಂಗ ಉದ್ಭವಿಸಿದಾಗ ವಿಜ್ಞಾನಿಗಳ ಜೀವನ ಚರಿತ್ರೆಯನ್ನು ವಿದ್ಯಾರ್ಥಿಗಳಿಗೆ ಪರಿಚಯ ಮಾಡಿಕೊಡಬೇಕು.

ಅಭ್ಯಾಸದ ವಿಷಯಗಳು	ಚಟುವಟಿಕೆಗಳು
೧) ಚೆನ್ನಾಗಿ ಜೀವಿಸುವ ಬಗೆ :	೧) ಶಾಲೆಯ ಒಳಗೆ ಮತ್ತು ಸುತ್ತುಮುತ್ತು ಸ್ವಚ್ಛಗೊಳಿಸುವದು.
ಶುದ್ಧ ಹವೆಯನ್ನು ಉಸಿರಾಡಿಸುವ ಬಗೆ. ಸಾಬೂನು ಉಪಯೋಗಿಸಿ ಬಟ್ಟೆಗಳನ್ನು ಒಗೆಯುವ ಕ್ರಮ. ನೀರು :– ನೀರಿನ ಉಗಮ, ಅಶುದ್ಧ ನೀರು. ನೀರನ್ನು ಶುದ್ಧಗೊಳಿಸುವ ಸುಲಭೋಪಾಯಗಳು.	೨) ನೀರಿನ ಪಾತ್ರೆಗಳನ್ನು ತೊಳೆಯುವದು. ನೀರಿನ ಸಂಗ್ರಹ ಸ್ಥಳಗಳಿಗೆ ಸಂದರ್ಶನವೀಯುವದು. ನೀರನ್ನು ಶುದ್ಧಗೊಳಿಸುವ ಕ್ರಮದ ಬಗ್ಗೆ ಚರ್ಚಿಸುವದು. ಶಕ್ಯವಿದ್ದ ಸ್ಥಳಗಳಲ್ಲಿ ಆರೋಗ್ಯಖಾತೆಯವರು ನೀರನ್ನು ಶುದ್ಧಗೊಳಿಸುವ ವಿಧಾನವನ್ನು ನಿರೀಕ್ಷಿಸುವದು.
ದೇಹಭಂಗಿ :–ಸರಿಯಾದ ದೇಹಭಂಗಿಯ ಚಟವನ್ನು ರೂಢಿಗೊಳಿಸುವ ಕ್ರಮವನ್ನು ಮುಂದುವರಿಸುವದು.	ಬೇರೆ ಬೇರೆ ಚಟುವಟಿಕೆಗಳಲ್ಲಿ ಸರಿಯಾದ ದೇಹಭಂಗಿಯನ್ನು (ನಿಲುವನ್ನು) ಹೊಂದುವಂತೆ ಲಕ್ಷ್ಯವಹಿಸುವದು.
೨) ಆಹಾರ : ಇಲ್ಲಿಯವರೆಗೆ ನಿರೀಕ್ಷಿಸಿದ ಸಸ್ಯಗಳ ಸಂಗತಿಗಳನ್ನು ಕೂಲಂಕಷವಾಗಿ ಅಭ್ಯಸಿಸುವದು. ಬೇರು, ಕಾಂಡ, ಟೊಂಗೆ, ಎಲೆ, ಹೂವು, ಹಣ್ಣು, ಬೀಜ ಇವುಗಳ ಪರಿಚಯ.	೧) ಸ್ಥಳೀಯ ಸಸ್ಯಗಳನ್ನು ಸಂಗ್ರಹಿಸಿ ಅವುಗಳ ಭಾಗಗಳ ಹೆಸರನ್ನು ತಿಳಿದುಕೊಳ್ಳುವದು. ೨) ಅನುಕೂಲತೆಗಳಿರುವಲ್ಲಿ ನಾಲ್ಕು ಪ್ರಕಾರದ ಕಾಯಿಪಲ್ಲೆಗಳನ್ನು ಬೆಳೆಯಿಸುವದು. ಅಥವಾ ಸ್ಥಾನಿಕ ಕಾಯಿ-ಪಲ್ಲೆಗಳ ತೋಟಗಳನ್ನು ನಿರೀಕ್ಷಿಸುವದು.

ಆಯಾ ಸ್ಥಳಗಳಲ್ಲಿ ದೊರಕುವ ಯಾವುದಾದರೂ ನಾಲ್ಕು ಕಾಯಿ-ಪಲ್ಲೆಗಳ ಪರಿಚಯ.

೩) ಶಾಲೆಯ ತೋಟದಲ್ಲಿ ಸಸ್ಯಗಳಿಗಾಗಿ ನೆಲವನ್ನು ಅಗಿದು ಮಡಿಮಾಡುವದು, ಹಡ್ಡುವದು, ಗೊಬ್ಬರ ಹಾಕುವದು, ಬಿತ್ತುವದು, ನೀರು ಹಾಕುವದು, ಕಳೆ ತೆಗೆಯುವದು ಹಾಗು (ಸುಗ್ಗಿ ಮಾಡುವದು) ರಾಶಿ ಮಾಡುವದು.

ನಮ್ಮ ಸುತ್ತಣ ಪ್ರಪಂಚ :
ಜಲಚರ ಪ್ರಾಣಿಗಳು :–
ಕಪ್ಪೆ, ಮೀನು, ಬಾತಗೋಳಿ, ಅವುಗಳ ಬಾಹ್ಯ ಲಕ್ಷಣ, ಆಹಾರ ಮತ್ತು ಚಲನೆ.
ಕೀಟಕಗಳು :–
ಮಿಡತೆ, ಪಾತರಗಿತ್ತಿ, ಎರೆಹುಳು, ಗೆದ್ದಲು, ಇರುವೆ, ಅವುಗಳ ಬಾಹ್ಯಲಕ್ಷಣ ಹಾಗು ಚಲನೆ.
ಆಕಾಶ :–
ಮೋಡ, ಮಳೆ, ಇಂದ್ರಧನಸ್ಸು, ಮಳೆಗಾಲ ಹಾಗು ಇತರ ಋತುಗಳು. ಗುಡುಗು ಮಿಂಚುಗಳು.
ಮಣ್ಣು :–ಬೇರೆ ಬೇರೆ ಪ್ರಕಾರಗಳು. ಬೇರೆ ಬೇರೆ ಸಸ್ಯಗಳು ಬೇರೆ ಬೇರೆ ಮಣ್ಣಿನಲ್ಲಿ ಬೆಳೆಯುತ್ತವೆ. ಸ್ಥಾನಿಕ ಮಣ್ಣುಗಳ ಅಭ್ಯಾಸ ಮಾತ್ರ.

೧) ಜಲಚರ ಪ್ರಾಣಿಗಳನ್ನು ನೋಡಲು ಕೆರೆ, ನದಿಗಳ ಸಂದರ್ಶನ.
೨) ಗೆದ್ದಲು, ಎರೆಹುಳಗಳು ಹತ್ತಿದ ಸ್ಥಳಗಳನ್ನು ನಿರೀಕ್ಷಿಸುವದು.
೩) ಪಾತರಗಿತ್ತಿ, ಮಿಡತೆಗಳನ್ನು ಸಂಗ್ರಹಿಸುವದು.
೪) ಆಕಾಶದಲ್ಲಿ ಮೋಡ, ಕಾಮನಬಿಲ್ಲುಗಳನ್ನು ನಿರೀಕ್ಷಿಸುವದು.
೫) ಬೇರೆ ಬೇರೆ ಪ್ರಕಾರದ ಮಣ್ಣುಗಳನ್ನು ಮಾದರಿಗಾಗಿ ಸಂಗ್ರಹಿಸುವದು.
೬) ವರ್ಷದ ಪ್ರತಿ ತಿಂಗಳಲ್ಲಿ ಮಳೆಬಿದ್ದ ದಿನಗಳ ಸಂಖ್ಯೆಯನ್ನು ಬರೆದಿಡುವದು.

ಸಮಾಜ ಅಭ್ಯಾಸ

(**ಸೂಚನೆ:** ಕೆಳಗಿನ ವಿಷಯ ಕುರಿತು ಕೇವಲ ಸಾಮಾನ್ಯವಾದ ಮಾಹಿತಿಯನ್ನು ಮಾಡಿಕೊಟ್ಟರೆ ಸಾಕು. (ವಿವರವಾದ ಅಭ್ಯಾಸ ಅಗತ್ಯವಿಲ್ಲ)

೧) ಮೈಸೂರ ರಾಜ್ಯಕ್ಕೂ, ಭಾರತ ದೇಶಕ್ಕೂ ಸಂಬಂಧಿಸಿ ಜಿಲ್ಲೆಯ ನೆಲೆಯ ಸಾಮಾನ್ಯ ತಿಳುವಳಿಕೆ.

೨) ಜಿಲ್ಲೆಯ ಅಭ್ಯಾಸ: (ಅ) ಸನ್ನಿವೇಶ (ಬ) ಪ್ರಾಕೃತಿಕ ಸ್ವರೂಪ (ಕ) ಹವೆ (ಡ) ಸಹಜ ಸಸ್ಯ (ಇ) ಮುಖ್ಯ ಬೆಳೆಗಳು (ಫ) ಮುಖ್ಯ ಕೈಗಾರಿಕೆಗಳು (ಗ) ಸಂಚಾರ ಸಾಧನಗಳು (ಹ) ಮುಖ್ಯ ಪಟ್ಟಣಗಳು.

೩) (ಅ) ಸ್ಥಾನಿಕ ಸ್ವರಾಜ್ಯ: ಗ್ರಾಮಪಂಚಾಯತ, ನಗರಸಭೆ ಹಾಗು ತಾಲೂಕ ಬೋರ್ಡ.
(ಬ) ಹಳ್ಳಿಯ, ತಾಲೂಕದ, ಜಿಲ್ಲೆಯ ಆಡಳಿತೆ.
(ಕ) ಸಹಕಾರ ಜೀವನವನ್ನು ವೃದ್ಧಿಗೊಳಿಸುವ ಸಂಘಗಳು, ಸಂಸ್ಥೆಗಳು.

ಚಟುವಟಿಕೆಗಳು

೧) ಓಣಿಯ, ಹಳ್ಳಿಯ, ತಾಲೂಕು ಹಾಗು ಜಿಲ್ಲೆಯ ಭೂಪಟಗಳನ್ನು ಓದುವದು.

೨) ಗ್ರಾಮಪಂಚಾಯತ ಆಫೀಸು, ನಗರಸಭೆ, ಜಿಲ್ಲಾ ಕಚೇರಿ, ಪೋಸ್ಟ ಆಫೀಸು, ರೇಲ್ವೆ ಸ್ಟೇಶನ ಮುಂತಾದವುಗಳಿಗೆ ಭೆಟ್ಟಿ ಕೊಡುವದು.

೩) ಬೆಳೆ, ಸಸಿ, ಮಣ್ಣು, ಕಲ್ಲು, ಚಿತ್ರ ಮುಂತಾದವುಗಳ ಮಾದರಿಗಳನ್ನು ಶಾಲೆಯಲ್ಲಿಯ ವಸ್ತು ಸಂ ಹಾಲಯಕ್ಕಾಗಿ ಸಂಗ್ರಹಿಸುವದು.

ಮೂಲೋದ್ಯೋಗದ ಚಟುವಟಿಕೆಗಳು

೩ ಹಾಗು ೪ನೆಯ ವರ್ಗಗಳಲ್ಲಿ ಕೆಳಗಿನವುಗಳಲ್ಲಿ ಯಾವುದಾದರೂ ಎರಡನ್ನು ಕೈಕೊಳ್ಳುವರು.

ಅ) ಕಾಗದದ ಕೆಲಸ ಮತ್ತು ರಟ್ಟಿನ ಕೆಲಸ.

ಬ) ಕೈ ತೋಟ.

ಕ) ನೂಲು-ನೆಯ್ಗೆ.

ನೀರು ಭೂಮಿಗಳು ಲಭ್ಯವಿರುವಲ್ಲಿ ಕೈ ತೋಟವು ಅವಶ್ಯವಾಗಿರುವದು.

೩ನೆಯ ವರ್ಗ

ಸೂಚನೆ: ಈ ವರ್ಗದಲ್ಲಿ ಮಕ್ಕಳು ತೆಳುವಾದ ರಟ್ಟಿನಿಂದ ಆಕೃತಿಗಳನ್ನು ತಯಾರಿಸುವ ಸಲಹೆ ಕೊಡಬಹುದ

ಪ್ರಾಯೋಗಿಕ	ತಾತ್ವಿಕ
೧) ಅಭಿನಂದನಾಪರ ಕಾರ್ಡು, ಆಮಂತ್ರಣ ಪತ್ರಿಕೆ, ಆಟಿಕೆ, ಒತ್ತುಕರಡು, ಕ್ಯಾಲೆಂಡರ (ಕಾಲನಿರ್ದೇಶಕ ಪಟ್ಟಿ), ಆಕಾಶಬುಟ್ಟಿ ಮುಂತಾದ ಸರಳ ವಸ್ತುಗಳನ್ನು ತಯಾರಿಸುವದು.	೧) ಆಕೃತಿ ನಿರ್ಮಾಣಕ್ಕೆ ಒಂದು ನಿರ್ದಿಷ್ಟ ತರ ಕಾಗದ ಅಥವಾ ತೆಳುವಾದ ರಟ್ಟನ್ನು ಉ ಯೋಗಿಸಬೇಕಾದುದರ ಅವಶ್ಯಕತೆ. ಉಪಯೋ ಸಿದ ತೆಳುವಾದ ರಟ್ಟಿನಲ್ಲಿರಬೇಕಾದ ಗುಣ.
೨) ಸರಳವಾದ ಪೆಟ್ಟಿಗೆ, ಲೇಖಣಿ ಗುಂಡು (Pen-cases) ದೂರದರ್ಶಕ, ಫೋಟೋ ಚೌಕಟ್ಟು, ಪುಸ್ತಕದ ಹೊದಿಕೆ, ಬಾಟಲಿ, ಬೀಸಣಿಕೆ ಮೊದಲಾದವುಗಳ ಹೊದಿಕೆ ತಯಾರಿಸುವದು.	ತಯಾರಿಸುವ ಸ್ಥಳಗಳು. ಪೇಟೆಯ ಧಾರಣೆಯಿಂದ ರಟ್ಟಿನ ಸರಾಸ ಬೆಲೆಯನ್ನು ನಿರ್ಧರಿಸುವದು.
೩) ಪುಸ್ತಕ ಮತ್ತು ಚಿತ್ರ ಸಂಪುಟ (Album) ಇವುಗಳಿಗೆ ರಟ್ಟು ಕಟ್ಟುವದು.	ವಸ್ತುವಿಗೆ ತಗಲುವ ರಟ್ಟಿನ ಪ್ರಮಾಣವನ್ನು ಕಂಡು ಹಿಡಿಯುವದು.
೪) ಬಗೆ ಬಗೆಯ ಆಕಾರದ ಗಾಳಿಪಟ ಮತ್ತು ಲಕೋಟಿಗಳನ್ನು ತಯಾರಿಸುವದು.	ತಯಾರಿಸಿದ ವಸ್ತುಗಳ ಬೆಲೆಯನ್ನು ನಿರ್ಧರಿಸುವದು.
೫) ಕೈ-ಪಂಚರಂಗಿ ಕೆಲಸ ಮತ್ತು ಸಿಂಚನ ಕಾರ್ಯ.	ಪುಸ್ತಕಕ್ಕೆ ರಟ್ಟು ಕಟ್ಟುವದರ ಬಗೆಗಳು— ತೆರೆದ ಮತ್ತು ಮುಚ್ಚಿದ.
೬) ಎಕ್ಸರಸಾಯಿಜ್ ಪುಸ್ತಕಗಳನ್ನು ತಯಾರಿಸುವದು.	ಪುಸ್ತಕಗಳಿಗೆ ಒಳ್ಳೆಯ ಮತ್ತು ನಯವಾ ಹೊದಿಕೆ ಇರುವದರ ಅವಶ್ಯಕತೆ.
೭) ಹಿಟ್ಟಿನಿಂದ ಸರಳವಾದ ಸರಿಯನ್ನು ತಯಾರಿಸುವದು.	

ಬ) ಕೈತೋಟ

ಸೂಚನೆ: ಈ ತರಗತಿಯ (೩ನೆಯ) ಕೈತೋಟದ ಕೆಲಸಗಳಿಗೆ ಕನಿಷ್ಠ ಪಕ್ಷಕ್ಕೆ ಒಂದು ಗುಂಟೆಯಾದರೂ ಜಮೀನು ಇರುವದೆಂದು ಭಾವಿಸಲಾಗಿದೆ. ಈ ವರ್ಗದ ವಿದ್ಯಾರ್ಥಿಗಳು ೧ನೆಯ ವರ್ಗದ ಮಕ್ಕಳಿಗಾಗಿ ಸಹಮಡಿಗಳನ್ನು ಮಾಡುವರು. ಸ್ಥಾನಿಕವಾದ ಎರಡು ಹಲ್ಲೆಗಳನ್ನು ಅವರು ಬೆಳೆಯುವರು. ಅದರಲ್ಲಿ ಒಂದು ಮಳೆಗಾಲದ ತೊಪ್ಪಲು ಹಲ್ಲೆಯನ್ನು ಬೆಳೆಯಬೇಕು. ನೀರಿನ ಅನುಕೂಲತೆಯಿದ್ದಲ್ಲಿ ಚಳಿಗಾಲದಲ್ಲಿಯೂ ಕೂಡ ಹಲ್ಲೆಗಳನ್ನು ಬೆಳೆಯಿಸಬಹುದು. ಸಾಮೂಹಿಕ ಮಡಿಗಳಲ್ಲಿ ಮೆಣಸಿನಕಾಯಿ, ಸೇಂಗಾ ಇಲ್ಲವೆ ಹತ್ತಿ ಬೆಳೆಯಬಹುದು. ವಿದ್ಯಾರ್ಥಿಗಳು ಪೈಯಕ್ತಿಕವಾದ ನಿರೀಕ್ಷಣಾ ಪುಸ್ತಕಗಳನ್ನಿಡಬೇಕಲ್ಲದೆ, ಮಾಡಿದ ಕೆಲಸಗಳ ವಿವರಗಳನ್ನು ಬರೆದಿಡಬೇಕು.

ಪ್ರಾಯೋಗಿಕ ಕ್ರಿಯೆಗಳು	ತಾತ್ವಿಕ
೧) ೫′ × ೪′ ವಿಸ್ತಾರವಾದ ವೈಯಕ್ತಿಕ ಮಡಿಗಳನ್ನು ೧೦′ × ೧೦′ ವಿಸ್ತಾರವಾದ ಎರಡು ಸಾಮೂಹಿಕ ಮಡಿಗಳನ್ನು ಸಿದ್ಧಗೊಳಿಸಬೇಕು. ಎರಡು ಸಾಮೂಹಿಕ ಮಡಿಗಳಲ್ಲಿ ಒಂದು ಸಸಿಗಳನ್ನು ಸಿದ್ಧಗೊಳಿಸುವದಕ್ಕಾಗಿ ಇರಬೇಕು. ಅ) ಅಗಿಯುವದು. ಬ) ಮಡಿ ಮಾಡುವದು. ಕ) ಮಡಿಗಳನ್ನು ಸಿದ್ಧಗೊಳಿಸುವದು. ಡ) ಗೊಬ್ಬರ ಹಾಕುವದು.	ನೀರಿನ ಪೂರೈಕೆ, ಸೂರ್ಯ ಪ್ರಕಾಶ, ನೆರಳು, ಗಾಳಿ ಇವುಗಳನ್ನು ನೋಡಿಕೊಂಡು ಸಸಿ ಬೆಳೆಸುವದಕ್ಕಾಗಿ ಸಿದ್ಧಗೊಳಿಸುವ ಮಡಿಯ ಸ್ಥಳವನ್ನು ಆಯ್ಕೆ ಮಾಡುವದು. ಸಸಿ ಬೆಳೆಯಿಸಲು ಮಡಿಯ ಅವಶ್ಯಕತೆ. ಸಾದಾಮಡಿ, ಸಸಿ ಬೆಳೆಯಿಸುವದಕ್ಕಾಗಿ ಮಾಡಿದ ಮಡಿ ಇವುಗಳಲ್ಲಿಯ ಅಂತರ. ಮಡಿಗಳ ಆಕಾರ, ಅಳತೆ.
೨) ಮಡಿಗಳಲ್ಲಿಯೂ ನಾಟಮಡಿಗಳಲ್ಲಿಯೂ ಬೀಜ ಬಿತ್ತುವದು.	ತೋಟದ ಮಣ್ಣಿನ ಸಾಮಾನ್ಯ ಪರಿಚಯ ಹಾಗೂ ಇದರಲ್ಲಿ ಇರುವ ಉಸುಕು, ಜೇಡು, ಮತ್ತು ಸೇಂದ್ರಿಯ ಕಲ್ಪನೆ. ಮಣ್ಣನ್ನು ಉತ್ತಮಗೊಳಿಸುವಿಕೆ. ಆಜೂ–ಬಾಜೂ ಇರುವ ವಿಧ-ವಿಧವಾದ ಮಣ್ಣುಗಳು. ಅವು ಯಾವ ಬೆಳೆಗಳಿಗೆ ತಕ್ಕವುಗಳು ಎಂಬುದನ್ನು ತಿಳಿದುಕೊಳ್ಳುವದು.
೩) ಸಸಿಗಳನ್ನು ನಾಟಿ ಹಚ್ಚುವದು. ಅ) ಚಾಕಚಕ್ಯತೆಯಿಂದ ಸಸಿಗಳನ್ನು ಹಿಡಿದುಕೊಳ್ಳುವದು. ಬ) ಎರಡು ಸಸಿಗಳ ನಡುವೆ ಅಂತರ ಬಿಡುವದು.	ಬೇರಿನ ಭಾಗಗಳು. ತಾಯಿ ಬೇರು. ಮೂಲ ರೋಮಗಳು. ಬೇರಿನ ಟೋಪಿ ಮೆಣಸಿನಗಿಡ, ಸೇಂಗಾ ಹಾಗೂ ಹತ್ತಿಯ ಗಿಡಗಳಂಥ ಸಸಿಗಳ ಭಾಗಗಳು ಮತ್ತು ನಿತ್ಯ ಜೀವನದಲ್ಲಿ ಅವುಗಳ ಉಪಯೋಗ.
೪) ಕಳೆ ತೆಗೆಯುವದು ಮತ್ತು ಮಡಿಗಳನ್ನು ಪೊಳ್ಳು ಮಾಡುವದು.	ಸ್ಥಾನಿಕ ಕಳೆಗಳು, ಪೊಳ್ಳುಮಾಡುವದರ ಅವಶ್ಯಕತೆ.

೫) ನೀರು ಹಾಕುವದು. ನಾಟಿ ಮಡಿಗಳಲ್ಲಿಯ ಸಸಿಗಳಿಗೆ ನೀರು ಹಾಕುವ ಕ್ರಮ. ಝರಝರುಗಳ ಉಪಯೋಗ.

೬) ಕ್ರಿಮಿ ಕೀಟಕಗಳನ್ನು ನಿಯಂತ್ರಿಸುವದು. ಎತರಗಿತ್ತಿಯ ಜೀವನಕ್ರಮದ ಅಭ್ಯಾಸ.

೭) ಸುಗ್ಗಿ ಮಾಡುವದು ಹಾಗು ಬಂದ ಬೆಳೆಯ ಮಾರಾಟ. ತೂಕದ ಕೋಷ್ಟಕ. ಬೇರೆ ಬೇರೆ ಮಡಿಗಳಲ್ಲಿ ಬೆಳೆದ ಬೆಳೆಯನ್ನು ತುಲನಾತ್ಮಕ ದೃಷ್ಟಿಯಿಂದ ತಿಳಿದು ಕೊಳ್ಳುವದು.

೮) ಮುಂದಿನ ಬೆಳೆಗಾಗಿ ಬೀಜಗಳನ್ನು ಆರಿಸುವದು ಮತ್ತು ಸರಿಯಾಗಿ ಜತನ ಮಾಡಿ ಇಡುವದು. ಬೀಜಗಳನ್ನು ಜತನ ಮಾಡಿ ಇಡುವ ಸ್ಥಾನಿಕ ಪದ್ಧತಿಗಳು.

ನೂಲು–ನೆಯ್ಗೆ

ಚಟುವಟಿಕೆಗಳು

೧) ಹತ್ತಿ ಬಿಡಿಸುವದು.
೨) ಹತ್ತಿ ಸ್ವಚ್ಛ ಮಾಡುವದು.
೩) ಕುಡಹಲಿಗೆಗಳಿಂದ, ಕೈರಾಟೆಯಿಂದ ಹತ್ತಿ ಅರಿಯುವದು.
೪) ಹಿಂಜುನ ರಾಟೆಯಿಂದ (ಧುನಾಯಿ ಮೋಡಿಯಾದಿಂದ) ಹಿಂಜುವದು ಮತ್ತು ಪಂಜಿ ಹಾಕುವದು.
೫) ತಕಲಿಯ ಮೇಲೆ ನೂಲುವದು.
೬) ಲಪೇಟಾಕ್ಕೆ ಸುತ್ತುವದು.
೭) ಹುರಿಗಿಂಟ ತಯಾರಿಸುವದು.

ಮುಟ್ಟಬೇಕಾದ ಮಟ್ಟ :

೧) ವರ್ಷದಲ್ಲಿ ಆಗಬೇಕಾದ ಉತ್ಪಾದನೆ.

ನೂರಕ್ಕೆ ೬೦ರಷ್ಟು (೬೦/--) ಶಕ್ತಿ ಸಮಾನತೆಯುಳ್ಳ ೧೦–೧೨ ನಂಬರಿನ ೬ ಲಡಿ ನೂಲು (ಪ್ರತಿ ಮಗುವಿನ

೨) ವರ್ಷದ ಕೊನೆಗೆ ತಕಲಿಯ ಮೇಲೆ ನೂಲುವ ವೇಗ:
ಒಂದು ತಾಸಿಗೆ ೪೫ ಸುತ್ತುಗಳು.

ತಾತ್ವಿಕ

೧) ಹತ್ತಿಯ ಗಿಡದ ಹೂವುಗಳ ಮತ್ತು ಎಲೆಗಳ ಬಣ್ಣ, ಅಳತೆ ಮತ್ತು ಆಕಾರಗಳು.
೨) ಹತ್ತಿ ಬಿಡಿಸುವ ಸರಿಯಾದ ಪದ್ಧತಿ.
೩) ಹತ್ತಿ ಬಿಡಿಸುವ ಕಾಲ.
೪) ಸ್ಥಳೀಯ ಪ್ರದೇಶದಲ್ಲಿ ಬೆಳೆಯುವ ಹತ್ತಿಯ ಪ್ರಕಾರಗಳು.
೫) ಬೇರೆ ಬೇರೆ ಪ್ರಕಾರದ ಹತ್ತಿಯ ಒಂದು ತೊಲೆ ತೂಕದಲ್ಲಿ ಇದ್ದ ಕಾಳುಗಳ ಸಂಖ್ಯೆ.
೬) ದಿನಾಲು ಉಪಯೋಗಿಸುವದರಿಂದ ಸವೆದ ಹಲಿಗೆಯ ಮಧ್ಯಭಾಗವು ಪೊಳ್ಳಾದಾಗ ಹತ್ತಿಯ ಜರೆಯುವ ಕಾರಣ.
೭) ಅರೆಯುವ ಹಲಿಗೆಯ ಆಕಾರ ಮತ್ತು ಅರೆಯುವ ಕುಡದ ಉದ್ದಳತೆ.
೮) ಉಪಯೋಗಿಸಿದ ಒಂದು ಸೌಂಡು ಹತ್ತಿಯಲ್ಲಿ ಹೊರಡುವ ಅರಳೆಯ ಪ್ರಮಾಣ.

೯) ಸರಿಯಾಗಿ ಹಿಂಜಿದ ಅರಳೆಯನ್ನು ಗುರುತಿಸುವದು.
೧೦) ಹಿಂಜುವದರಿಂದ ನೂಲಿನ ಯೋಗ್ಯತೆ ಮತ್ತು ವೇಗದ ಮೇಲೆ ಆಗುವ ಪರಿಣಾಮ.
೧೧) ಹಂಜೀ ಹಾಕುವ ಸರಿಯಾದ ಪದ್ಧತಿ.
೧೨) ಉತ್ತಮ ಹಂಜಿಯ ಲಕ್ಷಣ.
೧೩) ಹಂಜೀ ಹಾಕುವ ಉಪಕರಣಗಳ ಅಳತೆಗಳು ಮತ್ತು ಅವುಗಳ ವೈಶಿಷ್ಟ್ಯಗಳು.
೧೪) ಬೇರೆ ಬೇರೆ ಪ್ರಕಾರದ ತಕಲಿಗಳು ಮತ್ತು ಅವುಗಳ ಉಪಯೋಗ.
೧೫) ತಕಲಿಯ ಮೇಲೆ ನೂಲನ್ನು ಅತಿ ಸಡಿಲಾಗಿ ಸುತ್ತುವದರಿಂದ ನೂಲುವ ವೇಗದ ಮೇಲಾಗುವ ಪರಿಣಾಮ.
೧೬) ಹಂಜಿಗಳಲ್ಲಿಯ ಕಸರುಗಳ ಮೂಲಕ ನೂಲುವ ವೇಗದ ಮೇಲಾಗುವ ಪರಿಣಾಮ.
೧೭) ತಕಲಿಯ ಮೇಲೆ ನೂಲುವಾಗ ವೇಗವನ್ನು ಹೆಚ್ಚಿಸಲು ಬೂದಿಯ ಅವಶ್ಯಕತೆ.
೧೮) ತಕಲಿಯ ಮೇಲೆ ನೂಲುವ ವೇಗವನ್ನು ಹೆಚ್ಚಿಸಲು ಸೂಚನೆಗಳು.
೧೯) ತಕಲಿಯ ಮೇಲೆ ನೂತ ಮಾದರಿ ನೂಲಿಗೆ ಹೋಲಿಸಿ ವಿದ್ಯಾರ್ಥಿಯು ತಾನು ನೂತ ನೂಲಿನ ನಂಬರನ್ನು ಕಂಡುಹಿಡಿಯುವದು.
೨೦) ಉತ್ತಮ ನೂಲಿನ ಲಕ್ಷಣಗಳು. (ಶಕ್ತಿ ಮತ್ತು ಸಮಾನತೆ)
೨೧) ಗಿಂಟಮಾಡುವ ಹಾಗು ಹುರಿಹಾಕುವ ಯೋಗ್ಯ ಪದ್ಧತಿಗಳು.
೨೨) ಲಡಿಮಾಡುವ ಪೂರ್ವದಲ್ಲಿ ಲಡಿಯನ್ನು ನೆನೆಯಿಸುವ ಮತ್ತು ಒಣಗಿಸುವ ಯೋಗ್ಯ ಪದ್ಧತಿ.
೨೩) ನೂಲನ್ನು ಜತನ ಮಾಡುವದು.
೨೪) ದಿನದ ಹಾಗು ವಾರದ ನೂಲಿನ ಲೆಕ್ಕವನ್ನಿಡುವದು.

ಕಲೆಯ ಚಟುವಟಿಕೆಗಳು

ಕೆಳಗಿನ ವರ್ಗಗಳಲ್ಲಿ ಕಲೆಯನ್ನು ಕಲಿಸುವದರ ಗೊತ್ತುಗುರಿಗಳನ್ನು ೧ ಹಾಗು ೨ನೆಯ ವರ್ಗಗಳ ಅಭ್ಯಾಸ ಪತ್ರಿಕೆಯಲ್ಲಿ ವಿವರಿಸಲಾಗಿದೆ. ಕಲಾ ಶಿಕ್ಷಕರಿಗಾಗಿ ಸಾಮಾನ್ಯ ಸೂಚನೆಗಳನ್ನಾದರೂ ವಿಸ್ತೃತವಾಗಿ ಅಲ್ಲಿ ಕೊಡಲಾಗಿದೆ. ೩ನೆಯ ಹಾಗು ೪ನೆಯ ವರ್ಗಗಳಲ್ಲಿ ಕೂಡ ಅವೆ ತತ್ವಗಳನ್ನು ಅನುಸರಿಸಬೇಕು. ಕಲೆ ಮತ್ತು ಮೂಲೋದ್ಯೋಗಗಳಿಗಾಗಿ ಮೀಸಲಿರಿಸಿದ ಅವಧಿಗಳಲ್ಲಿ ೩ ಇಲ್ಲವೆ ೪ ಅವಧಿಗಳನ್ನು ಈ ವಿಷಯಕ್ಕೆ (ಕಲೆಗೆ) ಕೊಡಬಹುದು. ಶಾಲೆಯು ಪದೇ ಪದೇ ಕಲೆಯ ಹಾಗು ಮೂಲೋದ್ಯೋಗದ ಚಿಕ್ಕ ಪ್ರದರ್ಶನಗಳ ಏರ್ಪಾಡು ಮಾಡಬೇಕು.

೧ ಹಾಗು ೨ನೆಯ ತರಗತಿಗಳಲ್ಲಿ ಸಾಧಿಸಿದ ಮಟ್ಟಕ್ಕಿಂತಲೂ ಹೆಚ್ಚಿನ ಬೆಳವಣಿಗೆಯಾಗಬೇಕೆಂಬ ದೃಷ್ಟಿಯನ್ನು ಕಣ್ಮುಂದಿಟ್ಟುಕೊಂಡು ಕೆಳಗೆ ನಿರ್ದೇಶಿಸಿದಂಥ ಕೆಲವು ವಿಷಯಗಳನ್ನು, ಚಟುವಟಿಕೆಗಳನ್ನು ಕೈಕೊಳ್ಳಬಹುದು.

೧) ಚಿತ್ರಗಳ ಮೂಲಕ ನಿದರ್ಶಿಸುವದು:—
   ಅ) ಕಥೆಗಳು, ಕಟ್ಟುಕಥೆಗಳು, ಘಟನೆಗಳು ಮಕ್ಕಳಿಗೆ ಪರಿಚಿತವಾದ ವಸ್ತುಗಳು.
   ಬ) ಭಾಷೆಯನ್ನು ಕಲಿಸುವದಕ್ಕಾಗಿ ಎತ್ತಿಕೊಂಡ ವಿಷಯಗಳು.
      ಸಮಾಜಾಭ್ಯಾಸ ಹಾಗೂ ಮೂಲೋದ್ಯೋಗದ ಕೆಲಸ.
   ಕ) ಅಭ್ಯಾಸ ಪತ್ರಿಕೆಗೆ ಸಂಬಂಧಿಸಿದ ಚಟುವಟಿಕೆಗಳಿಂದ ಆರಿಸಿದ ವಿಷಯಗಳು.
೨) ಕರೇಹಲಿಗೆಯ ಮೇಲೆ ತೀವ್ರ ಗತಿಯಿಂದ ಚಿತ್ರ ಬರೆಯುವದು.
೩) ಪ್ಲಾಸ್ಟಿಕ್ ಇಲ್ಲವೆ ಮಣ್ಣಿನ ಕೆಲಸ.
೪) ಶಾಲೆಯ ದಿನಾಚರಣೆಗಳಲ್ಲಿ- ಶಾಲೆ ಹಾಗು ವರ್ಗಗಳನ್ನು ಶೃಂಗರಿಸಲು ಉಪಯೋಗಿಸಿದ ವಸ್ತುಗಳು ಹಾಗು ಸಾಧನಗಳು.

ರಂಗವಲ್ಲಿ (ಚಿತ್ರ ಬರೆಯುವದು) ಹಾಕುವದು. ಕಾಗದ ನಿಶಾನೆಗಳು, ಎಲೆ ಹಾಗು ಹೂಗಳಿಂ ಅಲಂಕರಿಸುವದು.

ಬ) ಸಂಗೀತ, ನೃತ್ಯ, ಮತ್ತು ಅಭಿನಯ.

ಪ್ರಾಥಮಿಕ ಶಾಲೆಗಳಲ್ಲಿ ಸಂಗೀತವನ್ನು ಕಲಿಸುವ ಉದ್ದೇಶ ಹಾಗು ಶಿಕ್ಷಕರಿಗಾಗಿ ಕೆಲವು ಸಾಮಾನ್ ಸೂಚನೆಗಳನ್ನು ಕುರಿತು ೧ ಹಾಗು ೨ ನೆಯ ವರ್ಗಗಳ ಅಭ್ಯಾಸ ಪತ್ರಿಕೆಯಲ್ಲಿ ವಿಸ್ತೃತವಾಗಿ ವಿವರಿಸಲಾಗಿದೆ ಅವೇ ತತ್ವಗಳನ್ನೇ ೩ ಹಾಗು ೪ ನೆಯ ವರ್ಗಗಳಲ್ಲಿಯೂ ಅನುಸರಿಸಬೇಕು. ಇಲ್ಲಿ (೩ ನೆಯ ಹಾಗು ೪ ನೆಯ ವರ್ಗಗಳಲ್ಲಿ) ಸ್ಪಷ್ಟ ಉಚ್ಚಾರ, ಧ್ವನಿ ಹೊರಡಿಸುವದು, ರಾಗ, ತಾಳ, ಇವುಗಳಿಗೆ ಹೆಚ್ಚಿನ ಜೋರು ಕೊಡಬೇಕ ಶ್ರುತಿಗಾಗಿ ಮಾತ್ರ ಪಿಯಾನವೆಟ್ಟಿಗೆಯನ್ನು ಉಪಯೋಗಿಸಬಹುದು.

ಸಂಗೀತದ ಜೊತೆಗೆ ೧ ಹಾಗು ೨ ನೆಯ ವರ್ಗಗಳಲ್ಲಿಯಂತೆ ಸಾಮೂಹಿಕ ನೃತ್ಯ, ಕೋಲತ ಮತ್ತು ಕುಮ್ಮಿಗಳನ್ನು ಕಲಿಸಬಹುದು. ಸ್ಥಾನಿಕವಾಗಿ ಪ್ರಸಿದ್ಧವಾದ ದಂತಕಥೆಗಳು, ಪೌರಾಣಿಕ ಕಥೆಗಳ ಕೂಡ ೩ ಹಾಗು ೪ ನೆಯ ವರ್ಗಗಳ ಪಠ್ಯ ಪುಸ್ತಕದಲ್ಲಿ ಬಂದ ಕಥೆಗಳನ್ನು ಮಕ್ಕಳು ಅಭಿನಯಿಸುವಂತೆ ಪ್ರೋತ್ಸಾಹಿಸಬೇಕು

ಹಾಡಲಿಕ್ಕೂ ಕುಣಿಯಲಿಕ್ಕೂ ಉಚಿತವಾದ ಕವಿತೆಗಳ, ಹಾಡುಗಳ ಮತ್ತು ವಚನಗಳ ಒಂದ ಸೂಚನಾತ್ಮಕ ಪಟ್ಟಿಯನ್ನು ಕೊನೆಗೆ ಕೊಡಲಾಗಿದೆ.

೩ ನೆಯ ವರ್ಗ

ವಿದ್ಯಾರ್ಥಿಗಳ ವಯಸ್ಸಿನ ಪರಿಮಿತಿಗೆ ಅನುಗುಣವಾಗಿ ಯೋಗ್ಯವಾದ ೮ ಹಾಡುಗಳು ಇಲ್ಲವೆ ಕವಿತೆಗಳ ಒಬ್ಬೊಬ್ಬರೇ ಸ್ವತಂತ್ರವಾಗಿ ಹಾಡಲು, ವೃಂದಗಾನ ಮಾಡಲು ಕಲಿಸಬೇಕು.

ವಾತಾವರಣವು ಸಂಗೀತಕ್ಕೆ ಹೇಗೆ ಸಹಾಯಕಾರಿಯಾಗುತ್ತದೆಂಬುದನ್ನು ತಿಳಿದುಕೊಳ್ಳುವದು— ದಿನಪರಿಚಯದ ಘಂಟೆ ನಾದ, ವಾಹನ ಮತ್ತು ಆಯುಧ ಶಬ್ದ, ಕಾಲು ಸಪ್ಪಳ, ಪ್ರಾಣಿಗಳ ಹೆಜ್ಜೆ ಶಬ್ದ, ಪಕ್ಷಿಗ ಕೂಗು, ಗಾಳಿಯ ಶಬ್ದ, ಮಳೆನೀರು ಬೀಳುವ ಶಬ್ದ ಇತ್ಯಾದಿ ಪ್ರಕೃತಿ ಧ್ವನಿಯ ಪರಿಚಯ. ಮಕ್ಕಳು ಈ ತರಹ ಶಬ್ದಗಳ ಪರಿಚಯ ಮಾಡಿಕೊಳ್ಳಲು ಅನುಕೂಲವಾಗುವಂತೆ ಉಪಾಧ್ಯಾಯರು ವಿದ್ಯಾರ್ಥಿಗಳನ್ನು ಬಯಲು ಪ್ರದೇ ಉಪವನಗಳು, ತೋಟಗಳು, ಮೃಗಾಲಯಗಳು ಮೊದಲಾದವುಗಳಿಗೆ ಕರೆದುಕೊಂಡು ಹೋಗಬೇಕು. ಇದ ಮಕ್ಕಳ ಮನಸ್ಸನ್ನು ಉಲ್ಲಾಸಗೊಳಿಸುವದಲ್ಲದೆ ಬೋಧಕವೂ ಆಗಿದೆ.

ಎಲ್ಲ ವಿವಿಧ ಪ್ರಾಥಮಿಕ ಶಾಲೆಗಳಲ್ಲಿ ಅನುಸರಿಸಬೇಕಾದ ಸಾಮಾನ್ಯ ಚಟುವಟಿಕೆಗಳು —

೩ ಹಾಗೂ ೪ನೆಯ ವರ್ಗಗಳು

೧) ಪ್ರತಿಯೊಂದು ಶಾಲೆಯಲ್ಲಿಯೂ ಒಂದು ಕೈತೋಟ ಹಾಗು ವಸ್ತುಸಂಗ್ರಹಾಲಯವು ಇರಬೇಕು.

೨) ಸಾಮಾನ್ಯ ಶಾಲೆಗಳಲ್ಲಿ ಮಾರ್ಗ ಕಲೆ ಹಾಗು ಸಂಗೀತ ಇವುಗಳ ಬಗ್ಗೆ ಪ್ರತ್ಯೇಕವಾದ ಕಲಿಸುವ ಅವ ಗಳು ಇರಬೇಕು. ಜೀವನ ಶಿಕ್ಷಣ ಶಾಲೆಗಳಲ್ಲಿ ಇವುಗಳನ್ನು ಸೂಕ್ತ ಸಂದರ್ಭ ಒದಗಿದಾ ಕಲಿಸಲಾಗುತ್ತದೆ.

೩) ಜೀವನ ಶಿಕ್ಷಣ ಶಾಲೆಗಳಲ್ಲಿ ನಡೆಯುತ್ತಿರುವಂತೆ ನಿತ್ಯ ನೈಮಿತ್ತಿಕವಾದ ಸಾಂಘಿಕ ಚಟುವಟಿಕೆಗಳ ಎಲ್ಲ ಶಾಲೆಗಳಲ್ಲಿಯೂ ಜರುಗಬೇಕು. ಎಲ್ಲಾ ಶಾಲೆಗಳಲ್ಲಿ ಜರುಗಬೇಕಾದ ನಿತ್ಯನೈಮಿತ್ತಿಕ ಸಾಂಘಿ ಚಟುವಟಿಕೆಗಳನ್ನು ಕೆಳಗೆ ಕಾಣಿಸಲಾಗಿದೆ.

ಅ) ಪ್ರಾರ್ಥನೆ.
ಬ) ಸಭಾಯಿ.
ಕ) ಪಂಚಾಂಗ ಪಠಣ.
ಡ) ಸುದ್ದಿ ವಾಚನ ಹಾಗು ಪ್ರಚಲಿತ ಸಮಾಚಾರಗಳ ಬಗೆಗೆ ಚರ್ಚೆ.
ಗ) ಶಾಲೆಯಲ್ಲಿ ಬೇಕಾಗುವ ಕುಡಿಯುವ ನೀರಿನ ವ್ಯವಸ್ಥೆ.
ಇ) ಆರೋಗ್ಯ ಪರೀಕ್ಷೆ.
ಯ) ಶಾಲಾ ಸಂಘಟನೆಯಲ್ಲಿ ಮಕ್ಕಳು ಭಾಗವಹಿಸುವಿಕೆ.
ಣ) ಸಾಂಸ್ಕೃತಿಕ ಚಟುವಟಿಕೆಗಳು

೪) ಪ್ರಾಥಮಿಕ ಶಾಲೆಗಳಲ್ಲಿ ನಡೆಯುವ ಕಾರ್ಯಕ್ರಮಗಳನ್ನು ಕೇವಲ ಮಕ್ಕಳ ಬೌದ್ಧಿಕ ಹಾಗೂ ದೈಹಿಕ ಬೆಳವಣಿಗೆಯ ಬಗ್ಗೆ ಮಾತ್ರವಾಗಿರದೆ ಅವರಲ್ಲಿ ಬೆಳೆದು ಬರಬೇಕಾದ ಸರಿಯಾದ ನಡವಳಿಕೆ, ಶೀಲ, ನಮ್ರತೆ, ಶುದ್ಧ ಜೀವನ ಇವುಗಳ ಬೆಳವಣಿಗೆಗೆ ಅನುವಾಗುವಂತೆ ನಡೆಯಿಸಿಕೊಂಡು ಬರಲಾಗುತ್ತದೆ. ಮಕ್ಕಳು ಎಲ್ಲರೂ ಸಹಕರಿಸಿ ಕೆಲಸಮಾಡುವ, ಕೆಲಸಗಾರರ ಉತ್ತಮ ಸಮಾಜದ ಯೋಗ್ಯವ್ಯಕ್ತಿಗಳಾಗುವಂತೆ ಮತ್ತು ಸಾಮಾಜಿಕ ಜೊಣೆಗಾರಿಕೆಯನ್ನು ಅರಿಯುವಂತೆ ಶಾಲೆಯಲ್ಲಿ ಸೂಕ್ತವಾದ ಚಟುವಟಿಕೆಗಳನ್ನು ಏರ್ಪಡಿಸಲಾಗುತ್ತದೆ.

೫) ಸಾಮಾನ್ಯ ಶಾಲೆಗಳಲ್ಲಿ ಮೂಲೋದ್ಯೋಗದ ಚಟುವಟಿಕೆಗಳ ಬದಲಾಗಿ ಕೆಳಗೆ ಕಾಣಿಸಿದ ಚಟುವಟಿಕೆಗಳನ್ನು ಅಧಿಕ ಮಹತ್ವದೊಂದಿಗೆ ನಡೆಸಲಾಗುತ್ತಿದೆ. ಈ ಚಟುವಟಿಕೆಗಳು ಜೀವನ ಶಿಕ್ಷಣ ಶಾಲೆಗಳಲ್ಲಿ ಸಹಜವಾಗಿ ಸಾಗುತ್ತಿರುವವು.

ಕೆಳಗಿನವುಗಳಿಗೆ ಸಂಬಂಧಿಸಿ ಬರುವ ಚಟುವಟಿಕೆಗಳು:—

ಸಾಂಸ್ಕೃತಿಕ ಕಾರ್ಯಕ್ರಮಗಳು ಮತ್ತು ದಿನಾಚರಣೆಗಳು.
ಆರೋಗ್ಯ ಕಾರ್ಯಕ್ರಮಗಳು,
ಕಲೆ, ಸಂಗೀತ ಮುಂತಾದವುಗಳು.
ಅಭಿನಯಗಳು.
ಪ್ರವಾಸಗಳು.
ನಾಗರಿಕ ಹಾಗು ಶಾಲೆಯ ಶಾಸನ ಸಭೆ.
ತೋಟದ ಕೆಲಸ.
ಪ್ರದರ್ಶನ ಹಾಗು ವಸ್ತುಸಂಗ್ರಹಾಲಯಗಳ ಸಂಘಟನೆ.
ಗೊಬ್ಬರ ಗುಂಡಿಗಳನ್ನು ತಯಾರಿಸುವದು.
ಶಾಲೆಯ ದಿನಾಚರಣೆಗಳ ಸಂಘಟನೆ.
ಶಾಲೆಯ ಅಲಂಕಾರ, ಶಾಲಾಕಟ್ಟಡ ದುರಸ್ತಿ ಮತ್ತು ಸುಣ್ಣ ಬಳೆಯುವದು.
ಹನಭೋಜನ ಹಾಗು ಅಲ್ಲೀಕೇರಿ.
ಸ್ಕೌಟ ಮತ್ತು ಗರ್ಲಗಾಯಿಡ್ಸ ಚಟುವಟಿಕೆಗಳು.
ಹಳ್ಳಿಯ ಜಾತ್ರೆ ಹಾಗು ಇನ್ನುಳಿದ ಹಬ್ಬಹುಣ್ಣಿವೆಗಳಲ್ಲಿ ಸ್ವಯಂಸ್ಫೂರ್ತಿಯ ಸೇವಾ ಕಾರ್ಯ.
ಧ್ವಜವಂದನೆ.
ಅಮೃತ ಶಿಲೆಯ ಕಾಗದ ತಯಾರಿಸುವದು.
ಸಿಂಚನ ಕಾರ್ಯ.
ಕಾಗದದ ಪರಪರಿ ನಿಶಾನೆಗಳನ್ನು ತಯಾರಿಸುವದು.

ಗಿಡ ನೆಡುವದು.
ಶಾಲೆ ಹಾಗು ಗ್ರಾಮಗಳಿಗಾಗಿ ಮನರಂಜನೆಯ ಚಟುವಟಿಕೆಗಳು.
ಆಟದ ಹಾಗು ಸಾಂಸ್ಕೃತಿಕ ಚಟುವಟಿಕೆಗಳಲ್ಲಿ ಶಾಲೆ—ಶಾಲೆಗಳಲ್ಲಿ ಸ್ಪರ್ಧೆಗಳು.
ವರ್ಗದ ವಸ್ತುಸಂಗ್ರಹಾಲಯವನ್ನು ತಯಾರಿಸಲು ನಿಧಿಸಂಗ್ರಹ.
ಸಮಾಜ ಸೇವಾ ಚಟುವಟಿಕೆಗಳು.
ಶಾಲೆಯಲ್ಲಿ ಸ್ವಾಯತ್ತ ಸರಕಾರದ ಚಟುವಟಿಕೆಗಳು.
ವಕ್ತೃತ್ವ ಹಾಗು ಚರ್ಚೆಗಳು.
ಐತಿಹಾಸಿಕ ಮಹತ್ವದ ಸ್ಥಳಗಳಿಗೆ, ಸ್ಥಾನಿಕ ಗುಡಿ, ಚರ್ಚು, ವಿಹಾರಗಳು ಮತ್ತು ಮಸೀದಿಗಳಿಗೆ ಸಂದರ್ಶನ.
ಹಳ್ಳಿಯ ಚಿಕ್ಕ ನಕ್ಷೆಯೊಂದನ್ನು ತಯಾರಿಸುವದು.
ಮಾಡಿದ ಕಾರ್ಯದ ಮಾಸಪತ್ರಿಕೆ ಹಾಗು ದಿನಚರಿಗಳನ್ನು ಬರೆದಿಡುವದು.
ಹಳ್ಳಿಯ ಆಯಗಾರರ ಮನೆಗಳು ಹಾಗು ಗಿರಣಿ ಮುಂತಾದ ಔದ್ಯೋಗಿಕ ಸ್ಥಳಗಳಿಗೆ ಸಂದರ್ಶನ.
ಪಕ್ಷಿ, ಸಾಕು ಪ್ರಾಣಿಗಳ ನಿರೀಕ್ಷಣೆ.
ಬಿತ್ತುವ ಮುಂದೆ ಸುಗ್ಗಿಯ ಕಾಲದಲ್ಲಿ ಹೊಲಗಳಿಗೆ ಸಂದರ್ಶನವೀಯುವದು.
ಶಕ್ಯವಿದ್ದಲ್ಲಿ ಒಕ್ಕಲಿಗರಿಗೆ ನೆರವು ನೀಡುವದು.
ಮಕ್ಕಳ ದೈಹಿಕ ಅಳತೆಗಳ ನಿಯತಕಾಲಿಕ ವರದಿಗಳನ್ನಿಡುವದು.
ಗ್ರಾಮ ಪಂಚಾಯತಿ, ಪೋಸ್ಟ ಆಫೀಸು, ರೇಲ್ವೆ ಸ್ಟೇಶನ್, ದವಾಖಾನೆ, ಪೋಲೀಸ ಸ್ಟೇಶನ್, ತಾಲೂಕ ಕಚೇರಿ, ಅಗ್ಗದರದ ಅಂಗಡಿಗಳು, ವಿವಿಧೋದ್ದೇಶ ಸೊಸಾಯಿಟಿಗಳು ಮೊದಲಾದವುಗಳನ್ನು ಸಂದರ್ಶಿಸುವದು ಹಾಗು ಅಲ್ಲಿಯೇ ಅವುಗಳ ಮಾಹಿತಿ ಮಾಡಿಕೊಳ್ಳುವದು.
ಹಳ್ಳಿಗಳಲ್ಲಿ ಗ್ರಾಮ ಸುಧಾರಣಾ ಸಪ್ತಾಹದಲ್ಲಿ ಭಾಗವಹಿಸುವದು.
ಶಾಲೆಯ ಪಂಚಾಂಗ (ಕ್ಯಾಲೆಂಡರ) ತಯಾರಿಸುವದು.
ಗ್ರಹಣ, ಕಾಮನಬಿಲ್ಲು ಮೊದಲಾದ ನೈಸರ್ಗಿಕ ಅಚ್ಚರಿಗಳನ್ನು ನಿರೀಕ್ಷಿಸುವದು.
ಬಾಲಕರ ದಿನಾಚರಣೆ.
ನಕ್ಷೆ, ಮಾದರಿ, ನಕಾಶಗಳನ್ನು ತಯಾರಿಸುವದು.
ಗ್ರಾಮ ಸಹಾಯಿ.
ಲಾವಣಿ ಹಾಗು ಕುತೂಹಲಕಾರಿ ವಸ್ತುಗಳ ಸ್ಫೂರ್ತಿಯಿಂದ ಮಕ್ಕಳು ಕೈಕೊಂಡ ಯಾವ ದಾದರೂ ಒಂದು ಮನಸ್ಸಿನಲ್ಲಿ ಆವಿರ್ಭವಿಸಿದ ಕೆಲಸ.
ಮಕ್ಕಳ ಬಾನುಲಿಯ ಕಾರ್ಯಕ್ರಮಗಳನ್ನು ಕೇಳುವದು.

ಸೂಚನೆ : ಮೇಲ್ಕಾಣಿಸಿದ ಚಟುವಟಿಕೆಗಳಲ್ಲಿ ಕೆಲವನ್ನು ಇಡೀ ಶಾಲೆಯ ವತಿಯಿಂದ ಕೈಕೊಂಡರೆ ಇನ್ನುಳಿದ ಕೆಲವನ್ನು ವರ್ಗದ ವತಿಯಿಂದ ಕೈಕೊಳ್ಳಬಹುದು. ಸ್ಥಾನಿಕ ಪರಿಸ್ಥಿತಿಗೆ ಉಚಿತವಾಗುವಂತೆ ಗುರುಗಳು ಕೆಲವನ್ನು ಆರಿಸಬಹುದು. ಹಾಗು ಅವುಗಳನ್ನು ಇಡೀ ಶಾಲೆಯ ವತಿಯಿಂದಾಗಲೀ, ವರ್ಗವಾರವಾಗಲೀ ಕೈಕೊಳ್ಳಬಹುದು.

ಕೆಳಗೆ ಕಾಣಿಸಿದ ಜಯಂತಿಗಳನ್ನು ದಿನಗಳನ್ನು ಶಾಲೆಯಲ್ಲಿ ಆಚರಿಸಬೇಕು.

೧) ರಾಷ್ಟ್ರೀಯ ದಿನಗಳು ಮತ್ತು ರಾಷ್ಟ್ರೀಯ ವಾರಗಳು :—

೧೫ನೆಯ ಆಗಸ್ಟ. ೨೬ನೆಯ ಜನೇವರಿ.

೩–ಳನೆಯ ವರ್ಗಗಳ ಹೊಸ ಅಭ್ಯಾಸ ಪತ್ರಿಕೆ

ಅಕ್ಟೋಬರ ೨ನೆಯ ದಿನಾಂಕದಿಂದ ಸಪ್ತಾಹ.	ಜಾಗತಿಕ ಆರೋಗ್ಯ ದಿನಾಚರಣೆ.
ಯುಕ್ತರಾಷ್ಟ್ರ ಸಂಘ ದಿನ.	ಮಕ್ಕಳ ದಿನ.
ನಾಡಹಬ್ಬ.	ಶಾಲೆಯ ಹುಟ್ಟುಹಬ್ಬ.
ಪಾಲಕರ ದಿನಾಚರಣೆ.	ವನಮಹೋತ್ಸವ.

೨) ಳನೆಯ ವರ್ಗದ ಅಭ್ಯಾಸ ಪತ್ರಿಕೆಯಲ್ಲಿ 'ಸಮಾಜ ಅಭ್ಯಾಸ' ವಿಭಾಗದಲ್ಲಿ ನಮೂದಿಸಿದ ಯಾದಿಯಲ್ಲಿಯ ಮಹಾಪುರುಷರ ಜಯಂತಿ.

೩) ಸಮಾಜ ಸ್ವರೂಪದ ಧಾರ್ಮಿಕ ದಿನಗಳು. ಹಾಗು ಸುಗ್ಗಿಯ ದಿನಗಳು.

ಗಣೇಶ ಚವತಿ	ಮೋಹರಮ್
ಕ್ರಿಸ್‌ಮಸ್	ಸಂಕ್ರಾಂತಿ
ದನದ (ಜಾತ್ರೆ) ಸಂತೆ	ಸುಗ್ಗಿ–ಹಬ್ಬ
ರಮಝಾನ	ಯುಗಾದಿ
ಗುಡ್‌ಫ್ರ್ಯಾಯಿಡೆ	ದೀಪಾವಳಿ

ಸೂಚನೆ: ಮೇಲ್ಕಾಣಿಸಿದ ಯಾದಿಯಲ್ಲಿಯ ಕೆಲವನ್ನು ಇಡೀ ಶಾಲೆಯ ವತಿಯಿಂದ, ಕೆಲವನ್ನು ವರ್ಗದ ವತಿಯಿಂದ ಆಚರಿಸಬಹುದು.

ಸ್ಥಾನಿಕ ಪರಿಸ್ಥಿತಿಗೆ ಉಚಿತವಾದವುಗಳನ್ನು ಉಪಾಧ್ಯಾಯರು ಆರಿಸಿ ಕೆಲವನ್ನು ಇಡೀ ಶಾಲೆಯ ವತಿಯಿಂದ ಆಚರಿಸಬಹುದು. ಯಾವುದೇ ಧಾರ್ಮಿಕ ಸ್ವರೂಪದಿಂದ ಈ ದಿನಾಚರಣೆಗಳು ನಿರ್ಲಿಪ್ತವಾಗಿರಬೇಕು. ಮಕ್ಕಳಿಗೆ ದಿನಾಚರಣೆಗಳ ಮಹತ್ವವನ್ನು ತಿಳಿಸಿಕೊಡಬೇಕು. ದಿನಾಚರಣೆಗಳಲ್ಲಿ ಹಾಜರ ಇರುವುದು ಒತ್ತಾಯದ್ದಾಗಬಾರದು.

ಶಾರೀರಿಕ ಶಿಕ್ಷಣ

ಸೂಚನೆ: ೧) ಶಕ್ಯವಿದ್ದ ಮಟ್ಟಿಗೆ ಸಾಮೂಹಿಕ ಡ್ರಿಲ್ಲು, ಬೀಡು ಬಿಡುವದು, ಅಲ್ಲೀಕೇರಿ ಪಾಗು ಶ್ರಮದಾನಗಳನ್ನು ಶಾಲೆಗಳಲ್ಲಿ ಶಾರೀರಿಕ ಶಿಕ್ಷಣದ ಅಂಗವೆಂದು ಸಂಘಟಿಸಬೇಕು.

೨) ಡ್ರಿಲ್ಲಿಗಾಗಿ ವಾರಕ್ಕೆ ೨ ಅವಧಿಗಳನ್ನು ಕೊಡಬೇಕು.

೩ನೆಯ ವರ್ಗ

(ಹುಡುಗರು–ಹುಡಿಗೆಯರು)

ಪ್ರಕಾರ ೧. ಅಂಗಾಂಗವರ್ಧಕ ಚಟುವಟಿಕೆಗಳು.

ವ್ಯಾಯಾಮ ೧.

೧) ಪ್ರಾರಂಭಿಕ ಚಟುವಟಿಕೆಗಳು:— ಕಾಲು ಕೈಗಳ ಮೇಲೆ ಸುತ್ತಲೂ ತಿರಗುವದು. ಸೀಟಿಯಾದ ಕೂಡಲೇ ಮೊಲದ ಜಿಗಿತ.

೨) ತೋಳು:— ಒಂದು ಹೆಜ್ಜೆ (foot) ಮುಂದೆ, ತೋಳು ಮಡಚಿ, ಒಂದಾದ ನಂತರ ಮತ್ತೊಂದು ಕೈಯಿಂದ ಕೆಳಗೆ ದಬ್ಬುವದು.

೩) ಧಡ:— (ಮೊಣಕಾಲು ಮಣಿಸಿ) ನೆಲವನ್ನು ಮುಟ್ಟುವಂತೆ ಹಿಂದಕ್ಕೆ ತೋಳುಗಳನ್ನು ಚಾಚಿ ಧಡವನ್ನು ಕೆಳಗಡೆ ಮಣಿಸಿ ಸಾವಕಾಶವಾಗಿ ಉರಳುವದು.

೪) ಧಡ:— (ಪಾದಗಳನ್ನು ಅಗಲವಿಟ್ಟು ನಿಲ್ಲುವದು) ಬಲಪಾದದ ಹೊರಗೆ ಭೂಮಿಯನ್ನು ಒಂದು ಕೈಯಿಂದ ಮುಟ್ಟುವಂತೆ ಧಡವನ್ನು ಮಣಿಸುವದು. ನಂತರ ಎಡಗಾಲಿನ ಕಡೆಗೆ ಕೈ ಬದಲಿಸುವಾಗ

ಮೇಲೆ ಏಳಬೇಕು. ಎರಡನೆಯ ಕೈಯಿಂದ ಈ ಕೃತಿಯನ್ನು ಮಾಡುವದು.

೫) ಕಾಲು:— ಕಾಲು ಅಗಲವಿರಿಸಿ ಜಿಗಿಯುವದು. ಸೀಟಿಯಾದ ಕೂಡಲೆ ಕೈ–ಊರಿ ಕೂಡುವದು.

೬) ಜೋಲಿ ಹಿಡಿಯುವದು:— ಏಡಿ ಮಿಲಾವ್, ಕದವರ್ ಖೋಲ್ ಎಣಿಕೆಯನ್ನು ಆ ತಿರುಗುವದು.

ವ್ಯಾಯಾಮ ೨.

೧) ಪ್ರಾರಂಭಿಕ ಚಟುವಟಿಕೆ:— ಸ್ವಚ್ಛಂದದ ನಡಿಗೆಯಿಂದ ತೀವ್ರ ನಡಿಗೆಗೆ ಬದಲಿಸುವದು.

೨) ತೋಳು:— (ತೋಳು ಮಡಿಸಿ) ತೋಳುಗಳನ್ನು ಒಂದಾದ ನಂತರ ಮತ್ತೊಂದನ್ನು ಮೇಲೆ ದಬ್ಬು

೩) ಧಡ:— (ಪಾದಗಳನ್ನು ಅಗಲವಿರಿಸಿ ನಿಲ್ಲುವದು) ಪಾದಗಳ ಮಧ್ಯದಿಂದ ಸಾಧ್ಯವಿದ್ದಷ್ಟು ಹಿಂದೆ ಮುಟ್ಟುವಂತೆ ಧಡವನ್ನು ಮಣಿಸುವದು ಮತ್ತು ಮೇಲೆ ಏಳುವದು.

೪) ಧಡ:— (ಪಾದಗಳನ್ನು ಸ್ವಲ್ಪ ಅಗಲವಿರಿಸಿ ನಿಲ್ಲುವದು.) ಮುಗ್ಗಲಿಗೆ ತೋಳುಗಳನ್ನು ಬಿ ಎಡಬಲಕ್ಕೆ ಧಡವನ್ನು ತಿರುಗಿಸುವದು.

೫) ಕಾಲು:— (ಕೈಊರಿ ಕೂಡ್ರುವದು) ಕೈಗಳನ್ನು ನೆಲದ ಮೇಲೆ ಇರಿಸಿ, ಮೊಣಕಾಲು ಸಾವಕಾಶವಾಗಿ ಬಿಡುವದು.

೬) ಜೋಲಿ ಹಿಡಿಯುವದು:— ಒಂದಾದ ನಂತರ ಮತ್ತೊಂದು ಮೊಣಕಾಲು ಊರುವದು ಕಾಲ್ಬೆರಳುಗಳನ್ನು ಎತ್ತುವದು.

ವ್ಯಾಯಾಮ ೩.

೧) ಪ್ರಾರಂಭಿಕ ಚಟುವಟಿಕೆ:— (ಕಾಳಿನ ಚೀಲ ತೂರಾಟ) ಶಿಕ್ಷಕನು ಕಾಳಿನ ಚೀಲಗಳನ್ನು ದಿಕ್ಕುಗಳಲ್ಲಿ ತೂರುವನು. ವಿದ್ಯಾರ್ಥಿಗಳು ಅವುಗಳನ್ನು ಆರಿಸಿ ಶಿಕ್ಷಕನಿಗೆ ಕೊಡುವುದು.

೨) ತೋಳು:— (ಜೆನಿಷ್ ಕುಸ್ತಿ) ಹಿಂದಿನ ಕಾಲುಗಳ ಜೋಲಿ ಹಿಡಿಯುತ್ತ, ಜೋಡಿದಾರರು ಬಲ ಗಳನ್ನು ಜೋಡಿಸಿ ಇಡುತ್ತ, ಬಲಗೈಗಳನ್ನು ಕೂಡಿಸುವದು. ಪ್ರತಿಯೊಬ್ಬ ಆಟಗಾರನು ತ ಕೈಯನ್ನು ಎಳೆಯುತ್ತ ನೂಕುತ್ತ ವಿರೋಧಿಯ ಯಾವದಾದರೊಂದು ಪಾದವನ್ನು ಚಲ ಪ್ರಯತ್ನಿಸುವನು.

೩) ಧಡ:— (ಪ್ರತಿಯೊಬ್ಬನಿಗೆ ಒಂದು ಕಾಳಿನ ಚೀಲ). ಕಾಳಿನ ಚೀಲದಿಂದ ಸಾಧ್ಯವಿದ್ದಷ್ಟು ಪ ಹಿಂಬದಿಗೆ ಬರುವಂತೆ ದೊಡ್ಡ ವರ್ತುಳವನ್ನು ಉಡುಗಿ ರಚಿಸುವದು.

೪) ಧಡ:— (ಬೆನ್ನಿಗೆ ಬೆನ್ನು ಹಚ್ಚಿ, ಪಾದ ಅಗಲವಿರಿಸಿ, ಜೋಡಿಯಾಗಿ ನಿಲ್ಲುವದು.) ಸಾಧ್ಯವಿದ್ ಪ್ರಕಾರಗಳಲ್ಲಿ ಚೀಲಗಳನ್ನು ಬದಲಿಸುವದು.

೫) ಕಾಲು:— ಮೊಣಕಾಲುಗಳನ್ನು ಹೆಚ್ಚು ಮೇಲಕ್ಕೆತ್ತಿ, ಸಾವಕಾಶವಾಗಿ ಕಾಲು ಬಡಿಯುವದು.

೬) ಜೋಲಿ ಹಿಡಿಯುವದು:— (ಪಾದದ ಮೇಲೆ ಕಾಳಿನ ಚೀಲ) ಪಾದದಿಂದ ಚೀಲವನ್ನು ತೂರುವದು ಮತ್ತು ಎರಡು ಕೈಗಳಿಂದ ಹಿಡಿಯುವದು.

೮) ಕಥೆಯ ಆಟಗಳು ಮತ್ತು ಅನುಕರಣ

೧) ಅನುಕರಣ

೧) ಗಂಟೆ ಬಾರಿಸುವದು.

೨) ತೂಗುವ ಕುರ್ಚಿ

೩) ಈಸುವದು (ನದಿಯ ದಂಡೆಗೆ ಪ್ರವಾಸ)

೪) ತೋಟ ಮಾಡುವದು
೫) ಪ್ರವಾಸದ ಸಾಧನಗಳು
೬) ಹಿಂದಿನ ವರ್ಗಗಳಲ್ಲಿ ಕಲಿತ ಚಟುವಟಿಕೆಗಳ ಪುನರಾವರ್ತನೆ

೨) ಕಥೆಯ ಆಟಗಳು ಮತ್ತು ಅಭಿನಯ

೧) ಸಂತೆ
೨) ಉತ್ಸವ (ಹಬ್ಬ)
೩) ಮೆರವಣಿಗೆ
೪) ಸಿಂಹದ ಚರ್ಮ ಹೊದೆದ ಕತ್ತೆ
೫) ಇನ್ನಿತರ ಕಲಿತ ಕಥೆಗಳು

ಇ) ಸ್ಟಂಟ್ ಮತ್ತು ಉರುಳುವದು

೧) ಉರುಳುವದು:— ಹುಲ್ಲು, ಉಸುಗು, ಮೆತ್ತನ್ನ ಚಾಪೆಗಳ ಮೇಲೆ ಹಿಂದಕ್ಕೆ ಮುಂದಕ್ಕೆ ಉರಳುವದು (ಗಂಡು ಹುಡುಗರು)

೨) ಹಗ್ಗದಾಟ:— ಸ್ಟಂಟ್ ಜಿಗಿಯುವದು. ಒಂಟಿ ಹಗ್ಗ (ಹೆಣ್ಣು ಹುಡುಗರು)

ಪ್ರಕಾರ ೨. ತಾಲಬದ್ಧ ಚಟುವಟಿಕೆಗಳು

ಅ) ಮೂಲಭೂತ

೧) ಪಾದಗಳನ್ನು ಅಗಲವಿರಿಸಿ ಜಿಗಿದು, ತಲೆಯ ಮೇಲೆ ಚಪ್ಪಾಳೆ ಹೊಡೆಯುವದು ಮತ್ತು ಮೊದಲಿನ ಸ್ಥಿತಿಗೆ ಬರುವದು. (ತಾಳಬದ್ಧವಾಗಿ)

೨) ೧) ಒಬ್ಬೊಬ್ಬರಾಗಿ
೨) ಇಬ್ಬಿಬ್ಬರಾಗಿ ಜತೆಗಾರರು ಒಳಗಡೆ ಕೈಗಳನ್ನು ಬೀಸುತ್ತಾ ಜಿಗಿತ ಹೆಜ್ಜೆಗಳನ್ನು ಹಾಕುತ್ತಾ ಬರುವದು (ತಾಳಬದ್ಧ)

೩) ವರ್ತುಳದಲ್ಲಿ ಒಳಗಡೆ ಮುಖಮಾಡಿ ಮಗ್ಗಲುಗಳಿಗೆ, ಕುದುರೆ ಜಿಗಿತ. ಹೆಜ್ಜೆಗಳನ್ನು ಹಾಕುತ್ತಾ ಬರುವದು (ತಾಳಬದ್ಧ)

೪) ಪ್ರತಿಯಾಗಿ ಅಥವಾ ಅಂಕುಡೊಂಕಾಗಿ, ಓಡುವುದು, ಹಾರುವುದು, ಜಿಗಿಯುವುದು ಕುದುರೆ ಜಿಗಿತ ಜಿಗಿಯುವುದು. (ತಾಳಬದ್ಧ.)

ಆ) ಕೂಚು ಮಾಡುವದು.

೧) ಅ) ಏಡಿಮಿಲಾವ್ ಆ) ಕದಮ್‌ಖೋಲ್ ಇ) ಆರಾಮ್ ಈ) ಬಲಕ್ಕೆ ತಿರುಗು ಉ) ಎಡಕ್ಕೆ ತಿರುಗು ಊ) ಕಾಲು ಬಡಿತ ಎ) ನಿಲ್ಲಿಸು. ಈ ಹುಕುಮುಗಳ ಅರ್ಥ ಮತ್ತು ಹೇಳಿದಂತೆ ಮಾಡುವದಕ್ಕೆ ಅಭ್ಯಾಸ ಮಾಡುವದು. (ಗಮನ ತಾಳದ ಮೇಲೆ ಜೋರು ಹೊರತು ನಿಶ್ಚಿತ ಚಲನವಲನಗಳ ಮೇಲೆ ಅಲ್ಲ.)

ಇ) ಜಾನಪದ ನೃತ್ಯ

ಆಯಾ ಸ್ಥಳಗಳಲ್ಲಿ ಪ್ರಚಾರದಲ್ಲಿರುವ ಕೆಲವು ಸುಲಭತರ—

ಉದಾ:— ೧) ಕಮ್ಮಿ

೨) ಕೋಲಾಟ
೩) ಪುಗಡಿ
೪) ಝುಮ್ಮಾ

ಈ) ಮನರಂಜಕ ಕವಾಯತುಗಳು.

ನಿಶಾನೆ ಕವಾಯತುಗಳು ಹಾಡು ಮತ್ತು ತಾಳ ಸಹಿತತೋಳ ಧಡ ಮತ್ತು ಕಾಲು ಚಲನಗಳು ಸೇರಿದ ಕೆಲವು ಸುಲಭತರ ಕವಾಯತುಗಳು.

ಪ್ರಕಾರ ೩. **ಆಟಗಳು**

ಸುಲಭ ಆಟಗಳು:—

೧) ಸ್ವತಂತ್ರ ಮತ್ತು ಬಂಧಿತ.
೨) ಕಾಗೆ, ಕೊಕ್ಕರೆ.
೩) ಸೈಮನ್ ಹೇಳುತ್ತಾನೆ.
೪) ಜತೆಗಾರರನ್ನು ಕಂಡುಹಿಡಿ.
೫) ಮೂರು ಜನ ಮತ್ತು ಬದಲಾವಣೆಗಳು.
೬) ನನ್ನೊಡನೆ ಬಾ (ಮನೆಗೆ ಹೋಗು).
೭) ಸರಪಳಿ ಮುಟ್ಟಾಟ.
೮) ಕೋಟೆಯನ್ನು ಮುತ್ತುವದು.
೯) ಪೋಲೀಸ ಮತ್ತು ಕಳ್ಳ.
೧೦) ಕೋಳಿಯೂ, ಮರಿಗಳೂ (ಸರಿಯ ಬಾಲ ಹಿಡಿ) ಇವೇ ಮುಂತಾದ ಆಯಾ ಸ್ಥಳಗಳಲ್ಲಿ ಪ್ರಚಾರದಲ್ಲಿರುವ ಇತರ ಆಟಗಳು.
೧೧) ಕುಂಟಾಟ.
೧೨) ಸುಲಭ ಮಾಡಿದ ಖೋ-ಖೋ.

ಪ್ರಕಾರ ೪.
ಮೇಲಾಟಗಳು ಇಲ್ಲಾ—

ಪ್ರಕಾರ ೫.

ವ್ಯಾಯಾಮ ೫. ಕಾದಾಟ ಚಟುವಟಿಕೆಗಳು—
ಸುಲಭವಾದ—

ಉದಾ:— ೧) ಬೆನ್ನಿಗೆ ಬೆನ್ನು ಹತ್ತಿ ಎತ್ತುವದು.
೨) ಬೆನ್ನಿಗೆ ಬೆನ್ನು ಹತ್ತಿ ಮೂಡುವದು.
೩) ಬೆನ್ನಿಗೆ ಬೆನ್ನು ಹಾಕಿ, ಕೋಲಿನ ಮೂಲಕ ಎಳೆಯುವದು.
೪) ಬೆನ್ನಿಗೆ ಬೆನ್ನು ಹಾಕಿ ಎಳೆಯುವದು.
೫) ಮೊಣಕೈಗಳಿಂದ ಕಾದಾಡುವದು.
೬) ಕೈಗಳನ್ನು ಹಿಡಿದು ಮೂಡುವದು.
೭) ಕೈಮೂಲಕ ಕಾದಾಟ.

ಸೂಚನೆ : ಶಿಕ್ಷಣ ಖಾತೆಯಿಂದ ಪ್ರಕಟವಾದ ೩ನೆಯ ವರ್ಗದ ಅಭ್ಯಾಸ ಪತ್ರಿಕೆಯೆಲ್ಲವನ್ನೂ ಈ ಸಂಚಿಕೆಯಲ್ಲಿ ಕೊಟ್ಟಿದ್ದು; ಮುಂದಿನ ತಿಂಗಳ ಸಂಚಿಕೆಯಲ್ಲಿ ಇದೇ ತೆರನಾಗಿ ೪ನೆಯ ವರ್ಗದ ಅಭ್ಯಾಸ ಪತ್ರಿಕೆಯನ್ನು ಕೊಡಲಾಗುವದು. ಇದನ್ನು ಪ್ರಕಟಿಸಲು ಪ್ರೇರೇಪಿಸಿದ ಧಾರವಾಡ ಜಿಲ್ಲಾ ಶಿಕ್ಷಣಾಧಿಕಾರಿಗಳಾದ ಶ್ರೀಮಾನ್ ಮ. ಗು. ಹಂದ್ರಾಳರವರಿಗೆ ನಮ್ಮ ಕೃತಜ್ಞತೆಗಳು. ಹಾಗು ಮೂಲ ಇಂಗ್ಲೀಷದಿಂದ ಕನ್ನಡಕ್ಕೆ ಅಲ್ಪ ವೇಳೆಯಲ್ಲಿಯೇ ಪರಿವರ್ತಿಸುವ ಕಾರ್ಯವನ್ನು ಪೂರೈಸಿಕೊಟ್ಟ ಶ್ರೀ ಹ. ಗ. ಜೋಶಿಯವರಿಗೂ ನಮ್ಮ ಧನ್ಯವಾದಗಳು. ಅಲ್ಪ ವೇಳೆಯಲ್ಲಿ ಭಾಷಾಂತರಿಸುವ ಕಾರ್ಯ ಪೂರೈಸಲಾದ್ದರಿಂದ ದೋಷಗಳುಳಿಯುವ ಸಂಭವವಿದೆ. ಹಾಗೇನಾದರೂ ದೋಷಗಳಿದ್ದಲ್ಲಿ ಶಿಕ್ಷಕರಾಗಲಿ, ಶಿಕ್ಷಣ ತಜ್ಞರಾಗಲಿ ನಮ್ಮ ದೃಷ್ಟಿಗೆ ತಂದಲ್ಲಿ ಉಪಕೃತಿಗಳೊಡನೆ ತಿದ್ದುಪಡೆ ಮಾಡಲಾಗುವದು.

— ಸಂಪಾದಕರು **ಜೀ. ಶಿ.**

ಪ್ರಾಥಮಿಕ ಶಾಲಾ ಪ್ರಮಾಣಪತ್ರ ಪರೀಕ್ಷೆ, ಟ್ರೇನಿಂಗ ಕಾಲೇಜ; ಎಲಿಮೆಂಟರಿ ಮತ್ತು ಇಂಟರಮೀಡಿಯೆಟ್ ಗ್ರೇಡ ಮುಂ. ಡ್ರಾಯಿಂಗ ಪರೀಕ್ಷೆಗಳಿಗೆ—

ಜನಪ್ರಿಯವಾದ ಮತ್ತು ಸರಕಾರದಿಂದ ಮಂಜೂರಾದ ಒಂದೇ ಒಂದು ಪುಸ್ತಕ

ಆದರ್ಶ ಚಿತ್ರಕಲಾ

(Ideal Drawing)

ಶ್ರೀ ಎಸ್. ಕೆ. ಜೋಶಿ, ಮತ್ತು ಶ್ರೀ ಜಿ. ಡಿ. ವಾಲಿ.

ಲ್ಲ ದೊಡ್ಡ ಪುಸ್ತಕ ವ್ಯಾಪಾರಸ್ಥರಲ್ಲಿ ದೊರೆಯುವದು.

ಬೆಲೆ ೧—೧೨—೯ ಅಂಚೆವೆಚ್ಚ ಪ್ರತ್ಯೇಕ.

ದು ಮತ್ತು ಐದಕ್ಕಿಂತ ಹೆಚ್ಚು ಪ್ರತಿ ತರಿಸಿಕೊಳ್ಳುವವರಿಗೆ ಅಂಚೆ ವೆಚ್ಚವಿಲ್ಲ. ಇದು ಕನ್ನಡದಲ್ಲಿಯೂ ಸಿಗುತ್ತದೆ.

ಜಿ. ವಾಯ್. ರಾಣೆ

ಪ್ರಕಾಶಕರು, ೩೪೩, ಕಸಬಾ ಪೇಟ ಪುಣೆ.

೧೯೩೬ನೆಯ ಇಸವಿಯಿಂದ ಪ್ರಾರಂಭವಾಗುವ ಸಾಮಾನ್ಯ ಪ್ರಾ. ಶಾ. ಪ್ರ. ಪರೀಕ್ಷೆಯ ಅಭ್ಯಾಸ ಕ್ರಮವನ್ನು ಅನುಸರಿಸಿ ಬರೆದ

ಶೇಲಾರ ಕೃತ

ಪ್ರಾಥಮಿಕ ಭೂಮಿತಿ

[ಕ್ಷೇತ್ರಫಲ ಘನಫಲ ಸಹಿತ]

೪ ರಿಂದ ೭ ನೇಯ ವರ್ಗದ ವರೆಗಿನ ವಿಷಯವನ್ನೆಲ್ಲ ಒಳಗೊಂಡಿದೆ.

ಬೆಲೆ: ೧ರೂ. ೮ಆಣೆ ಮಾತ್ರ

ದೊರೆಯುವ ಸ್ಥಳ:—

ಸಾಯಿ ಪಬ್ಲಿಶಿಂಗ್ ಹಾವುಸ್

ವಿಜಯ ರೋಡ, ಧಾರವಾಡ.

ಪ್ರಾಥಮಿಕ ಶಿಕ್ಷಕರ ತರಬೇತಿ ಸಂಸ್ಥೆಗಳ ಹೊಸ ಅಭ್ಯಾಸ ಪತ್ರಿಕೆ

ಲೇಖಕರು:— ಶ್ರೀ ಎಚ್. ಜಿ. ಜೋಶಿ

ರಾಜ್ಯದಲ್ಲಿ ಶಿಕ್ಷಣ ಸಮೀಕರಣ ಕಾರ್ಯವು ಎಲ್ಲ ಹಂತಗಳಲ್ಲಿಯೂ ನಡೆದುದು ಸರ್ವಶ್ರುತವಿದೆ. ಪ್ರಾಥಮಿಕ ಶಿಕ್ಷಣವು ಏಳು ವರುಷದ್ದಿರಬೇಕೆಂದು ನಿರ್ಣೀತವಾಗಿ ರಾಜ್ಯಕ್ಕೆಲ್ಲ ಏಕರೂಪವಾದ ಅಭ್ಯಾಸ ಪತ್ರಿಕೆಯು ಹಂತ ಹಂತಗಳಲ್ಲಿ ರಚಿತವಾಗಿ ಬಳಿಕೆಯಲ್ಲಿ ಬರುತ್ತ ನಡೆದಿದೆ. ಅದೇ ರೀತಿಯಲ್ಲಿ ಪ್ರಾಥಮಿಕ ಶಿಕ್ಷಕರ ತರಬೇತಿ ಕ್ರಮದಲ್ಲಿಯೂ ಕೂಡ ರಾಜ್ಯದ ತುಂಬೆಲ್ಲ ಏಕರೂಪವಾದ ಅಭ್ಯಾಸ ಕ್ರಮವಿರಬೇಕೆಂದು ಗೊತ್ತು ಮಾಡಿ ಸರಕಾರವು ಇದೇ ವರುಷದಿಂದಲೇ ಹೊಸ ಅಭ್ಯಾಸ ಪತ್ರಿಕೆಯನ್ನು ಬಳಿಕೆಯಲ್ಲಿ ತಂದಿದ್ದಾರೆ. ಇಲ್ಲಿಯ ವರೆಗೆ ರಾಜ್ಯದ ಬೇರೆ ಬೇರೆ ಭಾಗಗಳಲ್ಲಿ ಬೇರೆ ಬೇರೆ ತರಬೇತಿಯ ಕ್ರಮ ಹಾಗು ಭಿನ್ನ ಭಿನ್ನ ಅವಧಿಗಳ ತರಬೇತಿಯು ಬಳಿಕೆಯಲ್ಲಿದ್ದಿತು. ಇದೆ (೧೯೬೦) ಜೂನ ತಿಂಗಳಿಂದ ಏಕರೂಪತೆಯನ್ನು ಸಾಧಿಸಲು ಒಂದು ಹೊಸ ಅಭ್ಯಾಸ ಪತ್ರಿಕೆಯನ್ನು ಆಚರಣೆಯಲ್ಲಿ ತರಲಾಗಿದೆ.

ಎರಡು ವಿಧದ ತರಬೇತಿಗಳು ಸದ್ಯಕ್ಕೆ ನಡೆಯಬೇಕೆಂದು ಗೊತ್ತುಪಡಿಸಲಾಗಿದೆ. ಮ್ಯಾಟ್ರಿಕ್, ಎಸ್. ಎಸ್. ಸಿ., ಎಸ್. ಎಸ್. ಎಲ್. ಸಿ. ಇಲ್ಲವೆ ತತ್ಸಮ ಪರೀಕ್ಷೆಯನ್ನು ಪಾಸಾಗಿ ಪ್ರಾಥಮಿಕ ಶಿಕ್ಷಕರಾಗ ಬಯಸುವವರಿಗೆ; ಇಲ್ಲವೇ ಈಗಾಗಲೆ ಶಿಕ್ಷಕರಾಗಿದ್ದು ಆ ಅರ್ಹತೆ (ಎಸ್.ಎಸ್.ಸಿ) ಪಡೆದವರಿಗೆ ೧ ವರುಷ ತರಬೇತಿಯ ಒಂದು ಕ್ರಮವು ಹಾಗು ಕೇವಲ ಮುಲ್ಕಿ ಪರೀಕ್ಷೆ ಇಲ್ಲವೆ ಎಸ್.ಎಸ್.ಸಿ. ಇಲ್ಲದೆ ಇರುವಂಥವರಿಗೆ ೨ ವರುಷಗಳ ತರಬೇತಿಯ ಮತ್ತೊಂದು ರೀತಿ—ಹೀಗೆ ಎರಡು ಬಗೆಯ ತರಬೇತಿಯ ವಿಧಾನಗಳು ಇದೇ ವರುಷದಿಂದ(೧೯೬೦)ಬಳಿಕೆಯಲ್ಲಿ ಬಂದಿವೆ. ಇಲ್ಲಿ ಎಸ್.ಎಸ್.ಸಿ ಇಲ್ಲವೆ ತತ್ಸಮಾನ ಅರ್ಹತೆ ಪಡೆದಂಥವರಿಗಾಗಿ ಇದ್ದ ೧ ವರುಷ ಕಾಲಾವಧಿಯ ಅಭ್ಯಾಸ ಪತ್ರಿಕೆಯ ಸ್ಥೂಲ ಪರಿಚಯವನ್ನು ಮಾಡಿಕೊಡಲಾಗುವದು.

ಗುಂಪುಗಳು

ಒಂದನೆಯ ಗುಂಪು ಸಾಂಘಿಕ ಜೀವನ ೧೦೦ ಗುಣಗಳು
ಎರಡನೆಯ ಗುಂಪು ಶಿಕ್ಷಣ ವಿಭಾಗ ೪೫೦ ,,
ಮೂರನೆಯ ಗುಂಪು ಮೂಲೋದ್ಯೋಗ ೩೦೦ ,,
ನಾಲ್ಕನೆಯ ಗುಂಪು ಭಾಷೆ (ವಿಷಯ) ೫೦ ,,
೯೦೦
ಐದನೆಯ ಗುಂಪು ಡ್ರಾಯಿಂಗ, ಶಾರೀರಿಕ, ಹಾಗು ಸಂಗೀತ.

ಈ ರೀತಿಯಾಗಿ ಐದು ಗುಂಪುಗಳನ್ನಾಗಿ ಮಾಡಲಾಗಿದೆ. ಈ ಐದು ಗುಂಪುಗಳಲ್ಲಿ ೫ನೆಯ ಗುಂಪಿನಲ್ಲಿರುವ ಡ್ರಾಯಿಂಗಾಯನ, ಹಾಗು ಶಾರೀರಿಕ ಶಿಕ್ಷಣ ಈ ಮೂರು ವಿಷಯಗಳು ಪರೀಕ್ಷೆಗಾಗಿ ಇರುವದಿಲ್ಲ. ಆದರೆ ಆ ಆ ವಿಷಯಗಳಿಗೆ ಸಂಬಂಧಿಸಿದ ಉಪಾಧ್ಯಾಯರು, ಪ್ರತಿಯೊಬ್ಬ ಶಿಕ್ಷಕ ವಿದ್ಯಾರ್ಥಿಯೂ ಆ ಆ ವಿಷಯಗಳಲ್ಲಿ ಸಮಾಧಾನಕರವಾಗಿ ತರಬೇತಿಯನ್ನು ಹೊಂದಿರುವನೆಂಬುದನ್ನು ದೃಢಪಡಿಸಬೇಕಾಗುತ್ತದೆ. ಇನ್ನುಳಿದ ನಾಲ್ಕು ಗುಂಪುಗಳೂ ಪರೀಕ್ಷೆಗಾಗಿ ಇದ್ದು ಎಲ್ಲವುಗಳಲ್ಲಿಯೂ ಯೋಗ್ಯ ತರಬೇತಿ ಪಡೆದು ಯಶಸ್ಸು ಗಳಿಸಬೇಕಾಗುವದು.

ಸಾಂಘಿಕ ಜೀವನದಲ್ಲಿ ಮಾಡಬೇಕಾದ ಕಾರ್ಯಕಲಾಪಗಳನ್ನು ನಿರ್ದೇಶಿಸಲಾಗಿದೆ. ಶಿಕ್ಷಣ ವಿಭಾಗದ (ಅ) ತಾತ್ವಿಕ (ಬ) ಪ್ರಾಯೋಗಿಕವೆಂಬ ಎರಡು ವಿಭಾಗಗಳುಂಟು.

ತಾತ್ವಿಕದಲ್ಲಿ ೩ ಪೇಪರುಗಳು ಉಂಟು

	ಗುಣಗ
೧) ಶಿಕ್ಷಣ ತತ್ವಗಳು ಹಾಗು ಮನಶ್ಶಾಸ್ತ್ರ	೧೦೦
೨) ಶಾಲಾಡಳಿತೆ ಹಾಗು ಸಂಘಟನೆ	೧೦೦
೩) ಸಾಮಾನ್ಯ ಹಾಗು ವಿಶೇಷವಾದ ಕಲಿಸುವ ಪದ್ಧತಿಗಳು.	೧೦೦

ಈ ರೀತಿಯಾಗಿ ೩ ಕಾಗದಗಳುಂಟು.

ಪ್ರಾಯೋಗಿಕವೆಂದು ಈ ರೀತಿಯಾಗಿ ಶಿಕ್ಷಕ ವಿದ್ಯಾರ್ಥಿಗ ಮಾಡಬೇಕಾಗುವದು.

ಅ) ೧೫ ಸಮವಾಯ ಪದ್ಧತಿಯ ಪಾಠಗಳನ್ನು **ಕೊಡಬೇಕ**
ಬ) ೧೫ ವರ್ಗ ಪಾಠಗಳನ್ನು **ನಿರೀಕ್ಷಿಸಬೇಕು.**
ಕ) ೬ ಮಾದರಿ ಪಾಠಗಳ ನಿರೀಕ್ಷಣೆ
ಡ) ೩ ಬಹು ವರ್ಗದ ಪಾಠಗಳನ್ನು **ಕೊಡಬೇಕ**
ಇ) ಒಂದುವಾರ ಸಂತತ ಪಾಠಕೊಡುವುದು.

ಬೋಧಿಸಿದ್ದಾಗದಲ್ಲಾದರೂ ಕೊನೆಯ (೮) ತರಗತಿಗಳಲ್ಲಿ ಬ) ಪ್ರಾಯೋಗಿಕವೆಂದು ಎರಡು ವಿಭಾಗಗಳನ್ನು ನಡೆಸಲಾಗಿದೆ. ಶಿಕ್ಷಕ ವಿದ್ಯಾರ್ಥಿಗಳು ಒಂದು ಮಟ್ಟಿನ ಪಠ ಪೂರಕ ಪತ್ರಿಕೆಗಳನ್ನು ಪಠಾಪೇಕ್ಷಾಗುವಷ್ಟಿದೆ ರಷ್ಟು ಸಂಖ್ಯೆ ಪೂರಕ ಪತ್ರಿಕೆಗಳನ್ನು ಕೈಕೊಳ್ಳಬೇಕಾಗಿದೆ. ಆಧ್ಯಾಪಕ ಪತ್ರಿಕೆಯನ್ನು ಮಟ್ಟಿನ ಪೂರಕ ಪತ್ರಿಕೆಗಳನ್ನು ಕೈಕೊಳ್ಳಬೇಕಾಗಿದೆ. ಶಾಲಾಮಟ್ಟದಲ್ಲಿ ಪತ್ರಿಕೆಗಳಾಗಿರುವುದರಿಂದ ಕಾಲಕಾಲಕ್ಕೆ ಪೂರಕ ಪತ್ರಿಕೆಗಳನ್ನು ಬದಲಾಯಿಸಬೇಕಾಗಿದೆ. ಪ್ರತಿಯೊಂದು ಪ್ರಾಯೋಗಿಕ ಪರೀಕ್ಷೆಯಲ್ಲಿ ಅಂಕಗಳನ್ನು ಕೊಡಲಾಗಿದೆ.

[ಮುಂದುವರಿಯುವುದು]

ಅಂತರದ ಅನ್ವೇಷಣೆ

ಆನಂದ ಕಂದ-ಕನ್ನಡ ವ್ಯಾಕರಣ] ಪುಟ : ಮೊತ್ತಾಯಿ

ಲೇ : ಎ. ಎಚ್. ಜಿಂಜೇಕಾರ ಮತ್ತು ಎಮ್. ಎಚ್. ಪೀಳಿಮನಿ

ಪ್ರಾಥಮಿಕ ಶಾಲೆಗಳ ೫, ೬ ಮತ್ತು ೭ನೆಯ ತರಗತಿಗಳ ಹಿಂದಿ ಭಾಷಾ ಪಠ್ಯಕ್ರಮಾನುಸಾರವಾಗಿ ಬರೆಯಲ್ಪಟ್ಟಿದ್ದು ಈ ಹಿಂದಿ-ಕನ್ನಡ ವ್ಯಾಕರಣ ಪುಸ್ತಕ !

ಶಿಕ್ಷಕರಿಗೂ ಪಾಠ ವಿದ್ಯಾರ್ಥಿಗಳಿಗೂ ಸುಲಭವಾಗಿ ತಿಳಿಯುವಂತೆ ವ್ಯಾಕರಣದ ವಿವಿಧ ಅಂಗಗಳನ್ನು ಮೊಟ್ಟ ಕಲಿಸಲಿಕ್ಕೂ ಸಹಾಯಕವಾಗಿದೆ. ಇದರ ಬಗ್ಗೆ ಕೆಲವು ಮಾತುಗಳು ಈ ಬಗ್ಗೆ ಅಭಿಪ್ರಾಯಪಟ್ಟಿದ್ದಾರೆ—

೧) ವಿದ್ಯಾರ್ಥಿಗಳಿಗೆ ಪಾಠ ಶಿಕ್ಷಕರಿಗೆ ಸಹಾಯಕವಾದ ಪುಟ್ಟ ಪುಸ್ತಕ ಮಾಗಿ ಸಿದ್ದವಾಗಿದೆ ಮಾಡಿಯಿಲ್ಲದು.
ಶ್ರೀ ಆರ್. ಬಿ. ಜೋಷಿಯವರು, ಬಿ.ಎಂ., ಬಿ. ಟಿ. ಬಸಾಪುರ.

೨) ಹಿಂದಿ ಕಲಿಯುವಲ್ಲಿನ ಸಣ್ಣತಿರುಗಿ ಮೊಟ್ಟಮೊದಲಿಗೂ ಈ ಪುಸ್ತಕದ ಕೊರತೆ ಕಾಣಿಸುವುದಿಲ್ಲ.
ಪ್ರೊ. ಸಿ.ಎಸ್. ಪಾಟೀಲ, ಬಿ.ಎಸ್., ಬಿ.ಟಿ. ಬಿ. ಸಿ. ಬಿ. ಟಿ. ಸಿ. ಬಿ. ಟಿ. ಸಿ. ಬಿ. ಟ

ಪ್ರಾಥಮಿಕ ಶಿಕ್ಷಕರ ತರಬೇತಿ ಸಂಸ್ಥೆಗಳ ಹೊಸ ಅಭ್ಯಾಸ ಪತ್ರಿ

ಲೇಖಕರು:— ಶ್ರೀ ಎಚ್. ಜಿ. ಜೋಶಿ

ರಾಜ್ಯದಲ್ಲಿ ಶಿಕ್ಷಣ ಸಮೀಕರಣ ಕಾರ್ಯವು ಎಲ್ಲ ಹಂತಗಳಲ್ಲಿಯೂ ನಡೆಯುದು ಸರ್ವಶ್ರುತವಿದೆ. ಪ್ರಾಥಮಿಕ ಶಿಕ್ಷಣವು ಏಳು ವರುಷದ್ದಿರಬೇಕೆಂದು ನಿರ್ಣೀತವಾಗಿ ರಾಜ್ಯಕ್ಕೆಲ್ಲ ಏಕರೂಪವಾದ ಅಭ್ಯಾಸ ಪತ್ರಿಕೆಯು ಹಂತ ಹಂತಗಳಲ್ಲಿ ರಚಿತವಾಗಿ ಬಳಿಕೆಯಲ್ಲಿ ಬರುತ್ತ ನಡೆದಿದೆ. ಅದೇ ರೀತಿಯಲ್ಲಿ ಪ್ರಾಥಮಿಕ ಶಿಕ್ಷಕರ ತರಬೇತಿ ಕ್ರಮದಲ್ಲಿಯೂ ಕೂಡ ರಾಜ್ಯದ ತುಂಬೆಲ್ಲ ಏಕರೂಪವಾದ ಅಭ್ಯಾಸ ಕ್ರಮವಿರಬೇಕೆಂದು ಗೊತ್ತು ಮಾಡಿ ಸರಕಾರದವರು ಇದೇ ವರುಷದಿಂದಲೇ ಹೊಸ ಅಭ್ಯಾಸ ಪತ್ರಿಕೆಯನ್ನು ಬಳಿಕೆಯಲ್ಲಿ ತಂದಿದ್ದಾರೆ. ಇಲ್ಲಿಯ ವರೆಗೆ ರಾಜ್ಯದ ಬೇರೆ ಬೇರೆ ಭಾಗಗಳಲ್ಲಿ ಬೇರೆ ಬೇರೆ ತರಬೇತಿಯ ಕ್ರಮ ಹಾಗು ಭಿನ್ನ ಭಿನ್ನ ಅವಧಿಗಳ ತರಬೇತಿಯು ಬಳಿಕೆಯಲ್ಲಿದ್ದಿತು. ಇದೆ (೧೯೬೦) ಜೂನ ತಿಂಗಳಿಂದ ಏಕರೂಪತೆಯನ್ನು ಸಾಧಿಸಲು ಒಂದು ಹೊಸ ಅಭ್ಯಾಸ ಪತ್ರಿಕೆಯನ್ನು ಆಚರಣೆಯಲ್ಲಿ ತರಲಾಗಿದೆ.

ಎರಡು ವಿಧದ ತರಬೇತಿಗಳು ಸದ್ಯಕ್ಕೆ ನಡೆಯ ಬೇಕೆಂದು ಗೊತ್ತುಪಡಿಸಲಾಗಿದೆ. ಮ್ಯಾಟ್ರಿಕ್, ಎಸ್. ಎಸ್. ಸಿ., ಎಸ್. ಎಸ್. ಎಲ್. ಸಿ. ಇಲ್ಲವೆ ತತ್ಸಮ ಪರೀಕ್ಷೆಯನ್ನು ಪಾಸಾಗಿ ಪ್ರಾಥಮಿಕ ಶಿಕ್ಷಕರಾಗ ಬಯಸುವವರಿಗೆ; ಇಲ್ಲವೇ ಈಗಾಗಲೆ ಶಿಕ್ಷಕರಾಗಿದ್ದು ಆ ಅರ್ಹತೆ (ಎಸ್.ಎಸ್.ಸಿ) ಪಡೆದವರಿಗೆ ೧ ವರುಷ ತರಬೇತಿಯ ಒಂದು ಕ್ರಮವು ಹಾಗು ಕೇವಲ ಮುಲ್ಕಿ ಪರೀಕ್ಷೆ ಇಲ್ಲವೆ ಎಸ್.ಎಸ್.ಸಿ. ಇಲ್ಲದೆ ಇರುವಂಥವರಿಗೆ ೨ ವರುಷಗಳ ತರಬೇತಿಯ ಮತ್ತೊಂದು ರೀತಿ—ಹೀಗೆ ಎರಡು ಬಗೆಯ ತರಬೇತಿಯ ವಿಧಾನಗಳು ಇದೇ ವರುಷದಿಂದ(೧೯೬೦)ಬಳಿಕೆಯಲ್ಲಿ ಬಂದಿವೆ. ಇಲ್ಲಿ ಎಸ್.ಎಸ್.ಸಿ ಇಲ್ಲವೆ ತತ್ಸಮಾನ ಅರ್ಹತೆ ಪಡೆದಂಥವರಿಗಾಗಿ ಇದ್ದ ೧ ವರುಷ ಕಾಲಾವಧಿಯ ಅಭ್ಯಾಸ ಪತ್ರಿಕೆಯ ಸ್ಥೂಲ ಪರಿಚಯವನ್ನು ಮಾಡಿಕೊಡಲಾಗುವದು.

ಗುಂಪುಗಳು

೧ನೆಯ ಗುಂಪು ಸಾಂಘಿಕ ಜೀವನ ೧೦೦ ಗುಣಗಳು
೨ನೆಯ ಗುಂಪು ಶಿಕ್ಷಣ ವಿಭಾಗ ೪೫೦ ,,
೩ನೆಯ ಗುಂಪು ಮೂಲೋದ್ಯೋಗ ೩೦೦ ,,
೪ನೆಯ ಗುಂಪು ಭಾಷೆ (ವಿಷಯ) ೫೦ ,,
೯೦೦
೫ನೆಯ ಗುಂಪು ಡ್ರಾಯಿಂಗ,ಶಾರೀರಿಕ, ಹಾಗು ಸಂಗೀತ.

ಈ ರೀತಿಯಾಗಿ ಐದು ಗುಂಪುಗಳನ್ನಾಗಿ ಮಾಡಲಾಗಿ ಈ ಐದು ಗುಂಪುಗಳಲ್ಲಿ ೫ನೆಯ ಗುಂಪಿನಲ್ಲಿರುವ ಡ್ರಾಯಿಂಗಾಯನ, ಹಾಗು ಶಾರೀರಿಕ ಶಿಕ್ಷಣ ಈ ಮೂರು ವಿಷಯಗಳು ಪರೀಕ್ಷೆಗಾಗಿ ಇರುವದಿಲ್ಲ. ಆದರೆ ಆ ಆ ವಿಷಯಗಳಿಗೆ ಸಂಬಂಧಿಸಿದ ಉಪಾಧ್ಯಾಯರು, ಪ್ರತಿಯೊಬ್ಬ ಶಿಕ್ಷಕ ವಿದ್ಯಾರ್ಥಿಯೂ ಆ ಆ ವಿಷಯಗಳಲ್ಲಿ ಸಮಾಧಾನಕರವಾಗಿ ತರಬೇತಿಯನ್ನು ಹೊಂದಿರುವನೆಂಬುದನ್ನು ದೃಢಪಡಿಸಬೇಕಾಗುತ್ತದೆ. ಇನ್ನುಳಿದ ನಾಲ್ಕು ಗುಂಪುಗಳೂ ಪರೀಕ್ಷೆಗಾಗಿ ಇದ್ದು ಎಲ್ಲವುಗಳಲ್ಲಿಯೂ ಯೋಗ್ಯ ತರಬೇತಿ ಪಡೆದು ಯಶಸ್ಸು ಗಳಿಸಬೇಕಾಗುವದು.

ಸಾಂಘಿಕ ಜೀವನದಲ್ಲಿ ಮಾಡಬೇಕಾದ ಕಾರ್ಯಕಲಾಪಗಳನ್ನು ನಿರ್ದೇಶಿಸಲಾಗಿದೆ. ಶಿಕ್ಷಣ ವಿಭಾಗ (ಅ) ತಾತ್ವಿಕ (ಬ) ಪ್ರಾಯೋಗಿಕವೆಂಬ ಎರಡು ವಿಭಾಗಗಳುಂಟು.

ತಾತ್ವಿಕದಲ್ಲಿ ೩ ಪೇಪರುಗಳು ಉಂಟು

	ಗುಣ
೧) ಶಿಕ್ಷಣ ತತ್ವಗಳು ಹಾಗು ಮನಶ್ಶಾಸ್ತ್ರ	೧೦
೨) ಶಾಲಾಡಳಿತೆ ಹಾಗು ಸಂಘಟನೆ	೧೦
೩) ಸಾಮಾನ್ಯ ಹಾಗು ವಿಶೇಷವಾದ ಕಲಿಸುವ ಪದ್ಧತಿಗಳು.	೧೦

ಈ ರೀತಿಯಾಗಿ ೩ ಕಾಗದಗಳುಂಟು.

ಪ್ರಾಯೋಗಿಕವೆಂದು ಈ ರೀತಿಯಾಗಿ ಶಿಕ್ಷಕ ವಿದ್ಯಾರ್ಥಿ ಮಾಡಬೇಕಾಗುವದು.

ಅ) ೧೫ ಸಮವಾಯ ಪದ್ಧತಿಯ ಪಾಠಗಳನ್ನು ಕೊಡಬೇ
ಬ) ೧೫ ವರ್ಗ ಪಾಠಗಳನ್ನು ನಿರೀಕ್ಷಿಸಬೇಕು.
ಕ) ೬ ಮಾದರಿ ಪಾಠಗಳ ನಿರೀಕ್ಷಣೆ
ಡ) ೩ ಬಹು ವರ್ಗದ ಪಾಠಗಳನ್ನು ಕೊಡಬೇ
ಇ) ಒಂದುವಾರ ಸಂತತ ಪಾಠಕೊಡುವುದು.

ಮೂಲೋದ್ಯೋಗದಲ್ಲಾದರೂ ಕೂಡ (ಅ) ತಾತ್ವಿಕ (ಬ) ಪ್ರಾಯೋಗಿಕವೆಂದು ಎರಡು ವಿಭಾಗಗಳನ್ನು ಮಾಡಲಾಗಿದೆ. ಶಿಕ್ಷಕ ವಿದ್ಯಾರ್ಥಿಗಳು ಒಂದು ಮುಖ್ಯವಾದ ಮೂಲೋದ್ಯೋಗವನ್ನು ಮಾಡಬೇಕಾಗುವದಲ್ಲದೆ ಎರಡು ಉಪ ಮೂಲೋದ್ಯೋಗಗಳನ್ನೂ ಕೈಕೊಳ್ಳಬೇಕಾಗುವದು. ಅಭ್ಯಾಸ ಪತ್ರಿಕೆಯಲ್ಲಿ ಮುಖ್ಯ ಮೂಲೋದ್ಯೋಗಗಳಾವವು; ಉಪಮೂಲೋದ್ಯೋಗಗಳಾವವು— ಎಂಬುದನ್ನು ವಿವರವಾಗಿ ಕಾಣಿಸಲಾಗಿದೆಯಲ್ಲದೆ; ಆ ಆ ಮೂಲೋದ್ಯೋಗಗಳಲ್ಲಿ ಮುಟ್ಟಬೇಕಾದ ಪ್ರಮಾಣದ ಗುರಿಯನ್ನೂ ಕಾಣಿಸಲಾಗಿದೆ. ವರುಷದ ಕೊನೆಗೆ ಪ್ರಾಯೋಗಿಕ ಪರೀಕ್ಷೆಯೂ ಉಂಟು.

[ಮುಂದುವರಿಯುವದು]

ಇಂತಹದು ಇನ್ನೊಂದಿಲ್ಲ

ಆದರ್ಶ ಹಿಂದಿ-ಕನ್ನಡ ವ್ಯಾಕರಣ] ಬೆಲೆ: ೧ ರೂಪಾಯಿ

ಲೇ.: ಎ. ಎಚ್. ಹುಂಡೇಕಾರ ಮತ್ತು ಎಮ್. ಎಚ್. ಬಿಳಲದವರ

ಪ್ರಾಥಮಿಕ ಶಾಲೆಗಳ ೫, ೬ ಮತ್ತು ೭ನೆಯ ಇಯತ್ತೆಗಳ ಹಿಂದಿ ಅಭ್ಯಾಸ ಪತ್ರಿಕೆಗನುಸಾರವಾಗಿ ಬರೆಯಲ್ಪಟ್ಟ ಪ್ರಥಮ ಹಿಂದಿ-ಕನ್ನಡ ವ್ಯಾಕರಣ ಪುಸ್ತಕ!

ಶಿಕ್ಷಕರಿಗೂ ಹಾಗು ವಿದ್ಯಾರ್ಥಿಗಳಿಗೂ ಸುಗಮವಾಗಿ ತಿಳಿಯುವಂತೆ ವ್ಯಾಕರಣದ ವಿವಿಧ ಅಂಗಗಳನ್ನು ಯೋಗ್ಯ ಉದಾಹರಣೆಗಳೊಂದಿಗೆ ವಿವೇಚಿಸಲಾಗಿದೆ. ಇದರ ಬಗ್ಗೆ ಕೆಳಗಿನ ಮಹನೀಯರು ಈ ರೀತಿ ಅಭಿಪ್ರಾಯಪಟ್ಟಿದ್ದಾರೆ:—

೧) ವಿದ್ಯಾರ್ಥಿಗಳಿಗೆ ಹಾಗು ಶಿಕ್ಷಕರಿಗೆ ಸಮರ್ಪಕವಾದ ರೀತಿಯಲ್ಲಿ ಮಾರ್ಗದರ್ಶನ ಮಾಡಬಲ್ಲದು.
ಶ್ರೀ ಆರ್. ಸಿ. ಭೂಸನೂರಮಠ, ಎಂ.ಎ., ರಾ. ಭಾ. ವಿಶಾರದ.

೨) ಹಿಂದಿ ಕಲಿಯಲೆತ್ನಿಸುವ ಸಣ್ಣವರಿಗೂ ದೊಡ್ಡವರಿಗೂ ಈ ಪುಸ್ತಕವು ತುಂಬ ಉಪಯುಕ್ತವಾಗಿದೆ.
ಪ್ರೊ. ಸರೋಜಿನಿ ಮಹಿಷಿ, ಎಂ.ಎ., ಎಲ್ಎಲ್. ಬಿ., ರಾ. ಭಾ. ರತ್ನ ಜನತಾ ಕಾಲೇಜ, ಧಾರವಾಡ.

೩) ಪ್ರಾಥಮಿಕ ಶಾಲೆಗಳ ವಿದ್ಯಾರ್ಥಿ ಮತ್ತು ಶಿಕ್ಷಕರಿಗೆ ಉಪಯುಕ್ತವಾಗುವ ರೀತಿಯಲ್ಲಿ ಬರೆದಿದ್ದಾರೆ.
ಶ್ರೀ ಎ. ವ್ಹಿ. ಕೌದಿ, ಬಿ. ಎ., ಕಾರ್ಯಾಧ್ಯಕ್ಷ, ಕರ್ನಾಟಕ ಪ್ರಾಂತೀಯ ಹಿಂದಿ ಪ್ರಚಾರ ಸಭಾ, ಧಾರವಾಡ.

೪) ಮಕ್ಕಳ ಮಾತೃಭಾಷೆಯ ವ್ಯಾಕರಣ ಭಾಗಕ್ಕೆ ಹೊಂದಿಕೆಯಾಗಿ ಇದನ್ನು ಸಾಗಿಸಿದ್ದು, ಈ ಹೊತ್ತಿಗೆಯ ವೈಶಿಷ್ಟ್ಯವಾಗಿದೆ. ಶ್ರೀ ಎಸ್. ಎಮ್. ಮೇಗೂರ, ಬಿ.ಎ., ಬಿ.ಟಿ., ಡಿ.ಪಿ.ಈಡಿ., ಡಿ.ಬಿ.ಈ., ಎ.ಓ, ಮು. ಸ್ಕೂಲ ಬೋರ್ಡ, ಧಾರವಾಡ.

೫) ಹಿಂದಿ ಕಲಿಯುವವರಿಗೆ ಕೈ ದೀವಿಗೆಯಾಗಿದೆ! ಶ್ರೀ ಎಸ್. ವಾಯ್. ಶೀಲವಂತ, ಬಿ.ಎ., ಎಂ.ಈಡಿ., ಡಿ.ಪಿ.ಈಡಿ ,ಡಿ.ಬಿ.ಈ.. ರಾ. ಭಾ. ವಿಶಾರದ, ಎ.ಡಿ.ಇ.ಆಯ್., ಧಾರವಾಡ.

ಮೊದಲನೆಯ ಮುದ್ರಣದ ಪ್ರತಿಗಳು ಬಹಳೇ ಕಡಿಮೆ ಉಳಿದಿವೆ. ತಡಮಾಡುವವರು ಎರಡನೆಯ ಮುದ್ರಣದ ಹಾದಿ ನೋಡುವ ಪ್ರಸಂಗ ಬರುವದು. ಕೂಡಲೇ ಬರೆಯಿರಿ. ಯೋಗ್ಯ ಕಮೀಶನ್ ಕೊಡಲಾಗುವದು.

ಅಧಿಕೃತ ಮಾರಾಟಗಾರರು:— ಗಿರಿಜಾಧವ ಬಿಳಲದವರ ವಿರಕ್ತಮಠಗಲ್ಲಿ, ಧಾರವಾಡ

ಇನ್ನೆಲ್ಲಿಯೂ ವಿಚಾರಿಸಿರಿ: (೧) **ಭಾರತ ಬುಕ್ ಡಿಪೋ, ಧಾರವಾಡ** (೨) **ಜೀವನಕಟ್ಟಿ ಬುಕ್ ಡಿಪೋ, ಹಾವೇರಿ**

ಪ್ರಾಥಮಿಕ ಶಿಕ್ಷಕರ ತರಬೇತಿ ಸಂಸ್ಥೆಗಳ ಹೊಸ ಅಭ್ಯಾಸ ಪತ್ರಿಕೆ

ಲೇಖಕರು:— ಶ್ರೀ ಎಚ್. ಜಿ. ಜೋಶಿ

ರಾಜ್ಯದಲ್ಲಿ ಶಿಕ್ಷಣ ಸಮೀಕರಣ ಕಾರ್ಯವು ಎಲ್ಲ ಹಂತಗಳಲ್ಲಿಯೂ ನಡೆದುದು ಸರ್ವಶ್ರುತವಿದೆ. ಪ್ರಾಥಮಿಕ ಶಿಕ್ಷಣವು ಏಳು ವರುಷದ್ದಿರಬೇಕೆಂದು ನಿರ್ಣೀತವಾಗಿ ರಾಜ್ಯಕ್ಕೆಲ್ಲ ಏಕರೂಪವಾದ ಅಭ್ಯಾಸ ಪತ್ರಿಕೆಯು ಹಂತ ಹಂತಗಳಲ್ಲಿ ರಚಿತವಾಗಿ ಬಳಿಕೆಯಲ್ಲಿ ಬರುತ್ತ ನಡೆದಿದೆ. ಅದೇ ರೀತಿಯಲ್ಲಿ ಪ್ರಾಥಮಿಕ ಶಿಕ್ಷಕರ ತರಬೇತಿ ಕ್ರಮದಲ್ಲಿಯೂ ಕೂಡ ರಾಜ್ಯದ ತುಂಬೆಲ್ಲ ಏಕರೂಪವಾದ ಅಭ್ಯಾಸ ಕ್ರಮವಿರಬೇಕೆಂದು ಗೊತ್ತು ಮಾಡಿ ಸರಕಾರದವರು ಇದೇ ವರುಷದಿಂದಲೇ ಹೊಸ ಅಭ್ಯಾಸ ಪತ್ರಿಕೆಯನ್ನು ಬಳಿಕೆಯಲ್ಲಿ ತಂದಿದ್ದಾರೆ. ಇಲ್ಲಿಯ ವರೆಗೆ ರಾಜ್ಯದ ಬೇರೆ ಬೇರೆ ಭಾಗಗಳಲ್ಲಿ ಬೇರೆ ಬೇರೆ ತರಬೇತಿಯ ಕ್ರಮ ಹಾಗು ಭಿನ್ನ ಭಿನ್ನ ಅವಧಿಗಳ ತರಬೇತಿಯು ಬಳಿಕೆಯಲ್ಲಿದ್ದಿತು. ಇದೆ (೧೯೬೦) ಜೂನ ತಿಂಗಳಿಂದ ಏಕರೂಪತೆಯನ್ನು ಸಾಧಿಸಲು ಒಂದು ಹೊಸ ಅಭ್ಯಾಸ ಪತ್ರಿಕೆಯನ್ನು ಆಚರಣೆಯಲ್ಲಿ ತರಲಾಗಿದೆ.

ಎರಡು ವಿಧದ ತರಬೇತಿಗಳು ಸದ್ಯಕ್ಕೆ ನಡೆಯಬೇಕೆಂದು ಗೊತ್ತುಪಡಿಸಲಾಗಿದೆ. ಮ್ಯಾಟ್ರಿಕ್, ಎಸ್. ಎಸ್. ಸಿ., ಎಸ್. ಎಸ್. ಎಲ್. ಸಿ. ಇಲ್ಲವೆ ತತ್ಸಮ ಪರೀಕ್ಷೆಯನ್ನು ಪಾಸಾಗಿ ಪ್ರಾಥಮಿಕ ಶಿಕ್ಷಕರಾಗ ಬಯಸುವವರಿಗೆ; ಇಲ್ಲವೇ ಈಗಾಗಲೆ ಶಿಕ್ಷಕರಾಗಿದ್ದು ಆ ಅರ್ಹತೆ (ಎಸ್.ಎಸ್.ಸಿ) ಪಡೆದವರಿಗೆ ೧ ವರುಷ ತರಬೇತಿಯ ಒಂದು ಕ್ರಮವು ಹಾಗು ಕೇವಲ ಮುಲ್ಕಿ ಪರೀಕ್ಷೆ ಇಲ್ಲವೆ ಎಸ್.ಎಸ್.ಸಿ. ಇಲ್ಲದೆ ಇರುವಂಥವರಿಗೆ ೨ ವರುಷಗಳ ತರಬೇತಿಯ ಮತ್ತೊಂದು ರೀತಿ—ಹೀಗೆ ಎರಡು ಬಗೆಯ ತರಬೇತಿಯ ವಿಧಾನಗಳು ಇದೇ ವರುಷದಿಂದ(೧೯೬೦)ಬಳಿಕೆಯಲ್ಲಿ ಬಂದಿವೆ. ಇಲ್ಲಿ ಎಸ್.ಎಸ್.ಸಿ ಇಲ್ಲವೆ ತತ್ಸಮಾನ ಅರ್ಹತೆ ಪಡೆದಂಥವರಿಗಾಗಿ ಇದ್ದ ೧ ವರುಷ ಕಾಲಾವಧಿಯ ಅಭ್ಯಾಸ ಪತ್ರಿಕೆಯ ಸ್ಥೂಲ ಪರಿಚಯವನ್ನು ಮಾಡಿಕೊಡಲಾಗುವದು.

ಗುಂಪುಗಳು

೧ನೆಯ ಗುಂಪು ಸಾಂಸ್ಥಿಕ ಜೀವನ ೧೦೦ ಗುಣಗಳು
೨ನೆಯ ಗುಂಪು ಶಿಕ್ಷಣ ವಿಭಾಗ ೪೫೦ ,,
೩ನೆಯ ಗುಂಪು ಮೂಲೋದ್ಯೋಗ ೩೦೦ ,,
೪ನೆಯ ಗುಂಪು ಭಾಷೆ (ವಿಷಯ) ೫೦ ,,
೯೦೦
೫ನೆಯ ಗುಂಪು ಡ್ರಾಯಿಂಗ, ಶಾರೀರಿಕ, ಹಾಗು ಸಂಗೀತ.

ಈ ರೀತಿಯಾಗಿ ಐದು ಗುಂಪುಗಳನ್ನಾಗಿ ಮಾಡಲಾಗಿ ಈ ಐದು ಗುಂಪುಗಳಲ್ಲಿ ೫ನೆಯ ಗುಂಪಿನಲ್ಲಿರುವ ಡ್ರಾಯಿಂಗಾಯನ, ಹಾಗು ಶಾರೀರಿಕ ಶಿಕ್ಷಣ ಈ ಮೂರು ವಿಷಯಗಳು ಪರೀಕ್ಷೆಗಾಗಿ ಇರುವದಿಲ್ಲ. ಆದರೆ ಆ ಆ ವಿಷಯಗಳಿಗೆ ಸಂಬಂಧಿಸಿದ ಉಪಾಧ್ಯಾಯರು, ಪ್ರತಿಯೊಬ್ಬ ಶಿಕ್ಷಕ ವಿದ್ಯಾರ್ಥಿಯೂ ಆ ಆ ವಿಷಯಗಳಲ್ಲಿ ಸಮಾಧಾನಕರವಾಗಿ ತರಬೇತಿಯನ್ನು ಹೊಂದಿರುವನೆಂಬುದನ್ನು ದೃಢಪಡಿಸಬೇಕಾಗುತ್ತದೆ. ಇನ್ನುಳಿದ ನಾಲ್ಕು ಗುಂಪುಗಳೂ ಪರೀಕ್ಷೆಗಾಗಿ ಇದ್ದು ಎಲ್ಲವುಗಳಲ್ಲಿಯೂ ಯೋಗ್ಯ ತರಬೇತಿ ಪಡೆದು ಯಶಸ್ಸು ಗಳಿಸಬೇಕಾಗುವದು.

ಸಾಂಘಿಕ ಜೀವನದಲ್ಲಿ ಮಾಡಬೇಕಾದ ಕಾರ್ಯಕಲಾಪಗಳನ್ನು ನಿರ್ದೇಶಿಸಲಾಗಿದೆ. ಶಿಕ್ಷಣ ವಿಭಾಗವು (ಅ) ತಾತ್ವಿಕ (ಬ) ಪ್ರಾಯೋಗಿಕವೆಂಬ ಎರಡು ವಿಭಾಗಗಳುಂಟು.

ತಾತ್ವಿಕದಲ್ಲಿ ೩ ಪೇಪರುಗಳು ಉಂಟು

	ಗುಣಗ
೧) ಶಿಕ್ಷಣ ತತ್ವಗಳು ಹಾಗು ಮನಶ್ಶಾಸ್ತ್ರ	೧೦
೨) ಶಾಲಾಡಳಿತೆ ಹಾಗು ಸಂಘಟನೆ	೧೦
೩) ಸಾಮಾನ್ಯ ಹಾಗು ವಿಶೇಷವಾದ ಕಲಿಸುವ ಪದ್ಧತಿಗಳು.	೧೦

ಈ ರೀತಿಯಾಗಿ ೩ ಕಾಗದಗಳುಂಟು.

ಪ್ರಾಯೋಗಿಕನೆಂದು ಈ ರೀತಿಯಾಗಿ ಶಿಕ್ಷಕ ವಿದ್ಯಾರ್ಥಿ ಮಾಡಬೇಕಾಗುವದು.

ಅ) ೧೫ ಸಮವಾಯ ಪದ್ಧತಿಯ ಪಾಠಗಳನ್ನು **ಕೊಡಬೇ**
ಬ) ೧೫ ವರ್ಗ ಪಾಠಗಳನ್ನು **ನಿರೀಕ್ಷಿಸಬೇಕು.**
ಕ) ೬ ಮಾದರಿ ಪಾಠಗಳ ನಿರೀಕ್ಷಣೆ
ಡ) ೩ ಬಹು ವರ್ಗದ ಪಾಠಗಳನ್ನು **ಕೊಡಬೇ**
ಇ) ಒಂದುವಾರ ಸಂತತ ಪಾಠಕೊಡುವದು

ಮೂಲೋದ್ಯೋಗದಲ್ಲಾದರೂ ಕೂಡ (ಅ) ತಾತ್ವಿಕ (ಬ) ಪ್ರಾಯೋಗಿಕವೆಂದು ಎರಡು ವಿಭಾಗಗಳನ್ನು ಮಾಡಲಾಗಿದೆ. ಶಿಕ್ಷಕ ವಿದ್ಯಾರ್ಥಿಗಳು ಒಂದು ಮುಖ್ಯವಾದ ಮೂಲೋದ್ಯೋಗವನ್ನು ಮಾಡಬೇಕಾಗುವದಲ್ಲದೆ ಎರಡು ಉಪ ಮೂಲೋದ್ಯೋಗಗಳನ್ನೂ ಕೈಕೊಳ್ಳಬೇಕಾಗುವದು. ಅಭ್ಯಾಸ ಪತ್ರಿಕೆಯಲ್ಲಿ ಮುಖ್ಯ ಮೂಲೋದ್ಯೋಗಗಳಾವವು; ಉಪಮೂಲೋದ್ಯೋಗಗಳಾವವು— ಎಂಬುದನ್ನು ವಿವರವಾಗಿ ಕಾಣಿಸಲಾಗಿದೆಯಲ್ಲದೆ; ಆ ಆ ಮೂಲೋದ್ಯೋಗಗಳಲ್ಲಿ ಮುಟ್ಟಬೇಕಾದ ಪ್ರಮಾಣದ ಗುರಿಯನ್ನೂ ಕಾಣಿಸಲಾಗಿದೆ. ವರುಷದ ಕೊನೆಗೆ ಪ್ರಾಯೋಗಿಕ ಪರೀಕ್ಷೆಯೂ ಉಂಟು.

[ಮುಂದುವರಿಯುವದು]

ಇಂತಹದು ಇನ್ನೊಂದಿಲ್ಲ

ಆದರ್ಶ ಹಿಂದಿ-ಕನ್ನಡ ವ್ಯಾಕರಣ 1 ಬೆಲೆ: ೧ ರೂಪಾಯಿ

ಲೇ.: ಎ. ಎಚ್. ಹುಂಡೇಕಾರ ಮತ್ತು ಎಮ್. ಎಚ್. ಬೆಳಲದವರ

ಪ್ರಾಥಮಿಕ ಶಾಲೆಗಳ ೫, ೬ ಮತ್ತು ೭ನೆಯ ಇಯತ್ತೆಗಳ ಹಿಂದಿ ಅಭ್ಯಾಸ ಪತ್ರಿಕೆಗನುಸಾರವಾಗಿ ಬರೆಯಲ್ಪಟ್ಟ ಪ್ರಥಮ ಹಿಂದಿ-ಕನ್ನಡ ವ್ಯಾಕರಣ ಪುಸ್ತಕ!

ಶಿಕ್ಷಕರಿಗೂ ಹಾಗು ವಿದ್ಯಾರ್ಥಿಗಳಿಗೂ ಸುಗಮವಾಗಿ ತಿಳಿಯುವಂತೆ ವ್ಯಾಕರಣದ ನಿನಿಧ ಅಂಗಗಳನ್ನು ಯೋಗ್ಯ ಉದಾಹರಣೆಗಳೊಂದಿಗೆ ನಿನೇಚಿಸಲಾಗಿದೆ. ಇದರ ಬಗ್ಗೆ ಕೆಳಗಿನ ಮಹನೀಯರು ಈ ರೀತಿ ಅಭಿಪ್ರಾಯ ಪಟ್ಟಿದ್ದಾರೆ:—

೧) ವಿದ್ಯಾರ್ಥಿಗಳಿಗೆ ಹಾಗು ಶಿಕ್ಷಕರಿಗೆ ಸಮರ್ಪಕವಾದ ರೀತಿಯಲ್ಲಿ ಮಾರ್ಗದರ್ಶನ ಮಾಡಬಲ್ಲದು.
ಶ್ರೀ ಆರ್. ಸಿ. ಭೂಸನೂರಮಠ, ಎಂ.ಎ., ರಾ. ಭಾ. ವಿಶಾರದ.

೨) ಹಿಂದಿ ಕಲಿಯಲೆತ್ನಿಸುವ ಸಣ್ಣವರಿಗೂ ದೊಡ್ಡವರಿಗೂ ಈ ಪುಸ್ತಕವು ತುಂಬ ಉಪಯುಕ್ತವಾಗಿದೆ.
ಪ್ರೊ. ಸರೋಜಿನಿ ಮಹಿಷಿ, ಎಂ.ಎ., ಎಲ್‌ಎಲ್. ಬಿ., ರಾ. ಭಾ. ರತ್ನ ಜನತಾ ಕಾಲೇಜ, ಧಾರವಾಡ.

೩) ಪ್ರಾಥಮಿಕ ಶಾಲೆಗಳ ವಿದ್ಯಾರ್ಥಿ ಮತ್ತು ಶಿಕ್ಷಕರಿಗೆ ಉಪಯುಕ್ತವಾಗುವ ರೀತಿಯಲ್ಲಿ ಬರೆದಿದ್ದಾರೆ.
ಶ್ರೀ ಎ. ವ್ಹಿ. ಕೌದಿ, ಬಿ. ಎ., ಕಾರ್ಯಾಧ್ಯಕ್ಷ, ಕರ್ನಾಟಕ ಪ್ರಾಂತೀಯ ಹಿಂದಿ ಪ್ರಚಾರ ಸಭಾ, ಧಾರವಾಡ.

೪) ಮಕ್ಕಳ ಮಾತೃಭಾಷೆಯ ವ್ಯಾಕರಣ ಭಾಗಕ್ಕೆ ಹೊಂದಿಕೆಯಾಗಿ ಇದನ್ನು ಸಾಗಿಸಿದ್ದು, ಈ ಹೊತ್ತಿಗೆಯ ವೈಶಿಷ್ಟ್ಯವಾಗಿದೆ. ಶ್ರೀ ಎಸ್. ಎಮ್. ಮೇಗೂರ, ಬಿ.ಎ., ಬಿ.ಟಿ., ಡಿ.ಪಿ.ಈಡಿ., ಡಿ.ಬಿ.ಈ., ಎ.ಒ, ಮು. ಸ್ಕೂಲ ಬೋರ್ಡ, ಧಾರವಾಡ.

೫) ಹಿಂದಿ ಕಲಿಯುವವರಿಗೆ ಕೈ ದೀವಿಗೆಯಾಗಿದೆ! ಶ್ರೀ ಎಸ್. ವಾಯ್. ಶೀಲವಂತ, ಬಿ.ಎ., ಎಂ.ಈಡಿ., ಡಿ.ಪಿ.ಈಡಿ, ಡಿ.ಬಿ.ಈ.. ರಾ. ಭಾ. ವಿಶಾರದ, ಎ.ಡಿ.ಇ.ಆಯ್., ಧಾರವಾಡ.

ಮೊದಲನೆಯ ಮುದ್ರಣದ ಪ್ರತಿಗಳು ಬಹಳೇ ಕಡಿಮೆ ಉಳಿದಿವೆ. ತಡಮಾಡುವವರು ಎರಡನೆಯ ಮುದ್ರಣದ ಹಾದಿಯುವ ಪ್ರಸಂಗ ಬರುವದು. ಕೂಡಲೇ ಬರೆಯಿರಿ. ಯೋಗ್ಯ ಕಮೀಶನ್ ಕೊಡಲಾಗುವದು.

ಅಧಿಕೃತ ಮಾರಾಟಗಾರರು:— ಗಿರಿಜಾಧವ ಬೆಳಲದವರ ವಿರಕ್ತಮಠಗಲ್ಲಿ, ಧಾರವಾಡ

ಲ್ಲಿಯೂ ವಿಚಾರಿಸಿರಿ: (೧) **ಭಾರತ ಬುಕ್ ಡಿಪೋ, ಧಾರವಾಡ** (೨) **ಜೀಕನಕಟ್ಟಿ ಬುಕ್ ಡಿಪೋ, ಹಾವೇರಿ**

ಪ್ರಾಥಮಿಕ ಶಿಕ್ಷಕರ ತರಬೇತಿ ಸಂಸ್ಥೆಗಳ ಹೊಸ ಅಭ್ಯಾಸ ಪತ್ರಿ

ಲೇಖಕರು:— ಶ್ರೀ ಎಚ್. ಜಿ. ಜೋಶಿ

ರಾಜ್ಯದಲ್ಲಿ ಶಿಕ್ಷಣ ಸಮೀಕರಣ ಕಾರ್ಯವು ಎಲ್ಲ ಹಂತಗಳಲ್ಲಿಯೂ ನಡೆದುದು ಸರ್ವಶ್ರುತವಿದೆ. ಪ್ರಾಥಮಿಕ ಶಿಕ್ಷಣವು ಏಳು ವರುಷದ್ದಿರಬೇಕೆಂದು ನಿರ್ಣೀತವಾಗಿ ರಾಜ್ಯಕ್ಕೆಲ್ಲ ಏಕರೂಪವಾದ ಅಭ್ಯಾಸ ಪತ್ರಿಕೆಯು ಹಂತ ಹಂತಗಳಲ್ಲಿ ರಚಿತವಾಗಿ ಬಳಿಕೆಯಲ್ಲಿ ಬರುತ್ತ ನಡೆದಿದೆ. ಅದೇ ರೀತಿಯಲ್ಲಿ ಪ್ರಾಥಮಿಕ ಶಿಕ್ಷಕರ ತರಬೇತಿ ಕ್ರಮದಲ್ಲಿಯೂ ಕೂಡ ರಾಜ್ಯದ ತುಂಬೆಲ್ಲ ಏಕರೂಪವಾದ ಅಭ್ಯಾಸ ಕ್ರಮವಿರಬೇಕೆಂದು ಗೊತ್ತು ಮಾಡಿ ಸರಕಾರದ ವರು ಇದೇ ವರುಷದಿಂದಲೇ ಹೊಸ ಅಭ್ಯಾಸ ಪತ್ರಿಕೆಯನ್ನು ಬಳಿಕೆಯಲ್ಲಿ ತಂದಿದ್ದಾರೆ. ಇಲ್ಲಿಯ ವರೆಗೆ ರಾಜ್ಯದ ಬೇರೆ ಬೇರೆ ಭಾಗಗಳಲ್ಲಿ ಬೇರೆ ಬೇರೆ ತರಬೇತಿಯ ಕ್ರಮ ಹಾಗು ಭಿನ್ನ ಭಿನ್ನ ಅವಧಿಗಳ ತರಬೇತಿಯು ಬಳಿಕೆಯಲ್ಲಿದ್ದಿತು. ಇದೆ (೧೯೬೦) ಜೂನ ತಿಂಗಳಿಂದ ಏಕರೂಪತೆಯನ್ನು ಸಾಧಿಸಲು ಒಂದು ಹೊಸ ಅಭ್ಯಾಸ ಪತ್ರಿಕೆಯನ್ನು ಆಚರಣೆಯಲ್ಲಿ ತರಲಾಗಿದೆ.

ಎರಡು ವಿಧದ ತರಬೇತಿಗಳು ಸದ್ಯಕ್ಕೆ ನಡೆಯಬೇಕೆಂದು ಗೊತ್ತುಪಡಿಸಲಾಗಿದೆ. ಮ್ಯಾಟ್ರಿಕ್, ಎಸ್. ಎಸ್. ಸಿ., ಎಸ್. ಎಸ್. ಎಲ್. ಸಿ. ಇಲ್ಲವೆ ತತ್ಸಮ ಪರೀಕ್ಷೆಯನ್ನು ಪಾಸಾಗಿ ಪ್ರಾಥಮಿಕ ಶಿಕ್ಷಕರಾಗ ಬಯಸುವವರಿಗೆ; ಇಲ್ಲವೇ ಈಗಾಗಲೆ ಶಿಕ್ಷಕರಾಗಿದ್ದು ಆ ಅರ್ಹತೆ (ಎಸ್.ಎಸ್.ಸಿ) ಪಡೆದವರಿಗೆ ೧ ವರುಷ ತರಬೇತಿಯ ಒಂದು ಕ್ರಮವು ಹಾಗು ಕೇವಲ ಮುಲ್ಕಿ ಪರೀಕ್ಷೆ ಇಲ್ಲವೆ ಎಸ್.ಎಸ್.ಸಿ. ಇಲ್ಲದೆ ಇರುವಂಥವರಿಗೆ ೨ ವರುಷಗಳ ತರಬೇತಿಯ ಮತ್ತೊಂದು ರೀತಿ-ಹೀಗೆ ಎರಡು ಬಗೆಯ ತರಬೇತಿಯ ವಿಧಾನಗಳು ಇದೇ ವರುಷದಿಂದ(೧೯೬೦)ಬಳಿಕೆಯಲ್ಲಿ ಬಂದಿವೆ. ಇಲ್ಲಿ ಎಸ್.ಎಸ್.ಸಿ ಇಲ್ಲವೆ ತತ್ಸಮಾನ ಅರ್ಹತೆ ಪಡೆದಂಥವರಿಗಾಗಿ ಇದ್ದ ೧ ವರುಷ ಕಾಲಾವಧಿಯ ಅಭ್ಯಾಸ ಪತ್ರಿಕೆಯ ಸ್ಥೂಲ ಪರಿಚಯವನ್ನು ಮಾಡಿಕೊಡಲಾಗುವದು.

ಗುಂಪುಗಳು

೧ನೆಯ ಗುಂಪು ಸಾಂಘಿಕ ಜೀವನ ೧೦೦ ಗುಣಗಳು
೨ನೆಯ ಗುಂಪು ಶಿಕ್ಷಣ ವಿಭಾಗ ೪೫೦ ,,
೩ನೆಯ ಗುಂಪು ಮೂಲೋದ್ಯೋಗ ೩೦೦ ,,
೪ನೆಯ ಗುಂಪು ಭಾಷೆ (ವಿಷಯ) ೫೦ ,,
೩೫೦
೫ನೆಯ ಗುಂಪು ಡ್ರಾಯಿಂಗ,ಶಾರೀರಿಕ, ಹಾಗು ಸಂಗೀತ.

ಈ ರೀತಿಯಾಗಿ ಐದು ಗುಂಪುಗಳನ್ನಾಗಿ ಮಾಡಲಾಗಿ ಈ ಐದು ಗುಂಪುಗಳಲ್ಲಿ ೫ನೆಯ ಗುಂಪಿನಲ್ಲಿರುವ ಡ್ರಾಯಿಂಗಾಯನ, ಹಾಗು ಶಾರೀರಿಕ ಶಿಕ್ಷಣ ಈ ಮೂರು ವಿಷಯಗಳು ಪರೀಕ್ಷೆಗಾಗಿ ಇರುವದಿಲ್ಲ. ಆದರೆ ಆ ಆ ವಿಷಯಗಳಿಗೆ ಸಂಬಂಧಿಸಿದ ಉಪಾಧ್ಯಾಯರು, ಪ್ರತಿಯೊಬ್ಬ ಶಿಕ್ಷಕ ವಿದ್ಯಾರ್ಥಿಯೂ ಆ ಆ ವಿಷಯಗಳಲ್ಲಿ ಸಮಾಧಾನಕರವಾಗಿ ತರಬೇತಿಯನ್ನು ಹೊಂದಿರುವನೆಂಬುದನ್ನು ದೃಢಪಡಿಸಬೇಕಾಗುತ್ತದೆ. ಇನ್ನುಳಿದ ನಾಲ್ಕು ಗುಂಪುಗಳೂ ಪರೀಕ್ಷೆಗಾಗಿ ಇದ್ದು ಎಲ್ಲವುಗಳಲ್ಲಿಯೂ ಯೋಗ್ಯ ತರಬೇತಿ ಪಡೆದು ಯಶಸ್ಸು ಗಳಿಸಬೇಕಾಗುವದು.

ಸಾಂಘಿಕ ಜೀವನದಲ್ಲಿ ಮಾಡಬೇಕಾದ ಕಾರ್ಯಕಲಾಪಗಳನ್ನು ನಿರ್ದೇಶಿಸಲಾಗಿದೆ. ಶಿಕ್ಷಣ ವಿಭಾಗವು (ಅ) ತಾತ್ವಿಕ (ಬ) ಪ್ರಾಯೋಗಿಕವೆಂಬ ಎರಡು ವಿಭಾಗಗಳುಂಟು.

ತಾತ್ವಿಕದಲ್ಲಿ ೩ ಪೇಪರುಗಳು ಉಂಟು

	ಗುಣಗ
೧) ಶಿಕ್ಷಣ ತತ್ವಗಳು ಹಾಗು ಮನಶ್ಶಾಸ್ತ್ರ	೧೦೦
೨) ಶಾಲಾಡಳಿತೆ ಹಾಗು ಸಂಘಟನೆ	೧೦೦
೩) ಸಾಮಾನ್ಯ ಹಾಗು ವಿಶೇಷವಾದ ಕಲಿಸುವ ಪದ್ಧತಿಗಳು.	೧೦೦

ಈ ರೀತಿಯಾಗಿ ೩ ಕಾಗದಗಳುಂಟು.

ಪ್ರಾಯೋಗಿಕವೆಂದು ಈ ರೀತಿಯಾಗಿ ಶಿಕ್ಷಕ ವಿದ್ಯಾರ್ಥಿಗ ಮಾಡಬೇಕಾಗುವದು.

ಅ) ೧೫ ಸಮವಾಯ ಪದ್ಧತಿಯ ಪಾಠಗಳನ್ನು ಕೊಡಬೇಕ
ಬ) ೧೫ ವರ್ಗ ಪಾಠಗಳನ್ನು ನಿರೀಕ್ಷಿಸಬೇಕು.
ಕ) ೬ ಮಾದರಿ ಪಾಠಗಳ ನಿರೀಕ್ಷಣೆ
ಡ) ೩ ಬಹು ವರ್ಗದ ಪಾಠಗಳನ್ನು ಕೊಡಬೇಕ
ಇ) ಒಂದುವಾರ ಸಂತತ ಪಾಠಕೊಡುವುದು.

ಮೂಲೋದ್ಯೋಗದಲ್ಲಾದರೂ ಕೂಡ (ಅ) ತಾತ್ವಿಕ (ಬ) ಪ್ರಾಯೋಗಿಕವೆಂದು ಎರಡು ವಿಭಾಗಗಳನ್ನು ಮಾಡಲಾಗಿದೆ. ಶಿಕ್ಷಕ ವಿದ್ಯಾರ್ಥಿಗಳು ಒಂದು ಮುಖ್ಯವಾದ ಮೂಲೋದ್ಯೋಗವನ್ನು ಮಾಡಬೇಕಾಗುವದಲ್ಲದೆ ಎರಡು ಉಪ ಮೂಲೋದ್ಯೋಗಗಳನ್ನೂ ಕೈಕೊಳ್ಳಬೇಕಾಗುವದು. ಅಭ್ಯಾಸ ಪತ್ರಿಕೆಯಲ್ಲಿ ಮುಖ್ಯ ಮೂಲೋದ್ಯೋಗಗಳಾವವು; ಉಪಮೂಲೋದ್ಯೋಗಗಳಾವವು— ಎಂಬುದನ್ನು ವಿವರವಾಗಿ ಕಾಣಿಸಲಾಗಿದೆಯಲ್ಲದೆ; ಆ ಆ ಮೂಲೋದ್ಯೋಗಗಳಲ್ಲಿ ಮುಟ್ಟಬೇಕಾದ ಪ್ರಮಾಣದ ಗುರಿಯನ್ನೂ ಕಾಣಿಸಲಾಗಿದೆ. ವರುಷದ ಕೊನೆಗೆ ಪ್ರಾಯೋಗಿಕ ಪರೀಕ್ಷೆಯೂ ಉಂಟು.

[ಮುಂದುವರಿಯುವದು]

ಇಂತಹದು ಇನ್ನೊಂದಿಲ್ಲ

ಆದರ್ಶ ಹಿಂದಿ-ಕನ್ನಡ ವ್ಯಾಕರಣ] ಬೆಲೆ: ೧ ರೂಪಾಯಿ

ಲೇ.: ಎ. ಎಚ್. ಹುಂಡೇಕಾರ ಮತ್ತು ಎಮ್. ಎಚ್. ಬೆಳಲದವರ

ಪ್ರಾಥಮಿಕ ಶಾಲೆಗಳ ೫, ೬ ಮತ್ತು ೭ನೆಯ ಇಯತ್ತೆಗಳ ಹಿಂದಿ ಅಭ್ಯಾಸ ಪತ್ರಿಕೆಗನುಸಾರವಾಗಿ ಬರೆಯಲ್ಪಟ್ಟ ಪ್ರಥಮ ಹಿಂದಿ-ಕನ್ನಡ ವ್ಯಾಕರಣ ಪುಸ್ತಕ!

ಶಿಕ್ಷಕರಿಗೂ ಹಾಗು ವಿದ್ಯಾರ್ಥಿಗಳಿಗೂ ಸುಗಮವಾಗಿ ತಿಳಿಯುವಂತೆ ವ್ಯಾಕರಣದ ವಿವಿಧ ಅಂಗಗಳನ್ನು ಯೋಗ್ಯ ದಾಹರಣೆಗಳೊಂದಿಗೆ ವಿವೇಚಿಸಲಾಗಿದೆ. ಇದರ ಬಗ್ಗೆ ಕೆಳಗಿನ ಮಹನೀಯರು ಈ ರೀತಿ ಅಭಿಪ್ರಾಯಪಟ್ಟಿದ್ದಾರೆ:—

೧) ವಿದ್ಯಾರ್ಥಿಗಳಿಗೆ ಹಾಗು ಶಿಕ್ಷಕರಿಗೆ ಸಮರ್ಪಕವಾದ ರೀತಿಯಲ್ಲಿ ಮಾರ್ಗದರ್ಶನ ಮಾಡಬಲ್ಲದು.
ಶ್ರೀ ಆರ್. ಸಿ. ಭೂಸನೂರಮಠ, ಎಂ.ಎ., ರಾ. ಭಾ. ವಿಶಾರದ.

೨) ಹಿಂದಿ ಕಲಿಯಲೆತ್ನಿಸುವ ಸಣ್ಣವರಿಗೂ ದೊಡ್ಡವರಿಗೂ ಈ ಪುಸ್ತಕವು ತುಂಬ ಉಪಯುಕ್ತವಾಗಿದೆ.
ಪ್ರೊ. ಸರೋಜಿನಿ ಮಹಿಷಿ, ಎಂ.ಎ., ಎಲ್‌ಎಲ್. ಬಿ., ರಾ. ಭಾ. ರತ್ನ ಜನತಾ ಕಾಲೇಜ, ಧಾರವಾಡ.

೩) ಪ್ರಾಥಮಿಕ ಶಾಲೆಗಳ ವಿದ್ಯಾರ್ಥಿ ಮತ್ತು ಶಿಕ್ಷಕರಿಗೆ ಉಪಯುಕ್ತವಾಗುವ ರೀತಿಯಲ್ಲಿ ಬರೆದಿದ್ದಾರೆ.
ಶ್ರೀ ಎ. ವ್ಹಿ. ಕೌದಿ, ಬಿ. ಎ., ಕಾರ್ಯಾಧ್ಯಕ್ಷ, ಕರ್ನಾಟಕ ಪ್ರಾಂತೀಯ ಹಿಂದಿ ಪ್ರಚಾರ ಸಭಾ, ಧಾರವಾಡ.

೪) ಮಕ್ಕಳ ಮಾತೃಭಾಷೆಯ ವ್ಯಾಕರಣ ಭಾಗಕ್ಕೆ ಹೊಂದಿಕೆಯಾಗಿ ಇದನ್ನು ಸಾಗಿಸಿದ್ದು, ಈ ಹೊತ್ತಿಗೆಯ ವೈಶಿಷ್ಟ್ಯವಾಗಿದೆ. ಶ್ರೀ ಎಸ್. ಎಮ್. ಮೇಗೂರ, ಬಿ.ಎ., ಬಿ.ಟಿ., ಡಿ.ಸಿ.ಈಡಿ., ಡಿ.ಬಿ.ಈ., ಎ.ಓ., ಮು. ಸ್ಕೂಲ ಬೋರ್ಡ, ಧಾರವಾಡ.

೫) ಹಿಂದಿ ಕಲಿಯುವವರಿಗೆ ಕೈ ದೀವಿಗೆಯಾಗಿದೆ! ಶ್ರೀ ಎಸ್. ವಾಯ್. ಶೀಲವಂತ, ಬಿ.ಎ., ಎಂ.ಈಡಿ., ಡಿ.ಸಿ.ಈಡಿ ,ಡಿ.ಬಿ.ಈ., ರಾ. ಭಾ. ವಿಶಾರದ, ಎ.ಡಿ.ಇ.ಆಯ್., ಧಾರವಾಡ.

ಮೊದಲನೆಯ ಮುದ್ರಣದ ಪ್ರತಿಗಳು ಬಹಳೇ ಕಡಿಮೆ ಉಳಿದಿವೆ. ತಡಮಾಡುವವರು ಎರಡನೆಯ ಮುದ್ರಣದ ಹಾದಿಯುವ ಪ್ರಸಂಗ ಬರುವದು. ಕೂಡಲೇ ಬರೆಯಿರಿ. ಯೋಗ್ಯ ಕಮೀಶನ್ ಕೊಡಲಾಗುವದು.

ಅಧಿಕೃತ ಮಾರಾಟಗಾರರು:— ಗಿರಿಜಾಧವ ಬೆಳಲದವರ ವಿರಕ್ತಮಠಗಲ್ಲಿ, ಧಾರವಾಡ

ಎಲ್ಲಿಯೂ ವಿಚಾರಿಸಿರಿ: (೧) **ಭಾರತ ಬುಕ್ ಡಿಪೋ, ಧಾರವಾಡ** (೨) **ಜೀವನಕಟ್ಟಿ ಬುಕ್ ಡಿಪೋ, ಹಾವೇರಿ**

Regd. No. B. ೨೨೧೨

ಭಾಗ ೧ ಕವಿತಾ ಸಂಕಲನ ೧೫೦ **ನಾವು ನಮ್ಮವರು** ಭಾಗ ೨ ಕಥಾ ಸಂಕಲನ ೧೫೦

(ಪ್ರಾಥಮಿಕ ಶಿಕ್ಷಕ ಸಾಹಿತಿಗಳ ಫೋಟೊ ಪರಿಚಯ ಕಥೆ ಕವನಗಳು)

ಮಾನ್ಯ ಎ. ಸಿ. ದೇವೇಗೌಡರು ಶಿಕ್ಷಣಾಧಿಕಾರಿಗಳು [D. P. I.] ಮೈಸೂರು ರಾಜ್ಯ ಅವರ ಮುನ್ನುಡಿ.

ಮಾನ್ಯ ಸಿದ್ಧಯ್ಯ ಪುರಾಣಿಕ 'ಕಾವ್ಯಾನಂದ'ರು ಡೆ. ಸೆಕ್ರೆಟರಿ ಶಿಕ್ಷಣ ವಿಭಾಗ ಇವರ ಹಿನ್ನುಡಿಗಳು.

- ಕೇವಲ ೩ ರೂಪಾಯಿ [ಅಂಚೆಸೇರಿ] ವಾರ್ಷಿಕ ಚಂದಾ ಹಣದಲ್ಲಿ ೩ನೆಯ ಮಾಲೆಯ ೧-೨ನೆಯ ಕುಸುಮ ಪಡೆಯಿರಿ.
- ಪ್ರಾಥಮಿಕ ಶಿಕ್ಷಕರ ಕಥೆ, ಕಾದಂಬರಿ, ಕವನ, ನಾಟಕಾದಿ ಕೃತಿಗಳು ೪೦೦ ಪುಟಗಳಲ್ಲಿ.
- ಆಗಸ್ಟ್ ದಿಂದ ಆಗಸ್ಟ್‌ಕ್ಕೆ ಒಂದು ವರುಷ
- ಬಿಡಿ ಕುಸುಮ ಚಂದಾದಾರರಿಗೆ ೫ ಬೆಲೆಯಲ್ಲಿ [ಅಂಚೆಖರ್ಚ
- ವರ್ಷದ ಮಧ್ಯದಲ್ಲಿ ಚಂದಾದಾರರಾದರೂ ಆ ವರ್ಷದ ಎಲ್ಲ ಪುಸ್ತಕಗಳು ದೊರೆಯುವವು.
- ಇಂದೇ ಚಂದಾಹಣ ಕಳಿಸಿ ತಮ್ಮದೇ ಆದ ಶಿಕ್ಷಕರ ಬಳಗವು ಬೆಳೆಮಂತೆ ನೆರವಾಗಿರಿ. ಈ ಅಲ್ಪ ಹಣ ತಮ್ಮ ಶಿಕ್ಷಕ ಮಿತ್ರ ಏಳ್ಗೆಗೆ ಮೀಸಲು. ಗೆಳೆಯರನ್ನು, ವಾಚನಾಲಯಗಳನ್ನು ಚಂದಾದಾರರನ್ನು ಮಾಡಿ ನೆರವಾಗಿರಿ.

ವಿವರಗಳಿಗೆ: **ಭಾರತೀ ಸಾಹಿತ್ಯ ಭಂಡಾರ** ಅಂಚೆ: **ಯರನಾಳ** ಜಿಲ್ಲೆ: **ಬಿಜಾಪುರ**

ಕಲ್ಯಾಣ ಕನ್ನಡ ಗುಡಿಯ ಕಾಣಿಕೆ

ಸುವರ್ಣ ಸಂಧಿ! ಸಚಿತ್ರ ಗ್ರಂಥ!! ಸುಂದರ ಮುದ್ರಣ!!

"ಶಿಕ್ಷಣ-ಶಿಕ್ಷಕ-ದರ್ಶನ"

ಶಿಕ್ಷಕರಿಗೂ, ಶಿಕ್ಷಕ ವಿದ್ಯಾರ್ಥಿಗಳಿಗೂ, ಶಿಕ್ಷಣಾಭಿಮಾನಿಗಳಿಗೂ, ಉಪಯುಕ್ತವಾಗುವಂಥ, ತನು-ಮ ಣಿಸುವಂಥ, ಶಿಕ್ಷಣ ತಜ್ಞರಿಂದ ಪರಿಶೀಲಿಸಲ್ಪಟ್ಟಂಥ, ಭಾರತದಲ್ಲಿಯ ಮಾನ್ಯ ಮಂತ್ರಿವರ್ಯರಿಂದ, ರಾಜ್ಯಪಾಲರಿಂದ ಶಿಕ್ಷಣಾಧಿಕಾರಿಗಳಿಂದ, ಪ್ರಿನ್ಸಿಪಾಲರಿಂದ, ಸಾಹಿತಿಗಳಿಂದ ಪ್ರಶಂಸೆ ಪಡೆದ ಅಭಿಪ್ರಾಯಗಳುಳ್ಳಂಥ, ಕರ್ನಾಟ ವಿಶ್ವವಿದ್ಯಾಲಯದ ಉಪ ಕುಲಪತಿಗಳಾದ ರ್ಯಾಂಗ್ಲರ್ ಶ್ರೀ ಡಿ. ಸಿ. ಪಾವಟೆಯವರು ಮುನ್ನುಡಿ ಬರೆದಂಥ ಅಮೋಘ ಗ್ರಂಥ.

ಶ್ರೀ ನಿಂಬಾಳ ಶಿಕ್ಷಕ ದಂಪತಿಗಳಿಂದ ಸಂಗ್ರಹಿಸಲ್ಪಟ್ಟಿದೆ. ಅಖಿಲ ಕರ್ನಾಟಕದ ಗಣ್ಯ ಶಿಕ್ಷಕ-ಶಿಕ್ಷಕಿಯ ಬಣ್ಣ ಬಣ್ಣಗಳಲ್ಲಿ ೪೧ ಫೋಟೊ ಬ್ಲಾಕ್, ಲೇಖನ, ಪರಿಚಯಗಳುಳ್ಳಂಥ ೨೭೫ ಪುಟಗಳ ಅಮರ ಸಾಹಿತ್ಯ ಗ್ರಂ **ಕನ್ನಡವಲ್ಲಿ ಒಂದು ಉತ್ತಮ ಮಾದರಿಯ ಶೈಕ್ಷಣಿಕ ಉದ್ಗ್ರಂಥ.**

ದಿ. ೧೫ ಆಗಸ್ಟ್ ಸ್ವಾತಂತ್ರ್ಯ ದಿನದಂದು ಮಾನ್ಯ ಶ್ರೀ ಎ. ಎಚ್. ದಳವಾಯಿ, ಎ. ಓ. ಸಾಹೇಬರ ಅಧ್ಯಕ್ಷ ಯಲ್ಲಿ ಪ್ರೊ. ಬಿ. ಟಿ. ಸಾಸನೂರ ಅವರ ಅಮೃತಹಸ್ತದಿಂದ ಈ ಗ್ರಂಥ ಪ್ರಕಾಶನಗೊಂಡಿದೆ.

ವಿವರಗಳಿಗೆ ಇಂದೇ ಈಗಲೇ ಬರೆಯಿರಿ.

ಸಾದಾ ಪ್ರತಿ ೩ ರೂ.] ವ್ಯಾಪಾರಸ್ಥರಿಗೆ ಧಾರಾಳವಾದ ಕಮೀಷನ್. [ಸುಂದರ ಪ್ರತಿ ೪ ರೂ

ವಿಳಾಸ :- ಶ್ರೀ ನಿಂಬಾಳ ಕಲ್ಯಾಣಪ್ಪ, ಪೋಸ್ಟ:— ತಾಂಬಿ, ಜಿಲ್ಲಾ:— ವಿಜಾಪುರ.

Printed by Shri S. F. Kattimani, at Manohar Power Printing Press, Hubli.
Edited & Published by Sjts. G. M. Joshi, B. M. Shintri, S. R. Tatti & Smt. P. A. Bhaskar at the Kannada Jeevan Shikshan Office, [illegible]

ಬಿಡಿ ಪ್ರತಿ ೬ ಆಣೆ

ವಾ. ಚಂ. ೪ ರೂ.

ಜೀವನ ಶಿಕ್ಷಣ

— ಸಂಪಾದಕ ಮಂಡಲ —

ಸಂಚಾಲಕರು : ಶ್ರೀ ಎಮ್. ಜಿ. ಹಂದ್ರಾಳ, ಬಿ.ಎ.(ಆನರ್ಸ),ಎಮ್.ಈಡಿ.,ಡಿ.ಬಿ.ಈಡಿ.,
ಎಜ್ಯುಕೇಶನಲ್ ಇನಸ್ಪೆಕ್ಟರ, ಧಾರವಾಡ.

ಪ್ರಧಾನ ಸಂಪಾದಕರು : ಶ್ರೀ ಜಿ. ಎಮ್. ಜೋಶಿ,
ಪ್ರಿನ್ಸಿಪಾಲ, ಗಂಡು ಮಕ್ಕಳ ಸರಕಾರಿ ಟ್ರೇನಿಂಗ ಕಾಲೇಜ, ಧಾರವಾಡ.

— ಸದಸ್ಯರು —

ಶ್ರೀಮತಿ ಪಿ. ಎ. ಭಾಸ್ಕರ, ಲೇಡಿ ಸುಪರಿಂಟೆಂಡೆಂಟ, ಹೆಣ್ಣು ಮಕ್ಕಳ ಸರಕಾರಿ ಟ್ರೇನಿಂಗ ಕಾಲೇಜ, ಧಾರವಾಡ.

ಶ್ರೀ ಬಿ. ಎಂ. ಶಿಂತ್ರಿ, ಬಿ.ಎ.,ಬಿ.ಟಿ., ನಿವೃತ್ತ ಅಸಿಸ್ಟಂಟ ಎಜ್ಯುಕೇಶನಲ್ ಇನಸ್ಪೆಕ್ಟರ ದಕ್ಷಿಣ ಭಾಗ. (ಮುಂಬಯಿ ಕರ್ನಾಟಕ) ಹಾಗು ಗೌ. ಕಾರ್ಯದರ್ಶಿ ಮತ್ತು ಲಾಯಬ್ರೇರಿಯನ್, ಸಾಹಿತ್ಯ ಸಮಿತಿ ಲಿಂಗಾಯತ ವಿದ್ಯಾಭಿವೃದ್ಧಿ ಸಂಸ್ಥೆ, ಧಾರವಾಡ.

ಶ್ರೀ ಎಸ್. ಆರ್. ತಟ್ಟಿ, ರಿಟಾಯರ್ಡ ಪ್ರಿನ್ಸಿಪಾಲ, ಪ್ರಾಥಮಿಕ ಶಿಕ್ಷಕರ ಟ್ರೇನಿಂಗ ಕಾಲೇಜ, ನವಲಗುಂದ.

ಸಂಪುಟ ೯೬ ಜೂನ ೧೯೬೦ ಸಂಚಿಕೆ ೧

— ಪರಿವಿಡಿ —

೧	ಸಂಪಾದಕೀಯ	....	....	೧
೨	ಪಿ. ಟಿ ಸಿ. ಪರೀಕ್ಷೆ ಪರಿಣಾಮ	....	....	೪
೩	ಲಡಾಖ	....	ಶ್ರೀ 'ಬಮಶಿಂ'	೫
೪	ಆಧುನಿಕ ಸಂಗೀತ	....	ಶ್ರೀ ತಟ್ಟಿ ಶಾಮರಾಯರು	೭
೫	ಜೀ. ಶಿಕ್ಷಣ ಸಾಲೆಗಳಲ್ಲಿ ಮೂಲೋದ್ಯೋಗ ಹುಟ್ಟುವಳಿಯನ್ನು ಹೆಚ್ಚಿಸುವದು	....	ಶ್ರೀ ಗು. ಶಂ. ಗೋಕರ್ಣ	೧೦
೬	ರಾಜ್ಯ ಸರಕಾರದಿಂದ ಬಹುಮಾನ ಪಡೆದ ಶಿಕ್ಷಕ ಸಾಹಿತಿ ಶ್ರೀ ಶಂ. ಗು. ಬಿರಾದಾರರು	....	ಶ್ರೀ ಮೂರ್ತಿ ಚಿಂತಾಮಣಿ	೧೫
೭	ಪಿ. ಎಸ್. ಸಿ. ಪರೀಕ್ಷೆ ಪರಿಣಾಮ	....	....	೧೭
೮	ಸಾಂಘಿಕ ಜೀವನ	....	ಶ್ರೀ ಗಿ. ಮ. ಬಸಣ್ಣವರ	೨೧
೯	ಜೀವನ ಶಿಕ್ಷಣದಲ್ಲಿ ಸಮುವಾಯ ತಂತ್ರ	....	ಶ್ರೀ ಎಚ್. ಆರ್. ಬಂಡೀವಡ್ಡರ	೨೩
೧೦	ಸಾಮಾನ್ಯ ಹಾಗೂ ದಶಾಂಶ ಅಪೂರ್ಣಾಂಕಗಳ ವಿಶೇಷ ಪ್ರಯೋಜನ	....	ಶ್ರೀ ತಟ್ಟಿ ಶಾಮರಾಯರು	೨೮
೧೧	ಜೀವನ ಶಿಕ್ಷಣ (ಕವನ)	....	ಶ್ರೀ ದ. ರಾ. ನಾಡಿಗೇರ	ಕವರು ೩

ಸಂಪಾದಕೀಯ

ಅಗ್ರ ಸಮ್ಮೇಲನ

ಅಗ್ರ ಸಮ್ಮೇಳನದಿಂದ ಲೋಕದಲ್ಲಿಯ ಕ್ಷೋಭ ಉಪಶಮನಗೊಂಡು ಶಾಂತಿ ನೆಲೆಸಲು ದಾರಿ ಆಗಬಹುದೆಂದು ಆರು ತಿಂಗಳಿಂದಲೂ ಆಸೆ ವ್ಯಕ್ತಪಟ್ಟಿತ್ತು. ಪ್ರತಿಯೊಬ್ಬ ಧುರೀಣನೂ ಶಾಂತಿಯುತ ಸಹ ಜೀವನದ ಮೇಲೆ ಜೋರು ಕೊಟ್ಟು ಮಾತನಾಡುತ್ತಿದ್ದನು. ಜಗತ್ತಿನಲ್ಲೆಲ್ಲ ಶಾಂತಿ ಸ್ಥಾಪನೆಯ ಕಾರ್ಯವನ್ನು ಆರಂಭಿಸುವುದಕ್ಕೆ ವಾತಾವರಣವು ಅನುಕೂಲವಾಗಿತ್ತು. ಜನತೆಯ ಶಕ್ತ ವಿಶ್ವಾಸಕ್ಕೆ ಧಕ್ಕೆಯುಂಟಾದರೆ ಭಾರೀ ನಿರಾಶೆ ತಲೆದೋರಬಹುದೆನ್ನುವ ಅನುಮಾನವು ವರಿಷ್ಠ ಮುಖಂಡರಲ್ಲಿ ಇದ್ದೇ ಇದ್ದಿತು. ನಂಬುಗೆಯು ನೆರವೇರುವದಿಲ್ಲವಾದರೆ ಬಹು ನಿರಾಸೆ ಉಂಟಾಗುತ್ತದೆ. ರಶಿಯಾ-ಅಮೇರಿಕಾ ದೇಶಗಳು ಪರಸ್ಪರ ಅಪನಂಬಿಕೆ ಇರಿಸಿಕೊಂಡೇ ಸಂಧಾನದ ಮಾತುಕತೆ ನಡೆಸಲು ಪ್ರಾರಂಭ ಮಾಡಿದ್ದವೆನ್ನುವ ಸಂದೇಹವು ಇತ್ತೀಚಿನ ವೈಮಾನಿಕ ಪ್ರಕರಣದಿಂದ ನೃಷ್ಟವಟ್ಟಿದೆ ರಶಿಯಾ ವಾಗೂ ಅಮೇರಿಕಾ ದೇಶಗಳು ಬೇರೆ ಬೇರೆ ವ್ಯವಸ್ಥೆಗಳಿಗೆ ಒಳಪಟ್ಟಿರುವದರಿಂದ ಎರಡೂ ದೇಶಗಳು, ಒಬ್ಬರೊಬ್ಬರ ಬಗೆಗೆ ತಿಳಿದುಕೊಳ್ಳಲು ಬೇಹುಗಾರರ ಪಡೆಯನ್ನು ಸಂಘಟಿಸಿರಬಹುದು. ಜಗತ್ತಿನ ಜೀವನವು ಸಹ್ಯವಾಗುವಂತೆ ಪರಿಸ್ಥಿತಿಯನ್ನು ನಿಯಮಿಸುವುದೇ ಅಗ್ರಸಮ್ಮೇಳನದ ಗುರಿಯಾಗಿರುವದರಿಂದ ದೇಶಗಳು ಈಗ ಪರಸ್ಪರರು ಒಪ್ಪುವ ಅಂಶಗಳ ಕಡೆಗೆ ಗಮನ ಕೊಡಬೇಕಲ್ಲದೆ, ಪರಸ್ಪರರನ್ನು ಅಗಲಿಸುವ ಅಂಶಗಳ ಕಡೆಗಲ್ಲ. ಬಹಳ ಆಸೆ ಪಡುವದರಿಂದ ಬಹಳ ನಿರಾಸೆಯಾಗುತ್ತದೆ ಎಂದು ಹೇಳುವದಕ್ಕೆ ಅಗ್ರ ಸಮ್ಮೇಳನವು ಒಂದು ನಿದರ್ಶನವಾಗಿದೆ. ನೆಹರೂರವರು ಯಾವಾಗಲೂ ಅಗ್ರ ಸಮ್ಮೇಲನದ ಫಲಶ್ರುತಿಯನ್ನು ಕುರಿತು ಎಚ್ಚರಿಕೆಯಿಂದಲೇ ಮಾತನಾಡುತ್ತಿದ್ದರು. ನೆಹರೂರವರು ಅಗ್ರ ಸಮ್ಮೇಲನದ ವಿಫಲವಾದ ಬಗ್ಗೆ ತಮ್ಮ ವಿಷಾದ ವ್ಯಕ್ತಪಡಿಸಿ "ಇಂಥ ತಾತ್ಪೂರ್ತಿಕ ವಿಫಲತೆಯು ಶಾಂತಿ ಸ್ಥಾಪನೆಯ ಪ್ರಯತ್ನಗಳ ಅಂತಿಮ ಫಲಿತಾಂಶವೆಂದು ಒಪ್ಪಿಕೊಳ್ಳಲಾಗದು" ಎಂದು ಹೇಳಿದುದು ಶಾಂತಿ ಸ್ಥಾಪನೆಯ ಬಗ್ಗೆ ಅವರಲ್ಲಿದ್ದ ಅಚಲವಿಶ್ವಾಸವನ್ನು ತೋರಿಸುತ್ತದೆ.

ವಿಶ್ವವಿದ್ಯಾಲಯ ಪ್ರವೇಶ

ವಿಶ್ವವಿದ್ಯಾಲಯಗಳಲ್ಲಿ ಪ್ರವೇಶ ಬಯಸುವ ವಿದ್ಯಾರ್ಥಿಗಳಿಗಾಗಿ ಪ್ರವೇಶ ಪರೀಕ್ಷೆ ಇಡುವ ಪ್ರಶ್ನೆಯನ್ನು ವಿಶ್ವವಿದ್ಯಾಲಯ ಧನ ಸಹಾಯ ಆಯೋಗವು ಗಂಭೀರವಾಗಿ ವಿಚಾರಿಸುತ್ತಿದೆಯೆಂದು ತಿಳಿದಿದೆ. ಉಚ್ಚ ಶಿಕ್ಷಣದಿಂದ ಲಾಭಪೊಂದಬಲ್ಲ ಯೋಗ್ಯ ವಿದ್ಯಾರ್ಥಿಗಳಿಗೆ ಮಾತ್ರ ವಿಶ್ವವಿದ್ಯಾಲಯಗಳಲ್ಲಿ ಪ್ರವೇಶ ದೊರೆಯುವದು. ಯೋಗ್ಯತೆ ಹಾಗೂ ಸಾಮರ್ಥ್ಯವುಳ್ಳ ವಿದ್ಯಾರ್ಥಿಗಳು ಮಾತ್ರ ಉಚ್ಚ ಶಿಕ್ಷಣ ಪಡೆಯಲೆಂಬ ಉದ್ದೇಶದಿಂದ ಈ ಕ್ರಮ ಕೈಕೊಳ್ಳಲಾಗುವದು .ವಿಶ್ವವಿದ್ಯಾಲಯ ಸೇರಬಯಸುವವರ ಸಂಖ್ಯೆಯನ್ನು ಮಿತಗೊಳಿಸದಿದ್ದರೆ, ವಿಶ್ವವಿದ್ಯಾಲಯದಿಂದ ಲಭಿಸಬೇಕಾದ ಪ್ರಯೋಜನಗಳು ಕೂಡ ಲಭಿಸದಂತಾಗುತ್ತವೆ. ಈಗ ಎಸ್. ಎಸ್. ಸಿ. ಆದವರೆಲ್ಲರೂ ಕಾಲೇಜಿಗೆ ಹೋಗಬೇಕೆನ್ನುವ ಹವ್ಯಾಸ ಉಳ್ಳವರಾಗಿರುವದು ನಮ್ಮ ದೇಶದ ವೈಶಿಷ್ಟ್ಯವೆನ್ನಬಹುದು. ಎಸ್. ಎಸ್. ಸಿ. ಆದವರಲ್ಲಿ ಇಂಗ್ಲೆಂಡಿನಲ್ಲಿ ನೂರಕ್ಕೆ ೯ರಷ್ಟು ಅಮೇರಿಕೆಯಲ್ಲಿ ೩೦ರಷ್ಟು ಜನರು ಕಾಲೇಜಿಗೆ ಹೋಗುತ್ತಾರೆ. ಇನ್ನುಳಿದವರು ತಮ್ಮ ಪ್ರತಿಭೆ ಪ್ರಕಾಶಗೊಳ್ಳುವಂಥ ಜೀವನೋಪಾಯದ ಮಾರ್ಗ ಹುಡುಕಿಕೊಂಡು ಕೆಲಸಕ್ಕೆ ತೊಡಗುತ್ತಾರೆ. ಶಿಕ್ಷಣ ಮಟ್ಟ ಸುಧಾರಿಸಬೇಕಾದರೆ ವಿಶ್ವವಿದ್ಯಾಲಯ ಸೇರುವವರ ಸಂಖ್ಯೆಯನ್ನು ಪರಿಮಿತಗೊಳಿಸಬೇಕೆಂದು ಭಾವಿಸದೇ ಗತ್ಯಂತರವಿಲ್ಲ.

ತಾಂತ್ರಿಕ ಶಿಕ್ಷಣ ಸಂಸ್ಥೆಗಳಲ್ಲಿ ಪ್ರವೇಶ

ಕರ್ನಾಟಕ ರಾಜ್ಯದಲ್ಲಿನ ತಾಂತ್ರಿಕ ಶಿಕ್ಷಣ ಸಂಸ್ಥೆಗಳಲ್ಲಿ ಪ್ರತಿಶತ ೬೦ ಸ್ಥಳಗಳನ್ನು ವಿದ್ಯಾರ್ಥಿಗಳ ಅರ್ಹತೆಯ ತಳಹದಿಯ ಮೇಲೆ ಕಾಯ್ದಿರಿಸಲಾಗುವದೆಂದು ರಾಜ್ಯದ ಮುಖ್ಯ ಮಂತ್ರಿ ಶ್ರೀ ಬಿ. ಡಿ. ಜತ್ತಿಯವರು ಪ್ರಕಟಪಡಿಸಿದ್ದಾರೆ. ಉಳಿದ ೪೦ ಸ್ಥಳಗಳನ್ನು ಹಿಂದುಳಿದ ವರ್ಗಗಳ ವಿದ್ಯಾರ್ಥಿಗಳಿಗಾಗಿ (ಪ್ರತಿಶತ ೨೨½) ಹಾಗೂ ಪರಿಶಿಷ್ಟ ವರ್ಗ ಹಾಗೂ ಜನಾಂಗಗಳ ವಿದ್ಯಾರ್ಥಿಗಳಿಗಾಗಿ (ಪ್ರತಿಶತ ೧೫½) ಕಾಯ್ದಿರಿಸಲಾಗುವದೆಂದೂ ಹೇಳಲಾಗಿದೆ. ಕಾಯ್ದಿರಿಸಿದ ಸ್ಥಳಗಳಲ್ಲಿ ಯಾವುದೂ ಅರ್ಹತೆಯನ್ನು ಗಣಿಸಲಾಗುವದು ಎಂದು

ಮುಖ್ಯ ಮಂತ್ರಿಗಳು ಹೇಳಿದ್ದಾರೆ. ಪರಿಶಿಷ್ಟ ವರ್ಗ ಹಾಗೂ ಪರಿಶಿಷ್ಟ ಜನಾಂಗಗಳಿಗಾಗಿ ಕಾಯ್ದಿರಿಸಿದ ಸ್ಥಳಗಳು ತುಂಬದೇ ಇದ್ದಲ್ಲಿ ಆ ಸ್ಥಳಗಳಲ್ಲಿ ಹಿಂದುಳಿದ ವರ್ಗದ ಅಭ್ಯರ್ಥಿಗಳನ್ನು ತೆಗೆದುಕೊಳ್ಳಲಾಗುವದು. ಈ ವ್ಯವಸ್ಥೆಯಿಂದ ಎಲ್ಲರಿಗೂ ಸಮಾಧಾನವಾಗಬಹುದೆಂದು ನಂಬಲಾಗಿದೆ.

ಉತ್ತರ ಕರ್ನಾಟಕಕ್ಕೆ ಟೆಲಿಫೋನ ಸೌಕರ್ಯಗಳು

ಹುಬ್ಬಳ್ಳಿ ನಗರದಲ್ಲಿ ಶೀಘ್ರದಲ್ಲಿಯೇ ೧೨೦೦ ಟೆಲಿಫೋನುಗಳುಳ್ಳ ಸ್ವಯಂಚಾಲಿತ ವಿನಿಮಯ ಕೇಂದ್ರವನ್ನು ಸ್ಥಾಪಿಸಲಾಗುವದೆಂದು ಕರ್ನಾಟಕ ಅಂಚೆ ತಂತಿ ಸರ್ಕಲ್ಲಿನ ಡೈರೆಕ್ಟರರಾದ ಶ್ರೀ ಕೆ. ವ್ಹಿ. ಪೈ ಅವರು ಕರ್ನಾಟಕ ವಣಿಕ ಸಂಘದಲ್ಲಿ ಹುಬ್ಬಳ್ಳಿಯ ಪ್ರಮುಖರೆದುರು ಮಾತನಾಡುತ್ತ ಹೇಳಿದರು. ಈ ಸ್ವಯಂಚಾಲಿತ ವಿನಿಮಯ ಕೇಂದ್ರವನ್ನು ನಾಲ್ಕು ಲಕ್ಷ ರೂಪಾಯಿ ವೆಚ್ಚದಿಂದ ಕಟ್ಟಲು ತೀರ್ಮಾನಿಸಿದ್ದು ಕಟ್ಟಡದ ಕಾರ್ಯವು ಈ ವರ್ಷದಲ್ಲಿ ಆರಂಭವಾಗಿ, ವಿನಿಮಯ ಕೇಂದ್ರವು ೧೯೬೨ರ ಅಂತ್ಯಕ್ಕೆ ಕೆಲಸವನ್ನು ಪ್ರಾರಂಭಿಸುವದೆಂದು ಶ್ರೀ ಪೈ ಅವರು ಹೇಳಿದರು. ಈ ರಾಜ್ಯದಲ್ಲಿಯ ಸಂಪರ್ಕ ವ್ಯವಸ್ಥೆಯನ್ನು ಸುಗಮಗೊಳಿಸಲು ಹುಬ್ಬಳ್ಳಿ, ಬಳ್ಳಾರಿ ಹಾಗೂ ಮಂಗಳೂರುಗಳಲ್ಲಿಯ ವಿನಿಮಯ ಕೇಂದ್ರಗಳನ್ನು ಬಲಪಡಿಸುವದಾಗಿಯೂ ಅವುಗಳ ಮೂಲಕ ರಾಜ್ಯದ ೧೯ ಜಿಲ್ಲೆಗಳಲ್ಲಿ ಯಾವುದೇ ಪ್ರದೇಶದೊಂದಿಗೆ ಸಂಪರ್ಕ ಇರಿಸಿಕೊಳ್ಳಲು ಸಾಧ್ಯವಾಗುವದೆಂದೂ ಶ್ರೀ ಪೈ ಅವರು ಪ್ರಕಟಗೊಳಿಸಿದರು. ಈ ಕಾರ್ಯ ಒಂದು ವರ್ಷದೊಳಗಾಗಿ ಪೂರ್ಣಗೊಳ್ಳುವದೆಂದು ಶ್ರೀ ಪೈ ಅವರು ಭರವಸೆ ನೀಡಿದರು. ನಮ್ಮ ರಾಜ್ಯಕ್ಕೆ ಸ್ವತಂತ್ರ ಅಂಚೆ ತಂತಿ ಸರ್ಕಲವಾದಂದಿನಿಂದ ಅವಶ್ಯ ಸುಧಾರಣೆಗಳು ತೀವ್ರಗತಿಯಿಂದ ಸಾಗಿರುವವು. ಈ ಎಲ್ಲ ಸುಧಾರಣೆಗಳಿಗೂ ಕಾರಣರಾದ ಶ್ರೀ ಪೈ ಅವರಿಗೆ ನಮ್ಮ ಅಭಿನಂದನೆಗಳು.

ಕುಟುಂಬ ಯೋಜನೆಯ ಅಗತ್ಯ

ಬೆಳೆಯುತ್ತಿರುವ ಜನಸಂಖ್ಯೆಯನ್ನು ತಡೆಯದಿದ್ದರೆ ನಮ್ಮ ಜೀವನದ ಮಟ್ಟ ಹೆಚ್ಚಲಾರದು ಎನ್ನುವ ಸತ್ಯ ಈಗ ಎಲ್ಲರಿಗೂ ಸ್ಪಷ್ಟವಾಗತೊಡಗಿದೆ. ಅದಕ್ಕಾಗಿಯೇ ಯೋಜನಾ ಆಯೋಗವು ಈ ಉದ್ದೇಶಕ್ಕಾಗಿ ತೃತೀಯ ಯೋಜನೆಯಲ್ಲಿ ೬೫ ಕೋಟಿ ರೂಪಾಯಿಗಳನ ಮಂಜೂರ ಮಾಡಿದೆ. ಇತ್ತೀಚಿನ ವರುಷಗಳಲ್ಲಿ ಕುಟುಂ ಯೋಜನೆಯು ಬಹು ಜನರ ಗಮನವನ್ನು ಸೆಳೆದಿ ಅತಿ ಸಂತಾನದಿಂದ ಆಗಬಹುದಾದ ಅನಾಹುತಗಳ ಸಿ ಕಲ್ಪನೆಯು ಜನತೆಗೆ ಬಾರದೆ ಅವರು ಸಂತಾ ನಿಯಂತ್ರಣ ಕ್ರಮಗಳನ್ನು ಸುಲಭವಾಗಿ ಒಪ್ಪಲಾರರ ಈ ಬಗ್ಗೆ ಸುಶಿಕ್ಷಿತರಿಗೆ ತಿಳುವಳಿಕೆ ಕೊಡುವದರಿಂದೇ ಈ ಸಮಸ್ಯೆ ಬಗೆ ಹರಿಯಲಾರದು. ಇದು ಹಳ್ಳಿಗಳಿಗ ಹಬ್ಬಬೇಕು. ಹಾಗೂ ಅದನ್ನು ಪರಿಣಾಮಕಾರಿಯಾ ರೀತಿಯಲ್ಲಿ ಕಾರ್ಯಕಾರಿಗೊಳಿಸಲು ಪ್ರಯತ್ನಿಸುವ ಅವಶ್ಯವಿದೆ. ನಮ್ಮ ಶಿಕ್ಷಕ ಬಂಧುಗಳು ಈ ಕಾರ್ಯದಲ್ಲಿ ಎ ರೀತಿಯಿಂದಲೂ ಸಹಕಾರ ನೀಡುವರಾಗಿ ಆಶಿಸುತ್ತೇ

ಅಂತರಿಕ್ಷಯಾನ

ಕಳೆದ ಎಷ್ಟೋ ವರ್ಷಗಳಿಂದಲೂ ಅಂತರಿ ಯಾನದ ಸಾಧನಗಳನ್ನು ಸಿದ್ಧಪಡಿಸುವ ಪ್ರಯತ್ನಗ ನಡೆಯುತ್ತಲೇ ಬಂದಿವೆ. ಬಾಹ್ಯಾಕಾಶದ ಬಗೆ ಮನುಷ್ಯನಲ್ಲಿ ಜಿಜ್ಞಾಸೆ ತುಂಬಿಕೊಂಡಿತ್ತಾದರೂ ಅದರ ಸುರಕ್ಷಿತವಾಗಿ ಪ್ರಯಾಣ ಮಾಡುವಂಥ ಆಕಾಶ ನೌ ಯೊಂದು ಸಿದ್ಧವಾಗದೆ ಅವನ ಕನಸು ನನಸಾಗುವಂ ಇರಲಿಲ್ಲ. ಈಗ ರಶಿಯನ್ನರು ನಾಲ್ಕುವರೆ ಟನ ಭಾರವುಳ್ಳ ನೌಕಾ ಉಪಗ್ರಹವನ್ನು ಅಂತರಿಕ್ಷಕ್ಕೆ ಹಾರಿ ವೈಜ್ಞಾನಿಕ ಪ್ರಗತಿಯಲ್ಲಿ ಅವರು ಈಗ ಇನ್ನೊಂ ಹೆಜ್ಜೆ ಮುಂದಿರಿಸಿದಂತಾಗಿದೆ. ವೈಜ್ಞಾನಿಕ ಹಾಗ ತಾಂತ್ರಿಕ ಜ್ಞಾನವನ್ನು ಉಪಯೋಗಿಸಿಕೊಂಡ ಮನುಷ್ಯನ ಪ್ರಯೋಜನಕ್ಕೆ ಬರುತ್ತದೆ. ಇಲ್ಲದಿದ್ದ ಮನುಷ್ಯನ ವಿನಾಶಕ್ಕೆ ಕಾರಣವಾಗುತ್ತದೆ. ಅಂತರಿಕ್ಷವನ ಗೆದ್ದರೆ ಸಾಲದು. ಮನುಷ್ಯನ ಅಂತರಂಗವನ್ನು ಗೆದ ಕೊಂಡರೆ ಮಾತ್ರ ಜಗತ್ತಿನಲ್ಲಿ ಸುಖಶಾಂತಿ ನೆಲೆಸು ಅನುಕೂಲವಾಗುವದು.

ಆಚಾರ್ಯ ವಿನೋಬಾರ ಸ್ತುತ್ಯಕಾರ್ಯ

ಆಚಾರ್ಯ ವಿನೋಬಾ ಭಾವೆಯವರು ತಮ ಜೀವನದಲ್ಲಿ ಅನೇಕ ಅಸಾಧ್ಯಗಳನ್ನು ಸಾಧಿಸಿತೋರಿ ದ್ದಾರೆ. ಬಡತನ, ನಿರುದ್ಯೋಗ ಮುಂತಾದ ಸಮ ಗಳಿಗೆ ಭೂದಾನವು ತಾರಕ ಮಂತ್ರವೆಂದು ಈಗಾಗಲೇ ಜನರನ್ನು ಮನಗಾಣಿಸಿದ್ದಾರೆ. ಈಗ ಅವರು ಇನ್ನೊಂ

ಚಮತ್ಕಾರವನ್ನು ಮಾಡಿತೋರಿಸಿದ್ದಾರೆ. ಅವರು ಉತ್ತರಪ್ರದೇಶ, ರಾಜಸ್ತಾನ ಹಾಗೂ ಮಧ್ಯಪ್ರದೇಶಗಳ ಗಡಿಪ್ರದೇಶಗಳಲ್ಲಿ ಆಶ್ರಯಪಡೆದಿರುವ ದರೋಡೆಗಾರರ ಮನಸ್ಸನ್ನು ಪರಿವರ್ತಿಸಬೇಕೆಂದು ಆ ಪ್ರದೇಶದಲ್ಲಿ ಸಂಚಾರ ಕೈಕೊಂಡಿದ್ದಾರೆ. ಈಗ ಕುಪ್ರಖ್ಯಾತರಾದ ದರೋಡೆಗಾರರು ತಮ್ಮ ಹೀನಕೃತ್ಯಗಳನ್ನು ತೊರೆದು ಅವರಿಗೆ ಶರಣಾಗತರಾಗತೊಡಗಿದ್ದಾರೆ. ಇದರಲ್ಲಿ ಅನೇಕರು ತಮ್ಮ ಜೀವಮಾನದಲ್ಲಿ ಹತ್ತಾರು ಕೊಲೆಗಳನ್ನೂ ನೂರಾರು ದರೋಡೆಗಳನ್ನೂ ಮಾಡಿದವರಿದ್ದಾರೆ. ಇವರನ್ನು ಹಿಡಿದುಕೊಟ್ಟವರಿಗೆ ಸಾವಿರಾರು ರೂಪಾಯಿಗಳ ಬಹುಮಾನವನ್ನು ಕೊಡುವದಾಗಿ ಸರಕಾರ ಸಾರಿದೆ. ಮಾನವ ಸ್ವಭಾವವು ಬದಲಾವಣೆ ಆಗದಂಥದೇನೂ ಅಲ್ಲ ವೆನ್ನುವದಕ್ಕೆ ಈ ದರೋಡೆಗಾರರು ವಿನೋಬಾರವರಿಗೆ ಶರಣಾಗತರಾಗಿರುವದೇ ಜೀವಂತ ನಿದರ್ಶನವಾಗಿದೆ. ವಿನೋಬಾರವರು ಆರಂಭಿಸಿರುವ ಈ ಮಹತ್ಕಾರ್ಯವು ಒಂದೆರಡು ತಿಂಗಳುಗಳಲ್ಲಿಯೇ ಸಾಧಿಸುವಂಥದಲ್ಲ. ಹೀಗೆ ಪರಿವರ್ತನ ಹೊಂದಿದ ದರೋಡೆಗಾರರು ಶಾಶ್ವತವಾಗಿ ಸದ್ವರ್ತನೆಯಲ್ಲಿ ಬದುಕುವಂತೆ ನವಜೀವನದ ಹೊಸ ಮಾರ್ಗಗಳನ್ನು ತೆರೆದುಕೊಡುವದು ನಮ್ಮೆಲ್ಲರ ಕರ್ತವ್ಯವಾಗಿದೆ.

ಅನ್ನಪೂರ್ಣಾ ಶಿಖರ

ದಿನಾಂಕ ೧೭-೫-೧೯೭೦ನೇ ದಿನ ಇಲ್ಲಿಯ ವರೆಗೆ ಅಜೇಯವಾದ ೨೬,೦೪೧ ಫೂಟು ಎತ್ತರದ ಅನ್ನಪೂರ್ಣಾ (೨) ಶಿಖರವನ್ನು ಬ್ರಿಟಿಶ್-ಭಾರತ-ನೇಪಾಳ ಶಿಖರಾರೋಹಿ ತಂಡವು ಏರಿತು ಎಂದು ತಿಳಿದಿದೆ. ಶಿಖರಾರೋಹಿ ತಂಡದ ಮೂವರು ಮಂಗಳವಾರ ದಿ. ೧೭-೫-೧೯೭೦ನೇ ದಿನ ಮಧ್ಯಾಹ್ನ ೪ ಘಂಟೆಗೆ ಅನ್ನಪೂರ್ಣಾ ಶಿಖರವನ್ನು ತಲುಪಿದರೆಂದು ತಂಡದ ಮುಖಂಡರಾದ ಕರ್ನಲ್ ಜೇಮ್ಸ್ ರಾಬರ್ಟ್ಸ್‌ರು ತಿಳಿಸಿದರು. ಈ ಶಿಖರವನ್ನು ಏರಿ ಜಯಸಂಪಾದಿಸಿದ ಕ್ಯಾಪ್ಟನ್ ಎಚ್. ಆರ್. ಗ್ರ್ಯಾಂಟ್, ಜೋನಿಂಗ್ಟನ್ ಹಾಗೂ ಇಂಜಿನೀಯಾಮಾ ಶೇರ್ಪಾ ಇವರಿಗೆ ನಮ್ಮ ಅಭಿನಂದನೆಗಳು.

ಮಾಧ್ಯಮಿಕ ಶಾಲೆಗಳು

ತೃತೀಯ ಪಂಚವಾರ್ಷಿಕ ಯೋಜನೆಯ ಅವಧಿಯಲ್ಲಿ ದೇಶದ ಎಲ್ಲ ಮಾಧ್ಯಮಿಕ ಶಾಲೆಗಳನ್ನು ಉಚ್ಚ ಮಾಧ್ಯಮಿಕ ಶಾಲೆಗಳನ್ನಾಗಿ ಪರಿವರ್ತಿಸಬೇಕೆಂದು ಅಖಿಲ ಭಾರತ ಮಾಧ್ಯಮಿಕ ಶಿಕ್ಷಣ ಮಂಡಳದ ದ್ವಿತೀಯ ಅಧಿವೇಶನವು ಶಿಫಾರಸು ಮಾಡಿದೆ. ಉಚ್ಚ ಮಾಧ್ಯಮಿಕ ಶಾಲೆಗಳಲ್ಲಿ ಕಲಿಸಲು ಪ್ರಾಧ್ಯಾಪಕರನ್ನು ಅರ್ಹರನ್ನಾಗಿ ಮಾಡಲು ಅಲ್ಪಾವಧಿ ಸರ್ಟಿಫಿಕೇಟ ಕೋರ್ಸ ಹಾಗೂ ಪಂಜಾಬ ಮಾದರಿಯ ಎರಡು ವರ್ಷ ಅವಧಿಯ ಡಿಪ್ಲೋಮಾ ಶಿಕ್ಷಣ ಕ್ರಮಗಳನ್ನು ಕೈಕೊಳ್ಳಬೇಕೆಂದು ಮಂಡಳವು ಅಭಿಪ್ರಾಯಪಟ್ಟಿದೆ. ಸಾಧ್ಯವಿದ್ದ ಮಟ್ಟಿಗೆ ಎಲ್ಲ ಮಾಧ್ಯಮಿಕ ಶಾಲೆಗಳಲ್ಲಿ ವೈಜ್ಞಾನಿಕ ಶಿಕ್ಷಣ ದೊರೆಯುವಂತೆ ವ್ಯವಸ್ಥೆ ಮಾಡಬೇಕೆಂದು ಮಾಧ್ಯಮಿಕ ಶಿಕ್ಷಣ ಮಂಡಳದ ಸದಸ್ಯರ ಇಚ್ಛೆಯಾಗಿದೆ. ಪ್ರಾಧ್ಯಾಪಕರೂ ದೈಹಿಕವಾಗಿ ಯೋಗ್ಯವಿದ್ದಲ್ಲಿ ನಿವೃತ್ತಿಯ ಅವಧಿಯನ್ನು ೬೦ ವರುಷಕ್ಕೆ ಮಿತಗೊಳಿಸಲು ಸೂಚಿಸಲಾಗಿದೆ. ಮಾಧ್ಯಮಿಕ ಶಾಲೆಗಳಲ್ಲಿ ಈ ಸೂಚನೆಯು ಸ್ವೀಕೃತವಾದರೆ ಪ್ರಾಥಮಿಕ ಶಾಲೆಗಳಲ್ಲಿಯೂ ಅದು ಕಾರ್ಯಗತವಾಗಬಹುದೆಂದು ಆಶಿಸಲಾಗಿದೆ.

ವಿದ್ಯಾರ್ಥಿಗಳ ಅಶಿಸ್ತು

ವಿಶ್ವವಿದ್ಯಾಲಯಗಳೆಂದರೆ ವಿದ್ಯಾಪ್ರಸಾರದ ದೇಗುಲಗಳಿದ್ದಂತೆ. ಅವುಗಳಲ್ಲಿ ಯಾವ ಕಲುಷಿತ ಹವೆಯೂ ಹೊರಗಿನಿಂದ ಸೇರದ ಹಾಗೆ ಸಾರ್ವಜನಿಕ ಮುಖಂಡರು ಜಾಗರೂಕತೆವಹಿಸಬೇಕು ಎಂದು ವಿಶ್ವವಿದ್ಯಾಲಯ ಧನ ಸಹಾಯ ಆಯೋಗದ ಸಮಿತಿಯ ವರದಿಯಲ್ಲಿ ಹೇಳಲಾಗಿದೆ. ವಿದ್ಯಾರ್ಥಿಗಳ ಅಶಿಸ್ತಿಗೆ ಅನೇಕ ಕಾರಣಗಳನ್ನು ಪೇಳಿದೆ ರಾಜಕಾರಣಿಗಳ ಪ್ರಚೋದನೆ, ಬದಲಾಗುತ್ತಿರುವ ಸಾಮಾಜಿಕ ಮೌಲ್ಯಗಳು, ವಿದ್ಯಾರ್ಥಿಗಳ ಸಂಖ್ಯೆಯಲ್ಲಿ ಹೆಚ್ಚಳ, ಪರೀಕ್ಷಾ ಪದ್ಧತಿ, ದೈಹಿಕ, ಹಾಗೂ ಸಾಂಸ್ಕೃತಿಕ ಚಟುವಟಿಕೆಗಳ ಅನಾಸ್ಥೆ ಈ ಮೊದಲಾದ ಕಾರಣಗಳಿಂದ ವಿದ್ಯಾರ್ಥಿಗಳಲ್ಲಿ ಅಶಿಸ್ತು ಕಾಣಿಸಿಕೊಂಡಿದೆ. ಯೋಗ್ಯತೆಯುಳ್ಳ ವಿದ್ಯಾರ್ಥಿಗಷ್ಟೇ ವಿಶ್ವವಿದ್ಯಾಲಯದಲ್ಲಿ ಪ್ರವೇಶಕೊಟ್ಟರೆ, ವಿಶ್ವವಿದ್ಯಾಲಯಗಳಲ್ಲಿಯ ವಾತಾವರಣ ಸುಧಾರಿಸಿ ವಿದ್ಯಾರ್ಥಿಗಳಲ್ಲಿ ಸುವ್ಯವಸ್ಥಿತ ಜೀವನ ಕಾಣಿಸಿಕೊಳ್ಳುವದೆಂದು ವರದಿಯಲ್ಲಿ ಹೇಳಲಾಗಿದೆ. ತಮ್ಮ ರಾಜಕಾರಣವನ್ನು ವಿದ್ಯಾಸಂಸ್ಥೆಯಲ್ಲಿ ಒಯ್ಯುವದಿಲ್ಲವೆಂದು ಎಲ್ಲ ರಾಜಕೀಯ ಪಕ್ಷಗಳ ಮುಖಂಡರು ತಮ್ಮಲ್ಲಿ ಒಪ್ಪಂದಮಾಡಿಕೊಳ್ಳಬೇಕು.

———

ಎಸ್. ಟಿ. ಸಿ. ಪರೀಕ್ಷೆಯ ಪರಿಣಾಮ (ಧಾರವಾಡ ಜಿಲ್ಲೆ)

ಪಾಸಾದ ಉಮೇದವಾರರ ನಂಬರುಗಳು

ಧಾರವಾಡ ಕೇಂದ್ರ

ಸರಕಾರಿ ಗಂ. ಟ್ರೇ. ಕಾಲೇಜ, ಧಾರವಾಡ

(ಹೊಸ ಕೋರ್ಸ—ಕನ್ನಡ)

೧, ೨, ೩, ೪, ೫, ೬, ೭, ೮, ೯, ೧೨, ೧೩, ೧೪, ೧೫, ೧೬, ೧೭, ೧೮, ೧೯, ೨೦, ೨೧, ೨೨, ೨೩, ೨೪, ೨೫, ೨೬, ೨೭, ೨೮, ೨೯, ೩೦, ೩೧, ೩೨, ೩೩, ೩೪, ೩೫, ೩೬, ೩೭, ೩೮, ೩೯, ೪೦, ೪೧, ೪೨, ೪೩, ೪೪, ೪೫, ೪೬, ೪೭, ೪೮, ೪೯, ೫೦, ೫೧,

ಲಡಾಖ

ಲೇ:— ಶ್ರೀ 'ಬಮಶಿಂ'

[ಶ್ರೀ ಶಿಂತ್ರಿಯವರು ಈ ವರ್ಷಾರಂಭದಿಂದ ತಮ್ಮ ಲೇಖಗಳನ್ನು " ಬಮಶಿಂ " ಎಂಬ ಹೆಸರಿನಿಂದ ಪ್ರಕಟಿಸಲಿರುವರು. ಅದು ಅವರ ಸಂಪೂರ್ಣ ಹೆಸರಿನ ಮೊದಲಿನ ಅಕ್ಷರಗಳಿಂದ ಕೂಡಿದ್ದಾಗಿದೆ. ಕನ್ನಡದಲ್ಲಿ ಅದು ಅವರ ಚಿಕ್ಕ ಸಹಿಯು (Initials). —ಪ್ರ. ಸಂ.]

ಮೊದಲು ಮಾತು

ನಮ್ಮ ರಾಷ್ಟ್ರದ ಉತ್ತರದ ಗಡಿಯಲ್ಲಿ ಚೀನೀಯರ ಆಕ್ರಮಣವು ದಿನ ದಿನಕ್ಕೆ ಬೆಳೆಯುತ್ತಲಿದೆ. ತಿಬೇಟವನ್ನು ಸಂಪೂರ್ಣವಾಗಿ ಆಕ್ರಮಿಸಿಕೊಂಡು ನಮ್ಮ ರಾಷ್ಟ್ರದ ಉತ್ತರ ಗಡಿ ಪ್ರದೇಶಗಳಲ್ಲಿ ಚಂಚು ಪ್ರವೇಶವನ್ನು ಮಾಡುವ ಹೊಂಚು ಹಾಕಿಕೊಂಡು ಕುಳಿತಿದ್ದಾರೆ. ಮೊನ್ನೆ ಮೊನ್ನೆಯಂತೂ ಎವ್ಹರೆಸ್ಟ (ಗೌರೀಶಂಕರ) ಶಿಖರವು ಚೀನಕ್ಕೆ ಸೇರಿದ್ದೆಂದು ಸಾರಿ ಎಲ್ಲರ ಅಪಹಾಸ್ಯಕ್ಕೆ ಗುರಿಯಾದರು. ತಿಬೇಟಕ್ಕೆ ತಾಗಿದ್ದ ಮತ್ತು ನಮ್ಮ ರಾಷ್ಟ್ರದ ಭಾಗವಾಗಿದ್ದ ಲಡಾಖದಲ್ಲಿ ಚೀನೀಯರು ಒಳನುಗ್ಗಿ ರಸ್ತೆ ನಿರ್ಮಾಣವನ್ನು ಕೈಕೊಂಡಿದ್ದರಿಂದ ನಮ್ಮ ಜನರು ಗಾಬರಿಗೊಂಡರು. ಇದನ್ನು ಕುರಿತು ಲೋಕ ಸಭೆಯಲ್ಲಿ ಪ್ರಶ್ನೋತ್ತರಗಳಾದುದನ್ನು ಓದುಗರು ಇಷ್ಟರಲ್ಲಿಯೇ ಮರೆತಿರಲಿಕ್ಕಿಲ್ಲವಷ್ಟೇ. ಲಡಾಖವು ಎಂದಿನಿಂದಲೋ ನಮ್ಮ ರಾಷ್ಟ್ರಕ್ಕೆ ಸೇರಿದ್ದಿರುತ್ತದೆ. ಅದರ ಹೆಸರು ಇತ್ತ ನಮ್ಮ ದಕ್ಷಿಣದವರಿಗೆ ಹೆಚ್ಚಾಗಿ ಗೊತ್ತಿರಲ್ಲಿಲ್ಲ. ಚೀನೀಯರ ಆಕ್ರಮಣದ ಪರಿಣಾಮದಿಂದ ಅದರ ಹೆಸರು ಈಗ ಎಲ್ಲರ ಬಾಯಲ್ಲಿ ಓಡಾಡುತ್ತಿದೆ. ಅಲ್ಲಿ ಚೀನೀಯರ ಆಕ್ರಮಣವನ್ನು ತಡೆಗಟ್ಟಲು ನಮ್ಮ ರಾಷ್ಟ್ರವು ಯೋಗ್ಯ ವ್ಯವಸ್ಥೆಯನ್ನು ಮಾಡಿಟ್ಟಿದೆ ಎಂದು ಸಂರಕ್ಷಣ ಮಂತ್ರಿಗಳು ಲೋಕ ಸಭೆಯಲ್ಲೊಂದು ಹೇಳಿಕೆಯನ್ನು ಕೊಟ್ಟಿದ್ದಾರೆ. ನಮ್ಮ ಓದುಗರಿಗೆ ಲಡಾಖದ ವಿಷಯಕ್ಕೆ ಅಲ್ಪ ಪರಿಚಯವನ್ನಿಲ್ಲಿ ಮಾಡಿಕೊಡಲು ಪ್ರಯತ್ನಿಸಲಾಗಿದೆ.

ಪ್ರಾಕೃತಿಕ ಸ್ವರೂಪ

ಲಡಾಖದ ಉತ್ತರಕ್ಕೆ ಕುರ್ವೆನ್‌ಲನ್ ಮತ್ತು ಕಾರಕೋರಮ್ ಪರ್ವತಗಳು ಹಬ್ಬಿರುತ್ತವೆ. ಪಶ್ಚಿಮಕ್ಕೆ ಬಾಲ್ಟಿಸ್ತಾನ (ಚಿಕ್ಕ ತಿಬೇಟ) ವಿರುತ್ತಿದೆ. ದಕ್ಷಿಣಕ್ಕೆ ಕಾಶ್ಮೀರ ಮತ್ತು ಹಿಮಾಚಲ ಪ್ರದೇಶಗಳಿವೆ. ಪೂರ್ವಕ್ಕೆ ತಿಬೇಟವಿದೆ. ಸಮುದ್ರ ಸಪಾಟೆಯಿಂದ ಅದರ ಸರಾಸರಿ ಎತ್ತರವು ೧೫೦೦೦ ಅಡಿ ಇದೆ. ಅದರ ಪೂರ್ವ ಭಾಗವು ಸುಂದರವಾದ ಸರೋವರಗಳ ನಾಡಾಗಿದೆ. ಲೇ ಎಂಬ ಹೆಸರಿನ ನಗರವು ಅದರ ಮುಖ್ಯ ಪಟ್ಟಣವು, ಮತ್ತು ಅದರ ಆಡಳಿತ ಕೇಂದ್ರವು. ಲೇ ನಗರದಿಂದ ಕಾಶ್ಮೀರಕ್ಕೆ ಒಂದು ರಾಜಮಾರ್ಗವಿದೆ. ಅದು ಸಿಂಧು ನದಿಯ ರಮಣೀಯವಾದ ಕೊಳ್ಳಗಳಲ್ಲಿ ಹಾಯ್ದು ಹೋಗುತ್ತಿದೆ. ಅಲ್ಲಿಯ ನಿಸರ್ಗದ ಸೌಂದರ್ಯವನ್ನು ಎಷ್ಟೇ ಬಣ್ಣಿಸಿದರೂ ಕಡಿಮೆಯೇ ಸೈ. ಲೇ ಪಟ್ಟಣದಿಂದ ತಿಬೇಟಕ್ಕೆ ಹೋಗಲು ಸಹ ಎಷ್ಟೋ ಮಾರ್ಗಗಳಿವೆ.

ಜನರು

ಅಲ್ಲಿಯ ಜನರು ತಿಬೇಟದವರಂತೆ-ಮಂಗೋಲಿಯನ್ ಕುಲಕ್ಕೆ ಸೇರಿದವರು. ಅವರು ಆ ಕುಲಕ್ಕೆ ಸೇರಿದವರಾದರೂ ನಮ್ಮ ರಾಷ್ಟ್ರದ ಕೂಡ ಅವರ ಸಂಪರ್ಕವು ಎಂದಿನಿಂದಲೋ ಸಾಗಿ ಬಂದಿರುವದರಿಂದ ಅವರ ಆಚಾರ-ವಿಚಾರಗಳೂ ನಡೆ-ನುಡಿಗಳೂ ನಮ್ಮ ಜನರಂತೆ ಇವೆ. ಹೆಚ್ಚು ಪರಿಶುದ್ಧವಾದ ಧರ್ಮವನ್ನು ಹುಡುಕುವ ಇಚ್ಛೆಯಿಂದ ಯಾತ್ರಾರ್ಥವಾಗಿ ಹೊರಟಿದ್ದ ಫಾಹಿಯಾನನೆಂಬ ಚೀನದ ಪ್ರವಾಸಿಯು ಈ ಪ್ರದೇಶವನ್ನು ಎಲ್ಲಕ್ಕೂ ಮೊದಲು ಸಂದರ್ಶಿಸಿದನೆಂದು ಐತಿಹ್ಯವಿದೆ. ಆಗ ಅಲ್ಲಿ ಬೌದ್ಧ ಧರ್ಮವು ಅತ್ಯಂತ ಊರ್ಜಿತಾವಸ್ಥೆಯಲ್ಲಿದ್ದುದನ್ನು ಕಂಡೆನೆಂದು ಆತನು ಬರೆದಿಟ್ಟಿದ್ದಾನೆ. ೧೯೩೧ ರಲ್ಲಿ ಜರುಗಿದ ಜನಗಣತಿಯಲ್ಲಿ ಅಲ್ಲಿಯ ಜನ ಸಂಖ್ಯೆಯು ಸುಮಾರು ೧ ಲಕ್ಷ ೯೦ ಸಾವಿರವಿತ್ತು. ಈಜಿಗಿನ ಐನೆಸುಮಾರಿಯು ನಮಗೆ ಗೊತ್ತಾಗಿಲ್ಲ. ಈ ಮೂವತ್ತು ವರ್ಷಗಳಲ್ಲಿ ಅದು ಹೆಚ್ಚಾಗಿರಬೇಕು. ಅದರಲ್ಲಿ ಸುಮಾರು ಅರ್ಧದಷ್ಟು ಜನರು ಬೌದ್ಧ ಧರ್ಮದವರಿದ್ದಾರೆ. ಅವರು ದಲಾಯಿ ಲಾಮಾರವರ ನಿಷ್ಠಾವಂತ

ಅನುಯಾಯಿಗಳು. ದಲಾಯಿ ಲಾಮಾರವರು ತಮ್ಮ ಧರ್ಮದ ಅತ್ಯಂತ ಶ್ರೇಷ್ಠ ಗುರುಗಳೆಂದು ನಂಬಿಕೊಂಡು ಅವರಲ್ಲಿ ನಿಸ್ಸೀಮವಾದ ಭಕ್ತಿ-ವಿಶ್ವಾಸಗಳನ್ನಿಟ್ಟಿದ್ದಾರೆ. ಉಳಿದವರು ಶಿಯಾ ಪಂಥದ ಮುಸಲ್ಮಾನರಿರುವರು. ಆ ದೇಶದ ಜನರಿಗೆ ಲಡಾಖಿಗಳೆಂದು ಕರೆಯುವ ವಾಡಿಕೆ ಇದೆ.

ಉದ್ಯೋಗಗಳು

ಅದರ ಪೂರ್ವ ಭಾಗವು ಸರೋವರಗಳ ನಾಡಾಗಿದೆ ಯಷ್ಟೇ. ಅಲ್ಲಿಯ ಜನರು ಒಕ್ಕಲತನದಲ್ಲಿ ತೊಡಗಿರುವರು. ಅಚ್ಚುಕಟ್ಟಾದ ಕಾಲುವೆಗಳನ್ನು ಅಗೆದು ಸರೋವರಗಳ ನೀರನ್ನು ತಮ್ಮ ಹೊಲಗಳಿಗೆ ಉಣಿಸಿ ತಮಗೆ ಬೇಕಾದ ಬೆಳೆಯನ್ನು ಬೆಳೆಯುತ್ತಿರುವರು. ಸರೋವರಗಳ ನೀರನ್ನು ವ್ಯರ್ಥ ಹಾಳು ಮಾಡದೆ ಅದನ್ನು ಜಾಣತನದಿಂದಲೂ ಯುಕ್ತಿಯಿಂದಲೂ ತಮ್ಮ ತಮ್ಮ ಹೊಲಗಳಿಗೆ ಉಪಯೋಗಿಸಿ ಕೊಳ್ಳುತ್ತಾರೆ. ಗೋದಿ ಮತ್ತು ಬಾರ್ಲಿ ಇವು ಇಲ್ಲಿ ಮುಖ್ಯವಾಗಿ ಬೆಳೆಯುವ ಧಾನ್ಯಗಳು. ಇವು ಆ ಜನರ ಮುಖ್ಯ ಆಹಾರವು. ಇವಲ್ಲದೆ ಹಣ್ಣು ಹಂಪಲ, ಕಾಯಿಪಲ್ಲೆಗಳನ್ನು ಬೆಳೆಯುವರು, ಶ್ರೀಮಂತರಿದ್ದವರು ಮಾತ್ರ ಹಣ್ಣು ಹಂಪಲಗಳನ್ನು ತಿನ್ನುವರು. ಹಲವು ಲಡಾಖಿಗಳು ಎರಿ-ಆಡುಗಳನ್ನು ಸಾಕುವರು. ಅವರು ಒಕ್ಕಲಿಗರಂತೆ ಒತ್ತಟ್ಟಿಗೆ ಒಕ್ಕಲಾಗಿರದೆ ಕುರಿ-ಆಡುಗಳನ್ನು ಮೇಯಿಸುವದಕ್ಕೋಸ್ಕರ ಗುಳೇಕಾರರಂತೆ ದೇಶದಲ್ಲಿ ಅತ್ತಿತ್ತ ಹುಲ್ಲಿದ್ದೆಡೆಗಳಲ್ಲಿ ಸಂಚರಿಸುವರು. ಅಲ್ಲಿಯ ಕುರಿಗಳು ನಿಲುವಿಕೆಯಲ್ಲಿ ಎತ್ತರವಿದ್ದು ಅವುಗಳಿಗೆ "ಪುನಿಯಾ" ಎಂದು ಕರೆಯುವರು. ಅವು ಸರಕು ಗಳ ಸಾಗಾಟಕ್ಕೋಸುಗ ವಾಹನಗಳಂತೆ ಉಪಯೋಗಿಸಲ್ಪಡುತ್ತವೆ. ಅವು ಅವರ ಸಂಪತ್ತನ್ನು ಹೆಚ್ಚಿಸುವ ಪ್ರಾಣಿಗಳು. ಅಲ್ಲಿಯ ಆಡುಗಳು ಸಹ ನಿಲುವಿಕೆಯಲ್ಲಿ ಎತ್ತರವಾದವುಗಳು. ಅವುಗಳ ಮಿದುವಾದ ಕೂದಲುಗಳಿಂದ ಶಾಲುಗಳನ್ನು ತಯಾರಿಸುವರು. ಆದುದರಿಂದ ಅವು ಶಾಲಿನ ಆಡುಗಳೆಂಬ ಹೆಸರಿನಿಂದ ಪ್ರಸಿದ್ಧವಾಗಿದೆ. ಮೇಲೆ ಹೇಳಿದ ಕುರಿ-ಆಡುಗಳೆರಡೂ ಅವರ ಹೈನದ ಪ್ರಾಣಿಗಳು. ಹಲವರು ಯಾಕ, ಆಕಳು ಮತ್ತು ಡಿಸೋ (ಆಕಳು ಮತ್ತು ಯಾಕ ಇವುಗಳ ಮಿಶ್ರ ಸಂತತಿ) ಎಂಬ ಪ್ರಾಣಿಗಳನ್ನು ಸಾಕುತ್ತಾರೆ. ಯಾಕ ಮತ್ತು ಡಿಸೋ ಇವು ಅವರ ವಾಹನಗಳೂ ಆಹುದು. ಹೈನದ ಪ್ರಾಣಿ ಗಳೂ ಆಹುದು. ಅವುಗಳ ಬಿರುಸಾದ ಉದ್ದನ್ನ ಕೂದಲುಗಳಿಂದ ರತ್ನಗಂಬಳಿಗಳನ್ನೂ ಜಮಖಾನೆಗಳನ್ನೂ ತಯಾರಿಸುತ್ತಾರೆ. ತಮಗೆ ಬೇಕಾಗುವ ಹಗ್ಗಗಳನ್ನು ಆ ಕೂದಲುಗಳಿಂದಲೇ ತಯಾರಿಸಿಕೊಳ್ಳುವರು. ಅವುಗಳ ಚರ್ಮದಿಂದ ಡೇರೆಗಳನ್ನು ತಯಾರಿಸುವರು. ಆಕಳು ಅವರ ಹೈನದ ಪ್ರಾಣಿಯೆಂದು ಇಲ್ಲಿ ಹೇಳುವದು ಅನವಶ್ಯಕ. ಬೇರೆ ಹಲವು ಲಡಾಖಿಗಳು ಭಾರತ-ತಿಬೇಟಗಳ ನಡುವಿನ ವ್ಯಾಪಾರವನ್ನು ಕೈಕೊಂಡಿರುವರು. ಅವರಿಗೆ "ಭೋತಿಯಾ" ಎಂದು ಕರೆಯುತ್ತಾರೆ. ಭಾರತ-ತಿಬೇಟಗಳ ನಡುವಿನ ವ್ಯಾಪಾರದ ಮಾರ್ಗಗಳೆಲ್ಲ ಲಡಾಖದಲ್ಲಿ ಹಾಯ್ದು ಹೋಗುವದರಿಂದ ಆ ವ್ಯಾಪಾರವು ಭೋತಿಯಾ ಜನರ ಕೈಯಲ್ಲಿರಲು ಸಾಕು.

ಕೊನೆಯ ಮಾತು

ಲಡಾಖಿಗಳು ಉದ್ಯೋಗ ಪ್ರಿಯರೂ ಆಹುದು; ಶಾಂತಿ ಪ್ರಿಯರೂ ಆಹುದು. ಅವರು ಯುದ್ಧಪ್ರಿಯರಲ್ಲದಿದ್ದರೂ ಸ್ವಾತಂತ್ರ್ಯಪ್ರಿಯರಿರುವರು. ಇಲ್ಲಿಯವರೆಗೆ ಲಡಾಖಿಗಳ ಬಗೆಗೆ ನಮ್ಮ ಸರಕಾರವು ಹೆಚ್ಚು ಲಕ್ಷ್ಯವನ್ನು ಪೂರೈಸಿದಂತೆ ಕಂಡು ಬರಲಿಲ್ಲ. ಚೀನಿಯರ ಆಕ್ರಮಣವು ನಮ್ಮ ಕೇಂದ್ರಸರಕಾರದವರ ಕಂಣುಗಳನ್ನು ನಿಚ್ಚಳವಾಗಿ ತೆರೆಯಿಸಿದಂತೆ ತೋರುತ್ತಿದೆ. ನಮ್ಮಲ್ಲಿಯ ದಕ್ಷ ಮತ್ತು ನುರಿತ ಆಡಳಿತಗಾರರನ್ನು ಸುವ್ಯವಸ್ಥೆಗೋಸ್ಕರ ನಮ್ಮ ಕೇಂದ್ರ ಸರಕಾರವು ಲಡಾಖಕ್ಕೆ ಈಗ ಕಳಿಸಿರುವುದಲ್ಲದೆ ಅಲ್ಲಿ ಯೋಗ್ಯ ಬಂದೋಬಸ್ತ.ಭದ್ರತೆಗಳನ್ನು ಕಾಯ್ದುಕೊಳ್ಳಲು ಆಯಕಟ್ಟಿನ ಸ್ಥಳಗಳಲ್ಲಿ ಹೆಚ್ಚಿಗೆ ಪೋಲೀಸ ಠಾಣ್ಯಗಳನ್ನು ತೆರೆದಿದೆ. ಅವಶ್ಯವೆನಿಸಿದರೆ ಅಲ್ಲಿ ಸೈನಿಕ ಠಾಣ್ಯಗಳನ್ನು ಹೆಚ್ಚಿಗೆ ತೆರೆದು ಸೈನಿಕರನ್ನು ಕಳಿಸುವ ತಯಾರಿಯಲ್ಲಿದೆ. ಲಡಾಖಿಗಳಿಗೆ ಚೀನಿಯರಿಂದ ಆವತರಹದ ಅಪಾಯ ಒದಗದಂತೆ ತಕ್ಕ ಮತ್ತು ಸಮಯೋಚಿತ ಮುನ್ನೆಚ್ಚರಿಕೆಯನ್ನು ನಮ್ಮ ಕೇಂದ್ರ ಸರಕಾರವು ವಹಿಸಿದ್ದುದು ನಿಜಕ್ಕೂ ಅಭಿನಂದನಾರ್ಹವು. ಈಗ ಲಡಾಖಿಗಳಿಗೆ ಇವ ತರಹದ ವಿವಂಚನೆಯಾಗಲು ಎಳ್ಳಿನಿತು ಕಾರಣವಿಲ್ಲ. ಲಡಾಖವು ಗಡಿ ಪ್ರದೇಶದಲ್ಲಿದ್ದರೂ ಲಡಾಖಿಗಳು ಎಂದಿನಿಂದಲೋ ಭಾರತೀಯರು, ಮುಂದೆಯೂ ಭಾರತೀಯರಾಗಿ

ಉಳಿಯುವರು. ತಾವು ಭಾರತೀಯರೆಂಬ ಅಭಿಮಾನವು ಅವರಲ್ಲಿ ಮನೆಮಾಡಿಕೊಂಡಿದೆ.

ಗಡಿತಂಟೆಯ ನಿವಾರಣೆಗೋಸ್ಕರ ವಿಚಾರವಿನಿಮಯ ಮಾಡಲು ನಮ್ಮ ಪ್ರಧಾನಾಮಾತ್ಯರಾದ ಪಂಡಿತ ಜವಾಹರಲಾಲರವರು ಚೀನದ ಪ್ರಧಾನಾಮಾತ್ಯರಾದ ಚೌ-ಎನ್-ಲಾಯರವರನ್ನು ಹೊಸದಿಲ್ಲಿಗೆ ಆಮಂತ್ರಿಸಿದ್ದರಷ್ಟೇ. ಹೋದ ಎಪ್ರಿಲ ತಿಂಗಳು ದಿನಾಂಕ ೨೦ರಿಂದ ೨೫ರ ವರೆಗೆ ಆರು ದಿನ ಅವರೀರ್ವರ ನಡುವೆ ನೇರವಾದ ಚರ್ಚೆಯು ಹೊಸದಿಲ್ಲಿಯಲ್ಲಿ ಸಾಗಿತಾದರೂ ಅದು ಫಲಕಾರಿಯಾಗಲಿಲ್ಲ. ಸಂಧಾನದಿಂದಲೇ ಈ ತಂಟೆಯನ್ನು ಬಗೆಹರಿಸಿಕೊಳ್ಳಬೇಕೆಂದು ಈರ್ವರು ಒಪ್ಪಿಕೊಂಡಿದ್ದು ದೊಂದು ಶುಭಚಿನ್ಹವು. ಅದು ಬೇಗನೆ ಜಯಪ್ರದವಾಗಲೆಂದು ಹಾರೈಸುತ್ತೇವೆ.

—: ಜಯ ಹಿಂದ :—

ಆಧುನಿಕ ಸಂಗೀತ

ಕರ್ನಾಟಕ ಸಂಗೀತ ಪರಂಪರೆ [ಆಕಾಶವಾಣಿ ಕೃಪೆಯಿಂದ]

ಲೇ :— **ಶ್ರೀ ಶಟ್ಟಿ ಶ್ಯಾಮರಾಯರು,** ದಿನಾಂಕ ೩-೪-೧೯೬೦ರಲ್ಲಿ ಮಾಡಿದ ಭಾಷಣ

ಆಧುನಿಕ ಕರ್ನಾಟಕ ಸಂಗೀತದ ವಿಷಯವನ್ನು ವಿಚಾರಿಸುವಾಗ ಮೂರು ಮುಖ್ಯ ಸಂಗತಿಗಳನ್ನು ನಾವು ಅರ್ಥಮಾಡಿಕೊಳ್ಳಬೇಕು. ಅವು ಯಾವವೆಂದರೆ ಈ ಸಂಗೀತದ ಪ್ರಾಚೀನ ಪರಂಪರೆ, ಅದರ ಸದ್ಯದ ೨೦ನೇ ಶತಮಾನದ ಸ್ಥಿತಿ ಮತ್ತು ಸೂಕ್ಷ್ಮವಾಗಿ ಹೊಳೆಯುವ ಅದರ ಮುಂದಿನ ಪ್ರಗತಿಯ ಲಕ್ಷಣಗಳು.

ಸಂಗೀತದಲ್ಲಿ ಅಭಿಜಾತ (ಕ್ಲಾಸಿಕಲ್) ಸಂಗೀತ, ಲಘು ಸಂಗೀತವೆಂದು ಎರಡು ಪ್ರಕಾರಗಳು ಎಂದಿನಿಂದಲೂ ಇವೆ. ಆದರೂ ಪ್ರಜಾಪ್ರಭುತ್ವದ ಈ ಯುಗದಲ್ಲಿ ಲಘು ಸಂಗೀತಕ್ಕೆ ಹೆಚ್ಚು ಪ್ರೋತ್ಸಾಹನೆಯು ದೊರೆಯುತ್ತಿರುವದು ಸ್ವಾಭಿಕವಾಗಿದೆ. ಮುಂದೆ ಪ್ರಪಂಚದಲ್ಲಿಯ ನಾನಾವಿಧ ಕಲಾಶೈಲಿಗಳ ಸುಲಭವಾಗಿ ಬಿಟ್ಟ ಪರಸ್ಪರ ಸಂಪರ್ಕದಿಂದ ಆಧುನಿಕ ಸಂಗೀತವು ಯಾವ ವಿಧವಾಗಿ ಮುಂದುವರಿಯುವದು, ಅದರ ಪ್ರಗತಿಯ ಲಕ್ಷಣಗಳಾವವು ಎಂಬುದನ್ನು ಹೇಳುವದು ಕಷ್ಟಕರವಾಗಿದೆ. ಸಂಗೀತ ಶಬ್ದಕ್ಕೆ ವ್ಯಾಪಕವಾದ ಅರ್ಥ ಅದೆ. ಅದರಲ್ಲಿ ಗೀತ, ವಾದ್ಯ, ನೃತ್ಯ ಮತ್ತು ನರ್ತನಕ್ಕೆ ಸಂಬಂಧಿಸಿದ ನಾಟ್ಯ, ಅಭಿನಯ ಇವು ಕೂಡಾ ಅಂತರ್ಭೂತವಾಗಿರುವವು. ಇಂದಿನ ಅಭಿಜಾತ ಕರ್ನಾಟಕ ಸಂಗೀತದಲ್ಲಿ ಕಳೆದ ಒಂದು ಒಂದೂವರೆ ಶತಮಾನದಿಂದ ಕೇಳಬರುವ ಕೃತಿಗಳೆಂದರೆ ಮುಖ್ಯವಾಗಿ ತ್ಯಾಗರಾಜರು ಮತ್ತು ಸ್ವಾತಿ ತಿರುನಾಳ್ ಮಹಾರಾಜರು, ಶ್ಯಾಮಶಾಸ್ತ್ರಿಗಳು, ವಾಸುದೇವಾಚಾರ್ಯರು ಈ ಸುಪ್ರಸಿದ್ಧ ವಾಗ್ಗೇಯಕಾರರವು. ಇವೆಲ್ಲ ತೆಲಗು ಭಾಷೆಯ ಸಾಹಿತ್ಯಕ್ಕೆ ಸಂಬಂಧ ಹೊಂದಿವೆ. ತೀರ ಇತ್ತೀಚೆಗೆ ಹಳೆಯ ಮೈಸೂರು ಸಂಸ್ಥಾನದ ಆಸ್ಥಾನ ಪಂಡಿತರಾದ ಶ್ರೀ ಮುತ್ತಯ್ಯ ಭಾಗವತರ ಕನ್ನಡ ಕೃತಿಗಳು ಪ್ರಸಿದ್ಧಿಗೆ ಬರುತ್ತಲಿವೆ. ಎರಡನೆಯದಾಗಿ ಗಾಯನದಲ್ಲಿ ಹೊಸ ಹೊಸ ಕೃತಿಗಳು ಬರುವಂತೆ ಆಧುನಿಕ ಸಂಗೀತದಲ್ಲಿ ವಾದ್ಯಗಳ ಕೆಲವು ಪ್ರಕಾರಗಳು ಕಂಡುಬರುತ್ತಲಿವೆ. ಕಿನ್ನರೀ ವಿದ್ವಾನ್ ಶ್ರೀ ಹುಲಗೂರ ಕೃಷ್ಣಾಚಾರ್ಯರ ವಿಶ್ವವೀಣೆ, ದಿವಂಗತರಾದ ಜೋಡಯ್ಯನವರು ನಿರ್ಮಿಸಿದ ಹೊಸ ಮಾದರಿಯ ಪಿಟೀಲು ಈ ಶತಮಾನದ ಹೊಸ ಶೋಧಗಳು. ಸಂಗೀತ ಪಕ್ಕಾ ವಾದ್ಯಗಳಲ್ಲಿ ಕೊಳಲು, ಗೋಟುವಾದ್ಯ, ಘಟವಾದ್ಯ, ಖಂಜರಿ, ಮೋರ್ಚಿಂಗ ಮುಂತಾದವನ್ನು ಈಗ ವಿಶೇಷ ಬಳಸಲಾಗುತ್ತಿವೆ.

ಗಾಯನ ವಾದ್ಯಗಳ ತರುವಾಯ ನೃತ್ಯದಲ್ಲಿ ಭರತನಾಟ್ಯ, ಕಥಕ್ಕಳಿ ಇವುಗಳ ಪ್ರಸಾರವು ಭರದಿಂದ ಸಾಗಿದೆ.

ಆಧುನಿಕ ಸಂಗೀತದ ಸವಿಯನ್ನು ಸವಿಯಬೇಕಾದರೆ ಸಂಗೀತದ ಆಲಾಪದೊಂದಿಗೆ ಕನ್ನಡ ಸಾಹಿತ್ಯದ ಪರಿಚಯವು ಸಾಕಷ್ಟು ಬೇಕು; ವಿಶೇಷವಾಗಿ ಜನಪದ ಸಾಹಿತ್ಯದ ಪರಿಚಯಬೇಕು. ಕನ್ನಡ ಮತ್ತು ತೆಲಗು

ಭಾಷೆಯ ವರ್ಣೋಚ್ಚಾರಣೆಗೆ ಹಿಂದುಸ್ತಾನಿ ಸಂಗೀತ ಶೈಲಿಯು ಒಗ್ಗುವದಿಲ್ಲ. ಆದ್ದರಿಂದ ಹೊಸ ಮೈಸೂರು ರಾಜ್ಯದಲ್ಲಿ ಕರ್ನಾಟಕ ಸಂಗೀತದ ಅಭ್ಯಾಸ ಮತ್ತು ಪ್ರಚಾರ ಆಗಬೇಕಾಗಿದೆ.

ಆಧುನಿಕ ಲಘು ಸಂಗೀತದಲ್ಲಿ ಮುಖ್ಯವಾಗಿ ನಾಲ್ಕು ಭಾಗಗಳನ್ನು ಮಾಡಬಹುದು.

೧) ಜನಪದ ಸಂಗೀತ. ೨) ಗಮಕ ಶೈಲಿ. ೩) ಭಾವಗೀತ. ೪) ಚಲನಚಿತ್ರ ಸಂಗೀತ. ಜನಪದ ಸಾಹಿತ್ಯದ ಸಂಗೀತವನ್ನೇ ಮೊದಲು ತೆಗೆದುಕೊಳ್ಳೋಣ. ಇದು ಸಾಮಾನ್ಯ ಜನರಿಗಾಗಿ ಅಂದರೆ ಪಂಡಿತ ಪಾಮರ ರೆಲ್ಲರಿಗೂ ಹಿಡಿಯುವಂಥದಾಗಿದೆ. ಯಕ್ಷಗಾನ, ಬಯಲಾಟ ಅಥವಾ ಭಾಗವತರ ಆಟಗಳು ಈ ಸಂಗೀತ ಸಾಹಿತ್ಯದ ಉತ್ತಮ ಕಾರ್ಯವನ್ನು ಮಾಡುತ್ತಬಂದಿವೆ. ಯಕ್ಷಗಾನ ಪರಂಪರೆಯು ಈಗ ಹೆಚ್ಚಾಗಿ ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಕಂಡುಬರುವದು. ಉತ್ತರ ಕರ್ನಾಟಕದಲ್ಲಿ ಇಂಥ ನಾಟಕಗಳಿಗೆ ದೊಡ್ಡಾಟ ಅಥವಾ ಬಯಲಾಟ ಎಂದು ಹೇಳುತ್ತೇವೆ. ಪಾತ್ರಗಳು ತಮ್ಮ ತಮ್ಮ ಪರಿಚಯ ಸಮೇತವಾಗಿಯೇ ರಂಗಸ್ಥಳಕ್ಕೆ ಜಿಗಿದು ಬಂದು ಪ್ರೇಕ್ಷಕರಿಗೆ ಪ್ರತ್ಯಕ್ಷವಾಗುತ್ತವೆ. ದೇಶೀಯ ಗಾನ ದೊಂದಿಗೆ ನರ್ತನವೂ ಇರುತ್ತದೆ. ಸಂಸ್ಕೃತ ನಾಟ್ಯ ಶಾಸ್ತ್ರದ ಪರಂಪರೆಯಲ್ಲಿಯ ಅಭಿನಯ, ಸಂಗೀತ, ತಾಳ ಮತ್ತು ನೃತ್ಯ-ವಿಕ್ಷೇಪಗಳನ್ನು ಅಳವಡಿಸಿಕೊಂಡ ಹೆಚ್ಚು ವಿದಗ್ಧ ಜಾತಿಯ ನೃತ್ಯದ ಅವಶೇಷಣೆಗಳಲ್ಲಿ, ದಕ್ಷಿಣ ಭಾರತ ನಾಟಕ ಪರಂಪರೆ ಒಂದು ಎಂದು ಡಾ. ವ್ಹಿ. ರಾಘವನ್ನರು ಹೇಳಿದ್ದಾರೆ. ಇದು ಅವೇರಾದಂತೆ ಸಂಗೀತಯುಕ್ತ. ತಮಿಳಿನಲ್ಲಿ ಇದಕ್ಕೆ ತೆರುಕೂಟ (ಓಣಿಯ ಆಟ) ಎಂದು ಹೆಸರು. ತಮಿಳಿನ ತೆರುಕೂಟಕ್ಕೆ ತೆಲುಗಿನ ವೀಥಿ ನಾಟಕ; ಕನ್ನಡದ ಬಯಲಾಟ ಸಮಾನವಾಗಿವೆ. ಯಕ್ಷಗಾನದ ನರ್ತನವೂ ನಮ್ಮ ನಾಡಿನ ರತ್ನವೆನ್ನಬಹುದು. ಯಕ್ಷಗಾನಗಳಲ್ಲಿ ಕಾಳಗ ಇರುವದೇ ಬಹಳ. ಸಮರ ಕಾಲದಲ್ಲಿ ವಿವಿಧ ಪಕ್ಷದವರು ಚಲಿಸುವ ರೀತಿ, ಆವೇಶ ತುಂಬಿ ಕಾಲು ಅಟ್ಟಿ ಮಾಡಿ, ಕುಣಿಯುವ ಅಬ್ಬರ, ಎಂಥವನಲ್ಲಿಯೂ ಪ್ರತಿಧ್ವನಿಯನ್ನು ಹುಟ್ಟಿಸುತ್ತದೆ. ಇದರ ಉಬ್ಬು ಉಕ್ಕುಗಳಿಗೆ ಪ್ರತಿಯಾದದು. ಸ್ತ್ರೀನರ್ತನ ಪೌರುಷಕ್ಕೂ, ಲಾಲಿತ್ಯಕ್ಕೂ ಇರುವ ವ್ಯತ್ಯಾಸವನ್ನು ನರ್ತನದಲ್ಲಿ ಚನ್ನಾಗಿ ತೋರಿಸುತ್ತಾರೆ. ಯಕ್ಷಗಾನಗಳಲ್ಲಿ ಎಂಥ ನಾಡಿಗೂ ಭೂಷಣ ತರುವ ನರ್ತನದ ಸೊಬಗು ಇಲ್ಲಿರುವದನ್ನು ಗಮನಿಸಬೇಕು. ಇನ್ನೂ ಇದರಲ್ಲಿ ಸಂಗೀತಕ್ಕೆ ಸಂಬಂಧ ಪಡುವ ಅಂಶಗಳನ್ನು ವಿಚಾರಿಸಿದರೆ ಸಾಮಾನ್ಯವಾಗಿ ಪುಸ್ತಕಗಳಲ್ಲಿ ಪದಗಳಿಗೆ ಅನೇಕ ವಿಧದ ರಾಗಗಳನ್ನು ಸೂಚಿಸಿರುತ್ತಾರೆ. ಆದರೂ ಅದಷ್ಟೂ ಉಪಯೋಗದಲ್ಲಿ ಅಭ್ಯಾಸದಲ್ಲಿರುವದಿಲ್ಲ. ಆರಂಭ ನಾಟರಾಗದಲ್ಲಿ ಆಗಿ, ಬೆಳಗಾಗುವ ವೇಳೆಗೆ ಭೂಪಾಳಿ ಮೋಹನ ರಾಗಗಳಲ್ಲಿ ಇವು ಮುಗಿಯುತ್ತವೆ. ಶಂಕರಾಭರಣ, ಆನಂದಭೈರವಿ, ಕಲ್ಯಾಣಿ ಆಠಾಣ ರಾಗ ಭಾವಗಳಲ್ಲಿ ತೋರಿಸುತ್ತಾರೆ. ವೀರರಸವನ್ನು ಪ್ರಧಾನವಾಗಿ ಆಠಾಣ ರಾಗದಿಂದ ತರುತ್ತಾರೆ. ಬಹುಶಃ ಸಂಗೀತ ಸಾಹಿತ್ಯಗಳ ಸಮನ್ವಯವನ್ನು ಯಕ್ಷಗಾನಗಳಲ್ಲಿ ಕಾಣಬಹುದು. ರಂಗಭೂಮಿಯ ಮೇಲೆ ಪ್ರದರ್ಶಿಸಬಹುದಾದಂಥ ಇಂಥ ಕೆಲವು ಕೃತಿಗಳಲ್ಲಿ ಪಾರ್ತಿ ಸುಬ್ಬಯ್ಯ ಎಂಬ ಪ್ರಸಿದ್ಧ ಕವಿಯು ೧೮ನೇ ಶತಮಾನದ ಕೊನೆಗೆ ಬರೆದ ವಾಲಿ-ಸುಗ್ರೀವರ ಕಾಳಗ, ಅಂಗದ ಸಂಧಾನ ಎಂಬವೂ, ಅಪರಾಳ ತಮ್ಮಣ್ಣನವರು ೧೮೫೦ರ ಸುಮಾರಿಗೆ ಬರೆದ ಕೃಷ್ಣ ಪಾರಿಜಾತವೂ, ಸಕ್ಕರಿ ಬಾಳಾಚಾರ್ಯ ಅಥವಾ ಶಾಂತಕವಿಗಳು ರಚಿಸಿದ ಕೃಷ್ಣ ಮೋಹಿನಿ ಎಂಬ ನಾಟಕಗಳೂ ಹೆಚ್ಚು ಹೆಸರಾಗಿವೆ.

ಇತ್ತಿತ್ತಲಾಗಿ ಸಾಹಿತ್ಯದ ರಸವನ್ನು ಹೃದಯಂಗಮವಾಗುವಂತೆ ವ್ಯಕ್ತಮಾಡುವ ಗಮಕ ಕಲೆಯ ಶೈಲಿಯು ಹೆಚ್ಚು ಪ್ರಚಾರದಲ್ಲಿ ಬಂದಿದೆ. ಜೈಮಿನಿ ಭಾರತ, ಕುಮಾರವ್ಯಾಸ ಭಾರತ, ಶಿವಶರಣರ ವಚನಗಳು, ಸಂಸ್ಕೃತ ಶ್ಲೋಕಗಳು ಗಮಕ ಶೈಲಿಗೆ ಹೆಚ್ಚು ಹಿತಮಿತವಾಗಿವೆ. ಗಮಕದ ರೀತಿಯಲ್ಲಿ ಪದ್ಯದ ಅರ್ಥವು ಸಾಮಾನ್ಯ ಶ್ರೋತೃಗಳಿಗೆ ಹೊಳೆಯುವಂತೆ ಅಲ್ಲಲ್ಲಿ ತಡೆದುನಿಂತು, ಕೆಲವು ಪದಸಮೂಜಗಳನ್ನು ಆಗಾಗ ಪುನರುಚ್ಚರಿಸಿ ಹೇಳುವರು. ಪದ್ಯಗಳಲ್ಲಿಯ ರಸಭಾವಕ್ಕೆ ತಕ್ಕಂತೆ ಆಲಾಪನೆಯ ರಾಗಗಳನ್ನು ಬದಲಿಸಿ ರಸಾಭಿವ್ಯಕ್ತಿಗೆ ಸೂಕ್ತವಾದ ರೀತಿಯನ್ನು ಅನುಸರಿಸುವರು. ಈ ಶೈಲಿಯಲ್ಲಿ ಮಾತ್ರ ಹಿಂದುಸ್ತಾನಿ ಪದ್ಧತಿಯು ಪ್ರವೇಶ ಮಾಡಿಲ್ಲ. ಕಾರಣ ಇಷ್ಟೇ; ಕನ್ನಡ ಸಾಹಿತ್ಯದ ಸ್ವರ ವರ್ಣೋಚ್ಚಾರಗಳಿಗೆ ಆ ಸಂಗೀತ ಶೈಲಿಯು ಕೂಡುವದಿಲ್ಲ ವೆಂಬುದೇ ಕಾರಣ. ಉತ್ತರ ಕರ್ನಾಟಕದಲ್ಲಿ ಈ ಗಮಕ ಕಲೆಯ ಅನುಭವ ತರಬೇತಿಗಳನ್ನು ಕೊಡುವಕ್ಕಾಗಿ

ಲವಾರು ವರ್ಷಗಳು ಭಾರತ ಬಿಂದುರಾಯರು ಮೊದಲಾದ
ದ್ವಾಂಸರಿಂದ ನಡೆಯಿಸಲ್ಪಟ್ಟವು. ಪುರಾಣ, ಪ್ರವ
ನ, ಹರಿಕಥೆ, ಭಜನೆ, ಕಾಲಕ್ಷೇಪ. ಮೊದಲಾದ ಕಾರ್ಯ
ಗಳು ಕೂಡಾ ಆಧುನಿಕ ಸಂಗೀತ ದೃಷ್ಟಿಯಿಂದ
ಚ್ಚು ಲೋಕಪ್ರಿಯವಾಗಿವೆ. ನಿಜಗುಣ ಶಿವಯೋಗಿ
ಳು, ಸರ್ವಭೂಷಣ ಕವಿಗಳು ಮುಂತಾದ ಶಿವಶರಣರ
ಾಹಿತ್ಯದಂತೆ ಮತ್ತು ಹರಿದಾಸರ ಸಾಹಿತ್ಯದಂತೆ ಇವು
ಕ್ತಿಮಾರ್ಗದಲ್ಲಿ ಜನರ ಮನಸ್ಸನ್ನು ಹರಿಯಿಸುವದಕ್ಕೆ
ಳ್ಳೇ ಸಾಧನಗಳಾಗಿ ನಿಂತಿವೆ. ಲಾವಣಿಗಳು, ಜೋಗು
ದ ಹಾಡು ಮೊದಲಾದ ಜನಪದ ಗೀತೆಗಳಲ್ಲಿಯೂ
ಘುಸಂಗೀತದ ಪ್ರಯೋಜನವು ಕಾಣಬರುತ್ತದೆ.

ಭಾವಗೀತೆಗಳೆಂಬ ಕವನಗಳ ಒಂದು ಜಾತಿಯು
ತ್ತೀಚೆಗೆ ಸಹೃದಯರ ಮನಸ್ಸನ್ನು ಹೆಚ್ಚಾಗಿ ಸೆಳೆದಿದೆ.
ವು ಆಧುನಿಕ ಕವಿಗಳಿಗೆ ಈಗಿನ ಜೀವನದ ಪುರುಷಾರ್ಥ
ಳ ಉಚ್ಚ ಮೌಲ್ಯಗಳು ಸಾಮಾನ್ಯ ಜನರ ಹೃದಯದಲ್ಲಿ
ೂಡುವಂತೆ ಚಿತ್ರಿಸಲಿಕ್ಕೆ ಒಳ್ಳೇ ಸಾಧನಗಳಾಗಿ ಪರ
ಿಸಿವೆ. ಅಲ್ಲೊಂದು ಇಲ್ಲೊಂದು ನೆನಪಾಗುವ
ಂದು ಉದಾಹರಣೆಯನ್ನು ತಕ್ಕೊಳ್ಳಿರಿ. " ಹತ್ತು
ರುಷದ ಹಿಂದೆ ಮುತ್ತೂರು ಕೇರಿಯಲ್ಲಿ ಅತ್ತಿತ್ತ ಅಲೆ
ವರು ನೀವಲ್ಲವೇ " " ನಾನು ಬಡವಿ ಆತ ಬಡವ
ಲುವೆ ಬದುಕು " ಇತ್ಯಾದಿ ಗೀತಗಳಲ್ಲಿ ಕಾಣುವ
್ರೇಮದ ಮಧುರಭಾವವು ಚಿರಂತನವಾಗಿ ಪ್ರಪಂಚದಲ್ಲಿ
ಣತಕ್ಕದ್ದೇ. ಅದರಲ್ಲಿನ ಭಾವಸೌಂದರ್ಯಕ್ಕೆ ಕಳೆ
ಟ್ಟುವ ಹಾಡಿನ ದಾಟಿಯೊಂದನ್ನು ಅದಕ್ಕೆ ಜೋಡಿಸಿ
ರೆ ಅದು ಅಂತಃಕರಣವನ್ನು ಇನ್ನಷ್ಟು ಸೂರೆಗೊಳ್ಳು
ದು; ಅಥವಾ " ಯಾಕಳುವೆ ಎಲೆ ರಂಗಾ ಜೇಕಾದ್ದು
ನಗಿದೆ; ನಾಕೆಮ್ಮೆ ಕರೆದ ನೊರೆಹಾಲು; ನೊರೆಹಾಲು
ಕ್ಕರೆ ನೀ ಕೇಳಿದಾಗ ನಾ ಕೊಡುವೆ " ಎಂಬ ಲಾಲೀ
ದ್ಯದಲ್ಲಿನ ಮಕ್ಕಳನ್ನಾಡಿಸುವ ತಾಯಿಯ ವಾತ್ಸಲ್ಯದ
ಾವಕ್ಕೆ ಅದನ್ನು ಹಾಡುವ ಹಾಡಿನ ಭಂಗಿಯು ಕೇಳು
ವರ ಮನಸ್ಸನ್ನು ಇನ್ನಷ್ಟು ತಣಿಸುವದು. ಮುಖ್ಯ
ಾಗಿ ಕರ್ನಾಟಕ ಸಂಗೀತ ಪ್ರಸಾರದಲ್ಲಿ ಪಲವಾರು
ಸಮಸ್ಯೆಗಳು ಕಾಲಮಾನ ಪರಿಸ್ಥಿತಿಗನುಸಾರವಾಗಿ ನಮ್ಮ
ುಂದೆ ನಿಂತಿವೆ. ಅವಾವವೆಂದರೆ ರಾಗಗಳ ಹೆಸರುಗಳ
ಯೂ, ಸ್ವರಗಳ ಹೆಸರುಗಳಲ್ಲಿಯೂ ಶಾಸ್ತ್ರೋಕ್ತವಾದ
ಏಕರೂಪತೆಯನ್ನು ಸಾಧಿಸುವದು ಒಂದನೆಯದು.
ಎರಡನೆಯದಾಗಿ ಹಾಡಿನ ಸಂಪಲಬನ್ನು ತೋರಿಸುವ
ಒಂದೇ ಒಂದು ಸ್ವರಲೇಖನ ಪದ್ಧತಿಯ ಅವಶ್ಯಕತೆ;
ಸಂಗೀತ ಶಿಕ್ಷಣವು ಈಗ ಸಾಲೆಗಳಲ್ಲಿ ಕೊಡಲ್ಪಡುವದರಿಂದ
ಇಂಥ ಒಂದೇ ವಿಧವಾದ ಸ್ವರಲಿಪಿ ಅವಶ್ಯವೆಂದು ಬೇರೆ
ಹೇಳಬೇಕಾಗಿಲ್ಲ. ಮೂರನೆಯ ದೊಡ್ಡ ಸಮಸ್ಯೆಯೆಂದರೆ
ಇದುವರೆಗೆ ಹಿಂದುಸ್ತಾನಿ ಸಂಗೀತವನ್ನೇ ಕೇಳಿ ಸ್ವಾಭಾ
ವಿಕವಾಗಿ ಅದನ್ನೇ ಹೆಚ್ಚು ಪ್ರೀತಿಸುವ, ನೂತನ
ಮೈಸೂರ ರಾಜ್ಯದಲ್ಲಿ ಅಂತರ್ಗತವಾದ ಉತ್ತರ ಕರ್ನಾಟ
ಕದ ಜನರಲ್ಲಿ ನಮ್ಮದೇ ಆದ ಮತ್ತು ಹಿಂದಿನ ಪರಂಪರೆ
ಯನ್ನು ಜೆನ್ನಾಗಿ ಉಳಿಸಿಕೊಂಡು ಬಂದ ಕರ್ನಾಟಕ
ಸಂಗೀತದ ಬಗ್ಗೆ ಪ್ರೇಮಾದರಗಳನ್ನು, ಅಭಿಮಾನವನ್ನು
ಉಂಟುಮಾಡುವ ಕಾರ್ಯವು ಭರದಿಂದ ಸಾಗಬೇಕಾಗಿದೆ.

ಕೊನೆಯದಾಗಿ ಚಲಚ್ಚಿತ್ರ ಸಂಗೀತದ ವಿಷಯ
ವಾಗಿ ವಿಚಾರ ಮಾಡತಕ್ಕ ಒಂದೆರಡು ಮಾತುಗಳಿವೆ.
ಚಿತ್ರ ಸಂಗೀತವನ್ನು ನೋಡುವದರಿಂದ, ಕೇಳುವದರಿಂದ
ನಮ್ಮ ತರುಣ ತರುಣಿಯರ ನೀತಿಯ ಪರಿ
ಣಾಮವಾಗುತ್ತಿದೆ ಎಂದು ಕೆಲವರು ಟೀಕಿಸುತ್ತಾರೆ.
ಆಧುನಿಕ ಕಲೆಯು ಬರಿಯ ವಿಲಾಸಜೀವನ ರೂಪರಂಗ
ಗಳನ್ನು ಎತ್ತಿತೋರಿಸುವದು ಎಂದು ಹೇಳುವದರಲ್ಲಿ
ಒಂದಿಷ್ಟು ಸತ್ಯಾಂಶವಿದ್ದರೂ ಅದು ಪೂರಾ ಒಪ್ಪತಕ್ಕ
ಮಾತಾಗಿರುವದಿಲ್ಲ.

ಜೀವನದ ಶ್ರೇಷ್ಠ ಮೌಲ್ಯಗಳನ್ನು ಕವಿಯು
ಶೃಂಗಾರರಸದ ಮೂಲಕ ಅನುಭವಿಸಿದಂತೆ ವೀರರಸ,
ಕರುಣರಸ, ಮುಂತಾದ ರಸಗಳ ಆವಿರ್ಭಾವದಲ್ಲಿಯೂ
ಅಲಿಪ್ತದೃಷ್ಟಿಯಿಂದ ಕಂಡು ಅನುಭವಿಸಿ, ಅದನ್ನು ಕೇಳು
ವವರ ಅಂತಃಕರಣದಲ್ಲಿ ಪ್ರತಿಬಿಂಬಿಸುವಂತೆ ಮಾಡುವನು.
ಇದೇ ಕಲೆಯ ಆದರ್ಶ. ಅವನ್ನು ಕಾಣಲಾಗದೆ ಅವರಲ್ಲಿ
ಬರಿಯ ವಿಲಾಸ ಜೀವನದ ಥಂಗೇ ಕಾಣುವದೆಂದು ಟೀಕಿ
ಸುತ್ತ ಕೂಡ್ರುವದು ಸಮ್ಯಗ್ ದರ್ಶನ ದೃಷ್ಟಿಯಲ್ಲೆಂದು
ಹೇಳಬೇಕು. ಸಿನೇಮಾ ಗೀತೆಗಳಲ್ಲಿ ಸ್ತ್ರೀ-ಪುರುಷರ
ವಿಯೋಗದ ವಿರಹದ ಪ್ರೇಮವೇ ಹೆಚ್ಚಾಗಿ ಕಾಣಿಸಿ
ಕೊಂಡರೂ ಕರುಣರಸ, ಹಾಸ್ಯರಸ, ಭಕ್ತಿರಸ ಇತ್ಯಾದಿ
ಭಾವಗರ್ಭಿತವಾದ ಗೀತಗಳು ಇರುವವೇ ಇಲ್ಲವೆಂದು
ಹೇಳುವದು ಒಂದೇ ದೃಷ್ಟಿಯಿಂದ ನೋಡಿದ ನೋಟವೆಂದು
ಹೇಳಬಹುದು. ಚಲಚ್ಚಿತ್ರ ಗಾಯನದಿಂದ ಸಂಗೀತ
ಕಲೆಗೂ ಒಂದು ಪ್ರಯೋಜನವಿದೆ. ಚಲಚ್ಚಿತ್ರಗಳ

ಸೂಕ್ಷ್ಮ ಪ್ರಯೋಗಗಳಿಂದ ಆಧುನಿಕ ಸಂಗೀತದ ಲ್ಲಿಯೇ ಒಂದು ಕ್ರಾಂತಿಯು ತಲೆ ಎತ್ತಿದೆ. ಚಿತ್ರ ನಿರ್ದೇ ಶಕರಿಗೆ ಇದು ಕರ್ನಾಟಕ ಸಂಗೀತ, ಇದು ಹಿಂದುಸ್ತಾನಿ, ಇದು ಇಂಗ್ಲಿಷ ಸಂಗೀತ ಎಂಬ ಭೇದವು ಕಾಣುವದೇ ಇಲ್ಲ. ತಮಿಳು ಚಿತ್ರಪಟಗಳಲ್ಲಿ ಕೂಡಾ ಹಿಂದುಸ್ತಾನಿ ಹಾಡುಗಳ ಧಾಟಿಯ ಪ್ರೇಮವು ಅನಿರೀಕ್ಷಿತವಾಗಿ ಕಂಡು ಬರುತ್ತದೆ. ಇದು ಒಬ್ಬರನ್ನೊಬ್ಬರು ತಿಳಿದುಕೊಂಡು ಆನಂದಪಡುವದಕ್ಕೆ ಸ್ಫೋರ್ತ್ಸಾಹ ನೀಡುವದು, ಕಂಠ ಮಾಧುರ್ಯ ಗಮಕಗಳ ಕುಸುಮಸದೃಶವಾದ ಮಾರ್ದವ ಸೌಗಭ ಹಿನ್ನೆಲೆಯಲ್ಲಿದ್ದ ಶ್ರುತಿ, ರಾಗ, ತಾಳಗಳಲ್ಲಿ ತನ್ಮ ಯತೆ ಇವು ನಮ್ಮ ಕರ್ನಾಟಕ ವಿದ್ವಾಂಸರ ಕಚೇರಿಗಳಲ್ಲಿ ಹೆಚ್ಚಾಗಿ ಪ್ರತ್ಯಯಕ್ಕೆ ಬರಬೇಕಾಗಿದೆ. ಇದು ಚಿತ್ರ ಸಂಗೀತವು ಅಭಿಜಾತ ಸಂಗೀತಕ್ಕೆ ನೀಡಬಹುದಾದ ದೊಡ್ಡ ಪ್ರಯೋಜನವಲ್ಲವೇ ?

ಆಧುನಿಕ ಸಂಗೀತ ಕಲೆಗೆ ಒಂದು ಹೊಸ ಸಂಗೀತ ಶಾಸ್ತ್ರವು ಬೇಕು. ಹೊಸ ಹೊಸ ಪ್ರಯೋಗಗಳಿಂದ ಭಿನ್ನ ಭಿನ್ನ ಸಂಗೀತ ದೃಷ್ಟಿಯಲ್ಲಿ ಒಂದು ಸಮನ್ವಯ ವನ್ನುಂಟುಮಾಡುವದು; ಅದಕ್ಕೆ ಕಾಲಾವಧಿಯು ಬೇಕು. ಆಪೇರಾದ ಪಾಶ್ಚಾತ್ಯ ತಂತ್ರವು ಈಗ ನಮ್ಮ ಸಂಗೀತದಲ್ಲಿ ಸಹಜವಾಗಿ ಕಾಣಿಸಿಕೊಳ್ಳಹತ್ತಿದೆ. ಇಂಗ್ಲೀಷ ಹಾಡು ಗಳಂತೆ ಇದ್ದ ಹಾಡುಗಳನ್ನು ಒಂದು ಸಲ ಕೇಳಿ ಹುಚ್ಚು ಹುಚ್ಚು ಎಂದು ಜುಗುಪ್ಸೆಪಟ್ಟರೂ ದೀರ್ಘಕಾಲದ ಪರಿ ಚಯದಿಂದ ಅದು ಸಹ ನಮ್ಮ ಸಂಗೀತಕ್ಕೆ ವಿಘಾತಕ ವಾಗದೆ ಪೋಷಕವೆಂಬ ವಿಚಾರವು ಹೊಳೆದೀತು. ಹೀಗೆ ಆಧುನಿಕ ಸಂಗೀತದಲ್ಲಿ ಯಕ್ಷಗಾನ, ಭಾವಗೀತಗಳು, ನಾಟಕಗಳು, ಕಥಕ್ಕಳಿ ಮುಂತಾದ ನೃತ್ಯಗಳು, ಗಮಕ ಕಲೆ, ಚಲಚ್ಚಿತ್ರ ಗೀತೆಗಳು ಇವೆಲ್ಲ ತಮ್ಮದೇ ಆದ ಒಂದೊಂದು ರೀತಿಯಲ್ಲಿ ಕ್ರಮವಾದ ಪರಿವರ್ತನವನ್ನು ಪ್ರಾರಂಭಿಸಿವೆ. ಉತ್ತರ ದಕ್ಷಿಣಗಳ ಸಂಸ್ಕೃತಿಗಳ ಸಮನ್ವ ಯಕ್ಕೂ ಇದು ಬಹು ದೊಡ್ಡ ಉಪಕಾರವನ್ನು ಮಾಡ ಬಲ್ಲದು ಎಂಬುದನ್ನು ನಾವು ಮರೆಯದೇ ಇರೋಣ.

ಜೈ–ಹಿಂದ

ಜೀವನ ಶಿ. ಶಾಲೆಗಳಲ್ಲಿ ಮೂಲೋದ್ಯೋಗದ ಹುಟ್ಟುವಳಿಯನ್ನು ಹೆಚ್ಚಿಸುವದು

ಲೇ :— ಶ್ರೀ ಗು. ಶಂ. ಗೋಕರ್ಣ

ಜೀವನ ಶಿಕ್ಷಣ ಶಾಲೆಗಳಲ್ಲಿ ಜೀವನಾವಶ್ಯಕ ಉತ್ಪಾದಕ ಉದ್ಯೋಗವನ್ನು ಕಲಿಸಿ ಅದರ ಮುಖಾಂತರ ಬಾಲಕ ಬಾಲಿಕೆಯರಿಗೆ ಜೀವನಾವಶ್ಯಕ ಜ್ಞಾನವನ್ನು ಕೊಡುವದು. ಈ ತತ್ವಕ್ಕೆ ಪ್ರಾಧಾನ್ಯ ಕೊಡಲಾಗಿದ್ದ ಸಂಗತಿ ಎಲ್ಲರಿಗೆ ಗೊತ್ತಿದೆ. ನಮ್ಮ ಜೀವನ ಶಿಕ್ಷಣ ಶಾಲೆಗಳಲ್ಲಿ ಹುಟ್ಟುವಳಿಯ ಪ್ರಮಾಣ ಮತ್ತು ಮಾಡಿದ ವಸ್ತುಗಳ ಮಟ್ಟುವನ್ನು ಸುಧಾರಿಸುವದು ಅತ್ಯಾವಶ್ಯಕ ವೆಂದು ಕಂಡು ಬಂದಿದೆ. ಉತ್ತಮ ಫಲ, ಉತ್ಪತ್ತಿ ಇದೇ ಉತ್ತಮ ಕೆಲಸದ ಒಂದು ಲಕ್ಷಣವೆಂದು ಹೇಳಬಹುದು. ಎಷ್ಟೋ ಶಾಲೆಗಳಲ್ಲಿ ಬಾಲಕ ಬಾಲಿಕೆಯರು ನೂತ ನೂಲನ್ನು ಏನು ಮಾಡಬೇಕು ? ಮತ್ತು ನೆಯ್ದ ಅರಿವೆ ಹೇಗೆ ಮಾರಬೇಕು ? ಎಂಬುವ ಸಮಸ್ಯೆ ಬಂದಿರುತ್ತದೆ. ಜೀವನ ಶಿಕ್ಷಣ ಶಾಲೆಗಳಲ್ಲಿ ಮಾಡಿದ ಕೆಲಸವು ಜೊಕ್ಕಾಗಿ ಇರದಿದ್ದರೆ ಆ ಶಾಲೆಯ ಶಿಕ್ಷಣವು ಸರಿಯಾಗಿಲ್ಲವೆಂದು ತಿಳಿಯಬಹುದು. ಬಾಲಕ ಬಾಲಿಕೆಯರಿಗೆ ಉತ್ತಮ ಜ್ಞಾನ, ಪೂರ್ಣ ಕೈಗಾರಿಕೆ ಕಲಿಸುವದು ಇದೇ ಜೀವನ ಶಿಕ್ಷಣದ ಉದ್ದೇಶ. ಮೂಲೋದ್ಯೋಗದ ಶಿಕ್ಷಕನು ಮೊಟ್ಟ ಮೊದಲು ಕೈಗಾರಿಕೆಯಲ್ಲಿ ಪ್ರಾವೀಣ್ಯ ವನ್ನು ಪಡೆದುಕೊಳ್ಳುವದು ಆವಶ್ಯಕ. ಶಾಲೆಗಳಲ್ಲಿ ಸಹಿತ ತಮ್ಮ ತಮ್ಮ ವರ್ಗಗಳಲ್ಲಿ ಶಿಕ್ಷಕರು ಬಾಲಕರ ಕೂಡ ನೂಲಬೇಕು. ಮತ್ತು ತಮ್ಮ ಪ್ರಾವೀಣ್ಯ ಹೆಚ್ಚಿಸ ತಕ್ಕದ್ದು. ಕೆಸಾನ ರಾಟೆಯ ಮೇಲೆ ನೂಲುವದನ್ನು ಪ್ರಾರಂಭಿಸಿದ ಮೇಲೆ ಬಾಲಕ ಬಾಲಿಕೆಯರು ತಕಲಿಯ ಮೇಲೆ ನೂಲುವದನ್ನು ಬಿಟ್ಟು ಬಿಡುವರು. ಆದುದರಿಂದ ತಕಲಿಯ ಮೇಲೆ ನೂಲುವದರಲ್ಲಿ ಅವರಿಗೆ ಹೊನೆಯ ವರೆಗೆ ಪ್ರಾವೀಣ್ಯವು ಸಿಗುವದಿಲ್ಲ. ನೂಲುವ ಬೇರೆ ಬೇರೆ

ಕಾರಗಳ ಪರಿಚಯ ಸಹಿತ ಅವರಿಗೆ ಮಾಡಿ ಕೊಟ್ಟದ್ದು ಡು ಬರುವದಿಲ್ಲ. ಪ್ರಾವೀಣ್ಯ ಪಡೆದವರು ಒಂದು ರು ಹತ್ತಿಯಿಂದ ಎಷ್ಟು ನೂಲು ತಯಾರಿಸುವರು ದರ ಅರ್ಧದಷ್ಟು ಸಹಿತ ನೂಲು ನಮಗೆ ನಮ್ಮ ಪೂರ್ಣ ತರಬೇತಿಯುಳ್ಳ ಬಾಲಕ ಬಾಲಿಕೆಯರಿಂದ ಾರಿಯುವದಿಲ್ಲ. ಮತ್ತು ಅವರು ತಯಾರಿಸಿದ ನೂಲಿ ದ ಅರಿವೆಯನ್ನು ನೆಯ್ಯುವದು ಮಹಾ ಕಠಿಣವಾಗಿ ತ್ಪಾದನೆ ತೀರ ಕಡಿಮೆಯಾಗುವದು, ಮತ್ತು ಹಾಳಿನ ಪ್ರಮಾಣ ಹೆಚ್ಚುವದು. ಉತ್ತಮ ಕಚ್ಚಾ ಮಾಲಿನಿಂದ ನ್ನು ಸಾಲೆಗಳಲ್ಲಿ ನಿರುಪಯೋಗಿ ಹಾಳನ್ನು ತಯಾರಿಸು ದು, ಇದರಿಂದ ದೇಶಕ್ಕೆ ಹಾನಿಯಾಗುವದು. ಮತ್ತು ವನ ಶಿಕ್ಷಣದ ಉದ್ದೇಶವು ಸಾಧ್ಯವಾಗಲಾರದು. ದುದರಿಂದ ನಾವು ಎಲ್ಲರೂ ಜಾಗರೂಕತೆಯಿಂದ ವಿಚಾರ ರ್ವಕ ಕೆಲಸವನ್ನು ಮಾಡತಕ್ಕದ್ದು. ಬಾಲಕ ಬಾಲಿಕೆ ರಲ್ಲಿ ಮಾಡುವ ಉದ್ಯೋಗದ ಬಗ್ಗೆ ಅಭಿರುಚಿಯುಂಟಾ ವಂತೆ ನಾವು ಪ್ರಯತ್ನಿಸತಕ್ಕದ್ದು. ಭಕ್ತಿಯಿಂದ ಾಡಿದ ಕೆಲಸವು ಒಳ್ಳೆಯದಾಗುವದು, ಇದರಲ್ಲಿ ಂಶಯವಿಲ್ಲ. ಆದರೆ ಮಾಡತಕ್ಕ ಕೆಲಸದ ಜ್ಞಾನವನ್ನು ರಿಯಾಗಿ ಮಾಡಿಕೊಡತಕ್ಕದ್ದು.

ಮೇಲೆ ಹೇಳಿದಂತೆ ಜೀವನ ಶಿಕ್ಷಣ ಸಾಲೆಗಳಲ್ಲಿ ಮೂಲೋದ್ಯೋಗದ ಪ್ರಗತಿಯನ್ನು ಸಾಧಿಸಬೇಕಾದರೆ, ಾವು ಆಯಾ ಉದ್ಯೋಗದ ಬಗ್ಗೆ ಪೂರ್ಣ ಶಾಸ್ತ್ರೀಯ ಾಹಿತಿ ಮಾಡಿಕೊಳ್ಳತಕ್ಕದ್ದು. ಮತ್ತು ಆ ಕಲೆಯಲ್ಲಿ ಪ್ರಯತ್ನಪೂರ್ವಕ ದುಡಿದು ಪ್ರಾವೀಣ್ಯವನ್ನು ಪಡೆ ುತಕ್ಕದ್ದು. ಇದಕ್ಕಾಗಿ ಮೊಟ್ಟಮೊದಲು ನಮಗೆ ಯಾ ಉದ್ಯೋಗಗಳಲ್ಲಿ ಪೂರ್ಣ ಶ್ರದ್ಧೆ ಬೇಕು. ವನ ಶಿಕ್ಷಣ ತರಬೇತಿ ವಿದ್ಯಾಲಯಗಳಲ್ಲಿ ಶಿಕ್ಷಕ ದ್ಯಾರ್ಥಿಗಳು ಗಡಿಬಿಡಿಯಿಂದ ತಮ್ಮ ಕೆಲಸವನ್ನು ುಗಿಸಿ, ಮಾಡಬೇಕಾದ ಕೆಲಸವನ್ನು ಒಪ್ಪಿಸುವರು. ವಿಧ ಕೆಲಸ ಮತ್ತು ವೇಳೆಯ ಅಭಾವದ ಮೂಲಕ ಆ ವಧಿಯಲ್ಲಿ ಇದಕ್ಕೂ ಹೆಚ್ಚು ಪ್ರಯತ್ನ ಮಾಡಲಿಕ್ಕೆ ಗದಿದ್ದರೂ ಅವರು ಆನಂತರ ಆಯಾ ಉದ್ಯೋಗದಲ್ಲಿ ಚ್ಚು ಪ್ರಾವೀಣ್ಯವನ್ನು ಪಡೆಯಲು ಪ್ರಯತ್ನಿಸುವದು ತ್ಯಾವಶ್ಯಕ. ಶಿಕ್ಷಕರಿಗೆ ಉದ್ಯೋಗದ ಬಗ್ಗೆ ಶ್ರದ್ಧೆ ಂಟಾಗದಿದ್ದರೆ ಅವರ ತರಬೇತಿ ಅಪೂರ್ಣವೆನಿಸುವದು. ಕ್ಷಕನು ವಿದ್ಯಾರ್ಥಿಯಾಗಿರಬೇಕು; ದಿನಾಲು ಅವನ ನವಕರಿಯ ಅವಧಿಯಲ್ಲಿ ಅವನ ಉದ್ಯೋಗದಲ್ಲಿಯ ಪ್ರಾವೀಣ್ಯವು ಹೆಚ್ಚಾಗಬೇಕು. ಇದಕ್ಕಾಗಿ ಅವನು ಬಾಲಕ-ಬಾಲಿಕೆಯರ ಗೂಡ ಸ್ವತಃ ಪ್ರತ್ಯಕ್ಷ ಕೆಲಸವನ್ನು ಮಾಡಬೇಕಾಗುವದು. ಆಯಾ ಉದ್ಯೋಗದ ಬಗ್ಗೆ ಪುಸ್ತಕಗಳನ್ನು ದೊರಕಿಸಿ ಓದಿಕೊಂಡು ಜ್ಞಾನವನ್ನು ಪಡೆಯಬೇಕಾಗುವದು. ಇತರ ಸಹಶಿಕ್ಷಕರ ಕೂಡ ಚರ್ಚೆ ಮಾಡಬೇಕು. ಮತ್ತು ಊರಲ್ಲಿದ್ದ ಆ ಉದ್ಯೋಗ ಮಾಡುವ ಜನರ ಕೆಲಸದ ನಿರೀಕ್ಷಣೆ ಮಾಡಿಕೊಂಡು ಹೆಚ್ಚಿನ ಜ್ಞಾನವನ್ನು ಪಡೆಯಬೇಕು. ಮಕ್ಕಳಿಗೆ ಮಾರ್ಗದರ್ಶನ ಮಾಡುವಾಗ ಶಿಕ್ಷಕರು ಪ್ರತ್ಯಕ್ಷ ಕೆಲಸ ಮಾಡಿ ತಾಂತ್ರಿಕ ಕೌಶಲ್ಯವನ್ನು ತೋರಿಸಿಕೊಡಬೇಕಾ ಗುವದು. ಆದುದರಿಂದ ತರಬೇತಿ ವಿದ್ಯಾಲಯಗಳಲ್ಲಿ ತಾವು ಪಡೆದ ತಾಂತ್ರಿಕ ಜ್ಞಾನ ಹಾಗು ಕೌಶಲ್ಯಗಳನ್ನು ತಮ್ಮಲ್ಲಿ ಸ್ಥಿರವಾಗಿ ಉಳಿಯುವಂತೆಯೂ ಪ್ರಯತ್ನಿಸ ಬೇಕಾಗುತ್ತದೆ. ಶಿಕ್ಷಕರು ಪ್ರತಿದಿನ ಕೆಲವು ಅವಧಿಯ ವರೆಗೆ ಕೆಲಸದಲ್ಲಿ ಸಾಕಷ್ಟು ರೂಢಿಯನ್ನು ಮಾಡಿಕೊಳ್ಳ ತಕ್ಕದ್ದು. ಗಾಂಧಿ ಜಯಂತಿ ವೇಳೆಗೆ ಶಿಕ್ಷಕರ ಬಗ್ಗೆ ನೂಲುವ ಸ್ಪರ್ಧೆ ಮತ್ತು ನೇಯುವ ಸ್ಪರ್ಧೆ ಇಡಬಹುದು. ಮತ್ತು ಪ್ರಾವೀಣ್ಯ ಪಡೆದವರಿಗೆ ಬಹುಮಾನವನ್ನು ಕೊಡಬಹುದು. ಶಿಕ್ಷಕರು ಸಾಧನಗಳ ಚಿಕ್ಕ ಪುಟ್ಟ ದುರಸ್ತಿ ಮಾಡಲಿಕ್ಕೆ ಕಲಿಯಬೇಕು. ಶಿಕ್ಷಕರ ಶ್ರದ್ಧೆ ಉದ್ಯೋಗಗಳಲ್ಲಿ ಸಜೀವ ಇರಬೇಕು; ಮತ್ತು ಅವರು ಸಾಲೆಯಲ್ಲಿ ಆಸ್ಥೆಯಿಂದ ಕೆಲಸಮಾಡಬೇಕು; ಅಂದರೆ ಇನ್ನಿತರ ಕೊರತೆಗಳಿಂದ ದೂರವಾಗಲಿಕ್ಕೆ ಅವರಿಗೆ ಮಾರ್ಗವು ಸಿಗುವದು; ಮತ್ತು ಮೂಲೋದ್ಯೋಗದ ಹುಟ್ಟುವಳಿ ಸುಧಾರಿಸುವದು; ಮತ್ತು ಮಾಡಿದ ಪಕ್ಕಾ ಮಾಲಿನ ಮಟ್ಟ ಸುಧಾರಿಸುವದು; ಇದರಲ್ಲಿ ಸಂದೇಹವಿಲ್ಲ. ಸಭಾ ಸಮ್ಮೇಲನಗಳಲ್ಲಿ ಮೂಲೋದ್ಯೋಗದ ಪ್ರಾತ್ಯಕ್ಷಿಕೆಗಳು, ಸ್ಪರ್ಧೆಗಳು ಮತ್ತು ತಾತ್ವಿಕ ಚರ್ಚೆ ಮತ್ತು ಜಾಣ್ಮೆಯ ಪ್ರದರ್ಶನ ನಡೆಯಬೇಕು. ಇದರ ಲಾಭವನ್ನು ಎಲ್ಲ ಶಿಕ್ಷಕರು ಪಡೆಯಬಹುದು.

ಆ ಮೇಲೆ ಬಾಲಕ-ಬಾಲಿಕೆಯರಿಗೆ ಉದ್ಯೋಗದ ಬಗ್ಗೆ ಶ್ರದ್ಧೆ ಬೆಳೆಯಿಸುವದು ಅತ್ಯಾವಶ್ಯಕ. ಕೃತಿ ಮತ್ತು ಜ್ಞಾನ ಇವುಗಳ ಸಂಬಂಧವನ್ನು ತಿಳಿದುಕೊಂಡು ತಾವು ಮಾಡಿದ ಕೆಲಸವು ಉತ್ತಮವಾಗಬೇಕೆಂದು ಪ್ರಯತ್ನಿಸು ವಂತೆ ನಾವು ನೋಡಿಕೊಳ್ಳಬೇಕು. ಕೆಲಸದಲ್ಲಿ ಆಗ

ಬಹುದಾದ ತಪ್ಪುಗಳ ಬಗ್ಗೆ ಅವರಿಗೆ ಸರಿಯಾದ ಜ್ಞಾನ ವನ್ನು ಕೊಟ್ಟು ಅವರಿಂದ ಆದ ತಪ್ಪುಗಳ ಬಗ್ಗೆ ಅವರಿಗೆ ಸರಿಯಾದ ಕಲ್ಪನೆಯನ್ನು ಮಾಡಿಕೊಟ್ಟು ತಿದ್ದತಕ್ಕದ್ದು. ಬಾಲಕ-ಬಾಲಿಕೆಯರಿಗೆ ಉತ್ತಮ ಕೆಲಸದ ಮಾದರಿಗ ಳನ್ನು ತೋರಿಸಿ ಅವುಗಳ ಲಕ್ಷಣಗಳನ್ನು ಹೇಳಿಕೊಡಬೇಕು. ಮಾಡಿದ ಎಲ್ಲ ಕೆಲಸದ ಪರಿಶೀಲನೆ ಮಾಡಿತೋರಿಸಬೇಕು. ನಮ್ಮ ಸಾಲೆಗಳಲ್ಲಿ ಉತ್ತಮ ಕೆಲಸ ಮಾಡುವ ಅವಶ್ಯಕತೆ ಮತ್ತು ಸಾಲೆಗೆ ಆದ ಲಾಭ–ಹಾನಿಯ ಬಗ್ಗೆ ಅವರಿಗೆ ಕಲ್ಪನೆ ಮಾಡಿಕೊಡಬೇಕು. ಮೂಲೋದ್ಯೋಗದಲ್ಲಿ ಆದ ಲಾಭದಿಂದ ಸರಕಾರವು ಮಧ್ಯಾಹ್ನದ ಊಟ ಮತ್ತು ಸ್ಕಾಲರಶಿಪ್ಪು ಮೊದಲಾದ ಯೋಜನೆ ಮಾಡುವ ರಿಂದು ಅವರಿಗೆ ಕಲ್ಪನೆ ಮಾಡಿಕೊಡಬೇಕು. ಉತ್ತಮ ಅರಿವೆ ತಯಾರಾದರೆ, ತೊಟ್ಟುಕೊಳ್ಳುವನನಿಗೆ ಆನಂದ ವಾಗುವದು. ಆದುದರಿಂದ ನಾವು ಜಾಗರೂಕತೆಯಿಂದ ಅರಿವೆಯು ಉತ್ತಮವಾಗುವಂತೆ ಪ್ರಯತ್ನ ಮಾಡಬೇಕು. ಬಾಲಕರಿಗೆ ಯಾವದೇ ಕೆಲಸವನ್ನು ಮನಸ್ಸುಗೊಟ್ಟು ಮಾಡಲಿಕ್ಕೆ ಕಲಿಸುವದು ಇದೇ ಶಿಕ್ಷಣದ ಧ್ಯೇಯ. ಮೂಲೋದ್ಯೋಗದ ಕೆಲಸದಲ್ಲಿ ಸಹಿತ ನಾವು ಇದನ್ನು ಮರೆಯಬಾರದು.

ಮೂಲೋದ್ಯೋಗಕ್ಕೆ ಬೇಕಾಗುವ ಕಚ್ಚಾ ಮಾಲು ಉತ್ತಮ ಇರಬೇಕು. ನೂಲುವದು ಮತ್ತು ನೇಯಿಗೆ ಉದ್ಯೋಗದ ಬಗ್ಗೆ ವರ್ಷಕ್ಕೆ ಬೇಕಾಗುವ ಹತ್ತಿಯನ್ನು ಕೊಳ್ಳುವದಕ್ಕೆ ಬೇಕಾಗುವ ಯೋಜನೆ ಮಾಡಿ ಹಣವನ್ನು ದೊರಕಿಸಿ ಮೊದಲನೇ ಸಾರಿ ಬಿಡಿಸಿದ ಹತ್ತಿಯನ್ನು ಕೊಂಡುಕೊಳ್ಳತಕ್ಕದ್ದು. ಅಂದರೆ ಅದರಲ್ಲಿ ಕಸಿರು ಕಡಿಮೆ ಇರುವದರಿಂದ ಕೆಲಸವನ್ನು ಮಾಡುವದಕ್ಕೆ ಬಾಲಕ ಬಾಲಿಕೆಯರಿಗೆ ಉತ್ಸಾಹ ಬರುವದು. ಕೊಂಡ ಹತ್ತಿಯನ್ನು ಸರಿಯಾಗಿ ಡ್ರಮ್ಮಿನಲ್ಲಿ ಮುಚ್ಚಿ ಇಡ ತಕ್ಕದ್ದು. ಆ ಮೇಲೆ ಹತ್ತಿಯನ್ನು ಸ್ವಚ್ಛ ಮಾಡಿಸಿ, ಆರೆದುಕೊಂಡು ಹಿಂಜಿ ಹಂಜಿಗಳನ್ನು ಮಾಡಿಕೊಂಡು ಜೆನ್ನಾಗಿ ಕಟ್ಟಿಇಡಬೇಕು. ಬಂದ ಹತ್ತಿಯ ಕಾಳುಮಾರಿ, ಬಂದ ಹಣ ಜಮಾ ಮಾಡಿಬಿಡಬೇಕು. ಇಲ್ಲದಿದ್ದರೆ ಇಲಿಗಳು ಅದನ್ನು ಹಾಳು ಮಾಡುವವು, ಮತ್ತು ಹಾನಿ ಯಾಗುವದು. ಬಂದ ಕಸಿರನ್ನು ಒಟ್ಟುಗೂಡಿಸಿ ಅದರಿಂದ ತಕ್ಕೆ ಮತ್ತು ಗೊಂಬೆಗಳನ್ನು ಮಾಡತಕ್ಕದ್ದು. ತಕಲಿ ಯಿಂದ ನೂಲುವಾಗ ಬಾಲಕ ಬಾಲಿಕೆಯರಿಗೆ ಬೇರೆ ಬೇರೆ ಪದ್ಧತಿಗಳನ್ನು ಕಲಿಸತಕ್ಕದು. ಪ್ರಾರಂಭದಿಂದ ಕೊನೆ ವರೆಗೆ ಬಾಲಕ ಬಾಲಿಕೆಯರು ಮತ್ತು ಶಿಕ್ಷಕರು ಸ ಅದೆ ಮೊದಲನೆಯ ಪದ್ಧತಿಯಿಂದ ನೂಲುವದು ಕ ಬರುತ್ತದೆ. ಆಗಿಂದಾಗ್ಗೆ ಬಾಲಕ ಬಾಲಿಕೆಯರ ವನ್ನು ಕಂಡು ಹಿಡಿದು ಟಿಪ್ಪಣಿ ಇಟ್ಟುಕೊಂಡು ಆ ಪ್ರಗತಿಯನ್ನು ಅಳೆಯಬೇಕು. ಬಾಲಕ ಬಾಲಿಕೆಯ ಕಿಸಾನ ರಾಟೆಯಿಂದ ನೂಲಲಿಕ್ಕೆ ಪ್ರಾರಂಭಿಸಿದ ನಂ ತಕಲಿಯನ್ನು ಮರೆತುಬಿಡುವರು. ತಕಲಿಯಿಂದ ನೂ ವಾಗ ಬೂದಿಯ ಉಪಯೋಗವನ್ನು ಮಾಡುವದು ಕ ಬರುವದಿಲ್ಲ. ಬಾಲಕ ಬಾಲಿಕೆಯರಿಗೆ ಇದರ ಶಾಸ್ತ್ರೀ ಕಾರಣಗಳನ್ನು ತಿಳಿಸಿ ಹೇಳದಿದ್ದರೆ, ಅದರ ಮಹತ್ತ ತಿಳಿಯುವದಿಲ್ಲ. ರಟ್ಟಿನ ಉಪಯೋಗ ಸಹಿತ ಮಾಡಿ ಕಂಡು ಬರುವದಿಲ್ಲ. ತಕಲಿಯಿಂದ ನೂಲುವ 'ತಲವಾ ಪ್ರಕಾರ', 'ಜಾಂಘ ಪ್ರಕಾರ', "ಪಿಂ ಪ್ರಕಾರ" ಇಂಥ ಪದ್ಧತಿಗಳ ಉಪಯೋಗವನ್ನು ಮ ಕಲಿಸುವದಿಲ್ಲ. ಪ್ರತಿ ವರುಷ ನೂಲುವದರಲ್ಲಿ ಆ ಪ್ರಗತಿ ಕಂಡು ಬರಬೇಕು. ಇಲ್ಲದಿದ್ದರೆ ಬಾಲಕ ಬಾ ಯರು ನೂತ ನೂಲು ನೆಯ್ಯಲಿಕ್ಕೆ ಬಹಳೇ ತೊಂ ಯಾಗುವದು, ಮತ್ತು ತಿಲ್ಲು ಬಿದ್ದ ನೂಲಿನ ಸವ ಉಂಟಾಗುವದು. ಕಿಸಾನ ರಾಟೆಯಿಂದ ನೂಲುವ ಸಹಿತ ಬಾಲಕ ಬಾಲಿಕೆಯರಿಗೆ ಸರಿಯಾದ ಪದ್ ಗೊತ್ತು ಇರದಿದ್ದರೆ ಅವರ ನೂತ ನೂಲಿನ ಉಪಯೋ ಮಾಡುವ ಸಮಸ್ಯೆ ಕಠಿಣವಾಗುವದು. ಸಾಧನಗಳ ಸರಿಯಾಗಿ ಉಪಯೋಗಿಸುವದಕ್ಕೆ ಕಲಿಸುವದು ಅತ್ಯ ಶ್ಯಕ. ಬಾಲಕ ಬಾಲಿಕೆಯರಿಗೆ ನೂಲಿನ ಸಮಾನ ಮತ್ತು ಶಕ್ತಿ ಇವುಗಳ ಬಗ್ಗೆ ಸರಿಯಾಗಿ ಮಾಹಿತಿಯ ಮಾಡಿಕೊಡತಕ್ಕದ್ದು. ನೂಲಿನ ನಂಬರು ಮತ್ತು ಅ ಅರಿವೆಯ ಬೆಲೆ ಆಗುವ ಪರಿಣಾಮ ಗೊತ್ತಿರಬೇ ನೂಲುವಾಗ ಪ್ರಮಾಣದಲ್ಲಿ ಹುರಿ ಹಾಕುವ ಮಹ ವನ್ನು ಬಾಲಕ ಬಾಲಿಕೆಯರಿಗೆ ತಿಳಿಸಿ ಹೇಳತಕ್ಕದ್ ಬಾಲಕ ಬಾಲಿಕೆಯರು ಜ್ಞಾನಪೂರ್ವಕ ಮತ್ತ ಭ ಪೂರ್ವಕ ಕರ್ಮವನ್ನು ಮಾಡುವಂತೆ ಅವರಿಗೆ ತರಬೆ ಕೊಡುವದೇ ಜೀವನ ಶಿಕ್ಷಣದ ಉದ್ದೇಶ. ಮೂಲೋ ದ್ಯೋಗದ ಕೆಲಸವು ಮುಗಿದ ನಂತರ ಎಲ್ಲ ಕಸರು ತೆ ಸ್ವಚ್ಛ ಮಾಡುವದು ಹಾಗು ಉಪಯೋಗಿಸಿದ ಉಪಕ ಗಳನ್ನು ಸರಿಯಾಗಿ ಇಡುವದು ಇದನ್ನು ಮರೆಯಬಾರ ತಿಂಗಳಿಗೊಮ್ಮೆ ನೂಲಿನ ವರ್ಗೀಕರಣ ಮಾಡಿ ಇಡಬೇ

ನೂಲು ಕೆಡದಂತೆ ರಕ್ಷಿಸುವದು ನಮ್ಮ ಕರ್ತವ್ಯ. ನೂಲು ಹಾಳಾಗಿ ಹೋದರೆ ಹಾನಿಯಾಗುವದು. ವರ್ಗೀಕರಣ ಮಾಡದೇ ನೂಲು ಇಟ್ಟರೆ ನೆಯ್ಯಲಿಕ್ಕೆ ತೆಗೆದುಕೊಳ್ಳುವ ವೇಳೆಗೆ ತೊಂದರೆಯಾಗುವದು. ಬಹಳ ಉರುಟು ಮತ್ತು ಅಶಕ್ತ ನೂಲು ಇದ್ದರೆ ಹಾನಿಯಾಗುವದು. ಆದುದರಿಂದ ನಾವು ಬಾಲಕ ಬಾಲಕಿಯರಿಗೆ ೧೬ ರಿಂದ ೨೦ ನಂಬರಿನ ನೂಲು ತೆಗೆಯಲಿಕ್ಕೆ ಕಲಿಸತಕ್ಕದ್ದು. ಆದಷ್ಟು ಬೇಗನೆ ನೂಲನ್ನು ದುಬಟಾ ಮಾಡಿ (ಜೋಡಿಳಿ) ಹುರಿ ಹಾಕಿ ದಾರವನ್ನು ಮಾಡಿ ಇಡುವದು ಲಾಭಕರ. ಆದುದರಿಂದ ನಾವು ಕೆಲಸಕ್ಕೆ ಸರಿಯಾಗಿ ಯೋಜನೆಯನ್ನು ಮಾಡಿ ಕೊಂಡು ಅದನ್ನು ಸರಿಯಾಗಿ ಕಾರ್ಯರೂಪದಲ್ಲಿ ತಂದರೆ ಮೂಲೋದ್ಯೋಗವು ಎಲ್ಲ ದೃಷ್ಟಿಯಿಂದ ಲಾಭಕರವಾಗು ವದರಲ್ಲಿ ಸಂದೇಹವಿಲ್ಲ. ಮೇಲಿಂದ ಮೇಲೆ ಬಾಲಕ ಬಾಲಕಿಯರ ನೂಲುವ ಸ್ಪರ್ಧೆಯನ್ನಿಟ್ಟುಕೊಳ್ಳಬೇಕು. ಉತ್ತಮ ನೂಲು ನೋಡಿ ಅದರ ಫಲಿತ ವೇಗವನ್ನು ತೆಗೆದುಕೊಂಡು ಪ್ರಾವಿಣ್ಯವನ್ನು ಜಾಹೀರ ಮಾಡ ತಕ್ಕದ್ದು. ಬಾಲಕ ಬಾಲಕಿಯರಿಗೆ ಎಲ್ಲ ಮಾಹಿತಿ ಮಾಡಿಕೊಡತಕ್ಕದ್ದು.

ನೇಯಿಗೆಯ ವಿಷಯದಲ್ಲಿ ಸಹಿತ, ಎಲ್ಲ ಉಪ ಕ್ರಿಯೆಗಳನ್ನು ಮಾಡುವ ಪೂರ್ವದಲ್ಲಿ ಒಂದು ಯೋಜನೆ ಯನ್ನು ಮಾಡಿಕೊಳ್ಳುವದು ಅವಶ್ಯಕ. ಯೋಜನೆ ಯಿಲ್ಲದೆ ಒಂದೇ ತರದ ಖಾದಿ ಅರಿವೆ ತಯಾರಿಸಿದರೆ ಅರಿವೆಯ ಮಾರಾಟದ ಪ್ರಶ್ನೆ ಕಠಿಣವಾಗುವದು. ಮತ್ತು ನಾಡಿದ ಅರಿವೆಯ ಕಪಾಟು ಬಿಡಲಿಕ್ಕೆ ಒಪ್ಪುವದಿಲ್ಲ. ಆ ದೃಷ್ಟಿಯಿಂದ ಕೆಲವು ಸಂಗತಿಗಳ ಬಗ್ಗೆ ವಿಚಾರ ಮಾಡುವದು ಅವಶ್ಯಕ. (೧) ಅರಿವೆಯ ಉದ್ದ ಅಗಲ. (೨) ಅರಿವೆಯ ಪ್ರಕಾರ (೩) ಅರಿವೆಗೆ ಹತ್ತುವ ನೂಲು. (೪) ಅರಿವೆಯ ಬೆಲೆ. (೫) ಅಂಥ ಅರಿವೆಯ ಪೇಟೆಯ ಬೆಲೆ, ಪೇಟೆಯ ಬೆಲೆಗಿಂತ ಹೆಚ್ಚು ಬೆಲೆಯಾಗಬಾರದು. ಅರಿವೆಯ ಪ್ರಕಾರವು ಬಾಲಕ ಬಾಲಕಿಯರಿಗೆ ನಿತ್ಯ ಉಪಯೋಗಕ್ಕೆ ಬರುವಂತೆ ಇದ್ದರೆ ಉತ್ತಮ. ಅಂಗಿಯ ಅರಿವೆ, ಕೈವಸ್ತ್ರ, ಟಾವೆಲ, ಕೋಟಂಗ, ಜಮಖಾನ ಇಂಥ ಅರಿವೆಗಳು. ಸ್ವಲ್ಪ ಒಣ್ಣದ ದಾರವನ್ನು ಉಪ ಯೋಗಿಸಿ ಆಕರ್ಷಕವಾಗುವಂತೆ ಮಾಡಿಕೊಳ್ಳಬೇಕು. ಕೆಳಗಿನ ವರ್ಗದ ಉರುಟು ನೂಲಿನಿಂದ ಗುಡಾರಪಟ್ಟಿ ಗಳನ್ನು ನೆಯ್ಯುವದು ಉತ್ತಮ. ಆದರೆ ದಪ್ಪಾದ ಗುಡಾರ ಪಟ್ಟಿ ಮತ್ತು ಆಸನಗಳನ್ನು ಮಾಡಿದರೆ ಅವುಗಳ ಬೆಲೆ ಜನರ ಕ್ರಯ ಶಕ್ತಿಗೆ ಒಗ್ಗುವದಿಲ್ಲ. ಮತ್ತು ಮಾರಾಟ ಆಗದೆ ಸಾಲೆಯಲ್ಲಿ ಉಳಿಯುವದು. ನೆಯ್ಗೆಯ ಕ್ರಿಯೆಗಳಲ್ಲಿ ಹೆಚ್ಚು ನೂಲು ಹಾಳಾದರೆ ಅರಿವೆಯ ಬೆಲೆಯು ಹೆಚ್ಚಾ ಗುವದು. ಈ ಸಂಗತಿಯನ್ನು ಬಾಲಕ ಬಾಲಿಕೆಯರಿಗೆ ತಿಳಿಸಿ ಹೇಳತಕ್ಕದ್ದು. ನೇಯಿಗೆ ಸುಗಮವಾಗಿ ಸಾಗ ಬೇಕಾದರೆ ಹತ್ತಿಯ ಸ್ವಚ್ಛತೆಯಿಂದ ನೆಯ್ಯುವ ವರೆಗೆ ಎಲ್ಲ ಉಪಕ್ರಿಯೆಗಳಲ್ಲಿಯ ಪ್ರತಿಯೊಂದು ತಪ್ಪು ಮಗ್ಗದಲ್ಲಿ ತೊಂದರೆ ಕೊಡದೆಬಿಡುವದಿಲ್ಲ. ಅದು ಅರಿವೆಯನ್ನು ಕೆಡಿಸುವದಕ್ಕೆ ಕಾರಣೀಭೂತವಾಗುವದು. ನೂಲಿನ ಹಾಳಿನಿಂದ ನಮಗೆ ಚಿಅರಮ್ಯಾಟ, ಲಾಡಿ, ಗೊಂಡೆ ನೊದಲಾದ ಉಪಯುಕ್ತ ವಸ್ತುಗಳನ್ನು ಮಾಡಲಿಕ್ಕೆ ಬರುವದು. ಈ ಎಲ್ಲ ಸಂಗತಿಗಳನ್ನು ಲಕ್ಷ್ಯದಲ್ಲಿ ತೆಗೆದು ಕೊಂಡು ನಾವು ಜಾಗರೂಕತೆಯಿಂದ ಕೆಲಸವನ್ನು ಸಾಗಿಸಿದರೆ ಮೂಲೋದ್ಯೋಗವು ಲಾಭಕರವಾಗುವದು ಮತ್ತು ಅದರಿಂದ ಬಾಲಕ ಬಾಲಕಿಯರಿಗೆ ಶೈಕ್ಷಣಿಕ ಲಾಭವಾಗುವದರಲ್ಲಿ ಸಂದೇಹವಿಲ್ಲ.

ನಾವು ಈಗ ಕೈತೋಟ ಮತ್ತು ಒಕ್ಕಲತನ ಈ ಮೂಲೋದ್ಯೋಗದ ಬಗ್ಗೆ ವಿಚಾರಿಸೋಣ. ಕೈತೋಟ ವನ್ನು ಎಲ್ಲ ಜೀವನ ಶಿಕ್ಷಣ ಶಾಲೆಗಳಲ್ಲಿ ಮಾಡಬೇಕು. ಶಾಲೆಯ ಸುತ್ತುಮುತ್ತಲಿದ್ದ ಖಾಲಿ ಜಾಗೆಯಲ್ಲಿ ನಾವು ಕೈತೋಟ ಮಾಡಬಹುದು. ಈ ಕೆಲಸಕ್ಕೆ ನಾವು ಮೊದಲು ಯೋಜನೆಯನ್ನು ಮಾಡಿಕೊಳ್ಳುವದು ಅತ್ಯಾವಶ್ಯಕವು. ಇದ್ದ ಭೂಮಿಯಲ್ಲಿ ೩' × ೪' ಅಳ ತೆಯ ಮಡಿಗಳನ್ನು ಮಾಡಿಕೊಂಡು ಬಾಲಕರಿಗೆ ಹಂಚಿ ಕೊಡತಕ್ಕದ್ದು. ಶಾಲೆಯ ಸುತ್ತುಮುತ್ತಲು ಕೆಲವು ಹೂವಿನ ಗಿಡಗಳು ಮತ್ತು ತುಲಸೀ ಗಿಡಗಳನ್ನು ಹಚ್ಚ ಬೇಕು. ಕೈತೋಟದ ಸುತ್ತುಮುತ್ತಲು ಕಳ್ಳಿಗಿಡಗಳನ್ನು ಹಚ್ಚಿ ಕೆಲವು ಜಾಲಿಮುಳ್ಳು ಹಾಕಿಡಬೇಕು. ಭೂಮಿ ಯನ್ನು ಅಗಿಯಬೇಕು ಮತ್ತು ಮಣ್ಣಿನಲ್ಲಿ ಕುಣಿಯ ಗೊಬ್ಬರ ಅಥವಾ ಕಂಪೋಸ್ಟ ಗೊಬ್ಬರವನ್ನು ಹಾಕ ಬೇಕು. ಮರಡಿ ಭೂಮಿ ಇದ್ದಲ್ಲಿ ಅದರಲ್ಲಿ ಸಹಕಾರಿ ತತ್ವದ ಉಪಯೋಗ ಮಾಡಿಕೊಂಡು ಕೆಲವು ಹಳ್ಳದ ಅಥವಾ ಕೆರೆಯ ಮಣ್ಣನ್ನು ಹಾಕಬೇಕು. ಆಮೇಲೆ ಕೈತೋಟದಲ್ಲಿ ಹಚ್ಚುವ ಗಿಡಗಳ ಬಗ್ಗೆ ವಿಚಾರಿಸ ತಕ್ಕದ್ದು. ಮೇ ತಿಂಗಳಿಂದ ಅಕ್ಟೋಬರ ತಿಂಗಳ ವರೆಗೆ (೧) ಮೆಣಸಿನ ಅಗಿ (೨) ತಿಂಗಳ ಅವರಿ (೩) ಮೂಲಂಗಿ (೪) ಬೆಂಡಿ (೫) ಚವಳೇಕಾಯಿ (೬) ಬದನೇಕಾಯಿ (೭) ಉಳ್ಳಿಗಡ್ಡಿ ಪಲ್ಲೆ ಮೊದಲಾದವು

ಬಹುದಾದ ತಪ್ಪುಗಳ ಬಗ್ಗೆ ಅವರಿಗೆ ಸರಿಯಾದ ಜ್ಞಾನವನ್ನು ಕೊಟ್ಟು ಅವರಿಂದ ಆದ ತಪ್ಪುಗಳ ಬಗ್ಗೆ ಅವರಿಗೆ ಸರಿಯಾದ ಕಲ್ಪನೆಯನ್ನು ಮಾಡಿಕೊಟ್ಟು ತಿದ್ದತಕ್ಕದ್ದು. ಬಾಲಕ-ಬಾಲಿಕೆಯರಿಗೆ ಉತ್ತಮ ಕೆಲಸದ ಮಾದರಿಗಳನ್ನು ತೋರಿಸಿ ಅವುಗಳ ಲಕ್ಷಣಗಳನ್ನು ಹೇಳಿಕೊಡಬೇಕು. ಮಾಡಿದ ಎಲ್ಲ ಕೆಲಸದ ಪರಿಶೀಲನೆ ಮಾಡಿತೋರಿಸಬೇಕು. ನಮ್ಮ ಸಾಲೆಗಳಲ್ಲಿ ಉತ್ತಮ ಕೆಲಸ ಮಾಡುವ ಅವಶ್ಯಕತೆ ಮತ್ತು ಸಾಲೆಗೆ ಆದ ಲಾಭ-ಹಾನಿಯ ಬಗ್ಗೆ ಅವರಿಗೆ ಕಲ್ಪನೆ ಮಾಡಿಕೊಡಬೇಕು. ಮೂಲೋದ್ಯೋಗದಲ್ಲಿ ಆದ ಲಾಭದಿಂದ ಸರಕಾರವು ಮಧ್ಯಾಹ್ನದ ಊಟ ಮತ್ತು ಸ್ಕಾಲರಶಿಪ್ಪು ಮೊದಲಾದ ಯೋಜನೆ ಮಾಡುವರೆಂದು ಅವರಿಗೆ ಕಲ್ಪನೆ ಮಾಡಿಕೊಡಬೇಕು. ಉತ್ತಮ ಅರಿವೆ ತಯಾರಾದರೆ, ತೊಟ್ಟುಕೊಳ್ಳುವವನಿಗೆ ಆನಂದವಾಗುವದು. ಆದುದರಿಂದ ನಾವು ಜಾಗರೂಕತೆಯಿಂದ ಅರಿವೆಯು ಉತ್ತಮವಾಗುವಂತೆ ಪ್ರಯತ್ನ ಮಾಡಬೇಕು. ಬಾಲಕರಿಗೆ ಯಾವದೇ ಕೆಲಸವನ್ನು ಮನಸ್ಸುಗೊಟ್ಟು ಮಾಡಲಿಕ್ಕೆ ಕಲಿಸುವದು ಇದೇ ಶಿಕ್ಷಣದ ಧ್ಯೇಯ. ಮೂಲೋದ್ಯೋಗದ ಕೆಲಸದಲ್ಲಿ ಸಹಿತ ನಾವು ಇದನ್ನು ಮರೆಯಲಾರೆವು.

ಮೂಲೋದ್ಯೋಗಕ್ಕೆ ಬೇಕಾಗುವ ಕಚ್ಚಾ ಮಾಲು ಉತ್ತಮ ಇರಬೇಕು. ನೂಲುವದು ಮತ್ತು ನೇಯಿಗೆ ಉದ್ಯೋಗದ ಬಗ್ಗೆ ವರ್ಷಕ್ಕೆ ಬೇಕಾಗುವ ಹತ್ತಿಯನ್ನು ಕೊಳ್ಳುವದಕ್ಕೆ ಬೇಕಾಗುವ ಯೋಜನೆ ಮಾಡಿ ಹಣವನ್ನು ದೊರಕಿಸಿ ಮೊದಲನೇ ಸಾರೆ ಬಿಡಿಸಿದ ಹತ್ತಿಯನ್ನು ಕೊಂಡುಕೊಳ್ಳತಕ್ಕದ್ದು. ಅಂದರೆ ಅದರಲ್ಲಿ ಕಸಿರು ಕಡಿಮೆ ಇರುವದರಿಂದ ಕೆಲಸವನ್ನು ಮಾಡುವದಕ್ಕೆ ಬಾಲಕ ಬಾಲಿಕೆಯರಿಗೆ ಉತ್ಸಾಹ ಬರುವದು. ಕೊಂಡ ಹತ್ತಿಯನ್ನು ಸರಿಯಾಗಿ ಡ್ರಮ್ಮಿನಲ್ಲಿ ಮುಚ್ಚಿ ಇಡತಕ್ಕದ್ದು. ಆ ಮೇಲೆ ಹತ್ತಿಯನ್ನು ಸ್ವಚ್ಛ ಮಾಡಿಸಿ, ಅರೆದುಕೊಂಡು ಹಿಂಜಿ ಹಂಜಿಗಳನ್ನು ಮಾಡಿಕೊಂಡು ಜೆನ್ನಾಗಿ ಕಟ್ಟಿಇಡಬೇಕು. ಬಂದ ಹತ್ತಿಯ ಕಾಳುಮಾರಿ, ಬಂದ ಹಣ ಜಮಾ ಮಾಡಿಬಿಡಬೇಕು. ಇಲ್ಲದಿದ್ದರೆ ಇಲಿಗಳು ಅದನ್ನು ಹಾಳು ಮಾಡುವವು, ಮತ್ತು ಹಾನಿಯಾಗುವದು. ಬಂದ ಕಸಿರನ್ನು ಒಟ್ಟುಗೂಡಿಸಿ ಅದರಿಂದ ತಕ್ಕೆ ಮತ್ತು ಗೊಂಬೆಗಳನ್ನು ಮಾಡತಕ್ಕದ್ದು. ತಕಲಿಯಿಂದ ನೂಲುವಾಗ ಬಾಲಕ ಬಾಲಿಕೆಯರಿಗೆ ಬೇರೆ ಬೇರೆ ಪದ್ಧತಿಗಳನ್ನು ಕಲಿಸತಕ್ಕದು. ಪ್ರಾರಂಭದಿಂದ ಕೊನೆ ವರೆಗೆ ಬಾಲಕ ಬಾಲಿಕೆಯರು ಮತ್ತು ಶಿಕ್ಷಕರು ಸ ಅದೆ ಮೊದಲನೆಯ ಪದ್ಧತಿಯಿಂದ ನೂಲುವದು ಕ ಬರುತ್ತದೆ. ಆಗಿಂದಾಗ್ಗೆ ಬಾಲಕ ಬಾಲಿಕೆಯರ ವನ್ನು ಕಂಡು ಹಿಡಿದು ಟಿಪ್ಪಣಿ ಇಟ್ಟುಕೊಂಡು ಅ ಪ್ರಗತಿಯನ್ನು ಅಳೆಯಬೇಕು. ಬಾಲಕ ಬಾಲಿಕೆಯ ಕಿಸಾನ ರಾಟೆಯಿಂದ ನೂಲಲಿಕ್ಕೆ ಪ್ರಾರಂಭಿಸಿದ ನಂ ತಕಲಿಯನ್ನು ಮರೆತುಬಿಡುವರು. ತಕಲಿಯಿಂದ ನೂ ವಾಗ ಬೂದಿಯ ಉಪಯೋಗವನ್ನು ಮಾಡುವದು ಕ ಬರುವದಿಲ್ಲ. ಬಾಲಕ ಬಾಲಿಕೆಯರಿಗೆ ಇದರ ಶಾಸ್ತ್ರೀ ಕಾರಣಗಳನ್ನು ತಿಳಿಸಿ ಹೇಳದಿದ್ದರೆ, ಅದರ ಮಹತ್ತ ತಿಳಿಯುವದಿಲ್ಲ. ರಟ್ಟಿನ ಉಪಯೋಗ ಸಹಿತ ಮಾ ಕಂಡು ಬರುವದಿಲ್ಲ. ತಕಲಿಯಿಂದ ನೂಲುವ 'ತಲವಾ ಪ್ರಕಾರ', 'ಜಾಂಘೆ ಪ್ರಕಾರ', "ಸಿಂ ಪ್ರಕಾರ" ಇಂಥ ಪದ್ಧತಿಗಳ ಉಪಯೋಗವನ್ನು ಮಾ ಕಲಿಸುವದಿಲ್ಲ. ಪ್ರತಿ ವರುಷ ನೂಲುವದರಲ್ಲಿ ಅ ಪ್ರಗತಿ ಕಂಡು ಬರಬೇಕು. ಇಲ್ಲದಿದ್ದರೆ ಬಾಲಕ ಬಾ ಯರು ನೂತ ನೂಲು ನೆಯ್ಯಲಿಕ್ಕೆ ಬಹಳೇ ತೊಂ ಯಾಗುವದು, ಮತ್ತು ತಿಲ್ಕು ಬಿದ್ದ ನೂಲಿನ ಸಮ ಉಂಟಾಗುವದು. ಕಿಸಾನ ರಾಟೆಯಿಂದ ನೂಲುವ ಸಹಿತ ಬಾಲಕ ಬಾಲಿಕೆಯರಿಗೆ ಸರಿಯಾದ ಪದ್ ಗೊತ್ತು ಇರದಿದ್ದರೆ ಅವರ ನೂತ ನೂಲಿನ ಉಪಯೊ ಮಾಡುವ ಸಮಸ್ಯೆ ಕಠಿಣವಾಗುವದು. ಸಾಧನಗಳ ಸರಿಯಾಗಿ ಉಪಯೋಗಿಸುವದಕ್ಕೆ ಕಲಿಸುವದು ಅತ್ಯಾ ಶ್ಯಕ. ಬಾಲಕ ಬಾಲಿಕೆಯರಿಗೆ ನೂಲಿನ ಸಮಾನ ಮತ್ತು ಶಕ್ತಿ ಇವುಗಳ ಬಗ್ಗೆ ಸರಿಯಾಗಿ ಮಾಹಿತಿಯ ಮಾಡಿಕೊಡತಕ್ಕದ್ದು. ನೂಲಿನ ನಂಬರು ಮತ್ತು ಅ ಅರಿವೆಯ ಬೆಲೆ ಆಗುವ ಪರಿಣಾಮ ಗೊತ್ತಿರಬೇ ನೂಲುವಾಗ ಪ್ರಮಾಣದಲ್ಲಿ ಹುರಿ ಹಾಕುವ ಮಹ ವನ್ನು ಬಾಲಕ ಬಾಲಿಕೆಯರಿಗೆ ತಿಳಿಸಿ ಹೇಳತಕ್ಕವ ಬಾಲಕ ಬಾಲಿಕೆಯರು ಜ್ಞಾನಪೂರ್ವಕ ಮತ್ತ ಭ ಪೂರ್ವಕ ಕರ್ಮವನ್ನು ಮಾಡುವಂತೆ ಅವರಿಗೆ ತರಬೆ ಕೊಡುವದೇ ಜೀವನ ಶಿಕ್ಷಣದ ಉದ್ದೇಶ. ಮೂಲೋ ದ್ಯೋಗದ ಕೆಲಸವು ಮುಗಿದ ನಂತರ ಎಲ್ಲ ಕಸರು ತೆ ಸ್ವಚ್ಛ ಮಾಡುವದು ಹಾಗು ಉಪಯೋಗಿಸಿದ ಉಪಕರ ಗಳನ್ನು ಸರಿಯಾಗಿ ಇಡುವದು ಇದನ್ನು ಮರೆಯಬಾರದ ತಿಂಗಳಿಗೊಮ್ಮೆ ನೂಲಿನ ವರ್ಗೀಕರಣ ಮಾಡಿ ಇಡಬೇಕ

ಲು ಕೆಡದಂತೆ ರಕ್ಷಿಸುವದು ನಮ್ಮ ಕರ್ತವ್ಯ. ನೂಲು ಳಾಗಿ ಹೋದರೆ ಹಾನಿಯಾಗುವದು. ವರ್ಗೀಕರಣ ಡದೇ ನೂಲು ಇಟ್ಟರೆ ನೆಯ್ಯಲಿಕ್ಕೆ ತೆಗೆದುಕೊಳ್ಳುವ ಳಿಗೆ ತೊಂದರೆಯಾಗುವದು. ಬಹಳ ಉರುಟು ಮತ್ತು ಕ್ತ ನೂಲು ಇದ್ದರೆ ಹಾನಿಯಾಗುವದು. ಆದುದರಿಂದ ವು ಬಾಲಕ ಬಾಲಿಕೆಯರಿಗೆ ೧೬ ರಿಂದ ೩೦ ನಂಬರಿನ ಲು ತೆಗೆಯಲಿಕ್ಕೆ ಕಲಿಸತಕ್ಕದ್ದು. ಆದಷ್ಟು ಬೇಗನೆ ಲನ್ನು ದುಬಟಾ ಮಾಡಿ (ಜೋಡಿಳೆ) ಹುರಿ ಹಾಕಿ ರವನ್ನು ಮಾಡಿ ಇಡುವದು ಲಾಭಕರ. ಆದುದರಿಂದ ವು ಕೆಲಸಕ್ಕೆ ಸರಿಯಾಗಿ ಯೋಜನೆಯನ್ನು ಮಾಡಿ ಂಡು ಅದನ್ನು ಸರಿಯಾಗಿ ಕಾರ್ಯರೂಪದಲ್ಲಿ ತಂದರೆ ೂಲೋದ್ಯೋಗವು ಎಲ್ಲ ದೃಷ್ಟಿಯಿಂದ ಲಾಭಕರವಾಗು ರಲ್ಲಿ ಸಂದೇಹವಿಲ್ಲ. ಮೇಲಿಂದ ಮೇಲೆ ಬಾಲಕ ಲಿಕೆಯರ ನೂಲುವ ಸ್ಪರ್ಧೆಯನ್ನಿಟ್ಟುಕೊಳ್ಳಬೇಕು. ತ್ತಮ ನೂಲು ನೋಡಿ ಅದರ ಫಲಿತ ವೇಗವನ್ನು ದುಕೊಂಡು ಪ್ರಾವಿಣ್ಯವನ್ನು ಜಾಹೀರ ಮಾಡ ಕ್ಕದ್ದು. ಬಾಲಕ ಬಾಲಿಕೆಯರಿಗೆ ಎಲ್ಲ ಮಾಹಿತಿ ಂಡಿಕೊಡತಕ್ಕದ್ದು.

ನೇಯಿಗೆಯ ವಿಷಯದಲ್ಲಿ ಸಹಿತ, ಎಲ್ಲ ಉಪ ಯೆಗಳನ್ನು ಮಾಡುವ ಪೂರ್ವದಲ್ಲಿ ಒಂದು ಯೋಜನೆ ನ್ನು ಮಾಡಿಕೊಳ್ಳುವದು ಅವಶ್ಯಕ. ಯೋಜನೆ ಲ್ಲದೆ ಒಂದೇ ತರದ ಖಾದಿ ಅರಿವೆ ತಯಾರಿಸಿದರೆ ವೆಯ ಮಾರಾಟದ ಪ್ರಶ್ನೆ ಕಠಿಣವಾಗುವದು. ಮತ್ತು ಂಡಿದ ಅರಿವೆಯ ಕಪಾಟು ಬಿಡಲಿಕ್ಕೆ ಒಪ್ಪುವದಿಲ್ಲ.

ದೃಷ್ಟಿಯಿಂದ ಕೆಲವು ಸಂಗತಿಗಳ ಬಗ್ಗೆ ವಿಚಾರ ಂಡುವದು ಅವಶ್ಯಕ. (೧) ಅರಿವೆಯ ಉದ್ದ ಅಗಲ. (೨) ಅರಿವೆಯ ಪ್ರಕಾರ (೩) ಅರಿವೆಗೆ ಹತ್ತುವ ನೂಲು. (೪) ಅರಿವೆಯ ಬೆಲೆ. (೫) ಅಂಥ ಅರಿವೆಯ ಪೇಟೆಯ ಬೆಲೆ, ಪೇಟೆಯ ಬೆಲೆಗಿಂತ ಹೆಚ್ಚು ಬೆಲೆಯಾಗಬಾರದು. ಅರಿವೆಯ ಪ್ರಕಾರವು ಬಾಲಕ ಬಾಲಿಕೆಯರಿಗೆ ನಿತ್ಯ ಉಪಯೋಗಕ್ಕೆ ಬರುವಂತೆ ಇದ್ದರೆ ಉತ್ತಮ. ಅಂಗಿಯ ಅರಿವೆ, ಕೈವಸ್ತ್ರ, ಟಾವೆಲ, ಕೋಟಿಂಗ, ಜಮಖಾನ ಇಂಥ ಅರಿವೆಗಳು. ಸ್ವಲ್ಪ ಒಣ್ಣದ ದಾರವನ್ನು ಉಪ ಯೋಗಿಸಿ ಆಕರ್ಷಕವಾಗುವಂತೆ ಮಾಡಿಕೊಳ್ಳಬೇಕು. ಕೆಳಗಿನ ವರ್ಗದ ಉರುಟು ನೂಲಿನಿಂದ ಗುಡಾರಪಟ್ಟಿ ಗಳನ್ನ ನೆಯ್ಯುವದು ಉತ್ತಮ. ಆದರೆ ದಪ್ಪಾದ ಗುಡಾರ ಪಟ್ಟಿ ಮತ್ತು ಆಸನಗಳನ್ನು ಮಾಡಿದರೆ ಅವುಗಳ ಬೆಲೆ ಜನರ ಕ ಯ ಶಕ್ತಿಗೆ ಒಗ್ಗುವದಿಲ್ಲ. ಮತ್ತು ಮಾರಾಟ ಆಗದೆ ಶಾಲೆಯಲ್ಲಿ ಉಳಿಯುವದು. ನೆಯ್ಗೆಯ ಕ್ರಿಯೆಗಳಲ್ಲಿ ಹೆಚ್ಚು ನೂಲು ಹಾಳಾದರೆ ಅರಿವೆಯ ಬೆಲೆಯು ಹೆಚ್ಚಾಗುವದು. ಈ ಸಂಗತಿಯನ್ನು ಬಾಲಕ ಬಾಲಿಕೆಯರಿಗೆ ತಿಳಿಸಿ ಹೇಳತಕ್ಕದ್ದು. ನೇಯಿಗೆ ಸುಗಮವಾಗಿ ಸಾಗ ಬೇಕಾದರೆ ಹತ್ತಿಯ ಸ್ವಚ್ಛತೆಯಿಂದ ನೆಯ್ಯುವ ವರೆಗೆ ಎಲ್ಲ ಉಪಕ್ರಿಯೆಗಳಲ್ಲಿಯ ಪ್ರತಿಯೊಂದು ತಪ್ಪು ಮಗ್ಗದಲ್ಲಿ ತೊಂದರೆ ಕೊಡದೆಬಿಡುವದಿಲ್ಲ. ಅದು ಅರಿವೆಯನ್ನು ಕೆಡಿಸುವದಕ್ಕೆ ಕಾರಣೀಭೂತವಾಗುವದು. ನೂಲಿನ ಜಾಳಿನಿಂದ ನಮಗೆ ಜೆಅರಮ್ಯಾಟ, ಲಾಡಿ, ಗೊಂಡೆ ಮೊದಲಾದ ಉಪಯುಕ್ತ ವಸ್ತುಗಳನ್ನು ಮಾಡಲಿಕ್ಕೆ ಬರುವದು. ಈ ಎಲ್ಲ ಸಂಗತಿಗಳನ್ನು ಲಕ್ಷ್ಯದಲ್ಲಿ ತೆಗೆದು ಕೊಂಡು ನಾವು ಜಾಗರೂಕತೆಯಿಂದ ಕೆಲಸವನ್ನು ಸಾಗಿಸಿದರೆ ಮೂಲೋದ್ಯೋಗವು ಲಾಭಕರವಾಗುವದು ಮತ್ತು ಅದರಿಂದ ಬಾಲಕ ಬಾಲಕಿಯರಿಗೆ ಶೈಕ್ಷಣಿಕ ಲಾಭವಾಗುವದರಲ್ಲಿ ಸಂದೇಹವಿಲ್ಲ.

ನಾವು ಈಗ ಕೈತೋಟ ಮತ್ತು ಒಕ್ಕಲತನ ಈ ಮೂಲೋದ್ಯೋಗದ ಬಗ್ಗೆ ವಿಚಾರಿಸೋಣ. ಕೈತೋಟವನ್ನು ಎಲ್ಲ ಜೀವನ ಶಿಕ್ಷಣ ಶಾಲೆಗಳಲ್ಲಿ ಮಾಡಬೇಕು. ಶಾಲೆಯ ಸುತ್ತುಮುತ್ತಲಿದ್ದ ಖಾಲಿ ಜಾಗೆಯಲ್ಲಿ ನಾವು ಕೈತೋಟ ಮಾಡಬಹುದು. ಈ ಕೆಲಸಕ್ಕೆ ನಾವು ಮೊದಲು ಯೋಜನೆಯನ್ನು ಮಾಡಿಕೊಳ್ಳುವದು ಅತ್ಯಾವಶ್ಯಕವು. ಇದ್ದ ಭೂಮಿಯಲ್ಲಿ ೩' × ೪' ಆಳತೆಯ ಮಡಿಗಳನ್ನು ಮಾಡಿಕೊಂಡು ಬಾಲಕರಿಗೆ ಹಂಚಿ ಕೊಡತಕ್ಕದ್ದು. ಶಾಲೆಯ ಸುತ್ತುಮುತ್ತಲು ಕೆಲವು ಹೂವಿನ ಗಿಡಗಳು ಮತ್ತು ತುಲಸೀ ಗಿಡಗಳನ್ನು ಹಚ್ಚಬೇಕು. ಕೈತೋಟದ ಸುತ್ತುಮುತ್ತಲು ಕಳ್ಳೀಗಿಡಗಳನ್ನು ಹಚ್ಚಿ ಕೆಲವು ಜಾಲಿಮುಳ್ಳು ಹಾಕಿಡಬೇಕು. ಭೂಮಿಯನ್ನು ಅಗಿಯಬೇಕು ಮತ್ತು ಮಣ್ಣಿನಲ್ಲಿ ಕುಣಿಯ ಗೊಬ್ಬರ ಅಥವಾ ಕಂಪೋಸ್ಟ ಗೊಬ್ಬರವನ್ನು ಹಾಕಬೇಕು. ಮರಡಿ ಭೂಮಿ ಇದ್ದಲ್ಲಿ ಅದರಲ್ಲಿ ಸಹಕಾರಿ ತತ್ವದ ಉಪಯೋಗ ಮಾಡಿಕೊಂಡು ಕೆಲವು ಹಳ್ಳದ ಅಥವಾ ಕೆರೆಯ ಮಣ್ಣನ್ನು ಹಾಕಬೇಕು. ಆಮೇಲೆ ಕೈತೋಟದಲ್ಲಿ ಹಚ್ಚುವ ಗಿಡಗಳ ಬಗ್ಗೆ ವಿಚಾರಿಸತಕ್ಕದ್ದು. ಮೇ ತಿಂಗಳಿಂದ ಅಕ್ಟೋಬರ ತಿಂಗಳ ವರೆಗೆ (೧) ಮೆಣಸಿನ ಅಗಿ (೨) ತಿಂಗಳ ಅಮರಿ (೩) ಮೂಲಂಗಿ (೪) ಬೆಂಡಿ (೫) ಚವಳೇಕಾಯಿ (೬) ಬದನೇಕಾಯಿ (೭) ಉಳ್ಳೀಗಡ್ಡಿ ಪಲ್ಲೆ ಮೊದಲಾದವು

ಗಳನ್ನು ಹಚ್ಚತಕ್ಕದ್ದು. ಚಳಿಗಾಲದಲ್ಲಿ (೧) ಗಜ್ಜರಿ (೨) ಕೋಬಿ (೩) ನವಲಕೋಲ (೪) ಕಾಲಿ ಫ್ಲಾವರ (೫) ಮೆಂತೆ (೬) ರಾಜಗಿರಿ (೭) ಮೂಲಂಗಿ ಮೊದಲಾದವುಗಳನ್ನು ಹಚ್ಚಬೇಕು. ಮಳೆಗಾಲದಲ್ಲಿ ನೀರು ಹಾಕುವ ಆವಶ್ಯಕತೆ ಇರುವದಿಲ್ಲ. ಬೇಸಿಗೆಯಲ್ಲಿ ವಾರಕ್ಕೆ ಒಮ್ಮೆಯಾದರೂ ಸಹಕಾರಿ ತತ್ವದಿಂದ ನೀರು ಹಾಕುವ ಕೆಲಸವನ್ನು ಬಾಲಕ ಬಾಲಿಕೆಯರೇ ಮಾಡತಕ್ಕದ್ದು. ಸಕಾಲಕ್ಕೆ ಮೇಲಿಂದ ಮೇಲೆ ನೆಲವನ್ನು ಕುರಪಣಿ ಮಾಡಿಕೊಂಡು ಕಳೆ ತೆಗೆಯುವದು ಅತ್ಯಾವಶ್ಯಕ. ಅದೇ ನೇಳೆಗೆ ರೋಗಜಂತುಗಳಿದ್ದರೆ ತೆಗೆದು ಹಾಕಿ ಕೆಲವು ರೋಗನಾಶಕ ಔಷಧದ ಉಪಯೋಗವನ್ನು ಮಾಡುವದು ವಿಹಿತ. ಎರಡು ಸಾಲಿನಲ್ಲಿ ಇಡುವ ಅಂತರ ಮತ್ತು ಎರಡು ಗಿಡಗಳ ನಡುವೆ ಇಡಬೇಕಾದ ಅಂತರ ಗುರುತಿಸತಕ್ಕದ್ದು. ಎಲ್ಲ ಕೆಲಸಗಳನ್ನು ಬಾಲಕ ಬಾಲಿಕೆಯರೇ ಮಾಡತಕ್ಕದ್ದು. ನಿರೀಕ್ಷಣೆ ಮಾಡಿ ಟಿಪ್ಪಣಿ ಇಡುವದು, ಮತ್ತು ಜಮಾಖರ್ಚು ಇಡುವದನ್ನು ಮಾಡಿದರೆ ಬಾಲಕ ಬಾಲಿಕೆಯರಿಗೆ ಸರಿಯಾದ ಜ್ಞಾನವಾಗುವದು. ಮೇಲಿನ ವರ್ಗಗಳಲ್ಲಿ (೫-೬-೭) ಒಕ್ಕಲತನ ಮೂಲೋದ್ಯೋಗದಲ್ಲಿ ಸಹಿತ ಈ ಸೂಚನೆಗಳನ್ನು ಉಪಯೋಗಿಸತಕ್ಕದ್ದು. ಹೊಲದಲ್ಲಿ ಎರಡು ಅಥವಾ ಮೂರು ಭಾಗಗಳನ್ನು ಮಾಡಿಕೊಂಡು ಬೇರೆ ಬೇರೆ ಪೈರು ಹಚ್ಚಬೇಕು. ಪ್ರತಿ ವರುಷ ಅದೇ ಮೇಳೆ ಹಚ್ಚಿದರೆ ಲಾಭಕರವಾಗಲಾರದು. ಒಕ್ಕಲುತನದ ಕೆಲಸವನ್ನು ಸಕಾಲಕ್ಕೆ ಮಾಡುವ ಮಹತ್ವವನ್ನು ಬಾಲಕ ಬಾಲಿಕೆಯರಿಗೆ ತಿಳಿಸಿ ಹೇಳತಕ್ಕದ್ದು. ಆದಷ್ಟು ಎಲ್ಲ ಕೆಲಸಗಳನ್ನು ಬಾಲಕರೇ ಮಾಡಬೇಕು. ಎತ್ತುಗಳ ಉಪಯೋಗವನ್ನು ಬೇಸಿಗೆಯ ಸೂಟಿಯಲ್ಲಿ ಮಾಡಬೇಕಾಗುವದು. ಆ ಕೆಲಸವನ್ನು ಆವಶ್ಯಕತೆ ಇದ್ದಲ್ಲಿ ಬೇರೆಯವರಿಗೆ ಒಪ್ಪಿಸಿ ಮಾಡಿಸಬಹುದು. ಯಾವತ್ತು ಕಳೆ ತೆಗೆದು ಹೊಲವನ್ನು ಸ್ವಚ್ಛ ಇಡತಕ್ಕದ್ದು. ಅಂದರೆ ಬೆಳೆಗಳ ಉತ್ಪಾದನೆ ಹೆಚ್ಚಿಸುವದು. ಎಲ್ಲ ಲೆಕ್ಕವನ್ನು ಬಾಲಕ ಬಾಲಿಕೆಯರಿಂದ ಜೊಕ್ಕಟವಾಗಿ ಇಡಿಸತಕ್ಕದ್ದು. ಒಟ್ಟಿನ ಮೇಲೆ ಒಕ್ಕಲತನ ಲಾಭ ಕೊಡುವಂತೆ ನೋಡಿಕೊಳ್ಳತಕ್ಕದ್ದು. ಒಕ್ಕಲತನದ ಶಾಲೆಗಳಲ್ಲಿ ಕೆಳಗಿನ ಮಾತುಗಳನ್ನು ಗಮನಿಸತಕ್ಕದ್ದು. (೧) ಮಡಿಯಲ್ಲಿ ಬೀಜ ಬಿತ್ತುವಾಗ ತಪ್ಪು ಮಾಡಿದರೆ ಬೆಳೆಯು ನಿಪ್ಪ್ರಯೋಜಕವಾಗುವದು (೨) ಬೀಜವನ್ನು ಸ್ವಚ್ಛ ಮಾಡಿ ಗಂಧಕ ಪುಡಿಯನ್ನು ತಿಕ್ಕಿ ಹಚ್ಚಿದರೆ ರೋಗಜಂತುಗಳು ಓಡಿಹೋಗುವವು. (೩) ಹೊಲವನ್ನು ಕಾಯುವವನಿಲ್ಲದೆ ಬೆಳೆಯು ಕಡಿಮೆಯಾಗುವುದಿಲ್ಲ (೪) ದಟ್ಟವಾಗಿ ಬಿತ್ತಿದರೆ ಮೇವು ಅಷ್ಟೇ ಸಿಗುವದು (೫) ಮೇಲಿಂದ ಮೇಲೆ ನೀರುಣಿಸುವದರಿಂದ ಬೆಳೆಯ ಬರಗಾಲವಿಲ್ಲ (೬) ಸಕಾಲಕ್ಕೆ ಕುರಪಣಿ ಮಾಡದಿದ್ದರೆ (ಎ) ಹೊಡೆಯದಿದ್ದರೆ) ಆತನಿಗೆ ಉಪವಾಸವಾಗುವದು ನಿಜ (೭) ಒಳ್ಳೆಯ ಬೀಜವನ್ನು ಬಿತ್ತಿದರೆ ಉತ್ತಮ ಬೆಳೆ ಬರುವದು (೮) ಒಕ್ಕಲಿಗನು ಸುಖಿ ಇದ್ದರೆ, ಎಲ್ಲರೂ ಸುಖಿ (೯) ....ಮನೆಯಲ್ಲಿ ಕೂತು ಒಕ್ಕಲತನ ಮಾಡುವವನಿಗೆ ಒಂದು ಮುಷ್ಟಿ ಕಾಳು.

ಕಾಗದ ಕೆಲಸ, ರಟ್ಟಿನ ಕೆಲಸ ಮತ್ತು ಬಡಿಗತನ ಮೂಲೋದ್ಯೋಗ ಇದ್ದ ಸಾಲೆಗಳಲ್ಲಿ ಉಪಯುಕ್ತ ಮತ್ತು ಪ್ರತಿನಿತ್ಯ ಬೇಕಾಗುವ ವಸ್ತುಗಳನ್ನು ತಯಾರಿಸತಕ್ಕದ್ದು. ರದ್ದಿ ಕಾಗದವನ್ನು ಉಪಯೋಗಿಸಿ ಕಾಗದದಿಂದ ಬಾಲ ಬಾಲಕಿಯರಿಗೆ ಆನಂದವರ್ಧಕ ಚಟುವಟಿಕೆಗಳನ್ನು ಮಾಡಬಹುದು. ಬಡಿಗತನದಲ್ಲಿ ಬಾಲಕ ಬಾಲಿಕೆಯರಿಗೆ ಎಲ್ಲ ಉಪಕ್ರಿಯೆಗಳ ಸರಿಯಾದ ಜ್ಞಾನವಾಗುವಂತೆ ಮತ್ತು ಮಹತ್ವದ ಕೆಲಸಗಳನ್ನು ಸರಿಯಾಗಿ ಮಾಡಲಿಕ್ಕೆ ಬರುವಂತೆ ಪ್ರಯತ್ನಿಸತಕ್ಕದ್ದು. ಪ್ರದರ್ಶನಗಳನ್ನು ಮಾಡಿ ಬಾಲಕ ಬಾಲಿಕೆಯರು ಮಾಡಿದ ವಸ್ತುಗಳನ್ನು ಊರವರು ನೋಡಿಕೊಳ್ಳುವ ಸಂಧಿಯನ್ನು ಒದಗಿಸಿಕೊಡತಕ್ಕದ್ದು. ಒಟ್ಟಿನ ಮೇಲೆ ಮೂಲೋದ್ಯೋಗವು ಲಾಭಕರ ಮತ್ತು ಉತ್ತಮ ಫಲೋತ್ಪತ್ತಿಯಾಗುವಂತೆ ಮಾಡತಕ್ಕದ್ದು. ಸಾಲೆಯ ಬಾಲಕ ಬಾಲಿಕೆಯರು ತಮಗೆ ಬೇಕಾಗುವ ಬರೆಹದ ಪುಸ್ತಕಗಳನ್ನು ಸ್ವತಃ ಮಾಡಿಕೊಳ್ಳತಕ್ಕದ್ದು. ಬೇರೆ ಬೇರೆ ಪದ್ಧತಿಯ ಲಖೋಟಿ ಮಾಡಿ ಇಡತಕ್ಕದ್ದು. ಎಳ್ಳಿನ ಡಬ್ಬಿ ಮತ್ತು ಆಕಾಶ ಬುಟ್ಟಿ ಆಯಾ ಹಬ್ಬಗಳಲ್ಲಿ ಮಾಡಿಸಬಹುದು. ಕಟ್ಟಿಗೆಯಿಂದ ಬೇರೆ ಬೇರೆ ಉಪಯುಕ್ತ ವಸ್ತುಗಳನ್ನು ಮಾಡಿಸಿದರೆ ಮಾರಾಟದ ಸಮಸ್ಯೆ ಬರಲಕ್ಕಿಲ್ಲ. ಮೂಲೋದ್ಯೋಗವು ಸ್ವಯಂಪೂರ್ಣ ಮತ್ತು ಲಾಭಕರವಾಗುವಂತೆ ಪ್ರಯತ್ನಿಸತಕ್ಕದ್ದು. ಆದಷ್ಟು ಮಟ್ಟಿಗೆ ಕಚ್ಚಾ ಮಾಲು ಜಾಗ್ರತೆಯಿಂದ ಉಪಯೋಗಿಸಿ ಹಾಳಾಗದಂತೆ ಪ್ರಯತ್ನಿಸತಕ್ಕದ್ದು. ಉಪಕರಣಗಳನ್ನು ಶಾಸ್ತ್ರೀಯ ಪದ್ಧತಿಯಿಂದ ಉಪಯೋಗಿಸತಕ್ಕದ್ದು.

—: ಜಯ ಜಗತ್ ;—

ರಾಜ್ಯ ಸರಕಾರದಿಂದ ಬಹುಮಾನ ಪಡೆದ

ಶಿಕ್ಷಕ ಸಾಹಿತಿ ಶ್ರೀ ಶಂ. ಗು. ಬಿರಾದಾರರು

ಲೇಖಕರು :— **ಶ್ರೀ ಮೂರ್ತಿ ಚಿಂತಾಮಣಿ,** ಗುರುಗಳು ವಿಜಾಪುರ

ಮೈಸೂರು ಸರಕಾರದವರು (೧೯೫೯-೬೦ ರಲ್ಲಿ ಪ್ರಕಟವಾದ) ಉತ್ತಮ ಕನ್ನಡ ಪುಸ್ತಕಗಳನ್ನು ಬರೆದ ಒಟ್ಟು ಇಪ್ಪತ್ತೇಳು ಜನ ಕನ್ನಡ ಲೇಖಕರಿಗೆ ಪ್ರತಿ ಯೊಬ್ಬರಿಗೆ ೭೫೦ ರೂಪಾಯಿ ಬಹುಮಾನವಿತ್ತು ಪ್ರೋತ್ಸಾಹಿಸುತ್ತಿರುವುದು ನಾಡಿನ ಸಾಹಿತ್ಯ ಪ್ರೇಮಿ ಗಳಿಗೆಲ್ಲ ವಿದಿತವಿರಲು ಸಾಕು.

ಈ ಇಪ್ಪತ್ತೇಳು ಜನರಲ್ಲಿ ಕಾದಂಬರಿಕಾರರು, ಕತೆಗಾರರು, ನಾಟಕಕಾರರು, ಕವಿಗಳು ಹಾಗೂ ಇತರ ಅನೇಕ ಲೇಖಕರಿದ್ದಾರೆ. ಈ ಬಹುಮಾನಗಳನ್ನು ಪಡೆ ದವರಲ್ಲಿ ವಿಜಾಪುರ ಜಿಲ್ಲೆಯ ಸಾರವಾಡ ಗ್ರಾಮದ ಜೀವನ ಶಿಕ್ಷಣ ಶಾಲೆಯ ಗುರುಗಳಾದ ಶ್ರೀ ಶಂಕರಗೌಡ ಗು. ಬಿರಾದಾರ ಅನರೊಬ್ಬರೆಂದು ಶಿಕ್ಷಕ ಪ್ರಪಂಚಕ್ಕೆ ಪರಿಚಯ ಮಾಡಿಕೊಡಲು ನಮಗೆ ತುಂಬಾ ಸಂತೋಷ ವೆನಿಸುತ್ತದೆ.

ಶ್ರೀ ಶಂ. ಗು. ಬಿರಾದಾರ ಗುರುಗಳು ಬರೆದ 'ರುದ್ರವೀಣೆ' ಕಥಾ ಸಂಕಲನಕ್ಕೆ ರಾಜ್ಯ ಸರಕಾರದವರು ೭೫೦ ರೂಪಾಯಿ ಬಹುಮಾನವಿತ್ತು ಗೌರವಿಸುತ್ತಿರು ವದು ಶಿಕ್ಷಕ ಮಿತ್ರರಿಗೆಲ್ಲ ಹೆಮ್ಮೆಯ ವಿಷಯ. ನಮ್ಮ ಶಿಕ್ಷಕರಲ್ಲಿ ಹಿರಿಯ ಸಾಹಿತಿಗಳಾದ ಶ್ರೀ ಸಿಂಪಿ ಲಿಂಗಣ್ಣ ನವರು 'ಆದರ್ಶ ಶಿಕ್ಷಕ'ರೆಂದು ರಾಷ್ಟ್ರಪತಿಗಳಿಂದ ಪ್ರಶಸ್ತಿ ಪಡೆದ ವಿಷಯವನ್ನು ನಾಡಿನ ಶಿಕ್ಷಕರು ಮರೆಯುವಂತಿಲ್ಲ. ಶ್ರೀ ಲಿಂಗಣ್ಣನವರು ವೃತ್ತಿಯಿಂದ ನಿವೃತ್ತರಾದರು. ಅವರ ನಂತರ ವಿಜಾಪುರ ಜಿಲ್ಲೆಯ ಶಿಕ್ಷಕ ಸಾಹಿತಿಗಳಲ್ಲಿ ರಾಜ್ಯ ಸರಕಾರದಿಂದ ಪ್ರಶಸ್ತಿ ಪಡೆದ ಶ್ರೀ ಬಿರಾದಾರರು ಇನ್ನೂ ಎಳೆಯರು; ತರುಣ ಸಾಹಿತಿಗಳು. ಸಾಹಿತ್ಯ ಕ್ಷೇತ್ರದಲ್ಲಿ ಕಾಲಿಟ್ಟ ಅಲ್ಪಾವಧಿ ಯಲ್ಲಿಯೇ ಶ್ರೀಯುತರು ಜಯಶೀಲರಾಗಿದ್ದಾರೆ; ಸಮೌಲ್ಯ ಕೃತಿಗಳನ್ನು ರಚಿಸಲು ಅಣಿಯಾಗಿದ್ದಾರೆ.

ಇನ್ನು ಶ್ರೀ ಶಂಕರಗೌಡ ಬಿರಾದಾರರು ಹುಟ್ಟಿದ್ದು ವಿಜಾಪುರ ಜಿಲ್ಲೆಯ ಬಬಲೇಶ್ವರ ಎಂಬ ಹೆಸರಾಂತ ಗ್ರಾಮ ದಲ್ಲಿ. ಸುಸಂಸ್ಕೃತ ಸುಶೀಲ ಮನೆತನದವರಾದ ಶ್ರೀ ಬಿರಾ ದಾರರು. ಚಿಕ್ಕಂದಿನಿಂದಲೂ ನಯವಿನಯವುಳ್ಳ ಆದರ್ಶ ವಿದ್ಯಾರ್ಥಿಯಾಗಿ ಬಹುಜನ ಗುರುಗಳ ಪ್ರೇಮಕ್ಕೆ ಕಾರಣ ರಾಗಿದ್ದಾರೆ. ಕತೆಗಿಂತಲೂ ಕವಿತೆ ಬರೆಯುವದು ಹೆಚ್ಚು. 'ತಲೆಬುರುಡೆ' ಎಂಬ ಕವಿತೆಯನ್ನು ಬರೆದು, ಸೊಲ್ಲಾ ಪುರ ಕನ್ನಡ ಸಾಹಿತ್ಯ ಸಮ್ಮೇಲನದಲ್ಲಿ ಶ್ರೀ ಬಿರಾದಾರರು ಓದಿದಾಗ ಶ್ರೇಷ್ಠ ಕವಿಗಳಾದ ಶ್ರೀ ಜೇಂದ್ರೆಯವರು ಮೆಚ್ಚಿ ಶುಭಾಶೀರ್ವಾದ ಮಾಡಿದ್ದರು. ಕನ್ನಡ ಶಾಲೆಯ ನಂತರ ಟ್ರೇನಿಂಗ್ ಕಾಲೇಜ ಅಭ್ಯಾಸ ಮುಗಿಸಿ ಶಿಕ್ಷಕ ರಾದ ಶ್ರೀ ಬಿರಾದಾರರಿಗೆ ಈಗ ವಯಸ್ಸು ಕೇವಲ ಮೂವತ್ತೈದು. ಎಲ್ಲರ ಗೆಳೆಯರಾಗಿ, ಉತ್ಸಾಹಿ ಕಾರ್ಯಕರ್ತರಾಗಿ, ಮಾದರಿಯ ಗುರುಗಳಾದ ಶ್ರೀ ಶಂಕರಗೌಡರು ನಮ್ಮ ಶಿಕ್ಷಕ ಸಾಹಿತಿ ಬಳಗದ ಕಣ್ಮಣಿ ಯಾಗಿದ್ದಾರೆ.

ಶ್ರೀಯುತರು ಬರೆದ 'ನೌಕರಿಯ ಹುಚ್ಚು' ಏಕಾಂತ ನಾಟಕವು ಒಂದೇ ವರ್ಷದಲ್ಲಿ ಮೂರನೆಯ ಮುದ್ರಣ ಕಂಡದ್ದು ಇವರ ಲೇಖಣಿಕೆಯ ಸಾಮರ್ಥ್ಯ ಹಾಗೂ ಜನಪ್ರೇಮ ಸೂಚಿಸುತ್ತದೆ, ಆ ನಂತರ ಬರೆದ ಗ್ರಂಥವೇ 'ರುದ್ರವೀಣೆ' ಕಥಾಸಂಕಲನ. 'ರುದ್ರವೀಣೆ' ಯನ್ನು ಅನೇಕ ಪತ್ರಿಕಾ ಸಂಪಾದಕರು ವಿಮರ್ಶಿಸಿ ಹೊಗಳಿರುವಾಗ ನಾನು ಹೆಚ್ಚಿಗೆ ಹೇಳಿದರೆ, ಸ್ನೇಹಿತತ ಗುಣಗಾನ ಎನಿಸೀತೆಂದು ವಿಮರ್ಶಿಸುವ ಭಾರವನ್ನು 'ಜೀವನ ಶಿಕ್ಷಣ' ಪತ್ರಿಕೆಯ ಪ್ರಧಾನ ಸಂಪಾದಕರಿಗೆನೇ ಬಿಟ್ಟುಕೊಡುತ್ತಿದ್ದೇನೆ.

ವಿಜಾಪುರ ಜಿಲ್ಲಾ ಪ್ರಾಥಮಿಕ ಶಿಕ್ಷಕ ಸಂಘದಿಂದ ಶ್ರೀ ಶಂ. ಗು. ಬಿರಾದಾರ, ಶ್ರೀ 'ಸಿಸು' ಸಂಗಮೇಶ ಗುರುಗಳಿಗೂ ಹಾಗೂ ಶ್ರೀ ಸಂಗನಗೌಡರು ಪಾಟೀಲ ಅಧ್ಯಕ್ಷರು ಜಿಲ್ಲಾ ಕಾಂಗ್ರೇಸ ಕಮೀಟಿ ವಿಜಾಪುರ ಅವರಿಗೂ ದಿನಾಂಕ ೧೦-೪-೧೯೬೦ರಂದು 'ಶಿವಾನು ಭವ ಮಂಟಪ' ವಿಜಾಪುರದಲ್ಲಿ ನತ್ಕಾರ ಸಮಾರಂಭ

ಜರುಗಿತು. ಸಮಾರಂಭದ ಅಧ್ಯಕ್ಷತೆಯನ್ನು ಜಿಲ್ಲಾ ಶಿಕ್ಷಣಾಧಿಕಾರಿಗಳಾದ ಶ್ರೀ ಸಿ. ಎಸ್. ಬೆಣ್ಣೂರ ಅವರು ವಹಿಸಿದ್ದರು. ಜಿಲ್ಲಾ ಪ್ರಾ. ಶಿ. ಮಂಡಳದ ಜೇರ ಮನ್‌ರೂ ಎಂ.ಎಲ್.ಸಿ. ಗಳೂ ಆದ ಶ್ರೀ ಸಿ. ಎಂ. ನಾಡ ಗೌಡರು ಹಾಗೂ ಶ್ರೀ ಸಂಗನಗೌಡರು ಪಾಟೀಲ ಮತ್ತು ಜಿಲ್ಲಾ ಪ್ರಾ. ಶಿಕ್ಷಕ ಸಂಘದ ಅಧ್ಯಕ್ಷರಾದ ಶ್ರೀ ಆಯ್. ಸಿ. ನಾಗಠಾಣ ವಕೀಲರು ಶಿಕ್ಷಕರನ್ನುದ್ದೇಶಿಸಿ: ಸಾಹಿತ್ಯದಲ್ಲಿ ತೊಡಗಿರುವ ಶಿಕ್ಷಕರ ಹೊಣೆಗಾರಿಕೆ, ಕರ್ತವ್ಯ ಪಾಲನೆ, ಸಾಹಿತಿಯ ಮುಂದಿರುವ ಸಮಸ್ಯೆಗಳು ಹಾಗೂ ರಾಜ್ಯಸರಕಾರದಿಂದ ಬಹುಮಾನ ಹೊಂದಿದ ಶ್ರೀ ಬಿರಾದಾರರ ಬಗ್ಗೆ ಹಾಗೂ ಭಾರತಿ ಸಾಹಿತ್ಯ ಭಂಡಾರ ಯರನಾಳದ ಸಂಪಾದಕರಾದ ಶ್ರೀ 'ಸಿಸು' ಸಂಗಮೇಶ ಗುರುಗಳನ್ನು ಪ್ರೋತ್ಸಾಹಿಸಿ ಮಾತನಾಡಿದರು. ಶ್ರೀ ಈಶ್ವರ ಸಣಕಲ್ಲ ಅವರು ಸಮಯೋಚಿತ ಉಪದೇಶ ಮಾಡಿದರು.

ಆದರ್ಶ ಗ್ರಾಮ ನಿರ್ಮಾಣ ಕಾರ್ಯದಲ್ಲಿ ರಾಜ್ಯಕ್ಕೆ ಹೆಸರಾದ ಸುನಗದ ಶ್ರೀ ಸಂಗನಗೌಡ ಪಾಟೀಲ ರಂಥ ಮೂವತ್ತಾಲ್ಕು ವಯದ ಆದರ್ಶ ತರುಣ ಕಾಯ ಕರ್ತರು ವಿಜಾಪುರ ಜಿಲ್ಲಾ ಕಾಂಗ್ರೇಸ ಕಮೀಟಿಗೆ ಅಧ್ಯಕ್ಷರಾಗಿ ಸರ್ವಾನುಮತದಿಂದ ಆಯ್ಕೆ ಹೊಂದಿದ ಬಗ್ಗೆ ಜಿಲ್ಲಾ ಪ್ರಾಥಮಿಕ ಶಿಕ್ಷಕ ಸಂಘವು ಬಹು ಆದರದಿಂದ ಶ್ರೇಯುತರನ್ನು ಸತ್ಕರಿಸಿತು. ಏಕಕಾಲಕ್ಕೆ ರಾಜಕಾರಣ ಯನ್ನು ಶಿಕ್ಷಕ ಸಾಹಿಗಳನ್ನು ಬರಮಾಡಿಕೊಂಡು ಸತ್ಕರಿಸಿದ ಔಚಿತ್ಯಪೂರ್ಣ ಸಮಾರಂಭದ ಬಗ್ಗೆ ತಮ್ಮ ಸಂತೋಷವನ್ನು ವ್ಯಕ್ತಪಡಿಸುತ್ತ, ಅಧ್ಯಕ್ಷರಾದ ಮಾನ್ಯ ಸಿ. ಎಸ್. ಬೆಣ್ಣೂರ ಅವರು ಶಿಕ್ಷಕ ಸಾಹಿತಿಗಳಿಂದ ಶೈಕ್ಷಣಿಕ ಪ್ರಗತಿಯಾಗುವದೆಂದೂ, ಸಜೀವ ಸಾಹಿತ್ಯ ಬೆಳವಣಿಗೆ ಅಗತ್ಯವೆಂದೂ ಶ್ರೀ ಬಿರಾದಾರರಿಗೆ ದೊರೆತ ಗೌರವ ಶಿಕ್ಷಕ ಲೋಕಕ್ಕೆ ಸಿಕ್ಕ-ಸಲ್ಲತಕ್ಕ ಪ್ರೋತ್ಸಾಹ ಎಂದೂ ಮಾತನಾಡಿದರು. ಕೊನೆಗೆ ಜೈನಾಪೂರ ಜೀವನ ಶಿಕ್ಷಣ ಶಾಲೆಯ ಮುಖ್ಯ ಗುರುಗಳಾದ ಶ್ರೀ ಈಶ್ವರಚಂದ್ರ ಚಿಂತಾಮಣಿಯವರು ಮಾಲಾರ್ಪಣೆ ಮಾಡಿ, ಎಲ್ಲರ ಆಭಾರಮನ್ನಣೆ ಮಾಡಿದರು.

ಪ್ರಾಥಮಿಕ ಶಾಲಾ ಪ್ರಮಾಣಪತ್ರ ಪರೀಕ್ಷೆ, ಟ್ರೇನಿಂಗ ಕಾಲೇಜ; ಎಲಿಮೆಂಟರಿ ಮತ್ತು ಇಂಟರಮೀಡಿಯೆಟ್ ಗ್ರೇಡ ಮುಂ. ಡ್ರಾಯಿಂಗ ಪರೀಕ್ಷೆಗಳಿಗೆ—

ಜನಪ್ರಿಯವಾದ ಮತ್ತು ಸರಕಾರದಿಂದ ಮಂಜೂರಾದ ಒಂದೇ ಒಂದು ಪುಸ್ತಕ

ಆದರ್ಶ ಚಿತ್ರಕಲಾ

(Ideal Drawing)

ಶ್ರೀ ಎಸ್. ಕೆ. ಜೋಶಿ, ಮತ್ತು ಶ್ರೀ ಜಿ. ಡಿ. ವಾಲಿ.

ಎಲ್ಲ ದೊಡ್ಡ ಪುಸ್ತಕ ವ್ಯಾಪಾರಸ್ಥರಲ್ಲಿ ದೊರೆಯುವದು.

ಬೆಲೆ ೧—೧೨—೯ ಅಂಚೆವೆಚ್ಚ ಪ್ರತ್ಯೇಕ. ಐದು ಮತ್ತು ಐದಕ್ಕಿಂತ ಹೆಚ್ಚು ಪ್ರತಿ ತರಿಸಿಕೊಳ್ಳುವವರಿಗೆ ಅಂಚೆ ವೆಚ್ಚವಿಲ್ಲ. ಇದು ಕನ್ನಡದಲ್ಲಿಯೂ ಸಿಗುತ್ತದೆ.

ಜಿ. ವಾಯ್. ರಾಣೆ

ಪ್ರಕಾಶಕರು, ೩೪೩, ಕಸಬಾ ಪೇಟೆ ಪುಣೆ.

೧೯೫೬ನೆಯ ಇಸವಿಯಿಂದ ಪ್ರಾರಂಭವಾಗುವ ಸಾಮಾನ್ಯ ಪ್ರಾ. ಶಾ. ಪ್ರ. ಪರೀಕ್ಷೆಯ ಅಭ್ಯಾಸ ಕ್ರಮವನ್ನು ಅನುಸರಿಸಿ ಬರೆದ

ಶೇಲಾರ ಕೃತ

ಪ್ರಾಥಮಿಕ ಭೂಮಿತಿ

[ಕ್ಷೇತ್ರಫಲ ಘನಫಲ ಸಹಿತ]

೪ ರಿಂದ ೭ ನೇಯ ವರ್ಗದ ವರೆಗಿನ ವಿಷಯವನ್ನೆಲ್ಲ ಒಳಗೊಂಡಿದೆ.

ಬೆಲೆ: ೧ರೂ. ೮ಆಣೆ ಮಾತ್ರ

ದೊರೆಯುವ ಸ್ಥಳ:—

ಸಾಯಿ ಪಬ್ಲಿಶಿಂಗ್ ಹಾವುಸ್

ವಿಜಯ ರೋಡ, ಧಾರವಾಡ.

ಪಿ. ಎಸ್. ಸಿ. ಪರೀಕ್ಷೆಯ ಪರಿಣಾಮ ೧೯೬೦

ಹಿರೇಬಾಗೇವಾಡಿ ಕ. ಗಂ. ಶಾಲೆ : ಪರೀಕ್ಷೆಗೆ ಕುಳಿತ ೨೩ ಬಾಲಕರಲ್ಲಿ ೧೯ ಬಾಲಕರು ಪಾಸಾದರು. ಶ್ರೀ ಜೆ. ಬಿ. ಅಂಬಾರಿ ಇವರು ವರ್ಗ ಗುರುಗಳಾಗಿದ್ದರು.

ಸಾರಿಶ್ಟಾಡ ಕ. ಹೆ. ಶಾಲೆ : ಪರೀಕ್ಷೆಗೆ ಕುಳಿತ ೭ ವಿದ್ಯಾರ್ಥಿನಿಯರಲ್ಲಿ ಏಳೂ ವಿದ್ಯಾರ್ಥಿನಿಯರು ಪಾಸಾದರು. ಶ್ರೀ ಪ್ಪಿ. ಬಿ. ಶಿವನಾಯ್ಕರು ವರ್ಗ ಗುರುಗಳು.

ವಂಟಿಮುರಿ ಕ. ಗಂ. ಶಾಲೆ : ೧೩ ವಿದ್ಯಾರ್ಥಿಗಳಲ್ಲಿ ೧೧ ವಿದ್ಯಾರ್ಥಿಗಳು ಪಾಸಾದರು. ಶ್ರೀ ಸಿ. ಮ. ಜಗಜಂಪಿ ಇವರು ವರ್ಗ ಗುರುಗಳಾಗಿದ್ದರು. ಕು. ಅಲಗೌಡಾ ತು. ಪಾಟೀಲ ಈತನು ಸಂಕೇಶ್ವರ ಉಪಕೇಂದ್ರಕ್ಕೆ ೭೫೧ ಗುಣಗಳನ್ನು ಪಡೆದು ೧ನೇ ಸ್ಥಾನ ಪಡೆದಿದ್ದಾನೆ.

ಅಮ್ಮಣಗಿ ಕ. ಗಂ. ಶಾಲೆ : ೨೫ ವಿದ್ಯಾರ್ಥಿಗಳಲ್ಲಿ ೨೧ ವಿ. ಗಳು ಪಾಸಾಗಿರುವರು. ಸಂಕೇಶ್ವರ ಉಪ ಕೇಂದ್ರದಲ್ಲಿ ೨ನೇ, ೩ನೇ ಸ್ಥಾನಗಳನ್ನು ದೊರಕಿಸಿರುವರು. ಶ್ರೀ ಪಾ. ರಾ. ಪೂಜಾರ ವರ್ಗ ಗುರುಗಳು.

ಕಣಬರಗಿ ಕ. ಗಂ. ಶಾಲೆ : ೧೦ ವಿದ್ಯಾರ್ಥಿಗಳಲ್ಲಿ ೬ ವಿ. ಗಳು ಪಾಸಾದರು.

ಮುಚ್ಚಂಡಿ ಕ. ಗಂ. ಶಾಲೆ : ೧೦ ವಿ. ಗಳಲ್ಲಿ ೮ ವಿ. ಗಳು ಪಾಸಾದರು. ಶ್ರೀ ವೀ. ಬ. ಅಕ್ಕತಂಗೇರಹಾಳ ಇವರು ವರ್ಗ ಗುರುಗಳು.

ಕುಲಗೋಡ ಕ. ಗಂ. ಶಾಲೆ : ೨೬ ವಿ. ಗಳಲ್ಲಿ ೨೨ ವಿ. ಗಳು ಪಾಸಾದರು. ಶ್ರೀ ಕ. ಬ. ಸಸಾಲಟ್ಟಿ ಇವರು ವರ್ಗ ಗುರುಗಳು.

ಅರಭಾಂವಿ ಕ. ಗಂ. ಶಾಲೆ : ೭ ವಿ. ಗಳಲ್ಲಿ ೪ ವಿ. ಗಳು ಪಾಸಾದರು.

ಬೈಲಹೊಂಗಲ ಉ. ಗಂ. ಶಾಲೆ : ೧೭ ವಿ. ಗಳಲ್ಲಿ ೧೧ ವಿ. ಗಳು ಪಾಸಾದರು. ಶ್ರೀ ಅ. ಘು. ಡುಬ್ಬಾಳ ಇವರು ವರ್ಗ ಗುರುಗಳು.

ಕಾಚ್ಚಾಪೂರ ಉ. ಗಂ. ಶಾಲೆ : ೪ ವಿ. ಗಳಲ್ಲಿ ೬ ವಿದ್ಯಾರ್ಥಿಗಳು ಪಾಸಾದರು. ಶ್ರೀ ಎಚ್. ಎ. ದರ್ಗಾ ಇವರು ವರ್ಗ ಗುರುಗಳು.

ಬಗಡೊಳ್ಳಿ ಕ. ಗಂ. ಶಾಲೆ : ೪ ವಿ. ಗಳಲ್ಲಿ ನಾಲ್ಕೂ ವಿ. ಗಳು ಪಾಸಾದರು.

ಮನೇವಾಡಿ ಕ. ಗಂ. ಶಾಲೆ : ೧೪ ವಿ. ಗಳಲ್ಲಿ ೧೨ ವಿ. ಗಳು ಪಾಸಾದರು. ಶ್ರೀ ಡಿ. ಎಸ್. ಮಗದುಮ್ಮ ಇವರು ವರ್ಗ ಗುರುಗಳು.

ಶಾಲಾಪೂರ ಕ. ಗಂ. ಶಾಲೆ : ೮ ವಿ. ಗಳಲ್ಲಿ ೭ ವಿ. ಗಳು ಪಾಸಾದರು. ಸಾಲೆಯ ಫಕೀರಪ್ಪ ಸೋಮಪ್ಪ ಚಾಕಲಬ್ಬಿ ಮತ್ತು ವೆಂಕಪ್ಪ ಯಲ್ಲಪ್ಪ ಗೊರವನಕೊಳ್ಳ ಈ ವಿದ್ಯಾರ್ಥಿಗಳು ರಾಮದುರ್ಗ ಕೇಂದ್ರಕ್ಕೆ ಅನುಕ್ರಮವಾಗಿ ೧ನೇ ಹಾಗೂ ೨ನೇ ಸ್ಥಾನ ಪಡೆದಿದ್ದಾರೆ. ಶ್ರೀ ಮ. ಬ. ನಾವಲಗಿ ಇವರು ವರ್ಗ ಗುರುಗಳು.

ಟಗಿ (ತಾ.ರೋಣ) ಕ.ಗಂ.ಶಾಲೆ : ೧೪ ವಿ. ಗಳಲ್ಲಿ ೧೦ ವಿ. ಗಳು ಪಾಸಾದರು. ಶಾಲೆಯ ಗೋವಿಂದಪ್ಪ ಬಾಳಪ್ಪ ಜಾಧವ ಮತ್ತು ಕಳಕಪ್ಪ ಹನಮಪ್ಪ ಕುರಿ ಈ ವಿದ್ಯಾರ್ಥಿಗಳು ರೋಣ ಕೇಂದ್ರಕ್ಕೆ ಅನುಕ್ರಮವಾಗಿ ೧ನೇ ಹಾಗೂ ೨ನೇ ಸ್ಥಾನ ಪಡೆದಿರುವರು.

ಕದಡಿ (ತಾ.ಗದಗ) ಕ.ಗಂ.ಶಾಲೆ : ೭ ವಿ. ಗಳಲ್ಲಿ ೫ ವಿ. ಗಳು ಪಾಸಾದರು. ಶ್ರೀ ರಾ. ವಿ. ವೀರಗಾರ ಇವರು ವರ್ಗ ಗುರುಗಳು.

ರಡ್ಡೇರನಾಗನೂರ (ತಾ. ನವಲಗುಂದ) : ೭ ವಿ. ಗಳಲ್ಲಿ ಏಳೂ ವಿ. ಗಳು ಪಾಸಾದರು. ಶ್ರೀ ಆಯ್. ಡಿ. ನದಾಫ ಇವರು ವರ್ಗ ಗುರುಗಳು.

ಬೆಳಹೋಡ (ತಾ. ಗದಗ) ಕ. ಗಂ. ಶಾಲೆ : ೧೦ ವಿ. ಗಳಲ್ಲಿ ೭ ವಿ. ಗಳು ಪಾಸಾದರು. ಶ್ರೀ ಶಿ. ಮಾ. ಬಳಗಾನೂರ ಇವರು ವರ್ಗ ಶಿಕ್ಷಕರು.

ರಾಣೆಬೆನ್ನೂರ ಕ.ಗಂ ಶಾಲೆ ನಂ.೨ : ೫೧. ವಿ ಗಳಲ್ಲಿ ೨೭ ವಿದ್ಯಾರ್ಥಿಗಳು ಪಾಸಾದರು. ಕು. ವಿ. ವೀ. ಮಾಳೋದೆ ಎಂಬ ವಿದ್ಯಾರ್ಥಿಯು ೫೩೫ ಗುಣಗಳನ್ನು ಪಡೆದು ರಾಣೆಬೆನ್ನೂರ ಕೇಂದ್ರಕ್ಕೆ ಪ್ರಥಮ ಸ್ಥಾನ ಪಡೆದಿದ್ದಾನೆ. ಶ್ರೀ ಲಿಂ. ಹಾ. ಹಿರೇಗೌಡರ ಹಾಗೂ ಶ್ರೀ ಲಿ. ಭ. ಪಾಟೀಲ ಇವರು ವರ್ಗ ಗುರುಗಳಾಗಿದ್ದರು.

ಕುಸುಗಲ್ಲ (ತಾ. ಹುಬ್ಬಳ್ಳಿ) ಕ. ಗಂ. ಶಾಲೆ : ೧೫ ವಿ. ಗಳಲ್ಲಿ ೧೧ ವಿ. ಗಳು ಪಾಸಾದರು. ಶ್ರೀ ಎಲ್. ಜಿ. ಹಿರೇಮಠ ಇವರು ವರ್ಗ ಗುರುಗಳು.

ಕುರ್ತಕೋಟಿ ಕ. ಗಂ. ಶಾಲೆ : ೧೧ ವಿ. ಗಳಲ್ಲಿ ೮ ವಿ. ಗಳು ಪಾಸಾದರು. ಶ್ರೀ ಪಂ. ಶಿ. ಹಿರೇಮಠ ಇವರು ವರ್ಗ ಗುರುಗಳು.

ಸವಣೂರ ಕ. ಗಂ. ಶಾಲೆ : ಕು. ರಾಮು ಫಕೀರಪ್ಪ ಬದ್ದಿ ಈ ವಿದ್ಯಾರ್ಥಿಯು ಸವಣೂರ ಕೇಂದ್ರಕ್ಕೆ ಪ್ರಥಮ ಸ್ಥಾನ ಪಡೆದಿದ್ದಾನೆ.

ಹಮ್ಮಿಗಿ (ತಾ. ಮುಂದರಗಿ) ಕ. ಗಂ. ಶಾಲೆ : ೯ ವಿ. ಗಳಲ್ಲಿ ೬ ವಿ. ಗಳು ಪಾಸಾದರು. ಶ್ರೀ ಬ. ರಾ. ಮಡಿವಾಳರ ಇವರು ವರ್ಗ ಗುರುಗಳು.

ಬೇವಗಿರಿ ಕ. ಗಂ. ಶಾಲೆ : ೪ ವಿ. ಗಳಲ್ಲಿ ನಾಲ್ಕೂ ವಿ. ಗಳು ಪಾಸಾದರು. ಶ್ರೀ ಚ. ಚ. ಎಲಿಗಾರ ಇವರು ವರ್ಗ ಗುರುಗಳು.

ಶಾಕೋಳ (ತಾ. ರಾಣೆಬೆನ್ನೂರ) ಕ. ಗಂ. ಶಾಲೆ : ೯ ವಿ. ಗಳಲ್ಲಿ ೫. ವಿ. ಪಾಸಾದರು.

ಅತ್ತಿಗೇರಿ (ತಾ. ಶಿಗ್ಗಾಂವಿ) ಕಂ. ಗಂ. ಶಾಲೆ : ೨ ವಿ. ಗಳಲ್ಲಿ ೨ ವಿ. ಗಳು ಪಾಸಾದರು. ಶ್ರೀ ಶಿ. ಫ. ಪಾಟೀಲರು ವರ್ಗ ಗುರುಗಳು.

ಅಳ್ನಾವರ (ತಾ ಧಾರವಾಡ) ಕ ಗಂ. ಶಾಲೆ : ೧೪ ವಿ. ಗಳಲ್ಲಿ ೧೧ ವಿ. ಪಾಸಾದರು. ಶ್ರೀ ಜಿ. ಎಫ್. ಹಾದಿಮನಿ ಇವರು ವರ್ಗದ ಗುರುಗಳು.

ಉಪ್ಪಣಸಿ (ತಾ. ಹಾನಗಲ್ಲ) ಕ. ಗಂ. ಶಾಲೆ : ೬ ವಿ. ಗಳಲ್ಲಿ ೩ ವಿ. ಪಾಸಾದರು.

ಮಡ್ಲಿ ಕ. ಗಂ. ಶಾಲೆ : ೯ ವಿ. ಗಳಲ್ಲಿ ೫ ವಿ. ಗಳು ಪಾಸಾದರು.

ಚಿನ್ನಾಲಗಿ ತಾ. (ಬಾಗೇವಾಡಿ) ಕ. ಗಂ. ಶಾಲೆ : ೬ ವಿ. ಗಳಲ್ಲಿ ಆರೂ ವಿದ್ಯಾರ್ಥಿಗಳು ಪಾಸಾದರು. ಶ್ರೀ ನಿಂ. ಕ. ಮುಳವಾಡ ಇವರು ವರ್ಗ ಗುರುಗಳು.

ನಾಗಠಾಣ (ತಾ. ವಿಜಾಪೂರ) ಕ. ಗಂ. ಶಾಲೆ : ೭ ವಿ. ಗಳಲ್ಲಿ ೬ ವಿ. ಗಳು ಪಾಸಾದರು. ಶ್ರೀ ವ್ಹಿ. ಎಸ್. ಹಜೇರಿ ಇವರು ವರ್ಗದ ಗುರುಗಳು.

ಬದಾಮಿ ಕ. ಗಂ. ಶಾಲೆ : ೧೮ ವಿ. ಗಳಲ್ಲಿ ೧೬ ವಿ. ಗಳು ಪಾಸಾದರು. ಕು. ಸಂಗಪ್ಪ ಸಣ್ಣಪ್ಪ ಸಾಳಗುಂದಿ ಎಂಬ ವಿದ್ಯಾರ್ಥಿಯು ೧೦೦ಕ್ಕೆ ೮೧.೬ ಗುಣಗಳನ್ನು ಪಡೆದು ಕೇಂದ್ರಕ್ಕೆ ಮೊದಲಿಗನಾಗಿದ್ದಾರೆ.

ಬ್ಯಾಕೋಡ (ತಾ. ಬಾಗೇವಾಡಿ) ಕ. ಗಂ. ಶಾಲೆ : ೧೨ ವಿ.ಗಳಲ್ಲಿ ೮ ವಿ.ಗಳು ಪಾಸಾದರು. ಶ್ರೀ ಶಿ. ಕಾ. ಬ್ಯಾಕೋಡ ಇವರು ವರ್ಗ ಗುರುಗಳು. ಕು. ಶಶಿಕಾಂತ ಶ್ರೀಧರರಾವ ಕುಲಕರ್ಣಿ ಹಾಗೂ ಕು.ಶಂಕರಗೌಡ ನಂದನಗೌಡ ಪಾಟೀಲ ಈ ವಿದ್ಯಾರ್ಥಿಗಳು ಬಾಗೇವಾಡಿ ಕೇಂದ್ರಕ್ಕೆ ಅನುಕ್ರಮವಾಗಿ ೨ನೇ ಹಾಗೂ ೩ನೇ ಸ್ಥಾನ ಪಡೆದಿರುವರು.

ರಡ್ಡೇರ ತಿಮ್ಮಾಪೂರ (ತಾ. ಬದಾಮಿ) ಕ. ಗಂ. ಶಾಲೆ : ೬ ವಿ. ಗಳಲ್ಲಿ ೫ ವಿ. ಗಳು ಪಾಸಾದರು. ಶ್ರೀ ಹ. ತಿ. ಕಟಗೇರಿ ಇವರು ವರ್ಗ ಗುರುಗಳು.

ುಳಸಾವಳಗಿ (ತಾ. ಸಿಂದಗಿ) ಕ.ಗಂ. ಶಾಲೆ : ೧೦ ವಿ. ಗಳಲ್ಲಿ ೯ ವಿ. ಗಳು ಪಾಸಾದರು. ಶ್ರೀ ಆಯ್. ಕೆ. ಮುಸಬಿನಾಳ ವರ್ಗ ಗುರುಗಳು.

ಹಂಗರಗಿ (ತಾ. ಬದಾಮಿ) ಕ. ಗಂ. ಶಾಲೆ : ೫ ವಿ. ಗಳಲ್ಲಿ ೩ ವಿ. ಗಳು ಪಾಸಾದರು. ಶ್ರೀ ನಿ. ಬ. ಹಾದೀಮನಿ ಇವರು ವರ್ಗ ಗುರುಗಳು.

ಕಸಬೆಜಂಬಗಿ (ತಾ.ಮುಧೋಳ) ಕ ಗಂ. ಶಾಲೆ : ೬ ವಿ. ಗಳಲ್ಲಿ ೫ ವಿ. ಗಳು ಪಾಸಾದರು. ಶ್ರೀ ಚ. ಸಂ. ಹೊಳಿ ಇವರ. ವರ್ಗ ಶಿಕ್ಷಕರು.

ೂರಬಾಳ (ತಾ. ಹುನಗುಂದ) ಕ. ಗಂ. ಶಾಲೆ : ೧೦ ವಿ. ಗಳಲ್ಲಿ ೯ ವಿ. ಗಳು ಪಾಸಾದರು. ಶ್ರೀ ಅ. ರಾ. ಗೋಡಿ ಇವರು ವರ್ಗ ಗುರುಗಳು.

ೂಂಡಗೂಳಿ ಕ. ಗಂ. ಶಾಲೆ : ೧೧ ವಿ. ಗಳಲ್ಲಿ ೭ ವಿ. ಗಳು ಪಾಸಾದರು. ಶ್ರೀ ಸಿ. ಎಸ್. ಖೈನೂರ ಇವರು ವರ್ಗ ಗುರುಗಳು.

ೂಂಡಗೂಳಿ ಉ. ಗಂ. ಶಾಲೆ : ೬ ವಿ. ಗಳಲ್ಲಿ ೩ ವಿ. ಗಳು ಪಾಸಾದರು. ಶ್ರೀ ಆರ್. ಎಚ್. ಮಕಾನದಾರ ಇವರು ವರ್ಗ ಗುರುಗಳು.

ೀಲಗುಂದ (ತಾ. ಬದಾಮಿ) ಕ. ಗಂ. ಶಾಲೆ : ೮ ವಿ. ಗಳಲ್ಲಿ ಎಂಟೂ ವಿ. ಗಳು ಪಾಸಾದರು. ಶ್ರೀ ದು. ಹ. ಆಲಗುಂಡಿ ಇವರು ವರ್ಗ ಗುರುಗಳು.

ಲಾದಗಿ (ತಾ. ಬಾಗಲಕೋಟ) ಕ. ಗಂ. ಶಾಲೆ : ೧೦ ವಿ. ಗಳಲ್ಲಿ ೯ ವಿ. ಗಳು ಪಾಸಾದರು. ಶ್ರೀ ಎಸ್. ಎಸ್. ದುಗಾಣಿ ಇವರು ವರ್ಗ ಗುರುಗಳು.

ಕೋಟಾ ಉ. ಗಂ. ಶಾಲೆ : ೭ ವಿ ಗಳಲ್ಲಿ ೬ ವಿ. ಗಳು ಪಾಸಾದರು. ಶ್ರೀ ಎಸ್. ಎನ್. ಮಿರ್ದೆ ಇವರು ವರ್ಗ ಗುರುಗಳು.

ತಗುಣಕಿ (ತಾ. ಇಂಡಿ) ಕ. ಗಂ ಶಾಲೆ : ೧೦ ವಿ. ಗಳಲ್ಲಿ ೯ ವಿ. ಗಳು ಪಾಸಾದರು. ಶ್ರೀ ಎಸ್. ಆರ್. ಪಾಟೀಲ ಇವರು ವರ್ಗ ಗುರುಗಳು.

ಲೂರ (ತಾ. ಬದಾಮಿ) ಕ. ಗಂ. ಶಾಲೆ : ೧೦ ವಿ. ಗಳಲ್ಲಿ ೮ ವಿ. ಗಳು ಪಾಸಾದರು. ಶ್ರೀ ಬಿ. ವಾಯ್. ಕಾತರಕಿ ಇವರು ವರ್ಗ ಗುರುಗಳು.

ದಾಲ (ತಾ. ಬಾಗೇವಾಡಿ) ಕ. ಗಂ. ಶಾಲೆ : ೧೪ ವಿ. ಗಳಲ್ಲಿ ೧೪ ವಿ. ಗಳು ಪಾಸಾದರು. ಶ್ರೀ ಪ. ಬ. ಸುನಗದ ಇವರು ವರ್ಗ ಗುರುಗಳು.

ಮುದ್ದೇಬಿಹಾಳ ಕ. ಗಂ. ಶಾಲೆ : ೧೪ ವಿ. ಗಳಲ್ಲಿ ೧೩ ವಿ. ಗಳು ಪಾಸಾದರು. ಕು. ಮ. ಉಮರಸಾಹೇ ನೋಹದ್ದೀನ ಬಗಲಿ ಎಂಬ ವಿದ್ಯಾರ್ಥಿಯು ೫೪೯ ಗುಣಗಳನ್ನು ಪಡೆ ಕೇಂದ್ರಕ್ಕೆ ಪ್ರಥಮ ಸ್ಥಾನ ಪಡೆದಿದ್ದಾನೆ. ಶ್ರೀ ಎಸ್. ಯು. ಬಗ ಇವರು ವರ್ಗ ಗುರುಗಳು.

ಹಿರೇಮಳಗಾವಿ(ತಾ. ಹುನಗುಂದ) ಕ. ಗಂ. ಶಾಲೆ : ೫ ವಿ. ಗಳಲ್ಲಿ ಐದೂ ವಿ. ಗಳು. ಪಾಸಾದರು. ಶ್ರೀ ಲ. ಭ. ಹೂನೂ ಇವರು ವರ್ಗ ಗುರುಗಳು.

ಕಗಲಗೊಂಬ (ತಾ. ಬದಾಮಿ) ಕ. ಗಂ· ಶಾಲೆ : ೭ ವಿ. ಗಳಲ್ಲಿ ೫ ವಿ.ಗಳು ಪಾಸಾದರು. ಶ್ರೀ ಬಿ. ಬಿ. ಗೂಳನ್ನವರ ಇವ ವರ್ಗ ಗುರುಗಳು.

ಇಂದೂರ (ತಾ.ಮುಂಡಗೋಡ) ಕ. ಗಂ. ಶಾಲೆ : ೫ ವಿ. ಗಳಲ್ಲಿ ೪ ವಿ. ಗಳು ಪಾಸಾದರು. ಶ್ರೀ ಪಿ. ಎಮ್. ಹೆಗಡೆ ಇವ ವರ್ಗ ಗುರುಗಳು.

ಸದಾಶಿವಗಡ ಕಂ. ಗಂ. ಶಾಲೆ : ೧೯ ವಿ. ಗಳಲ್ಲಿ ೧೦ ವಿ. ಗಳು ಪಾಸಾದರು. ಶ್ರೀ ಎಸ್ ಆರ್. ನಾಯ ಇವರು ವರ್ಗ ಗುರುಗಳು.

ಭತಗುಣಕಿ (ತಾ. ಇಂಡಿ) ಜಿ. ವಿಜಾಪೂರ ಶಾಲೆಯ ಪಿ. ಎಸ್. ಪಿ. ಪರಿಣಾಮವು ೧೯೫೫-೫೬ರಿಂದ ೧೦೦ಕ್ಕೆ ೯೦ಕ ಹೆಚ್ಚು ಆಗುತ್ತಿದ್ದು ಆ ಶಾಲೆಯಲ್ಲಿ ಕಲಿಯಲು ಬರುವ ಪಿ. ಎಸ್. ವಿದ್ಯಾರ್ಥಿಗಳಿಗೆ ಪುಕ್ಕಟೆ ಊಟ ಹಾಗೂ ವಸತಿ ಸೌಕರ್ಯ ಒದಗಿ ಕೊಡಲಾಗುವದು. ಹಾಗೂ ಹುಷಾರ ಮತ್ತು ಹಿಂದುಳಿದ ಜಾತಿ ವಿದ್ಯಾರ್ಥಿಗಳಿಗೆ ಹೆಚ್ಚಿನ ಸಹಾಯ ನೀಡಲಾಗುವದು ಎಂದು ಶ್ರೀ ಸಿ. ಮಿಸಾಳೆ ಚೇರಮನ್, ಸ್ಕೂಲಕಮೀಟಿ, ಭತಗುಣಕಿ ಇವರು ತಿಳಿಸುತ್ತಾ

ಗಜೇಂದ್ರಗಡ ಕ. ಗಂ. ಶಾಲೆ : ೫೧ ವಿ. ಗಳಲ್ಲಿ ೪೫ ವಿ. ಗಳು ಪಾಸಾದರು. ಶ್ರೀ ಬ. ಕಂ. ಮಾಳವಾ ಮತ್ತು ಶ್ರೀ ಯ. ಆ. ಕಲಾಲ ಅವರು ವರ್ಗ ಶಿಕ್ಷಕರಾಗಿದ್ದರು.

ಉಣಚಗೇರಿ (ತಾ. ರೋಣ) : ೪ ವಿ. ಗಳಲ್ಲಿ ೩ ವಿದ್ಯಾರ್ಥಿಗಳು ಪಾಸಾದರು. ಶ್ರೀ ಅ. ಬ. ಪೂಜಾ ಇವರು ವರ್ಗ ಗುರುಗಳು.

ಯಂಕಂಚಿಮಣಿನಾಗರ (ತಾ. ಬದಾಮಿ) ಕ. ಗಂ. ಶಾಲೆ : ೧೪ ವಿ. ಗಳಲ್ಲಿ ೧೩ ವಿ. ಗಳು ಪಾಸಾದರು. ಶ್ರೀ ಮ. ಶಿ. ಮಠ ಇವ ವರ್ಗ ಗುರುಗಳು.

ಕಬನೂರ ಕ. ಗಂ. ಶಾಲೆ : ೭ ವಿ. ಗಳಲ್ಲಿ ೬ ವಿ. ಗಳು ಪಾಸಾದರು. ಶ್ರೀ ಎಚ್. ವಾಯ್. ಭೋ ಇವರು ವರ್ಗ ಗುರುಗಳು.

ಹಲಗಲಿ (ತಾ. ಮುಧೋಳ) ಕ. ಗಂ.ಶಾಲೆ : ೧೩ ವಿ. ಗಳಲ್ಲಿ ೧೩ ವಿ. ಗಳೂ ಪಾಸಾದರು.

ಹಿರೇಮುಸಳಿ (ತಾ. ಇಂಡಿ) ಕ. ಗಂ. ಶಾಲೆ : ೨೬ ವಿದ್ಯಾರ್ಥಿಗಳಲ್ಲಿ ೨೦ ವಿ. ಗಳು ಪಾಸಾದರು. ಶ್ರೀ ಅ. ಸು. ಕಟಿ ಇವರು ವರ್ಗ ಗುರುಗಳು.

ಚಿಕ್ಕಾಲಗುಂಡಿ (ತಾ. ಬೀಳಗಿ) : ೫ ವಿ. ಗಳಲ್ಲಿ ೪ ವಿದ್ಯಾರ್ಥಿಗಳು ಪಾಸಾದರು. ಶ್ರೀ ಎಮ್. ಎಸ ಮೆಟಗುಡ್ಡ ಇವರು ವರ್ಗ ಗುರುಗಳು.

ಚಿಕ್ಕಮಲ್ಲೂರ (ತಾ. ಶಿಗ್ಗಾಂವ) : ೪ ವಿ. ಗಳಲ್ಲಿ ೬ ವಿ. ಗಳು ಪಾಸಾದರು.

ಸಾಂಘಿಕ ಜೀವನ

ಲೇಖಕರು:—ಶ್ರೀ ಗಿ. ಮು. ಬಸಣ್ಣವರ, ಉಪ-ಗುರೂಜಿ ಕ. ಗಂ. ಮ. ಜೀವನ ಶಿಕ್ಷಣ ಶಾಲೆ, ಮುಧೋಳ

ಸಾಂಘಿಕ ಜೀವನ :— ಭಾರತೀಯರಾದ ನಾವು ಬಹಳೇ ಹಿಂದಿನ ಕಾಲದಿಂದ ಬಂದ ಸಮಾಜ ಶಾಸ್ತ್ರದ ಚಟುವಟಿಕೆಗಳನ್ನು ಶಾಲೆಯಲ್ಲಿ ಪ್ರಾಯೋಗಿಕ ರೀತಿಯಿಂದಲೂ; ತಾತ್ವಿಕ-ರೀತಿಯಿಂದಲೂ; ಮಕ್ಕಳೆಲ್ಲಿ ಒಡಗೂಡಿಸಿ ಉತ್ತಮ ನಾಗರಿಕರನ್ನಾಗಿ ಮಾಡುವದೇ "ಸಾಂಘಿಕ ಜೀವನ" ಇದು ಪರಂಪರಾಗತ ಹೇಗೆ ಬಂದಿತೆಂಬುದನ್ನು ವಿಚಾರಿಸೋಣ. ಭಾರತವು ಬಹಳ ವಿಸ್ತಾರವಿದೆ. ಅನೇಕ ಕ್ರಾಂತಿಗಳು ಆಗಿಹೋಗಿವೆ. ನಮ್ಮ ದೇಶದ ರಾಜ್ಯಪದ್ಧತಿಯ ಬಗ್ಗೆ ಅನೇಕ ಶಿಲಾಶಾಸನಗಳು ಬರುತ್ತವೆ. ನಮ್ಮ ರಾಜ್ಯಪದ್ಧತಿಗೆ ವೇದಗಳೇ ಮೂಲಾಧಾರ. ನಮ್ಮಲ್ಲಿ ಕೌಟಿಲ್ಯನ ಅರ್ಥಶಾಸ್ತ್ರ, ಬೃಹಸ್ಪತಿಯ ದಂಡನೀತಿ, ಶುಕ್ರಾಚಾರ್ಯರ ಶುಕ್ರನೀತಿ, ವಸುಭಾಗ ವಿಷ್ಣುಗುಪ್ತನ ಪಂಚತಂತ್ರ ಇವೇ ಮೊದಲಾದವುಗಳಲ್ಲಿ ರಾಜ್ಯ ಪದ್ಧತಿಯ ಬಗ್ಗೆ ಉಲ್ಲೇಖಗಳಿವೆ. ನಮ್ಮ ದೇಶದಲ್ಲಿ ರಾಜ್ಯ ಶಾಸ್ತ್ರವನ್ನು ಸ್ವತಂತ್ರ ವಿಷಯವೆಂದು ಗಣಿಸಿದ್ದಿಲ್ಲ. ಇದು ಸಮಾಜಶಾಸ್ತ್ರದ ಒಂದು ಅಂಗವಾಗಿತ್ತು. ಆದ್ದರಿಂದ ಇದರ ಕೆಲವು ಭಾಗಗಳು ಧರ್ಮಗ್ರಂಥಗಳಲ್ಲಿ ಬಂದಿರುತ್ತವೆ. ಅರ್ಥಶಾಸ್ತ್ರ ಮತ್ತು ರಾಜ್ಯಶಾಸ್ತ್ರಕ್ಕೆ ನಿಕಟ ಸಂಬಂಧವಿರುತ್ತದೆ. ರಾಜ್ಯ ಪದ್ಧತಿಯನ್ನು ಕಾಲ ವಿಭಾಗದಿಂದ ಗೊತ್ತುಹಚ್ಚಬಹುದು. ವೇದಕಾಲದಿಂದ ಹಿಂದರೆ ೫–೬ ಸಾವಿರ ವರ್ಷಗಳ ಹಿಂದೆ ಮತ್ತು ಪುಸಲ್ಮಾನರ ಆಳಿಕೆಯ ಆರಂಭದ ವರೆಗೆ ಅನೇಕ ರಾಜ್ಯ ಪದ್ಧತಿಗಳಿದ್ದವು. ಪುರಾತನ ಕಾಲದಿಂದ ಕ್ರಿ. ಶ. ಪೂ. ೩೦೦ ವರೆಗೆ ಕ್ರಿ. ಶ. ಪೂ. ೧೦೦೦ರಿಂದ ಕ್ರಿ. ಶ. ೫೦೦ರ ವರೆಗೆ, ೫೦೦ ರಿಂದ ಇಲ್ಲಿಯ ವರೆಗೆ ಈ ಪ್ರಕಾರ ಕಾಲ ವಿಭಾಗದಿಂದ ಗೊತ್ತುಹಚ್ಚಲಾಗಿದೆ.

ವೈದಿಕ ಕಾಲದ ವೈಶಿಷ್ಟ್ಯಗಳು :— ಅರಸುತನದ ಪ್ರಾಬಲ್ಯವು ಪ್ರಜಾಸತ್ತಾತ್ಮಕ ರಾಜ್ಯಪದ್ಧತಿಯು ಕಂಡು ಬರುತ್ತದೆ.—ಋಷಿಗಳು ಲೋಕಸತ್ತಾತ್ಮಕ ರಾಜ್ಯಕ್ಕೆ ಹೆಚ್ಚಿಗೆ ಅನುವು ಮಾಡಿಕೊಟ್ಟರು. ವೈದಿಕ ಕಾಲದ ಕೊನೆಗೆ ಅರಸುತನವು ಪ್ರಬಲವಾಯಿತು. ಮೊದಲು ಅರಸನನ್ನು ಆರಿಸುತ್ತಿದ್ದರು. ಮುಂದೆ ಅವರ ವಂಶಜರು ಆಳುತ್ತಿದ್ದರು.

ಬೌದ್ಧ ಮತ್ತು ಜೈನರ ಕಾಲದಲ್ಲಿಯ ಸಾಂಘಿಕ ಜೀವನ :— ಈ ಕಾಲದಲ್ಲಿ ಅರಸೊತ್ತಿಗೆಯ ಅಳಿಗಾಲ ಪ್ರಾಪ್ತವಾಗಿ ಜನರಲ್ಲಿಯ ಉಚ್ಚ-ನೀಚ ಭೇದ ಭಾವಗಳು ಇಲ್ಲದಂತೆ ಆದವು. ಪ್ರಜೆಗಳಿಗೆ ರಾಜಕೀಯ ಹಕ್ಕುಗಳು ಬಹಳ ಇದ್ದವು. ಆದುದರಿಂದ ಸಮತಾವಾದವೂ ಪ್ರಜಾಸತ್ತಾತ್ಮಕ ರಾಜ್ಯ ಪದ್ಧತಿಯೂ ಬೆಳೆದು ಬಂದವು. ರಾಜ್ಯದ ಆಡಳಿತೆಯನ್ನು ಗಣ-ಕುಲ-ಸಂಘಗಳು ನೋಡುತ್ತಿದ್ದವು.

ಅರ್ವಾಚೀನ ಕಾಲದ ಸಾಂಘಿಕ ಜೀವನ ಕ್ರಿ. ಶ. ಪೂರ್ವದಲ್ಲಿ ನಾಲ್ಕನೆಯ ಶತಮಾನದ ಹೊತ್ತಿಗೆ ಹಿಂದು ಸ್ಥಾನದಲ್ಲಿ ಸಣ್ಣ ಸಣ್ಣ ಪ್ರಜಾಸತ್ತಾತ್ಮಕ ರಾಜ್ಯಗಳು ಇದ್ದವು. ಆದರೆ ಪರರಾಜರ ದಾಳಿಗಳಿಂದ ಅವು ನಾಶವಾಗಿ ಯಾವನಾದರೊಬ್ಬ ಅರಸನ ಕೈಕೆಳಗೆ ಕೆಲಸ ಮಾಡುವದು ಯೋಗ್ಯವೆಂದು ಕಂಡುಬಂತು. ಇದರಿಂದ ಅರಸುತನವು ಪ್ರಬಲವಾಗಿ ಅರಸನು ದೇವಾಂಶ ಸಂಭೂತನೆಂಬ ಕಲ್ಪನೆಯು ಜನರಲ್ಲಿ ಹುಟ್ಟಿತು.

ರಾಜಸಂಸ್ಥೆಯ ಉದಯ ಮತ್ತು ಅದರ ಉದ್ದೇಶ :— ಮೊದಲು ಜನರು ಗುಂಪು ಕಟ್ಟಿಕೊಂಡು ತಿರುಗುತ್ತಿರುವಾಗ ಕುಟುಂಬದಲ್ಲಿ ತಂದೆಗಿಂತ ತಾಯಿಗೆ ಹೆಚ್ಚು ಮಹತ್ವವಿತ್ತು. ಆದರೆ ಈ ಕಾಲ ಬಹಳ ದಿವಸ ನಡೆಯಲಿಲ್ಲ. ಯಾಕಂದರೆ ತಾಯಿ ಪ್ರಾಧಾನ್ಯವಾದ ಕುಟುಂಬವು ಪರಕೀಯರ ದಾಳಿಗಳನ್ನು ಎದುರಿಸಲು ಅಶಕ್ಯವು ಆಯಿತು. ಮುಂದೆ ತಂದೆ ಪ್ರಧಾನವಾದ ಕುಟುಂಬವು ಪರಕೀಯರ ದಾಳಿಗಳನ್ನು ಎದುರಿಸಲು ಮುಂದೆ ಬಂದಿತು. ಈ ಪ್ರಕಾರ ತಂದೆ ಪ್ರಧಾನವಾದ ಕುಟುಂಬದ ಜನರನ್ನು ರಕ್ಷಿಸುವದು ಅವನ ಕರ್ತವ್ಯವಾಯಿತು. ಇವನೇ ಅರಸನಂತೆ ಅಧಿಕಾರ ಮಾಡಹತ್ತಿದನು.

ಆದರೆ ಅನೇಕ ಕುಟುಂಬಗಳು ಒಂದೆಡೆಗೆ ವಾಸಿಸಿದ್ದಾಗ ಅದನ್ನು ರಕ್ಷಿಸುವವರು ಯಾರು? ಅದನ್ನು ನೀಗಿಸಿಕೊಂಡು ಹೋಗುವವರು ಯಾರು? ಆದ್ದರಿಂದ ಈ ಚಿಕ್ಕ ಗುಂಪುಗಳು ಮುಂದೆ ಕುಲಗಳಾಗಿ ಬೆಳೆದವು. ಒಂದೊಂದು ಕುಲಕ್ಕೆ ಒಬ್ಬನು ಮುಖ್ಯಸ್ಥನು ನೇಮಿಸಲ್ಪಟ್ಟನು. ಇವನಿಗೆ ಮುಂದೆ "ಅರಸು" ಎಂಬ ಹೆಸರು

[ಳನೇ ಪುಟದಿಂದ ಬಂದದ್ದು.]

ವನಿತಾ ಟ್ರೇನಿಂಗ ಕಾಲೀಜ
(ಹೊಸ ಕೋರ್ಸ)

೧, ೨, ೩, ೪, ೫, ೬, ೭, ೮, ೧೦, ೧೧, ೧೨, ೧೩, ೧೪, ೧೫, ೧೭, ೨೧, ೨೨, ೨೩, ೨೪, ೨೫, ೨೭, ೨೮, ೩೦, ೩೧, ೩೪, ೩೬, ೩೭, ೩೮, ೪೦, ೪೧, ೪೪, ೪೫, ೪೬, ೪೭, ೪೮, ೪೯, ೫೦, ೫೩ ಮತ್ತು ೫೭.

ಜೆ. ಜಿ. ಕೆ. ಪಿ. ಟಿ. ಕಾಲೀಜ, ಹುಬ್ಬಳ್ಳಿ.
(ಹೊಸ ಕೋರ್ಸ)

೧, ೩, ೪, ೬, ೭, ೮, ೧೦, ೧೬, ೧೭, ೧೮, ೨೦, ೨೨, ೨೪, ೨೫, ೨೬, ೨೭, ೨೮, ೩೦, ೩೧, ೩೩, ೩೪, ೩೫, ೩೭, ೩೮, ೪೦, ೪೪, ೪೬, ೪೭, ೪೮, ೪೯, ೫೦, ೫೧, ೫೨, ೫೩, ೫೪, ೫೫, ೫೭, ೫೮, ೬೦, ೬೪, ೬೬, ೬೭, ೬೮, ೭೦, ೭೨, ೭೩, ೭೪, ೭೫, ೭೭, ೭೮, ೭೯, ೮೦, ೮೧, ೮೨, ೮೩, ೮೪, ೮೫, ೮೬, ೮೭, ೮೮, ೮೯, ೯೦, ೯೨, ೯೩, ೯೪, ೯೫, ೯೬, ೯೭, ೯೮, ೯೯, ೧೦೦, ೧೦೧, ೧೦೨, ೧೦೩, ೧೦೪, ೧೦೫, ೧೦೬, ೧೦೭, ೧೦೮, ೧೦೯, ೧೧೦, ೧೧೧, ೧೧೨, ೧೧೩, ೧೧೪, ೧೧೫, ೧೧೬, ೧೧೭, ೧೧೮, ೧೧೯, ೧೨೦, ೧೨೧, ೧೨೨, ೧೨೩, ೧೨೪, ೧೨೫, ೧೨೬, ೧೨೭, ೧೨೮, ೧೨೯, ೧೩೦, ೧೩೧,

ಸಮವಾಯ ತಂತ್ರವೆಂದರೇನು ?

ಮಗುವನ್ನು ಪ್ರಜಾಪ್ರಭುತ್ವದ ತಳಹದಿಯ ಮೇಲೆ ಬೆಳೆಸಬೇಕಾಗಿದೆ. ಆತನಿಗೆ ಸಾಮಾಜಿಕ ಜೀವನದ ಅರಿವನ್ನು ಮೂಡಿಸಬೇಕಾಗಿದೆ; ರಾಷ್ಟ್ರೀಯತ್ವವನ್ನು ತುಂಬಬೇಕಾಗಿದೆ. ಅಂಥ ಉದಾತ್ತ ಗುಣಾಭಿವೃದ್ಧಿಪಡಿಸಲು ಸಾಧನವಾಗಿರುವದೇ ಸಮವಾಯ ತಂತ್ರ. ವಿಷಯಗಳ ಜ್ಞಾನ ನೇರವಾಗಿ ಮಾಡಿಕೊಡುವದರಿಂದ ಮಗುವಿನ ಮನಸ್ಸು ಬೇಸರಿಸಿ ಅವಧಾನ ಹಿಡಿತದಲ್ಲಿ ಉಳಿಯದು. ಅದರಿಂದ ಮಗುವಿಗೆ ಬೇಸರವಾಗದ ರೀತಿಯಲ್ಲಿ ಅಭಿರುಚಿ ಹಾಗೂ ಅವಧಾನಗಳನ್ನು ಕೆರಳಿಸುವ ಉದ್ಯೋಗದಲ್ಲಿ ತೊಡಗಿಸಿ, ಉದ್ಯೋಗದಲ್ಲಿ ಉದಯಿಸುವ ಜ್ಞಾನ ವಿಷಯಗಳನ್ನು ಕಲಿಸುವದಕ್ಕೆ ಉಪಯೋಗಿಸುವದಕ್ಕೆ ಅನುಕೂಲವಾದುದೇ ಸಮವಾಯ ತಂತ್ರ.

ಮಾಡುವ ಕೆಲಸದಲ್ಲಿ ಏಕೆ? ಹೇಗೆ? ಎಂಬ ಸಮಸ್ಯೆಗಳು ಉದಯಿಸಿ ಅವುಗಳ ಪರಿಹಾರೋಪಾಯ ಒಡಮೂಡಿಸಿಕೊಳ್ಳುವದರಿಂದ ಸಹಜ ಜ್ಞಾನ ಉಪಲಬ್ಧವಾಗುವದು.

ಕೆಲಸದ ಬಗ್ಗೆ ಆಸಕ್ತಿ ಹುಟ್ಟಿ, ಮೇಲು-ಕೀಳುಗಳ ಭಿನ್ನಭಾವನೆಗಳು ಅಳಿದುಹೋಗುವವು. ಹಾಗು ಶ್ರಮ ಗೌರವವು ಕರ್ತವ್ಯದಕ್ಷತೆಯ ಉದಾತ್ತ ಗುಣಗಳು ಕೇಂದ್ರೀಕೃತವಾಗುವವು.

ಚಟುವಟಿಕೆಗಳು ಜ್ಞಾನದ ಹೆಚ್ಚಳಕ್ಕೆ ಅನುಕೂಲವಾಗಿರುವವು. ಹಾಗೂ ವಿಷಯಗಳ ನೇರವಾದ ತಿಳುವಳಿಕೆಯುಂಟಾಗುವದು. ಈ ರೀತಿ ಉದಾತ್ತ ವಿಚಾರಗಳನ್ನು ಹುಟ್ಟಿಸಿ ಸಮಾಜ ಜೀವನದ ಅರಿವನ್ನೂ, ಪ್ರಜಾಪ್ರಭುತ್ವದ ಬಗ್ಗೆ ಆದರ ಭಾವನೆಯನ್ನು ರಾಷ್ಟ್ರಾಭಿಮಾನವನ್ನು ಜಾಗೃತಗೊಳಿಸಿ ಉತ್ಕೃಷ್ಟ ಗುಣಗಳನ್ನು ಎಳೆಯರಲ್ಲಿ ಎರಕಹೊಯ್ಯಲು ನಿರ್ಮಿತವಾದ ಜೀವನ ಶಿಕ್ಷಣದ ಪ್ರಗತಿಗಾಮಿಯಾಗಿ ನಿಂತಿರುವದೇ ಸಮವಾಯ ತಂತ್ರವು.

ಮಗುವಿನ ಬೆಳವಣಿಗೆಯನ್ನು ಲಕ್ಷಿಸಿ ಸನ್ನಿವೇಶಕ್ಕೆ ತಕ್ಕ ರೀತಿಯಲ್ಲಿ ಆರ್ಥಿಕ, ಸಾಮಾಜಿಕ, ನೈಸರ್ಗಿಕ ಚಟುವಟಿಕೆಗಳಲ್ಲಿ ಮಗುವನ್ನು ತೊಡಗಿಸಿ ಸಮಯೋಚಿತ ವಿಷಯಗಳ ಜ್ಞಾನ ಮಾಡಿಕೊಡುವದರಿಂದ ಮಗುವಿನ ಸರ್ವತೋಮುಖ ಬೆಳವಣಿಗೆಯನ್ನು ಮಾಡಿದಂತಾಗುವದು. ಮಗುವು ಶಾಲೆಯಲ್ಲಿ ಕಲಿಯುವದಕ್ಕಿಂತ ಸಮಾಜದಲ್ಲಿ, ನಿಸರ್ಗದಲ್ಲಿ ಹಾಗೂ ಮನೆಯಲ್ಲಿ ಕಲಿಯುವದು ಹೆಚ್ಚಾಗಿದೆ. ಅದರಲ್ಲೂ ನಿಸರ್ಗವು ಮಾನವ ಜೀವನದ ಮೇಲೆ ತನ್ನ ಪ್ರಭುತ್ವವನ್ನು ನಡೆಸುತ್ತದೆ. ಇಂಥ ಚಟುವಟಿಕೆಗಳಿಂದ ಮಗುವು ಬಾಹ್ಯ ಜಗತ್ತಿನಲ್ಲಾಗುವ ಬದಲಾವಣೆಗಳನ್ನು ಗಮನಿಸಿ ಸರಿಯಾದ ದಾರಿ ತುಳಿಯಲು ಯತ್ನಿಸುತ್ತಾನೆ. ಅಂತೆಯೇ ಮಗುವಿನ ವಿವಿಧಾಂಗಗಳ ಉನ್ನತಿಗೆ ಚಟುವಟಿಕೆಗಳು ಸರಿಯಾದ ಸಾಧನಗಳು. ಅದರೊಡನೆ ನೀಡಲಾಗುವ ಜ್ಞಾನ ಕಲ್ಲಿನ ಮೇಲೆ ಚಿತ್ರತೆಗೆದಂತೆ. ಭವಿತವ್ಯದ ಅರುವಿನಿಂದ ತನ್ನ ಆರ್ಥಿಕ ಸಾಧನೆಯಲ್ಲಿ ಸಾಧ್ಯತೆಯನ್ನು ಗಳಿಸಿಕೊಳ್ಳುವನು.

"ಚಟುವಟಿಕೆಗಳನ್ನು ಶಾಸ್ತ್ರಬದ್ಧವಾಗಿ ಮಾಡುವದರಿಂದ ಕೃತಿಯಲ್ಲಿ ಅಡಗಿದ ಜ್ಞಾನ ತಾನಾಗಿಯೇ ಮಗುವಿಗೆ ಲಭ್ಯವಾಗುವ"ದೆಂದು ಶ್ರೀ ಭರತಾನಂದಜೀಯವರು ನುಡಿದ ನುಡಿಯು ಸಮವಾಯ ತಂತ್ರದ ಹಿರಿಮೆಗೆ ಕುರುಹು ಆಗಿದೆ.

ಸಮವಾಯ ತಂತ್ರದ ಉದ್ದೇಶ :

ಸಮವಾಯತಂತ್ರವೆಂದರೆ ಉದ್ಯೋಗ ಕಲಿಸುವ ಸಾಧನವಲ್ಲ. ಅದು ಪ್ರಜಾಪ್ರಭುತ್ವದ ತಳಹದಿಯ ಮೇಲೆ ಉತ್ತಮ ನಾಗರಿಕನನ್ನಾಗಿ ಮಾಡವದಾಗಿರುವದ ಉದ್ಯೋಗದ ಮುಖಾಂತರ ಜ್ಞಾನ ಲಭ್ಯವಾಗುವಂ ಅನುವರ್ತಿಯಾಗಿರುವದು. ಉದ್ಯೋಗ ಮತ್ತು ಜ್ಞಾನಗಳಲ್ಲಿಯ ಸಮ್ಮೇಳನಕ್ಕಿಂತ ಸ್ವರಮೇಳನವೇ ಮುಖ್ಯ. "ಜೀವನ ವಿಕಾಸದ ಅಂಗಗಳಾದ ಶರೀರ, ವಾಣಿ, ಮನಸ್ಸುಗಳ ಏಕೈಕ ರೀತಿಯ ಬೆಳವಣಿಗೆಯು ಅತಿ ಅವಶ್ಯ ಎಂದು ಆಚಾರ್ಯ ವಿನೋಬಾಜಿಯವರು ಹೇಳಿದ್ದಾರೆ. ಅದೇ ರೀತಿಯಾಗಿ ಉದ್ಯೋಗ ಹಾಗೂ ಜ್ಞಾನಗಳ ಸ್ವರಮೇಳದಿಂದ ಮಗುವಿನ ಸರ್ವತೋಮುಖ ಅಭಿವೃದ್ಧಿಯನ್ನು ಮಾಡುವದೇ ಸಮವಾಯ ತಂತ್ರದ ಉದ್ದೇಶ. ಉದ್ಯೋಗ ಜ್ಞಾನಗಳಿಗೆಲ್ಲಿಯ ಸಂಬಂಧವೆಂದು ಅಲ್ಲಗಳೆಯಬಹುದು. ಆದರೆ ಉದ್ಯೋಗ ಜ್ಞಾನಗಳ ಸಂಬಂಧ ತಾಯಿ-ಮಗುವಿನ ಸಂಬಂಧವಿದ್ದಂತೆ. ಮಾಡುವ ಕೆಲಸ ಅಪಕ್ವವಾದರೆ ಅದರಿಂದಾಗುವ ಜ್ಞಾನವೂ ಅಪಕ್ವ. ತಾಯಿಯ ಗುರಿಗಳು ಮಗುವಿನಲ್ಲಿ ಬೆಳೆಯುವವು ಎಂದು ಹೇಳುವಂತೆ ಉದ್ಯೋಗದಲ್ಲಿ ಉಂಟಾದ ಜ್ಞಾನ ವಿಷಯಗಳಿಗೂ ಅನ್ವಯವಾಗುವದು; ಅದುವೇ ನಿಜವಾದ ಶಿ

ಣವು. ವಿವಿಧ ಉದ್ಯೋಗಗಳೊಂದಿಗೆ ಭಾಷೆ, ಗಣಿತ, ಇತಿಹಾಸ ಮತ್ತಿನ್ನಿತರ ವಿಷಯಗಳನ್ನು ಕಲಿಸಲಾಗುತ್ತಿದೆ. ಅಂದರೆ ಕರ್ಮದಿಂದ ಗುಣ ವಿಕಾಸನವು ಸಾಧ್ಯ; ಕರ್ಮ ಕುಶಲತೆಯು ಹೆಚ್ಚಿದಂತೆ ಆ ಕುಶಲತೆ ಜನಸಾಮಾನ್ಯರು ಮೆಚ್ಚುವಂತೆ ವ್ಯಕ್ತಿ ತನ್ನ ಗುಣಗಳ ನ್ಯೂನತೆಯನ್ನು ಹೋಗಲಾಡಿಸಿಕೊಳ್ಳುವನು. ಅಲ್ಲದೆ ಕರ್ಮಗ್ರಾಹಿಯೂ, ಸ್ವಾವಲಂಭಿಯೂ ಆಗುತ್ತಾನೆ. ಸಮವಾಯ ತಂತ್ರವು ಹೊಸ ಸಮಾಜ ರಚನೆಗೆ ಪೋಷಕವಾಗಿರುವದು. ಅಲ್ಲದೆ ಮಾನವತೆಯನ್ನು ನಾಶಪಡಿಸುವ ಆಲಸ್ಯ, ಸೋಮಾರಿತನಗಳನ್ನು ಮುರಿದಿಕ್ಕಿ ನವಚೇತನದ ಚಿತ್ಕಳೆಯನ್ನು ಪುರವಟಿ ಮಾಡುವದು. ಉತ್ತಮ ಹಾಗೂ ಉತ್ಕೃಷ್ಟ ಗುಣಾಭಿವೃದ್ಧಿ ಹಾಗೂ ನಿರ್ಭಯವೃತ್ತಿ, ಸೇವಾ ಭಾವನೆ, ಕರ್ತವ್ಯದಕ್ಷತೆ ಮುಂತಾದ ಉಚ್ಚ ಹಾಗೂ ಆದರ್ಶಯುತವಾದ ನಡತೆಯನ್ನು ಕಲಿಸಿ ಸುಸಂಪನ್ನ ವ್ಯಕ್ತಿಯನ್ನಾಗಿರಿಸುವದೇ ಸಮವಾಯತಂತ್ರದ ಘನೋದ್ದೇಶವಾಗಿರುವದು.

ಅನುಭವದಿಂದ ಅಳವಟ್ಟ ಜ್ಞಾನ ಹಿಮಾಲಯದಂತೆ ಸ್ಥಿರವು; ಕಲಿತ ವಿಷಯಗಳ ಅರಿವು ಪಕ್ವಗೊಳಿಸುವದಕ್ಕಾಗಿ ಸಂಬಂಧಿತ ಹಾಗೂ ಸಮುಯೋಚಿತ ಕೆಲಸಗಳನ್ನು ಮಾಡಬೇಕಾಗುವದು. ತನ್ನನ್ನು ತಾನರಿತು ತನ್ನಿರುವಿನ ಅರುವಿನೊಂದಿಗೆ ಸಮಾಜ ಜೀವಿಯಾಗಿ ರಾಷ್ಟ್ರದ ಪ್ರಗತಿಗೆ ಕಾರಣೀಭೂತನಾಗುವಂತೆ ಇಂದಿನ ಮಕ್ಕಳನ್ನು ತರಬೇತಿಗೊಳಿಸಲು ಸಮವಾಯತಂತ್ರವೇ ಯೋಗ್ಯ ಮಾರ್ಗವೆಂದು ತಜ್ಞ ಜನಾಂಗ ಮನಸಾ ಒಪ್ಪಿ ಈ ತಂತ್ರಕ್ಕೆ ಜೀವನ ಶಿಕ್ಷಣದಲ್ಲಿ ಮಹತ್ವದ ಸ್ಥಾನ ಕಲ್ಪಿಸಿಕೊಟ್ಟಿರುವದು; ಇದರ ಅರಿವು ನಮಗಿಂದು ಬೇಕಾಗಿದೆ.

ಸಮವಾಯ ತಂತ್ರವನ್ನು ಕಾರ್ಯಗತಗೊಳಿಸುವ ಬಗೆ :

ಜೀವನ ಶಿಕ್ಷಣದಲ್ಲಿ ಸಮವಾಯ ತಂತ್ರವು ಸುಖ್ಯಾಂಗವಾಗಿರುವದು. ಅದರ ಉಪಯೋಗ ಸರಿಯಾದ ರೀತಿಯಲ್ಲಾಗುವಂತೆ ಕಾರ್ಯಗತಗೊಳಿಸುವ ಹೊಣೆ ಶಿಕ್ಷಕನದು. ಗಾಡಿಯನ್ನು ಮುನ್ನಡೆಸುವ ಸೂತ್ರ ಚಾಲಕನಂತೆ ಶಿಕ್ಷಣ ಗಾಡಿಯನ್ನು ಸಮವಾಯತಂತ್ರದ ಸೂತ್ರದ ಆಧಾರದಿಂದ ಶಿಕ್ಷಕನು ಮುನ್ನಡೆಸಬೇಕಾಗಿರುವದು. ಜೀವನ ಶಿಕ್ಷಣದ ಉದ್ದೇಶ ಫಲಪ್ರದವಾಗುವಂತೆ ಪ್ರಯತ್ನಿಸಬೇಕಾಗಿರುವದು. ಅದಕ್ಕಾಗಿ ಶಿಕ್ಷಕನ ವ್ಯಕ್ತಿತ್ವ ಹಾಗೂ ಜಾಣ್ಮೆ ಸಮವಾಯತಂತ್ರದ ಸಫಲತೆಗೆ ಆಧಾರವಾಗಿರುವವು. ಸಮವಾಯತಂತ್ರವು ಮಾಡುವ ಕೆಲಸಕ್ಕೆ ಹಾಗೂ ಕೆಲಸದ ಮಹತ್ವ ಮತ್ತು ಉಪಯುಕ್ತತೆಯ ಮೇಲಿಂದ ರೂಪಿತವಾಗಿರುವದು.

ಸಮವಾಯವೆಂದು ಸಿಕ್ಕ ಸಿಕ್ಕ ತೆರನಾಗಿ ಚಟುವಟಿಕೆಗಳನ್ನು ಮಾಡಿಸಿ ಸಮೀನಿಕರಣವಾಗದ ವಿಷಯಗಳನ್ನು ಒತ್ತಾಯದಿಂದ ಎಳೆದು ಕೂಡಿಸುವದು ನಿಷ್ಪ್ರಯೋಜಕವು. ಪರಿಸ್ಥಿತಿ ಹಾಗೂ ಸಮುಯೋಚಿತವಾಗಿ ಚಟುವಟಿಕೆಗಳನ್ನು ಮಾಡಿಸುವಾಗ ಅದಕ್ಕೆ ಸಂಬಂಧಿತವಾದ ಹಿನ್ನೆಲೆಯ ಅನುಭವದ ಅರಿವು ಮಕ್ಕಳಲ್ಲಿ ಮೂಡುವಂತೆ ಶಿಕ್ಷಕ ಪ್ರಯತ್ನಿಸಬೇಕು. ಮಾಡುವ ಕೆಲಸದ ಬಗ್ಗೆ ಮಗುವಿಗೆ ಏಕೆ ಮಾಡಬೇಕು? ಇದರಿಂದ ಪ್ರಯೋಜನವೇನು? ಜೀವನಕ್ಕೆ ಎಷ್ಟರಮಟ್ಟಿಗೆ ಸಂಬಂಧವಿದೆ ಎಂಬುದರ ಕಲ್ಪನೆ ಸರಿಯಾಗಿ ಮೂಡುವಂತೆ ಶಿಕ್ಷಕ ದಕ್ಷತೆ ವಹಿಸಬೇಕು. ಜೀವನಕ್ಕೂ, ಸಮವಾಯಕ್ಕೂ ನಿಕಟವಾದ ಸಂಬಂಧವಿರುವದು. ಚಟುವಟಿಕೆಗಳಿಗೆ ಹೊಂದಿಕೆಯಾಗುವ ಯಾವದೇ ವಿಷಯವಿರಲಿ ಅದು ಕ್ರಮಬದ್ಧವಾಗಿರಬೇಕು. ಕಲ್ಪನೆಯ ಓಟಕ್ಕಿಂತ ವಾಸ್ತವ್ಯತೆಯ ಬೆಳಕು ಬಿದ್ದಿರಬೇಕು. ಉದಾಹರಣೆಗಾಗಿ ೨+೩ = ೫ ಎಂದು ಯಾಂತ್ರಿಕ ರೀತಿಯಲ್ಲಿ ಮಗುವಿಗೆ ತಿಳಿಸಿದಾಗ ಮಗುವಿನ ಮನಸ್ಸಿನಲ್ಲಿ ಎರಡರಲ್ಲಿ ಮೂರು ಹೇಗೆ ಸೇರಿತು? ಎಂದು ವಿವಂಚನೆ ಮೂಡಿ ಆ ಬಗ್ಗೆ ನಿರಾಶಾದಾಯಕ ವಾತಾವರಣದಲ್ಲಿ ಮಡಗುವದು. ಈ ರೀತಿ ಕೊಡುವ ಜ್ಞಾನ ಅಪಕ್ವ. ಇದನ್ನೇ ಮಾಡಿದ ಚಟುವಟಿಕೆಗಳ ಆಧಾರದ ಮೇಲಿಂದ ಇದ್ದ ವಸ್ತುಗಳನ್ನೇ ಎಣಿಸಿ ಹಚ್ಚಿ ಎರಡರಲ್ಲಿ ಮೂರನ್ನು ಕೂಡಿಸಿಟ್ಟು ಐದು ಆದವು ಎಂಬ ಬಗ್ಗೆ ತಿಳಿಸಿದರೆ ಆ ಜ್ಞಾನ ಪಕ್ವಫಲದಂತೆ ರುಚಿ ಹಾಗೂ ಕಲ್ಲಿನಲ್ಲಿ ಕೆತ್ತಿದ ಚಿತ್ರದಂತೆ ಸ್ಥಿರವಾಗುವದು. ಸಮವಾಯತಂತ್ರವು ಮಾನವನ ಹಾಗೂ ನಿಸರ್ಗಗಳ ನಡುವೆ ಸಾಮಿಪ್ಯವನ್ನು ರೂಪಿಸುವದಾಗಿರುವದು. ಅದಕ್ಕಾಗಿ ಮಾಡುವ ಕೆಲಸದಲ್ಲಿ ನಿಷ್ಠೆ ಹಾಗೂ ಉತ್ಸಾಹಗಳು ತುಂಬಿಕೊಂಡು ಶಿಕ್ಷಕನು ಮಕ್ಕಳೊಂದಿಗೆ ಬೆರೆತು ಸರಿಯಾದ ಜ್ಞಾನ ಕೊಡಲು ಸಮರ್ಥನಾಗಬೇಕು. ಮಕ್ಕಳ ವಿಕಾಸಕ್ರಮದಲ್ಲಿ ಹಾಗೂ ಶಿಕ್ಷಣದ ಗುರಿಕಾಣುವಲ್ಲಿ ಸಮವಾಯತಂತ್ರವು ಶಿಕ್ಷಕನ ಊರುಗೋಲಾಗಿರುವದು.

ಸಮವಾಯ ತಂತ್ರದಲ್ಲಿ ಶಿಕ್ಷಕ :

ಶಿಕ್ಷಣದ ಪ್ರಗತಿ ಶಿಕ್ಷಕನ ವ್ಯಕ್ತಿತ್ವದ ಮೇಲೆ ಸಾಧ್ಯ. ಶಿಕ್ಷಕನು ಹೊಸ ಹೊಸ ಅನುಭವಗಳನ್ನು ಸಂಗ್ರಹಿಸುವ ಕಣಜವಾಗಬೇಕು. ಸಮವಾಯ ತಂತ್ರ ಎಂದು ಯಾಂತ್ರಿಕವಾಗಿ ಬಳಸುತ್ತ ನಡೆದಲ್ಲಿ ಎಲ್ಲವೂ ಅತಂತ್ರವಾಗುವದು. ನಾಟಕೀಯತೆಗಿಂತ ಭಾವನಾ ಪ್ರಧಾನವಾದ ರೀತಿಯಲ್ಲಿ ಮಕ್ಕಳನ್ನು ಪ್ರೇರೇಪಿಸಿ ಕೆಲಸದಲ್ಲಿ ತೊಡಗಿಸುವ ಕುಶಲಗಾರನಾಗಬೇಕು. ಚಟುವಟಿಕೆಗೆ ನಿಕಟ ಸಂಬಂಧವಾದ ವಿಷಯಗಳನ್ನು ಮಾತ್ರ ಉಪಯೋಗಿಸಿಕೊಳ್ಳಬೇಕು. ಇದು ಶಿಕ್ಷಕನ ಜಾಣತನದ ಪ್ರಶ್ನೆ. ಕೇವಲ ತರಬೇತಿಯಲ್ಲಿ ದೊರೆತ ಜ್ಞಾನದಿಂದ ಅಥವಾ ಏನೋ ಹೊರಿಸಿದ ಹೊಣೆ ನೀಗಿಸಿ ಕೊಂಡರಾಯಿತೆಂದು ಕಾರ್ಯಕರ್ತನಾಗುವದರಿಂದ ಉಪ ಯೋಗವಿಲ್ಲ. ಪ್ರತಿ ಚಟುವಟಿಕೆಯ ಸಂಪೂರ್ಣ ಅರಿವು ಬೇಕು. ಕಲಿಸುವ ವಿಷಯಗಳ ಸರಿಯಾದ ಜ್ಞಾನ ಬೇಕು. ಚಟುವಟಿಕೆ-ಹಾಗೂ ವಿಷಯಗಳಲ್ಲಿ ತಾಳಬದ್ಧತೆಯಿರು ವಂತೆ ಶಿಕ್ಷಕ ಪ್ರಯತ್ನಿಸಬೇಕು. ಅದಕ್ಕಾಗಿ ಶಿಕ್ಷಕ ಸಮವಾಯದ ನಿಶ್ಚಿತ ಅನುಭವ ಗಳಿಸಿಕೊಳ್ಳಲು ಹಾಗೂ ಬಳಸಿಕೊಳ್ಳಲು ಬದ್ಧನಾದಾಗ ಯಶಸ್ಸು ನಿಶ್ಚಿತವು. ಕೇವಲ ತತ್ವ ಹಾಗೂ ಭಯ-ಭೀತಿಗಳ ಮಧ್ಯೆ ಶಿಕ್ಷಕ ಕುಣಿ ಯುತ್ತ ಹೇಗಾದರೂ ಇದರಿಂದ ಪಾರಾಗಬೇಕೆಂದು ತಿಳಿದಿದ್ದರೆ ಅದು ವೃತ್ತಿಯ ಲಕ್ಷಣವಲ್ಲ. ತನ್ನ ಹೊಣೆ ಗಾರಿಕೆಯ ಸಂಪೂರ್ಣ ಅರಿವುಬೇಕು. ವೃತ್ತಿ ಸಂಗ್ರಹ ಅಥವಾ ಜೀವನೋಪಾಯಕ್ಕಾಗಿ ಎಂದು ತಿಳಿದು ನಡೆ ಯುವದು ಶ್ರೇಯಸ್ಕರವಲ್ಲ. ಶಿಕ್ಷಕ ವೃತ್ತಿ ಗಳಿಸಿದ ಜ್ಞಾನ ಸರಿಯಾದ ರೀತಿಯಲ್ಲಿ ವಿತರಣೆಸಿ ಹಿಡಿದ ಕೆಲಸ ದಲ್ಲಿ ಶ್ರೇಯಸ್ಸನ್ನು ಪಡೆಯುವದೇ ಮುಖ್ಯ ಉದ್ದೇಶವು. ಅದಕ್ಕಾಗಿ ತನ್ನ ಜ್ಞಾನ ಭಾಂಡಾರದ ಬೆಳವಣಿಗೆಯನ್ನು ಹೆಚ್ಚಿಸಿಕೊಳ್ಳಬೇಕು, ಅದರ ಉಪಯೋಗ ಮಕ್ಕಳಿ ಗಾಗಬೇಕು, ಶಿಕ್ಷಕ ಸಮುದ್ರದಂತೆ ಅಥವಾ ರಾಜ ಭಾಂಡಾರದಂತಿರಬೇಕು. ಸಮವಾಯತಂತ್ರದೊಂದಿಗೆ ಶಿಕ್ಷಣದ ಉದ್ದೇಶದ ಘನತೆಯನ್ನು ಅರಿತಿರಬೇಕು, ಅದ ರೊಂದಿಗೆ ಅಭ್ಯಾಸ ಪತ್ರಿಕೆಯ ಜ್ಞಾನ ಪಡೆದಿರಬೇಕು, ವಿಷಯ ಸಂಬಂಧೀಕರಿಸಿಕೊಳ್ಳುವಲ್ಲಿ ಸ್ವಾಭಾವಿಕತೆಯ ಕಡೆಗೆ ಲಕ್ಷಗೊಡಬೇಕು, ಒತ್ತಾಯಪಿರಬಾರದು, ಮಕ್ಕಳ ಮನೋವಿಜ್ಞಾನ ತಿಳಿದುಕೊಂಡು ಸಮಯಕ್ಕೆ ತಕ್ಕ ತನ್ನ ಪಾತ್ರಾಭಿನಯವನ್ನು ಕಳೆಕಟ್ಟುವ ರೀತಿಯಲ್ಲಿ ಯತ್ನಿಸ ಬೇಕು, ಶಿಕ್ಷಣದ ಭದ್ರಬುನಾದಿಯನ್ನು ಹಾಕುವ ಶಿಲ್ಪಿ ಶಿಕ್ಷಕನು, ಅದರಲ್ಲಿ ಭಯ ಎಳ್ಳಷ್ಟೂ ಇರಬಾರದು. ಸೋಲೆ ನಿಶ್ಚಿತವೆಂದು ಸೈನಿಕನಿಗೆ ತಿಳಿದರೆ ಯುದ್ಧ ಮಾಡಲು ಹಿಂಜರಿದು ತನ್ನ ಜೀವರಕ್ಷಣೆಗಾಗಿ ಪಲಾಯನ ದಾರಿ ಹುಡುಕುವನು, ಹಾಗೆ ಶಿಕ್ಷಕನು ಬೆದರಿಕೆ ಹಾಗೂ ಭೀತಿಗಳಿಗೆ ಬಲಿಯಾದರೆ ಶಿಕ್ಷಣ ಕ್ರಮ ಸರಿಯಾಗಿ ಸಾಗ ಲಾರದು. ಅದೇ ರೀತಿ ಕಲಿಯಬೇಕಾದ ವಿಷಯ ಜಟಿ ಲವು ಎಂದು ಮಗುವು ಭೀತಿಪಟ್ಟ ಮೇಲೆ ಎಲ್ಲವೂ ನಿರ ರ್ಥಕ. ಅದಕ್ಕಾಗಿ " ಸಮವಾಯತಂತ್ರ ಸಾಧನೆಯಲ್ಲಿ ಭೀತಿಗಿಂತ ಪ್ರೀತಿ ಹೆಚ್ಚು ಸಹಾಯಕವು " ಎಂದು ವಿನೋಬಾಜಿಯವರು ಹೇಳಿದ ಮಾತಿನಲ್ಲಿ ಸತ್ಯವಿದೆ.

" ಅಧಿಕಾರ ಹಾಗೂ ಸರಕಾರದ ನಡುವೆ ಶಿಕ್ಷ ಭೀತಿಯ ಮುದ್ದೆಯಾದರೆ ಅತನಿಂದ ಕಲಿಸುವಿಕೆಯ ಸರಿಯಾಗಿ ಸಾಗದು. ನಿರ್ಭಯವುಳ್ಳವನಾದಲ್ಲಿ ಕೆಲ ಫಲಕಾರಿ " ಎಂದು ಜನಾಬ ಸೈಯ್ಯದೀನರು ಹೇಳು ಮಾತು ಅರಿತು ಶಿಕ್ಷಕ ತನ್ನ ಕರ್ತವ್ಯವನ್ನೇ ಮುಖ್ಯವಾ ಟ್ಟುಕೊಳ್ಳಲು ಸಮರ್ಥನಾಗಿರಬೇಕು. ಅದೇ ಸಮವಾಯ ತಂತ್ರದ ಉದ್ದೇಶ. ಅದಕ್ಕಾಗಿ ಸಮವಾಯ ತಂತ್ರದ ಶಿಕ್ಷಕನು ನಿರ್ಭಯ ವೃತ್ತಿಯುಳ್ಳವನೂ, ಕರ್ತವ್ಯ ದಕ್ಷನೂ, ವಿಚಾರ ಶೀಲನೂ, ಕುಶಲಗಾರನೂ ಆಗಿರಬೇಕು. ಅಂದರೆ ಶಿಕ್ಷಣದ ಪ್ರಗತಿ ಸಾಧ್ಯವು

ಅಧಿಕಾರಿಗಳು ಹಾಗು ಸರಕಾರ :

ಇಂದು ಶಿಕ್ಷಕ ವೃತ್ತಿ ಭೀತಿಯಲ್ಲಿ ತೇಲತೊಡಗಿದೆ ಅದರಲ್ಲೂ ಸಮವಾಯ ತಂತ್ರದ ಅತಿವು ಸಂಪೂರ್ಣ ಅದೇಷ್ಟೋ ಶಿಕ್ಷಕರಿಗೆ ಇಲ್ಲವೆನ್ನಲೂಬಹುದು. ಇದು ದಾದರೂ ಯಾಂತ್ರಿಕತೆಯಲ್ಲಿ. ಇದಕ್ಕೆ ಅಧಿಕಾರಿಗಳ ಶಿಕ್ಷಕನನ್ನು ಭೀತಿಭೀಬತ್ಸತೆಗಳಿಲ್ಲದೆ ಸರಿಯಾದ ಮಾರ್ಗಕ್ಕೆ ತಂದು ನಿಲ್ಲಿಸುವಲ್ಲಿ ಪ್ರಯತ್ನಿಸಲೇಬೇಕು ಶಾಲೆಗಳ ಸಂದರ್ಶನದಲ್ಲಿ ಶಿಕ್ಷಕನಿಗೆ ಶಿಕ್ಷಣ ಕ್ಷೇತ್ರದಲ್ಲಿ ಉಂಟಾದ ಸಮಸ್ಯೆಗಳನ್ನು ಪರಿಹರಿಸಿ ಸರಿಯಾದ ರೀತಿ ಯಲ್ಲಿ ಮಾರ್ಗದರ್ಶನ ಮಾಡುವದು ಅತಿ ಅವಶ್ಯವಾಗಿದೆ ಹೊಸ ಶಿಕ್ಷಣದ ರೂಪರೇಷೆ, ಧ್ಯೇಯ-ಧೋರಣೆಗಳನ್ನು ತಿಳಿದು ಅದರ ಮಹತಿಯನ್ನು ಜನಸಾಮಾನ್ಯರಲ್ಲಿ ಒ ಮೂಡಿಸಬೇಕು. " ಶಾಲಾ ತಪಾಸಿಗರೆಂದರೆ ಶಿಕ್ಷಕ

ಮೇಲೆ ದರ್ಪ ನಡೆಸುವವರಲ್ಲ; ಅವರು ಶಿಕ್ಷಕರ ಮಿತ್ರರು, ಮಾರ್ಗದರ್ಶಕರು, ಇದಕ್ಕೂ ಒಂದ್ಹೆಜ್ಜೆ ಮುಂದೆ ನಾವಿಬ್ಬರೂ ಶಿಕ್ಷಕನ ಗುರುವಿನಂತೆ ಇರಬೇಕೆಂದು'' ಪಂಡಿತ ನೆಹರೂರವರು ಹೇಳಿದ ಮಾತು ಸತ್ಯವಾಗಿದೆ. ಆ ರೀತಿ ಅಧಿಕಾರಿಗಳು ಮಕ್ಕಳ ಗುರುವಿನ ಗುರುಗಳಾಗಿ ಶಿಕ್ಷಕನೊಡನೆ ಪ್ರೀತಿ ವಿಶ್ವಾಸಗಳಿಂದ ಅವನಿಗೆ ಉತ್ತೇಜನ ವಿಧಾಯಕ ರೀತಿಯಲ್ಲಿ ಹಾಗೂ ಪರ್ಯಾಯವಾಗಿ ನೀಡುವದು ಶಿಕ್ಷಣದ ಪ್ರಗತಿಗೆ ಅನುಕೂಲವಾದೀತು. ದರ್ಪ ದುರ್ಮಾನಗಳಿಂದ ಶಿಕ್ಷಕನ ಮನಸ್ಸು ಸಣ್ಣದಾಗಿ ಆತನ ಕೆಲಸ ಇದ್ದುದಕ್ಕಿಂತಲೂ ಅತೃಪ್ತಿಕರವಾಗುವದೆಂಬ ಮಾತು ಅಲ್ಲಗಳೆಯಲಾಗದು.

ಅದೇ ತೆರನಾಗಿ ಸರಕಾರವು ಕೂಡ ತನ್ನ ಗುರುತಮವಾದ ಹೊಣೆಯನ್ನು ಲಕ್ಷಿಸುವದು ಶ್ರೇಯಸ್ಕರವು. ರಾಷ್ಟ್ರದ ದೃಷ್ಟಿಯಿಂದ. ಶಿಕ್ಷಣದ ಪ್ರಗತಿಯನ್ನು ಕಾಣಬೇಕೆಂಬ ಉದ್ದೇಶ ಸರಕಾರಕ್ಕಿದ್ದರೆ ಶಿಕ್ಷಕನ ಬಗ್ಗೆ ಸಹಾನುಭೂತಿ ಅವಶ್ಯವೆಂದು ಹೇಳಬಹುದು. "ಯೋಜಿಸಿದ ಯೋಜನೆಗಳು ಫಲದಾಯಕವಾಗಬೇಕಾದರೆ ಆ ಯೋಜನೆಯಲ್ಲಿ ಕೆಲಸ ಮಾಡುವವರನ್ನು ಅವಲಂಬಿಸಿದೆ'' ಎಂಬ ಮಾತು ನಿದರ್ಶನವಿದೆ. ಮೇಲಿಂದ ಮೇಲೆ ಶಿಕ್ಷಣದ ಬಗ್ಗೆ ಸಮಿತಿಗಳನ್ನು ನಿಯಮಿಸಿ ಅದು ನೀಡುವ ಶಿಕ್ಷಣಕ್ಕೆ ಅವಶ್ಯಕವಾದ ಸೂಚನೆಗಳ ಬಗ್ಗೆ ಶಿಕ್ಷಣ ಕ್ಷೇತ್ರದಲ್ಲಿ ದುಡಿಯುವ ಎಲ್ಲ ವರ್ಗದವರಿಗೂ ತಿಳಿಪಡಿಸಬೇಕು. ಸಾದರ್ಶನಿಕ ವೃತ್ತಿಯು ಭೌತಿಕ ವಿಕಾಸ ಸಾಧನವು. ಹಾಗೆ ಶಿಕ್ಷಕರ ಸಂಶೋಧನ ಪ್ರವೃತ್ತಿ ಬೆಳಗುವಂತೆ ಜಿಲ್ಲಾ ಹಾಗು ರಾಜ್ಯ ಮಟ್ಟದ ಶಿಕ್ಷಕರಸಮ್ಮೇಲನವನ್ನು ವರ್ಷಕೊಮ್ಮೆಯಾದರೂ ಜರುಗಿಸಿ ಅಲ್ಲಿ ಶಿಕ್ಷಣದ ಬಗ್ಗೆ ಹಾಗೂ ವಿವಿಧ ವಿಷಯಗಳ ಬಗ್ಗೆ ತಜ್ಞರೊಂದಿಗೆ ಚರ್ಚಿಸುವ ಅವಕಾಶವಿತ್ತುದಾದರೆ ಹೆಚ್ಚು ಉಪಯುಕ್ತ.

ಸಮವಾಯ ತಂತ್ರವು ಸರಳವೆನ್ನುವಷ್ಟೇ ಕಠಿಣವಿದೆ. ಅದರ ಸರಿಯಾದ ಕಲ್ಪನೆ ಶಿಕ್ಷಕನಿಗೆ ಆಗುವಂತೆ ಯೋಗ್ಯ ಮಾರ್ಗದರ್ಶನ ಮಾಡುತ್ತ ಹೋದಲ್ಲಿ ನಿಜಕ್ಕೂ ಶಿಕ್ಷಣದ, ಸಮಾಜದ ತನ್ಮೂಲಕ ರಾಷ್ಟ್ರದ ಪ್ರಗತಿ ಸಾಧ್ಯ. ಯಾವದೇ ರಾಷ್ಟ್ರದ ಪ್ರಗತಿ ವಿಗತಿಗಳನ್ನು ಆ ರಾಷ್ಟ್ರದಲ್ಲಿರುವ ಶಿಕ್ಷಣವೇ ನಿರ್ಧರಿಸುವದು. ಆ ಶಿಕ್ಷಣದ ಸೂತ್ರಗಳು ಶಿಕ್ಷಕನ ಅಧೀನ. ಶಿಕ್ಷಕ ಅಧಿಕಾರಿಗಳ ಅಧೀನ, ಮುಖ್ಯ ಜಾಲಕ ಸರಕಾರ. ಹೀಗೆ ಜೇಡನ ಬಲೆಯಂತೆ ಸುತ್ತಲೂ ವ್ಯಾಪಕ. ಅದಕ್ಕಾಗಿ ಶಿಕ್ಷಕನನ್ನು ನಡೆಸಿಕೊಳ್ಳಬೇಕು; ಶಿಕ್ಷಣದ ಪ್ರಗತಿಗೆ ಸಮತಾವಾದ ಸಮಾಜ ರಚನೆಯಂತೆ ಶಿಕ್ಷಕ–ಅಧಿಕಾರಿಗಳಲ್ಲೂ ಸಮತಾವಾದ ಮೊದಲಿಗೆ ಬೇಕು. ಆಗ ಸಮವಾಯ ತಂತ್ರದ ಯಶ ನಿಶ್ಚಿತವು. "ದಂಡನೆಯಿಂದ ಜ್ಞಾನ ಬೆಳವಣಿಗೆ ಸಾಧ್ಯವಿಲ್ಲ'' ಎಂಬ ತಜ್ಞರ ಅಭಿಪ್ರಾಯದಂತೆ ಶಿಕ್ಷಕ–ಅಧಿಕಾರಿಗಳ ಹಾಗೂ ಸರಕಾರದ ನಡುವೆ ನಿಕಟವಾದ ನಿರ್ಧಾರ ವೃತ್ತಿಯುಳ್ಳ ಸಂಬಂಧ ಬೆಳೆದು ಬರಬೇಕು. ಇದು ಮೂಲ ಶಿಕ್ಷಣದ ಮುಖ್ಯ ಗುರಿ. ಸಮವಾಯ ತಂತ್ರದ ಉದ್ದೇಶವೂ ಇದಾಗಿದೆ.

ಸಮಾರೋಪ

ಒಟ್ಟಿನಲ್ಲಿ ಜೀವನ ಶಿಕ್ಷಣದಲ್ಲಿ ಸಮವಾಯ ತಂತ್ರವು ಜೀವನದ ಅನಂತ ಅನುಭವಗಳ ಅರಿವನ್ನು ನೀಡುವುದಲ್ಲದೆ ಪ್ರಜಾಪ್ರಭುತ್ವದ ಹಾಗೂ ಸಮತಾವಾದ ಸಮಾಜ ರಚನೆಯ ಮುಖ್ಯ ಗುರಿ ಮುಟ್ಟಿಸುವ ಸಾಧನವಾಗಿರುವುದು. ಇದರ ಸರಿಯಾದ ಉಪಯೋಗ ರಾಷ್ಟ್ರದ ಎಲ್ಲ ಮಕ್ಕಳಿಗೆ ಲಭ್ಯವಾಗುವಂತೆ ಶಿಕ್ಷಕನು ಪರಿಶ್ರಮಿಸಲೇಬೇಕು. ಹಾಗೂ ಶಿಕ್ಷಕನ ಕಾರ್ಯದಲ್ಲಿ ಕಂಡು ಬರುವ ನ್ಯೂನತೆಗಳನ್ನು ಸಹಾನುಭೂತಿಯಿಂದ ವಿಚಾರಿಸಿ ಮಾರ್ಗದರ್ಶನ ಮಾಡುವ ಅಧಿಕಾರಿ ವರ್ಗದ ಪ್ರಥಮ ಕರ್ತವ್ಯವು. "ಶಿಕ್ಷಕ ರಾಷ್ಟ್ರದ ಕಣ್ಣು'' ಎಂದು ತಿಳಿದು ಕಣ್ಣಿನ ತೇಜಸ್ಸು ಹೆಚ್ಚುವಂತೆ ಕಾಲ ಕಾಲಕ್ಕೆ ಸಹಾಯ–ಸಹಕಾರಗಳನ್ನು ನೀಡುವದು ಹಿತಕರ. ಒಟ್ಟಿನ ಮೇಲಿಂದ ಪ್ರಗತಿಯು ರಾಷ್ಟ್ರದ ನಾಗರಿಕನೆನ್ನಿಸಿಕೊಳ್ಳುವ ಶಿಕ್ಷಕನ ಮುಖ್ಯ ಕರ್ತವ್ಯದಲ್ಲಿ ಅಡಕವಾಗಿದೆ.

— ಜಯ ಭಾರತಿ ! —

ಸಾಮಾನ್ಯ ಹಾಗು ದಶಾಂಶ ಅಪೂರ್ಣಾಂಕಗಳ ವಿಶೇಷ ಪ್ರಯೋಜ

ಶ್ರೀ ಕಾವ್ಯಕಲಾನಿಧಿ **ಕಟ್ಟಿ ಶ್ಯಾಮರಾಯರು**

[ಕಳೆದ ಸಂಚಿಕೆಯಿಂದ ಮುಂದುವರಿದುದು.]

೫. ಸಂಕಲನ, ವ್ಯವಕಲನ, ಗುಣಾಕಾರ, ಭಾಗಾಕಾರದ ಕೃತಿಗಳಲ್ಲಿರುವ ಮೂಲಭೂತ ತತ್ವಗಳು.

(೧) ಸಂಕಲನ ವ್ಯವಕಲನಗಳಿಂದ ಕೂಡಿದ ರಾಶಿಯಲ್ಲಿದ್ದ ಪದಗಳನ್ನು ಹಿಂದಿನ ಚಿಹ್ನ ಸಹಿತವಾದ ಬೇಕ ಹಾಗೆ ಸ್ಥಳಾಂತರ ಮಾಡಬಹುದು.

ಉದಾ: ೧೦ − ೯ + ೧ = ೨; ೧೦ + ೧ − ೯ = ೨; ೧ + ೧೦ − ೯ = ೨.

(೨) ಗುಣಾಕಾರ ಭಾಗಾಕಾರಗಳಿಂದ ಕೂಡಿದ ರಾಶಿಯಲ್ಲಿದ್ದ ಪದಗಳನ್ನೂ ಹಿಂದಿನ ಚಿಹ್ನ ಸಹಿತವಾಗಿ ಬೇಕಾ ಹಾಗೆ ಸ್ಥಳಾಂತರಿಸಬಹುದು.

ಉದಾ: ೨ ÷ ೩ × ೪ = ⅔ × ೪ = ೮/೩.

ಅಥವಾ ೨ × ೪ ÷ ೩ = ೮ ÷ ೩ = ೮/೩.

ಅಥವಾ ೪ × ೨ ÷ ೩ = ೮/೩.

(೩) ಸಂಕಲನ ವ್ಯವಕಲನಗಳಿಂದ ಕೂಡಿದ ರಾಶಿಯ ಪದಗಳಲ್ಲಿ ಬೇಕಾದ ಹಾಗೆ ಆವರಣ ಹಾಕಿ (ಕಂಸ ಹಾ ಗುಂಪು ಮಾಡಿಕೊಳ್ಳಬಹುದು, ಕಳೆಯುವ ಚಿಹ್ನದ ಮುಂದೆ ಮಾತ್ರ ಕಂಸ ಹಾಕಿದಾಗ ಒಳಗೆ ಬರ ಪದಗಳ ಚಿಹ್ನಗಳನ್ನು ಬದಲು ಮಾಡಬೇಕು.

ಉದಾ: ೧೦ − ೯ + ೧ = ೨; ೧೦ + ೧ − ೯ = ೨.

೧೦ − (೯ − ೧) = ೧೦ − ೮ = ೨.

೧೦ + ೧ − ೯ = ೧೧ − ೯ = ೨.

(೪) ಗುಣಾಕಾರ ಭಾಗಾಕಾರಗಳಿಂದ ಕೂಡಿದ ರಾಶಿಯ ಪದಗಳಲ್ಲಿ ಬೇಕಾದ ಹಾಗೆ ಆವರಣ ಹಾ (ಕಂಸ ಹಾಕಿ) ಗುಂಪುಮಾಡಿಕೊಳ್ಳಬಹುದು; ಭಾಗ ಚಿಹ್ನದ ಮುಂದೆ ಮಾತ್ರ ಕಂಸಹಾಕಿದಾಗ ಒಳ ಬರುವ ಪದಗಳ ಚಿಹ್ನಗಳನ್ನು ಬದಲು ಮಾಡಬೇಕು.

೨ ÷ ೩ × ೫ ÷ ೪; ⅔ × ೫ = ೧೦/೩, ೧೦/೩ ÷ ೪ = ೫/೨ ÷ ೪ = ೫/೮.

(೨ ÷ ೩) × (೫ ÷ ೪); ⅔ × ೫/೪ = ೧೦/೧೨ = ೫/೬

(೨ ÷ ೩) ÷ (೪ ÷ ೫) = ⅔ ÷ ೪/೫ = ೧೦/೧೨ ÷ ೧೦/೧೨ = ೧೦/೧೨ ÷ ೧೦/೧೨ = ೧೦/೧೨ ÷ ೧ = ೧೦/೧೨ = ೫/೬

ಈ ಕಡೆಯ ಉದಾಹರಣೆಯಲ್ಲಿ ⅔ ÷ ೪/೫ ಈ ಭಾಗಾಕಾರದ ಉತ್ತರ ೫/೬ ಬಂದದ್ದು.

ಸರಿ ಇದೆ ಎಂದು ಬೇರೊಂದು ರೀತಿಯಿಂದ ತಾಳೆಮಾಡಿ ನೋಡಿದೆ.

ನಿರೀಕ್ಷಣಕ್ಕೆ ಮರೆಯಬಾರದ ಇನ್ನೊಂದು ಸಂಗತಿ.

೧೫ ÷ ೫ = ೯ ÷ ೩ = ೧೨ ÷ ೪ = ೧೮ ÷ ೬.

ಈ ಎಲ್ಲ ಭಾಗಾಕಾರ ಉತ್ತರ ಒಂದೇ ಇರುವದು.

ಈ ಮಾತನ್ನು ತಿಳಿಸುವ ಇನ್ನೊಂದು ಉದಾಹರಣೆ :

(೫) ಗುಣಾಕಾರ ಭಾಗಾಕಾರಗಳನ್ನು ಹಂಚಿಹಾಕಿಕೊಳ್ಳುವ ತತ್ವ,

ಉದಾ : ೧೨ × ೩ = (೧೦೦ + ೨೦ + ೩) × ೩ = (೧೦೦ × ೩) + (೨೦ × ೩) + (೩ × ೩)

ಭಾಗಾಕಾರ ತಿಳಿಟ ÷ ೨ = (೨೦೦ ÷ ೨) + (೪೦ ÷ ೨) + (೬ ÷ ೨).

ಜೀವನ ಶಿಕ್ಷಣ

ಲೇಖಕ:— **ಶ್ರೀ ದ. ರಾ. ನಾಡಿಗೇರ,** ಉಪಗುರುಗಳು ಜೀ. ಶಿ. ಕ. ಗಂ. ಮು. ಶಾಲೆ, ಹಾನಗಲ್ಲ

(೧)

ಜೀವನ ಹೊನಲನು |
ಪಾವನ ಪಥದಲಿ |
ಸುಗಮದಿ ಸಾಗಿಪ |
ಜೀವನ ರುಚಿಯಿದು |
ಜೀವನ ಶಿಕ್ಷಣವು ||

(೨)

ಕಲೆಗಳ ತರುಗಳ |
ಒಲವಿನ ನೀರೆರೆಯುತ |
ಜೆಲುವಿಂ ಬೆಳೆಯಿಸಿ |
ಗೆಲೆಯುತಲಿರುವುದು |
ಅಲಸಿಕೆ ಭೂತವನು ||

(೩)

ಕಲೆಗಳ ಪ್ರಗತಿಯ |
ಜೊತೆಯಲಿ ಬೆಲೆಗಳ |
ಕಲೆಯಿಸಿ ಕೊಡುತಲಿ |
ಗೆಲೆಯುತಲಿರುವುದು |
ಒಡತನ ಭೂತವನು ||

(೪)

ಜನಗಳ ತನುಮನ |
ಅನುರಾಗದಿ ಬೆರೆಯಿಸಿ |
ಬಾಂಧವ್ಯವ ಬೆಳೆಯಿಸಿ |
ಒಂದೆಡೆಗೂಡಿಸಿ ನಾಡಿನ |
ಕುಂದನು ಕಳೆಯುವುದು ||

(೫)

ಅನೇಕತೆಯನು ದೂಡಿ |
ಜನತೆಯ ಏಕತೆಮಾಡಿ |
ಘನಸೌಹಾರ್ದವ ನೀಡಿ |
ಉನ್ನತ ನೀತಿಯಹಾಡಿ |
ಸನ್ನುತವೆನಿಸಿಹುದು ||

(೬)

ಗಂಗಾಯಮುನೆಯ |
ಸಂಗಮದಂತಿರೆ |
ಜೀವನ ಸಾಧನ |
ಶಿಕ್ಷಣ ಕ್ಷಣಕ್ಷಣ |
ಮುನ್ನಡೆದಿಹುದು ||

Regd No. B. 5376

ಭಾಗ ೧ ಕವಿತಾ ಸಂಕಲನ ೧೫೦ **ನಾವು ನಮ್ಮವರು** ಭಾಗ ೨ ಕಥಾ ಸಂಕಲನ ೧೫೦

(ಪ್ರಾಥಮಿಕ ಶಿಕ್ಷಕ ಸಾಹಿತಿಗಳ ಫೋಟೊ ಪರಿಚಯ ಕಥೆ ಕವನಗಳು)

ಮಾನ್ಯ ಎ. ಸಿ. ದೇವೇಗೌಡರು ಶಿಕ್ಷಣಾಧಿಕಾರಿಗಳು [D. P. I.] ಮೈಸೂರು ರಾಜ್ಯ ಅವರ ಮುನ್ನುಡಿ.

ಮಾನ್ಯ ಸಿದ್ಧಯ್ಯ ಪುರಾಣಿಕ 'ಕಾವ್ಯಾನಂದ'ರು ಪೆ. ಸೆಕ್ರೆಟರಿ ಶಿಕ್ಷಣ ವಿಭಾಗ ಇವರ ಹಿನ್ನುಡಿಗಳು.

- ಕೇವಲ ೩ ರೂಪಾಯಿ [ಅಂಚೆಪೇ] ವಾರ್ಷಿಕ ಚಂದಾ ಹಣದಲ್ಲಿ ೩ನೆಯ ನೂಲೆಯ ೧–೨ನೆಯ ಕುಸುಮ ಪಡೆಯಿರಿ
- ಪ್ರಾಥಮಿಕ ಶಿಕ್ಷಕರ ಕಥೆ, ಕಾದಂಬರಿ, ಕವನ, ನಾಟಕಾದಿ ಕೃತಿಗಳು ಇಂದೇ ಪುಟಗಳಲ್ಲಿ.
- ಆಗಷ್ಟ ದಿಂದ ಆಗಸ್ಟಿಗೆ ಒಂದು ವರುಷ
- ಬಿಡಿ ಕುಸುಮ ಚಂದಾದಾರರಿಗೆ ೫ ಜೆಲೆಯಲ್ಲಿ [ಅಂಚೆಪೇ]
- ವರುಷದ ಮಧ್ಯದಲ್ಲಿ ಚಂದಾದಾರರಾದರೂ ಆ ವರ್ಷದ ಎಲ್ಲ ಪುಸ್ತಕಗಳು ಸೇರಿಯುವವು.
- ಇಂದೇ ಚಂದಾದಾರರಾಗಿ ತಮ್ಮವೇ ಆದ ಶಿಕ್ಷಕರ ಬಗ್ಗೆ ನು ಬೆನೆಯಂತೆ ನೆರವಾಗಿರಿ. ಈ ಅಲ್ಪ ಸಣ ತಮ್ಮ ಶಿಕ್ಷಕ ಸಾಂ ಏಳ್ಗೆಗೆ ಪೋಷಿಸಿ. ಗೆಳೆಯರನ್ನು, ವಾಚನಾಲಯಗಳನ್ನು ಚಂದಾದಾರರನ್ನು ಮಾಡಿ ನೆರವಾಗಿರಿ.

ವಿವರಗಳಿಗೆ: **ಭಾರತೀ ಸಾಹಿತ್ಯ ಭಂಡಾರ** ಅಂಚೆ: **ಯರನಾಳ** ಜಿಲ್ಲೆ: **ಬಿಜಾಪುರ**

ಕಲ್ಯಾಣ ಕನ್ನಡ ಗುಣಿಯ ಕಾಣಿಕೆ

ಸುವರ್ಣ ಸಂಧಿ! ಸಚಿತ್ರ ಗ್ರಂಥ!! ಸುಂದರ ಮುದ್ರಣ!!!

" ಶಿಕ್ಷಣ-ಶಿಕ್ಷಕ-ವರ್ಧನ "

ಶಿಕ್ಷಕರಿಗೂ, ಶಿಕ್ಷಕ ವಿದ್ಯಾರ್ಥಿಗಳಿಗೂ, ಶಿಕ್ಷಣಾಭಿಮಾನಿಗಳಿಗೂ, ಉಪಯುಕ್ತವಾಗುವಂಥ, ತನು ಮನ ತಣಿಸುವಂಥ, ಶಿಕ್ಷಣ ತಜ್ಞರಿಂದ ಪರಿಶೀಲಿಸಲ್ಪಟ್ಟಂಥ, ಭಾರತದಲ್ಲಿಯ ಮಾನ್ಯ ಮಂತ್ರಿವರ್ಯರಿಂದ, ರಾಜ್ಯಪಾಲರಿಂದ, ಶಿಕ್ಷಣಾಧಿಕಾರಿಗಳಿಂದ, ಪ್ರಿನ್ಸಿಪಾಲರಿಂದ, ಸಾಹಿತಿಗಳಿಂದ ಪ್ರಶಂಸೆ ಪಡೆದ ಅಭಿಪ್ರಾಯಗಳುಳ್ಳಂಥ, ಕರ್ನಾಟಕ ವಿಶ್ವವಿದ್ಯಾಲಯದ ಉಪ ಕುಲಪತಿಗಳಾದ ರ್ಯಾಂಗ್ಲರ್ ಶ್ರೀ ವಿ. ಸಿ ಪಾವಟಿಯವರು ಮುನ್ನುಡಿ ಬರೆದಂಥ ಅಮೋಘ ಗ್ರಂಥ.

ಶ್ರೀ ನಿಂಬಾಳ ಶಿಕ್ಷಕ ದಂಪತಿಗಳಿಂದ ಸಂಗ್ರಹಿಸಲ್ಪಟ್ಟಿದೆ. ಇಡೀ ಕರ್ನಾಟಕದ ಗಣ್ಯ ಶಿಕ್ಷಕ-ಶಿಕ್ಷಕಿಯರ ಬಣ್ಣ ಬಣ್ಣಗಳಲ್ಲಿ ಆಕರ್ಷಕ ಫೋಟೊ ಬ್ಲಾಕ್, ಲೇಖನ, ಕವಿತೆಯಗಳುಳ್ಳಂಥ ಅನೇಕ ಪುಟಗಳ ಅಮರ ಸಾಹಿತ್ಯ ಇದೇ ಕನ್ನಡದಲ್ಲಿ ಇಂದು ಉತ್ತಮ ಮಾದರಿಯ ಶೈಕ್ಷಣಿಕ ಉನ್ನಂಥ.

ಇದಾಗಲೇ ಸುಮಾರು ಸಾವಿರಾರು ಪ್ರತಿಗಳು ಮಾರಾಟವಾಗಿದ್ದು, ಎಷ್ಟೋ ದಾನಿಗಳು, ಎಷ್ಟೋ ಸಾಹೇಬರು ಈ ಪ್ರತಿಯಲ್ಲಿ ಫೋಟೊ ಬರಬೇಕೆಂದು ಇವರ ಸೇವೆಯನ್ನು ಅಭಿನಂದಿಸಿ ಈ ಗ್ರಂಥಕ್ಕೆ ಧನ ಸಹಾಯ ಮಾಡಿದ್ದಾರೆ.

ವಿವರಗಳಿಗೆ ಇಂದೇ ಆಗಲೇ ಬರೆಯಿರಿ.

ಬಾಡಾ ಪ್ರತಿ ೩ ರೂ.] ವ್ಯವಸ್ಥಾಪಕರಿಗೆ ಧಾರವಾಡದ ಕಮೀಷನ್. [ಸುಂದರ ಪ್ರತಿ ೪ ರೂ.

ಎಲ್ಲರೂ ಶ್ರೀ ನಿಂಬಾಳ ಕಲ್ಯಾಣಪ್ಪ, ಸೋಪ್ಪ:— ತಾಂಬೆ, ಜಿಲ್ಲಾ:— ವಿಜಾಪುರ.

Printed by Shri S. K. Kattimani at Modern Press Printing Press, Hubli
Edited & Published by Shri S. M. Jois, B. A., S. K. Press & Sons Pvt. Ltd.,
at the Karnatak Institute of Journalism, Karnatak University Campus, Dharwar.